

ಅಂತರಾಷ್ಟ್ರೀಯ ಮಹಿಳಾ ದಿನದ
ಸಮಾವೇಶದ ಸ್ಮರಣ ಸಂಚಿಕೆ

ಬುದ್ಧ ಪೂರ್ಣಿಮೆ ಮೇ ೨೨ ೧೯೯೭
ಬೆಂಗಳೂರು

ಒಲವು

(ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಚಿಕೆ)

ಪ್ರಧಾನ ಸಂಪಾದಕರು :
ಡಾ॥ ಜಿ.ಎಸ್. ಶಿವರುದ್ರಪ್ಪ

ಕಾರ್ಯನಿರ್ವಾಹಕ ಸಂಪಾದಕರು :
ಡಿ.ಎಸ್. ನಾಗಭೂಷಣ

ಸ್ವಾಗತ ಸಮಿತಿ :
'ಮಾನವ ಮಂಟಪ'ದ ಮೊದಲ ಸಮಾವೇಶ
ನಂ ೧೧, ಜೀವನ್ ಕಟ್ಟಡಗಳು, ಕುಮಾರ ಪಾರ್ಕ್ (ಪೂರ್ವ) ಬೆಂಗಳೂರು – ೫೬೦ ೦೦೧

ಮಾನವ ಮಂಟಪ

ಜಾತ್ಯತೀತ ಒಲವಿನ ವಿವಾಹ ವೇದಿಕೆ

ಅಂತರ್ಜಾತಿ ವಿವಾಹಿತರ ಮೊದಲ ರಾಜ್ಯ ಸಮಾವೇಶ
೧೯೯೭ ಮೇ ೨೨ ಗುರುವಾರ ಬುದ್ಧ ಪೂರ್ಣಿಮೆ

ಸಿಲ್ವರ್ ಜೂಬ್ಲಿ ಹಾಲ್
ಡಬ್ಬಲ್ ರೋಡ್, ಲಾಲ್‌ಬಾಗ್, ಬೆಂಗಳೂರು

ಉದ್ಘಾಟನೆ

ಬೆಳಗ್ಗೆ ೧೧.೦೦ ರಿಂದ ಮದ್ಯಾಹ್ನ ೧.೦೦ ಗಂಟೆ

ಪ್ರಸ್ತಾವನೆ	:	**ಪ್ರೊ। ಕೆ. ರಾಮದಾಸ್**
ಸಮಾವೇಶ ಉದ್ಘಾಟನೆ	:	**ಡಾ। ಕೆ. ಶಿವರಾಮ ಕಾರಂತ**
'ಒಲವು' ಸಂಚಿಕೆ ಬಿಡುಗಡೆ	:	**ಲಕ್ಷ್ಮಿ ನಿಜಾಮುದ್ದೀನ್**
ಮುಖ್ಯ ಅತಿಥಿಗಳು	:	**ನೀಲಗುಂದ ಸ್ವಾಮೀಜಿ, ಸುರೇಶ್ ಹೆಬ್ಳೀಕರ್, ಡಾ। ಜಿ.ಎಸ್. ಶಿವರುದ್ರಪ್ಪ**
ಅಧ್ಯಕ್ಷತೆ	:	**ಪ್ರೊ। ಎಂ.ಡಿ. ನಂಜುಂಡ ಸ್ವಾಮಿ**

ಚರ್ಚೆ

ಮಧ್ಯಾಹ್ನ ೨.೦೦ ರಿಂದ ೪.೦೦ ಗಂಟೆ

ಅಂತರ್ಜಾತಿ ವಿವಾಹ ಮತ್ತು ಜಾತಿ ವಿನಾಶ : ಸವಾಲುಗಳು

ವಿಷಯ ಮಂಡನೆ : ಅಪ್ಪಾಜಿ ಗೌಡ, ಡಾ। ಸಿದ್ಧಲಿಂಗಯ್ಯ , ಬರಗೂರು ರಾಮಚಂದ್ರಪ್ಪ, ಕಮಲಾ ಹಂಪನಾ

ಚರ್ಚೆಯಲ್ಲಿ ಭಾಗವಹಿಸುವವರು :
ಭೂಪತಿ, ದೊಡ್ಡರಂಗೇಗೌಡ, ಎಸ್.ಎಸ್. ಹಿರೇಮಠ್, ನಾಗೇಶ್ ಹೆಗ್ಡೆ, ಜೆ.ಬಿ. ರಂಗಸ್ವಾಮಿ, ಸವಿತಾ ನಾಗಭೂಷಣ, ಟಿ.ಎಸ್. ನಾಗಾಭರಣ, ಎನ್.ಎಸ್. ಶಂಕರ್, ಸುಜಾತ ಕುಮುಟ, ರಾಜೇಶ್ವರಿ, ಡಾ। ರಾಜೇಂದ್ರ ಸಿಂಗ್, ಬಂಜಗೆರೆ ಜಯಪ್ರಕಾಶ್, ಸಿ. ಬಸವಲಿಂಗಯ್ಯ, ಅಬ್ದುಲ್ ರಶೀದ್

ಅಧ್ಯಕ್ಷತೆ : **ಎಲ್. ಜಿ. ಹಾವನೂರ್**

ಸಮಾರೋಪ

ಸಂಜೆ ೪.೦೦ ರಿಂದ ೫.೩೦

ನಿರ್ಣಯಗಳ ಮಂಡನೆ	:	**ಪ್ರೊ। ರವಿವರ್ಮ ಕುಮಾರ್**
ಸಮಾರೋಪ ಭಾಷಣ	:	**ಪಿ. ಲಂಕೇಶ್**
ಅಧ್ಯಕ್ಷತೆ	:	**ಸತ್ಯವ್ರತ**

ಸಂಜೆ ೬.೦೦ಕ್ಕೆ ಬೆಂಗಳೂರು 'ಸಮುದಾಯ'ದಿಂದ ಪಿ. ಲಂಕೇಶ್‌ರ ನಾಟಕ 'ಸಂಕ್ರಾಂತಿ', ನಿರ್ದೇಶನ : ಸಿ. ಬಸವಲಿಂಗಯ್ಯ

ನಿರೂಪಣೆ : **ನಟರಾಜ್ ಹುಳಿಯಾರ್**

ತಮಗೆಲ್ಲರಿಗೂ ಸುಸ್ವಾಗತ

ಪ್ರಧಾನ ಸಂಪಾದಕರ ನುಡಿ

ನಾವು ಯಾರೂ, ನಾವು ಹುಟ್ಟಿರುವ ಜಾತಿ–ಮತಗಳನ್ನು ನಾವಾಗಿಯೇ ಆಯ್ಕೆ ಮಾಡಿಕೊಂಡವರಲ್ಲ; ಹಾಗೆ ಆಯ್ಕೆಮಾಡಿಕೊಳ್ಳಲು ಸಾಧ್ಯವೂ ಇಲ್ಲ. ಹೀಗಾಗಿ ನಾವೆಲ್ಲ ಯಾವುದೋ ಒಂದೊಂದು ನಿರ್ದಿಷ್ಟ ಜಾತಿ–ಮತಗಳಲ್ಲಿ ಹುಟ್ಟಿರುವುದು ಕೇವಲ ಒಂದು ಆಕಸ್ಮಿಕ ಅಷ್ಟೆ.

ಆದರೆ ಹುಟ್ಟಿದ ನಂತರ ನಾವು ಆಯಾ ಜಾತಿ–ಮತದ ಚಿತ್ರಗೆ ದಾಖಲಾಗುತ್ತೇವೆ; ಅದರ ನೆನಪುಗಳಿಂದ ಆಚರಣೆಗಳಿಂದ ಬದ್ಧವಾಗಿ ಬಿಡುತ್ತೇವೆ. ಹುಟ್ಟುತ್ತ ಯಾವ ಜಾತಿ–ಮತಗಳಿಗೂ ಸೇರದ, ಕೇವಲ ಮನುಷ್ಯರಾದ ನಾವು, ಕ್ರಮೇಣ ಆಯಾ ಜಾತಿ–ಮತದ ಬಗ್ಗೆ ಅಭಿಮಾನವನ್ನೋ, ಹೆಮ್ಮೆಯನ್ನೊ, ಕೀಳರಿಮೆಯನ್ನೊ–ಆಯಾ ಜಾತಿ–ಮತಗಳು ಒಂದು ಪರಂಪರೆಯಲ್ಲಿ ಹಾಗೂ ಒಟ್ಟು ಸಾಮಾಜಿಕ ಸಂದರ್ಭದಲ್ಲಿ ಪಡೆದುಕೊಂಡಿರುವ 'ಸ್ಥಾನ–ಮಾನ'ಗಳಿಗನುಸಾರವಾಗಿ–ತಾಳುತ್ತಾ, ಅದರ ಚೌಕಟ್ಟಿನಲ್ಲಿ ಬಂದಿಯಾಗುತ್ತೇವೆ. ಈ 'ಬಂಧನ'ದ ಪರಿಮಿತಿಗಳನ್ನೂ, ಜಾತಿಯ ಶ್ರೇಣೀಕರಣದಲ್ಲಿ, ಮೇಲಿನವರು ಕೆಳಗಿನವರ ಮೇಲೆ ನಡೆಯಿಸುವ ಅಮಾನವೀಯವಾದ ಹಲ್ಲೆಗಳನ್ನೂ, ಶೋಷಣೆಗಳನ್ನೂ ಕಂಡು ತಳಮಳಗೊಂಡು, ಈ ಎಲ್ಲ ಗಡಿ–ಗೆರೆಗಳನ್ನೂ ಮೀರಿ ನಿಜವಾದ ಮಾನವೀಯತೆಯ ನೆಲೆಗೆ, ಹೊರಬರಬೇಕೆಂಬ ಹಾಗೂ ಇತರರನ್ನೂ ತರಬೇಕೆಂಬ ಎಚ್ಚರಗಳು ಹುಟ್ಟಿಕೊಳ್ಳುವ ಕೆಲವೇ ಕೆಲವರು, ಅಂದಂದಿನ ಕಾಲಮಾನದ ಮಾರ್ಗದರ್ಶಕ ಸತ್ವಗಳಾಗಿ ನಿಲ್ಲುತ್ತಾರೆ.

ಈ ಜಗತ್ತು ಕಂಡ ಅಂಥ ಅಪೂರ್ವ ಮಾರ್ಗದರ್ಶಕ ಸತ್ವವಾದ ಭಗವಾನ್ ಬುದ್ಧನ ನೆನಪಿನಿಂದ ಅಂಕಿತವಾದ ವೈಶಾಖ ಶುಕ್ಲ ಪೂರ್ಣಿಮೆಯಂದು, 'ಮಾನವ ಮಂಟಪ'ದ ಗೆಳೆಯರು ಏರ್ಪಡಿಸಿರುವ 'ಅಂತರ್ಜಾತಿ ವಿವಾಹಿತರ ಮೊದಲ ರಾಜ್ಯ ಸಮಾವೇಶ'ದ ಸಂದರ್ಭದಲ್ಲಿ, ಬಿಡುಗಡೆಗಾಗಿ ಸಿದ್ಧಗೊಂಡ 'ಒಲವು' ಎಂಬ ಸಂಚಿಕೆ ಅತ್ಯಂತ ಅರ್ಥಪೂರ್ಣವೂ, ವಿಶಿಷ್ಟವೂ ಆಗಿದೆ. ಭಾರತದಲ್ಲಿ ಬೇರೂರಿರುವ ಜಾತಿ ಪದ್ಧತಿಯ ಅನಿಷ್ಟಗಳಿಂದ ಪಾರಾಗಲು ಅಂತರ್ ಜಾತೀಯ ವಿವಾಹಗಳು ಅತ್ಯಂತ ಪರಿಣಾಮಕಾರಿಯಾದ ಕ್ರಮಗಳು ಎಂದು ನಂಬುವ ಹಾಗೂ ಅವುಗಳನ್ನು ಪ್ರೋತ್ಸಾಹಿಸುವ ಆಂದೋಲನವೊಂದನ್ನು ಹಮ್ಮಿಕೊಂಡ ಈ ಗೆಳೆಯರು ಸಿದ್ಧಪಡಿಸಿದ ಈ ನೆನಪಿನ ಸಂಚಿಕೆಯಲ್ಲಿ, ಜಾತಿ ಪದ್ಧತಿಯನ್ನು ಕುರಿತು, ಅಂತರ್‌ಜಾತೀಯ ವಿವಾಹಗಳನ್ನು ಕುರಿತು, ಈ ನಾಡಿನ ವಿವಿಧ ಪ್ರಜ್ಞಾವಂತರು ತೋರಿದ ಪ್ರತಿಕ್ರಿಯೆಗಳೂ ಮತ್ತು ಅಂತರ್ ಜಾತೀಯ ವಿವಾಹ ಮಾಡಿಕೊಂಡವರು ತೋಡಿಕೊಂಡ ಅನುಭವದ ಆತ್ಮ ಕಥನಗಳೂ ಸಮಾವೇಶಗೊಂಡಿವೆ.

ಬಸವಣ್ಣನವರು ತಮ್ಮದೊಂದು ವಚನದಲ್ಲಿ–

ಕುಲವನರಸುವರೆ ಶರಣರಲ್ಲಿ
ವರ್ಣಸಂಕರವಾದ ಬಳಿಕ?

ಅನ್ನುತ್ತಾರೆ. ಇದೊಂದು ಅತ್ಯಂತ ಪ್ರಸ್ತುತವೂ, ಮಹತ್ವದ್ದೂ ಆದ ಪ್ರಶ್ನೆ ಎಂದು ನಾನು ಪರಿಗಣಿಸುತ್ತೇನೆ. ಈ ಉಕ್ತಿಯ ಮೊದಲ ಪಾದದ ಕೊನೆಗಿರುವ 'ಶರಣರಲ್ಲಿ' ಎಂಬುದನ್ನು 'ಮಾನವರಲ್ಲಿ' ಎಂದು ಬದಲಾಯಿಸಿಕೊಂಡು ಅದನ್ನು ಪರಿಭಾವಿಸಬೇಕು. ಹಿಂದೂ ಧರ್ಮ ಒಂದು ಜಾತಿ ಮತ್ತೊಂದು ಜಾತಿಯೊಂದಿಗೆ ಬೆರೆಯುವುದನ್ನು 'ವರ್ಣ ಸಂಕರ' ಎನ್ನುತ್ತದೆ. 'ವರ್ಣ ಸಂಕರ' ಎನ್ನುವುದು ಹಿಂದೂ ಧರ್ಮದ ಪ್ರಕಾರ ಒಂದು ಮಹಾ ಪಾಪ; ದೊಡ್ಡ ಅನಾಹುತ; ಅದರಿಂದ ಧರ್ಮ ಗ್ಲಾನಿ–ಎಂದು ತಿಳಿಯಲಾಗಿದೆ. ಪ್ರತಿಯೊಂದು ವರ್ಣವೂ ಚಾತುರ್ವರ್ಣದ ಚೌಕಟ್ಟಿನಲ್ಲಿ ಸುಭದ್ರವಾಗಿರುವುದೇ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇಮಕ್ಕೆ ಅತ್ಯಗತ್ಯ. ಅಂದರೆ ಈ ಶ್ರೇಣೀಕರಣ ವ್ಯವಸ್ಥೆಯಲ್ಲಿ ಯಾವ್ಯಾವುದು ಎಲ್ಲೆಲ್ಲಿರಬೇಕೆಂದು ನಿಗದಿಯಾಗಿದೆಯೋ, ಅದು ಅಲ್ಲಲ್ಲಿಯೇ ಇರಬೇಕಾದದ್ದು ಧರ್ಮ. ಈ ಧರ್ಮವನ್ನು ಅಥವಾ ಯಥಾಸ್ಥಿತಿಯನ್ನು, ಕದಲದಂತೆ ರಕ್ಷಿಸುವುದೇ ಗುರುಗಳ, ಶಾಸ್ತ್ರವೇತ್ತರ, ಹಾಗೂ ರಾಜರುಗಳ ಕರ್ತವ್ಯ; ಹಾಗಲ್ಲದೆ ಒಂದು ವರ್ಣ ಮತ್ತೊಂದು ವರ್ಣದೊಂದಿಗೆ ಬೆರೆಯುವಂತಹ ಅನಾಹುತವೇನಾದರೂ ಸಂಭವಿಸಿದರೆ ಅದು ಧರ್ಮಗ್ಲಾನಿಗೆ ಕಾರಣವಾಗುತ್ತದೆ. ಇದು 'ವರ್ಣಸಂಕರ'ವನ್ನು ಕುರಿತ ಹಿಂದೂ ಧರ್ಮದ ನಿಲುವು. ಆದರೆ ಬಸವಣ್ಣನವರ ಪ್ರಕಾರ 'ವರ್ಣ ಸಂಕರ' ಅಗತ್ಯವಾದುದ್ದು, ಈ ಶ್ರೇಣೀಕರಣ ವ್ಯವಸ್ಥೆಯನ್ನು ಮುರಿದು ಮಾನವೀಯವಾದ ಧರ್ಮವೊಂದನ್ನು ಕಟ್ಟುವುದಕ್ಕೆ. ಈ ಬಗೆಯ 'ವರ್ಣ ಸಂಕರ'ದ ಮೂಲಕವಾಗಿಯೇ ವಿವಿಧ ಜಾತಿಗಳವರು 'ಶರಣ'ರಾದ ಬಳಿಕ, ಅವರ ಹುಟ್ಟಿನಿಂದ ಬಂದಂಥ ಕುಲ ಎಲ್ಲಿ ಉಳಿಯಿತು–ಎನ್ನುವುದು ಬಸವಣ್ಣನವರ ಪ್ರಶ್ನೆ. ಈ ದೃಷ್ಟಿಯಿಂದ ಬಸವಣ್ಣನವರ 'ವರ್ಣ ಸಂಕರ'ದ ಕಲ್ಪನೆ ಹಾಗೂ ವ್ಯಾಖ್ಯಾನ ಹಾಗೂ ಪ್ರಯೋಗ, ಹಿಂದೂ ಧರ್ಮದ ವರ್ಣ ವ್ಯವಸ್ಥೆಯನ್ನು ತತ್ಕಾಲಕ್ಕಾದರೂ ಮುರಿಯಲು ಸಾಧ್ಯವಾಯಿತೆಂಬುದು ವಿಶೇಷದ ಸಂಗತಿಯಾಗಿದೆ. ಮತ್ತು ಜಾತಿ ವ್ಯವಸ್ಥೆಯನ್ನು ಮುರಿಯಲು 'ವರ್ಣ ಸಂಕರ' ಎನ್ನುವುದು ಅತ್ಯುತ್ತಮವಾದ ಒಂದು ಮಾರ್ಗ ಎಂಬುದನ್ನು ನಾವು ಅವರಿಂದ ತಿಳಿಯಬಹುದಾಗಿದೆ.

ಈ ಹೊತ್ತು ನಮ್ಮ ಸಂದರ್ಭದಲ್ಲಿ 'ವರ್ಣ ಸಂಕರ' ಸಾಧ್ಯವಾಗುತ್ತಿರುವುದು ಅಂತರ್ಜಾತೀಯ ವಿವಾಹಗಳ ಕಾರಣದಿಂದ ಎಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಮದುವೆ ಅನ್ನುವುದು ಮೂಲತಃ ಮನುಷ್ಯರಾದ, ಗಂಡು–ಹೆಣ್ಣುಗಳ ನಡುವಣ ಅತ್ಯಂತ ಆತ್ಮೀಯವೂ ಖಾಸಗಿಯೂ ಆದ ಒಲವಿನ ಸಂಬಂಧ ಅನ್ನುವ ಸಂಗತಿಯೆ ಮರೆತು ಹೋಗಿ, ಅದು ಬಡವರ ಪಾಲಿಗೆ ಹೊರಲಾರದ

ಹೊರೆಯೂ, ಶ್ರೀಮಂತರ ಪಾಲಿಗೆ ದುಂದುವೆಚ್ಚದ ಆಡಂಬರದ ಪ್ರದರ್ಶನವೂ ಮತ್ತು ಅನೇಕ ವೇಳೆ ಅತ್ಯಂತ ಅಮಾನವೀಯವಾದ ಸ್ತ್ರೀಶೋಷಣೆಯ ದಾರಿಯೂ ಆಗುತ್ತಿರುವ ಇಂದಿನ ಸಂದರ್ಭದಲ್ಲಿ ನಮ್ಮ ತರುಣ–ತರುಣಿಯರು, ತಮ್ಮ ತಮ್ಮ ಜಾತಿ–ಮತದ ಗಡಿಗಳನ್ನು ದಾಟಿ ಒಲವಿನಲ್ಲಿ ಒಂದಾಗುವ 'ಅಂತರ್ಜಾತೀಯ ವಿವಾಹ'ಗಳನ್ನು ಆಯ್ಕೆ ಮಾಡಿಕೊಳ್ಳುವ ಧೈರ್ಯವನ್ನೂ ವೈಚಾರಿಕತೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಇದರಿಂದ ಜಾತಿ 'ವಿನಾಶ'ವಾಗುತ್ತದೆ ಎಂಬ ಭ್ರಮೆ ನನಗಿಲ್ಲವಾದರೂ, ಮಾನವೀಯ ಸಂಬಂಧಗಳ ಮಹತ್ತಿಗೆ ಒಂದಷ್ಟು ಗೆಲವು ದೊರೆಯುವಂತಾಗುತ್ತದೆ ಎಂಬ ನಂಬಿಕೆ ನನ್ನದು.

ಈ ಒಂದು ಸಂಚಿಕೆಯನ್ನು ಸಿದ್ಧಪಡಿಸುವಲ್ಲಿ ತುಂಬ ಶ್ರಮವಹಿಸಿದ ಗೆಳೆಯ ಡಿ. ಎಸ್. ನಾಗಭೂಷಣ ಅವರಿಗೆ, ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಮೈಸೂರಿನ ಪ್ರಗತಿ ಆಫ್‌ಸೆಟ್ ಮುದ್ರಣಾಲಯದ ಶ್ರೀ ರಾಜಶೇಖರ ಕೋಟಿ ಅವರಿಗೆ ನನ್ನ ಕೃತಜ್ಞತೆಗಳು.

೨೨ ಮೇ ೧೯೯೭ — ಜಿ.ಎಸ್. ಶಿವರುದ್ರಪ್ಪ

ಸಂಪಾದಕರ ನುಡಿ

೧೯೯೬ರ ಕೊನೆಯ ತಿಂಗಳುಗಳು. ಸಮಾಜವಾದಿ ಯುವಜನ ಸಭಾ, ದಲಿತ ಸಂಘರ್ಷ ಸಮಿತಿ, ರೈತ ಸಂಘ ಇತ್ಯಾದಿಗಳನ್ನು ಕಟ್ಟುವಲ್ಲಿ ಪಾಲ್ಗೊಂಡು ಆಯಾಸವೇ ಆಗದ ಕೆಲವು ಗೆಳೆಯರು ಎಂದಿನಂತೆ ಪ್ರಸಕ್ತ ರಾಜಕಾರಣದಿಂದ ಬೇಸತ್ತು ಹೊಸ ರಾಜಕೀಯ ಆಶಯಗಳ ಸಂಘಟನೆಯೊಂದನ್ನು ಕಟ್ಟಲು ರಾಜ್ಯ ಸುತ್ತುತ್ತಾ, ಮರಳಿ ಯತ್ನವ ಮಾಡುತ್ತಿದ್ದಾರೆ ಎಂಬ ಸುದ್ದಿಯ ನಡುವೆಯೇ ಇದೇ ಗೆಳೆಯರಿಂದ ನವೆಂಬರ್ ೩೦ ಹಾಗೂ ಡಿಸೆಂಬರ್ ೧ ರಂದು ಮೈಸೂರಿನಲ್ಲಿ ಸಭೆಯೊಂದಕ್ಕಾಗಿ ಆಹ್ವಾನ ಬಂತು. 'ಭ್ರಷ್ಟತೆಯ ನಡುವೆ ಪ್ರೀತಿಯ ಮಾತುಕತೆಗಾಗಿ' ಎಂದಿದ್ದ ಈ ಆಹ್ವಾನ ಪತ್ರಿಕೆಯಲ್ಲಿ ಇಂದು ಎಲ್ಲ ಪ್ರಗತಿಪರ ಚಳುವಳಿಗಳೂ ನಿಷ್ಕ್ರಿಯವಾಗಿರುವ ಹಿನ್ನೆಲೆಯಲ್ಲಿ ಇದೇ ಚಳುವಳಿಗಳು ಹುಟ್ಟು ಹಾಕಿದ ಲಕ್ಷಾಂತರ ಪ್ರಗತಿಪರ ಜಾತ್ಯತೀತ ಮನಸ್ಸುಗಳು, ಪ್ರಸಕ್ತ ಮತೀಯ ಹಾಗೂ ಜಾತೀಯ ರಾಜಕಾರಣ ದಿಂದಾಗಿ ಒಡೆದು ಹೋಗದಂತೆ ಏನು ಮಾಡಬಹುದು ಎಂಬುದನ್ನು ಕೂಡಿ ಚರ್ಚಿಸುವ ಅಗತ್ಯವನ್ನು ಒತ್ತಿ ಹೇಳಲಾಗಿತ್ತು.

ಎರಡು ದಿನಗಳ ಈ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆದು, ಸದ್ಯಕ್ಕೆ ನಮ್ಮ ಮಿತಿಗಳಲ್ಲಿ ನಾವು ಮಾಡಬಹುದಾದದ್ದು, ಅಂತರ್ಜಾತಿ ವಿವಾಹಿತರ ಸಂಘಟನೆ ಮಾಡಿ, ಆ ವೇದಿಕೆಯ ಅಡಿಯಲ್ಲಿ ಮತೀಯ ಹಾಗೂ ಜಾತೀಯ ರಾಜಕಾರಣ ಸೃಷ್ಟಿಸುತ್ತಿರುವ ಭ್ರಷ್ಟ ವಾತಾವರಣವನ್ನು ಶುಚಿಗೊಳಿಸುವ ಕೆಲಸ ಆರಂಭಿಸುವುದೇ ಆಗಿದೆ ಎಂಬ ತೀರ್ಮಾನಕ್ಕೆ ಬರಲಾಯಿತು. ಜಾತಿ–ಮತಗಳ ಗೋಡೆಗಳೇ ಈಗ ಎಂದಿಗಿಂತ ಹೆಚ್ಚು ಜನರ ಮನಸ್ಸನ್ನು ಒಡೆದಿದ್ದು, ಇದರಿಂದಾಗಿಯೇ ಆರೋಗ್ಯಕರ ಸಾಮಾಜಿಕ ರಾಜಕೀಯ ಚಿಂತನೆ ನಮ್ಮ ಮಧ್ಯೆ ಸಾಧ್ಯವಾಗುತ್ತಿಲ್ಲ ಎಂಬ ಚಿಂತನೆ ಈ ತೀರ್ಮಾನದ ಹಿಂದಿತ್ತು. ಹಾಗೆ ನೋಡಿದರೆ, ಸ್ವತಂತ್ರ ಭಾರತದ ಈ ಇಡೀ ೫೦ ವರ್ಷಗಳ ಚರಿತ್ರೆ ಎಂದರೆ ಮನುಸ್ಮೃತಿ ಹಾಗೂ ನಮ್ಮ ಸಂವಿಧಾನದ ನಡುವೆ ನಮ್ಮ ಜನ ಮಾನಸದಲ್ಲಿ ನಡೆಯುತ್ತಿರುವ ಘರ್ಷಣೆಯ ಚರಿತ್ರೆಯೇ ಆಗಿದೆ ಎಂದು ಹೇಳಬಹುದು. ನಾವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಆದರ್ಶಗಳನ್ನು ಅಳವಡಿಸಿಕೊಂಡ ಸಂವಿಧಾನವನ್ನು ಬೌದ್ಧಿಕವಾಗಿ ಒಪ್ಪಿಕೊಂಡಿರುವೆ ವಾದರೂ, ನಮ್ಮ ಅಂತರಂಗವಿನ್ನೂ ವಿಧಿ–ನಿಷೇಧ–ಶ್ರೇಣೀಕರಣಗಳ ಮನುಸ್ಮೃತಿಯ ಲಂಗರುಗಳಲ್ಲೇ ನೆಲೆ ನಿಂತುಕೊಂಡಿರುವಂತಿದೆ. ಈ ಲಂಗರುಗಳನ್ನು ಬಿಚ್ಚಿ ನಮ್ಮ ಮನಸ್ಸುಗಳನ್ನು ಪ್ರಜ್ಞಾಪೂರ್ವಕವಾಗಿ ಬಿಡುಗಡೆಗೊಳಿಸಿಕೊಳ್ಳದ ಹೊರತು, ಯಾವುದೇ ಹೊಸ ಚಿಂತನೆ ಅಥವಾ ಕಾರ್ಯಕ್ರಮ ಫಲಪ್ರದವಾಗಲಾರದು. ನಮ್ಮೆಲ್ಲ ಪ್ರಗತಿಪರ ಕಾನೂನುಗಳೂ, ಯೋಜನೆ–ಕಾರ್ಯಕ್ರಮಗಳೂ ಸತ್ವವು ಕಳೆದುಕೊಳ್ಳುತ್ತಿರುವ ರಹಸ್ಯವನ್ನು ಇಲ್ಲಿ ಗುರುತಿಸಬಹುದಾಗಿದೆ. ಗಾಂಧಿ–ಲೋಹಿಯಾ–ಅಂಬೇಡ್ಕರ್ ಮುಂತಾದವರ ಹೋರಾಟಗಳೆಲ್ಲ ಈ ರಹಸ್ಯವನ್ನರಿತೇ ತಮ್ಮ ಮುನ್ನೋಟವನ್ನು ಕಂಡುಕೊಂಡಿದ್ದವು. ಆ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುವ ನಾಯಕತ್ವ ನಮ್ಮಲ್ಲಿ ಮೂಡದಿದ್ದುದೇ ಇಂದಿನ ನಮ್ಮ ನಿಷ್ಕ್ರಿಯ ಸ್ಥಿತಿಗೆ ಕಾರಣವಾಗಿ ಮತೀಯ ಮತ್ತು ಜಾತೀಯ ಶಕ್ತಿಗಳು ಮತ್ತೆ ಪ್ರಬಲವಾಗಿ ತಲೆಯೆತ್ತಲು ಸಾಧ್ಯವಾಗಿದೆ. ಆದುದರಿಂದ ಜಾತಿ ಮತ ಭೇದಗಳಿಗೆ ಬುಡದಲ್ಲೇ ಪೆಟ್ಟು ಕೊಡುವ ಅಂತರ್ಜಾತೀಯ ಹಾಗೂ ಅಂತರ್ಧರ್ಮೀಯ ವಿವಾಹಗಳನ್ನು ಪ್ರೋತ್ಸಾಹಿಸುವ ವೇದಿಕೆ ಮೊದಲ ಅಗತ್ಯವಾಗಿದೆ ಎಂಬ ಮನವರಿಕೆಯೊಡನೆ 'ಮಾನವ ಮಂಟಪ'ವನ್ನು ಸ್ಥಾಪಿಸಲು ನಿರ್ಧರಿಸಲಾಯಿತು.

ವೇದಿಕೆಯ ಮೊದಲ ಸಮಾವೇಶವನ್ನು ಮಾನವ ಜನಾಂಗದ ಅಂತರಂಗದಲ್ಲಿ ಪ್ರೇಮಕಾರುಣ್ಯದ ಬೀಜ ಬಿತ್ತಿದ ಬುದ್ಧದೇವನ ಜಯಂತಿಯಂದು, ಅಂದರೆ ಮೇ ೨೨ ರಂದು ನಡೆಸಲು ತೀರ್ಮಾನಿಸ ಲಾಯಿತು. ಹಾಗೇ ಈ ಸಂದರ್ಭದಲ್ಲಿ ನಮ್ಮ ಚಿಂತನೆಯನ್ನು ಪ್ರತಿಬಿಂಬಿಸುವ ಬರಹಗಳನ್ನೊಳಗೊಂಡ ಸ್ಮರಣ ಸಂಚಿಕೆಯನ್ನು ಹೊರತರುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಈ ವಿಷಯದಲ್ಲಿ ಒಟ್ಟಾರೆ ಮಾರ್ಗದರ್ಶನಕ್ಕಾಗಿ ಹಿರಿಯ ಕವಿ ಡಾ|| ಜಿ. ಎಸ್. ಶಿವರುದ್ರಪ್ಪ ಅವರನ್ನು ಕೇಳಿಕೊಂಡಾಗ, ಇಂತಹ ಎಲ್ಲ ಪ್ರಗತಿಪರ ಆಲೋಚನೆ ಹಾಗೂ ಚಟುವಟಿಕೆಗಳಿಗೆ ಸದಾ ಬೆಂಬಲ ವ್ಯಕ್ತಪಡಿಸುತ್ತಿರುವ ಅವರು ಸಂತೋಷದಿಂದ ಒಪ್ಪಿಗೆ ಸೂಚಿಸಿದರು. ನಂತರ ನಾನು, ಕೆ. ರಾಮದಾಸ್ ಹಾಗೇ ಈ ಇಡೀ ಸಮಾವೇಶದ ರೂವಾರಿ ಎಚ್. ಗೋವಿಂದಯ್ಯ ಕೂಡಿ ಈ ಸಂಚಿಕೆಯ ಒಟ್ಟಾರೆ ಸ್ವರೂಪವನ್ನು ನಿರ್ಧರಿಸಿ ಪ್ರಧಾನ ಸಂಪಾದಕರೊಂದಿಗೆ ಚರ್ಚಿಸಿ, ಅವರ ಒಪ್ಪಿಗೆ ಪಡೆದೆವು.

ಜಾತಿ ಪದ್ಧತಿಯನ್ನು ಅದರ ತಾತ್ವಿಕತೆಯೊಂದಿಗೆ ಅರಿತು ದಾಟಿ ಹೋಗಬೇಕೇ ಹೊರತು, ಅದನ್ನು ಯಾರೋ ದುಷ್ಟರು ರೂಪಿಸಿದ ಹೀನ ಪದ್ಧತಿಯೆಂಬ ದೂಷಣೆಯೊಂದಿಗೆ ಅದನ್ನು ಎದುರಿಸುವುದು ಸಾಧುವಲ್ಲ ಎಂಬ ಆಲೋಚನೆ ಈ ಸಂಚಿಕೆಯ ಹಿಂದೆ ಕೆಲಸ ಮಾಡಿದೆ. ಜಾತಿ ಪದ್ಧತಿಯ ಮೂಲವನ್ನು ಈವರೆಗೆ ಯಾರಿಗೂ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಕುಲ, ವರ್ಣ, ಜಾತಿ, ವೃತ್ತಿಗಳು ಕಾಲಾನುಕಾಲದ

ಸವಾಲುಗಳಿಗೆ ಅನುಗುಣವಾಗಿ ಪರಸ್ಪರ ಸಂಬಂಧಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾ, ಹೊಸ ಹೊಸ ಸಂಹಿತೆ, ಸ್ಮೃತಿಗಳನ್ನು ರೂಪಿಸಿಕೊಳ್ಳುತ್ತಾ ಬಂದಿರುವುದರಿಂದ ಇಂದಿನ ಜಾತಿ ಪದ್ಧತಿಯನ್ನು ಗಮನಿಸಿ ನಾವು ಇತಿಹಾಸದ ಹುದಲಲ್ಲಿ ಸೇರಿ ಹೋಗಿರುವ ಅದರ ಹುಟ್ಟಿನ ಉದ್ದೇಶಗಳ ಬಗೆಗೆ ತೀರ್ಮಾನಕ್ಕೆ ಬರುವುದು ಅಸಮಂಜಸವೂ, ನಮ್ಮ ದಾರಿಯನ್ನು ನಾವೇ ತಪ್ಪಿಸಿಕೊಳ್ಳುವ ಕೆಲಸವೂ ಆಗುತ್ತದೆ. ಈ ದೃಷ್ಟಿಯಿಂದ ಜಾತಿ ಪದ್ಧತಿಯನ್ನು ಅದರೆಲ್ಲ ಐತಿಹಾಸಿಕ ಗುಣಾವಗುಣಗಳೊಡನೆ ಅರ್ಥ ಮಾಡಿಕೊಳ್ಳಲು ಸಹಾಯವಾಗುವಂತಹ ಲೇಖನಗಳನ್ನು ಇಲ್ಲಿ ಅಳವಡಿಸಲಾಗಿದೆ. ಕೆ. ಎಂ. ಮುನ್ಷಿ, ಬಿ. ಎನ್. ಸುಮಿತ್ರಾಬಾಯಿ ಹಾಗೂ ಲಕ್ಷೀಶ ತೊಳ್ಪಾಡಿ ಅವರ ಲೇಖನಗಳು ಈ ಹಿನ್ನೆಲೆಯವು. ನಂತರದ ಲೇಖನಗಳಲ್ಲಿ ಜಾತಿ ಪದ್ಧತಿಯ ಸಮಕಾಲೀನತೆಯನ್ನು ಪ್ರಶ್ನಿಸುವ ಪ್ರವೃತ್ತಿ ಆರಂಭವಾದುದರ ಐತಿಹಾಸಿಕ ಹೆಜ್ಜೆಗಳನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಡಾ॥ ರಾಜಾರಾಂ ಹೆಗಡೆ ಅವರ ಲೇಖನ ಜಾತಿ ಪದ್ಧತಿಯನ್ನು ಅಸಂಗತವೂ ಅವಿಚಾರವೂ ಆದ ಪದ್ಧತಿಯೆಂದು ಮೊದಲ ಬಾರಿಗೆ ನಿಶ್ಚಯ ಧ್ವನಿಯಿಂದ ಸಾರಿದ ಬುದ್ಧನಿಂದ ಹಿಡಿದು, ತನ್ನನ್ನು ಸನಾತನಿ ಎಂದೇ ಗುರುತಿಸಿಕೊಳ್ಳ ಬಯಸಿದೂ, ಅಂತರ್ಜಾತಿ ವಿವಾಹಗಳಲ್ಲಿ ಮಾತ್ರ ತಾನು ಭಾಗವಹಿಸುವು ದಾಗಿ ಪ್ರಜ್ಞಾಪೂರ್ವಕವಾದ ತೀರ್ಮಾನ ತೆಗೆದುಕೊಂಡ ನಮ್ಮ ಯುಗದ ಆತ್ಮಸಾಕ್ಷಿಯಂತಿರುವ ಮಹಾತ್ಮ ಗಾಂಧಿಯವರೆಗೆ; ಇತಿಹಾಸದುದ್ದಕ್ಕೂ ಜಾತಿ ಪದ್ಧತಿಯನ್ನು ವಿವಿಧ ಕಾರಣಗಳಿಗಾಗಿ, ವಿವಿಧ ನೆಲೆಗಳಲ್ಲಿ ಪ್ರತಿಭಟಿಸುತ್ತಾ ಬಂದ ಎಲ್ಲ ಮುಖ್ಯ ವ್ಯಕ್ತಿ, ವಿಚಾರ, ಪಂಥ, ಚಳುವಳಿಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುತ್ತದೆ. ಇನ್ನು ಅಂಬೇಡ್ಕರ್, ಲೋಹಿಯಾ ಹಾಗೂ ಗಾಂಧಿ ಅವರ ಆಯ್ದ ಲೇಖನಗಳು ಸಮಕಾಲೀನ ಜಾತಿ ವಿರೋಧಿ ಚಳುವಳಿಗಳ ವಿವಿಧ ನೆಲೆಗಳನ್ನೂ, ಅರ್ಥಪೂರ್ಣತೆಯನ್ನೂ ಪರಿಚಯಿಸುವಂತಿವೆ. ಎಸ್.ಎಸ್. ಹಿರೇಮಠ ಅವರ ಲೇಖನ ಜಾತಿ ಪದ್ಧತಿ ಕುರಿತ ನಮ್ಮ ಎಡಪಂಥೀಯರ ನಿಲುವಿನಲ್ಲಿನ ಶಕ್ತಿ–ದೌರ್ಬಲ್ಯಗಳನ್ನು ಪರಿಚಯಿಸುವ ಪ್ರಯತ್ನ ಮಾಡುತ್ತದೆ. ಸಾರಾ ಅಬೂಬಕ್ಕರ್ ಹಾಗೂ ನೀಲಗುಂದ ಸ್ವಾಮೀಜಿ ಅವರ ಲೇಖನಗಳು ನಮ್ಮೆಲ್ಲರ ಸದಾಶಯಗಳನ್ನು ಪ್ರತಿಬಿಂಬಿಸುವಂತಿವೆ.

'ಚಿಂತನ' ಈಗ ನಮ್ಮೊಡನೆಯೇ ಬಾಳುತ್ತಿರುವ, ಇಂದಿನ ನಮ್ಮ ಸಮಾಜದ ತಂದೆಯರಂತಿರುವ ಹಿರಿಯರು ಜಾತಿ ಪದ್ಧತಿಯ ಬಗ್ಗೆ ತಳೆದಿರುವ ನಿಲುವುಗಳನ್ನು ಅವುಗಳ ತಾತ್ವಿಕತೆಯೊಂದಿಗೆ ಪರಿಚಯಿಸುತ್ತದೆ. 'ಮಂಥನ', ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಅಂತರ್ಜಾತೀಯ ವಿವಾಹವಾದವರೊಡನೆ ನಡೆಸಿರುವ ಮಾತುಕತೆ. ಇದರಲ್ಲಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಅವರು ನಮ್ಮ ಪ್ರಶ್ನೆಗಳನ್ನೇ ನೆಪ ಮಾಡಿಕೊಂಡು ಅಂತರ್ಜಾತಿ ವಿವಾಹ ಹಾಗೂ ವಿವಾಹಿತರ ಸಮಸ್ಯೆಗಳನ್ನು ವಿವಿಧ ಕೋನಗಳಿಂದ ವಿಶ್ಲೇಷಿಸಿ ಕೆಲವು ಪರಿಹಾರಗಳನ್ನು ಸೂಚಿಸಿದ್ದಾರೆ. 'ಮಾನವ ಮಂಟಪ' ಈ ಕುರಿತು ವಿವರವಾಗಿ ಚರ್ಚಿಸುವ ಅಗತ್ಯವಿದೆ.

ಇನ್ನು ಈ ಸಂಚಿಕೆಯ ಅತ್ಯಂತ ಮುಖ್ಯ ಹಾಗೂ ಸ್ವಾರಸ್ಯಕರ ಅಧ್ಯಾಯ 'ಕಥನ'. ಅಂತರ್ಜಾತಿ ವಿವಾಹವಾಗಿರುವ ನಮ್ಮ ಅನೇಕ ಗೆಳೆಯರು ತಮ್ಮ ಕಷ್ಟ ಸುಖಗಳನ್ನು ತಮ್ಮದೇ ವಿಶಿಷ್ಟ ರೀತಿಗಳಲ್ಲಿ ಹೇಳಿಕೊಂಡಿದ್ದಾರೆ. ಒಬ್ಬೊಬ್ಬರದೂ ಒಂದು ಕಥೆ, ವಿಚಾರ. ಅದಕ್ಕೆ ತಕ್ಕ ಭಾಷೆ, ಶೈಲಿ. ಇವಾವುವನ್ನೂ ತಿದ್ದದೆ ಆಯಾ ವ್ಯಕ್ತಿ ಅಥವಾ ಕುಟುಂಬಗಳ 'ಸಹಜ' ಪರಿಚಯಕ್ಕೆ ಇಲ್ಲಿ ಅನುವು ಮಾಡಿಕೊಡಲಾಗಿದೆ. ನಿಜವಾಗಿಯೂ ವರ್ಣರಂಜಿತವಾಗಿರುವ ಈ ಕಥನಗಳು ನಮ್ಮ ಅನೇಕ ಕಿರಿಯ ಗೆಳೆಯ–ಗೆಳತಿಯರಿಗೆ 'ಸ್ಫೂರ್ತಿ' ತುಂಬಬಲ್ಲವಾಗಿವೆ.

ಈ ಸಂಚಿಕೆಯ ಕೊನೆಯಲ್ಲಿ ಗೆಳೆಯ ಡಾ॥ ಸಿದ್ಧಲಿಂಗಯ್ಯನವರು ಶಾಸಕರಾಗಿ ವಿಧಾನ ಪರಿಷತ್ತಿನಲ್ಲಿ ಅಂತರ್ಜಾತಿ ವಿವಾಹಿತರ ಪರವಾಗಿ ಮಂಡಿಸಿ, ಕೊನೆಗೆ ಸರ್ಕಾರದ ಆಶ್ವಾಸನೆಯನ್ನು ನಂಬಿ ಹಿಂತೆಗೆದುಕೊಂಡ ಖಾಸಗಿ ನಿರ್ಣಯ, ಅದರ ಬಗ್ಗೆ ನಡೆದ ಸವಿವರವಾದ ಚರ್ಚೆಯೊಂದಿಗೆ ದಾಖಲಾಗಿದೆ. ಅಂತರ್ಜಾತೀಯ ವಿವಾಹಗಳ ಹಿಂದಿರುವ ಘನತರವಾದ ಉದ್ದೇಶ, ಆಶಯಗಳಿಗೆ ವ್ಯಾಪಕ ನೆಲೆಯಲ್ಲಿ ಸಾಮಾಜಿಕ ವಿಶ್ವಾಸಾರ್ಹತೆ ದೊರಕಿಸುವ ಬಗೆಗೆ ಮುಂದೆ ನಡೆಯಬೇಕಾದ ಚರ್ಚೆಗಳಿಗೆ ಈ 'ದಾಖಲೆ' ಸಾಕಷ್ಟು ಆಹಾರ ಒದಗಿಸುವಂತಿದೆ.

ಒಟ್ಟಾರೆ ಈ ಸಂಚಿಕೆ ಹೇಗನ್ನಿಸುವುದೋ ಓದುಗರೇ ಹೇಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಒಟ್ಟಾರೆ ಉದ್ದೇಶವೇ ನಮಗೆ ಹಲವು ಮಿತಿಗಳನ್ನು ಹಾಕುವಂತಿರುವುದರಿಂದ, ಸಹಜವಾಗಿಯೇ ಈ ಸಂಚಿಕೆಗೂ ಆ ಮಿತಿಗಳು ಪ್ರಾಪ್ತವಾಗಿವೆ. ನಮ್ಮ ಕೋರಿಕೆಯನ್ನು ಮನ್ನಿಸಿ ಲೇಖನಗಳನ್ನು ಕಳಿಸಿಕೊಟ್ಟ ಎಲ್ಲ ಗೆಳೆಯರಿಗೂ ನಮ್ಮ ಕೃತಜ್ಞತೆಗಳು. ಹಾಗೇ ಈ ಸಂಚಿಕೆಯ ಮುದ್ರಣದಲ್ಲಿ ನನಗೆ ನೆರವಾದ ಲತಾ ಮೈಸೂರು ಅವರಿಗೂ, ನಮ್ಮ ಕಾಲಮಿತಿಯಲ್ಲೇ ಅಚ್ಚುಕಟ್ಟಾದ ಮುದ್ರಣ ವಿನ್ಯಾಸ ಮಾಡಿಕೊಟ್ಟ ಪ್ರಗತಿ ಆಫೆಸೆಟ್ ಮುದ್ರಣಾಲಯದ ಕುಮಾರಿ ಮೀನಾವತಿ ಅವರಿಗೂ ಮತ್ತು ರಕ್ಷಾ ಪುಟದ ವಿನ್ಯಾಸ ಮಾಡಿಕೊಟ್ಟ ಕಲಾವಿದ ಸುದೇಶ್ ಮಹಾನ್ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

೨೨ ಮೇ ೧೯೯೭ **ಡಿ. ಎಸ್. ನಾಗಭೂಷಣ**

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು.

○

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ:
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!

— ಕುವೆಂಪು

ಪರಿವಿಡಿ :

ಭಾರತೀಯ ಸಂಸ್ಕೃತಿಯ ಯುಗಮಾನಗಳು

ಕೆಂ.ಎಂ. ಮುನ್ಷಿ

ಭಾರತೀಯ ಸಂಸ್ಕೃತಿಯನ್ನು ಖಂಡಖಂಡವಾಗಿ ನೋಡುವುದಕ್ಕಿಂತ, ಅಖಂಡ ಕಾಲಮಾನದಲ್ಲಿ ನೋಡುವುದು ಒಳ್ಳೆಯದು. ನಮ್ಮ ಸಂಸ್ಕೃತಿಯ ದೀರ್ಘ ಇತಿಹಾಸವನ್ನು ನಾಲ್ಕು ನಿರ್ದಿಷ್ಟ ಯುಗಗಳಾಗಿ ವಿಂಗಡಿಸ ಬಹುದು.

ಮೊದಲನೆಯದು 'ವಿಸ್ತರಣ ಯುಗ'; ಇದನ್ನು ಸಿಂಧೂನದಿ ನಾಗರೀಕತೆಯ ಕಾಲದಿಂದ ಗುರುತಿಸಬಹುದು. ಅಲ್ಲಿಂದ ಮುಂದಕ್ಕೆ, ಐದು ಸಾವಿರವರ್ಷಗಳ ಹಿಂದೆ ನಮ್ಮ ದೇಶ ಯೋಗಭಂಗಿಯಲ್ಲಿ ಕುಳಿತ ಪಶುಪತಿಯನ್ನು ಆರಾಧಿಸುತ್ತಿದ್ದ ಕಾಲ; ಹೊಚ್ಚ ಹೊಸ ಚೈತನ್ಯದಿಂದ ತುಂಬಿ ತುಳುಕುತ್ತಿದ್ದ ಋಗ್ವೇದ ಮಂತ್ರಗಳ ಕಾಲ; ಹುರುಪಿನ ಹರಯದಿಂದ ಕೂಡಿದ ಜನಮೇಜಯ ಪರೀಕ್ಷಿತರ ವೇದೋತ್ತರ ಕಾಲ; ಅವಿಚ್ಛಿನ್ನವಾಗಿ ಮುಂದುವರೆದ ಮಗಧ ಚಕ್ರಾಧಿಪತ್ಯದ ಕಾಲ (ಕ್ರಿ. ಪೂ. ೭೦೦–ಕ್ರಿ. ಶ. ೩೨೦); ಗುಪ್ತರ ಪ್ರಾಚೀನ ಯುಗ (ಕ್ರಿ. ಶ. ೩೨೦–೭೫೦); ಕನೂಜ ಚಕ್ರಾಧಿಪತ್ಯದ ಕಾಲ (ಕ್ರಿ. ಶ. ೭೫೦–೧೦೦೦)– ಈ ಎಲ್ಲ ಕಾಲಗಳನ್ನೂ ವಿಸ್ತರಣಯುಗ ಒಳಗೊಳ್ಳುತ್ತದೆ.

ನಮ್ಮ ಸಂಸ್ಕೃತಿಯ ಇತಿಹಾಸದಲ್ಲಿ ಎರಡನೆಯದು "ಪ್ರತಿಭಟನಾ ಯುಗ". ಇದು ವಿಘಟನೆಯ ಕಾಲ. (ಕ್ರಿ. ಶ.೧೦೦೦–೧೩೦೦) ಈ ಯುಗದ ಕೊನೆಕೊನೆಯಲ್ಲಿ ದೆಹಲಿಯ ಸುಲ್ತಾನರು ಭಾರತದ ಸಾಮ್ರಾಜ್ಯ ಶಕ್ತಿಯಾದರು. ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಮಧ್ಯ ಏಷ್ಯದ ಅಲೆಮಾರಿಗಳು ಭಾರತದ ಮೇಲೆ ನುಗ್ಗಿ ಬಂದು ಕೊಲೆ, ಲೂಟಿ, ಬೆಂಕಿ, ದರೋಡೆಗಳಲ್ಲಿ ತೊಡಗಿದರು. ಬಲಾತ್ಕಾರವಾಗಿ ಹೊರಿಸಲ್ಪಟ್ಟ ಈ ಅನಾಗರಿಕ ಯುದ್ಧಗಳಿಂದ, ಧರ್ಮಯುದ್ಧಗಳ ಪರಿಚಯ ಮಾತ್ರವಿದ್ದ ಭಾರತೀಯರು ತತ್ತರಿಸಿ ಹೋದರು. ನಂತರ ಅವರು ಜೀವನದ ಇತರ ಕ್ಷೇತ್ರಗಳಲ್ಲಿ ರಕ್ಷಣಾತ್ಮಕ ಪ್ರತಿಭಟನೆಗೆ ಸಜ್ಜಾದರು. ಇದರಿಂದಾಗಿ ಪರದೇಶೀಯರ ಅನಾಗರಿಕ ಆಕ್ರಮಣದ ಅಬ್ಬರ ತಗ್ಗಿತು ಮತ್ತು ವಿದೇಶೀ ಪ್ರಭುತ್ವದ ಸಂಘಟನಾಶಕ್ತಿ ಕುಗ್ಗಿತು. ಸಾಮಾಜಿಕವಾಗಿ, ಮಾನಸಿಕವಾಗಿ, ಧಾರ್ಮಿಕವಾಗಿ ವಿದೇಶೀ ಆಡಳಿತಕ್ಕೆ ವಶವಾಗುವುದರ ವಿರುದ್ಧ ಎಲ್ಲ ರೀತಿಯ ಪ್ರಬಲ ಆತ್ಮರಕ್ಷಣಾ ಕ್ರಮಗಳೂ ಜಾಗೃತವಾದುವು.

ಮೂರನೆಯದು ನವೋದಯ ಯುಗ. ಹದಿನೇಳನೆಯ ಶತಮಾನದ ಕೊನೆಯನ್ನು ಈ ಯುಗದ ಆರಂಭವೆಂದು ಎಣಿಸಬಹುದು. ಕ್ರಿ. ಶ. ೧೭೦೦ರ ಹೊತ್ತಿಗೆ ಮಹಾರಾಷ್ಟ್ರದಲ್ಲಿ ರಾಮದಾಸ್ ಮತ್ತು ಶಿವಾಜಿ, ಪಂಜಾಬಿನ ಗುರುಗಳು ಮತ್ತು ರಾಜಾಸ್ಥಾನದ ರಜಪೂತರು ವಿದೇಶೀಯರನ್ನು ಕೇವಲ ಪ್ರತಿಭಟಿಸುವ ಬದಲು ವಾಸ್ತವವಾಗಿ ಅವರನ್ನು ಎದುರಿಸಿ ಮಾರ್ಮಲೆತು ನಿಂತರು. ಈ ಮನೋಭಾವ ದೇಶದ ವಾತಾವರಣದಲ್ಲಿ ವ್ಯಾಪಕವಾಗಿ ಹರಡಿಕೊಂಡಿತು. ಆದರೆ ಈ ಭಾವೋದ್ರೇಕದ ಸುಗ್ಗಿಯ ಫಲವನ್ನು ಭಾರತ ಪಡೆಯುವ ಮುನ್ನವೇ ವಿಧಿ ಭಾರತವನ್ನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬ್ರಿಟನ್ನಿನ ಆಧಿಪತ್ಯಕ್ಕೆ ಒಳಪಡಿಸಿತು. ಈ ಉತ್ಸಾಹಾಧಿಕ್ಯ ನಿರ್ಭಯವಾಗಿ ಅನಿರೀಕ್ಷಿತ ರೂಪಗಳನ್ನು ಧರಿಸಿ ದೇಶದ ಮೂಲೆಮೂಲೆಗಳಲ್ಲಿ ಅನೇಕ ಮುಖವಾಗಿ ಪ್ರವಹಿಸತೊಡಗಿತು. ರಾಜಾರಾಮಮೋಹನರಾಯ್, ೧೮೫೭ರ ಕ್ರಾಂತಿ, ದಯಾನಂದ ಸುಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ತಿಲಕರು, ಅರವಿಂದರು, ಮಾಲವೀಯರು, ಟಾಗೋರ್, ಗಾಂಧೀಜಿ ಹಾಗೂ ಕಾಂಗ್ರೆಸ್ ಈ ಎಲ್ಲರಿಂದ ನಡೆಸಲ್ಪಟ್ಟ ಚಳುವಳಿಗಳೂ ತಮ್ಮವೇ ಆದ ರೀತಿಯಲ್ಲಿ ಪ್ರಗತಿಯ ವ್ಯಾಪಕ ಮನೋಧರ್ಮದ ಪೂರ್ಣ ಭರತದ ಜಲರೇಖೆಗಳು. ಭಾರತೀಯರಿಗೆ ತಮ್ಮ ಕೈಕೆಳಗಿನ ಹುದ್ದೆಗಳಿಗಾಗಿ ತರಪೇತಿ ಕೊಡುವುದಕ್ಕಾಗಿ ಆಂಗ್ಲರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರು. ಆದರೆ ಇದೆಲ್ಲ ಪ್ರಭಾವವನ್ನೂ ಮೀರಿ, ಸಂಸ್ಕೃತ ಭಾಷೆಯ ಪುನಶ್ಚೇತನ, ರಾಜಕೀಯ ಜಾಗೃತಿ, ಸಾಂಸ್ಕೃತಿಕ ಪುನರುಜ್ಜೀವನಗಳ ರೂಪದಲ್ಲಿ ಭಾರತೀಯ ಸಂಸ್ಕೃತಿ ನುಗ್ಗಿ ಬಂದಿತು. ೧೮೫೭ರ ನಂತರ ಭಾರತ ನಿರಾಯುಧವಾದ ಮೇಲೆ, ತನ್ನ ಸ್ವಾತ್ಮವನ್ನು ತಾನು ಕಂಡುಕೊಳ್ಳುವ ಭಾರತದ ಹಂಬಲ ಶಾಂತಿಯುತವಾದ ಆದರೆ ಸರ್ವವ್ಯಾಪಿಯಾದ ಚಳುವಳಿಯ ಮೂಲಕ ಹೊರಹೊಮ್ಮಿತು. ಈ ಚಳುವಳಿ ರಾಷ್ಟ್ರವ್ಯಾಪಕವಾದ ಸತ್ಯಾಗ್ರಹ ಚಟುವಟಿಕೆಯಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿತು.

೧೯೪೭ರ ಆಗಸ್ಟ್ ಹದಿನೈದರಂದು, ನಾವೇ ನಮ್ಮ ಭವಿಷ್ಯದ ಪ್ರಭುಗಳಾದಾಗ, ನಮ್ಮ ಸಂಸ್ಕೃತಿಯ ನಾಲ್ಕನೆಯ ಯುಗ ಪ್ರಾರಂಭ ವಾಯಿತು. ಆದರೆ ಸ್ವಾತಂತ್ರ್ಯದೊಂದಿಗೆ ನಮ್ಮ ಸಂಸ್ಕೃತಿಯ ಪ್ರಗತಿಯ ಹಾದಿಯಲ್ಲಿ ಒಂದು ಸಂಧಿಕಾಲ ಪ್ರಾಪ್ತವಾಗಿದೆ. ಯುದ್ಧೋತ್ತರ ಕಾಲದ ಸಮಸ್ಯೆಗಳನ್ನು, ವಿಶ್ವದ ಹೊಸ ಹೊಸ ಶಕ್ತಿಗಳನ್ನು, ತಾಂತ್ರಿಕ ನಾಗರಿಕತೆಯ ಪ್ರಭಾವವನ್ನು, ಅದರಿಂದ ಹುಟ್ಟಿದ ಕೈಗಾರಿಕಾ ಸಮಸ್ಯೆ ಹಾಗೂ ನಾಗರಿಕ ಸಮಸ್ಯೆಗಳನ್ನು ನಾವಿಂದು ಎದುರಿಸಬೇಕಾಗಿದೆ. ಇವೆಲ್ಲವುಗಳಿಗೂ ನಮ್ಮ ಸಂಸ್ಕೃತಿಯ ಮೂಲಭೂತ ಮೌಲ್ಯಗಳು ಮತ್ತು ಕೇಂದ್ರಭಾವನೆಗಳು ತಮ್ಮನ್ನು ತಾವು ಹೊಂದಿಸಿಕೊಳ್ಳಬೇಕಾಗಿದೆ.

ಪ್ರತಿಯೊಂದು ಯುಗದಲ್ಲಿಯೂ ಸಂಸ್ಕೃತಿಯು ಸಾಮಾಜಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಸೌಂದರ್ಯಾತ್ಮಕ, ಆಧ್ಯಾತ್ಮಿಕ ಈ ನಾಲ್ಕು ಪ್ರಮುಖ ಕ್ರಿಯೆಗಳ ಮೂಲಕ ತನ್ನನ್ನು ತಾನು ಅಭಿವ್ಯಕ್ತಗೊಳಿಸಿ ಕೊಳ್ಳುತ್ತದೆ. ಆದ್ದರಿಂದ ಸಂಸ್ಕೃತಿಯನ್ನು ಅನುಕ್ರಮವಾಗಿ ಈ ನಾಲ್ಕು ದೃಷ್ಟಿಗಳಿಂದ ಅಭ್ಯಸಿಸಬೇಕಾಗುತ್ತದೆ.

(ಅ) ಸಾಮಾಜಿಕ ಸಾಧನೆಗಳು : (೧) ಕುಟುಂಬ, (೨) ಸಾಮಾಜಿಕ ವ್ಯವಸ್ಥೆ (೩) ರಾಷ್ಟ್ರ– ಈ ಸಂಸ್ಥೆಗಳಿಗೆ ಸಂಬಂಧಿಸಿದಂತೆ.

(ಆ) ಬೌದ್ಧಿಕ ಸಾಧನೆಗಳು: (೧) ರಾಜಕೀಯ ಮತ್ತು ಕಾನೂನನ್ನು ಕುರಿತ ಕಲ್ಪನೆಗಳು (೨) ಚಿಂತನಪರತೆ (೩) ವೈಜ್ಞಾನಿಕ ಪ್ರಗತಿ– ಇವುಗಳಿಗೆ ಸಂಬಂಧಿಸಿದಂತೆ.

(ಇ) ಭಾವನಾತ್ಮಕ ಮತ್ತು ಸೌಂದರ್ಯಾತ್ಮಕ ಸಾಧನೆಗಳು: (೧) ಧಾರ್ಮಿಕ ಚಳುವಳಿಗಳು (೨) ಭಾಷಿಕ ಹಾಗೂ ಸಾಹಿತ್ಯಕ ಬೆಳವಣಿಗೆ (೩) ಕಲಾರೂಪಗಳು ಹಾಗೂ ಸಂಪ್ರದಾಯಗಳು (೪) ಜೀವನಾಲಂಕರಣ– ಇವುಗಳಿಗೆ ಸಂಬಂಧಿಸಿದಂತೆ.

(ಈ) ಆಧ್ಯಾತ್ಮಿಕ ಸಾಧನೆ: ಮೂಲಭೂತಮೌಲ್ಯಗಳ ಪುನರ್‌ಸಂಘಟನೆ. ಕೇಂದ್ರಭಾವನೆ ಹೊಸ ಹುರುಪನ್ನೂ, ವೇಗವನ್ನೂ, ಪಡೆಯುವಂತೆ, ಆಯಾ ಯುಗದ ಪ್ರಧಾನ ಆಲೋಚನೆ ಮತ್ತು ಪರಿಸ್ಥಿತಿಗಳೊಂದಿಗೆ ಈ ಮೂಲಭೂತ ಮೌಲ್ಯಗಳ ಹೊಂದಾಣಿಕೆ.

೨

ಮೊದಲ ಯುಗದ ಪ್ರಾರಂಭಕ್ಕೆ ಮೊದಲೇ, ಭಾರತದಲ್ಲಿ ವಾಸಿಸುತ್ತಿದ್ದ ಆರ್ಯರಲ್ಲಿ ಪಿತೃಪ್ರಧಾನ ಪದ್ಧತಿ ರೂಢಿಯಲ್ಲಿತ್ತು. ಏಷ್ಯ ಮತ್ತು ಯೂರೋಪಿನ ವೇದಪೂರ್ವ ಕಾಲದ ಆರ್ಯರ ಗೃಹ ಸಮುದಾಯ ಗಾರ್ಹಸ್ಪಾಗ್ನಿಯ ಸುತ್ತ ಬದುಕುತ್ತಿತ್ತು ಮತ್ತು ಒಬ್ಬ ಮೂಲ ವಂಶಜನಿಂದ ಇಳಿದು ಬಂದ ಪುರುಷಸಂತತಿಯನ್ನು ಒಳಗೊಂಡಿತ್ತು. ಈ ಆರ್ಯರು ಮಾತೃ ಪ್ರಧಾನ ಕುಟುಂಬ ಪದ್ಧತಿಗೆ ತೀರ ವಿರುದ್ಧರಾಗಿದ್ದರು. ಅಲ್ಲದೆ, ತಾಯಿ ಮತ್ತು ತಾಯಿಯ ಸಂಬಂಧಿಕರೊಡನೆ ಯಾವ ಬಂಧುತ್ವವನ್ನೂ ಗುರುತಿಸುತ್ತಿರಲಿಲ್ಲ ಎಂದು ತಿಳಿದುಬರುತ್ತದೆ– ಫ್ಯೂಸ್ಟೆಲ್ ಡಿ ಕೊಲಂಗೆಸ್ ಮತ್ತು ಸ್ಕ್ರೋಡರರ ಪ್ರಕಾರ ಮಾತೃ ಪ್ರಧಾನ್ಯ ಆರ್ಯರಲ್ಲಿ ಬಳಕೆಯಲ್ಲಿರಲಿಲ್ಲ. ಆ ನಂತರದ ಕಾಲದಲ್ಲಿ ಮಾತ್ರವೇ ಆರ್ಯರ ಪಿತೃ ಪ್ರಾಧಾನ್ಯತೆ, ಮಾತಾಪಿತೃಗಳ ನಡುವೆ ಸಮಾನ ಪ್ರಾಧಾನ್ಯತೆಗೆ ಎಡೆಗೊಟ್ಟಿತು.

ವೇದಕಾಲದ ಆರ್ಯರ ಮೂಲಭೂತ ಸಂಸ್ಥೆಯೆಂದರೆ ಪಿತೃಪ್ರಾಧಾನ್ಯ ಕುಟುಂಬ. ಕುಟುಂಬದ ಎಲ್ಲ ಸದಸ್ಯರಿಗೆ ಮತ್ತು ಎಲ್ಲ ಆಸ್ತಿಗೆ ತಂದೆಯೇ ಒಡೆಯ ಮತ್ತು ಅಧಿಕಾರಿ. ಪಿತೃಪೂಜೆ ಅವರ ನಂಬಿಕೆಯ ಕೇಂದ್ರವಾಗಿತ್ತು.

ಕುಟುಂಬದ ರಕ್ಷಣೆ ಪಿತೃಗಳಿಗೆ ಸೇರಿದ್ದು. ನಿರ್ದಿಷ್ಟ ದಿನಗಳಲ್ಲಿ ಹಾಗೂ ನಿರ್ದಿಷ್ಟ ಕಾಲಗಳಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡಬೇಕಾಗಿತ್ತು. ಒಬ್ಬ ವ್ಯಕ್ತಿಯ ಶವವನ್ನು ಚಿತೆಗೆ ಒಡ್ಡಿದಾಗ, ಆ ವ್ಯಕ್ತಿಯನ್ನು ಪಿತೃಗಳಿಗೆ ಒಪ್ಪಿಸಲು ಜಾತವೇದನನ್ನು (ಅಗ್ನಿ) ಆಹ್ವಾನಿಸಲಾಗುತ್ತಿತ್ತು. ಆದ್ದರಿಂದ ಪುತ್ರನಾದವನು ಒಬ್ಬ ವ್ಯಕ್ತಿಗೆ ಅವನ ಪಿತೃಗಳೊಡನೆ ಸಂಬಂಧ ಕಲ್ಪಿಸುವ ಸರಣಿಯ ಒಂದು ಅತ್ಯಾವಶ್ಯಕ ಕೊಂಡಿ. ಪುತ್ರಸಂತಾನಹೀನರಾದವರು ಧಾರ್ಮಿಕ ಸಂಸ್ಕಾರದ ಮೂಲಕ ದತ್ತು ಸ್ವೀಕಾರ ಮಾಡಬೇಕಾಗಿತ್ತು. ಆದರೆ ದತ್ತುಪುತ್ರನನ್ನು ತಮ್ಮದೇ ಕುಟುಂಬದಿಂದ ಸ್ವೀಕರಿಸಬೇಕಾಗಿತ್ತು. "ಧಾರ್ಮಿಕ ವಿಧಿಗಳ ನಿರ್ವಹಣೆಯಲ್ಲಿ ಮಗ ತಂದೆಗೆ ಪ್ರತಿನಿಧಿ'' ಎನ್ನುತ್ತವೆ ವೇದಗಳು. ತಂದೆ, ಮಗ, ಮೊಮ್ಮಗ ಇವರುಗಳು ಹುಟ್ಟಿನಿಂದಲೇ ಕುಟುಂಬದ ಆಸ್ತಿಗೆ ಹಕ್ಕುದಾರರು. ಪಿತೃಯಜ್ಞ, ತರ್ಪಣ, ಪಿಂಡದಾನ, ಶ್ರಾದ್ಧ ಇವೆಲ್ಲವುಗಳೂ ಆಧ್ಯಾತ್ಮಿಕ ಐಕ್ಯತೆಯನ್ನು ದೃಢಗೊಳಿಸುತ್ತಿದ್ದವು. ವಂಶವನ್ನು ಮುಂದುವರಿಸುವುದರ ಮೂಲಕ ಪುತ್ರನಾದವನು ಕುಟುಂಬ ರಕ್ಷಕನೆನಿಸಿಕೊಂಡಿದ್ದ. ಗತಿಸಿದ ಪಿತೃಗಳು, ಬದುಕಿರುವ ತಂದೆ, ಅವನಿಗೆ ಹುಟ್ಟಿದ ಮತ್ತು ಮುಂದೆ ಹುಟ್ಟುವ ಮಕ್ಕಳು ಇವರೆಲ್ಲರೂ ಒಂದು ಸ್ಥಿರವಾದ ಘಟಕ ಎಂಬುದು ಅವರ ಮೂಲಭೂತ ಕಲ್ಪನೆಯಾಗಿತ್ತು.

ಒಬ್ಬ ಮೂಲಪುರುಷನ ವಂಶಜರೆಂದು ಹೇಳಿಕೊಳ್ಳುವ ಹಲವು ಕುಟುಂಬಗಳ ಸಮುದಾಯವನ್ನು ಗೋತ್ರವೆನ್ನುತ್ತಿದ್ದರು. ಈ ಗೋತ್ರ ಸಮಾಜದ ಒಂದು ಘಟಕವಾಗಿತ್ತು. ಗೋತ್ರಗಳ ಸಂಯುಕ್ತ ಸಮುದಾಯವನ್ನು 'ಗಣ'ವೆನ್ನುತ್ತಿದ್ದರು. ತಾವು ಪ್ರಾಚೀನ ಮೂಲ ಪುರುಷನೊಬ್ಬನ ಸಂತಾನವೆಂದು ಈ ಗಣ ಹೇಳಿಕೊಳ್ಳುತ್ತಿತ್ತು. ಸಗೋತ್ರ ವಿವಾಹ ನಿಷಿದ್ಧವೆನಿಸಿತ್ತು. ಇಂಥ ಐದು ಕುಲಗಳು ಸೇರಿ "ಪಂಚಗಣ''ವೆನಿಸಿತ್ತು. ಈ ಪಂಚಗಣ ಋಗ್ವೇದ ಕಾಲದ ಸಪ್ತಸಿಂಧುವಿನ ವಿಜಯೀ ಜನಾಂಗವಾಗಿತ್ತು. ಮನು ಇವರ ಮೂಲಪುರುಷನಾಗಿದ್ದ.

ಮನುಸ್ಮೃತಿಗಳು ವಂಶಪಾರಂಪರ್ಯವಾಗಿ ಪಿತೃಗಳಿಂದ ಇಳಿದು ಬಂದುವೆಂಬ ಪ್ರತೀತಿಯಿತ್ತು. ಆರ್ಯರಿಗೆ ಅದು ಸನಾತನ ಧರ್ಮವೆನಿಸಿತ್ತು. ಈ ಧರ್ಮಪಥದಿಂದ ಚ್ಯುತರಾಗಬಾರದೆಂಬುದೇ ಅವರ ಪ್ರಾರ್ಥನೆಯಾಗಿತ್ತು.

ತಾವು ಒಬ್ಬ ಮೂಲಪುರುಷನಿಂದ ಇಳಿದು ಬಂದವರೆಂಬ ಹೆಮ್ಮೆಯು ಕುಟುಂಬಕ್ಕೆ ವಿವಾಹವಾಗಿ ಬಂದ ಸ್ತ್ರೀಯಿಂದ ಚ್ಯುತಿಯಿಲ್ಲದ ನಿಷ್ಠೆಯನ್ನು ಬಯಸುತ್ತಿತ್ತು. ಸ್ತ್ರೀಯ ಈ ನಿಷ್ಠೆಗೆ ಹೊರತಾದ ವಂಶಶುದ್ಧಿಯ ಕಲ್ಪನೆ ಅಸಾಧ್ಯವಾಗಿತ್ತು. ಗಂಡು ಹೆಣ್ಣುಗಳು ಒಂದುಗೂಡಿದ ವಿವಾಹ ದೃಢವಾದ ಪವಿತ್ರ ಬಂಧನವಾಗಿತ್ತು. ಗಾರ್ಹಪತ್ಯ, ದೇವತಾರಾಧನೆಯಲ್ಲಿ ಸಾಹಚರ್ಯ, ತನಗೆ ಮತ್ತು ತನ್ನ ಪಿತೃಗಳಿಗೆ ಸ್ವರ್ಗವನ್ನು ದೊರಕಿಸಿಕೊಡಲು ಪುತ್ರ ಸಂತಾನವನ್ನು ಪಡೆಯುವುದು– ಇವುಗಳು ವಿವಾಹದ ಉದ್ದೇಶವಾಗಿದ್ದುವು. ಪತ್ನಿ ಪುರುಷನ ಅರ್ಧಾಂಗಿಯಾಗಿದ್ದಳು. ಪತ್ನಿಯನ್ನು ಸ್ವೀಕರಿಸಿ, ಪುತ್ರ ಸಂತಾನವನ್ನು ಪಡೆದಾಗಲೇ ಪುರುಷನ ಜೀವನ ಪರಿಪೂರ್ಣವೆನಿಸುತ್ತಿತ್ತು. ಪತ್ನಿಯ ಶೀಲಚ್ಯುತಿ ಮಹಾಪರಾಧವೇ ಆನಿಸಿತ್ತು. ದೇವತೆಗಳು ಅದನ್ನು ಎಂದೂ ಕ್ಷಮಿಸುತ್ತಿರಲಿಲ್ಲ. ವಿವಾಹಬಂಧನದಿಂದ ಒಂದುಗೂಡಿದ ಪತಿಪತ್ನಿಯರ ಅನನ್ಯತೆ ಹೀಗೆ ಮೂಲಭೂತ ಮೌಲ್ಯವಾಗಿ ಸ್ಥಾಪಿಸಲ್ಪಟ್ಟಿತ್ತು.

ಈ ಮೌಲ್ಯಗಳೇ ಆರ್ಯ ಸಂಸ್ಕೃತಿಯ ತಳಹದಿಯಾಗಿದ್ದುವು. ಗಂಧರ್ವನೊಬ್ಬನನ್ನು ನೋಡಿದ ತಪ್ಪಿಗಾಗಿ ತನ್ನ ತಾಯಿಯನ್ನು ಪರಶುರಾಮನಂಥವನು ಕೂಡ ವಧಿಸಬೇಕಾಗಿ ಬಂತು.

೩

ವೇದ ಪೂರ್ವ ಕಾಲದ ಆರ್ಯರು ಗಂಗಾ, ಯಮುನಾ ನದಿ ಕಣಿವೆ ಪ್ರದೇಶಗಳಲ್ಲಿ ನೆಲಸಿದ್ದರು. ಆರ್ಯ ವಂಶಗಳಿಂದ ಆಳಲ್ಪಡುತ್ತಿದ್ದ ದೊಡ್ಡ ದೊಡ್ಡ ರಾಜ್ಯಗಳು ತಲೆಯೆತ್ತಿದುವು, 'ಕುಲ' ಎಂದು ಕರೆಯಲ್ಪಡುತ್ತಿದ್ದ ಪಿತೃಪ್ರಧಾನ ಕುಟುಂಬ ಘಟಕವು, ಈ ಕಾಲದಲ್ಲಿ ಸಮಾಜದ ಸ್ಥಿರ ತಳಹದಿಯಾಗಿತ್ತು. ತಂದೆಯು ಕುಟುಂಬದ ಪರಮ ಗುರು ಮತ್ತು ಯಜಮಾನನಾಗಿದ್ದನು. ಅಜೀಗರ್ತನು ತನ್ನ ಮಗನನ್ನು ನೂರು ಹಸುಗಳ ಬೆಲೆಗೆ ಮಾರಬಲ್ಲ ಅಧಿಕಾರವನ್ನು ಪಡೆದಿದ್ದನು. ಸಂದೇಹಗ್ರಸ್ಥ ಜನನದಿಂದಾಗಿ ಪಾಂಡವರು ಬಹಳ ಕಾಲದವರೆಗೆ ಕ್ಲೇಶ ಸಂಕಟಗಳನ್ನು ಅನುಭವಿಸಬೇಕಾಯಿತು.

ಕ್ರಿ. ಪೂ. ಏಳನೆಯ ಶತಮಾನದಲ್ಲಿ ಇತಿಹಾಸದ ಅರುಣೋದಯದ ಜೊತೆಯಲ್ಲೇ, ಶಿಶುನಾಗರ ಅಧೀನದಲ್ಲಿ ಹುಟ್ಟಿದ ಮಗಧ ರಾಜ್ಯವು ದೇಶದ ಜೀವನದಲ್ಲಿ ಪ್ರಮುಖ ಅಂಶವಾಗಿ ಪರಿಣಮಿಸಿತು.

ಮೊದಲು ಶಿಶುನಾಗರು, ನಂತರ ನಂದರು, ಆ ನಂತರ ಮೌರ್ಯರು

ಇವರುಗಳ ಕೈಕೆಳಗೆ ನಮ್ಮ ಸಂಸ್ಕೃತಿ ಉತ್ಸಾಹಪೂರ್ಣ ವಿಸ್ತರಣಯುಗವನ್ನು ಪ್ರವೇಶಿಸಿತು. ನಂತರ ಅನುಕ್ರಮವಾಗಿ ಪುಷ್ಯಮಿತ್ರ, ಸಂಗರು, ಗುಪ್ತರು ಇವರುಗಳ ಕೈಕೆಳಗೆ ಕ್ರಿ. ಶ. ೫೫೦ರ ವರೆಗೆ, ಈ ವಿಸ್ತರಣೆ ಮುಂದುವರಿಯಿತು. ಆ ನಂತರ ನಾಲ್ಕು ಶತಮಾನಗಳವರೆಗೆ ಕನೂಜದಲ್ಲಿ ಕೇಂದ್ರೀಕೃತವಾಗಿದ್ದ ಸಂಸ್ಕೃತಿ ಈ ಸಂಪ್ರದಾಯವನ್ನು ಮುಂದುವರಿಸಿತು.

ಕ್ರಿ. ಶ. ೯೪೦ರಲ್ಲಿ ದಕ್ಷಿಣದ ರಾಷ್ಟ್ರಕೂಟರು ಕನೂಜದ ಪ್ರಾಬಲ್ಯವನ್ನು ಮುರಿದಾಗ ಮತ್ತು ಘಜನೀಯ ಸುಲ್ತಾನರು ಕ್ರಿ. ಶ. ೯೯೭ರ ನಂತರ ತಮ್ಮ ಹಿಂಸಾತ್ಮಕ ಮುತ್ತಿಗೆಗಳಿಂದ ಭಾರತೀಯ ಜೀವನದ ತಳಹದಿಯನ್ನು ಅಲ್ಲಾಡಿಸಿದಾಗ, ಈ ವಿಸ್ತರಣಯುಗ ಕೊನೆಗೊಂಡಿತು. ಹೂಣರು ಮತ್ತಿತರ ವಿದೇಶೀಯರಿಂದ ವಾಯುವ್ಯ ದಿಕ್ಕು ಮತ್ತೆ ಮತ್ತೆ ಧಾಳಿಗೆ ತುತ್ತಾಗುತ್ತಿತ್ತು. ದಕ್ಷಿಣಾಪಥ ಚಾಲುಕ್ಯರ ಕೈಕೆಳಗೆ, ಉತ್ತರಾಪಥದೊಡನೆ ಭಾರತದ ಸಾರ್ವಭೌಮತ್ವಕ್ಕಾಗಿ ಸ್ಪರ್ಧಿಸುತ್ತಿತ್ತು. ನಮ್ಮ ಸಂಸ್ಕೃತಿ ತನ್ನ ನೈರ್ಮಲ್ಯ ಮತ್ತು ಕ್ರಿಯಾತ್ಮಕತೆಯನ್ನು ಕಳೆದುಕೊಳ್ಳಲಾರಂಭಿಸಿತು.

ಧರ್ಮಸೂತ್ರಗಳು ಕುಟುಂಬಕ್ಕೆ ಪಾರಮಾರ್ಥಿಕ ಸ್ವರೂಪವನ್ನು ನೀಡಿದವು. ಈ ಸೂತ್ರಗಳು, ತಂದೆಯ ಯಾಜಮಾನ್ಯ ಅವಿಭಕ್ತ ಕುಟುಂಬದ ಸಮಗ್ರತೆ ಮತ್ತು ಗೋತ್ರದ ಸ್ಥಿರತೆ ಇವುಗಳನ್ನು ಒತ್ತಿ ಹೇಳಿದುವು. ಪಿತ್ರಾರ್ಜಿತ ಆಸ್ತಿಯೇ ಕುಟುಂಬದ ಆರ್ಥಿಕ ತಳಹದಿಯಾಗಿತ್ತು. ತಂದೆ, ತಂದೆಯಿಂದ ಮಗ, ಮಗನಿಂದ ಮೊಮ್ಮಗ ಇವರುಗಳು ಆಸ್ತಿಯ ಹಕ್ಕನ್ನು ಹುಟ್ಟಿನಿಂದಲೇ ಪಡೆಯುತ್ತಿದ್ದರು. ಇದರಿಂದಾಗಿ ಅವರುಗಳ ನಡುವಣ ಆರ್ಥಿಕ ಬಂಧನ ಬಲವಾಗಿತ್ತು. ಸ್ಥಿರವಾದ ಒಂದು ಆರ್ಥಿಕ ವ್ಯವಸ್ಥೆಗೆ ಇದು ತಳಹದಿಯಾಯಿತು.

ಪ್ರತಿಲೋಮ ಪದ್ಧತಿಗೆ ವಿರುದ್ಧವಲ್ಲದ ವಿವಾಹ, ಮೂರು ವರ್ಣಗಳ ನಡುವೆ ರೂಢಿಯಲ್ಲಿತ್ತು. ಪತಿಪತ್ನಿಯರನ್ನು ಆಧ್ಯಾತ್ಮಿಕವಾಗಿ ಒಂದುಗೂಡಿಸುವ ವಿವಾಹ ಮೂಲಭೂತ ಮೌಲ್ಯವಾಗಿತ್ತು. ಪಾರಾಶರ ಗೃಹ್ಯಸೂತ್ರ ಈ ರಸಸಿದ್ಧಿಯನ್ನು ಸೂಚಿಸುತ್ತದೆ: "ನಮ್ಮಿಬ್ಬರ ಉಸಿರು, ಚರ್ಮ, ಅಸ್ಥಿ, ಮಾಂಸಾದಿಗಳು ಒಂದಾಗಲಿ." ಅದು ಸುಕನ್ಯೆ, ಅರುಂಧತಿ, ಅನಸೂಯೆ, ಸೀತೆ, ಸಾವಿತ್ರಿಯರ ಯುಗವಾಗಿತ್ತು. ಗೀತೆಯಲ್ಲಿ ಅರ್ಜುನ, ಸ್ತ್ರೀಯರ ಶೀಲಚ್ಯುತಿ ಮತ್ತು ವರ್ಣಸಂಕರದ ಪರಿಣಾಮದ ಬಗೆಗೆ ಭೀತಿಯನ್ನು ವ್ಯಕ್ತಪಡಿಸುತ್ತಾನೆ. ಸ್ಮೃತಿಗಳಲ್ಲಿ ಹೇಳಿರುವಂತೆ, ಸ್ತ್ರೀ ತನ್ನ ತಂದೆಯ ಆಸ್ತಿಯಲ್ಲಿ ಹಕ್ಕನ್ನು ಕಳೆದುಕೊಂಡು, ಅದಕ್ಕೆ ಬದಲಾಗಿ ಪತಿಯ ಆಸ್ತಿಯಲ್ಲಿ ಹಕ್ಕನ್ನು ಪಡೆದುಕೊಳ್ಳುವುದು ಅಂದಿನ ಆರ್ಥಿಕ ವ್ಯವಸ್ಥೆಯ ತಳಹದಿಯಾಗಿತ್ತು. ಆ ನಂತರದ ಶತಮಾನಗಳಲ್ಲಿ ನಮ್ಮ ಸಾಮಾಜಿಕ ಸಂಸ್ಥೆಗಳ ಅಚ್ಚರಿ ಹುಟ್ಟಿಸುವ ಸ್ಥಿರತೆಗೆ ಇದೇ ಕಾರಣವಾಯಿತು. ನಂತರದ ಪ್ರತಿಭಟನಾಯುಗದ ಕಾಲದಲ್ಲಿ ಈ ಮೌಲ್ಯ ರುದ್ರಗಂಭೀರತೆಯನ್ನು ಗಳಿಸಿಕೊಂಡಿತು. ಸಾವಿರಾರು ಸ್ತ್ರೀಯರು ಜೌಹರ್ ಪದ್ಧತಿಯನ್ನನುಸರಿಸಿ ಸಂತೋಷದಿಂದ ಆತ್ಮಾರ್ಪಣೆ ಮಾಡಿಕೊಂಡರು.

ಉತ್ತರ ಮತ್ತು ಪಶ್ಚಿಮಗಳಲ್ಲಿ ವಿದೇಶೀಯರು ನುಗ್ಗಿ ಬಂದುದರಿಂದಾಗಿ ಗುಪ್ತ ಸಾಮ್ರಾಜ್ಯ ನಾಶವಾಯಿತು. ಪ್ರತಿಹಾರರು, ಚಹಮಾನರು, ಚಾಲುಕ್ಯರು ಮತ್ತು ಪರಮಾರರು— ಈ ನಾಲ್ಕು ಯೋಧ ಕುಲಗಳು ವಿವಾಹ ಸಂಬಂಧದಿಂದ ಒಕ್ಕೂಟಗೊಂಡು ಒಂದು ಸೈನ್ಯ ಶಕ್ತಿ ರೂಪಗೊಂಡಿತು. ಈ ಸೈನ್ಯಶಕ್ತಿ ಪಶ್ಚಿಮದ ಪಾಲರ ವಿರುದ್ಧವಾಗಿ ಮತ್ತು ದಕ್ಷಿಣದ ರಾಷ್ಟ್ರಕೂಟರ ವಿರುದ್ಧವಾಗಿ ಹೋರಾಡಿ ಗುರ್ಜರ ಸಾಮ್ರಾಜ್ಯವನ್ನು ಸ್ಥಾಪಿಸಿತು. ಕನೂಜನ್ನು ರಾಜಧಾನಿಯನ್ನಾಗಿ ಹೊಂದಿದ್ದ ಈ ಗುರ್ಜರ ಸಾಮ್ರಾಜ್ಯ ಪಶ್ಚಿಮ ಪಂಜಾಬ್, ಪೂರ್ವ ಮಧ್ಯದೇಶ, ರಾಜಪುತಾನ, ಮಾಲ್ವಾ ಮತ್ತು ಗುಜರಾತ್, ಈ ಪ್ರದೇಶಗಳನ್ನು ಒಳಗೊಂಡಿತ್ತು.

ಕ್ರಿ. ಶ. ೬೦೦ ರಿಂದ ಉತ್ತರ ಮತ್ತು ದಕ್ಷಿಣ ಭಾರತಗಳು ತಮ್ಮವೇ ಆದ ಚಕ್ರವರ್ತಿ ಪರಂಪರೆಯನ್ನು ಹೊಂದಿದುವು. ಕನೂಜದಲ್ಲಿ ಗುರ್ಜರ ಪ್ರತಿಹಾರರು, ವಾತಾಪಿ ಮತ್ತು ಮಾನ್ಯಖೇಟದಲ್ಲಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ಚಕ್ರಾಧಿಪತಿಗಳಾದರು. ಉತ್ತರಭಾರತದ ಸುಸಂಸ್ಕೃತ ವರ್ಗಗಳಲ್ಲಿ ಪರಂಪರೆಯಿಂದಲೋ ಅಥವಾ ವಿದ್ಯಾಭ್ಯಾಸದಿಂದಲೋ ಆರ್ಯರ ಸಾಂಸ್ಕೃತಿಕ ಮೌಲ್ಯಗಳು ಆಳವಾಗಿ ಬೇರೂರಿದ್ದುವು. ದಕ್ಷಿಣದಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಉಳಿದವರ ಸಂಸ್ಕೃತಿ, ಬ್ರಾಹ್ಮಣರು ಮತ್ತು ಧರ್ಮನಿಷ್ಠ ರಾಜರಿಂದ ನಿರ್ದೇಶಿತವಾದುದಾಗಿತ್ತು. ದಕ್ಷಿಣದಲ್ಲಿನ ಸ್ತ್ರೀಯರು ಸ್ವಲ್ಪಮಟ್ಟಿಗೆ ಸ್ಮೃತಿಗಳಲ್ಲಿ ಹೇಳಲ್ಪಟ್ಟ ನೈತಿಕ ನಿಯಮಗಳಿಂದ ಮುಕ್ತರಾಗಿದ್ದರು. ಉಚ್ಚವರ್ಗದ ಸ್ತ್ರೀಯರು ಕೂಡ ಉತ್ತರಭಾರತದ ಸ್ತ್ರೀಯರಿಗಿಂತ ಭಿನ್ನರಾಗಿದ್ದರು. ಸ್ತ್ರೀಪುರುಷ ಸಂಬಂಧ ಕೂಡ ದಕ್ಷಿಣದಲ್ಲಿ ಉತ್ತರಭಾರತದಲ್ಲಿಯಂತೆ ತೀರ ಕಟ್ಟುನಿಟ್ಟಾದುದಾಗಿರಲಿಲ್ಲ.

ಮತ್ತೆ ಮತ್ತೆ ಒದಗಿದ ಯುದ್ಧಗಳ ಪರಿಣಾಮವಾಗಿ ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ಏರ್ಪಟ್ಟ ವಿವಾಹ–ಸಂಬಂಧದಿಂದಾಗಿ, ಉತ್ತರದಲ್ಲಿ ಉಚ್ಚವರ್ಗಗಳು ತಮ್ಮ ತಮ್ಮಲ್ಲೇ ವಿವಾಹವಾಗುವುದು ಮಾಯವಾಗುತ್ತ ಬಂದಿತು. ಬಹು ವಿವಾಹಗಳು ನಡೆದದ್ದು ಯೋಧಕುಲಗಳಲ್ಲಿ. ಹೀಗೆ ಮದುವೆಯಾದ ಕುಟುಂಬಗಳ ನಡುವಣ ಸಾಂಸ್ಕೃತಿಕ ಭಿನ್ನತೆ, ಸಾಂಸ್ಕೃತಿಕ ಮೌಲ್ಯಗಳ ಪತನಕ್ಕೆ ಕಾರಣವಾಯಿತು. ಪತ್ನಿ ಕೇವಲ ಅವಲಂಬ ಜೀವಿಯಾದಳು. ಸಿಂಧ್‌ನಲ್ಲಿ ಇಸ್ಲಾಂ ಧರ್ಮ ಕಾಣಿಸಿಕೊಂಡಿತು. ದೇವಲ ಸ್ಮೃತಿ ಹೇಳುವಂತೆ, ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಪರಿವರ್ತಿಸಲ್ಪಟ್ಟ ಸ್ತ್ರೀ, ಹೊಸ ಸಮಸ್ಯೆಗಳ ಉಗಮಕ್ಕೆ ಕಾರಣಳಾದಳು. ಅನುಲೋಮ ವಿವಾಹಗಳು ಅಪರೂಪವಾದುವು. ಸ್ತ್ರೀ ವಿದ್ಯಾಭ್ಯಾಸ ಉದಾಸೀನಕ್ಕೊಳಗಾಯಿತು ಅಥವಾ ಅಸಾಧ್ಯವಾಗಿ ಪರಿಣಮಿಸಿತು. ಕ್ರಮ ಕ್ರಮೇಣ ಜಾತಿಗಳು ಹೆಚ್ಚು ಹೆಚ್ಚು ಪ್ರತ್ಯೇಕಗೊಂಡು ಬೇರೆ ಬೇರೆ ವಿಭಾಗಗಳಾದುವು. ಪಿತೃಪ್ರಧಾನ ಕುಟುಂಬ ಘಟಕ ಮತ್ತು ವಿವಾಹ ಬಂಧನಗಳು ತಾತ್ವಿಕವಾಗಿ ಪವಿತ್ರ ಮೌಲ್ಯಗಳೆಂದು ಅಂಗೀಕರಿಸಲ್ಪಟ್ಟಿದ್ದರೂ ವಾಸ್ತವವಾಗಿ ಸಮಾಜದ ಕೆಲವು ಪಂಗಡಗಳಲ್ಲಿ ಅವು ತಿರಸ್ಕೃತವಾಗಿದ್ದುವು.

ಮಧ್ಯ ಏಷ್ಯದ ಅಲೆಮಾರಿಗಳ ಗಂಡಾಂತರಕಾರಿ ಪ್ರವೇಶದೊಡನೆ, ಪ್ರತಿಭಟನಾಯುಗ ಪ್ರಾರಂಭವಾಯಿತು. ಇದನ್ನು ಪ್ರತಿಭಟನಾಯುಗವೆಂದು ನಿರ್ದೇಶಿಸುವುದಕ್ಕೆ ಕಾರಣವೆಂದರೆ, ಈ ಯುಗದಲ್ಲಿ ಕಂಡುಬರುವ ಯಾವುದೇ ಬೆಳವಣಿಗೆ, ಹೊರಗಿನಿಂದ ಭಾರತಕ್ಕೆ ಬಂದ ವಿನಾಶಕಾರಿ ಶಕ್ತಿಗಳ ವಿರುದ್ಧವಾಗಿ ತೋರಿದ ದೃಢ ಪ್ರತಿಭಟನೆಯ ಪರಿಣಾಮವೇ ಹೊರತು ವಿದೇಶಿ ಪ್ರಭಾವಗಳ ನೇರ ಸಂಪರ್ಕದ ಪರಿಣಾಮವಲ್ಲ.

ಪ್ರತಿಭಟನಾ ಯುಗ ಅನೇಕ ಅವಸ್ಥಾಂತರಗಳ ಮೂಲಕ ಹಾದು ಬಂದಿತು. ಕುತುಬುದ್ದೀನನಿಂದ ಅಕ್ಬರನವರೆಗಿನ ಕಾಲವನ್ನು ಪ್ರಥಮ ಮತ್ತು ಕರಾಳ ಅವಸ್ಥೆಯೆನ್ನಬಹುದು. ಅಕ್ಬರನಿಂದ ಹಿಡಿದು ಕ್ರಿ. ಶ. ೧೬೭೫ರವರೆಗೆ ದುರ್ಬಲ ಪ್ರತಿಭಟನೆಯ ದ್ವಿತೀಯ ಅವಸ್ಥೆ. ಅದುವರೆಗೆ ಧರ್ಮಿಷ್ಠ ರಾಜರಿಂದ ಅನುಸರಿಸಲ್ಪಟ್ಟ ಧರ್ಮ ಶಾಸ್ತ್ರೋಕ್ತವಾದ

ಆಡಳಿತ ನಿಯಮಗಳನ್ನು ವಿದೇಶೀಯರು ತಾವು ಆಡಳಿತಕ್ಕೆ ಬಂದಲ್ಲೆಲ್ಲ ಗಾಳಿಗೆ ತೂರಿದರು.

ಉತ್ತರ ಭಾರತದ ವಿದ್ಯಾ ಕೇಂದ್ರಗಳೆಲ್ಲ ನಾಶವಾದುವು. ಮುಕ್ತವಾದ ಬೌದ್ಧಿಕ ಪ್ರಜ್ಞೆ ಮತ್ತು ನೈತಿಕ ಸತ್ವಗಳ ಚಟುವಟಿಕೆ ಸ್ಥಗಿತಗೊಂಡಿತು. ಸಮಾಜ ಸ್ವರಕ್ಷಣೆಗಾಗಿ ಸಾಂಪ್ರದಾಯಕ ಮನೋಭಾವವನ್ನು ಬೆಳೆಸಿಕೊಂಡಿತು. ಮೇಧಾತಿಥಿಯ ಮನುಧರ್ಮಶಾಸ್ತ್ರದ ಮೇಲಣ ವ್ಯಾಖ್ಯಾನ ಹಾಗೂ ವಿಜ್ಞಾನೇಶ್ವರನ ಯಾಜ್ಞವಲ್ಕ್ಯನ ಮೇಲಣ ವ್ಯಾಖ್ಯಾನ, ಇವೆರಡರ ನಡುವಣ ಎಂಭತ್ತು ವರ್ಷಗಳ ಕಾಲದಲ್ಲಿ, ಸಮಾಜ ಸಂಪೂರ್ಣ ಬದಲಾಯಿತು. ಸಮಾಜದ ದೃಷ್ಟಿ, ಜಗತ್ತನ್ನೆ ಜಯಿಸಬೇಕೆಂಬ ಆಕ್ರಮಣಕಾರಿ ವಿಸ್ತರಣ ಮನೋಭಾವದಿಂದ, ಇದ್ದಷ್ಟನ್ನಾದರೂ ಉಳಿಸಿಕೊಳ್ಳಬೇಕೆಂಬ ಸಂತೃಪ್ತ ಮನೋಭಾವದೆಡೆಗೆ ತಿರುಗಿತು. ಅವಿಭಕ್ತ ಕುಟುಂಬ ಮತ್ತಷ್ಟು ಬಿಗಿಯಾಯಿತು. ಕುಟುಂಬ ಜೀವನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಕೊಟ್ಟ ಅವಕಾಶ ಅತ್ಯಲ್ಪ. ಪುರುಷರ ಕಾಮುಕ ದೃಷ್ಟಿಯಿಂದ ಸ್ತ್ರೀಯರನ್ನು ಉಳಿಸುವುದಕ್ಕಾಗಿ ಅವರನ್ನು ಬಾಲ್ಯ ವಿವಾಹ ಮತ್ತು ಪರ್ದಾ ಪದ್ಧತಿಗಳ ಮೂಲಕ ಕುಟುಂಬದ ಆಸ್ತಿಯಂತೆ ರಕ್ಷಿಸಲಾಗುತ್ತಿತ್ತು. ಅದುವರೆಗೂ ಪುರುಷನ ಜೀವನ ಸಂಗಾತಿಯಾಗಿದ್ದ ಸ್ತ್ರೀ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ತನ್ನ ಪತಿಯಲ್ಲಿ ಒಂದಾಗಿ ಹೋದಳು. ಪರಾವಲಂಬಿಯ ಮಟ್ಟಕ್ಕೆ ಇಳಿದಳು. ಇದರರ್ಥ ಯಾರಾದರೂ ಆಕೆಯನ್ನು ಈ ಮಟ್ಟಕ್ಕೆ ಇಳಿಸಿದರೆಂದಲ್ಲ. ಮುನ್ನುಗ್ಗಿ ಬರುತ್ತಿದ್ದ ವಿನಾಶಕಾರಿ ಪ್ರವಾಹದ ಗಂಡಾಂತರಗಳಿಂದ ತಪ್ಪಿಸಿಕೊಳ್ಳಲೋಸುಗ ಅಸಹಾಯಕಳಾಗಿ ಆಕೆ ಈ ಮಟ್ಟಕ್ಕೆ ಇಳಿಯಬೇಕಾಯಿತು. ನಿದರ್ಶನಕ್ಕೆ ಭಾರತದಲ್ಲಿ ಮತ್ತೆಲ್ಲೂ ಇಂದು ಪರ್ದಾ ಪದ್ಧತಿ ರಾಜಾಸ್ಥಾನದಲ್ಲಿರುವಷ್ಟು ಬಿಗಿಯಾಗಿಲ್ಲ. ಏಕೆಂದರೆ, ಅನೇಕ ಶತಮಾನಗಳವರೆಗೆ ವಿದೇಶೀಯರ ಧಾಳಿಯ ಹೊಡೆತಗಳನ್ನು ಸಹಿಸಿ, ಉಗ್ರ ಪ್ರತಿಭಟನೆಯನ್ನು ತೋರಿ, ತನ್ನ ಸಾಮಾಜಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಯ್ದುಕೊಳ್ಳಬೇಕಾಯಿತು.

೪

ಎರಡನೆಯ ಮಹಾಸಂಸ್ಥೆಯಾದ ಚಾತುರ್ವರ್ಣ್ಯದ ಸಾಮಾಜಿಕ ವ್ಯವಸ್ಥೆಯ ಬೆಳವಣಿಗೆಯನ್ನು ಈ ನಾಲ್ಕು ಯುಗಗಳಲ್ಲಿಯೂ ಗುರುತಿಸಬಹುದು. ವಿಸ್ತರಣ ಯುಗದ ಮೊದಲ ದಿನಗಳಲ್ಲಿ, ಮುಖ್ಯವಾಗಿ ಮಂತ್ರಗಳ ಕಾಲದಲ್ಲಿ ಬ್ರಾಹ್ಮಣನು ಪುರೋಹಿತ ವೃತ್ತಿಯವನಾಗಿದ್ದನು; ರಾಜನು ಆಳುವ ದೊರೆಯಾಗಿದ್ದನು; ಆರ್ಯ ಜನಾಂಗದ ಬಹು ದೊಡ್ಡ ಭಾಗವಾದ ಗ್ರಾಮೀಣರು ವೈಶ್ಯರಾಗಿದ್ದರು; ಕಪ್ಪು ಚರ್ಮದ ಚಪ್ಪಟೆ ಮೂಗಿನ ಚಿತ್ರ ವಿಚಿತ್ರ ದೇವತೆಗಳ ಆರಾಧಕರಾದ ಅನಾರ್ಯರು, ದಸ್ಯುಗಳೂ ಮತ್ತು ಶೂದ್ರರೂ ಆಗಿದ್ದರು. ಆದರೆ ಚಾತುರ್ವರ್ಣ್ಯ ಬೀಜರೂಪದಲ್ಲಿ ಆಗಲೇ ಇತ್ತು. ಧ್ಯಾನಾಧ್ಯಯನಗಳಿಗೆ ಮೀಸಲಾದ ವರ್ಗದವರು ಜನಾಂಗದ ಮುಖ್ಯಸ್ಥರೆಂದು ಪರಿಗಣಿತವಾಗಿದ್ದರು. ತಮ್ಮ ಅಲೌಕಿಕ ಬುದ್ಧಿಮತ್ತೆ ಮತ್ತು ದೂರದೃಷ್ಟಿಯಿಂದ ಅನಾರ್ಯರ ಮೇಲೆ ಆರ್ಯರಿಗಿದ್ದ ರಾಜಕೀಯ ಪ್ರಾಬಲ್ಯವನ್ನು ದ್ವಿಜ ಮತ್ತು ದ್ವಿಜೇತರ ಭೇದ ಕಲ್ಪಿಸುವುದರ ಮೂಲಕ ಸಾಂಸ್ಕೃತಿಕ ಪ್ರಭುತ್ವವನ್ನಾಗಿ ಮಾರ್ಪಡಿಸಿದರು. ಒಂದು ವರ್ಣದಿಂದ ಮತ್ತೊಂದು ವರ್ಣಕ್ಕೆ ರೂಪಾಂತರಗೊಳ್ಳುವುದು ಹುಟ್ಟಿನ ಮೇಲೆ ಅವಲಂಬಿಸದೆ ಅವರವರ ಸಾಂಸ್ಕೃತಿಕ ಮಟ್ಟದ ಅನುಸರಣೆಯ ಮೇಲೆ ಅವಲಂಬಿಸಿತ್ತು. ಋಗ್ವೇದ ಕಾಲದ ಪುರುಷ ಸೂಕ್ತವು ಸಮಾಜದ ಈ ಚಾತುರ್ವರ್ಣ್ಯದ ಪ್ರಥಮ ಹಾಗೂ ಸ್ಪಷ್ಟ ಸೂಚನೆಗೆ ದಾಖಲೆಗಳನ್ನು ಕೊಟ್ಟಿದೆ. ಸಾಂಸ್ಕೃತಿಕ ಶುದ್ಧಿಯನ್ನು ಬಲಿಗೊಡದಂತೆ ಅನಾರ್ಯರನ್ನು ತನ್ನಲ್ಲಿ ಸೇರಿಸಿಕೊಂಡು ಸಾಮಾಜಿಕ ವ್ಯವಸ್ಥೆಯನ್ನು ಕ್ರಮಗೊಳಿಸುವ ಹಾಗೂ ವಿಸ್ತರಿಸುವ ಉದ್ದೇಶದಿಂದ ಈ ಚಾತುರ್ವರ್ಣ್ಯ ರೂಪಿತವಾಗಿತ್ತು.

ವೇದೋತ್ತರ ಯುಗದಲ್ಲಿ ಈ ಚಾತುರ್ವರ್ಣ್ಯ ಸಾರ್ವತ್ರಿಕ ವ್ಯವಸ್ಥೆಯಾಗಿ ಪರಿಣಮಿಸಿತು. ಜ್ಞಾನಿಗಳೂ, ಲೋಕಹಿತರೂ ಆದ ಜನರು ಸಮಾಜದ ಮುಖ್ಯಸ್ಥರಾದರು. ನಂತರ ಕ್ಷತ್ರಿಯರು–ಕ್ಷತ್ರಿಯರನ್ನು ಘನತೆಗೇರಿಸುವ ಮನೋಭಾವ ವಿವೇಚಿಸಬೇಕಾದಂಥ ಅಂಶ. ಬ್ರಾಹ್ಮಣನಾದ ಪರಶುರಾಮ, ಕ್ಷತ್ರಿಯನಾದ ರಾಮನಿಂದ ಸೋಲನ್ನು ಅನುಭವಿಸಿದ್ದು, ಅವೆರಡು ವರ್ಣಗಳ ನಡುವಣ ಪ್ರತಿಸ್ಪರ್ಧಾ ಮನೋಭಾವಕ್ಕೆ ಸೂಚನೆ. ಆದರೆ, ರಾಜ್ಯಗಳು ಬೆಳೆದಂತೆಲ್ಲ, ದೈವಾನುಗ್ರಹವಿಲ್ಲದೆ ರಾಜರು ಏನನ್ನೂ ಸಾಧಿಸಲಾರರೆಂದೂ, ಬ್ರಾಹ್ಮಣರು ಮಾತ್ರ ಮಾಡಿಸಬೇಕಾಗಿದ್ದ ದೀರ್ಘವಾದ ಹಾಗೂ ಅತಿ ವೆಚ್ಚದ ಯಜ್ಞ–ಯಾಗಗಳಿಂದ ಮಾತ್ರ ದೈವಾನುಗ್ರಹ ಇಳಿದು ಬರುವುದೆಂದೂ ನಂಬಲಾಯಿತು.

ಮಗಧ ಚಕ್ರಾಧಿಪತ್ಯದೊಡನೆ, ಇತಿಹಾಸದ ಆರಂಭವಾದಾಗ ಸಾಂಪ್ರದಾಯಕ ವ್ಯವಸ್ಥೆಯನ್ನೂ ಮೀರಿ ಈ ತಿಕ್ಕಾಟ ಮುಂದುವರಿದದ್ದನ್ನು ನಾವು ಕಾಣುತ್ತೇವೆ. "ರಾಜ ಶ್ರೋತ್ರಿಯನನ್ನು ಹುಡುಕಿಕೊಳ್ಳಬೇಕಾಗಿತ್ತು. ಏಕೆಂದರೆ, ಅವನು ದೊರೆಯ ಅರ್ಧಾತ್ಮ. ಇವರಿಬ್ಬರೂ ಧರ್ಮೋದ್ಧಾರಕರು" ಎನ್ನುತ್ತವೆ ಶತಪಥ ಬ್ರಾಹ್ಮಣ ಹಾಗೂ ಐತ್ರೇಯ ಬ್ರಾಹ್ಮಣಗಳು. ಆದರೆ ಈ ವೇಳೆಗಾಗಲೇ ಜ್ಞಾನ, ರಾಜ್ಯಾಡಳಿತ, ಸಾಹಿತ್ಯ, ವಿಜ್ಞಾನ ಇವೆಲ್ಲದರ ಭಂಡಾರವಾಗಿದ್ದ ಬ್ರಾಹ್ಮಣರು ಜನಾಂಗಕ್ಕೆ ಅಪರಿಹಾರ್ಯ ನಾಯಕರಾಗಿದ್ದರು. ಶಾಸನ ಗ್ರಂಥಗಳನ್ನು ಬರೆಯುತ್ತಿದ್ದವರೂ ಅವರೇ; ಯಜ್ಞಯಾಗಗಳನ್ನು ಮಾಡಿಸುತ್ತಿದ್ದವರೂ ಅವರೇ; ತಾತ್ವಿಕ ಚರ್ಚೆಗಳಲ್ಲಿ ನಿರತರಾಗುತ್ತಿದ್ದವರೂ ಅವರೇ; ರಾಜಕೀಯ ಗ್ರಂಥಗಳನ್ನು ರಚಿಸುತ್ತಿದ್ದವರೂ ಅವರೇ– ಇಂಥ ರಾಜಕೀಯ ಶಾಸ್ತ್ರಗ್ರಂಥಗಳಲ್ಲಿ ಶ್ರೇಷ್ಠವೆನಿಸಿಕೊಂಡಿರುವ ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಸರಿದೊರೆಯಾಗಬಲ್ಲ ಗ್ರಂಥಗಳು, ಜಗತ್ತಿನ ರಾಜಕೀಯ ಸಾಹಿತ್ಯದಲ್ಲಿಯೇ ಅತ್ಯಪೂರ್ವ. ಚಾತುರ್ವರ್ಣ್ಯದ ಈ ತಾತ್ವಿಕ ವ್ಯವಸ್ಥೆಗೆ ವಿರೋಧಿಗಳೂ ಇದ್ದರು. ಅಂಥವರಲ್ಲಿ ನಂದ ಒಬ್ಬನಾಗಿದ್ದನು. ಈ ಸಾಮಾಜಿಕ ವ್ಯವಸ್ಥೆಯನ್ನು ನಾಶಗೊಳಿಸಲು ಯತ್ನಿಸಿದ ಕ್ರುದ್ಧ ಹಾಗೂ ಗರ್ವಿಷ್ಠ ರಾಜರಿದ್ದುದಕ್ಕೆ ಆಧಾರಗಳನ್ನು ಮತ್ಸ್ಯಪುರಾಣ ಹೇಳುತ್ತದೆ.

ಚಾತುರ್ವರ್ಣ್ಯದಲ್ಲಿ ಸಂಸ್ಕೃತಿಯ ಅಡಿಪಾಯ ಎಷ್ಟು ಸುಭದ್ರವಾಗಿತ್ತೆಂದರೆ, ತಾನೇ ಬ್ರಾಹ್ಮಣನಾದ ಪುಷ್ಯಮಿತ್ರನು ಆಡಳಿತಕ್ಕೆ ಬಂದ ಕಾಲದಿಂದ, ಚಾತುರ್ವರ್ಣ್ಯವು ಸ್ಥಿರವಾದ ಸಾಮಾಜಿಕ ವ್ಯವಸ್ಥೆಯಾಗಿ ಅಂಗೀಕರಿಸಲ್ಪಟ್ಟಿತು. ಆದರೆ ಪ್ರತಿಯೊಂದು ಪ್ರಾಂತ್ಯವೂ, ಪ್ರತಿಯೊಂದು ಚಳುವಳಿಯೂ ತನಗೆ ತೋಚಿದಂತೆ ಅದನ್ನು ವ್ಯಾಖ್ಯಾನಿಸಿತು ಎಂಬುದು ನಿಸ್ಸಂದೇಹವಾದ ವಿಚಾರ.

ಗೀತೆಯಲ್ಲಿ ಶ್ರೀಕೃಷ್ಣ ಗುಣಕರ್ಮಗಳಿಗನುಗುಣವಾಗಿ ಚಾತುರ್ವರ್ಣ್ಯವನ್ನು ವಿಭಾಗಿಸುತ್ತಾನೆ. ಯುಧಿಷ್ಠಿರ ನಹುಷನೊಡನೆ ನಡೆಸಿದ ಸಂಭಾಷಣೆಯಲ್ಲಿ ಹುಟ್ಟಿನ ಮೇಲೆ ಆಧಾರಿತವಾದ ಜಾತಿಪದ್ಧತಿಯ ಮೌಲ್ಯವನ್ನು ಕುರಿತು ತನ್ನ ಸಂದೇಹವನ್ನು ವ್ಯಕ್ತಪಡಿಸುತ್ತಾನೆ. ಎಲ್ಲ ವಿದೇಶೀಯರನ್ನೂ ಧರ್ಮದ ಕಕ್ಷೆಗೊಳಪಡಿಸಬೇಕೆಂಬ ಮಾಂಧಾತನ ಅಭಿಪ್ರಾಯವನ್ನು

ಇಂದ್ರನೂ ಸಮ್ಮತಿಸಿದಂತೆ ಮಹಾಭಾರತದಲ್ಲಿ ಉಲ್ಲೇಖಿತವಾಗಿದೆ. ಕಾಳಿದಾಸನ ಕೃತಿಗಳು ಚಾತುರ್ವರ್ಣ್ಯದ ಶಿಖರಾವಸ್ಥೆಯ ಸೊಗಸು ಮತ್ತು ಶಕ್ತಿಯನ್ನು ಪ್ರತಿಫಲಿಸುತ್ತವೆ.

ಸಮಾಜದ ಸ್ಥಿರತೆ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೆ ಭಂಗ ಬಾರದ ಹಾಗೆ ಹೊಸ ಹೊಸ ಜನಾಂಗಗಳಿಗೆ ತನ್ನಲ್ಲಿ ಸ್ಥಳ ಮಾಡಿಕೊಟ್ಟ ಜೀವಂತ ಸಂಸ್ಥೆಯೊಂದನ್ನು, ಆ ಮೂಲಕವಾಗಿ ಸಾರ್ವತ್ರಿಕ ಅನ್ವಯವುಳ್ಳಂಥ ಸಾಮಾಜಿಕ ಮಾದರಿಯೊಂದನ್ನು, ವಿಸ್ತರಣ ಯುಗದಲ್ಲಿ, ಚಾತುರ್ವರ್ಣ್ಯ ವ್ಯವಸ್ಥೆ ಒದಗಿಸಿತು. ಅನುವಂಶಿಕವಾಗಿ ಬಂದ ವಿಶಿಷ್ಟ ಕರ್ಮಗಳ ಆಧಾರದ ಮೇಲೆ ಮೂರು ವರ್ಗಗಳನ್ನು ನಿರ್ಮಿಸಿತು. ಜ್ಞಾನದ ಆರಾಧಕರಾದ ಒಂದು ವರ್ಗ, ಸೈನಿಕ ಕರ್ಮಗಳಿಗೆ ಮೀಸಲಾದ ಮತ್ತೊಂದು ವರ್ಗ, ವ್ಯಾಪಾರ, ವ್ಯವಸಾಯಗಳ ಅಭಿವೃದ್ಧಿಯನ್ನು ಕೈಗೊಂಡ ಇನ್ನೊಂದು ವರ್ಗ– ಹೀಗೆ ಮೂರು ವರ್ಗಗಳು ರೂಪಿತವಾದುವು. ಸಮಾಜಕ್ಕೆ ಅದು ಒಂದು ಸ್ಥಿರತೆಯನ್ನು ತಂದುಕೊಟ್ಟಿತು. ಬ್ರಾಹ್ಮಣರು ಬೌದ್ಧಿಕ ಹಾಗೂ ಸಾಹಿತ್ಯಕ ಪ್ರಗತಿಗೆ ಶ್ರಮಿಸಲು ಸಾಧ್ಯವಾಗುವಂತೆ ಮಾಡಿತು. ಸಮಾಜದ ವ್ಯವಸ್ಥೆಯನ್ನು ಕಾಪಾಡಿ, ಕಾನೂನುಗಳನ್ನು ರಕ್ಷಿಸಿ, ಯುದ್ಧಗಳನ್ನು ಮಾನವೀಯಗೊಳಿಸಿ ನಿಯಂತ್ರಿಸುವ ಮೂಲಕ ಸಂಸ್ಕೃತಿಯ ಮುನ್ನಡೆಯನ್ನು ಅಬಾಧಿತಗೊಳಿಸುವ ಕರ್ತವ್ಯವನ್ನು ಕ್ಷತ್ರಿಯರ ಮೇಲೆ ಹೊರಿಸಿತು. ರಾಜಕೀಯ ಭೂಕಂಪಗಳಿಂದ ಯಾವ ತೊಂದರೆಯೂ ಆಗದಂತೆ ಜನರ ಆರ್ಥಿಕ ಜೀವನವನ್ನು ಸುಗಮ ಗೊಳಿಸುವ ಕರ್ತವ್ಯ ವೈಶ್ಯರದಾಗಿತ್ತು. ಈ ವ್ಯವಸ್ಥೆ ಅನುವಂಶಿಕತೆಯನ್ನೇ ಒತ್ತಿ ಹೇಳಿದರೂ ಸಹ, ಅದಕ್ಕೆ ಅಪವಾದಗಳೂ ಇದ್ದುವು. ಉನ್ನತ ಮಟ್ಟದ ಸುಸಂಸ್ಕೃತ ಜೀವನವನ್ನು ಅಳವಡಿಸಿಕೊಳ್ಳುವುದರ ಮೂಲಕ ಕೆಳವರ್ಗದ ಜನರು ಮೇಲುವರ್ಗಕ್ಕೇರಲೂ ಈ ವ್ಯವಸ್ಥೆಯಲ್ಲಿ ಸಾಧ್ಯವಿತ್ತು. ಸುಸಂಬದ್ಧ ಆಂತರಿಕ ಜೀವನವನ್ನೂ, ಅರ್ಥಪೂರ್ಣ ಬಹಿರಂಗ ಜೀವನವನ್ನೂ ನಡೆಸಲು ಬೇಕಾದ ಜೀವಂತವಾದ ಸಾಮಾಜಿಕ ಸಂದೇಶವೊಂದನ್ನು ಈ ವ್ಯವಸ್ಥೆ ಭಾರತಕ್ಕೆ ನೀಡಿತು. ಆರ್ಯಾವರ್ತವು ಕೇವಲ ಸಾಗರ ಪರ್ವತಗಳ ನಡುವಣ ಭೂಮಿಗೆ ಪರಿಮಿತವಾಗಿಲ್ಲ; ಆರ್ಯ ರಾಜ ಎಲ್ಲೆಲ್ಲಿ ತನ್ನ ಬಾಹುಗಳನ್ನು ಚಾಚಿ ಚಾತುರ್ವರ್ಣ್ಯವನ್ನು ಸ್ಥಾಪಿಸಿ ಮ್ಲೇಚ್ಛರನ್ನು ಶೂದ್ರರ ಮಟ್ಟಕ್ಕೆ ಇಳಿಸುತ್ತಾನೋ, ಅಲ್ಲೆಲ್ಲ ಆರ್ಯಾವರ್ತವಿದೆ ಎನ್ನುತ್ತಾನೆ ಮೇಧಾತಿಥಿ.

ಪ್ರತಿಭಟನಾ ಯುಗದಲ್ಲಿ ಚಾತುರ್ವರ್ಣ್ಯ ವ್ಯವಸ್ಥೆ ತನ್ನ ಪಾತ್ರವನ್ನು ಮಹೋನ್ನತವಾಗಿ ನಿರ್ವಹಿಸಿತು. ಪ್ರಾಚೀನ ವಿದ್ಯಾ ಕೇಂದ್ರಗಳಿಂದ ಉಚ್ಚಾಟಿತರಾದ ಬ್ರಾಹ್ಮಣರು ದೂರದ ಹಳ್ಳಿಗಳಿಗೆ ಓಡಿಹೋಗಿ ಜ್ಞಾನ ಮತ್ತು ಪರಂಪರೆಯನ್ನು ರಕ್ಷಿಸಿಕೊಂಡರು; ಸ್ಮೃತಿಸೂತ್ರಗಳನ್ನು ಎತ್ತಿಹಿಡಿದರು; ಜನತೆಯ ವಿದ್ಯಾಭ್ಯಾಸದ ಹಾಗೂ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸಿದರು. ಸಾವಿರಾರು ಜನ ಕ್ಷತ್ರಿಯ ಸ್ತ್ರೀಪುರುಷರು ಸ್ವಾತಂತ್ರ್ಯ ಮತ್ತು ಧರ್ಮವನ್ನು ರಕ್ಷಿಸುವ ಸಲುವಾಗಿ ಪ್ರಾಣ ತೆತ್ತರು. ವೈಶ್ಯರು ವಿದೇಶೀ ಅನಾಗರಿಕರಿಂದ ತಮ್ಮನ್ನು, ಉಳಿದವರನ್ನು ಮತ್ತು ತಮ್ಮ ದೇವಾಲಯಗಳನ್ನು ರಕ್ಷಿಸಿಕೊಂಡರು ಮತ್ತು ತಮ್ಮ ಉದ್ಯೋಗವನ್ನು ಕುಶಲತೆಯಿಂದ ಮುನ್ನಡೆಸಿದರು.

ವಿದೇಶೀಯರ ದಂಡಯಾತ್ರೆಯಿಂದ ಉಂಟಾದ ರಾಜಕೀಯ ಉತ್ ಕ್ರಾಂತಿಯ ಕಾಲದಲ್ಲಿ, ಚಾತುರ್ವರ್ಣ್ಯವು ಜೀವನವನ್ನು ರಕ್ಷಿಸುವ ಒಂದು ಕೋಟೆಯಾಗಿ ಪರಿಣಮಿಸಿತು. ಪ್ರವಾಹದಂತೆ ನುಗ್ಗುತ್ತಿದ್ದ ಕ್ರೋಧಾಗ್ನಿಯ ಮುಂದೆ ನಿಲ್ಲಲಾರದೆ ಕೋಟ್ಯಂತರ ಜನ ನಿರಾಶ್ರಿತರಾಗಿ ಓಡಿದರು. ತಮ್ಮ ತಮ್ಮಲ್ಲೇ ಕಿರಿದಾದ ಉಪಜಾತಿಗಳಾಗಿ ವಿಭಾಗವಾದರು; ತಮ್ಮ ಜೀವನ ಕ್ರಮವನ್ನು ಉಳಿಸಿಕೊಂಡರು; ಸಾಮಾಜಿಕ ಬಹಿಷ್ಕಾರ ಮತ್ತು ವಿದೇಶೀಯ ದಾಳಿಗಳನ್ನೆಲ್ಲ ತಿರಸ್ಕರಿಸುವುದು– ಇಂಥ ಸಾಮೂಹಿಕ ಆಯುಧಗಳಿಂದ ವಿದೇಶೀಯರನ್ನು ಹಾಗೂ ಅವರ ಜೀವನಕ್ರಮವನ್ನು ಎದುರಿಸಿದರು. ಹೀಗೆ ಚಾತುರ್ವರ್ಣ್ಯವು ರಕ್ಷಣಾತ್ಮಕ ಪ್ರತಿಕ್ರಿಯೆ ತೋರಿಸದಿದ್ದರೆ, ಭಾರತದಲ್ಲಿ ಇಂದು ಭಾರತೀಯ ಸಂಸ್ಕೃತಿಯು ಸಮಾಧಿಯಾಗುತ್ತಿತ್ತು. ಕ್ಷತ್ರಿಯರು ಹಳ್ಳಿ ಹಳ್ಳಿಗಳಲ್ಲಿ, ಕೋಟೆ ಕೋಟೆಗಳಲ್ಲಿ ಶತ್ರುಗಳನ್ನು ಪ್ರತಿಭಟಿಸಿದರೆ, ಅವರ ಸ್ತ್ರೀಯರು ಪಾತಿವ್ರತ್ಯದ ಪರಂಪರೆಯ ರಕ್ಷಣೆಗಾಗಿ ಅಗ್ನಿಪ್ರವೇಶ ಮಾಡಿದರು. ಬ್ರಾಹ್ಮಣರು ಧಾರ್ಮಿಕ ಕ್ರಾಂತಿ ಮತ್ತು ಸಾಹಿತ್ಯಕ ಪುನರುಜ್ಜೀವನದ ಮೂಲಕ ಸಂಸ್ಕೃತದ ಪರಂಪರೆಯನ್ನು ಜೀವಂತವಾಗಿಟ್ಟ ಆಚಾರ್ಯರನ್ನು, ಭಕ್ತರನ್ನು, ಕವಿಗಳನ್ನು ರಾಷ್ಟ್ರಕ್ಕೆ ಕೊಡುಗೆಯಾಗಿ ನೀಡಿದರು. ಗುಜರಾತಿನ ವೈಶ್ಯರ ವಾಣಿಜ್ಯ ನೌಕಾಪಡೆಯು ಎಂಭತ್ತನಾಲ್ಕು ವಿದೇಶೀ ಬಂದರುಗಳಲ್ಲಿ ತನ್ನ ಧ್ವಜದ ಹಾರಾಟವನ್ನು ಈ ಯುಗದುದ್ದಕ್ಕೂ ಮುಂದುವರೆಸಿತು. ಪಾಶ್ಚಿಮಾತ್ಯರ ಸಾಮಾಜಿಕ ವ್ಯವಸ್ಥೆಯಿಂದ ಕುರುಡಾದ ನಾವು, ಪಾಶ್ಚಿಮಾತ್ಯರು ಇನ್ನೂ ಅನಾಗರಿಕ ಸ್ಥಿತಿಯಲ್ಲೇ ಹೊರಳುತ್ತಿದ್ದಂಥ ಕಾಲದಲ್ಲಿ, ಭಾರತದ ಚಾತುರ್ವರ್ಣ್ಯವು ರಾಷ್ಟ್ರಮಟ್ಟದಲ್ಲಿ ಅದ್ಭುತವಾದ ಸಾಮಾಜಿಕ ಏಕೀಕರಣಕ್ಕೆ ಕಾರಣವಾಯಿತು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋಲುತ್ತೇವೆ.

ಸಿಡ್ನಿಲೊ ತನ್ನ 'ಭಾರತದರ್ಶನ' ಗ್ರಂಥದಲ್ಲಿ ಹೇಳುತ್ತಾನೆ– "ರಾಜಕೀಯ ಆಘಾತ ಮತ್ತು ಪ್ರಾಕೃತಿಕ ವಿಪ್ಲವಗಳ ವಿರುದ್ಧವಾಗಿ ಶತಮಾನಗಳವರೆಗೆ ಹೋರಾಡಿ ತನ್ನತನವನ್ನು ಉಳಿಸಿಕೊಳ್ಳುವ ಶಕ್ತಿಯನ್ನು ಭಾರತೀಯ ಸಮಾಜಕ್ಕೆ ನೀಡಿದ ಮೂಲಭೂತ ಸ್ಥಿರತೆ ಮತ್ತು ಸಂತೃಪ್ತಿಗೆ ಚಾತುರ್ವರ್ಣ್ಯ ವ್ಯವಸ್ಥೆಯೇ ಪ್ರಮುಖ ಕಾರಣ".

ಭಾರತೀಯ ಸಂಸ್ಕೃತಿ ಇತಿಹಾಸದುದ್ದಕ್ಕೂ ಒಂದು ಅದಮ್ಯ ಶಕ್ತಿಯಾಗಿ ಮೆರೆದಿದೆ. ಅದರ ಸಾಮಾಜಿಕ ವ್ಯವಸ್ಥೆಯಲ್ಲಿ ಚೈತನ್ಯವಿದೆ, ದೃಢತೆಯಿದೆ ಮತ್ತು ಎಂಥ ಸಂದರ್ಭಕ್ಕೂ ಹೊಂದಿಕೊಳ್ಳುವ ಶಕ್ತಿಯಿದೆ. ಅದರ ಜೀವಂತತೆಗೆ ಇದಕ್ಕಿಂತಲೂ ಹೆಚ್ಚಿನ ಸಾಕ್ಷಿ ಬೇಕಾಗಿಲ್ಲ.

(ಅನು : ಎಂ. ಎಚ್. ಪದ್ಮಾವತಮ್ಮ) ●

(ಈ ಲೇಖನವನ್ನು ಡಾ॥ ಜಿ. ಎಸ್. ಶಿವರುದ್ರಪ್ಪ ಅವರ ಸಂಪಾದಕತ್ವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುವ 'ಭಾರತೀಯ ಪರಂಪರೆ' ಎಂಬ ಸಂಕಲನದಿಂದ ಆರಿಸಲಾಗಿದೆ– ಸಂ.)

ಜಟೆಯಿಂದಾಗಲಿ, ಗೋತ್ರದಿಂದಾಗಲಿ, ಹುಟ್ಟಿನಿಂದಾಗಲೀ ಯಾರೂ ಬ್ರಾಹ್ಮಣನಾಗುವುದಿಲ್ಲ. ಯಾರು ಸತ್ಯ–ಧರ್ಮಗಳನ್ನರಿತು ನಡೆಯುವನೋ, ಯಾರು ಶುದ್ಧನಾಗಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಕರೆಯುತ್ತೇನೆ.

– ಬುದ್ಧ

ರಾಮಾಯಣ, ಮಹಾಭಾರತಗಳಲ್ಲಿ ಜಾತಿ ಸಂಬಂಧಗಳು:
ಒಂದು ವಿವೇಚನೆ

ಡಾ॥ ಬಿ.ಎನ್. ಸುಮಿತ್ರಬಾಯಿ

ಕೋಟ್ಯಾನುಕೋಟಿ ಭಾರತೀಯರು ಶತಶತಮಾನಗಳಿಂದ ಒಲಿದಿರುವ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳು, ಈ ಬೃಹದ್ ರಾಷ್ಟ್ರದ ಜನತೆಯ ಮೇಲೆ ಬೀರಿರುವ ಪ್ರಭಾವ ವಿಸ್ಮಯಕಾರಿಯಾದದ್ದು. ನಮ್ಮ ಪರಂಪರಾಗತ ಸಂಸ್ಕೃತಿಯ ಹೆಗ್ಗುರುತುಗಳೆನಿಸಿರುವ ಈ ಕಾವ್ಯಗಳು ಭಿನ್ನ ಭಿನ್ನ ಕಾಲದ ಜನರ, ವಿಭಿನ್ನ ಅವಶ್ಯಕತೆಗಳಿಗೆ ಅನುಗುಣವಾದ ಬಹುರೂಪಿ ವಿಷಯಗಳನ್ನು ಮೈಗೂಡಿಸಿಕೊಳ್ಳುತ್ತ ಬೆಳೆದಂಥವು. ಪರಂಪರೆಯು ವಾಲ್ಮೀಕಿ ಮತ್ತು ವ್ಯಾಸರಿಂದ ರಚಿತವಾದ ಸಮಗ್ರವೂ, ಅಖಂಡವೂ ಆದ ರಚನೆಗಳೆಂದು ಇವುಗಳನ್ನು ಗುರುತಿಸುತ್ತದೆ. ಅದಕ್ಕೆ ಅನುಗುಣವಾಗಿ ಇವು ಧಾರ್ಮಿಕ ಶ್ರದ್ಧೆಯುಳ್ಳವರಿಗೆ ಪ್ರಮಾಣ ಗ್ರಂಥಗಳೂ ಆಗಿವೆ. ಹಿಂದೂ ಧರ್ಮದ ಶ್ರದ್ಧಾವಂತರಿಗೆ ಈ ಕೃತಿಗಳಲ್ಲಿನ ಯಾವುದೇ ವಿಚಾರವೂ ಪ್ರಶ್ನಾತೀತ. ಆದ್ದರಿಂದ ಸಮರ್ಥನೀಯವೆಂದೇ ತೋರಬಹುದು. ಧಾರ್ಮಿಕೇತರ ನೆಲೆಗಳಲ್ಲಿ ಈ ಕಾವ್ಯಗಳ ಕಥೆ ಕೇಳಿ, ಓದಲು ಬಾರದ ಭಾರತೀಯರೂ ಆನಂದಿಸುತ್ತಾರೆಂಬುದನ್ನೂ ನೆನೆಯಬೇಕು. ಈ ಹಿನ್ನೆಲೆಯಲ್ಲಿ ರಾಮಾಯಣ, ಮಹಾಭಾರತಗಳ ಧಾರ್ಮಿಕ, ದಾರ್ಶನಿಕ, ಸಾಹಿತ್ಯಕ ಧ್ವನಿಗಳನ್ನೆಲ್ಲ ಪ್ರತ್ಯೇಕವಾಗಿಟ್ಟು ಅವುಗಳಲ್ಲಿ ಚರ್ಚಿತವಾಗುವ ಜಾತಿ ಸಂಬಂಧಗಳ ಸ್ವರೂಪವನ್ನಷ್ಟೇ ಏಕೆ ನೋಡಬೇಕು ಅಥವಾ ನೋಡುವುದಾದರೆ ಹೇಗೆ ನೋಡಬೇಕು ಎಂಬ ಪ್ರಶ್ನೆಗಳು ಏಳುವುದು ಸಹಜ.

ಇಂದು ನಮ್ಮ ನಾಡಿನ ಪರಿಸರದಲ್ಲಿ ಜನರ ಬದುಕನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಜಾತಿಪದ್ಧತಿಯು ಒಂದು ಪ್ರಬಲ ಅಸ್ತ್ರವಾಗಿದೆ. ರಾಜಕೀಯ ಪಕ್ಷಗಳ ಮತದ ಹಂಬಲವಿರಲಿ, ಸರ್ಕಾರಗಳ ಅಧಿಕಾರ ಹಿತಾಸಕ್ತಿಗಳಿರಲಿ, ಮಠ ಮಾನ್ಯಗಳ ಧಾರ್ಮಿಕ ಪ್ರಾಬಲ್ಯವಿರಲಿ ಎಲ್ಲಕ್ಕೂ ಜಾತಿಯೇ ಬ್ರಹ್ಮಾಸ್ತ್ರ. ನಮ್ಮ ಬದುಕನ್ನು ತೀರಾ ಅವನತಿಯ ಕಡೆಗೆ, ಅಮಾನವೀಯ ಹಣದ ಪಿಪಾಸೆಯ ಕಡೆಗೆ ತಳ್ಳುವಂತೆ ರಭಸವಾಗಿ ಆಕ್ರಮಿಸುತ್ತಿರುವ ನವ ವಸಾಹತುಶಾಹಿ, ನವ ಸಾಮ್ರಾಜ್ಯಶಾಹಿ ಒತ್ತಡಗಳು, ಜಾಗತೀಕರಣ, ಉದಾರೀಕೃತ ಆರ್ಥಿಕ ನೀತಿಗಳು ಜಾತಿಗಳ ರೀತಿಯಲ್ಲೇ ನಮ್ಮ ಬದುಕಿನ ಬೇರುಗಳನ್ನು ಕಡಿಯತೊಡಗಿವೆ. ಹಳೆಯ ಸಾಂಪ್ರದಾಯಿಕ ನಂಬಿಕೆಗಳು, ಹಳೆಯ ಬದುಕಿನ ಕ್ರಮದಲ್ಲಿದ್ದ ನೆಮ್ಮದಿ, ಭದ್ರತೆಗಳೆಲ್ಲ ಈ ಹೊಸ ಬದಲಾವಣೆಗಳ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿವೆ.

ಸಮಾಜವೊಂದು ಇಡಿಯಾಗಿ ಹೀಗೆ 'ಸಾಂಸ್ಕೃತಿಕ ಆಘಾತ'ಕ್ಕೆ ಒಳಗಾದಾಗ, ಇದರ ಪರಿಣಾಮಗಳು ನಾನಾ ರೂಪದಲ್ಲಿ ಕಾಣಿಸಿಕೊಳ್ಳಬಹುದು. ನಿರ್ದಯವಾದ ಧನದಾಹವೇ 'ಪ್ರಗತಿ' ಎನ್ನಿಸುವುದು, ಲಾಭಕ್ಕಾಗಿ ಮಾನವ ಜೀವಕ್ಕೆ ಬೆಲೆ ಇಲ್ಲವಾಗುವುದು ಅಥವಾ ಪುರಾತನ ಅವೈಚಾರಿಕ ನಂಬಿಕೆಗಳೆಲ್ಲ ಸಮುದಾಯದ ಸುಪ್ತಮನಸ್ಸಿನಿಂದ ಮೇಲೆದ್ದು ಬರುವುದು ಇತ್ಯಾದಿ ಪ್ರತಿಕ್ರಿಯೆಗಳು ಈ ಸಾಂಸ್ಕೃತಿಕ ಆಘಾತಕ್ಕೆ ಜನರು ಒಳಗಾದುದರ ಕುರುಹುಗಳು. ಭಾರತದಲ್ಲಿ ಆಡಂಬರಪ್ರಿಯತೆ, ಲೈಂಗಿಕ ಸ್ವಚ್ಛಂದತೆ ಸಮೂಹ ಮಾಧ್ಯಮಗಳ ಮೂಲವಾದ ಸಾಂಸ್ಕೃತಿಕ ವಿಕೃತಿಗಳು ಒಂದೆಡೆ ಹುಟ್ಟಿದ್ದರೆ, ಮತ್ತೊಂದೆಡೆ ಮಾಫಿಯಾಗಳ ಗೂಂಡಾಗಿರಿ, ಹಿಂಸಾಚಾರಗಳ ವೈಭವೀಕರಣ ಮತ್ತು ಧಾರ್ಮಿಕವಾದ ನಿಷ್ಠುರ ಸಂಪ್ರದಾಯಶೀಲ ಮೂಲಭೂತವಾದಿ ಶಕ್ತಿಗಳು ಜನಜೀವನವನ್ನು ತಮ್ಮ ಮುಷ್ಟಿಯಲ್ಲಿಟ್ಟು ಕೊಳ್ಳಲು ತೀವ್ರವಾಗಿ ಕ್ರಿಯಾನಿರತವಾಗಿವೆ, ಇಂಥ ಸಂಪ್ರದಾಯ ಶರಣತೆಯನ್ನು ಬಿತ್ತಲು, ಹಬ್ಬಿಸಲು. ರಾಮಾಯಣ, ಮಹಾಭಾರತಗಳಂಥ ಪುರಾತನ ಧರ್ಮಗ್ರಂಥಗಳೂ ಬಲವಾದ ಸಾಧನಗಳಾಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಮಾನವೀಯತಾವಾದದಲ್ಲಿ ಶ್ರದ್ಧೆಯಿರುವ ಯಾರೇ ಆಗಲಿ, ಈ ಬಗೆಯ ಪ್ರಾಚೀನ ದಾಖಲೆಗಳನ್ನು ವಿವೇಚನೆಯಿಂದ ಪರಿಶೀಲಿಸಬೇಕಾಗುತ್ತದೆ. ಇಂದು ನಮಗೆ ಅಗತ್ಯವಿರುವ ಸಮಾನತೆ ಮತ್ತು ವ್ಯಕ್ತಿಸ್ವಾತಂತ್ರ್ಯದಂಥ ಪರಿಕಲ್ಪನೆಗಳ ದೃಷ್ಟಿಯಿಂದ ಮೌಲಿಕವೆನ್ನಬಹುದಾದ್ದನ್ನು ಈ ಪ್ರಾಚೀನ ಆರ್ಷಕಾವ್ಯಗಳಲ್ಲಿ ಕಾಣಬಹುದೆ ಎಂಬುದು ಹೀಗೆ ಸಂಸ್ಕೃತಿ ಅಧ್ಯಯನದ ದೃಷ್ಟಿಯಿಂದ ಮಹತ್ವದ ಪ್ರಶ್ನೆಯಾಗುತ್ತದೆ.

ಆದರೆ ಈಗ ಸಂಸ್ಕೃತಿ ಶೋಧನೆಗೆ ಹೊರಡುವವರು, ಮೊದಲು ಈ ದಿಕ್ಕಿನಲ್ಲಿ ನಡೆದಿರುವ ಸಂಶೋಧನೆ, ಬೆಳವಣಿಗೆಗಳನ್ನು ಅರಿವಿಗೆ ತಂದುಕೊಳ್ಳಬೇಕು. ಬ್ರಿಟಿಷರ ಕಾಲದಲ್ಲಿ ಭಾರತದ ಸಾಮಾಜಿಕ–ಧಾರ್ಮಿಕ ವ್ಯವಸ್ಥೆಯ ಬಗ್ಗೆ ಇಂಡಾಲಜಿಸ್ಟರು ಮತ್ತು ಚರಿತ್ರಕಾರರು ಚಿತ್ರಿಸಿದ್ದು ನಾಲ್ಕು ವರ್ಣಗಳಲ್ಲಿ ಕಡ್ಡಾಯವಾಗಿ ಬಿಗಿಯಾಗಿ ವಿಭಕ್ತವಾದ ಸಾಮಾಜಿಕ ವ್ಯವಸ್ಥೆಯನ್ನು. ಆದರೆ ಇಂದಿನ ಚರಿತ್ರಕಾರರು, ವಸಾಹತು ಅವಧಿಯಲ್ಲಿ ಇದ್ದಹಾಗೆ ಕೇವಲ ಬ್ರಾಹ್ಮಣ ಧರ್ಮದ ಸಂಸ್ಕೃತ ಪಠ್ಯಗಳ ಆಧಾರದಿಂದ ಕಟ್ಟಿಕೊಡಲಾದ ಚಾತುರ್ವರ್ಣ್ಯ ವ್ಯವಸ್ಥೆಯ ತೀರಾ ಸರಳ ಪರಿಕಲ್ಪನೆಯನ್ನು ಒಪ್ಪುವುದಿಲ್ಲ. ಸಿಂಧೂ ಕಣಿವೆ, ದೋ ಆಬ್ ಪ್ರಾಂತ್ಯಗಳ ಉತ್ಖನನ, ಜೈನ, ಬೌದ್ಧ ಧಾರ್ಮಿಕ ಪರಂಪರೆಗಳ ಶೋಧನೆ, ಶಾಸನಗಳು, ಜಾನಪದ ಸಾಮಗ್ರಿ ಮತ್ತಿತರ ಸಾಂಸ್ಕೃತಿಕ ಆಕರಗಳನ್ನು ಆಧಾರವಾಗಿ ಅವರು ಪರಿಗಣಿಸುತ್ತಾರೆ. 'ರಾಜತ್ವ'ದ ಹುಟ್ಟಿನ ಬಗ್ಗೆ, ವರ್ಣವ್ಯವಸ್ಥೆಯ ಬಗ್ಗೆ ಬ್ರಾಹ್ಮಣ ಪರಂಪರೆಗಿಂತ ಭಿನ್ನವಾದ ಚಿಂತನೆ ಜೈನ, ಬೌದ್ಧ ಆಕರಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಆರ್ಯರ ಆಕ್ರಮಣದಿಂದ ಸ್ಥಳೀಯ ಸಂಸ್ಕೃತಿಯು ವಿನಾಶವಾಯಿತೆಂಬ ವಸಾಹತು ಕಲ್ಪನೆ ಕೂಡ ಬುಡಕಟ್ಟುಗಳ ಅಸ್ತಿತ್ವದಿಂದಾಗಿ ಅಸಮಂಜಸವೆನಿಸಿದೆ. ಈ ಹಿನ್ನೆಲೆಯಲ್ಲಿ 'ಜಾತಿ' ಮತ್ತು 'ವರ್ಣ'ಗಳ ನಡುವಿನ ವ್ಯತ್ಯಾಸವನ್ನು ಆಧುನಿಕ ಚರಿತ್ರಕಾರರು ವಿವರಿಸುತ್ತಾರೆ.

ಪ್ರಾಚೀನರ 'ವರ್ಣ' ವ್ಯವಸ್ಥೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಗುಂಪುಗಳನ್ನು ಒಳಗೊಂಡದ್ದು ಎನ್ನುವುದು ಒಂದು ಸ್ಥೂಲ ಕಲ್ಪನೆ ಮಾತ್ರ. ಈ ಗುಂಪುಗಳು ಬೇರೆ ಬೇರೆಯಾಗಿ

ತೋರುತ್ತಿದ್ದಾಗಲೂ ಮೇಲಿನಿಂದ ಕೆಳಕ್ಕೆ ಚಲಿಸಲು ಅವಕಾಶ ಪಡೆದಿದ್ದವು. ನಿಯಂತ್ರಣವಿದ್ದದ್ದು ಕೆಳಗಿನಿಂದ ಮೇಲಿನ ಶ್ರೇಣಿಯತ್ತ ಚಲಿಸುವ ಬಗ್ಗೆ ಮಾತ್ರ. 'ವರ್ಣ' ಎಂಬುದರ ಜೊತೆ ಯಾವಾಗಲೂ 'ವರ್ಣಸಾಂಕರ್ಯ'ದ ಸ್ಥಿತಿಯೂ ಸೇರಿರುವಂಥದೇ. ಈ 'ವರ್ಣ' ಒಂದು ಪಾರಿಭಾಷಿಕ ಶಬ್ದವಾಗಿದ್ದು, ಜಾತೀಯ ಗುಂಪುಗಳ ಸಾಮಾಜಿಕ–ಧಾರ್ಮಿಕ ವಿಧ್ಯುಕ್ತಸ್ಥಾನ (Ritual Status) ವನ್ನು ಅದು ಸೂಚಿಸುತ್ತಿತ್ತು. ಜಾತಿ ವ್ಯವಸ್ಥೆ ಇವರ ತಳಹದಿ ಯಾಗಿತ್ತು.

ಕ್ಷತ್ರಿಯ ಬುಡಕಟ್ಟುಗಳು ಭೂಮಿಯ ಒಡೆತನ ಸಾಧಿಸಿದಂತೆ, ನೆಲ, ಜನ, ಜನಪದಗಳು, ಬಂಧುತ್ವ ಮತ್ತು ರಕ್ತ ಸಂಬಂಧಗಳನ್ನು ಆಧರಿಸಿ ಕುಲ, ವಂಶಗಳ ಶ್ರೇಣೀಕರಣವೂ ರೂಪುಗೊಂಡಿತು. ವಿವಿಧ ವೃತ್ತಿಗಳಲ್ಲಿ ನಿರತವಾಗಿ ವಿವಿಧ ಪಂಗಡಗಳಾಗಿ ನೆಲೆಸಿದ್ದ ಜನರು ವಿವಿಧ ಜಾತಿಗಳಾದರು. ಈ ಜಾತಿಗಳ ಶ್ರೇಣಿಯ ಪರಿಭಾಷೆಯೇ ವರ್ಣ. ಜಾತಿ ಪದ್ಧತಿಯು ಬ್ರಾಹ್ಮಣರಿಂದ ಹುಟ್ಟಿದ್ದಲ್ಲ. ಇಡೀ ಸಮಾಜದ ನಿಯಂತ್ರಣ ಕೂಡ ಬ್ರಾಹ್ಮಣರದ್ದೂ ಆಗಿರಲಿಲ್ಲ. ಆದರೆ ಈ ಜಾತಿಗಳೆಲ್ಲ ಹೆಚ್ಚು ಹೆಚ್ಚಾಗಿ ಸಂಸ್ಥೀಕೃತವಾದಾಗ, ಪ್ರಚಲಿತ ವ್ಯವಸ್ಥೆಯಲ್ಲಿನ ಧಾರ್ಮಿಕ, ಶೈಕ್ಷಣಿಕ ಮತ್ತು ಆಡಳಿತದ ಸವಲತ್ತುಗಳನ್ನೆಲ್ಲ ತಮ್ಮ ಹಿತಾಸಕ್ತಿಯಾಗಿ ಪರಿವರ್ತಿಸಬಲ್ಲಂಥ ಧಾರ್ಮಿಕ, ಸಾಮಾಜಿಕ ನಿಯಮಾವಳಿಗಳನ್ನು ಬ್ರಾಹ್ಮಣರು ರಚಿಸಿದರು. ಧರ್ಮಶಾಸ್ತ್ರಗಳೆಲ್ಲ ಬಹುತೇಕ ಬ್ರಾಹ್ಮಣರದೇ ಚಿಂತನೆಗಳಾಗಿದ್ದು, ಸಹಜವಾಗಿ ಅವರದೇ ಪಾರಮ್ಯವನ್ನು ಸಾರುತ್ತವೆ.

ಹೆಚ್ಚೆಂದರೆ ಅವು ಬ್ರಾಹ್ಮಣರ ದೃಷ್ಟಿಕೋನದಲ್ಲಿ ಒಂದು ಪರಿಪೂರ್ಣ ಸಮಾಜದ ಕಲ್ಪನೆ ಹೇಗಿತ್ತು ಎಂಬುದನ್ನು ಹೇಳಬಹುದು ಅಷ್ಟೆ. ಆದರೆ ವಸಾಹತುಶಾಹಿಯ ಅಡಿಯಲ್ಲಿ ಚರಿತ್ರೆ ಬರೆದವರು ಮುಖ್ಯವಾಗಿ ಈ ಧರ್ಮಶಾಸ್ತ್ರಗಳನ್ನೇ ಮಾನದಂಡವಾಗಿ ಸ್ವೀಕರಿಸಿದ್ದು, ಇಡೀ ಸಂಸ್ಕೃತಿಯು ಬ್ರಾಹ್ಮಣರ ನಿಯಂತ್ರಣದಲ್ಲಿತ್ತು ಎಂಬ ಮಿಥ್ಯಾ ಕಲ್ಪನೆ ಬೆಳೆಯಲು ಕಾರಣವಾಯಿತು. ಈ ವರ್ಣಗಳು ಗಾಳಿ, ನೀರು ಸೋಕದಂಥ ಬಿಗಿಯಾದ ಘಟಕಗಳಾಗಿದ್ದವು ಎನ್ನುವುದೂ ಇಂಥದೇ ಮಿಥ್ಯಾ ಕಲ್ಪನೆ. ನಿರಂತರವಾಗಿ ಪರದೇಶೀಯರ ಆಕ್ರಮಣಗಳಿರುತ್ತಿದ್ದು, ಇದರಿಂದ ವರ್ಣಸಾಂಕರ್ಯ ಅನಿವಾರ್ಯವೇ ಆಗಿತ್ತು ಎನ್ನುವುದು ಭಾರತದ ವಾಸ್ತವ ಚರಿತ್ರೆ. ಆದ್ದರಿಂದ 'ವರ್ಣ ಪಾಲನೆ' ಎಂಬುದು ಈ ಸಾಂಕರ್ಯವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಣದಲ್ಲಿಡುವ ಯತ್ನವೇ ಆಗಿತ್ತು. ಆರ್ಯ, ಆರ್ಯಾವರ್ತ ಮತ್ತು ಮ್ಲೇಚ್ಛ ಎಂಬ ಪರಿಕಲ್ಪನೆಗಳು ಕಾಲಕಾಲಕ್ಕೆ ಹೇಗೆ ಬದಲಾವಣೆಗಳನ್ನು ಒಳಗೊಳ್ಳುತ್ತ ಹೋದವು, ಹೇಗೆ ಶಕರು, ಯವನರು, ಹೂಣರು ಮುಂತಾದ ವಿದೇಶೀಯರಿಗೆ ಕ್ಷತ್ರಿಯತ್ವದ ಸ್ಥಾನ ದೊರೆಯಿತು, ಹೇಗೆ ಸ್ಥಳೀಯ ಆರ್ಯೇತರ ಬುಡಕಟ್ಟುಗಳ ಜನರನ್ನು ಈ ವರ್ಣ ಶ್ರೇಣಿಯಲ್ಲಿ ಅಳವಡಿಸ ಲಾಯಿತು ಎಂಬುದನ್ನು ಗಮನಿಸಿದರೆ, ವರ್ಣಗಳ 'ನಿಶ್ಚಲತೆ' ಎನ್ನುವುದು ಸಾಪೇಕ್ಷವಾಗಿದ್ದದ್ದು ಸ್ಪಷ್ಟವಾಗುತ್ತದೆ. ಮಹಾಭಾರತದಲ್ಲಿ ಭಗವದ್ಗೀತೆಯಲ್ಲಿ ಬರುವ 'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ' ಎಂಬ ಮಾತೂ, ಋಗ್ವೇದದ (ಒಂದು ಪ್ರಕ್ಷಿಪ್ತ) ಪುರುಷ ಸೂಕ್ತದಲ್ಲಿ ಬರುವ ವರ್ಣನೆ ಕೂಡ ಶ್ರೇಣೀಕರಣ ಸಂಸ್ಥೆಯಾದದ್ದರ ಸೂಚಕ ವ್ಯಾಖ್ಯಾನಗಳೇ ಹೊರತು ಅವು ಜಾತಿಯ ಹುಟ್ಟಿನ ವಿವರಣೆಗಳೇನಲ್ಲ ಎಂಬುದು ರೋಮಿಲಾ ಥಾಪರ್ ಅಭಿಮತ.

ಈ ಹಿನ್ನೆಲೆಯಲ್ಲಿ ನಾವು ರಾಮಾಯಣ, ಮಹಾಭಾರತಗಳಲ್ಲಿ ಕಂಡುಬರುವ ಪುರಾತನ ಸಮಾಜಗಳ ಜಾತಿಸಂಬಂಧಗಳನ್ನು ಪರಿಶೀಲಿಸಬೇಕು. ಆದರೆ, ಬ್ರಾಹ್ಮಣರ ಧರ್ಮಶಾಸ್ತ್ರಗಳಲ್ಲಿ ಕಾಣುವ ಬ್ರಾಹ್ಮಣ–ಕೇಂದ್ರಿತ ದೃಷ್ಟಿ ಕೋನದಿಂದಲ್ಲ. ವಾಸ್ತವದಲ್ಲಿ ರಾಮಾಯಣ, ಮಹಾಭಾರತಗಳು ಬ್ರಾಹ್ಮಣರ ಪಾರಮ್ಯವನ್ನು ಹೇಳಲು ರಚಿತವಾದವೂ ಅಲ್ಲ. ಅವುಗಳಲ್ಲಿ ಕೇಂದ್ರದಲ್ಲಿರುವುದು ಕ್ಷತ್ರಿಯರ ಅದರಲ್ಲೂ 'ಪ್ರಭುತ್ವ'ವನ್ನು ದಾಟಿ, ಸಾಮ್ರಾಟರಾದ ರಾಜರ ಮನೆತನಗಳ ಜನರ ಜೀವನ ಚರಿತ್ರೆಗಳು. ಹೀಗಾಗಿ ಈ ಕೃತಿಗಳಲ್ಲಿ ಪರಾಮರ್ಶೆಯ ಕೇಂದ್ರವಿರುವುದು ಕ್ಷತ್ರಿಯ ನೆಲೆಯಲ್ಲಿ. ಇವರ ಬದುಕಿನ ಸಾಪೇಕ್ಷ ನೆಲೆಗಳಲ್ಲಿ ಮಾತ್ರ ಬ್ರಾಹ್ಮಣರಾಗಲೀ, ಶೂದ್ರರಾಗಲಿ ಪ್ರಸ್ತಾಪವಾಗುತ್ತಾರೆ. ಅಲ್ಲದೆ 'ವ್ಯಾಸ' ಇಲ್ಲವೇ 'ವಾಲ್ಮೀಕಿ' ಎಂಬ ಋಷಿಗಳ ಬದುಕಿನ ವಿವರಗಳು ಇವರನ್ನು 'ಬ್ರಾಹ್ಮಣ' ಎಂಬ ಸಾಂಪ್ರದಾಯಿಕ ಚೌಕಟ್ಟಿಗೆ ಮೀರಿದ ವ್ಯಕ್ತಿತ್ವಗಳೆಂದು ಪ್ರತಿಪಾದಿಸುವುದು ಗಮನಾರ್ಹ. ಈ ಕವಿಗಳು ತಮ್ಮ ಕೃತಿಗಳಲ್ಲಿ ತೋರಿಸಲು ಯತ್ನಿಸುವುದು ಒಟ್ಟಾರೆ ಮಾನವ ಬದುಕಿನ ಅರ್ಥ, ಮೌಲ್ಯಗಳನ್ನು. ಆದ್ದರಿಂದ ಮುಂದಿನ ಧರ್ಮಶಾಸ್ತ್ರಗಳಿಂದ ನಾವು ಗ್ರಹಿಸಿಕೊಂಡ ಬ್ರಾಹ್ಮಣಕೇಂದ್ರಿತ ಚಿಂತನೆಯನ್ನು ಬಳಸಿ, ಈ ಪ್ರಾಚೀನ ಕಾವ್ಯಸಂದರ್ಭಗಳನ್ನು ಅರ್ಥೈಸಿಕೊಳ್ಳುವುದರ ಸಿಂಧುತ್ವವನ್ನು ಚಿಂತಿಸುವ ಅಗತ್ಯವಿದೆ.

ರಾಮಾಯಣದಲ್ಲಿ ಒಬ್ಬ ಆದರ್ಶ ಮಾನವನ, ಆದರ್ಶ ರಾಜನ ಕೌಟುಂಬಿಕ ಮತ್ತು ರಾಜಕೀಯ ಬದುಕುಗಳಲ್ಲಿ ಯಾವುದೇ ತಾತ್ವಿಕ ಬಿರುಕು ಇರಲಿಲ್ಲ ಎಂಬುದರ ದಟ್ಟ ಚಿತ್ರಣವಿದ್ದರೆ, ಮಹಾಭಾರತ ಇಂಥ ಸಮಗ್ರತೆಯೇ ಸಾಧ್ಯವಾಗದಂಥ ಅನೇಕ ನಾಯಕ ವ್ಯಕ್ತಿತ್ವಗಳ ವಿಚ್ಛಿದ್ರಗೊಂಡ ವ್ಯಕ್ತಿತ್ವಗಳ ವಾಸ್ತವ ರೂಪಗಳನ್ನು ದರ್ಶನ ಮಾಡಿಸುತ್ತದೆ. ಈ ಕಾವ್ಯಗಳ ಬಿಡಿ ಬಿಡಿ ಸಂದರ್ಭಗಳಲ್ಲಿನ ವಿವಿಧ ಪಾತ್ರಗಳು ಅಂದಿನ ಸಾಮಾಜಿಕ ಶ್ರೇಣಿಗಳನ್ನು ಪ್ರತಿನಿಧಿಸುವುದು ನಿಜ. ಹೀಗೆ ನಾಲ್ಕೂ ವರ್ಣಗಳ ಜನರೂ ಇಲ್ಲಿದ್ದಾರೆ. ಅವರೆಲ್ಲರ ಬದುಕುಗಳನ್ನು ಒಂದು ನಿರ್ದಿಷ್ಟ ಧಾರ್ಮಿಕ ಚೌಕಟ್ಟು ನಿಯಂತ್ರಿಸುತ್ತದೆ. ಈ ಚೌಕಟ್ಟು ಭಗವದ್ಗೀತೆಯಲ್ಲಿ 'ಸ್ವಧರ್ಮ' ಎಂಬ ಸ್ಪಷ್ಟ ಪರಿಕಲ್ಪನೆಯಾಗಿ ಬಿತ್ತರಗೊಳ್ಳುತ್ತದೆ. ರಾಮಾಯಣ ಇಲ್ಲವೆ ಮಹಾಭಾರತದ ಜಾತಿ–ಸಂಬಂಧಿತ ಜಿಜ್ಞಾಸೆಯಿರುವ ಸಂದರ್ಭಗಳನ್ನು ಗಮನಿಸುವ ಮೊದಲು ಈ 'ಸ್ವಧರ್ಮ'ದ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳುವುದು ಅವಶ್ಯಕ.

ಜಾತಿ ವ್ಯವಸ್ಥೆ ಬಲವಾದ ಸಾಂಸ್ಥಿಕ ರಚನೆಯನ್ನು ತಳೆದ ಮೇಲೆ ಅದು ಎಂದೂ ನಾಶವಾಗಲಾಗದ ರೀತಿ ಬಲವಾಯಿತು. ಪ್ರತಿಯೊಂದು ಜಾತಿ, ಉಪಜಾತಿ ತನ್ನಷ್ಟಕ್ಕೆ ಒಂದು ಸ್ವತಂತ್ರ ಸಾಮಾಜಿಕ ಘಟಕವಾಗಿ, ತನ್ನ ಉಳಿವಿಗಾಗಿ ತನ್ನದೇ ಆದ ಕಾನೂನುಗಳನ್ನು ರೂಪಿಸಿಕೊಂಡಿರುತ್ತಿತ್ತು. ತಮ್ಮ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸವಲತ್ತಿನ ನೆಲೆಯಿಂದ ಅದನ್ನು ಉಳಿಸಿಕೊಳ್ಳುವಂಥ ನಿಯಮಗಳನ್ನು ಬ್ರಾಹ್ಮಣರು ರೂಪಿಸಿದರಾದರೂ, ಯಾವ ಕಾಲದಲ್ಲೂ ಇಡೀ ಸಮಾಜದ ಎಲ್ಲಾ ಗುಂಪುಗಳೂ ಈ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸುತ್ತಿದ್ದವೆಂದೇನೂ ಇಲ್ಲ. ಜಾತಿ, ಉಪಜಾತಿಗಳು ಆರ್ಥಿಕ ಮುಂತಾದ ಸವಲತ್ತುಗಳಿಂದ ತಮ್ಮ ಸ್ಥಾನ ಮಾನಗಳನ್ನು ಉತ್ತಮಪಡಿಸಿಕೊಳ್ಳಲು ಯತ್ನಿಸುತ್ತಲೇ ಇರುತ್ತಿದ್ದವು. ಆದರೆ ವ್ಯಕ್ತಿಗಳಿಗೆ ಬಿಡಿ ಬಿಡಿಯಾಗಿ ಹೀಗೆ ಸಾಮಾಜಿಕ ಶ್ರೇಣಿಯಲ್ಲಿ ಮೇಲೇರುವ ಹಕ್ಕು ಇರಲಿಲ್ಲ. ಒಮ್ಮೆ ಒಂದು ಜಾತಿಯಲ್ಲಿ ಹುಟ್ಟಿದ ಮೇಲೆ ವ್ಯಕ್ತಿಯೊಬ್ಬನು ಮೇಲಕ್ಕೆ ಏರಬಹುದಾದ ಸಾಧ್ಯತೆಯನ್ನು ಪೂರ್ತಿಯಾಗಿ ಹತ್ತಿಕ್ಕಲಾಯಿತು. ಈ ರೀತಿ ವ್ಯಕ್ತಿಯ ಹಕ್ಕು, ಸ್ವಾತಂತ್ರ್ಯಗಳನ್ನು ಹತ್ತಿಕ್ಕಲು ಬಳಕೆಯಾದ ತಾತ್ವಿಕ ಪರಿಕಲ್ಪನೆ 'ಸ್ವಧರ್ಮ'. ('ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂಬ ಭಗವದ್ಗೀತೆಯ ಪ್ರಸಿದ್ಧ ಉಪದೇಶ ಇದನ್ನು ಖಚಿತಪಡಿಸಬಲ್ಲದು.) ಸ್ವಧರ್ಮದ ಪಾಲನೆ ಎಂದರೆ ವ್ಯಕ್ತಿ ತಾನು ಹುಟ್ಟಿರುವ ಜಾತಿಯ

ಆಧಾರದಿಂದ ಸಮಾಜ ಆ ಜಾತಿಗೆ ನೀಡಿರುವ ಸ್ಥಾನವನ್ನೂ, ಪಾತ್ರವನ್ನೂ ಒಪ್ಪಿ, ಅದಕ್ಕೆ ಅನುಗುಣವಾಗಿ ವಿಧಿಸಲಾದ ನಡಾವಳಿ, ಕರ್ತವ್ಯ, ಜವಾಬ್ದಾರಿಗಳನ್ನು ಅರಿತು ಆಚರಿಸುವುದು. ಈ ಆಚರಣೆ ಇತರರ ಸ್ವಧರ್ಮಗಳ ಅರಿವನ್ನೂ ಹೊಂದಿರಬೇಕಷ್ಟೆ.

ಮಹಾಭಾರತದಲ್ಲಿ ಜಾತಿ ವ್ಯವಸ್ಥೆ ಹೀಗೆ ಶ್ರೇಣೀಕೃತ ಸಂಸ್ಥೆಯಾಗುವುದಕ್ಕೆ ಮೊದಲಿನ ಸಾಮಾಜಿಕ, ಕೌಟುಂಬಿಕ ಸಂಬಂಧಗಳು ಹೆಚ್ಚು ಉದಾರವಾಗಿದ್ದಂತೆ ಕಾಣುತ್ತದೆ. ಗಂಗೆ–ಶಂತನು, ಪರಾಶರ–ಸತ್ಯವತಿ, ಸತ್ಯವತಿ–ಶಂತನು, ವ್ಯಾಸ–ಅಂಬಿಕೆ, ಅಂಬಾಲಿಕೆ, ಪಾಂಡು–ಕುಂತಿ, ಪಾಂಡವರು ಮುಂತಾದವರ ಬದುಕಿನ ವಿವರಗಳಲ್ಲಿ ಕುಲ, ಜಾತಿಗಳ ಗ್ರಹಿಕೆ ಗಂಡಿನ ಉಚ್ಚ ಸ್ಥಾನದ ಮೂಲಕ ಗೃಹೀತವಾಗುವ ಅನುಲೋಮ ವ್ಯವಸ್ಥೆಯ ಸ್ಪಷ್ಟ ನಿದರ್ಶನ ನೀಡುತ್ತದೆ. ಉಚ್ಚ ಜಾತಿಯ ಗಂಡು ಮತ್ತು ಕೆಳ ಜಾತಿಯ ಹೆಣ್ಣಿನ ಸಂತಾನಗಳಿಗೆ ದೊರೆತ 'ಕುಲೀನತೆ', ಆಸ್ತಿಯ ಉತ್ತರಾಧಿಕಾರತ್ವ ಇವೆಲ್ಲ ಮೇಲಿನಿಂದ ಕೆಳಕ್ಕೆ ವರ್ಣ ವ್ಯವಸ್ಥೆಯಲ್ಲಿದ್ದ ಚಲನಶೀಲತೆಯನ್ನು ಸ್ಪಷ್ಟಪಡಿಸುತ್ತವೆ. ಆದರೆ ಪಿತೃತ್ವ/ಕ್ಷೇತ್ರ ಸಿದ್ಧವಾಗಿರದ ಕಾನೀನ ಪುತ್ರ ಕರ್ಣನಿಗಾಗಲಿ, ದಾಸಿಯಾಗಿ ಅಸ್ವತಂತ್ರಳಾಗಿದ್ದ ತಾಯಿಗೆ ವ್ಯಾಸನಂಥ ಮಹರ್ಷಿಯಿಂದ ಹುಟ್ಟಿದ ವಿದುರನಿಗಾಗಲಿ ಕುಲೀನತೆ, ರಾಜತ್ವ, ಆಸ್ತಿ ಹಕ್ಕುಗಳಾವುವೂ ಎಂದಿಗೂ ಸಾಧ್ಯವಾಗುವುದಿಲ್ಲ. ಬದಲಾಗಿ ತಮ್ಮ 'ಸ್ವಧರ್ಮ'ದ ನಿರೀಕ್ಷಿತ ನೆಲೆಯಿಂದ ನಿರಂತರವಾಗಿ ಮೇಲೇರಲು ಯತ್ನಿಸಿದ್ದೇ ಕರ್ಣ ಮತ್ತು ಏಕಲವ್ಯರಂಥವರ ದುರಂತಗಳ ಮೂಲವಾಗುತ್ತದೆ. ಈ ಸ್ಥಿತಿ ಸ್ಪಷ್ಟವಾಗಿ ಜಾತಿಯು ಸಂಸ್ಥೆಯಾದದ್ದರ ಕುರುಹು.

ಮಹಾಭಾರತದಲ್ಲಿ ದ್ರೋಣನು ಕರ್ಣ, ಏಕಲವ್ಯರಂಥ ಕೆಳವರ್ಣದವರ ಬದುಕುಗಳನ್ನು ಅವರ ಪ್ರಗತಿಯ ಸಾಧ್ಯತೆಗಳನ್ನು ನಿಗ್ರಹಿಸಲು ಸಾಧನವಾಗಿದ್ದಾನಾದರೂ, ಅವನ ಈ ಕ್ರಿಯೆ ಬ್ರಾಹ್ಮಣತ್ವವನ್ನು ಕಾಪಾಡುವ ಮಡಿವಂತಿಕೆಯ ನೆಲೆಯದಾಗಿರದೆ, ತನಗೆ ಆಶ್ರಯ ಕೊಟ್ಟಿರುವ ಕ್ಷತ್ರಿಯರ ಹಿತಾಸಕ್ತಿಯನ್ನು ರಕ್ಷಿಸುವ ಮೂಲಕ ತನ್ನ ವೈಯಕ್ತಿಕ ಹಿತಾಸಕ್ತಿಯನ್ನು ಸಾಧಿಸುವಂಥದು ಎಂಬುದನ್ನು ಗಮನಿಸಬೇಕು. ಅಲ್ಲದೆ ದ್ರೋಣನು ಒಬ್ಬ ವ್ಯಕ್ತಿಯಾಗಿ ಸಾಂಪ್ರದಾಯಿಕ ಬ್ರಾಹ್ಮಣತ್ವದ ಮಾದರಿಯೂ ಅಲ್ಲ. ಅವನು ಶಿಕ್ಷಣದಲ್ಲಿ ತಜ್ಞತೆ ಪಡೆದದ್ದು ಕ್ಷತ್ರಿಯರಿಗೆ ಅವಶ್ಯಕವಾಗಿದ್ದ ಶಸ್ತ್ರಾಸ್ತ್ರ ವಿದ್ಯೆಯಲ್ಲಿ. ಸಹಜವಾಗಿ ಅವನ ಉದ್ಯೋಗದ ನೆಲೆ ಯಾವುದೋ ಒಂದು ಆಶ್ರಮದಲ್ಲಿ ಕುಲಪತಿಯಾಗಿ ವೇದಾಭ್ಯಾಸ ಮಾಡಿಸುವ ರೀತಿಯದಾಗಲು ಸಾಧ್ಯವೇ ಇಲ್ಲ. ನಗರಗಳಲ್ಲಿ, ರಾಜರ ಆಡಳಿತ ಕೇಂದ್ರಗಳಲ್ಲಿ ಕ್ಷತ್ರಿಯ ರಾಜ ಪುತ್ರರಿಗೆ ತನ್ನ ಕಲಿಕೆಯನ್ನು ಧಾರೆ ಎರೆದು ಅದಕ್ಕೆ ಪ್ರತಿಯಾಗಿ ಅವರಿಂದ ಸಂಪತ್ತು, ಸ್ಥಾನ, ಮಾನ, ಘನತೆ, ಅಧಿಕಾರ ಪಡೆವ ಲೌಕಿಕ ದೃಷ್ಟಿ ಅವನದು. ಈ ಆಕಾಂಕ್ಷೆಗೆ ಸಹಪಾಠಿ ಕ್ಷತ್ರಿಯ ಅರಸ ದ್ರುಪದ ಬೆಲೆ ಕೊಡದಿದ್ದುದರ ಪ್ರತಿಫಲವೆಂದರೆ ತನ್ನ ಶಿಷ್ಯರಿಂದ ಅವನನ್ನು ಸೆರೆ ಹಿಡಿಸಿ, ಅವನ ಅರ್ಧರಾಜ್ಯ ಕಸಿದುಕೊಳ್ಳುವುದಕ್ಕೆ ದ್ರೋಣ ಹಿಂಜರಿಯುವುದಿಲ್ಲ. ಅದೇ ಆಕಾಂಕ್ಷೆಗೆ ಪೋಷಣೆ ದೊರೆತದ್ದು ಕುರುವಂಶದ ಹಿರಿಯ ಭೀಷ್ಮನಿಂದ. ಆದ್ದರಿಂದ ಭೀಷ್ಮನಿರುವವರೆಗೂ ದ್ರೋಣ ಅವನಿಗೆ ವಿರುದ್ಧವಾಗಿ ನುಡಿಯುವುದಿಲ್ಲ, ಅವನನ್ನು ಉಲ್ಲಂಘಿಸುವುದಿಲ್ಲ. ಉತ್ತರ ಪಾಂಚಾಲದ ಭೂಭಾಗವನ್ನು ದ್ರುಪದನಿಂದ ಕಸಿದುಕೊಂಡರೂ, ಇವನೇನೂ ಅಲ್ಲಿ ಹೋಗಿ ಆಳುವುದಿಲ್ಲ. ಬದಲಾಗಿ ಹಸ್ತಿನಾವತಿಯಲ್ಲೇ ಕೌರವರ ಆಶ್ರಿತನಾಗೇ ತನ್ನ ಸ್ಥಾನ ಕಾಯ್ದುಕೊಳ್ಳುತ್ತಾನೆ. (ಆ ಭೂಮಿಯ ಸಂಬಂಧವಾಗಿ ದ್ರೋಣನ ಸಂಬಂಧ ಹೇಗಿತ್ತೆಂಬ ಬಗ್ಗೆ ವಿವರಗಳು ಇಲ್ಲ).

ಕೌರವ ರಾಜಪುತ್ರರಲ್ಲಿ ದುರ್ಯೋಧನಾದಿಗಳಿಗಿಂತ, ಪಾಂಡವರಲ್ಲಿ ಅದರಲ್ಲೂ ಅರ್ಜುನನಲ್ಲಿ ಇವನ ವಾತ್ಸಲ್ಯ ಹೆಚ್ಚು. ಈ ಅರ್ಜುನ ಆ ಯುಗದ ಮಹಾವೀರನಾಗಬೇಕು, ಶ್ರೇಷ್ಠನೂ, ಅಜೇಯನೂ ಆಗಬೇಕು ಎಂಬ ಮಹದಾಕಾಂಕ್ಷೆ ಹೊಂದಿದ್ದು, ಆ ಆಕಾಂಕ್ಷೆಯನ್ನು ಸಾಧ್ಯವಾಗಿಸಲು ದ್ರೋಣ ತನ್ನ ಗುರು ಸ್ಥಾನವನ್ನೂ, ಬ್ರಾಹ್ಮಣತ್ವದ ಮೇಲಧಿಕಾರತ್ವ ಗುಣವನ್ನೂ ಬಳಸಿಕೊಳ್ಳುತ್ತಾನೆ. ಕುರುವಂಶದ ರಾಜ ಪುತ್ರರಲ್ಲೆಲ್ಲಾ ಅರ್ಜುನನೇ ಏಕ ಮಾತ್ರ ವೀರ ಎಂಬ ಘೋಷಣೆ ಮಾಡುವ ಹೊತ್ತಿನಲ್ಲೇ ಕರ್ಣ ಕೂಡ ಆ ಎಲ್ಲ ಕೌಶಲ, ಸಾಮರ್ಥ್ಯ ಪ್ರದರ್ಶಿಸುತ್ತಾನೆ. ಗೆದ್ದ ವೀರನನ್ನು ಗೆಲ್ಲಲು ದ್ವಂದ್ವಕ್ಕೂ ಸಿದ್ಧನಿರುತ್ತಾನೆ. ಆದರೆ ತನ್ನ ಶಿಷ್ಯನ ಹಿತರಕ್ಷಣೆಗಾಗಿ ದ್ರೋಣ, ಕರ್ಣನ ಕುಲದ ಬಗ್ಗೆ ಪ್ರಶ್ನಿಸಿ, ಸೂತನಿಗೆ ಕ್ಷತ್ರಿಯನೊಂದಿಗೆ ದ್ವಂದ್ವ ಯುದ್ಧ ಮಾಡಲು ಅಧಿಕಾರವಿಲ್ಲವೆಂದು ಸಾರಿ, ಅದನ್ನು ತಪ್ಪಿಸುತ್ತಾನೆ.

ಏಕಲವ್ಯನ ಸಂದರ್ಭದಲ್ಲೂ ಕುಲವಿದ್ಯೆಯಾದ ಬಿಲ್ಲುಗಾರಿಕೆಯಲ್ಲಿ ಬೇಡರ ತರುಣನೊಬ್ಬ ಸತತ ಪರಿಶ್ರಮದಿಂದ ಅಪರಿಮಿತ ಕೌಶಲವನ್ನು ಸಾಧಿಸಿದ್ದು, ಅರ್ಜುನನ ಶೌರ್ಯಕ್ಕೆ ಮಾತ್ರವಲ್ಲ ಮುಂದೆ ಅವನು ಅರಸನಾದಾಗ ಅವನ ಸ್ಥಾನಕ್ಕೂ ಅಭದ್ರತೆಯ ಸಾಧ್ಯತೆಯನ್ನು ಸೂಚಿಸಿತ್ತು. ಆದಕಾರಣ ಆಳರಸರ ಭವಿಷ್ಯ ರಕ್ಷಣೆಗಾಗಿ ತನ್ನನ್ನು ಭಾವನಾತ್ಮಕವಾಗಿ ಗುರುವೆಂದು ಹೇಳಿಕೊಂಡ ಏಕಲವ್ಯನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯ ನೆಪದಿಂದ ಕತ್ತರಿಸಿ ಕೊಡುವಂತೆ ಮಾಡಿ, ಅವನ ಬಿಲ್ಲುಗಾರಿಕೆಯ ಶಕ್ತಿಯನ್ನು ಶಾಶ್ವತವಾಗಿ ಕುಂಠಿತಗೊಳಿಸುವಲ್ಲಿ ದ್ರೋಣ ಹಿಂದೆಗೆಯಲಾರ. ಭಗವದ್ಗೀತೆ ಹೇಳುವಂಥ ಸ್ಥಿತಪ್ರಜ್ಞನ ಲಕ್ಷಣ ಹಾಗಿರಲಿ, ಕಣ್ವನಂಥ ಋಷಿಯಲ್ಲಿ ಕಾಣುವ ಕಾರುಣ್ಯ, ಅನುಕಂಪ, ಮಾನವೀಯತೆಯ ಯಾವ ಆರ್ದ್ರತೆಯೂ ಇಲ್ಲದ ಅತ್ಯಂತ ರಿಕ್ತಮನದ, ರಾಜಸ ಸ್ವಭಾವದ ವ್ಯಕ್ತಿಯಾಗಿ ದ್ರೋಣ ಕಂಡುಬರುತ್ತಾನೆ. ಮಹಾಭಾರತ ಈತನ ಬದುಕಿನ ಸಂದರ್ಭಗಳನ್ನು ಆಳರಸರಾದ ಕ್ಷತ್ರಿಯರ ಬದುಕಿನ ಸಂಬಂಧವಾಗಿ, ಸಾಪೇಕ್ಷವಾಗಿ ಮಾತ್ರ ಚಿತ್ರಿಸುತ್ತದೆಯೇ ಹೊರತು ಒಬ್ಬ ಬ್ರಾಹ್ಮಣ ಗುರುವಾಗಿ ತನ್ನ ಕುಟುಂಬ, ಬಾಂಧವರು ಅಥವಾ ಸಮುದಾಯಗಳಲ್ಲಿ ಇವನ ನೆಲೆ ಏನಿತ್ತು ಎಂಬುದು ಅಲ್ಲಿ ತೀರಾ ಗೌಣ. ಅಂದರೆ ಬ್ರಾಹ್ಮಣಿಕೆಯ ಪಾರಮ್ಯಕ್ಕೆ ಈತ ಪ್ರತೀಕವಾಗಲಾರ, ಬದಲಾಗಿ ಮಹತ್ವಾಕಾಂಕ್ಷೆ, ಅಧಿಕಾರಾಸಕ್ತಿಯುಳ್ಳ ಬೌದ್ಧಿಕ ಜ್ಞಾನವನ್ನು ಅದಕ್ಕಾಗಿ ದುಡಿಸಿಕೊಳ್ಳಬಲ್ಲ ವ್ಯಕ್ತಿಯಷ್ಟೇ ಆಗಿದ್ದಾನೆ.

ಮಗನಾದ ಅಶ್ವತ್ಥಾಮನದಲ್ಲಿ ಇವನಿಗೆ 'ದೌರ್ಬಲ್ಯ' ಎನ್ನಬಹುದಾದಷ್ಟು ಪ್ರೀತಿ ಇತ್ತು ಎಂಬ ಸೂಚನೆ ಮಹಾಭಾರತದಲ್ಲಿದೆ. ಆದರೆ ಅಲ್ಲಿಯೂ ಸಾರ್ಥಕವಾದ ಪಿತಾ–ಪುತ್ರ ಸಂಬಂಧವೇನೂ ಸ್ಥಾಪಿತವಾಗುವುದಿಲ್ಲ. 'ಅಶ್ವತ್ಥಾಮೋ ಹತಃ ಕುಂಜರೋವಾ' ಎಂದ ಯುಧಿಷ್ಠಿರನ ಮಾತಿನ ಮೊದಲರ್ಧವಷ್ಟೇ ಕೇಳಿದಾಗ ಕ್ರೋಧವುಕ್ಕಿ ಇವನು ಹೋರಾಟ ಮಾಡುತ್ತಲೇ ಇರುತ್ತಾನೆ. ಧೃಷ್ಟದ್ಯುಮ್ನ ಆಗ ಇವನ ರಥಕ್ಕೆ ಹಾರಿ ಬಂದು ಇವನನ್ನು ಕೊಲ್ಲುತ್ತಾನೆ. ಮಗನು ಸತ್ತ ಸುದ್ದಿ ಕೇಳಿ ದುಃಖಿತನಾಗಿ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ದುರಂತದ ಸಾವನ್ನಪ್ಪಿದ ಎನ್ನುವ ಕಲ್ಪನೆ ಬಹುಶಃ ಭಟ್ಟ ನಾರಾಯಣನ 'ವೇಣೀ ಸಂಹಾರ'ದ ಮೂಲಕ ಪ್ರಚಾರಕ್ಕೆ ಬಂದಿದ್ದೀತು. ದ್ರೋಣನ ಮಗ ಅಶ್ವತ್ಥಾಮ ತಂದೆಯದೇ ಗರಡಿಯಲ್ಲಿ ಶಸ್ತ್ರವಿದ್ಯಾ ನಿಪುಣನಾದರೂ ಕ್ಷತ್ರಿಯರನ್ನು ಮೀರಿಸುವ ವೀರನೆನಿಸಿದರೂ ಇತ್ತ ಕ್ಷಾತ್ರ ಅಧಿಕಾರ, ರಾಜ್ಯ ಸಂಪತ್ತುಗಳೂ ದಕ್ಕದ, ಅತ್ತ ಬ್ರಾಹ್ಮಣ ಸಹಜ ಘನತೆಯ ಶಾಂತವಾದ ಬದುಕಿನ ಸಾಧ್ಯತೆಯೂ ಇಲ್ಲದ ಎಡಬಿಡಂಗಿಯಾಗುತ್ತಾನೆ. ಇರಾವತಿ ಕರ್ವೆಯವರ ಮಾತಿನಲ್ಲಿ ಹೇಳುವುದಾದರೆ 'ಪರಧರ್ಮೋ ಭಯಾವಹಃ' ಎಂಬ ಮಾತಿಗೆ ಇವನೇ ಸ್ಪಷ್ಟ ನಿದರ್ಶನ!

ಮಹಾಭಾರತದ ಕರ್ಣ ಕೂಡ ಹೀಗೆ ತನ್ನ ನಿಜವಾದ ನೆಲೆ ತಪ್ಪಿ ಹೋದ ವ್ಯಕ್ತಿಯಾಗಿದ್ದಾನೆ. ಅವನ ತಾಯಿಯ ಒಂದು ಕ್ರಿಯೆಗೆ ಕೊಂಡಿಯಾಗಿ ಸೇರಿಕೊಳ್ಳುವ 'ಸೂತಪುತ್ರ'ನ ಸ್ಥಾನದಿಂದ ಮೇಲೇರಲು, ತನ್ನ ವ್ಯಕ್ತಿತ್ವ, ಪರಾಕ್ರಮದಿಂದ ಕ್ಷತ್ರಿಯರ ಸಮಾನ ಮಾನ್ಯತೆ ಗಳಿಸಲು ಅವನು ಮಾಡುವ ಎಲ್ಲ ಯತ್ನಗಳೂ ಬ್ರಾಹ್ಮಣ–ಕ್ಷತ್ರಿಯರ ಮೂಲಕ ಸೋಲುತ್ತವೆ. ದ್ರೋಣ ಇವನಿಗೆ ಅರ್ಜುನನೊಂದಿಗೆ ದ್ವಂದ್ವಯುದ್ಧಕ್ಕೆ ಅವಕಾಶ ಕೊಡದಿರಲು ಇವನು ಅಧಿರಥನ ಮಗನೆಂಬುದು ಕಾರಣ. ಬ್ರಾಹ್ಮಣ ಪರಶುರಾಮನಿಗೆ ಇವನಿಗೆ ಕಲಿಸಿದ್ದ ವಿದ್ಯೆ ವ್ಯರ್ಥವಾಗುವಂತೆ ಶಪಿಸಲು ಇವನು ಕ್ಷತ್ರಿಯನಲ್ಲ ಎಂದು ಸುಳ್ಳು ಹೇಳಿದನೆಂಬುದು ಕಾರಣ. ದ್ರೌಪದಿಗೆ ಇವನು ಪಣ ಗೆಲ್ಲುವುದನ್ನು ನಿರಾಕರಿಸಲು ಇವನು ಸೂತನೆಂಬುದೇ ಕಾರಣ. ಹೀಗೆ ಕ್ಷತ್ರಿಯ ಸ್ತ್ರೀಯಲ್ಲಿ ನಿಯೋಗದಿಂದ ಹುಟ್ಟಿದ ಮಕ್ಕಳಾದರೂ ಪಾಂಡುವಿನಂಥ ತಂದೆಯನ್ನು ಪಡೆದದ್ದರಿಂದ ಪಾಂಡವರಿಗೆ ಲಭ್ಯವಾದ ಕ್ಷತ್ರಿಯತ್ವದ ಅಂಕಿತ ಕರ್ಣನಿಗೆ ಇಲ್ಲವಾಗುತ್ತದೆ. ಇದು ಅವನ ಬದುಕಿನಲ್ಲಿ ಮೇಲೇರುವ ಎಲ್ಲ ಸಾಧ್ಯತೆಗಳನ್ನು ಮೊಟಕುಗೊಳಿಸುವ ಸಾಮಾಜಿಕ ನ್ಯಾಯವಾಗುತ್ತದೆ. ದುರ್ಯೋಧನ ಇವನಿಗೆ ರಾಜ್ಯ ಕೊಟ್ಟು, ಸ್ನೇಹ ತೋರಿ, ಗೌರವ ನೀಡಿದರೂ ಕ್ಷತ್ರಿಯ ಕನ್ಯೆಯೊಬ್ಬಳನ್ನು ಕೊಡಲಿಲ್ಲ ಅಥವಾ ಅಂಥ ಸಾಧ್ಯತೆ ಅಲ್ಲಿ ಸೃಷ್ಟಿಯಾಗುವುದಿಲ್ಲ. ಕರ್ಣ ಸೂತ ಕುಲದಲ್ಲೇ ಮದುವೆಯಾಗಬೇಕಾಯಿತು. ಕೌರವೇಂದ್ರನ ಸಾಮ್ರಾಜ್ಯದಲ್ಲಿ ಇವನು ಒಬ್ಬ ಸಾಮಂತ ರಾಜನಷ್ಟೇ ಆಗಿ ಉಳಿದ. ಈ ಅವಹೀನತೆ ಅವನ ವ್ಯಕ್ತಿತ್ವದಲ್ಲೂ ಬಿಂಬಿಸುತ್ತದೆ. ಅನೇಕ ಯುದ್ಧಗಳಲ್ಲಿ ಸೋಲೊಪ್ಪುವ, ಪಲಾಯನ ಮಾಡುವ ವ್ಯಕ್ತಿಯಾಗಿ, ದುರ್ಯೋಧನನ ಎಲ್ಲ ನೀಚ ಕೃತ್ಯಗಳಲ್ಲಿ ಸಹಭಾಗಿಯಾಗಿ, ಯಾವುದೇ ಉದಾತ್ತ ಭಾವನೆಗೆ ಅವಕಾಶವಿಲ್ಲದ ವ್ಯಕ್ತಿಯಂತೆ ಮಹಾಭಾರತದ ಕರ್ಣನಿದ್ದಾನೆ. ಅವನ ವ್ಯಕ್ತಿತ್ವದ ಒಂದು ಮಹತ್ವದ ಘನತೆಯು ಪ್ರಕಟವಾಗುವುದು ಕೃಷ್ಣ–ಕುಂತಿಯರ ಪ್ರಲೋಭನೆಗೆ ಮಣಿಯದೆ ಉಳಿದ ಸಂದರ್ಭದಲ್ಲಿ ಮಾತ್ರ. ಈ ಕರ್ಣನ 'ಸ್ವಧರ್ಮ' ಯಾವುದು? ಹುಟ್ಟಿಗೆ ಅನುಗುಣವಾಗಿದ್ದ ಕ್ಷಾತ್ರವೆ? ಅಥವಾ ಪರಿಸ್ಥಿತಿಯ ಅನಿವಾರ್ಯತೆಯಿಂದ ದೊರೆತ 'ಸೂತತ್ವ'ವೇ? ಎರಡಕ್ಕೂ ಸಲ್ಲಲಾಗದಂಥ ಇಬ್ಬಂದಿತನ, ಒಳತೋಟಗಳನ್ನು ಆತನಲ್ಲೂ ಕಾಣಬಹುದು. ಆದರೆ ದ್ರೋಣರಂಥ ಸ್ವಹಿತಾಸಕ್ತರ ಮತ್ತು ಕ್ಷತ್ರಿಯ ಹಿತಾಸಕ್ತಿಗಳೆದುರು ಇವನ ತನ್ನತನವೆನ್ನುವುದು ಸಮಗ್ರವಾಗಿ ಬೆಳೆಯಲಾಗದೆ ಮೊಟಕಾಯಿತೆಂಬ ಕ್ರೂರ ಸತ್ಯವನ್ನು ಕರ್ಣನ ಚರಿತ್ರೆ ದಾಖಲಿಸುತ್ತದೆ.

ಧರ್ಮಶಾಸ್ತ್ರಕಾರರು ಮಾಡಿದ ನಿಯಮಗಳಲ್ಲಿ ಜಾತಿ ಶ್ರೇಣಿಯಲ್ಲಿ ಕೆಳಕ್ಕೆ ಹೋದಂತೆಲ್ಲ ಅವುಗಳ ಹಕ್ಕು ಸವಲತ್ತುಗಳು ಕಡಿಮೆಯಾದವು. ಜಾತಿ ಮೂಲದ ಈ ಧರ್ಮ ಕಲ್ಪನೆಯನ್ನು ಮನುಷ್ಯರ ಎಲ್ಲಾ ಚಟುವಟಿಕೆಗಳಿಗೂ ವಿಸ್ತರಿಸಲಾಯಿತು. ವ್ಯಕ್ತಿಯ ಸರಿ–ತಪ್ಪುಗಳನ್ನು ನಿರ್ಧರಿಸುವಾಗ ಅವನ ಅಪರಾಧದ ಜೊತೆಗೆ ಅವನು ಹುಟ್ಟಿದ ಜಾತಿಯ ನೆಲೆಯೂ ಒಂದು ಮಾನದಂಡವಾಯಿತು. ಹೀಗಾದ್ದರಿಂದ ನ್ಯಾಯದ ಎದುರಿನಲ್ಲಿ ಎಲ್ಲರೂ ಸಮಾನರು ಎಂಬ ಪರಿಕಲ್ಪನೆ ಈ ನೆಲದಲ್ಲಿ ಬೆಳೆಯಲೇ ಇಲ್ಲ. ಸವಲತ್ತು, ಹಕ್ಕುಗಳೆಲ್ಲ ಮೇಲು ಜಾತಿಗಳಿಗೆ ಸಂದವು. ಕೆಳ ಜಾತಿಗಳಿಗೆ ಬಾಧ್ಯತೆಗಳು, ಜವಾಬ್ದಾರಿ, ಕರ್ತವ್ಯಗಳಷ್ಟೇ ಉಳಿದವು. ಕನಿಷ್ಠ ಪಕ್ಷ ಸಿದ್ಧಾಂತಗಳು ಹೀಗೆ ಸೂಚಿಸುತ್ತವೆ. ಆಚರಣೆಗಳಲ್ಲಿ ಅಪವಾದಗಳು ಯಾವಾಗಲೂ ಸಾಧ್ಯ.

ಈ ಸಾಂಸ್ಥಿಕ ಸಂರಚನೆಗೆ ಮುನ್ನ ಮೇಲಿನ ನೆಲೆಗೇರಲು ಹೋರಾಡಿ ಗೆದ್ದ ಋಷಿವೀರರ ಕಥೆಗಳನ್ನು ರಾಮಾಯಣದಲ್ಲಿ ವಿಶೇಷವಾಗಿ ಕಾಣಬಹುದು. ವ್ಯಾಧನೋ, ದರೋಡೆಕೋರನೋ ತಪಸ್ಸು ಮಾಡಿ ಜ್ಞಾನಿಯಾಗಿ ಮಹರ್ಷಿಯಾಗಿ ಕಾವ್ಯ ಬರೆದ ಎಂಬ ವಾಲ್ಮೀಕಿಯ ಕಥೆ; ಕ್ಷತ್ರಿಯ ಕೌಶಿಕ, ಅನೇಕ ಬಗೆಯ ಅಡ್ಡಿಗಳನ್ನು ದೇವತೆಗಳು ಒಡ್ಡಿದರೂ, ಅದನ್ನೆಲ್ಲ ಜಯಿಸಿ ತಪಸ್ಸು ಮಾಡಿ ಬ್ರಹ್ಮರ್ಷಿ ವಿಶ್ವಾಮಿತ್ರನಾದ ಕಥೆಗಳು ಈ ಚಲನೆಯ ಸಾಧ್ಯತೆಗೆ ಸೂಚಕವಾಗಿವೆ. ಅಲ್ಲಿ ಅನೇಕ ಸಂದರ್ಭಗಳಲ್ಲಿ ಧಾರ್ಮಿಕ ಅಧಿಕಾರಕ್ಕಾಗಿ ಬ್ರಾಹ್ಮಣ–ಕ್ಷತ್ರಿಯರ ನಡುವೆ ಹಲವು ತಲೆಮಾರುಗಳು ಸಂಘರ್ಷ ಮುಂದುವರೆದ ಪ್ರಸಂಗಗಳೂ ದಾಖಲಾಗಿವೆ. ಕಾರ್ತವೀರ್ಯ–ಜಮದಗ್ನಿ, ಕಾರ್ತವೀರ್ಯ–ಪರಶುರಾಮ, ಪರಶುರಾಮ–ಕ್ಷತ್ರಿಯರ ಕುಲಗಳು, ವಸಿಷ್ಠ –ಕೌಶಿಕ, ಪರಶುರಾಮ–ರಾಮ ಪ್ರಸಂಗಗಳಂತೆ ಮಹಾಭಾರತದಲ್ಲಿನ ಪರಶುರಾಮ–ಭೀಷ್ಮರ ಪ್ರಸಂಗ ಕೂಡ ಬ್ರಾಹ್ಮಣ–ಕ್ಷತ್ರಿಯ ಘರ್ಷಣೆಗಳನ್ನು ಹೇಳುತ್ತದೆ. ಆದರೆ ಬ್ರಾಹ್ಮಣ–ಕ್ಷತ್ರಿಯರಿಬ್ಬರೂ ಒಂದಾಗಿ ಶೂದ್ರನನ್ನು ನಿಯಂತ್ರಿಸುವಂಥ ಪ್ರಸಂಗ ಸ್ಪಷ್ಟವಾಗಿ ಚಿತ್ರಿತವಾಗಿರುವುದು ಶಂಬೂಕ ವಧೆಯ ಸಂದರ್ಭದಲ್ಲಿ. ಈ ಪ್ರಸಂಗವಿರುವುದು ಉತ್ತರ ಕಾಂಡದಲ್ಲಿ. ಸೀತಾ ಪರಿತ್ಯಾಗದ ಹಾಗೆ ಇದನ್ನೂ ಪ್ರಕ್ಷಿಪ್ತವೆಂದು ಗುರುತಿಸಲಾಗುತ್ತದೆ. ಆದರೆ ಆದರ್ಶ ಕ್ಷತ್ರಿಯ ರಾಜತ್ವದ ಪ್ರತೀಕವೆನಿಸಿರುವ ರಾಮನ ಚರಿತ್ರೆಯನ್ನು ಸೀತಾ ಪರಿತ್ಯಾಗದ ವೃತ್ತಾಂತವು ಶಾಶ್ವತವಾಗಿ ಪ್ರಶ್ನೆಗೆ ಗುರಿಮಾಡಿದಂತೆಯೇ ಈ ಶಂಬೂಕ ವಧೆಯ ಸಂಗತಿಯೂ ರಾಮನ 'ಆದರ್ಶತತ್ವ'ಕ್ಕೆ ಒಂದು ಸವಾಲಾಗುತ್ತದೆ.

ಈ ಸಂದರ್ಭಕ್ಕೆ ಹಿನ್ನೆಲೆಯಾಗಿರುವ ರಾಮನ ವ್ಯಕ್ತಿತ್ವ, ಕಾರ್ಯವೈಖರಿಗಳನ್ನು ಸ್ವಲ್ಪ ಗಮನಿಸಬೇಕು. ವೈದಿಕ ವಾಙ್ಮಯ, ಪುರಾಣಗಳು, ಕಾಳಿದಾಸಾದಿಗಳ ಕಾವ್ಯಗಳಲ್ಲಿರುವ ಬ್ರಹ್ಮರ್ಷಿ ವಸಿಷ್ಠನ ಮಹಿಮೆಗಳಾವುದೂ ಇರದ ಸಾಮಾನ್ಯ ಕುಲ ಪುರೋಹಿತನಾದ ವಸಿಷ್ಠನನ್ನು ರಾಮಾಯಣದಲ್ಲಿ ಕಾಣುತ್ತೇವೆ. ಈತ ಆಗಾಗ್ಗೆ ದಶರಥನಿಗೆ ಸಲಹೆ ನೀಡಿದ ಎಂಬುದರ ಹೊರತು ಆತನಿಗೆ ಯಾವ ಪ್ರಭಾವಳಿಯೂ ರಾಮಚರಿತ್ರೆಯ ಸಂದರ್ಭದಲ್ಲಿ ಕಾಣಿಸುವುದಿಲ್ಲ. ರಾಮಾಯಣದ ಉದ್ದೇಶವೇ ಪುರುಷೋತ್ತಮ ರಾಮನ ಚರಿತ್ರೆ ಹೇಳುವುದು. ಆದ್ದರಿಂದ ಅವನ ಬದುಕಿನ ಮುಖ್ಯ ಸಂದರ್ಭಗಳಲ್ಲಿ ಎಲ್ಲ ನಿರ್ಧಾರ ಮಾಡುವುದು ರಾಮನೇ. ತಂದೆಯ ಮಾತನ್ನು ಉಳಿಸಲು ಕಾಡಿಗೆ ಹೋಗುವುದು, ಕಾಡಿನಲ್ಲಿ ಬ್ರಾಹ್ಮಣರ ರಕ್ಷಣೆಗಾಗಿ ರಾಕ್ಷಸರನ್ನು ಯುದ್ಧಮಾಡಿ ಕೊಲ್ಲುವುದು, ರಾವಣನ ವಧೆಯ ನಂತರ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಗು ಮಾಡುವುದು ಮತ್ತು ಮುಂದೆ ಅವಳನ್ನು ಶಾಶ್ವತವಾಗಿ ತ್ಯಜಿಸಿದ್ದು. ಈ ಎಲ್ಲ ನಿರ್ಧಾರಗಳಲ್ಲಿ ಅವನು ವಸಿಷ್ಠರ ಸಲಹೆಯನ್ನೇನೂ ಪಡೆದಂತೆ ರಾಮಾಯಣದಲ್ಲಿ ಇಲ್ಲ.

ಆದರೆ ರಾಮನ ಕೌಟುಂಬಿಕ ಬದುಕು ಅವನ ರಾಜಕೀಯ ಆಕಾಂಕ್ಷೆಗೆ ಹೊಂದಿಕೊಂಡಿದ್ದು, ಅವನ ರಾಜತ್ವದ ಭದ್ರತೆಯು ಪ್ರಜಾಭಿಪ್ರಾಯವನ್ನು ಅವಲಂಬಿಸಿರುವುದರಿಂದ, ಹೇಗಾದರೂ ಮಾಡಿ ಪ್ರಜೆಗಳನ್ನು ಸಂತೋಷವಾಗಿಟ್ಟು, ಅದರಿಂದ ತನ್ನ ರಾಜತ್ವವನ್ನೂ, ಕೀರ್ತಿಯನ್ನೂ ಕಾಯ್ದುಕೊಳ್ಳುವವನು ರಾಮ. ಹೆಂಡತಿಯ ಶೀಲವನ್ನು ಶಂಕಿಸುವಂಥ, ಅತ್ಯಂತ ವ್ಯಕ್ತಿಗತವಾದ ದಾಂಪತ್ಯದ ಸಂದರ್ಭವನ್ನೂ ಅವನು ಎದುರಿಸಿದ್ದು 'ಪ್ರಜಾಭಿಪ್ರಾಯ'ದ ಮಾನದಂಡದಿಂದ ಎಂಬುದನ್ನು ಕಂಡಾಗ ಪ್ರಜೆಗಳಲ್ಲಿ ಕೆಲವರು ಅಸಂತುಷ್ಟರಾದಾಗ ಅವರನ್ನು ತಣಿಸಲು ಒಬ್ಬ ನಿರಪರಾಧಿ, ಧಾರ್ಮಿಕ ಸಾಧಕ ವ್ಯಕ್ತಿಯನ್ನು ವಧಿಸಲು ಅವನು ಸಿದ್ಧನಾಗುವುದು ಆಶ್ಚರ್ಯದ ಮಾತೆ? ಅಧಿಕಾರ, ಕೀರ್ತಿಯ ಅಹಮಿಕೆ ರಾಮನಲ್ಲಿ ಎಂಥಾ ಕ್ರೌರ್ಯವನ್ನು ತಂದಿತ್ತು ಎಂಬುದನ್ನು ತುಂಬ ಖಚಿತವಾಗಿ ಗುರುತಿಸಿದ್ದು ಭವಭೂತಿ ಕವಿ.

ರಾಮನ ವ್ಯಕ್ತಿತ್ವ ವಿಶ್ವಾಮಿತ್ರನ ಶಿಷ್ಯತ್ವದ ಹಂತಬಿಟ್ಟು ಬಹು

ಕಾಲವಾಗಿಲ್ಲ. 'ಧಿಕ್ ಬಲಂ ಕ್ಷತ್ರಿಯ ಬಲಂ ಬ್ರಹ್ಮತೇಜೋ ಬಲಂ ಬಲಂ' ಎಂದು ನಂಬಿ, ತನ್ನ ಕ್ಷಾತ್ರ ಬಲಕ್ಕಿಂತ ಬ್ರಹ್ಮತೇಜನ ಬಲವೇ ಮಿಗಿಲೆಂದು ಸಾರಿ ಅದನ್ನೇ ಸಾಧಿಸಲು ನಿರಂತರ ಶ್ರಮಿಸಿದವನಲ್ಲವೆ ವಿಶ್ವಾಮಿತ್ರ? ಅಂಥ ಬ್ರಾಹ್ಮಣರ ಪರಿತಾಪ ಕಂಡು ಮರುಗಿದ ರಾಮನ ಕ್ಷಾತ್ರತೇಜದಲ್ಲಿ ತನ್ನ ಮನೆತನದ ಘನತೆ, ತನ್ನ ಪ್ರಭುತ್ವದ ದಕ್ಷತೆಯ ಪ್ರಶ್ನೆಗಳಿವೆ.

ಈ ರೀತಿಯ 'ನಾಯಕ' ವ್ಯಕ್ತಿತ್ವದ ಢಾಳಾದ ಅಂಶಗಳನ್ನು ಗಮನಿಸಿದಾಗ 'ವಸಿಷ್ಠ' ಅವನೆದುರು ಏನೇನೂ ಅಲ್ಲ. ರಾಮಾಯಣದಲ್ಲಿ ರಾಮನ ರಾಜಕೀಯ ಕಾರ್ಯಾಚರಣೆಯಲ್ಲಿ ವಸಿಷ್ಠನ ಪಾತ್ರ ಕಂಡುಬರುವುದು ಉತ್ತರಕಾಂಡದ ಶಂಬೂಕ ವಧೆಯ ಪ್ರಸಂಗದಲ್ಲೇ. ಈ ಭಾಗ ಮುಂದೆ ಯಾರೋ ಬರೆದು ರಾಮಾಯಣದಲ್ಲಿ ತೂರಿಸಿದ್ದೆಂದು ಸಾಕಷ್ಟು ಚರ್ಚೆಗೆ ಒಳಗಾಗಿದೆ. ಆದರೆ ಯಾವುದೇ ಕಾಲದಲ್ಲಿ, ಯಾರೇ ಬರೆದಿರಲಿ, ಈ ಕಥಾಭಾಗ ಬಹುಮುಖ್ಯವಾದ ರಾಜಕೀಯ ಸನ್ನಿವೇಶವೊಂದರ ಮೇಲೆ ಬೆಳಕು ಚೆಲ್ಲುತ್ತದೆ. ಅದಕ್ಕಾಗಿ ಕೊಂಚ ವಿವರವಾಗಿ ಪರಿಶೀಲಿಸಲು ಅರ್ಹವಾಗಿದೆ.

ಸೀತೆಯನ್ನು ರಾಮ ಬಿಟ್ಟದ್ದಾಗಿದೆ. ಆದರೆ ಅವನು ಸ್ವಸ್ಥವಾಗಿ ಕುಳಿತಿರಲು ಸಾಧ್ಯವಾಗದಂತೆ ಪ್ರಜೆಗಳು ಮತ್ತೆ ಆಕ್ರೋಶಗೊಂಡಿದ್ದಾರೆ. ವೃದ್ಧ ಬ್ರಾಹ್ಮಣನೊಬ್ಬನ ಎಳೆಯ ವಯಸ್ಸಿನ ಮಗನೊಬ್ಬ ಆ ಕಾಲದಲ್ಲಿ ಮರಣ ಹೊಂದಿದ್ದಾನೆ. ಹೀಗೆ ಜನರು ಆ ಕಾಲದಲ್ಲಿ ಸತ್ತದ್ದು ರಾಮರಾಜ್ಯದಲ್ಲಿ ಆವರೆಗೆ ನಡೆದಿರಲಿಲ್ಲ. ಆದ್ದರಿಂದ ಇದಕ್ಕೆಲ್ಲ ರಾಜನೇ ಕಾರಣ ಎಂಬ ಭಾವನೆಯಿಂದ ಆ ಬ್ರಾಹ್ಮಣ ಮಗನ ಶವವನ್ನು ಎತ್ತಿಕೊಂಡು ಅರಮನೆಯ ಬಾಗಿಲಲ್ಲಿ ಅಳುತ್ತಾ ರಾಮನನ್ನು ನಿಂದಿಸ ತೊಡಗುತ್ತಾನೆ. ದುಃಖಿತನಾದ ರಾಮ ಮಂತ್ರಿಗಳನ್ನು ಕರೆಸಿ ಉಪಾಯವನ್ನು ಚಿಂತಿಸುತ್ತಿದ್ದಾನೆ. ಆ ವೇಳೆಗೆ ಅವನ ಬಳಿಗೆ ವಸಿಷ್ಠನೊಂದಿಗೆ ಎಂಟು ಜನ ಋಷಿಗಳು ಬರುತ್ತಾರೆ. (ಮಾರ್ಕಂಡೇಯ, ಮೌದ್ಗಲ್ಯ, ಕಾಶ್ಯಪ, ಜಾಬಾಲಿ, ಗೌತಮ, ವಾಮದೇವ, ಕಾತ್ಯಾಯನ ಮತ್ತು ನಾರದರು) ಈ ಮುನಿಗಳ ಪೈಕಿ ನಾರದನು ರಾಮನನ್ನು ಉದ್ದೇಶಿಸಿ, ಅಕಾಲ ಮರಣವು ರಾಜನ ದೋಷವೇ ಆಗಿರುತ್ತದೆ; ಅಕಾಲದಲ್ಲಿ ಶೂದ್ರನೊಬ್ಬನು ತಪಸ್ಸು ಮಾಡುತ್ತಿರುವುದರಿಂದಲೇ ಬ್ರಾಹ್ಮಣ ಬಾಲಕನ ವಧೆಯಾಗಿದೆ ಎಂದು ತಿಳಿಸುತ್ತಾನೆ. ಈ ಸಂದರ್ಭದಲ್ಲಿ ಕೃತಯುಗದಲ್ಲಿ ಬ್ರಾಹ್ಮಣರೂ, ತ್ರೇತಾಯುಗದಲ್ಲಿ ಕ್ಷತ್ರಿಯರೂ, ದ್ವಾಪರಯುಗದಲ್ಲಿ ವೈಶ್ಯರೂ, ಕಲಿಯುಗದಲ್ಲಿ ಶೂದ್ರರೂ ತಪಸ್ಸು ಮಾಡಲು ಧಾರ್ಮಿಕ ಅಧಿಕಾರವನ್ನು ಪಡೆಯುತ್ತಾರೆ. ಆದ್ದರಿಂದ ತನ್ನ ಕಾಲ ಬರುವ ಮೊದಲೇ ಶೂದ್ರನು ತಪಸ್ಸಿಗೆ ತೊಡಗಿದ್ದೇ ದೊಡ್ಡ ತೊಂದರೆಗೆ ಕಾರಣ ಎಂಬ ವಿವರಗಳು ದೀರ್ಘವಾಗಿ ಚರ್ಚೆಯಾಗುತ್ತವೆ. ಅನಂತರ ರಾಮ ಬ್ರಾಹ್ಮಣನಿಗೆ ಅವನ ಮಗನನ್ನು ಬದುಕಿಸಿಕೊಡುವುದಾಗಿ ಮಾತುಕೊಟ್ಟು, ಪುಷ್ಪಕ ವಿಮಾನವೇರಿ ಎಲ್ಲೆಡೆ ಆ ಶೂದ್ರ ತಪಸ್ವಿಗಾಗಿ ಹುಡುಕ ತೊಡಗುತ್ತಾನೆ. ದಕ್ಷಿಣ ದಿಕ್ಕಿನಲ್ಲಿ ಕೊಳವೊಂದರ ಬಳಿ ಮರದಿಂದ ತಲೆಕೆಳಗಾಗಿ ನೇತುಹಾಕಿಕೊಂಡು ಭೀಕರ ತಪಸ್ಸು ಮಾಡುತ್ತಿದ್ದ ಒಬ್ಬ ಮುನಿಯನ್ನು ನೋಡುತ್ತಾನೆ.

ಅವನ ಹತ್ತಿರ ಹೋಗಿ 'ತಪೋಧನನೇ ನೀನು ಯಾವ ಯೋನಿಯಲ್ಲಿ ಜನಿಸಿದವನು? ಏಕೆ ಈ ರೀತಿ ತಪಸ್ಸು ಮಾಡುತ್ತಿರುವೆ? ಸ್ವರ್ಗದ ಅಪೇಕ್ಷೆಯೋ ಅಥವಾ ಬೇರೇನಾದರೂ ಉದ್ದೇಶವಿದೆಯೋ? ನೀನೇನು ಬ್ರಾಹ್ಮಣನೋ, ಕ್ಷತ್ರಿಯನೋ, ವೈಶ್ಯನೋ, ಶೂದ್ರನೋ ನಿಜ ಹೇಳು' ಎಂದು ಪ್ರಶ್ನಿಸುತ್ತಾನೆ. ಆ ಮುನಿ ಅದೇ ಸ್ಥಿತಿಯಲ್ಲಿದ್ದುಕೊಂಡೇ ಉತ್ತರಿಸುತ್ತಾನೆ. 'ನಾನು ಶೂದ್ರ ಯೋನಿಯಲ್ಲಿ ಹುಟ್ಟಿದವನು. ಶಂಬುಕನೆಂದು ನನ್ನ ಹೆಸರು. ಈ ಮಹಾತಪಸ್ಸು ಮಾಡಿ ಸಶರೀರವಾಗಿ ಸ್ವರ್ಗಕ್ಕೆ ಹೋಗುವುದು, ದೈವತ್ವವನ್ನು ಹೊಂದುವುದೇ ನನ್ನ ಉದ್ದೇಶ. ನಾನು ಸುಳ್ಳು ಹೇಳುವುದಿಲ್ಲ' ಎನ್ನುತ್ತಾನೆ. ಕೂಡಲೇ ಕತ್ತಿ ಹಿರಿದು ರಾಮ ಅವನ ತಲೆಯನ್ನು ಕಡಿದು ಉರುಳಿಸುತ್ತಾನೆ.

ಇದು 'ದೇವಕಾರ್ಯ' ಎಂದು ರಾಮನನ್ನು ಕೊಂಡಾಡಿದ ದೇವತೆಗಳು 'ನಿನ್ನಿಂದಾಗಿ ಶೂದ್ರನೊಬ್ಬ ದೇವತ್ವ ಪಡೆದು ಸ್ವರ್ಗವನ್ನು ಪ್ರವೇಶಿಸುವುದು ತಪ್ಪಿತು. ಆದ್ದರಿಂದ ಒಂದು ವರವನ್ನು ಕೇಳು' ಎಂದು ಅನುಗ್ರಹಿಸುತ್ತಾರೆ. ಬ್ರಾಹ್ಮಣನಿಗೆ ಅವನ ಮಗನನ್ನು ಬದುಕಿಸಿಕೊಡುವುದಾಗಿ ತಾನು ಕೊಟ್ಟ ಮಾತು ಸುಳ್ಳಾಗದಿರಲಿ ಎಂದು ರಾಮ ಪ್ರಾರ್ಥಿಸುತ್ತಾನೆ. 'ನೀನು ಶೂದ್ರನನ್ನು ಕಡಿದುರುಳಿಸಿದ ಗಳಿಗೆಯೇ ಬ್ರಾಹ್ಮಣ ಬಾಲಕನು ಬದುಕಿದ'ನೆಂದು ದೇವತೆಗಳು ತಿಳಿಸುತ್ತಾರೆ. (ಉತ್ತರಕಾಂಡ: ೭೪, ೭೫, ೭೬ನೇ ಸರ್ಗಗಳು).

ಶೂದ್ರನೊಬ್ಬ ಬ್ರಾಹ್ಮಣರ ವಿಧ್ಯುಕ್ತ ಧಾರ್ಮಿಕ ಹಕ್ಕಿಗೆ ಯತ್ನಿಸಿದ್ದೇ ವಧಾರ್ಹವಾದ ಅಪರಾಧವೆಂದು ಈ ಕಥೆ ಸೂಚಿಸುತ್ತದೆ. ಈ ಎಚ್ಚರಿಕೆಯನ್ನು ನೀಡಹೊರಟವರು ಬಹು ಜಾಗರೂಕತೆಯಿಂದ ತಮ್ಮ 'ನೀತಿ'ಗೆ ಸಮರ್ಥನೆ ಪಡೆದುಕೊಳ್ಳಲು ವಸಿಷ್ಠನೂ ಸೇರಿದಂತೆ ಅನೇಕ ಪ್ರಾಚೀನ ಋಷಿಗಳನ್ನು ಪಟ್ಟಿಮಾಡಿ ಅಲ್ಲಿಗೆ ಬರುವಂತೆ ಮಾಡಿರುವುದು. ಈ ಬ್ರಾಹ್ಮಣ ಪ್ರತಿನಿಧಿಗಳ ತಂಡ ರಾಮನಿಗೆ ಪ್ರೇರಣೆ ನೀಡಿದಂತೆ ನಿರೂಪಿಸಿರುವುದು ಗಮನಾರ್ಹ. ನಾಲ್ಕು ಯುಗಗಳನ್ನು ನಾಲ್ಕು ವರ್ಣ ಗಳ ಜನರ ಧಾರ್ಮಿಕ ಹಕ್ಕನ್ನೂ ಸಮೀಕರಿಸುವ ಯತ್ನ ಮತ್ತು ದೇವರ್ಷಿ ನಾರದನು ಇದನ್ನೆಲ್ಲ ವಿವರಿಸುವಂತೆ ಕಲ್ಪಿಸಿ, ಇದಕ್ಕೆ ಅಧಿಕೃತತೆ ಕೊಡಲು ಯತ್ನಿಸಿರುವುದೂ ಕಂಡು ಬರುತ್ತದೆ. ಅಲ್ಲದೆ ಸ್ವತಃ ಅವತಾರ ಪುರುಷನಾದ ರಾಮನ ದುಷ್ಟಶಿಕ್ಷಣ–ಶಿಷ್ಟರಕ್ಷಣೆಯ ಚರಿತ್ರೆಗೇ ಈ ಶೂದ್ರವಧೆಯನ್ನೂ ಸೇರಿಸುವುದು, ಭೂಸುರರಾದ ಬ್ರಾಹ್ಮಣರ ಪ್ರೀತ್ಯರ್ಥವಾದದ್ದು, ಸ್ವರ್ಗದ ಸುರರಿಗೂ ಪ್ರಿಯವಾಗಿರುವುದು ಮುಂತಾದ ಅಂಶಗಳಲ್ಲಿ ಬ್ರಾಹ್ಮಣ ಹಿತಾಸಕ್ತಿ ಸ್ಪಷ್ಟವಾಗಿದೆ. ಶಂಬೂಕ ಒಬ್ಬ ಶಾಪಗ್ರಸ್ಥ ಗಂಧರ್ವನೆಂದೂ, ರಾಮನಿಂದ ಅವನ ಶಾಪ ವಿಮೋಚನೆ ಯಾಯಿತೆಂದೂ ಭವಭೂತಿಯ ನಿರೂಪಣೆಯಲ್ಲಿದೆ. ಆದರೂ ಈ ಕಥೆಯಲ್ಲಿರುವ ಬ್ರಹ್ಮ–ಕ್ಷಾತ್ರ ಸಂಯೋಜನೆ, ಶೂದ್ರತ್ವದ ವಿರುದ್ಧ ಅವು ಒಗ್ಗಟ್ಟಾಗಿ ಕ್ರಿಯಾಶೀಲವಾಗುವ ರಾಜಕೀಯವನ್ನು ಆ ಶಾಪವಿಮೋಚನೆಯ ಕಲ್ಪನೆ ಕೂಡ ನಿವಾರಿಸಲಾರದು. ಸಾಮಾಜಿಕ ಚಲನಶೀಲತೆಯನ್ನು ನಿಗ್ರಹಿಸುತ್ತಿರುವ ಶಕ್ತಿಗಳು ಬಹುರೂಪಿಯಾಗಿರುವ ಬಗೆಯತ್ತ ಈ ಕಥೆ ನಮ್ಮ ಗಮನ ಸೆಳೆಯುತ್ತದೆ. ನಾರದನ ಬುದ್ಧಿ, ವಸಿಷ್ಠನ ಒತ್ತಾಸೆ, ರಾಮನ ಖಡ್ಗದ ಅಧಿಕಾರ, ಬಲ, ಶಂಬೂಕನ ಮುಗ್ಧತೆಗಳೆಲ್ಲ ಇಲ್ಲಿ ಸೇರಿವೆ. ಶಂಬೂಕನ ಮುಗ್ಧತೆ ಎನ್ನುವುದು ಬ್ರಾಹ್ಮಣತ್ವದ ಅಂಧ ಅನುಕರಣೆಯಲ್ಲಿದೆ.

ರಾಮಾಯಣ–ಮಹಾಭಾರತಗಳ ಮೂಲ ದರ್ಶನವು ಮಾನವೀಯತೆಗೆ ಅಪಚಾರವಾಗದಂಥ ಧರ್ಮವನ್ನು ಎತ್ತಿ ಹಿಡಿಯುವಂಥದ್ದೇ? ವ್ಯಾಸನು ತನ್ನ ಕೃತಿಯಲ್ಲಿ ತೋಳೆತ್ತಿ ಕೂಗಿ ಹೇಳಿದ್ದು ಏನನ್ನು?

ಊರ್ಧ್ವಬಾಹುರ್ವಿರೌಮ್ಯೇಷ ನ ಕಶ್ಚಿದಪಿ ಶ್ರುಣೋತಿ ಮೇ।
ಧರ್ಮಾದರ್ಥಂ ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ।

ನನ್ನ ತೋಳು ಮೇಲೆತ್ತಿ ಇದೋ ಕೂಗಿ ಹೇಳುತ್ತಿದ್ದೇನೆ, ಯಾರೊಬ್ಬರೂ ನನ್ನ ಮಾತು ಕೇಳುತ್ತಿಲ್ಲ. ಧರ್ಮದಿಂದಲೇ ಸಂಪತ್ತು, ಸುಖಭೋಗಗಳೂ. ಅಂಥ ಧರ್ಮವನ್ನು ಏಕೆ ಜನರು ಸೇವಿಸುತ್ತಿಲ್ಲ?

‘ಪುಟ್ಟಿಸಿದಕೆ ಪಾಲಿಸಿನ್ನು’ :

ಜಾತಿವ್ಯವಸ್ಥೆ ಕುರಿತ ಒಂದು ಅಧ್ಯಾತ್ಮಿಕ ನೋಟ

ಲಕ್ಷ್ಮೀಶ ತೋಳ್ಪಾಡಿ

ಕನಕದಾಸರ ಒಂದು ಹಾಡು ಕೇಳುತ್ತಿದ್ದೆ. ತುಂಬಾ ಸರಳವಾದ ಹಾಡು. “ಈಶ ನಿನ್ನ ಚರಣ ಭಜನೆ, ಆಸೆಯಿಂದ ಮಾಡುವೆನು” ಎಂದು ಮೊದಲಾಗುತ್ತದೆ. ಆ ಹಾಡಿನಲ್ಲಿ ನಡುವೆ ಈ ಸಾಲುಗಳೂ ಬರುತ್ತವೆ:

“ಪುಟ್ಟಿಸಲೇ ಬೇಡವಿನ್ನು .
ಪುಟ್ಟಿಸಿದಕೆ ಪಾಲಿಸಿನ್ನು”.

ಕನಕದಾಸರು ಹುಟ್ಟಿನಿಂದ ಶೂದ್ರನಾಗಿದ್ದದ್ದು ಮತ್ತು ಈ ಕಾರಣದಿಂದ ತಾನು ದೊಡ್ಡ ಜ್ಞಾನಿ–ಸಂತನಾಗಿದ್ದರೂ ತುಂಬಾ ಪಾಡುಪಟ್ಟದ್ದು ಎಲ್ಲ ನೆನಪಿಗೆ ಬಂದು, ಆ ಹಿನ್ನೆಲೆಯಲ್ಲಿ, ಈ ಹಾಡು ಜಾತಿವ್ಯವಸ್ಥೆಗೇ ಬರೆದ ಭಾಷ್ಯದಂತಿದೆಯಲ್ಲ ಅನಿಸಿತು. ಹೀಗೆ ಪ್ರತೀತವಾಗುವ ಅರ್ಥ ನಿಜವಾದದ್ದೇ.

ಆದರೆ ಅದು ಕನಕದಾಸರು ಭಾವಿಸಿದ ಅರ್ಥವೆ ? ಅಥವಾ ಅಷ್ಟು ಮಾತ್ರವೇ ಅವರು ಭಾವಿಸಿದ್ದೇ? ಹೇಳುವುದು ಕಷ್ಟ. ಏಕೆಂದರೆ ನಮ್ಮ ಆಧ್ಯಾತ್ಮಿಕ ಪರಂಪರೆಯ ಕಾಳಜಿಯೇ ಹುಟ್ಟುಸಾವುಗಳ ಈ ಭವಚಕ್ರವನ್ನು ದಾಟುವುದು ಮತ್ತು ಕನಕದಾಸರು ಈ ಪರಂಪರೆಯ ದೊಡ್ಡ ಅಭಿವ್ಯಕ್ತಿ.

೨

ಇದು ಅಧ್ಯಾತ್ಮ ಎದುರಿಸುವ ಸಮಸ್ಯೆ. ಸಂಸಾರದ ಕ್ಷೇತ್ರದಲ್ಲಿಯೇ ಸಂಸಾರವನ್ನು ಮೀರುವ ಅನುಸಂಧಾನವನ್ನು ಅಧ್ಯಾತ್ಮ ಸಾಧಿಸ ಬೇಕಾಗಿದೆ. ಸಂಸಾರದ ನಡೆಯಾದರೋ ವೃತ್ತ, ವರ್ತುಲ. ತುಳಿದ ಹಾದಿಯನ್ನೇ ಮತ್ತೆ ತುಳಿಯುವ ನಡೆ. ಹುಟ್ಟುಸಾವುಗಳ ನಿರಂತರ ಚಕ್ರಭ್ರಮಣ. “ಪುನರಪಿ ಜನನಂ, ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ”.

ಆಧ್ಯಾತ್ಮದ ನಡೆಯಾದರೋ ನೇರ, ಊರ್ಧ್ವಮುಖಿ. ಆದರೆ ಆ ನೇರವನ್ನು ಈ ವರ್ತುಲದಲ್ಲಿಯೇ ಸಾಧಿಸಬೇಕಾಗಿದೆ. ಕರ್ಮವನ್ನು ಮಾಡುತ್ತಲೇ ಕರ್ಮದ ಅಂಟನಿಂದ ಪಾರಾಗಬೇಕಾಗಿದೆ. ದೇಹದ ಮೂಲಕವೇ ದೇಹಾತೀತವಾದ ‘ಆತ್ಮ’ದ ಅರಿವು ಪಡಕೊಳ್ಳಬೇಕಾಗಿದೆ. ಆದ್ದರಿಂದಲೇ ಆಧ್ಯಾತ್ಮ ತೀವ್ರವಾದ ಬಂಡಾಯದ ಗುಣವನ್ನು ಒಳಗೊಂಡಿದೆ. ಏಕೆಂದರೆ ಅದು ತುಳಿದ ಹಾದಿಯನ್ನು ತುಳಿಯಲು ನಿರಾಕರಿಸುತ್ತದೆ. ಇದರ ಜೊತೆಗೆ, ಬಂಡಾಯದ ಆಶಯಕ್ಕೆ ವಿರುದ್ಧವೆಂದು ತೋರುವಂತೆ, ಅಧ್ಯಾತ್ಮ ಪಾಲನೆಯ ಗುಣವನ್ನು ಪಡೆದಿದೆ. ದೇಹಾತೀತತೆಯನ್ನು ಸಾಧಿಸುವುದಕ್ಕಾಗಿಯೇ ಅದು ದೇಹವನ್ನು ಪಾಲಿಸಬೇಕು. ‘ಶರೀರಂ ಆದ್ಯಂ ಖಲು ಧರ್ಮಸಾಧನಂ’. ದೇಹವು ಧರ್ಮವನ್ನು ಸಾಧಿಸಲು ಇರುವ ಮೊದಲ ಉಪಕರಣ. ದೇಹವನ್ನು ಪಾಲಿಸುವ ಆಶಯ ಕುಟುಂಬ, ಸಮಾಜ, ಜನಪದಗಳ ಹಿತದ ವಿಸ್ತಾರದತ್ತ ಸರಣಿಯಾಗಿ ಸಾಗುತ್ತದೆ.

೩

ಅಧ್ಯಾತ್ಮದ ಕ್ಷೇತ್ರ ಒಂದು ವಿಶಾಲವಾದ ಆದರೂ ಪೇಲವವಲ್ಲದ ಸಮನ್ವಯ ಭೂಮಿಕೆಯಾಗಬೇಕಾಗಿ ಬಂದದ್ದು ಈ ಮೇಲಿನ ಕಾರಣಕ್ಕಾಗಿ ಮಾತ್ರವಲ್ಲ. ಅಧ್ಯಾತ್ಮದ ಸ್ವಾಭಾವಿಕ ಲಕ್ಷ್ಯವೇ ದ್ವಂದ್ವಾತೀತತೆಯನ್ನು ಸಾಧಿಸುವುದಾದ್ದರಿಂದ ಕೂಡ. ದ್ವಂದ್ವವನ್ನು ಮೀರಿದ ಭೂಮಿಕೆಯಲ್ಲಿ ಅದು ಸಹಜವಾಗಿ ಸಮುದ್ರದಂತೆ ಎಲ್ಲ ನೀರುಗಳನ್ನೂ ಸ್ವೀಕರಿಸುತ್ತದೆ.

ಗೀತೆಯ ‘ಯಾರು ಹೇಗೆ ಪೂಜಿಸುವರೋ ಹಾಗೆ ಅವರಿಗೆ ನಾನು ಒಲಿಯುತ್ತೇನೆ’ ಎಂದ ಮಾತು, ಫಲದ ಮೇಲಿನ ಆಸೆಯನ್ನು ತೊರೆದು ಕರ್ಮ ಮಾಡುವವನಿಗೆ ಆ ಕರ್ಮವು ಬಾಧಕವಾಗುವುದಿಲ್ಲ ಎಂದು ಹೇಳುತ್ತಲೇ ಆ ಕರ್ಮವು ಅವನ ವರ್ಣದ ಕರ್ತವ್ಯವಾಗಿರಬೇಕು ಎಂದ ಮಾತು, ಎಲ್ಲ ಧರ್ಮಗಳನ್ನೂ ಕಿತ್ತೆಸೆದು ನನಗೆ ಶರಣಾಗುವುದರಲ್ಲಿದೆ ನಿನ್ನ ಬಿಡುಗಡೆ ಎನ್ನುತ್ತಲೇ, ಆಗಲೂ ನೀನು ಕ್ಷತ್ರಿಯನಾದ್ದರಿಂದ ಯುದ್ಧ ಮಾಡಲೇಬೇಕಾಗುತ್ತದೆ ಎಂದ ಮಾತು– ಇವೆಲ್ಲ ಇಂಥ ಸಮನ್ವಯವನ್ನು ಸೂಚಿಸುತ್ತದೆ.

ಹಾಗೆಯೇ, ನಿವೃತ್ತಿಪರವಾದ, ಜ್ಞಾನನಿಷ್ಠೆಯನ್ನು ಎತ್ತಿ ಹೇಳುವ, ಯಜ್ಞಾದಿಗಳು ತೂತು ಬಿದ್ದ ನಾವೆಗಳೆಂದು ಅಲ್ಲಗಳೆಯುವ, ಸನ್ಯಾಸಿಗಳಿಗೆ ಅಧ್ಯಯನಯೋಗ್ಯವೆನ್ನಲಾದ ಉಪನಿಷದ್ ವಾಙ್ಮಯ, ಬದುಕನ್ನೆ ಯಜ್ಞವೆಂದು ಕರೆಯಿತು. ಕರ್ಮಜ್ಞಾನಗಳೂ ಪರಸ್ಪರ ಪೂರಕವೆಂದಿತು. ಸಂಭೋಗವೂ ಭಗವದನುಸಂಧಾನದಿಂದ ಯಜ್ಞವಾಗುತ್ತದೆ ಎಂದು ವರ್ಣಿಸಿತು.

ಸ್ತ್ರೀ–ಶೂದ್ರರಿಗೆ ವೇದಾಧಿಕಾರವನ್ನು ನಿಷೇಧಿಸಿದ ನಡೆ ಒಂದೆಡೆ ಕಾಣಿಸುತ್ತದೆ. ಹಾಗೆಂದು ಬ್ರಹ್ಮವಾದಿನಿಯರಾದ ಸ್ತ್ರೀಯರ ಉಲ್ಲೇಖ ಇನ್ನೊಂದೆಡೆ ಬಂದಿದೆ. ಭಕ್ತಿಯ ಪ್ರಸ್ಥಾನವಂತೂ ಇಂಥ ನಿಷೇಧಗಳನ್ನು ಕಿತ್ತೆಸೆಯಲೆಂಬಂತೆ ಮೂಡಿಬಂತು (ಚಾರಿತ್ರಿಕ ಕಾಲಘಟ್ಟದಲ್ಲಿ) ಎಂದು ಭಾವಿಸುವೆವಾದರೆ, ಚರಿತ್ರೆಯ ಕ್ರಿಯೆ–ಪ್ರತಿಕ್ರಿಯೆಗಳನ್ನು ಮೀರಿ ಮೂಲ ಉಪನಿಷತ್ತಿನಲ್ಲಿಯೇ ಭಕ್ತಿಯ ಅಪೂರ್ವ ಬಣ್ಣನೆ ಇದೆ.

ಈ ಮಾತುಗಳನ್ನು ನೋಡಿ.

“ನಾಯ ಮಾತ್ಮಾ ಪ್ರವಚನೇನ ಲಭ್ಯಃ
ನ ಮೇಧಯಾ ನ ಬಹುನಾ ಶ್ರುತೇನ
ಯಂ ಏವ ಏಷ ವೃಣುತೇ ತೇನ ಲಭ್ಯಃ
ತಸ್ಸ ಏಷ ಆತ್ಮಾ ವಿವೃಣುತೇ ತನಂ ಸ್ವಾಂ”

(ಕಠೋಪನಿಷತ್)

(ಪ್ರವಚನ ಪಟುತೆಗೆ ದೊರಕನು,
ಬುದ್ಧಿಯ ಬಲ, ಬಹು ಕೇಳಿಬಲ್ಲ ಬಲ್ಮೆಗೆ ಕೂಡ.
ಅವನಾಯ್ದವನಿಗೇ ಸಿಗುವನು
ತೋರುವನವನಿಗೆ ತನ್ನನು ತಾನೇ.)

ಎಲ್ಲ ಹಮ್ಮುಗಳನ್ನೂ, ಹೆಚ್ಚಾಗಿ ವಿದ್ಯೆಯ ಹಮ್ಮನ್ನು (ಮೇಲ್ಜಾತಿಯವರೊಂದಿಗೆ ಸಮೀಕರಿಸಲ್ಪಟ್ಟ) ಪೂರ್ತಿಯಾಗಿ ನಿರಾಕರಿಸುವ ಮಾತು ಇದು. ಪಾಂಡಿತ್ಯಕ್ಕಿಂತ ಸರಳತೆ–ಮುಗ್ಧತೆಗಳೇ ಅವನ ಆಯ್ಕೆ ಎಂದು ಸೂಚಿಸುವ ಮಾತು ಇದು. ಇದೇ ಭಕ್ತಿಯ ನೆಲೆ.

ಇದರೊಡನೆ, "ಪಂಡಿತೋ ಮೇಧಾವೀ ಗಾಂಧಾರಾನೇವ ಉಪಸಂಪದ್ಯೇತ ಏವಮೇವ ಇಹ ಆಚಾರ್ಯವಾನ್ ಪುರುಷೋ ವೇದ" ಎಂಬ ಛಾಂದೋಗ್ಯದ ನುಡಿಯನ್ನಿಟ್ಟು ನೋಡಿ. (ಪಂಡಿತನೂ ಮೇಧಾವಿಯೂ ಆದವನು ಕೇಳಿ ತಿಳಿದು ಗಾಂಧಾರ ದೇಶವನ್ನು ತಲುಪುವಂತೆ, ಆಚಾರ್ಯನ ವಾಣಿಯಿಂದ ಭಗವಂತನನ್ನು ತಲುಪುವುದು ಸಾಧ್ಯ) ಅಥವಾ 'ಬ್ರಹ್ಮಸೂತ್ರ' ಹೇಳುವಂತೆ ಭಗವಂತನನ್ನು ತಿಳಿಯುವುದು ಶಾಸ್ತ್ರದ ಮೂಲಕದಿಂದ ಮಾತ್ರ ಸಾಧ್ಯ (ಶಾಸ್ತ್ರಯೋನಿತ್ವಾತ್)–ಇಂಥ ನೆಲೆಗಳೂ ಇವೆ.

ಏಕೆ? ವೇದಾಂತದ ಮೂರು ಪ್ರಸ್ಥಾನಗಳಾದ ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್‌ಗೀತೆಗಳ ಹಿನ್ನೆಲೆಯನ್ನು ನೋಡಿ. ಉಪನಿಷತ್ತುಗಳು ಅನುಭಾವ ಕಾವ್ಯದಂತಿವೆ. ಬ್ರಹ್ಮಸೂತ್ರಗಳಾದರೋ, ವಿಚಾರಾತ್ಮಕವಾಗಿ ಖಂಡನೆ–ಮಂಡನೆಗಳಿಂದ ಕೂಡಿ, ಎಲ್ಲವನ್ನೂ ವ್ಯವಸ್ಥಿತವಾಗಿ ನೋಡುವ ಆತುರವಿರುವ ಬೌದ್ಧಿಕ ನೆಲೆಯಲ್ಲಿವೆ. ಭಗವದ್ ಗೀತೆಯಾದರೋ ಜೀವನದ ಸಂದರ್ಭದಲ್ಲಿ ಹುಟ್ಟಿ, ಕಣ್ಣೆದುರಿಗಿರುವ ಬದುಕಿನ ಎಲ್ಲಾ ಜಟಿಲತೆಯನ್ನೂ ಒಪ್ಪಿ, ಈ ಜಟಿಲತೆಯಲ್ಲಿಯೇ ಬಿಡುಗಡೆಯ ಆಯಾಮವನ್ನು ಹುಡುಕುವ ಪ್ರಯತ್ನವಾಗಿದೆ. ಈ ಮೂರು ನೆಲೆಗಳ ಸಮನ್ವಯವೇ ಆಧ್ಯಾತ್ಮಶಾಸ್ತ್ರ ಅಥವಾ ವೇದಾಂತ ಶಾಸ್ತ್ರ. ಈ ಸಮನ್ವಯದ ಹೊಳೆ ಹರಿಯುತ್ತಿರುವುದು ಬಂಡಾಯ ಮತ್ತು ಪಾಲನೆ ಎಂಬ ಎರಡು ದಡಗಳ ನಡುವೆ. ಇದನ್ನೇ ಸೂಚಿಸುತ್ತಿರುವುದೇನೋ ಕನಕದಾಸರ ಹಾಡು!

"ಪುಟ್ಟಿಸಲೇ ಬೇಡವಿನ್ನು
ಪುಟ್ಟಿಸಿದಕೆ ಪಾಲಿಸಿನ್ನು".

೪

ಈ ಹಿನ್ನೆಲೆಯಲ್ಲಿ ವೇದಾಂತಶಾಸ್ತ್ರದ ಮೂವರು ಪ್ರಸಿದ್ಧ ಆಚಾರ್ಯರುಗಳಾದ ಶಂಕರ, ರಾಮಾನುಜ ಮತ್ತು ಮಧ್ವರು ವರ್ಣ/ಜಾತಿ ವ್ಯವಸ್ಥೆಯನ್ನು ಕಂಡ ಬಗೆಯನ್ನು ನೋಡೋಣ. ಇವರು ಲೋಕದ ಹಂಗು ತೊರೆದು ಎಲ್ಲವನ್ನೂ ಒದ್ದುಹೋಗುವ ಅವಧೂತರಂತಲ್ಲ. ಇಲ್ಲಿನ ಎಲ್ಲವನ್ನೂ ಒಪ್ಪಿ, ಇಲ್ಲೇ ಇದ್ದು, ಬದುಕನ್ನೆ ತಪಸ್ಸಾಗಿಸಿದ ಗುಪ್ತ ಸಾಧಕರೂ ಅಲ್ಲ. ಕುಸಿಯುತ್ತಿರುವ ವ್ಯವಸ್ಥೆಯನ್ನು ಮರಳಿ ಕಟ್ಟುವ ಕಾಯಕದಲ್ಲಿ ತೊಡಗಿದ ಸನ್ಯಾಸಿಗಳು. ಎಲ್ಲವನ್ನೂ ವ್ಯವಸ್ಥಿತವಾಗಿಸಿ ನೋಡುವ ಮನೋಧರ್ಮದ ಪ್ರಚಂಡ ವಿದ್ವಾಂಸರು. ತಮ್ಮದೇ ಆದ ದರ್ಶನದ ಕೊಡುಗೆ ಇತ್ತವರು. ಮೂವರು ಆಚಾರ್ಯರೂ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ ಗೀತೆಗಳಿಗೆ ಗಹನವಾದ ಭಾಷ್ಯಗಳನ್ನು ಬರೆದಿದ್ದಾರೆ. ಒಟ್ಟನಲ್ಲಿ ಇವರು ಆಧ್ಯಾತ್ಮಿಕ ದೃಷ್ಟಿಯಿಂದಲೇ ಬದುಕಿಗೆ ಬೆಲೆ ಕಟ್ಟುವವರು. ಇದು ಮೂಲಭೂತವಾದದ್ದು.

ಇವರ ಆಧ್ಯಾತ್ಮ ಕ್ರಾಂತಿಗೂ, ವ್ಯವಸ್ಥೆಯನ್ನು ಮರಳಿ ಕಟ್ಟುವ ಹುಮ್ಮಸ್ಸಿಗೂ, ಚಾತುರ್ವಣ್ಯಕ್ಕೂ ನಿಕಟವಾದ ಸಂಬಂಧ ಇದ್ದರೆ ಅದು ಭಾರತೀಯ ಸಂದರ್ಭದಲ್ಲಿ ಏನೂ ಅಚ್ಚರಿಯಲ್ಲ. ಚಾತುರ್ವಣ್ಯದ ಸಮಾಜ ರಚನೆ ಆಚಾರ್ಯರುಗಳಿಗೆ ಒಪ್ಪಿತವಾದುದೇ. ಏಕೆಂದರೆ ಅದು ವೇದ ಮೂಲವಾದುದು. ವೇದ ಮೂಲವಾಗಿದ್ದು ಮತ್ತೆ ದಿಚ್ಯುತಿಗೊಂಡುದನ್ನು ಮರಳಿ, ನಿಜವಾಗಿ, ವೇದ ಮೂಲವಾಗಿಸುವ ಪ್ರಯತ್ನ ಇವರೆಲ್ಲರದು.

ಶಂಕರರ ಯತ್ನವನ್ನೇ ನೋಡಿ. ಯಜ್ಞಯಾಗಾದಿಗಳ ಕರ್ಮಕಾಂಡದ ಭೋಗಪರಾಯಣತೆಯನ್ನು ಬುದ್ಧ ದೇವ ಖಂಡಿಸಿದ. 'ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ' ಎಂದೇ ಬುದ್ಧನಿಗೆ ಪ್ರಶಂಸೆ. ಹಾಗೆ ಖಂಡಿಸುವಾಗ ಕರ್ಮಕಾಂಡವನ್ನೇನೂ ಸಮರ್ಥಿಸಲಿಲ್ಲ. ಔಪನಿಷಧಿಕವಾದ ಜ್ಞಾನಕಾಂಡದ ಮಹತ್ವವನ್ನು ಎತ್ತಿ ತೋರಿಸಿದರು. (ಹೀಗೆ ಮಾಡುವಾಗ ಮೇಲ್ನೋಟಕ್ಕೆ ಕರ್ಮಕಾಂಡವನ್ನು ಹೇಳುವಂತೆ ತೋರುವ ವೇದ ಭಾಗದ ನೈಜಾರ್ಥದ ಬಗ್ಗೆ ಶಂಕರರು ಯೋಚಿಸಲಿಲ್ಲ ಎಂದು ಆಮೇಲಿನ ರಾಮಾನುಜರೂ ಮಧ್ವರೂ ಹೊಸ ಸಮನ್ವಯವನ್ನು ಸಾಧಿಸಬೇಕಾಯಿತು.)

ಶಂಕರರ ಈ ಸಾಧನೆಯನ್ನು ಚಾತುರ್ವಣ್ಯದ ಚೌಕಟ್ಟಿನಲ್ಲಿ ನೋಡುವುದಾದರೆ, ಕರ್ಮಕಾಂಡದಲ್ಲಿ ದಿಕ್ಕುತಪ್ಪಿದ ದ್ವಿಜರನ್ನು ಮರಳಿ ಜ್ಞಾನಕೇಂದ್ರದ ಕಡೆಗೆ ಎಳೆತಂದ ಪ್ರಕ್ರಿಯೆಯನ್ನಾಗಿಯೂ ನೋಡುವುದು ಸಾಧ್ಯ. ಅಂದರೆ ವರ್ಣಧರ್ಮದ ಜಾಗೃತಿಯನ್ನು ಮರಳಿ ಶಂಕರರು ಉಂಟುಮಾಡಿದರೆಂದೇ ಹೇಳಬೇಕು. ಭಗವದ್ ಗೀತೆಯಲ್ಲಿ ಕೃಷ್ಣನ ಸಾಧನೆ ಕೂಡ ಇದೇ. ಅರ್ಜುನನು ಅನೇಕ ಕಾರಣಗಳನ್ನು ಮುಂದೊಡ್ಡಿ ಯುದ್ಧವನ್ನು ಮಾಡಲಾರೆನೆಂದ. ಆಗ ಕೃಷ್ಣನು ಗಹನವಾದ ಆಧ್ಯಾತ್ಮಿಕ ತತ್ತ್ವಗಳನ್ನು ಉಪದೇಶಿಸಿ, ಅರ್ಜುನನಿಗೆ ಯುದ್ಧವೇ 'ಧರ್ಮ' ಎಂದು ಬೋಧಿಸಿದ. ಕ್ಷತ್ರಿಯನಾದ ಅರ್ಜುನನು ಕ್ಷತ್ರಿಯೋಚಿತ ಕರ್ತವ್ಯವಾದ ಯುದ್ಧವನ್ನು ಮಾಡದಿದ್ದರೆ, ಧರ್ಮವಿಮುಖನಾಗಿ ಅಧರ್ಮಿಯಾಗುವನೆಂದ. ಅರ್ಜುನನು ಮರಳಿ ಗಾಂಡೀವವನ್ನೆತ್ತಿಕೊಳ್ಳುವಂತೆ ಮಾಡಿದ. ಅಂದರೆ ಹಳಿ ತಪ್ಪುತ್ತಿದ್ದ ವರ್ಣ ಧರ್ಮವನ್ನು ಮರಳಿ ಹಳಿಯ ಮೇಲೆ ತಂದಿರಿಸಿದ.

ಕೃಷ್ಣನು ಕ್ಷತ್ರಿಯನನ್ನು ಎಚ್ಚರಿಸಿದಂತೆ ಶಂಕರರು ಬ್ರಾಹ್ಮಣನನ್ನು ಎಚ್ಚರಿಸಿದರು ಎನ್ನಬೇಕು.

೫

ವರ್ಣವ್ಯವಸ್ಥೆಯ ಬಗೆಗೆ ಮಾತು ಬಂದಾಗಲೆಲ್ಲ ಹುಟ್ಟು ನಿರ್ಣಾಯಕವಲ್ಲ, ಗುಣ–ಕರ್ಮಗಳೇ ನಿರ್ಣಾಯಕ ಎಂದು ಮೂವರು ಆಚಾರ್ಯರೂ ಒಪ್ಪುತ್ತಾರೆ. ಉಪನಿಷತ್ತು, ಮಹಾಭಾರತಗಳಲ್ಲಿ ಹಾಗೇ ಇವೆ. ಮಹಾಭಾರತವಂತೂ ಮತ್ತೆ ಮತ್ತೆ "ವೃತ್ತಮೇವ ನ ಸಂಶಯಃ" (ನಡತೆಯೊಂದೇ ವರ್ಣನಿರ್ಣಾಯಕ; ಹುಟ್ಟಲ್ಲ) ಎಂದು ಹೇಳಿದೆ. ವನಪರ್ವದಲ್ಲಿ ಎಲ್ಲಾ ಜಾತಿಗಳೂ ಪರಸ್ಪರ ಕಾಮ ಸಂಬಂಧದಲ್ಲಿ ಸೇರಿಹೋಗಿ ಸಂಕರ ವಾಗಿರುವುದರಿಂದ (ಸರ್ವೇ ಸರ್ವಾಸು ಅಪತ್ಯಾನಿ ಜನಯಂತಿ ಸದಾ ನರಾಃ) ಗುಣ–ಸ್ವಭಾವಗಳೇ ವರ್ಣ ನಿರ್ಣಾಯಕ ಎಂದು ಯುಧಿಷ್ಠಿರ ಉತ್ತರಿಸಿದ್ದಾನೆ.

ಮಧ್ವಾಚಾರ್ಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಚಾತುರ್ವಣ್ಯಂ ಮಯಾಸೃಷ್ಟಂ ಗುಣ–ಕರ್ಮ ವಿಭಾಗಶಃ" (ಗುಣ ಮತ್ತು ಕರ್ಮಗಳ ವಿಂಗಡಣೆಯಿಂದ ನಾಲ್ಕು ವರ್ಣಗಳೂ ನನ್ನಿಂದಲೇ ಹುಟ್ಟಿಕೊಂಡಿವೆ) ಎಂಬ ಗೀತಾ ವಾಕ್ಯದಲ್ಲಿ "ಗುಣ" ಎಂದರೆ ತ್ರಿಗುಣಗಳು (ಸತ್ತ್ವ, ರಜ, ತಮಸ್) ಎಂದು ವಿವರಿಸಿ, ಅದು ಜೀವಸ್ವಭಾವಕ್ಕೆ ಸಂಬಂಧಪಟ್ಟದ್ದು ಎಂದು ಸಿದ್ಧಾಂತಿಸಿ ವರ್ಣ ವ್ಯವಸ್ಥೆಯನ್ನು ತೀರಾ ಆಧ್ಯಾತ್ಮಿಕಗೊಳಿಸುತ್ತಾರೆ. ಲೌಕಿಕದಲ್ಲಿ ಅನ್ವಯ ಮಾಡುವಾಗ "ಸ್ವಾಭಾವಿಕೋ ಬ್ರಾಹ್ಮಣಾದಿ ಶಮಾದ್ಯೈರೇವ ಭಿದ್ಯತೇ" ಶಮದಮಾದಿ ಗುಣ ಸಂಪತ್ತಿನಿಂದಲೇ ಬ್ರಾಹ್ಮಣಾದಿ ವರ್ಣಗಳು ಗುರುತಿಸಲ್ಪಡುತ್ತವೆ ಎಂದು ತಮ್ಮ ಆಧ್ಯಾತ್ಮಿಕತೆಗೆ ಅನುಗುಣವಾಗಿಯೇ ಸಮನ್ವಯ ಮಾಡುತ್ತಾರೆ. ಆಧ್ಯಾತ್ಮಿಕತೆ (ಬ್ರಹ್ಮ ವಿಚಾರಾಸಕ್ತಿ)ಯೊಂದೇ ಎಲ್ಲ ವರ್ಣಗಳವರಿಗೂ ತಾರಕ ಎಂದು ಘೋಷಿಸಿ, ಬ್ರಹ್ಮ ಜಿಜ್ಞಾಸೆ ಮಾಡುವ ಶೂದ್ರನನು 'ಸಚ್ಛೂದ್ರ' ಎಂದು ಕರೆದವರು ಅವರು. "ಸ್ವವಿಹಿತ ವೃತ್ತ್ಯಾ ಭಕ್ತ್ಯಾ ಭಗವದಾರಾಧನಂ ಪರಮೋ ಧರ್ಮಃ" ಎನ್ನುವುದೂ ಅವರದೇ ಮಾತು. ತನತನಗೆ ವಿಹಿತವಾದ ವೃತ್ತಿಯನ್ನು ನಡೆಸುತ್ತ ಭಕ್ತಿಯಿಂದ ಭಗವಂತನನ್ನು ಆರಾಧಿಸುವುದೇ ಧರ್ಮಗಳೆಲ್ಲೆಲ್ಲಾ ಶ್ರೇಷ್ಠ. ಹೀಗೆ ವೃತ್ತಿ ಧರ್ಮಕ್ಕೆ ಆಧ್ಯಾತ್ಮದ ಮುದ್ರೆ ಬಿದ್ದಿದೆಯೇನೋ

ನಿಜ. ಆದರೆ ಲೌಕಿಕದ ವ್ಯವಸ್ಥೆಯಲ್ಲಿ ಆಧ್ಯಾತ್ಮಿಕತೆಯನ್ನು ಅನ್ವಯಗೊಳಿಸುವಾಗ "ಹುಟ್ಟು" ತನ್ನ ಪಾಲನ್ನು ಪಡೆದುಕೊಳ್ಳದೆ ಇಲ್ಲ.

೬

'ಸತ್ಯಕಾಮ ಜಾಬಾಲ' ನ ಕತೆಯನ್ನೆ ನೋಡಿ. ಛಾಂದೋಗ್ಯ ಉಪನಿಷತ್ತಿನಲ್ಲಿ ಅದು ಕಾಣಿಸಿಕೊಂಡಿದೆ ತಾನು ಗುರುಕುಲವನ್ನು ಸೇರಬೇಕಾಗಿದೆ. ವೇದಾಧ್ಯಯನ ಮಾಡಬೇಕಾಗಿದೆ. ತನ್ನ ಗೋತ್ರ ಯಾವುದು? ಎಂದು ಚಿಕ್ಕ ಹುಡುಗ ಸತ್ಯಕಾಮ ತನ್ನ ತಾಯಿಯನ್ನು ಕೇಳಿದ. "ನಿನ್ನ ಗೋತ್ರ ತಿಳಿದಿಲ್ಲವಪ್ಪ,ದಾಸಿಯಾಗಿ ಬಹು ಮನೆಗಳಲ್ಲಿ ಸೇವೆ ಮಾಡಿಕೊಂಡಿದ್ದಾಗ, ಯೌವನದಲ್ಲಿ ನಿನ್ನನ್ನು ಪಡೆದೆ. ನಿನ್ನ ಹೆಸರು ಸತ್ಯಕಾಮ. ನನ್ನ ಹೆಸರು ಜಬಾಲಾ. ಆದ್ದರಿಂದ ನೀನು ಸತ್ಯಕಾಮ ಜಾಬಾಲ. ಗುರುಗಳ ಮುಂದೆ ಇಷ್ಟನ್ನೇ ಹೇಳು" ಎಂದು ತಾಯಿ ಹೇಳಿದಳು. ನಿನ್ನ ಗೋತ್ರ ಯಾವುದು ಎಂದು ಗುರು ಕೇಳಿದಾಗ ಸತ್ಯಕಾಮ ಈ ಸಂಗತಿಯಿಷ್ಟು ಹೇಳಿದ. ಆಗ ಗೌತಮ ಗೋತ್ರದ ಹಾರಿದ್ರುಮತನೆಂಬ ಆ ಗುರು "ಬ್ರಾಹ್ಮಣನ ಲಕ್ಷಣವಾದ ಸತ್ಯವನ್ನು ಈ ಹುಡುಗ ಬಿಟ್ಟಿಲ್ಲ. ಬ್ರಾಹ್ಮಣನಲ್ಲದವನು ಹೀಗೆ ಹೇಳಲಾರ" ಎಂದು ಸತ್ಯಕಾಮನನ್ನು ಒಪ್ಪಿ ಶಿಷ್ಯನನ್ನಾಗಿ ಸ್ವೀಕರಿಸಿದ. ಇದು ಬಹು ಪ್ರಸಿದ್ಧವಾದ ಕತೆ. ವರ್ಣವು ಹುಟ್ಟಿನಿಂದಲ್ಲ, ಗುಣದಿಂದ ಎಂದು ತೋರಿಸುವ ಕತೆ. ನಿಜವೇ. ಇಲ್ಲದಿದ್ದರೆ ದಾಸಿಯ ಮಗ ಎಂಬ ಅಂಶ ಶೂದ್ರ ಲಕ್ಷಣದ ಕಡೆಗೆ ಕೈತೋರಿಸುತ್ತಿದ್ದರೂ, ಸತ್ಯಸಂಧ ಎಂಬ ಕಾರಣದಿಂದ ಸಂಸ್ಕಾರಕ್ಕೆ ಅರ್ಹನಾಗುತ್ತಿರಲಿಲ್ಲ.

ಆದರೆ ಗೋತ್ರ ಯಾವುದು? ಎಂದು ಗುರು ಏಕೆ ಪ್ರಶ್ನಿಸುತ್ತಾನೆ? ಶಂಕರರು "ವಿಜ್ಞಾತ ಕುಲಗೋತ್ರಃ ಶಿಷ್ಯಃ ಉಪನೇತವ್ಯಃ" ಎನ್ನುತ್ತಾರೆ. ಕುಲಗೋತ್ರಗಳನ್ನು ತಿಳಿದ ಮೇಲೆ ಶಿಷ್ಯನನ್ನಾಗಿ ಸ್ವೀಕರಿಸಿ ಉಪನಯನ ಸಂಸ್ಕಾರವನ್ನು ನೆರವೇರಿಸಲಾಗುತ್ತದೆ. ಅದಕ್ಕಾಗಿ "ಕಿಂ ಗೋತ್ರೋನು ಅಸಿ-ಸೋಮ್ಯ" ಯಾವ ಗೋತ್ರದವನು ಮಗು ನೀನು? ಎಂದು ಪ್ರಶ್ನೆ. ಇದು ಏನನ್ನು ಸೂಚಿಸುತ್ತದೆ? ಹುಟ್ಟನ್ನಲ್ಲವೆ? ಕುಲಗೋತ್ರಗಳು ತಿಳಿಯದ ಸಂದರ್ಭಗಳಲ್ಲಿ ಹುಟ್ಟು ದಾಸೀಪುತ್ರತ್ವವನ್ನು ಸೂಚಿಸುವಾಗಲೂ (ತಂದೆ ಯಾರೆಂದು ಗೊತ್ತಿಲ್ಲ) ನಡತೆಯ ಮೇಲಿನಿಂದ ವರ್ಣವನ್ನು ನಿರ್ಣಯಿಸಿದ್ದು ನಿಜ. ಆದರೆ ಬ್ರಾಹ್ಮಣನಲ್ಲದವನು ಹೀಗೆ ಸತ್ಯವನ್ನು ನುಡಿಯಲಾರ (ನೈತದ ಬ್ರಾಹ್ಮಣೋ ವಿವಕ್ತುಮರ್ಹತಿ) ಎನ್ನುವುದರ ಅಂತರಾರ್ಥವೇನು?

ನನಗನಿಸುತ್ತದೆ, ಗುಣ, ನಡತೆಗಳ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿದ್ದ ಕಾಲದಲ್ಲೂ 'ಹುಟ್ಟು' ಅಮುಖ್ಯವಾದರೂ ಇತರ ಸಂಗತಿಗಳ ಜತೆ ತಾನೂ ನಿರ್ಣಾಯಕ ಅಂಶವಾಗಿ ಇತ್ತು. ಅದು ಸಹಜವೇ. ಹುಟ್ಟು ತಿಳಿಯದ ಸಂದರ್ಭಗಳಲ್ಲಿ ಗುಣ-ಕರ್ಮಗಳ ಮೇಲಿನಿಂದ ತೀರ್ಮಾನಿಸುತ್ತಿದ್ದರು. ತಿಳಿದ ಸಂದರ್ಭಗಳಲ್ಲಿ ಹುಟ್ಟು ಮತ್ತು ಗುಣ-ಕರ್ಮಗಳಲ್ಲಿ ಅಸಾಂಗತ್ಯ ಬರದಂತೆ ಕಾಳಜಿ ವಹಿಸಲಾಗುತ್ತಿತ್ತು. ಉತ್ತರೋತ್ತರ, ಹುಟ್ಟು ತಾನೇ ಮುಖ್ಯವಾಗಿಬಿಟ್ಟಿತು.

ಈ ನೆಲೆಯಲ್ಲಿ, ಈ ಮುನ್ನ ಸೂಚಿಸಿದ ಮಹಾಭಾರತದ ವನಪರ್ವದ ಕತೆಯನ್ನು ನೋಡಿ. ಬ್ರಾಹ್ಮಣನು ಯಾರು? ಕ್ಷತ್ರಿಯ ಯಾರು? ಚಾತುರ್ವರ್ಣ್ಯವೆಂದರೇನು? ಎಂಬ ಪ್ರಶ್ನೆಗಳಿಗೆ, ಜಾತಿಗಳು ಪರಸ್ಪರ ಬೆರೆತು ಸಂಕರವಾಗಿರುವುದರಿಂದ ಈಗ 'ಗೋತ್ರ'ದಿಂದ ನಿರ್ಣಯಿಸಲು ಸಾಧ್ಯವಿಲ್ಲ; ಗುಣಕರ್ಮಗಳನ್ನು ನೋಡಿಯೇ ಬ್ರಾಹ್ಮಣ-ಕ್ಷತ್ರಿಯ ಇತ್ಯಾದಿ ಭೇದವನ್ನು ಗುರುತಿಸಬೇಕಷ್ಟೆ ಎನ್ನುತ್ತಾನೆ ಧರ್ಮರಾಯ. ಜೊತೆಗೆ, ಹೀಗೆ ಸಂಕರವಾಗುತ್ತಲೇ ಇರುತ್ತದೆ, ಅದು ಸ್ವಾಭಾವಿಕ ಎನ್ನುತ್ತಾನೆ. ಇದು ಬಹಳ ಕುತೂಹಲ ಹುಟ್ಟಿಸುವ ಸಂಗತಿ. ಇಲ್ಲೂ 'ಹುಟ್ಟಿ'ನ ನಿರ್ಣಾಯಕತೆ ಅಗೋಚರವಾಗಿಯಾದರೂ ಇದ್ದೇ ಇದೆ.

ಗೀತೆಯಲ್ಲಿ ಬರುವ 'ಸ್ವಧರ್ಮ' ಎಂಬ ಮಾತು ಸ್ವಭಾವ ಎಂಬರ್ಥದಲ್ಲಿಯೇ ಬಳಕೆಯಾಗುತ್ತದೆ. (ಸ್ವಧರ್ಮೇ ನಿಧನಂ ಶ್ರೇಯಃ ಇತ್ಯಾದಿ) ಅರ್ಜುನನಿಗೆ ಕ್ಷಾತ್ರವು ಸ್ವಧರ್ಮ. ಆದುದರಿಂದ ಅವನು ಹೋರಾಡುತ್ತ ಮಡಿದರೂ ಶ್ರೇಯಸ್ಸೇ. ನಿಜ. ಆದರೆ ಅರ್ಜುನ ಹುಟ್ಟಿನಿಂದಲೂ ಕ್ಷತ್ರಿಯನಾಗಿದ್ದನಲ್ಲ. ಈ ಕಾರಣದಿಂದ, ಗುಣಕರ್ಮಗಳ ನೆಲೆಯಲ್ಲಿ 'ಹುಟ್ಟು' ಕೃತಾರ್ಥವಾಗುವಂತೆ ಮೂವರು ಆಚಾರ್ಯರೂ ವಿಧಾನ ಮಾಡುತ್ತಾರೆ. ಅರ್ಜುನನಿಗೆ ಕೃಷ್ಣ ವಿಧಾನ ಮಾಡಿದ್ದೂ ಇದನ್ನೇ. ಇದೇ 'ಪಾಲನೆ'.

೭

ಬ್ರಹ್ಮಸೂತ್ರಗಳಲ್ಲಿ 'ಅಪಶೂದ್ರಾಧಿಕರಣ' ಎಂಬ ಐದು ಸೂತ್ರಗಳ ಅಧಿಕರಣವೊಂದಿದೆ. ಉಪನಿಷತ್ತಿನಲ್ಲಿ ಬರುವ 'ಶೂದ್ರ' ಪದದ ಅರ್ಥದ ಬಗ್ಗೆ ಚಿಂತನೆ ನಡೆಸುತ್ತ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆ ಎಂಬ ಜಿಜ್ಞಾಸೆ ಅಲ್ಲಿದೆ. ಶೂದ್ರನು ಏಕಜಾತಿ, ದ್ವಿಜ ಸಂಸ್ಕಾರವಿಲ್ಲದುದರಿಂದ, ವೇದಗಳ ಅಧ್ಯಯನವು ಪ್ರತಿಷಿದ್ಧವಾಗಿದೆ ಎಂದು ತೀರ್ಮಾನಿಸಿದರೂ, ವಿದುರ, ಧರ್ಮವ್ಯಾಧ ಮುಂತಾದ ಜ್ಞಾನಿಗಳನ್ನು ನೆನೆಸಿಕೊಂಡು, ಯಾರಿಗೆ ಪೂರ್ವಕೃತ ಸಂಸ್ಕಾರಗಳಿಂದಾಗಿ ಜ್ಞಾನವು ಲಭಿಸಿದೆಯೋ ಅವರಿಗೆ ಅದನ್ನು ಪ್ರತಿಷೇಧ ಮಾಡಲು ಸಾಧ್ಯವಿಲ್ಲ ಎಂದು ಎಲ್ಲ ಆಚಾರ್ಯರೂ ಹೇಳುತ್ತಾರೆ. ನಾಲ್ಕು ವರ್ಣದವರಿಗೂ ಶ್ರವಣ ಮಾಡಿಸುವುದಕ್ಕಾಗಿ (ಶ್ರಾವಯೇತ್ ಚತುರೋವರ್ಣಾನ್) ಇತಿಹಾಸ, ಪುರಾಣಗಳಿವೆ. ಇವುಗಳ ಶ್ರವಣಾಧ್ಯಯನಗಳಿಂದಲೂ ಜ್ಞಾನ ಉಂಟಾಗಬಹುದು. ಈ ಹಿನ್ನೆಲೆಯಲ್ಲಿ ರಾಮಾನುಜರು ದ್ರಾವಿಡ ದಿವ್ಯಪ್ರಬಂಧಗಳನ್ನು ವೇದ ತುಲ್ಯವಾಗಿ, ಪ್ರಮಾಣವಾಗಿ ಸ್ವೀಕರಿಸಿದ್ದು ಅರ್ಥಪೂರ್ಣವಾಗಿದೆ. ಇದು ಒಂದು ರೀತಿಯಲ್ಲಿ ವರ್ಣದ ವಿಸ್ತಾರ. ವರ್ಣದ ಎರಡು ಅರ್ಥಗಳಲ್ಲಿಯೂ ರಾಮಾನುಜರ ಜೀವನದಲ್ಲಿಯೂ ಇಂಥ ಘಟನೆಗಳೂ ಬಂದಿವೆ. ಹಾಗೆಯೇ ಮಧ್ವರು ಮುಸ್ಲಿಂ ನವಾಬನೊಡನೆ ನಾವಿಬ್ಬರೂ ಪೂಜಿಸುವ ದೇವರು ಒಬ್ಬನೇ ಎಂದದ್ದು ಮತ್ತು ಅವರ "ಯಸ್ಸಊಹಾ ವೇದಮನುಸರತಿ ಸಃ ತ್ಯಕ್ತ ವೈದಿಕಃ" (ಯಾರ ಊಹಾಪ್ರತಿಭೆ ವೇದಾನುಸಾರಿಯಾಗಿದೆಯೋ ಅವನನ್ನು ವೇದತ್ಯಾಗಿ ಎಂದು ಕರೆಯಬಹುದು) ಎಂಬ ಪ್ರಚಂಡವಾದ ಮಾತು ವರ್ಣ ವಿಸ್ತಾರವೇ ಆಗಿದೆ. ಇಲ್ಲಿ 'ವೇದತ್ಯಾಗಿ' ಎಂದರೆ ದೊಡ್ಡ ಪ್ರಶಂಸೆ. ವೇದಾಧಿಕಾರಿಗಳಲ್ಲ ಎಂದು ಕರೆದ ಶೂದ್ರರಲ್ಲಿ ಇಂಥ 'ವೇದತ್ಯಾಗಿ'ಗಳು ಇದ್ದಾರೆ ಎಂಬುದು ಆಚಾರ್ಯರೆಲ್ಲರ ಗಮನಕ್ಕೆ ಬಂದಿದೆ. ಹಾಗಾಗಿಯೇ ಮೇಲೆ ಹೇಳಿದ ಸೂತ್ರದ ವ್ಯಾಖ್ಯಾನ ಸಂದರ್ಭದಲ್ಲಿ ವಿದುರ, ಧರ್ಮವ್ಯಾಧರ ಉಲ್ಲೇಖ ಬಂದಿರುವುದು.

ಒಟ್ಟಿನಲ್ಲಿ ವರ್ಣ ವ್ಯವಸ್ಥೆಯ ಚರಿತ್ರೆ, ಸಂಕೋಚ ಮತ್ತು ವಿಕಾಸಗಳು, ಮುರಿಯುವಿಕೆ ಮತ್ತು ಕಟ್ಟುವಿಕೆಗಳು ನಡೆಯುತ್ತ ಹೋದ ಚರಿತ್ರೆ. ಇದರ ಒಂದು ತುದಿಯಲ್ಲಿ ಸಂಸಾರ ಚಕ್ರವನ್ನು ಮೀರುವ 'ಆಧ್ಯಾತ್ಮ' ಇದ್ದರೆ ಇನ್ನೊಂದು ತುದಿಯಲ್ಲಿ 'ಹುಟ್ಟು' ಇದೆ. 'ವ್ಯಕ್ತಮಧ್ಯ'ವನ್ನು ಮಾತ್ರ ನೋಡಿದರೆ 'ಹುಟ್ಟು' ಕಂಗೆಡಿಸುತ್ತದೆ. ಹಾಗೆಂದು ನೋಡದೆ ಇರುವಂತಿಲ್ಲವಲ್ಲ. 'ವ್ಯಕ್ತಮಧ್ಯ' ಎಂಬ ಅರಿವು ಬರುವುದೂ ಹುಟ್ಟಿನ ಕೊಡುಗೆಯೋ? ಈ ಎಲ್ಲ ಸಂಕಟಗಳೂ, ಪಾಡು, ಕನಕದಾಸರಲ್ಲಿ ಹಾಡಾಗಿ ಹುದಿದೆ.

●

ವಚನ ಸಂಸ್ಕೃತಿ ಮತ್ತು ಜಾತಿ ವಿನಾಶ

ಟಿ.ಆರ್. ಚಂದ್ರಶೇಖರ

೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಒಡಮೂಡಿದ ವಚನ ಸಂಸ್ಕೃತಿಯು ಏಕಾಕಾರಿಯೂ, ಏಕಮುಖಿಯೂ ಆದ ಒಂದು ಪ್ರಕ್ರಿಯೆಯಾಗಿರಲಿಲ್ಲ. ಅದರ ಧಾರ್ಮಿಕ ಆಯಾಮವು ಎಷ್ಟು ಮುಖ್ಯವಾದುದೊ ಅಷ್ಟೇ ಮಹತ್ವವು ಅದರ ಸಮಾಜಿಕ ಸ್ವರೂಪಕ್ಕೂ ಇದೆ. ಸಾಮಾಜಿಕ ಏಣಿ–ಶ್ರೇಣಿ ಹಾಗೂ ಸಾಂಸ್ಕೃತಿಕ ಮೇಲು–ಕೀಳು, ಜೇಷ್ಠ–ಕನಿಷ್ಠಗಳಿಗೆ ಕಾರಣವೂ, ಆಧಾರವೂ ಆಗಿದ್ದ ಜಾತಿ ಪದ್ಧತಿ, ಚಾತುರ್ವರ್ಣ ಪದ್ಧತಿಯನ್ನೂ ವಚನ ಸಂಸ್ಕೃತಿಯು ನೇರವಾಗಿ ಪ್ರಜ್ಞಾಪೂರ್ವಕವಾಗಿ ತಿರಸ್ಕರಿಸಿತು. ಆದರೆ ಇದು ಇನ್ನೊಂದು ಬಗೆಯ 'ಭಕ್ತ–ಭವಿ' ಎಂಬ ವಿಭಜನೆ ಸೃಷ್ಟಿಸಿದ್ದೂ ಅಷ್ಟೇ ಸತ್ಯ. ಸೂತಕ, ಮುಟ್ಟು, ಮೈಲಿಗೆ ಮುಂತಾದ ಸಂಕೋಲೆಗಳಲ್ಲಿ ಬಂಧಿಯಾಗಿದ್ದ ಹೆಣ್ಣನ್ನು ಬಿಡುಗಡೆಗೊಳಿಸಿದ ವಚನ ಸಂಸ್ಕೃತಿಯು 'ವ್ರತಾಚಾರ'ವೆಂಬ ತನ್ನದೇ ಆದ 'ಗೊತ್ತು'ಗಳನ್ನು ಅವಳ ಮೇಲೆ ವಿಧಿಸಿತು. ವಚನ ಸಂಸ್ಕೃತಿಯು ರೂಪಿಸಿದ್ದು ಆಂದೋಲನವು ಸಮಷ್ಟಿಯೂ, ಸಮಾಜ ಮುಖಿಯೂ ಆಗಿ ಮತ್ತು ಅಷ್ಟೇ ಗಂಭೀರವಾದ ರೀತಿಯಲ್ಲಿ ವ್ಯಕ್ತಿವಾದಿ ನೆಲೆಗಳನ್ನು ಹೊಂದಿತ್ತು. ಕೆಲವೊಂದು ಸುಂದರ್ಭದಲ್ಲಿ ವಚನ ಸುಂಸ್ಕೃತಿಯು 'ಅರಾಜಕ' ಪ್ರವೃತ್ತಿಯನ್ನೂ ವ್ಯಕ್ತಪಡಿಸಿತು.

ಅನುಭಾವವನ್ನೂ, ಪರಲೋಕ ಚಿಂತನೆಯನ್ನೂ ಪ್ರತಿಪಾದಿಸಿದ ವಚನ ಸಂಸ್ಕೃತಿಯು ಅಷ್ಟೇ ತೀವ್ರವಾಗಿ ಅನುರಕ್ತಭಾವವನ್ನೂ, ಲೌಕಿಕವನ್ನೂ, ಸಂಸಾರ ಸಾರಾಯವನ್ನೂ ಸಹ ತಬ್ಬಿಕೊಂಡಿತ್ತು. ಸಂಸಾರವನ್ನು 'ಹೇಯ', 'ಬಲೆ', 'ಗಾಳಿಯ ಸೊಡರು' ಎಂದೆಲ್ಲಾ ವೈರಾಗ್ಯವನ್ನು ಹೇಳುತ್ತಲೇ ಅದು 'ಸಂಸಾರವ ಸವೆಸ ಬಳಸುವೆನು' ಎಂದೂ 'ಪ್ರಸಾದ ಕಾಯವ ಕೆಡಿಸಲಾಗದು' ಎಂದೂ ಹೇಳಿತು. ಮಾಂಸಾಹಾರ, ಪ್ರಾಣಿ ಬಲಿಗಳನ್ನು ತಿರಸ್ಕರಿಸಿದ ವಚನ ಸಂಸ್ಕೃತಿಯು ಮಾಂಸಾಹಾರಿಗಳನ್ನೂ, ಪ್ರಾಣಿ ಬಲಿ ನೀಡುವವರನ್ನೂ ಶರಣ ಸಂವಿಧಾನ'ದೊಳಗೆ ಸೇರಿಸಿಕೊಂಡಿತು.

ಒಟ್ಟಂದದಲ್ಲಿ ವಚನ ಸಂಸ್ಕೃತಿಯು ಸೂಕ್ಷ್ಮವೂ, ಸಂಕೀರ್ಣವೂ, ಬಹುಮುಖಿಯೂ, ಬಹು ಸ್ತರೀಯವೂ ಆದ ಒಂದು ಆಂದೋಳನ ವಾಗಿತ್ತು. ಆದರೆ ವಚನ ಸಂಸ್ಕೃತಿ ಕುರಿತ ರೂಢಿಗತ ಅಧ್ಯಯನಗಳು ಅದನ್ನು ಏಕಾಕಾರಿ, ಏಕೀಕೃತ, ಏಕಮುಖಿ ನೆಲೆಯಲ್ಲಿ ಪರಿಭಾವಿಸಿಕೊಂಡೇ ಅನುಸಂಧಾನ ನಡೆಸಿದವು. ಈ ಪ್ರಬಂಧದಲ್ಲಿ 'ಜಾತಿ ವಿನಾಶ' ಹಾಗೂ 'ಲಿಂಗ ತಾರತಮ್ಯ' ಕುರಿತ ವಚನ ಸಂಸ್ಕೃತಿಯ ವಿಚಾರಗಳನ್ನು ಗತಿಶೀಲ ನೆಲೆಯಲ್ಲೂ, ಬಹುಮುಖಿ ನೆಲೆಯಲ್ಲೂ ಪರಾಂಬರಿಸಲು ಪ್ರಯತ್ನಿಸಲಾಗಿದೆ. ವಚನ ಸಂಸ್ಕೃತಿಯ ಜಾತಿ ವಿನಾಶ ನೆಲೆಗಳು ತೀವ್ರ ಸ್ವರೂಪದ ವೈರುಧ್ಯ–ವೈದೃಶ್ಯಗಳಿಂದ ಕೂಡಿದ್ದವು. ವಚನ ಸಂಸ್ಕೃತಿಯ ಜಾತಿವಿನಾಶ ನೆಲೆಗಳಲ್ಲಿ, ಧೋರಣೆಗಳಲ್ಲಿ ಅಪಸ್ವರ–ಭಿನ್ನಮತಗಳು ಇದ್ದುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ರೂಢಿಗತ ಅಧ್ಯಯನಗಳಲ್ಲಿ ವಚನ ಸಂಸ್ಕೃತಿಯ ಜಾತಿವಿನಾಶ ನೆಲೆಗಳನ್ನು ವೈಭವೀಕರಿಸಲಾಗಿದೆ. ವಚನ ಸಂಸ್ಕೃತಿಯ ಜಾತಿವಿನಾಶ ನೆಲೆಗಳೂ, ಅದಕ್ಕೆ ಸಂಬಂಧಿಸಿದ ವಿಚಾರಗಳೂ ಅದ್ಬುತವಾಗಿದ್ದವು ಎಂಬುದರ ಬಗ್ಗೆ ಎರಡನೇ ಮಾತು ಸಾಧ್ಯವಿಲ್ಲ. ಆದರೆ ಅಲ್ಲಿದ್ದ ಜಾತಿ ವಿನಾಶ ಹಾಗೂ ಲಿಂಗತಾರತಮ್ಯ ಕುರಿತ ಅಪಸ್ವರ–ಭಿನ್ನಮತಗಳನ್ನು ಗುರುತಿಸದಿದ್ದರೆ ನಾವು ವಚನ ಸಂಸ್ಕೃತಿಗೆ ಅನ್ಯಾಯಮಾಡಿದಂತಾಗುತ್ತದೆ.

ಸೂತಕದ ಪ್ರಮೇಯ:

ವೈದಿಕ ಸಂಸ್ಕೃತಿ ರೂಪಿಸಿದ್ದ ವಿಧಿ–ನಿಷೇಧಗಳಲ್ಲಿ ಬಹುಮುಖ್ಯ ವಾದವುಗಳು ಜಾತಿ ಸೂತಕ ಹಾಗೂ ವರ್ಣಸಂಕರ, ವೈದಿಕ ಸಂಸ್ಕೃತಿ ಪ್ರತೀತಿಗೊಳಿಸಿದ್ದ 'ಧರ್ಮಕಾರಣ'ದಲ್ಲಿ 'ಪವಿತ್ರ–ಅಪವಿತ್ರ', 'ಶುದ್ಧ–ಅಶುದ್ಧ', ಸ್ಪರ್ಶ್ಯ–ಅಸ್ಪರ್ಶ್ಯ', ಮುಂತಾದವುಗಳಿಗೆ ತುಂಬಾ ಮಹತ್ವವಿತ್ತು. ವೈದಿಕ ಸಂಸ್ಕೃತಿಯಲ್ಲಿ ಸ್ಪರ್ಶ್ಯ–ಅಸ್ಪರ್ಶ್ಯ, ಪವಿತ್ರತೆ–ಅಪವಿತ್ರತೆಗಳು ಹುಟ್ಟಿನಿಂದ ಪ್ರಾಪ್ತವಾಗುವ ಗುಣಗಳಾಗಿದ್ದವು.

ಬಸವಣ್ಣನು ಶರಣರನ್ನು 'ಜಾತಿ ಸಂಕರರು' ಎಂದು ಕರೆದರೆ, ಸಿದ್ಧರಾಮನು ಅವರನ್ನು 'ವರ್ಣಾತೀತರು' ಎಂದು ಕರೆದಿದ್ದಾನೆ. ಅಲ್ಲಮನು 'ಜಾತಿ, ವರ್ಣ, ಪಂಚಸೂತಕ'ಗಳಿಂದ ಮುಕ್ತರಾದವರೇ ಶರಣರು ಎನ್ನುತ್ತಾನೆ:

ಆವಕುಲವಾದನು? ಶಿವಲಿಂಗವಿದ್ದವನೆ ಕುಲಜನಡೆ.
ಕುಲವನರಸುವರೆ ಶರಣನಲ್ಲಿ, ಜಾತಿ ಸಂಕರನಾದ ಬಳಿಕ?

ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
ಕೂಡಲ ಸಂಗಮದೇವಾ ನಂಬುವೆ ನಿಮ್ಮ ಶರಣರನು.

(೧;೭೧೮)

ದಲಿತ ಶರಣರ ಜೊತೆ ತನ್ನ ಕಳ್ಳು–ಬಳ್ಳಿ ಸಂಬಂಧ ಸ್ಥಾಪಿಸಿಕೊಳ್ಳುವ ಪ್ರಯತ್ನದಲ್ಲಿ ಬಸವಣ್ಣನು ತನ್ನನ್ನು ತನ್ನ ಜಾತಿ ಹೊರೆಯಿಂದ ಬಿಡುಗಡೆಗೊಳಿಸಿಕೊಳ್ಳಲು ಹವಣಿಸುವುದು ಕಾಣುತ್ತದೆ.

ಚನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು

ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ
ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿ ಮಗ ನಾನು
ಕೂಡಲ ಸಂಗಮ ದೇವ ಸಾಕ್ಷಿಯಾಗಿ.

(೧;೩೪೬)

ಬಸವಣ್ಣನು ಪ್ರಜ್ಞಾ–ಪೂರ್ವಕವಾಗಿ ತನ್ನನ್ನು ತಾನು ಸೂತಕ–ಸಂಕರಗಳಿಗೆ ಒಡ್ಡಿಕೊಳ್ಳುವುದರ ಮೂಲಕ ಅವುಗಳನ್ನು ಮೀರಲು ಪ್ರಯತ್ನಿಸುತ್ತಿದ್ದಾನೆ. ಅಪವಿತ್ರತೆಗೆ ಒಳಗಾಗುತ್ತಲೇ ಅಪವಿತ್ರತೆಯನ್ನು ಕಳೆದುಕೊಳ್ಳುವ ಬಗೆ ಇದು. ಅಲ್ಲಮನೂ ಈ ವಿಧಾನವನ್ನು ಅನುಸರಿಸಿದ್ದಾನೆ ವೈದಿಕ ಸಂಸ್ಕೃತಿಯಲ್ಲಿ ಎಂಜಲು, ಉಟ್ಟ ಬಟ್ಟೆ– ಹಳೆಬಟ್ಟೆ, ಪಾದರಕ್ಷೆ ಮುಂತಾದವುಗಳು ಮೈಲಿಗೆಯ ಸಂಕೇತಗಳು. ಈ ಮೈಲಿಗೆಯ ಸಂಕೇತಗಳನ್ನು ಆಚರಿಸುತ್ತಲೇ ಅವುಗಳಿಗೆ ವಚನ ಸಂಸ್ಕೃತಿಯು ಮಾನವೀಯ ಘನತೆಯನ್ನು ಒದಗಿಸಿತು. ವೈದಿಕ ಸಂಸ್ಕೃತಿಯ, ಜಾತಿ ವ್ಯವಸ್ಥೆ–ವರ್ಣ ವ್ಯವಸ್ಥೆಗಳ ಮೂಲಕ್ಕೆ ವಚನ ಸಂಸ್ಕೃತಿಯು ಇಟ್ಟ ಬಾಂಬು ಅದಾಗಿತ್ತು:

ಅವನಾದಡೇನು? ಮಹಾದೇವನ ನೆನೆವನ
ಬಾಯ ತಂಬುಲವ ಮೆಲುವೆ, ಬೀಳುಡುಗೆಯ ಹೊದೆವೆ.
ಪಾದರಕ್ಷೆಯ ಕಾಯ್ದು ಬದುಕುವೆ
ಕೂಡಲ ಸಂಗಮದೇವ

(೧; ೪೬೪)

ಇದೇ ವಿಷಯ ಕುರಿತ ಅಲ್ಲಮನ ವಚನ ಹೀಗಿದೆ:

ಆವ ಜಾತಿಯಾದರೂ ಆಗಲಿ ಪುರಾತನರ ಚಾರಿತ್ರದಲ್ಲಿ ನಡೆದು
ಗುರುಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವ ಕೊಟ್ಟು
ಅಹಂಕಾರ ಅಳಿದಂಥ ಮಹಾತ್ಮರ
ಬಾಯ ತಂಬುಲವ ಮೆಲುವೆ, ಬೀಳುಡುಗೆಯ ಹೊದಿವೆ
ಅವರ ಪಾದರಕ್ಷೆಗಳೆರಡನ್ನೂ
ತಲೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯಾ
ಆ ಗಣಂಗಳ ದಾಸನ ದಾಸ ನಾನು,
ಜನ್ಮ ಜನ್ಮದಲ್ಲಿ ಆಗುವೆ ಕಾಣಾ ಗುಹೇಶ್ವರಾ

(೨; ೯೨೦)

ಮೇಲಿನ ಬಸವ ಮತ್ತು ಅಲ್ಲಮ–ಇವರುಗಳ ವಚನಗಳ ನಡುವೆ ಇರುವ ಸಾಮ್ಯತೆಗಳನ್ನು ವಿವರಿಸುವ ಅಗತ್ಯವಿಲ್ಲ. ಇವೆರಡೂ ವಚನಗಳ ಸಂದೇಶವೂ ಒಂದೇ ಆಗಿದೆ. ಮೇಲು–ಕೀಳು, ಉಚ್ಚ–ನೀಚ, ಪವಿತ್ರ–ಅಪವಿತ್ರ, ಮಡಿ–ಮೈಲಿಗೆಗಳಿಗೆ ಕಾರಣವಾಗಿದ್ದ ದ್ವಂದ್ವಗಳ ಆಚರಣೆಯಲ್ಲಿ ಜಾತಿ ವ್ಯವಸ್ಥೆಯು ಧಿಕ್ಕಾರಕ್ಕೆ ಒಳಗಾಗಿದೆ.

ಬೀಜ ಮತ್ತು ಕ್ಷೇತ್ರ ಸಿದ್ಧಾಂತ:

ರಕ್ತ–ಕಾಲ ಸಂಬಂಧಗಳ ಚೌಕಟ್ಟಿನೊಳಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸುವುದು ಜಾತಿ ವ್ಯವಸ್ಥೆಯ ಬಹುಮುಖ್ಯ ಲಕ್ಷಣವಾಗಿದೆ. ಜಾತಿ ವ್ಯವಸ್ಥೆಯಲ್ಲಿ ಪಾವಿತ್ರತೆಯನ್ನು ಪಾಲಿಸುವ ಜವಾಬ್ದಾರಿಯನ್ನು ಹೆಣ್ಣಿನ ಮೇಲೆ ಹೇರಲಾಗಿದೆ. ಜಾತಿ ವ್ಯವಸ್ಥೆ ಹಾಗೂ ಲಿಂಗತಾರತಮ್ಯಗಳು ಅಭಿನ್ನವಾಗಿರುತ್ತವೆ. ಉತ್ತಮ ಕುಲದ ಬೀಜವು ಕೀಳು ಕುಲದ ಕ್ಷೇತ್ರದಲ್ಲಿ ಬಿತ್ತನೆಗೆ ವೈದಿಕ ಸಂಸ್ಕೃತಿಯು ಅನುವು ಮಾಡಿಕೊಟ್ಟಿತು. ಆದರೆ ಕೀಳು ಕುಲದ ಬೀಜವನ್ನು ಉತ್ತಮ ಕುಲದ ಕ್ಷೇತ್ರದಲ್ಲಿ ಬಿತ್ತಲು ವೈದಿಕತೆಯು ನಿಷೇಧ ಹೇರಿತ್ತು. ಹೀಗೆ ವೈದಿಕತೆಯು ಸಾಮಾಜಿಕ ಹಾಗೂ ಲಿಂಗ ಸಂಬಂಧ–ಇವೆರಡೂ ನೆಲೆಗಳಲ್ಲಿ ಏಣಿ–ಶ್ರೇಣಿಗಳನ್ನು ನಿರ್ಮಿಸಿತ್ತು. ಈ ಬೀಜ–ಕ್ಷೇತ್ರ ಸಿದ್ಧಾಂತ ರೂಪಿಸಿದ್ದ ಏಣಿ ಶ್ರೇಣಿ ವ್ಯವಸ್ಥೆಯನ್ನು ವಚನ ಸಂಸ್ಕೃತಿಯು ತಲೆ ಕೆಳಗು ಮಾಡಿತು. ಬೀಜ–ಕ್ಷೇತ್ರ ಸಿದ್ಧಾಂತದೊಳಗೆ ಅಂತರ್ಗತವಾಗಿದ್ದ ಲಿಂಗತಾರತಮ್ಯ ಸ್ಪಷ್ಟವಾಗಿತ್ತು. ಈ ಬೀಜ–ಕ್ಷೇತ್ರ ನಿಯಮವನ್ನು ತಲೆಕೆಳಗು ಮಾಡುವುದರ ಮೂಲಕ ವಚನ ಸಂಸ್ಕೃತಿಯು ಜಾತಿ ವ್ಯವಸ್ಥೆ ಹಾಗೂ ಲಿಂಗ ತಾರತಮ್ಯಗಳೆರಡನ್ನೂ ಏಕ ಕಾಲಕ್ಕೆ ಧಿಕ್ಕರಿಸಿತು. ರೂಢಿಗತ ಅಧ್ಯಯನಗಳಲ್ಲಿ ಜಾತಿ ವ್ಯವಸ್ಥೆಯ ಲಿಂಗವಾರು ನೆಲೆಗಳನ್ನು ನಿರ್ಲಕ್ಷಿಸಲಾಗಿದೆ.

ವಚನ ಸಂಸ್ಕೃತಿಗೆ ಸಂಬಂಧಿಸಿದಂತೆ ಕೂಡ ಜಾತಿ ವಿನಾಶ ಹಾಗೂ ಹೆಣ್ಣಿನ ಬಿಡುಗಡೆಗಳೆರಡೂ ಅಭಿನ್ನವಾಗಿದ್ದವು ಎಂಬುದನ್ನು ನಾವು ಗುರುತಿಸಬೇಕಾಗಿದೆ. ಈ ದೃಷ್ಟಿಯಿಂದ ಬಸವಣ್ಣನ ಈ ವಚನವು ತುಂಬಾ ಮುಖ್ಯವಾದುದಾಗಿದೆ.

ಆವಕುಲವಾದಡೇನು?
ಶಿವಲಿಂಗವಿದ್ದವನೆ ಕುಲಜನು.
ಕುಲವನರಸುವರೆ ಶರಣನಲ್ಲಿ, ಜಾತಿ ಸಂಕರನಾದ ಬಳಿಕ?
॥ಶಿವಧರ್ಮ ಕುಲೇಜಾತಃ ಪುನರ್ಜನ್ಮ ವಿವರ್ಜಿತಃ
ಉಮಾ ಮಾತಾ ಪಿತಾರುದ್ರ ಐಶ್ವರಂ ಕುಲವೇ ವಚನ॥
ಎಂಬುದಾಗಿ
ಒಕ್ಕುದ ಕೊಂಬೆನವರಲ್ಲಿ, ಕೂಸಕೊಡುವೆ.
ಕೂಡಲಸಂಗಮದೇವಾ ನಂಬುವೆ ನಿಮ್ಮ ಶರಣರನು.

(೧; ೭೧೮)

ವಚನ ಸಂಸ್ಕೃತಿಯು ಕೇವಲ ಉಚ್ಚಿಷ್ಟ ಸೂತಕ, ರಜಸ್ಸೂತಕ, ಮೈಲಿಗೆಗಳ ನಿವಾರಣೆಯಷ್ಟಕ್ಕೆ ನಿಲ್ಲಲಿಲ್ಲ. ಮುಂದುವರಿದು ಜಾತಿ ಸಂಕರರಾದ ಶಿವಶರಣರಲ್ಲಿ ಕೊಡು–ಕೊಳುವ, ರಕ್ತ ಸಂಬಂಧ ಬೆಳೆಸುವ ನೆಲೆಗೂ ವಚನ ಸಂಸ್ಕೃತಿ ಲಗ್ಗೆ ಹಾಕಿತು. ಹೀಗೆ ಬೀಜ–ಕ್ಷೇತ್ರ ಸಿದ್ಧಾಂತವನ್ನು ವಚನ ಸಂಸ್ಕೃತಿ ದಿಕ್ಕುಗೆಡಿಸಿತು.

ಲಿಂಗ ಸಂಬಂಧದ ಬಗ್ಗೆ ಸಂಪ್ರದಾಯಿಕವಾಗಿ ಹುದುಕೊಂಡು ಬಂದಿದ್ದ ಆಕೃತಿಗೆ ಭಿನ್ನವಾದ ಆಕೃತಿಯನ್ನು ವಚನ ಸಂಸ್ಕೃತಿ ಮುಂದಿಟ್ಟಿತು. ಈ ಬದಲಾದ ಲಿಂಗ ಸಂಬಂಧದ ಚಿತ್ರ ಕೆಳಗಿನ ವಚನದಲ್ಲಿ ಅತ್ಯಂತ ಸ್ಪಷ್ಟವಾಗಿ ಮೂಡಿ ಬಂದಿದೆ:

ಎಲ್ಲರ ಹೆಂಡಿರು ತೊಳಸಿಕ್ಕುವರು;
ಎನ್ನ ಗಂಡಂಗೆ ತೊಳಸುವುದಿಲ್ಲ;
ಎಲ್ಲರ ಗಂಡಂದಿರಿಗೆ ಬಸಿವರು;
ಎನ್ನ ಗಂಡಂಗೆ ಬಸಿವುದಿಲ್ಲ;
ಎಲ್ಲ ಗಂಡಂದಿರಿಗೆ ಬೀಜವುಂಟು;
ಎನ್ನರ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ
ಎನ್ನ ಗಂಡ ಕೆಳಗೆ, ನಾಮೇಲೆ
ಕದಿರ ರೆಮ್ಮೆಯೊಡೆಯ ಗುಮ್ಮೇಶ್ವರಾ.

(೫; ೬೬೪)

ಶಿವಶರಣೆ ರೆಮ್ಮವ್ವೆಯು ಸಂಪ್ರದಾಯಿಕವಾಗಿ ನೆಲೆಗೊಂಡಿದ್ದ ಗಂಡಿನ ಪ್ರಧಾನ ಸ್ಥಾನವನ್ನೂ, ಹೆಣ್ಣಿನ ಅಧೀನ ಸ್ಥಾನವನ್ನೂ ವಚನ ಸಂಸ್ಕೃತಿಯು ಹೇಗೆ ತಲೆ ಕೆಳಗು ಮಾಡಿದೆ ಎಂಬುದು ಮೇಲಿನ ವಚನದಲ್ಲಿ

ಸ್ಪಷ್ಟಪಡಿಸಿದ್ದಾಳೆ. ವಂಶೋದ್ಧಾರ, ಸಂತಾನ, ಗಂಡನ ಸೇವೆಗಳೇ ಹೆಣ್ಣಿನ ಜೀವನದ ಸಾರ್ಥಕ್ಯದ ನೆಲೆಗಳಲ್ಲ, ಅದನ್ನು ಮೀರಿದ್ದು ಇದೆ. ಹೆಣ್ಣು ಈಗ ಅಧೀನಳಾಗಿ ಉಳಿಯುವುದಿಲ್ಲ. ಅವಳೇ ಪ್ರಧಾನಳಾಗುತ್ತಾಳೆ.

ಜಾತಿ ವಿನಾಶ; ಜಾತಿ ಸಂಕರ: ಅಪಸ್ವರ–ಭಿನ್ನಮತ

ಜಾತಿ ವಿನಾಶದ ಬಗ್ಗೆ ವಚನ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದ ಅಪಸ್ವರ–ಭಿನ್ನಮತ ಕುರಿತಂತೆ ಎರಡು ಧಾರೆಗಳನ್ನು ಗುರುತಿಸಬಹುದು.
೧) ೧೨ನೇ ಶತಮಾನದಲ್ಲಿ ವಚನ ಸಂಸ್ಕೃತಿಯ ಮೂಲದಲ್ಲೇ ಇದ್ದ ಅಪಸ್ವರ–ಭಿನ್ನಮತ–ಒಂದು ಧಾರೆ.
೨) ೧೨ನೇ ಶತಮಾನದ ನಂತರದ ಕಾಲಘಟ್ಟಗಳಲ್ಲಿ ವಚನ ಸಂಸ್ಕೃತಿಯ ಜಾತಿ ವಿನಾಶ ನೆಲೆಗಳು ವಿಕೃತಗೊಂಡುದುದು–ಎರಡನೇ ಧಾರೆ.

ಮೊದಲ ಧಾರೆ: ಚನ್ನಬಸವಣ್ಣನ ಭಿನ್ನಮತ

ಸಮಾಜದಲ್ಲಿ ಅಸ್ಪೃಶ್ಯರೆಂದೂ, ಅವರ್ಣೀಯರೆಂದೂ ತಿರಸ್ಕಾರಕ್ಕೆ, ತುಳಿತಕ್ಕೆ ಒಳಗಾಗಿದ್ದ ಕೆಳಜಾತಿ–ಕೆಳವರ್ಗಗಳ ಶರಣರ ಜೊತೆ ತನ್ನನ್ನು ತಾನು ಸಮೀಕರಿಸಿಕೊಂಡು ಜಾತಿ ವಿನಾಶದ ಬಗ್ಗೆ ಸ್ಪಷ್ಟ ನಿಲುವು ತಳೆದಿದ್ದ ಬಸವಣ್ಣ ನಡೆಸಿದ ಪ್ರಯೋಗವು ನಿಜಕ್ಕೂ ಅದ್ಭುತವಾದುದು. ಇವರನ್ನೆಲ್ಲಾ ಶರಣ ಸಂವಿಧಾನದೊಳಗೆ ಸೇರಿಸಿಕೊಂಡಿದ್ದು ವಚನ ಸಂಸ್ಕೃತಿಯ ಹಿರಿದಾದ ಸಾಧನೆಯಾಗಿದೆ.

ಕೆಳಜಾತಿ–ವರ್ಗಗಳಿಗೆ ಅಂಟಿಸಲಾಗಿದ್ದ ಮಾಂಸಾಹಾರ ಹಾಗೂ ಪ್ರಾಣಿ ಬಲಿಗಳನ್ನೂ ವಚನ ಸಂಸ್ಕೃತಿಯು ತಿರಸ್ಕರಿಸಿದ್ದು ಸರಿಯಷ್ಟೆ. ಆದರೆ ಮಾಂಸಾಹಾರ ಮತ್ತು ಪ್ರಾಣಿಬಲಿ ನೀಡುವವರನ್ನೂ ವಚನ ಸಂಸ್ಕೃತಿಯು ತನ್ನೊಳಗೆ ಸೇರಿಸಿಕೊಂಡಿತು:

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ
ಅವರ ಲಿಂಗವೆಂಬೆ, ಸಂಗವೆಂಬೆ
ಕೂಡಲ ಸಂಗಮ ದೇವಾ
ಅವರ ಮುಖಲಿಂಗಿಗಳೆಂಬೆ

(೧; ೭೨೦)

ಆದರೆ ಚನ್ನ ಬಸವಣ್ಣ ಕೆಳಜಾತಿಯಿಂದ ಪರಿವರ್ತಿತರಾಗಿ ಬಂದು ಶರಣರಾದ ವರ್ಗದ ಬಗ್ಗೆ ತನ್ನ ಸಂದೇಹ–ಶಂಕೆಗಳನ್ನು ವ್ಯಕ್ತಪಡಿಸಿದ್ದಾನೆ. ಕೆಳಜಾತಿ ವರ್ಗಗಳಿಂದ ಬಂದು ಭಕ್ತರು–ಶರಣರು ಆದವರಿಗೆ ತಮ್ಮ ಪೂರ್ವಾಶ್ರಮದ ಆಚರಣೆ–ಸಂಪ್ರದಾಯಗಳನ್ನು ವಿಧಿ, ಆಚರಣೆಗಳನ್ನು ಬಿಟ್ಟು ಕೊಡುವುದು ಅಶಕ್ಯವೆಂಬುದು ಚನ್ನ ಬಸವಣ್ಣನ ನಂಬಿಕೆಯಾಗಿದೆ. ಆದರೆ ಅಂಥವರು ಭಕ್ತರು–ಶರಣರು ಆಗಬೇಕಾದರೆ ಅವರಿಗೆ ಕಾಲದ ಗಡುವು–ಪ್ರವೇಶ ಪರೀಕ್ಷೆಗಳನ್ನು ಚನ್ನಬಸವಣ್ಣ ನಿಯಮಿಸುತ್ತಾನೆ. ವಚನ ಸಂಸ್ಕೃತಿಗೊಂದು ಸಂಹಿತೆಯನ್ನು, ವಿಧಿ–ನಿಷೇಧಗಳನ್ನು ಚನ್ನ ಬಸವಣ್ಣ ರೂಪಿಸುತ್ತಾನೆ. ಮುಕ್ತ ಸಂಸ್ಕೃತಿಯೊಂದು 'ಸಂಘಟಿತ ಧರ್ಮ'ವಾದ ಬಗೆ ಇದು:

ಶ್ರೀ ಗುರುವಾದಾತನು ಸಕಲಾಗಮಂಗಳ ಹೃದಯವನರಿತು ತನ್ನತಾ ನರಿದು ಸರ್ವಾಚಾರ ತನ್ನಲ್ಲಿ ನೆಲೆಗೊಂಡು
ಉಪದೇಶವ ಮಾಡುವ ಕ್ರಮವೆಂತೆಂದಡೆ
ಬ್ರಾಹ್ಮಣನ ಮೂರು ವರುಷ ನೋಡಬೇಕು
ಕ್ಷತ್ರಿಯನ ಆರು ವರುಷ ನೋಡಬೇಕು
ವೈಶ್ಯನ ಒಂಭತ್ತು ವರುಷ ನೋಡಬೇಕು
ಶೂದ್ರನ ಹನ್ನೆರಡು ವರುಷ ನೋಡಬೇಕು
ನೋಡಿದಲ್ಲದೆ ದೀಕ್ಷೆಯ ಕೊಡಬಾರದು.
ಬ್ರಾಹ್ಮಣಂ ತ್ರೀಣಿ ವರ್ಷಾಣಿ ಷಡಬ್ದಂ ಕ್ಷತ್ರಿಯಂತಥಾ।
ವೈಶ್ಯಂ ನವಾಬ್ದ ಮುಖ್ಯಾತಂ ಶೂದ್ರಂ ದ್ವಾದಶ ವರ್ಷಕಂ॥
ಈ ಕ್ರಮವನರಿಯದೆ, ಉಪಾದಿವಿಡಿದು ಮಾಡುವಾತ ಗುರುವಲ್ಲ
ಉಪಾದಿವಿಡಿದು ಮಾಡಿಸಿಕೊಂಬಾತ ಶಿಷ್ಯನಲ್ಲ.
ಇವರಿಬ್ಬರ ನಿಲುವು ಒಂದೆ; ಠಕ್ಕನ ಮನೆಗೆ ಠಕ್ಕ ಬಿದ್ದನವ ಬಂದಂತೆ
ಈ ಗುರು ಶಿಷ್ಯರನ್ನು ರೌರವ ನರಕದಲ್ಲಿಕ್ಕುವ
ಕೂಡಲ ಚನ್ನ ಸಂಗಯ್ಯ.

(೩; ೧೬೯೫)

ಚಲನ ಶೀಲವೂ, ಪುರೋಗಾಮಿಯೂ ಆಗಿದ್ದ ವಚನ ಸಂಸ್ಕೃತಿಯು ಚನ್ನಬಸವಣ್ಣನ ನೇತೃತ್ವದಲ್ಲಿ ಸ್ಥಾವರವೂ, ಯಥಾಸ್ಥಿತಿವಾದವೂ, ಕೋಟೆಯಿಂದಾವೃತವಾದ ಸ್ವರೂಪವನ್ನು ಪಡೆದುಕೊಂಡು ಬಿಟ್ಟಿತು. ಚಾತುರ್ವರ್ಣ ವ್ಯವಸ್ಥೆಯ ಗಡಿರೇಖೆಯೊಳಗೆ ಅದು ಎಡತಾಕು ವಂತಾಯಿತು. ಹೀಗೆ ಏಣಿ ಶ್ರೇಣಿಯು ವಚನ ಸಂಸ್ಕೃತಿಯೊಳಗೂ ಕಾಲಿಟ್ಟಿತು. ಅಲ್ಲಿ ಅವರ್ಣೀಯರಿಗೆ ಅವಕಾಶವೇ ಇಲ್ಲದಂತಾಯಿತು. ದೀಕ್ಷೆಯಂಥಹ ಸಂಘಟಿತ ಧರ್ಮಾಚರಣೆಯನ್ನೂ, ವೈದಿಕ ಆಚರಣೆಗೆ ಸರಿಸಮಾನವಾದ ವಿಧಿಯೊಂದನ್ನು ಚನ್ನಬಸವಣ್ಣನು ರೂಪಿಸಿದನು:

ಆಕಳ ಹೊಟ್ಟೆಯಲ್ಲಿ ಹೋರಿ ಹುಟ್ಟಿದಡೇನು?
ಲಿಂಗ ಮುದ್ರೆಯನೊತ್ತುವನ್ನಕ್ಕ ಬಸವನಲ್ಲ.
ಜಂಗಮನ ಆತ್ಮದಲ್ಲಿ ಪಿಂಡ ಉತ್ಪತ್ತಿಯಾದಡೇನು?
ದೀಕ್ಷಿತನಾಗದನ್ನಕ್ಕ ಜಂಗಮದೇವನಲ್ಲ.
ದೀಕ್ಷೆಯಿಲ್ಲದೆ ಹೋಗಿ ಭಕ್ತರಲ್ಲಿ ಅಗ್ಗಣಿಯ ಮುಕ್ಕಳಿಸಿದಡೆ
ಹಾದಿಗೊಂಡು ಹೋಗುವ ನಾಯಿ
ಗಿಡದ ಮೇಲೆ ಉಚ್ಚೆಯ ಹೊಯ್ದಂತಾಯಿತು ಕಾಣಾ
ಕೂಡಲ ಚನ್ನ ಸಂಗಮದೇವಾ

(೩; ೯೮೦)

ಹೀಗೆ ದೀಕ್ಷೆ, ನಿಬಂಧನೆ, ಏಣಿ ಶ್ರೇಣಿ ಮುಂತಾದ ವೈದಿಕವಾದಿ ಸ್ಥಾವರ ರೂಪಿ ಆಚರಣೆಗಳು ವಚನ ಸಂಸ್ಕೃತಿಯೊಳಗೆ ಪ್ರವೇಶಿಸಿದವು. ಲಿಂಗ ಸಂಬಂಧವನ್ನು ಕುರಿತಂತೆ ಅತ್ಯಂತ ಪ್ರತಿಗಾಮಿ ನಿಲುವುಗಳನ್ನು ಚನ್ನಬಸವಣ್ಣನ ವಿಚಾರಗಳಲ್ಲಿ ಕಾಣಬಹುದಾಗಿದೆ:

ಉಚ್ಚೆಯ ಬಚ್ಚಲ ಶೋಧಿಸುವವರಿಗೆ
ಚಿಲುಮೆಯ ಆಯತವೇಕೋ?
ಸತಿಯರ ಮಾಂಸವ ಭುಂಜಿಸುವವರಿಗೆ
ಪರಪಾಕವರ್ಜಿತವೆಂದು ಸ್ವಯಂಪಾಕವೇಕೊ?
ಅಷ್ಟೋತ್ತರ ಶತ ವೇದವ ಓದುವವರಿಗೆ
ಅಚ್ಚ ಪ್ರಸಾದವೇಕೊ?
ಇಂತೀ ತ್ರಿವಿದ ಡಂಬಿನ ಭಕ್ತಿಗೆ ಊರ ಮುಂದಣ ಡಂಬನೇ ಸಾಕ್ಷಿ
ಕೂಡಲ ಚನ್ನಸಂಗಮ ದೇವಾ

(೩; ೧೦೪೬)

ಈ ವಚನವು ಹೆಣ್ಣಿನ ಬಗ್ಗೆ ಯಾವ ಬಗೆಯ ನಿಲುವು ತಳೆದಿದೆ

ಎಂಬುದನ್ನು ವಿವರಿಸುವ ಅಗತ್ಯವಿಲ್ಲ. 'ಉಚ್ಚೆಯ ಬಚ್ಚಲ'ನ್ನು ಹೆಣ್ಣಿನ ಯೋನಿಗೆ ಸಮೀಕರಿಸುವ ಕ್ರಮವೊಂದಿದೆ. ಹೆಣ್ಣಿನ ಜೊತೆಗಿನ ಸಂಗವನ್ನೇ ಚನ್ನಬಸವಣ್ಣ ತಿರಸ್ಕರಿಸಿದ್ದಾನೆ. ವಚನ ಸಂಸ್ಕೃತಿಯ ಮೂಲ ನೆಲೆಗೆ ಹೊಡೆದ ಮೊಳೆ ಇದು.

ವಚನ ಸಂಸ್ಕೃತಿಯು ಸೂತಕ–ಸಂಕರಗಳನ್ನು ತಿರಸ್ಕರಿಸದೆ ಅವುಗಳಿಗೆ ಮಾನವೀಯ ರೂಪು ಕೊಡಲು ಪ್ರಯತ್ನಿಸಿತು. ಆದರೆ ಚನ್ನ ಬಸವಣ್ಣನು ಅವುಗಳನ್ನು ನಿಷೇಧಿಸಿಬಿಟ್ಟ.

ದಾಸನ ಮಗ ಮತ್ತು ದಾಸಿಯ ಮಗಳ ಸಂಗದಿಂದ ಹುಟ್ಟಿದವನು ನಾನು ಎಂದು ಬಸವಣ್ಣ ಹೇಳಿದರೆ ಅಲ್ಲಮನು 'ಗಣಂಗಳ ದಾಸನ ದಾಸನಾನು' ಎಂದು ಹೇಳುತ್ತಾನೆ.

ಆದರೆ ಚನ್ನಬವಸಣ್ಣನು 'ದಾಸಿಯ ಸಂಗ ಮಾಡಿದವರಿಗೆ ಲಿಂಗವಿಲ್ಲ, ಗುರುವಿಲ್ಲ, ಜಂಗಮವಿಲ್ಲ' (೩; ೪೭೦) ಎನ್ನುತ್ತಾನೆ.
'ಹೊಲೆ' ಬಗ್ಗೆ ಬಸವಣ್ಣನ ನಿಲುವು ಸ್ಪಷ್ಟವಾಗಿದೆ:

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ
ನಿಷ್ಕಲಂಕ ನಿಜೈಕ ತ್ರಿವಿಧ ನಿರ್ಣಯ
ಕೂಡಲ ಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ.

(೧; ೭೭೦)

ಹೊಲೆತನವನ್ನು ಬಸವಣ್ಣ ತಿರಸ್ಕರಿಸುವುದಿಲ್ಲ. ಆದರೆ 'ಹೊಲೆ' ಎಂಬುದನ್ನು ಬಸವಣ್ಣ ಒಪ್ಪುವುದಿಲ್ಲ. ಜನನ, ಉಚ್ಚಿಷ್ಟ, ಮರಣ, ರಜಸ್ಸುಗಳಿಗೆ ಸಂಬಂಧಿಸಿದ ಯಾವುದೂ ಬಸವಣ್ಣನಿಗೆ ಸೂತಕವಲ್ಲ, ಹೊಲೆಯಲ್ಲ ಹಾಗೂ ತಿರಸ್ಕಾರ ಯೋಗ್ಯವಲ್ಲ. ಹೊಲೆಯ ಅಸ್ತಿತ್ವವನ್ನು ಬಸವಣ್ಣ ತಿರಸ್ಕರಿಸುತ್ತಾನೆ. 'ಹೊಲೆ ಗುಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ' ಎಂಬ (೧; ೫೯೦) ವಚನದಲ್ಲಿ ಹೊಲೆತನದ ಬಗ್ಗೆ ಬಸವಣ್ಣನ ನಿಲುವು ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ:

ಇದಕ್ಕೇ ಪ್ರತಿಯಾಗಿ ಚನ್ನ ಬಸವಣ್ಣನು 'ಹೊಲೆ'ಯ ಅಸ್ತಿತ್ವವನ್ನು ಒಪ್ಪಿಕೊಂಡು, ಅವುಗಳ ನಿವಾರಣೆ ಕಡೆ ಗಮನ ನೀಡುತ್ತಾನೆ:

ಹೊಲೆ ಹೊಲೆ ಎಂದನಯ್ಯಾ ಬಸವಣ್ಣ,
ಹೊಲೆ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು
ನರರಿಗೆ ಹೊಲೆ, ಸುರರಿಗೆ ಹೊಲೆ, ಹರಿ ಬ್ರಹ್ಮಾದಿಗಳಿಗೆ ಹೊಲೆ
ಇಂತಿ ಹೊಲೆಯಲ್ಲಿ ಹುಟ್ಟಿ ಹೊಲೆಯನತಿಗಳೆದೆನೆಂಬ
ಉಭಯಭ್ರಷ್ಟರ ಮುಖವ ನೋಡಲಾಗದು
ಕೂಡಲ ಚನ್ನ ಸಂಗಮ ದೇವಾ.

ಹೀಗೆ ಹೊಲೆಯ ಇರವನ್ನು ಚನ್ನ ಬಸವಣ್ಣ ಒಪ್ಪಿಕೊಳ್ಳುತ್ತಾನೆ. ಆದರೆ ಬಸವಣ್ಣನಿಗೆ ಹೊಲೆತನವೆಂಬುದೇ ಇಲ್ಲ. ಹೀಗೆ ೧೨ನೇ ಶತಮಾನದಲ್ಲೇ ವಚನ ಸಂಸ್ಕೃತಿಯಲ್ಲಿ ಬ್ರಾಹ್ಮಣವಾದಿ ಧಾರೆಯೊಂದು ಕ್ರಿಯಾಶೀಲವಾಗಿದ್ದುದನ್ನು ನೋಡಬಹುದಾಗಿದೆ. ೧೨ನೇ ಶತಮಾನದ ನಂತರ ವಚನ ಸಂಸ್ಕೃತಿಯ ಮೇಲೆ ಈ ಬ್ರಾಹ್ಮಣವಾದಿ ವಿಚಾರಗಳ ಆಕ್ರಮಣ ಅಧಿಕವಾಯಿತು.

ಸಾಮಾಜಿಕ ಸ್ವರೂಪ ಕಳೆದುಕೊಂಡ ವಚನ ಸಂಸ್ಕೃತಿ:

ಕ್ರಿ. ಶ. ೧೧೭೦ರ ನಂತರ ವಚನ ಸಂಸ್ಕೃತಿಯು ತನ್ನ ಸಾಮಾಜಿಕ ಸ್ವರೂಪವನ್ನು ಕಳೆದುಕೊಂಡು ಸಂಹಿತೆ, ಸೂತ್ರ, ದೀಕ್ಷೆ, ಪಾದೋದಕ, ಮಂತ್ರ, ಸಂಸ್ಕೃತ ಮುಂತಾದ ಬ್ರಾಹ್ಮಣವಾದಿ, ಸ್ಥಾವರ ರೂಪಿಗುಣಗಳನ್ನು ಮೈಮೇಲೆ ಹೇರಿಕೊಂಡಿತು. ವಚನ ಸಂಸ್ಕೃತಿಯು ತನ್ನ ಗತಿಶೀಲತೆಯನ್ನು, ಬಹುಳತೆಯನ್ನು ಕಳೆದುಕೊಂಡು ಯಥಾಸ್ಥಿತಿವಾದಿಯಾಯಿತು, ಏಕಾಕಾರಿಯಾಯಿತು. ವಾಸ್ತವವಾಗಿ ೧೨ನೇ ಶತಮಾನದ ನಂತರ ವಚನ ಸಂಸ್ಕೃತಿಯು ಸಾಮಾಜಿಕವೆನ್ನಬಹುದಾದ ವಿಚಾರ–ಆಚರಣೆಗಳನ್ನು ರೂಪಿಸಲು ಸಾಧ್ಯವಾಗಲೇ ಇಲ್ಲ.

೧೫ನೇ ಶತಮಾನದಲ್ಲಿ ವಚನ ಸಂಸ್ಕೃತಿಯಲ್ಲಿ ಯಾವ ಬಗೆಯ ಕೃತಿಗಳು ರೂಪಗೊಂಡವು ಎಂಬುದನ್ನು ಪರಿಶೀಲಿಸಿದರೆ ನಮಗೆ ವಚನ ಸಂಸ್ಕೃತಿಯು ಹೇಗೆ ಜಾತಿ ಕೂಪದೊಳಗೆ ಬಂದಿಯಾಯಿತು ಎಂಬುದು ಸ್ಪಷ್ಟವಾಗುತ್ತದೆ. ಲಕ್ಕಣ್ಣದಂಡೇಶನು 'ಶಿವ ತತ್ವ ಚಿಂತಾಮಣಿ' ಮೂಲಕ ಷಟ್‌ಸ್ಥಲತತ್ವನಿರೂಪಣೆ ಮಾಡಿದರೆ, ಮೊಗ್ಗೆಯ ಮಾಯಿದೇವನು ಷಟ್‌ಸ್ಥಲ, ಷಡಂಗಯೋಗ, ದೀಕ್ಷೆಯ ಮಹತ್ವಗಳ ಬಗ್ಗೆ ಗ್ರಂಥ ರಚಿಸಿದ. ಅಷ್ಟ ವಿಧಾರ್ಚನೆ, ಷಟ್‌ಸ್ಥಲನಿರ್ಣಯ, ಲಿಂಗ ಸೂತ್ರ, ಮಂತ್ರೋತ್ಪತ್ತಿ ಮುಂತಾದ ಶೀರ್ಷಿಕೆಗಳೇ ವಚನ ಸಂಸ್ಕೃತಿಯು ಹಿಡಿದ ಜಾಡಿನ ಬಗ್ಗೆ ಸೂಚನೆ ನೀಡುತ್ತವೆ.

ಲಿಂಗ ಸಂಬಂಧದ ಬಗ್ಗೆಯೂ ಇದೇ ಮಾತನ್ನು ಹೇಳಬಹುದು. ವಚನ ಸಂಸ್ಕೃತಿಯಲ್ಲಿ ಹೆಣ್ಣಿಗೆ ಮಹತ್ವದ ಸ್ಥಾನ ದೊರಕಿತ್ತು. ಅವಳು ಸ್ವತಂತ್ರವಾಗಿ ಚಿಂತಿಸುತ್ತಿದ್ದಳು. 'ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ, ನಾ ಮೇಲೆ' ಎಂದು ಹೇಳಲು ರೆಮ್ಮವ್ವೆಗೆ ಸಾಧ್ಯವಾಯಿತು. ಆದರೆ ಲಿಂಗ ಸಮಾನತೆ ಕುರಿತಂತೆಯೂ ೧೨ನೇ ಶತಮಾನದಲ್ಲೇ ಅಪಸ್ವರ ಮೂಡತೊಡಗಿದವು. ಸೂತಕ, ಮಡಿ, ಮೈಲಿಗೆ, ಮುಟ್ಟು ಮುಂತಾದ ಸಂಕೋಲೆಯಿಂದ ಹೆಣ್ಣು ಮುಕ್ತಳಾದಳು. ಆದರೆ ವಚನ ಸಂಸ್ಕೃತಿಯು ಹೆಣ್ಣಿಗೆ ವಿಶೇಷವಾದ ನೀತಿ ಸೂತ್ರಗಳನ್ನು ರೂಪಿಸಿತು. ವಚನಗಳನ್ನು ರಚಿಸಿದ ೩೩ ಶಿವಶರಣೆಯರಲ್ಲಿ ೧೭ ಶಿವಶರಣೆಯರು 'ವ್ರತ' ಕುರಿತು ಮಾತಾಡಿದ್ದಾರೆ. ಶಿವಶರಣೆಯರು ಅನುಸರಿಸಬೇಕಾಗಿದ್ದ ನಿಯಮ–ನಿರ್ಬಂಧಗಳೇ ವ್ರತಾಚಾರಗಳಾಗಿದ್ದವು. ವ್ರತಾಚಾರವೆಂಬ 'ಗೊತ್ತು', 'ಬೇಲಿ' ಹೆಣ್ಣಿಗಾಗೆ ವಿಶೇಷವಾಗಿ ರೂಪಿಸಲಾಗಿತ್ತು.

೨ನೇ ಶತಮಾನದ ನಂತರವಂತೂ ವಚನ ಸಂಸ್ಕೃತಿಯು ಹೆಣ್ಣಿನ ಬಗ್ಗೆ ಗತಿಶೀಲವಾಗಿ ಚಿಂತಿಸಲೇ ಇಲ್ಲ. ಹೆಣ್ಣನ್ನು ಆಧ್ಯಾತ್ಮ ಸಾಧನೆಗೆ ಇರುವ ಒಂದು ತೊಡಕು ಎಂದು ವಿವರಿಸಲಾಯಿತು. ಅತ್ಯಂತ ಅಸಹ್ಯಕರವಾಗಿ ಹೆಣ್ಣನ್ನು ನೋಡಲಾಯಿತು. ಈ ಬಗೆಯ ಲಿಂಗ ಸಂಬಂಧದ ಬಗೆಗಿನ ಅಪಸ್ವರಕ್ಕೂ ಮೂಲ ಚನ್ನಬಸವಣ್ಣ 'ಹೊಲೆಸತಿಯರಿಗೆಲ್ಲಿಯದೊ ಲಿಂಗ ಜಂಗಮ ಪ್ರಸಾದವು' ಎಂಬ ಅಪ್ಪಣೆಯಾಗಿದೆ (೩; ೧೩೧೯)

ಲಿಂಗ ಸಂಬಂಧದ ಬಗ್ಗೆ, ಹೆಣ್ಣಿನ ಸ್ಥಾನಮಾನದ ಬಗ್ಗೆ ವಚನ ಸಂಸ್ಕೃತಿಯು ೧೨ನೇ ಶತಮಾನದ ಗತಿಶೀಲ ನೆಲೆಗಳಿಂದ ಎಷ್ಟು ದೂರ ಸರಿದಿತ್ತು ಎಂಬುದನ್ನು ಸಿದ್ದಲಿಂಗೇಶ್ವರರ (೧೫ನೇ ಶತಮಾನ) ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ:

ಮಲವೊತ್ತಿದರೆ ಹಾಳುಗೇರಿಯಲ್ಲಿ ಬಿಡಬೇಕಯ್ಯಾ.
ಜಲವೊತ್ತಿದರೆ ಬಚ್ಚಲೊಳಗೆ ಬಿಡಬೇಕಯ್ಯಾ
ಇಂದ್ರಿಯವೊತ್ತಿದರೆ ಯೋನಿಯೆಂಬ ಬಚ್ಚಲೊಳಗೆ ಬಿಡಬೇಕಯ್ಯಾ.
ಸ್ವಾನವೊಂದು ಚರ್ಮವ ಕಚ್ಚಿತಂದು, ತಿಪ್ಪೆಯ ಕೆರೆದು, ಹೂಳಿ,
ಮತ್ತೊಂದು ನಾಯಿ ಬಂದು ಕಚ್ಚಿ ತಿಂದು ಕಾಯ್ದು ಸೊಂಡಿಪ್ಪಂತೆ
ತನುಚ್ಚೆಯ ಹೊಯಿವ ಬಚ್ಚಲ ಗುಂಡಿಯ ಜೀವದ ಹೆಣ್ಣ
ಮನೆಯ ಮರೆಯಲ್ಲಿರಿಸಿಕೊಂಡು
ಮತ್ತೊಂದು ಬಂದು ಕಚ್ಚಿತೆಂದು
ಕುಕ್ಕ ನಾಯಂತೆ ಕಾಯ್ದು ಕೊಂಡಿಪ್ಪವಂಗೆ ಶಿವಕೃಪೆಯಲ್ಲಿಯದೋ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ

(೧೧; ೧೧೬)

ಹೆಣ್ಣನ್ನು ಯಾವ ನೆಲೆಯಲ್ಲಿ ನೋಡಲಾಗಿದೆ ಎಂಬುದನ್ನು ಮೇಲಿನ ವಚನ ಸ್ಪಷ್ಟವಾಗಿ ತೋರಿಸುತ್ತದೆ.

ಉಪ ಸಂಹಾರ :

ಹೀಗೆ ವಚನ ಸಂಸ್ಕೃತಿಯು ಜಾತಿ ವಿನಾಶದ ಬಗ್ಗೆ ಹಾಗೂ ಲಿಂಗತಾರತಮ್ಯದ ಬಗ್ಗೆ ಅತ್ಯಂತ ಆರೋಗ್ಯಕಾರಿಯಾಗಿ ಚಿಂತಿಸಿದ್ದು ನಿಜವಾದರೂ ಸಹ, ತುಂಬಾ ಸೂಕ್ಷ್ಮ ನೆಲೆಗಳಲ್ಲಿ ಅದರೊಳಗೆ ಸಾಮಾಜಿಕ ಏಣಿ–ಶ್ರೇಣಿಯನ್ನು, ಲಿಂಗ ತಾರತಮ್ಯವನ್ನೂ ಪ್ರತಿಪಾದಿಸುವ ಎಳೆಗಳೂ ಕ್ರಿಯಾಶೀಲವಾಗಿದ್ದುದು ಸ್ಪಷ್ಟವಾಗಿದೆ. ಈ ಅಪಸ್ವರ–ಭಿನ್ನಮತದ ಧಾರೆಯು ೧೨ನೇ ಶತಮಾನದಲ್ಲಿ ಕ್ಷೀಣವಾಗಿತ್ತು. ಆದರೆ ೧೨ನೇ ಶತಮಾನದ ತರುವಾಯ ಈ ಧಾರೆಯು ಹೆಚ್ಚಿನ ಶಕ್ತಿಯನ್ನು ತ್ರಾಣವನ್ನು ಪಡೆದುಕೊಂಡು ಬಿಟ್ಟಿತು. ಹೀಗಾಗಿ ವಚನ ಸಂಸ್ಕೃತಿಯು ಕಾಲ ಕ್ರಮೇಣ ಒಂದು ಮತವಾಗಿಯೂ, ಸಂಸ್ಕೃತಾನುಕರಣ ವಾದಿಯಾಗಿಯೂ ರೂಪ ಪಡೆಯಿತು. ಅದು ತನ್ನ ಸಾಮಾಜಿಕ ಸ್ವರೂಪವನ್ನು ಕಳೆದುಕೊಂಡು, ಧಾರ್ಮಿಕ ಸ್ವರೂಪಿ ಮತವಾಯಿತು. ಇದರರ್ಥ ೧೨ನೇ ಶತಮಾನದಲ್ಲಿ ವಚನ ಸಂಸ್ಕೃತಿಯಲ್ಲಿ ಧಾರ್ಮಿಕ ನೆಲೆಗಳಿರಲಿಲ್ಲ ಎಂದು ಹೇಳಲು ಬರುವುದಿಲ್ಲ. ವಚನ ಸಂಸ್ಕೃತಿಯಲ್ಲಿನ ಸಾಮಾಜಿಕ ನೆಲೆಗಳ ಹರಣದಲ್ಲಿ ಅದರ ವೈಫಲ್ಯವಿದೆ ಎಂಬುದು ಮುಖ್ಯ.

ಟಿಪ್ಪಣಿ: ಈ ಲೇಖನದಲ್ಲಿ ಬಳಸಿರುವ ವಚನಗಳ ಕೊನೆಯಲ್ಲಿ ನೀಡಿರುವ ಅಂಕಿಗಳು 'ಸಮಗ್ರ ವಚನ ಸಂಪುಟ'ಕ್ಕೆ ಸಂಬಂಧಿಸಿವೆ. ವಚನಗಳ ಅಂತ್ಯದಲ್ಲಿ ಕೊಟ್ಟಿರುವ ಅಂಕಿಗಳಲ್ಲಿ ಮೊದಲನೆಯದು 'ಸಮಗ್ರ ವಚನ ಸಂಪುಟ'ಗಳಲ್ಲಿನ ನಿರ್ದಿಷ್ಟ ಸಂಪುಟದ ಸಂಖ್ಯೆಯನ್ನು ಪ್ರತಿನಿಧಿಸಿದರೆ, ಎರಡನೆಯ ಅಂಕಿಯು ಸದರಿ ಸಂಪುಟದಲ್ಲಿನ ವಚನದ ಸಂಖ್ಯೆಯನ್ನು ಸೂಚಿಸುತ್ತದೆ.

●

ಅನೇಕ ಸಮಾಜವಾದಿಗಳು ತಾವು ಆರ್ಥಿಕ ಸಮಾನತೆಗಾಗಿ ಹೋರಾಡಿದರೆ ಸಾಕು, ಜಾತೀಯ ಅಸಮಾನತೆಯು ತಾನಾಗಿಯೇ ನಿರ್ನಾಮವಾಗುತ್ತದೆ ಎಂದು ಪ್ರಾಮಾಣಿಕವಾಗಿ ಆದರೆ ತಪ್ಪಾಗಿ ತಿಳಿಯುತ್ತಾರೆ. ಅವರು ಜಾತೀಯ ಅಸಮಾನತೆ ಹಾಗೂ ಆರ್ಥಿಕ ಅಸಮಾನತೆ ಈ ಎರಡೂ ಒಟ್ಟಿಗೇ ಸಂಹಾರ ಮಾಡಬೇಕಾದ ಜೋಡಿ ರಾಕ್ಷಸರೆಂಬುದನ್ನು ಮರೆಯುತ್ತಾರೆ.

ಜಾತೀಯತೆಗೆ ಏಕಾಏಕಿ ಸವಾಲು ಹಾಕಿ ನಿಲ್ಲಲು ಕೆಲವರು ಏಕೆ ಹೆದರುತ್ತಾರೆಂದರೆ ಎಲ್ಲಿ ತಮ್ಮ ಜನಪ್ರಿಯತೆಯನ್ನು ಕಳೆದುಕೊಂಡು ಬಿಡುತ್ತೇವೆಯೋ ಎಂದು. ಇನ್ನೊಂದು ಕಾರಣ ಬ್ರಾಹ್ಮಣರು ಬೇರೆ ಬೇರೆ ಪಕ್ಷಗಳಲ್ಲಿದ್ದರೂ ಅವರೆಲ್ಲರೂ ಪರಸ್ಪರವಾಗಿ ಯಾವುದೋ ಅಪ್ರಜ್ಞಾಪೂರ್ವಕ ಸಂಬಂಧವನ್ನು ಪರಸ್ಪರ ವಿರೋಧಗಳಿದ್ದರೂ ಹೊಂದಿರುತ್ತಾರೆ. ಒಂದೇ ಸಾಮಾಜಿಕ ಸ್ತರದ, ಮದುವೆ, ಬಂಧುತ್ವ ಮುಂತಾದ ಸ್ನೇಹ ಸಂಬಂಧಗಳ ಮೂಲಕ.

ಶೂದ್ರರೂ ಬ್ರಾಹ್ಮಣರೂ ಪರಸ್ಪರ ಸಂಪರ್ಕದಿಂದ ಮಕ್ಕಳನ್ನು ಪಡೆಯಬಹುದು. ಆದರೆ ಈ ಸಂದರ್ಭದಲ್ಲಿ ಈ ಹಿಂದುಳಿದ ಜಾತಿಯವರು ಹೆಚ್ಚಾಗಿ ದ್ವಿಜರೊಡನೆಯೇ ಸಂಬಂಧ ಮಾಡಲು ಆಶಿಸಬಹುದು. ಇಂಥದು ಬಹಳ ವಿಷಪೂರಿತ ಮಾನಸಿಕ ಸ್ಥಿತಿ. ಇನ್ನು ನಾವು ಇಡೀ ಮಾನವ ಜಾತಿಯ ಸಮಾನತೆಯನ್ನು ಮಾತ್ರವೇ ಯೋಚಿಸಬೇಕು. ಶೂದ್ರನೂ ದ್ವಿಜನೂ ಮೂಲಭೂತವಾಗಿ ಅರೆಜೀವವಾಗಿ ಬಿದ್ದಿದ್ದಾರೆ. ಶೂದ್ರನನ್ನು ದ್ವಿಜನೂ ದ್ವಿಜನನ್ನು ಶೂದ್ರನೂ ಮೇಲಕ್ಕೆತ್ತಬೇಕಾಗಿದೆ.

–ಡಾ॥ ರಾಮ ಮನೋಹರ ಲೋಹಿಯಾ
('ಶೂದ್ರನಿಗೊಂದು ಪತ್ರ'ದಿಂದ)

ಜಾತಿ ವಿನಾಶ: ಇತಿಹಾಸದ ಕಣ್ಣಲ್ಲಿ

ಡಾ|| ರಾಜಾರಾಮ ಹೆಗಡೆ

ನಮ್ಮ ಇತಿಹಾಸದಲ್ಲಿ ಜಾತಿ ಪದ್ಧತಿಯ ಉಗಮದಷ್ಟೇ ಪ್ರಾಚೀನ ಕಾಲದಿಂದ ಜಾತಿ ಪದ್ಧತಿಯನ್ನು ಅಲ್ಲಗಳೆಯುವ ಸಂಪ್ರದಾಯಗಳೂ ಬೆಳೆದು ಬಂದಿವೆ. ಜಾತಿ ಪದ್ಧತಿಯನ್ನು ಕಟು ವಿಮರ್ಶೆಗೊಳಪಡಿಸುವ ವೈಚಾರಿಕ ಸಾಹಿತ್ಯ ನಮಗೆ ವಿಪುಲವಾಗಿ ಸಿಗುತ್ತದೆ. ಆದರೆ ನಾವು 'ಸಮಾಜ ಸುಧಾರಣೆ'ಯ ಕಲ್ಪನೆಯಲ್ಲಿ ಇಂಥ ವಿಚಾರಗಳನ್ನು ಪರಿಶೀಲಿಸುವಾಗ ಆಧುನಿಕ ಕಾಲವನ್ನು ಆಧುನಿಕ–ಪೂರ್ವ ಕಾಲದಿಂದ ಪ್ರತ್ಯೇಕಿಸಿ ಕೊಳ್ಳಬೇಕಾಗುತ್ತದೆ. ಏಕೆಂದರೆ 'ಸಮಾಜ ಸುಧಾರಣೆ' ಎಂಬುದು ನಾವು ಬಳಸುವ ಅರ್ಥದಲ್ಲಿ ಆಧುನಿಕ ಕಲ್ಪನೆಯಾಗಿದೆ. ಮನುಷ್ಯನ ಇತಿಹಾಸವನ್ನು ನಡೆಸುವವನು ಮನುಷ್ಯನೇ ಆಗಿದ್ದಾನೆ. ಸಮಾಜ ಎಂಬುದು ಮನುಷ್ಯ ನಿರ್ಮಿತ ವ್ಯವಸ್ಥೆ. ಮನುಷ್ಯನ ಒಳ್ಳೆಯ ಹಾಗೂ ದುಷ್ಟ ಉದ್ದೇಶಗಳೆಲ್ಲ ಈ ವ್ಯವಸ್ಥೆಯ ನಿರ್ಮಾಣದಲ್ಲಿ ಕಾರಣೀಭೂತವಾಗಿರುತ್ತವೆ. ಒಂದು ಸಮಾಜದಲ್ಲಿ ಅವೈಚಾರಿಕ ಹಾಗೂ ಮನುಷ್ಯನನ್ನು ಶೋಷಿಸುವ ಅಂಶಗಳು ಬೆಳೆದಂತೆಲ್ಲ ಅದನ್ನು ಮನುಷ್ಯನೇ ಮುಂದಾಗಿ ಸರಿಪಡಿಸಬೇಕು ಎಂಬುದು ಆಧುನಿಕ ಸಮಾಜ ಸುಧಾರಣೆಗಳ ಹಿಂದಿರುವ ತತ್ವ. ಒಂದು ಸಮಾಜದಲ್ಲಿ ತೊಡೆದು ಹಾಕಬೇಕಾದ ಹಾಗೂ ಅಳವಡಿಸಬೇಕಾದ ಅಂಶಗಳು ಯಾವ ಯಾವವು ಎಂಬುದನ್ನು ಹೇಗೆ ನಿರ್ಧರಿಸಬೇಕು? ಇದನ್ನು ಮನುಷ್ಯ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವಗಳ ತಳಹದಿಯ ಮೇಲೆ ನಿರ್ಧರಿಸಬೇಕು. ನಮ್ಮ ವೈಚಾರಿಕತೆಗೆ ಹಾಗೂ ಪ್ರಗತಿಯ ಕಲ್ಪನೆಗೆ ಒಗ್ಗುವಂಥ ಅಂಶಗಳೇ ಮನುಷ್ಯ ಸಮಾಜದ ಆದರ್ಶಗಳು. ಹೀಗೆ 'ಸಮಾಜ ಸುಧಾರಣೆ' ಎಂಬ ಕಲ್ಪನೆ 'ಮನುಷ್ಯ ಕೇಂದ್ರಿತ' ಅಥವಾ 'ಮಾನವೀಯ'ವಾದುದು.

ಆಧುನಿಕಪೂರ್ವಕಾಲೀನ ಭಾರತದಲ್ಲಿ ಆಗಿಹೋದ ಜಾತಿ ಪದ್ಧತಿಯ ವಿಮರ್ಶಕರಲ್ಲಿಯೂ ನಾವು ಈ 'ಮಾನವೀಯ' ಕಾಳಜಿಗಳನ್ನು , ಸುಧಾರಣೆಯ ಆಚರಣೆಗಳನ್ನು ಕಾಣುತ್ತೇವೆ. ಆದರೆ ಅವು 'ಮನುಷ್ಯ ಕೇಂದ್ರಿತ' ವಾದಗಳಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಅಂದರೆ ಅವುಗಳಲ್ಲಿ ಅಂತಿಮವಾಗಿ ಒಬ್ಬ ಮನುಷ್ಯನ ವಿಮೋಚನೆ ಸ್ವಾತಂತ್ರ್ಯ, ಸಮಾನತೆ ಮುಂತಾದ ಆದರ್ಶಗಳನ್ನು ತಲುಪುವುದಷ್ಟಕ್ಕೇ ಇಲ್ಲ. ಅವು ಮನುಷ್ಯನು 'ಭವ'ದಿಂದಲೇ ವಿಮೋಚನೆ ಹೊಂದುವ ಕಲ್ಪನೆಯನ್ನು ಹೊಂದಿವೆ. ಅಥವಾ ಇನ್ನೊಂದು ಥರ ಹೇಳುವುದಾದರೆ ಆಧುನಿಕ ಪೂರ್ವ ಸುಧಾರಣಾವಾದಿ ವಿಚಾರಗಳು ಮೂಲತಃ ಮೋಕ್ಷ ಸಾಧನೆಯಲ್ಲಿ ಕೇಂದ್ರಿತವಾಗಿವೆ. (ಇದಕ್ಕೆ ಚಾರ್ವಾಕ ದರ್ಶನದಂಥ ಅಪವಾದಗಳೂ ಇವೆ). ಈ ಮೋಕ್ಷ ಕಲ್ಪನೆ ನಿರೀಶ್ವರವಾದೀ ಕಲ್ಪನೆಯಾಗಿರಬಹುದು, ಇಲ್ಲ ಈಶ್ವರ ಸಾಯುಜ್ಯವಾಗಿರಬಹುದು. ಆದರೆ ಇವು ಜಾತಿ ಪದ್ಧತಿಯನ್ನು ಒಂದು ಅನಿಷ್ಟ ವಿಕಾರ, ಅಥವಾ ಅವೈಚಾರಿಕ ವ್ಯವಸ್ಥೆಯನ್ನಾಗಿ ಗ್ರಹಿಸುತ್ತವೆ. ಸಮಾಜದ ಮೌಢ್ಯಗಳಲ್ಲಿ ಜಾತಿಯೂ ಒಂದಾಗುತ್ತದೆ. ಮನುಷ್ಯನ ಮೋಕ್ಷ ಕಲ್ಪನೆಯೂ ಆತನ ಸಾಮಾಜಿಕ ಮೌಲ್ಯಗಳ ನಿರ್ದೇಶನವನ್ನು ಮಾಡುತ್ತದೆಯಾದ್ದರಿಂದ ಅಂದಿನ ಚಿಂತಕರೂ ಸಾಮಾಜಿಕ ಸುಧಾರಣೆಯನ್ನು, ಬದಲಾವಣೆಯನ್ನು ಕನಸಿದ್ದರು. ಹಾಗಾಗಿ ಜಾತಿ ಪದ್ಧತಿಯಂಥ ವ್ಯವಸ್ಥೆಯ ಕುರಿತು, ಮಾನವೀಯ ಮೌಲ್ಯಗಳ ಕುರಿತು ಆಧುನಿಕ ಹಾಗೂ ಆಧುನಿಕ ಪೂರ್ವ ವಿಚಾರಗಳಲ್ಲಿ, ಸಾಮ್ಯತೆ ಸಹಜವಾಗಿಯೇ ಕಂಡು ಬರುತ್ತದೆ.

ಆಧುನಿಕ ಪೂರ್ವ ಯುಗದಲ್ಲಿ ಜಾತಿ ಪದ್ಧತಿಯ ಕುರಿತ ವಿಮರ್ಶೆಗಳು:

ಭಾರತದ ಜಾತಿಪದ್ಧತಿಯನ್ನು ಕುರಿತು ನಾವು ಮಾತನಾಡುವಾಗ ವರ್ಣ ವ್ಯವಸ್ಥೆಯ ಕುರಿತು ಹೇಳುತ್ತಿರುತ್ತೇವೆ. ಜಾತಿ ಮತ್ತು ವರ್ಣ ಇವು ಜಾತಿಪದ್ಧತಿಯ ಎರಡು ಮುಖಗಳು. 'ಜಾತಿ' ಹುಟ್ಟಿನಿಂದಲೇ ನಿರ್ಧಾರವಾಗುವ ಒಂದು ಸಾಮಾಜಿಕ ಪರಿಸರವಾಗಿದೆ. ಅದು ತನ್ನೊಳಗೇ ತಾನು ಒಳವಿವಾಹಗಳಿಂದ, ವೃತ್ತಿ, ಸಂಸ್ಕಾರ ಸಾಹಚರ್ಯ ಮುಂತಾದವುಗಳಿಂದ ಮುಚ್ಚಿಕೊಂಡಿರುವ ಒಂದು ಜಗತ್ತಾಗಿದೆ. ಇಂಥ ವಿಭಿನ್ನ ಜಾತಿಗಳನ್ನು ನಾಲ್ಕು ವಿಭಾಗವಾಗಿ ನಿರೂಪಿಸುವ ಕಲ್ಪನೆ ವರ್ಣ ವ್ಯವಸ್ಥೆ. ವರ್ಣ ವ್ಯವಸ್ಥೆ ಕೇವಲ ವೃತ್ತಿ ವಿಭಾಗವನ್ನು ಮಾತ್ರ ಸಾಧಿಸುವುದಿಲ್ಲ, ಅದು ಜಾತಿಗಳನ್ನು ಪಾವಿತ್ರ್ಯದ ಮಾನದಂಡದಲ್ಲಿ ಉಚ್ಚ–ನೀಚ ಎಂದು ಶ್ರೇಣೀಕರಿಸುತ್ತದೆ. ಅಸ್ಪೃಶ್ಯತೆಯನ್ನು ಹುಟ್ಟುಹಾಕುತ್ತದೆ. ಹಾಗಾಗಿ ಒಂದು ನಿರ್ದಿಷ್ಟ ಕಾಲದಲ್ಲಿ ಇರುವ ಒಂದು ಜಾತಿ ಹುಟ್ಟನ್ನಾಧರಿಸಿದ ಒಂದು ಸಾಮಾಜಿಕ ವ್ಯವಸ್ಥೆಯಾಗಿರುವುದರ ಜೊತೆಗೇ ಉಳಿದ ಜಾತಿಗಳ ಸಂದರ್ಭದಲ್ಲಿ ಮೇಲೋ–ಕೀಳೋ ಆಗುತ್ತದೆ. ಈ ಮೇಲು–ಕೀಳಿನ ಗುರುತು 'ವರ್ಣ' ಕಲ್ಪನೆಯಿಂದಾಗಿ ಜಾತಿಗೆ ಅಂಟಿಕೊಳ್ಳುತ್ತದೆ. ಐತಿಹಾಸಿಕವಾಗಿ ಒಂದು ಜಾತಿ ವರ್ಣದ ಏಣಿಯಲ್ಲಿ ಏರಿಳಿಯಬಹುದು. ಆದರೆ ವರ್ಣ ಕಲ್ಪನೆ ಇರುವವರೆಗೆ ಒದು ಜಾತಿ ಹಾಗೂ ಜಾತಿಯವನ ವ್ಯವಹಾರಗಳ ಮೇಲೆ ಬಾಹ್ಯ ನಿರ್ಬಂಧಗಳು ಹೇರಲ್ಪಡುತ್ತವೆ.

ಆಧುನಿಕ ಪೂರ್ವ ಭಾರತದಲ್ಲಿ ವರ್ಣ ವ್ಯವಸ್ಥೆಯ ಯಾಜಮಾನ್ಯವನ್ನು ಅಲ್ಲಗಳೆಯುವ ನಿಟ್ಟಿನಿಂದಲೇ ಸಾಧಾರಣ ಎಲ್ಲ ವಿರೋಧಗಳು ವ್ಯಕ್ತವಾಗಿವೆ. ಹಾಗಾಗಿ ಜಾತಿಯನ್ನು ಟೀಕೆಗೆ ವಸ್ತುವನ್ನಾಗಿಟ್ಟುಕೊಂಡರೂ, ಈ ಜಾತಿಯ ವರ್ಣ ನಿರೂಪಣೆ ಅಂಥ ಟೀಕೆಗಳ ವಸ್ತುವಾಗಿರುತ್ತದೆ. ಇಂದಿಗೆ ಸುಮಾರು ಎರಡೂವರೆ ಸಾವಿರ ವರ್ಷಗಳಷ್ಟು ಹಿಂದೆ ಹುಟ್ಟಿ

ಬೆಳೆದ ಬೌದ್ಧ ಹಾಗೂ ಜೈನ ಮತಗಳಲ್ಲಿ ವರ್ಣಾಶ್ರಮ ಧರ್ಮಕ್ಕೆ ಸ್ಥಾನವೇ ಇಲ್ಲ. ಅವು ನಿರ್ವಾಣದ ಕಲ್ಪನೆಯನ್ನು ಜಾತಿ ಪದ್ಧತಿಗೆ ಗಂಟು ಹಾಕುವುದಿಲ್ಲ. ಬುದ್ಧನ ಸಂಘವು ಈ ಜಾತಿ ಪದ್ಧತಿಯ ಸಂಸಾರವನ್ನು ತ್ಯಜಿಸಿ ಬಂದ ಭಿಕ್ಷು–ಭಿಕುಣಿಯರಿಗೆ ಮಾತ್ರ ತೆರೆದಿತ್ತು. ಬುದ್ಧನಿಗೆ ಈ ಸಂಸಾರವೇ ದುಃಖಮಯವಾಗಿ ಕಾಣಿಸಿತ್ತು. ನಿರ್ವಾಣವೊಂದೇ ಇದರಿಂದ ತಪ್ಪಿಸಿಕೊಳ್ಳುವ ಮಾರ್ಗ. ಈ ಮಾರ್ಗದತ್ತ ಸಾಗುವವರೆಲ್ಲ ಒಂದೇ. ಅವನ ಪ್ರಾಯ ಶಿಷ್ಯರಲ್ಲಿ ಬ್ರಾಹ್ಮಣರಿಂದ ಅಂತ್ಯಜರವರೆಗೆ ನಾನಾ ರೀತಿಯ ಪುರುಷ–ಸ್ತ್ರೀಯರು ಇದ್ದಾರೆ. ಬುದ್ಧನೆಂದೂ ಈ ನಿರ್ವಾಣ ಮಾರ್ಗಕ್ಕೆ ಬರದ ಸಂಸಾರಿಗಳ ಜಾತಿ ಪದ್ಧತಿಯನ್ನು ಹೋಗಲಾಡಿಸುವ ಮಾತನ್ನು ಆಡಲಿಲ್ಲ. ಆದರೆ ವರ್ಣ ಧರ್ಮದ ವಕ್ತಾರರಿಗೆ ಬೌದ್ಧ–ಜೈನ ಧರ್ಮಗಳು ನುಂಗಲಾರದ ತುತ್ತಾದವು. ಏಕೆಂದರೆ ಪ್ರಾಚೀನ ಭಾರತೀಯ ನಗರ ಹಾಗೂ ಹಳ್ಳಿಗಳಲ್ಲಿ ಬೌದ್ಧ ಧರ್ಮ ತೀರ ಜನಪ್ರಿಯವಾಗಿ ಬೆಳೆಯಿತು. ರಾಜಾಶ್ರಯವನ್ನು ಪಡೆದು ಪ್ರಬಲವಾಯಿತು. ಬೌದ್ಧ ಧರ್ಮದ ಪ್ರಸಾರದಿಂದ 'ಜಾತಿ'ಗಳು ನಾಶವಾಗಲಿಲ್ಲ. ಆದರೆ ಈ ಜಾತಿಗಳನ್ನು ಉಚ್ಚ–ನೀಚ ಎಂಬ ಭೇದಗಳನ್ನಾಗಿ ನಿರೂಪಿಸಲು ಬೌದ್ಧ ಧರ್ಮ ರಾಜಾಶ್ರಯವನ್ನು ಹೊಂದಿದಾಗಲೂ ಪ್ರಯತ್ನಿಸಲಿಲ್ಲ. ಅಂದರೆ ಬೌದ್ಧರಿಗೆ 'ವರ್ಣ' ಒಂದು ವಸ್ತುವೇ ಆಗಿರಲಿಲ್ಲ.

ಕ್ರಿ. ಶ. ನಾಲ್ಕನೆಯ ಶತಮಾನದವರೆಗೆಗೆ ವರ್ಣ ವ್ಯವಸ್ಥೆಯನ್ನು ಅಲ್ಲಗಳೆಯುವ ಧರ್ಮಗಳೇ ಪ್ರಬಲವಾಗಿದ್ದವು. ಆದರೆ ಗುಪ್ತ ಕಾಲದಿಂದ ವರ್ಣ ಧರ್ಮದ ಆಳ್ವಿಕೆ ಗಟ್ಟಿಯಾಯಿತು. ವೇದೋತ್ತರ ಕಾಲದಿಂದ, ಬೌದ್ಧ ಧರ್ಮದ ಉಚ್ಛ್ರಾಯಾವಸ್ಥೆಯ ಅವಧಿಯ ಪರ್ಯಂತ ಧರ್ಮಸೂತ್ರಗಳು ಹಾಗೂ ಧರ್ಮ ಸ್ಮೃತಿಗಳು ವರ್ಣ ಧರ್ಮವನ್ನು 'ವೈದಿಕ', 'ಅಪೌರುಷೇಯ' ವ್ಯವಸ್ಥೆ ಎಂದು ನಿರೂಪಿಸುತ್ತ ಸಾಗಿ ಬಂದವು. ಗುಪ್ತ ಕಾಲದ ನಂತರ ಪೂಜಾ ಪಂಥಗಳ ಆಗಮಗಳು, ಪುರಾಣಗಳು, ಮಹಾ ಕಾವ್ಯಗಳು ಮುಂತಾದ ನಾನಾ ವಿಧದ ಸಂಪ್ರದಾಯಗಳ ಮೂಲಕ ವರ್ಣ ಧರ್ಮದ ಪ್ರಚಾರ ನಡೆಯಿತು. ವರ್ಣ ಧರ್ಮಕ್ಕೆ ರಾಜಾಶ್ರಯ ವ್ಯಾಪಕವಾಗಿ ಸಿಕ್ಕಿತು. ಈ ಕಾಲದಲ್ಲಿ ಬೌದ್ಧ, ಜೈನ ಮುಂತಾದ ಮತಗಳನ್ನು ಪೌರುಷೇಯ (ಮನುಷ್ಯ ಮಾಡಿದ್ದು), ನಾಸ್ತಿ (ವೇದ ಪ್ರಮಾಣವನ್ನು ಅಲ್ಲಗಳೆಯುವವು), ಪಾಖಂಡ ಶಾಸ್ತ್ರಗಳು ಎಂದೆಲ್ಲ ಹೀಗಳೆಯಲಾಗಿದೆ. ಜನರನ್ನು ವರ್ಣ ಧರ್ಮದಿಂದ ದಾರಿ ತಪ್ಪಿಸಲು ಬುದ್ಧ, ಜಿನ ಮುಂತಾದ ದೇವತೆಗಳ ಸೃಷ್ಟಿಯಾಗಿದೆ ಎಂಬ ನಿರೂಪಣೆ ಬೆಳೆಯಿತು. ಬ್ರಾಹ್ಮಣ ವರ್ಣಧರ್ಮದ ವಕ್ತಾರರ ಈ ಪ್ರತಿಕ್ರಿಯೆಯನ್ನು ಗಮನಿಸಿದರೆ ಬೌದ್ಧ ಧರ್ಮ ವರ್ಣ ಧರ್ಮಕ್ಕೊಂದು ಪ್ರಬಲವಾದ ಪ್ರತಿರೋಧಕವಾಗಿದ್ದುದು ಗೊತ್ತಾಗುತ್ತದೆ.

ಬೌದ್ಧ, ಜೈನ ಧರ್ಮಗಳೂ ಜಾತಿ–ಪಂಥಗಳಾಗುವುದರೊಂದಿಗೆ ವರ್ಣಧರ್ಮ ಮಧ್ಯಕಾಲದ ರಾಜ್ಯಗಳಲ್ಲಿ ಪ್ರಬಲವಾಯಿತು. ಭಾರತದ ಮೂಲೆ ಮೂಲೆಗಳಲ್ಲೂ, ವ್ಯವಸಾಯವನ್ನಾವಲಂಬಿಸಿದ ರಾಜ್ಯಗಳು ಮಧ್ಯಕಾಲದಲ್ಲಿ ತಲೆ ಎತ್ತಿದವು. ಇವುಗಳ ರಾಜರುಗಳು ಬ್ರಾಹ್ಮಣರನ್ನು ಅಗ್ರಹಾರ ದಾನ ನೀಡಿ ಪೋಷಿಸಿ, ತಮ್ಮ ರಾಜ್ಯವನ್ನು ವರ್ಣ ಧರ್ಮವನ್ನು ರಕ್ಷಿಸುವ ರಾಜ್ಯ ಎಂದು ಗುರುತಿಸಿಕೊಂಡರು. ಈ ಸಂದರ್ಭದಲ್ಲೇ ದೇವಾಲಯ ಹಾಗೂ ಮಠ ಸಂಸ್ಕೃತಿಗಳೂ ಆಕಾರ ತಳೆದವು. ಈ ವ್ಯವಸ್ಥೆಗೆ ವಿಧೇಯತೆ ತೋರಿಸುವುದೇ ಭಕ್ತಿ ತತ್ವದ ಸಾರ ಎಂದು ನಿರೂಪಿಸಲಾಯಿತು. ಭಕ್ತಿ ಮಾರ್ಗವನ್ನು ವೈಭವೀಕರಿಸುವ ಭಗವದ್ಗೀತೆ ಭಕ್ತಿಯನ್ನು ವರ್ಣಧರ್ಮದ ತತ್ವವೆಂದು ನಿರೂಪಿಸಿತು.

ಆದರೆ ಎಂಟು–ಒಂಭತ್ತನೆಯ ಶತಮಾನದಿಂದಲೇ ಭಕ್ತಿಯ ಹಾಗೂ ವರ್ಣಧರ್ಮದ ಸಂಬಂಧವನ್ನು ಅಲ್ಲಗಳೆಯುವ ಪ್ರತಿನಿರೂಪಣೆಗಳು ಹುಟ್ಟಿಕೊಂಡವು. ಭಕ್ತನ ಮತ್ತು ಪರಮಾತ್ಮನ ಹೊಸ ಸಂಬಂಧದ ಕುರಿತ ಪ್ರತಿಪಾದನೆಗಳು ಸಂಪ್ರದಾಯವನ್ನು ಕಟು ವಿಮರ್ಶೆಗೆ ಒಳಪಡಿಸಿದವು ಹಾಗೂ ಸಂಪ್ರದಾಯವನ್ನು ಮುರಿದವು. ಈ ಐತಿಹಾಸಿಕ ಘಟನೆಗಳನ್ನು ನಾವು 'ಭಕ್ತಿ ಚಳುವಳಿ' ಎಂದು ಸೂಚಿಸುತ್ತೇವೆ. ಮಧ್ಯಕಾಲದಲ್ಲಿ ಅಸ್ತಿತ್ವದಲ್ಲಿ ಬಂದ ಅನೇಕ ಸಂತರು ಹಾಗೂ ಅವರ ಅನುಯಾಯಿಗಳು ಹಲವಾರು ಭಕ್ತಿ ಪಂಥಗಳನ್ನು ಹುಟ್ಟುಹಾಕಿದ್ದಾರೆ. ಇಂಥ ಪಂಥಗಳು ಶಿವ, ವಿಷ್ಣು, ಕೃಷ್ಣ, ರಾಮ ಮುಂತಾದ ದೇವತೆಗಳ ಜೊತೆಗೇ ಇತರ ಅನೇಕ ಪ್ರಾದೇಶಿಕ ದೇವತೆಗಳಲ್ಲಿ ಕೇಂದ್ರೀಕೃತವಾಗಿವೆ. ಈ ಎಲ್ಲ ದೇವತೆಗಳ ಪೂಜಾ ಸಂಪ್ರದಾಯಗಳು ಸಾಂಸ್ಥಿಕ ರೂಪ ತಳೆದು, ವರ್ಣ–ಜಾತಿಗಳ ಸಾಂಸಾರಿಕರ ವ್ಯವಸ್ಥೆಗಳಾಗಿದ್ದಂತೇ, ಭಕ್ತಿ ಪಂಥಗಳು ಈ ನಿರ್ದಿಷ್ಟ ಸಂಸಾರವನ್ನು ತಿರಸ್ಕರಿಸುವ ವೈರಾಗ್ಯ ಮಾರ್ಗವನ್ನು ಆದರ್ಶವಾಗಿಟ್ಟವು. ಭಕ್ತಿ ಪಂಥದ ಪ್ರವರ್ತಕರು ಕಠಿಣ ಸನ್ಯಾಸವನ್ನೂ ತಿರಸ್ಕರಿಸಿದರು. ಜೊತೆಗೇ ಪ್ರಾಪಂಚಿಕ ಲಾಲಸೆಯನ್ನೂ ತಿರಸ್ಕರಿಸಿದರು.

ಭಕ್ತಿ ಪಂಥಗಳಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ಬಂದ ಟೀಕೆಗಳಿಗೆ ಹಾಗೂ ಧಿಕ್ಕಾರಗಳಿಗೆ ಕಾರಣ ಬೇರೆ ಬೇರೆಯಾಗಿವೆ. ಪ್ರಧಾನವಾಗಿ ನಾವು 'ಅನುಭಾವ' (ಮಿಸ್ಟಿಸಿಸಂ) ಎಂದು ಕರೆಯುವ ಭಕ್ತರ ಗುಣಗಳು ಕಾರಣವಾಗಿರಬಹುದು. ಆದರೆ ಇದಕ್ಕೂ ಒಂದು ಸಾಮಾಜಿಕ–ನೈತಿಕ ಆಯಾಮವಿದೆ ಎಂಬುದನ್ನು ಮರೆಯುವಂತಿಲ್ಲ. ಭಕ್ತಿ ಪಂಥದ ದೇವತೆಗಳೂ ಹಾಗೂ ಭಕ್ತರು, ಪ್ರಾಗೈತಿಹಾಸ ಕಾಲದಿಂದಲೂ ನಡೆದುಕೊಂಡು ಬಂದ ಸಂಪ್ರದಾಯಗಳಾಗಿರಬಹುದು. ಐತಿಹಾಸಿಕವಾಗಿ ವರ್ಣ ಧರ್ಮದ ಪ್ರಭಾವದಿಂದ ದೇವತೆಗಳ ಬ್ರಾಹ್ಮಣೀಕರಣವಾಯಿತು. ಭಕ್ತರಲ್ಲೇ ವಿಭಿನ್ನ ತರಮಯ ಜಾತಿಗಳಾಗಿ, ಪೂಜಾ ವಿಧಾನದಲ್ಲೇ ಶ್ರೇಷ್ಠ, ಕನಿಷ್ಠ ಪ್ರಜ್ಞೆಗಳು ಬೆಳೆದು ಒಂದು ದೇವತೆಯ ಮೂಲ ಭಕ್ತರೇ ಆ ದೇವತೆಯಿಂದ ಪರಕೀಯರಾಗುವಂತಾಯಿತು. ಇಂಥ ಪರಕೀಯತೆ ಭಕ್ತಿ ತತ್ವದ ಒಂದು ವೈರುಧ್ಯವಾಗುತ್ತದೆ. ಈ ವೈರುಧ್ಯವನ್ನು ವರ್ಣ ಧರ್ಮದ ಮೂಲಕ ಹತ್ತಿಕ್ಕಬಹುದು, ಇಲ್ಲ ಸುಧಾರಣೆಯ ಮೂಲಕ ಹೊಂದಿಸಬಹುದು. ಇಲ್ಲ ಪ್ರತಿಭಟನೆಯ ಮೂಲಕ ಸಿಡಿಸಬಹುದು. ಸಾಧಾರಣವಾಗಿ ಇಂಥ ದೇವತೆಗಳು ಐತಿಹಾಸಿಕವಾಗಿ ವಿಭಿನ್ನ ಜಾತಿಯವರ ಆತ್ಮೀಯತೆಯನ್ನೂ ಹೊಂದಿರುವುದರಿಂದ ಭಕ್ತರು ಹಾಗೂ ಅವರ ಪೂಜಾ ವಿಧಿಗಳ ಹೊಂದಾಣಿಕೆ ನಡೆಸುವ ಪ್ರಯತ್ನಗಳೇ ನಡೆದಿವೆ. ಆದರೆ ವರ್ಣ ಧರ್ಮವನ್ನು ಕೈ ಬಿಡದೇ, ಇಂಥ ಸಂಗತಿಗಳು ಅಪವಾದಗಳೆಂಬಂತೇ ಹೊಂದಿಸಿಕೊಳ್ಳಲಾಗುತ್ತದೆ. ಭಕ್ತಿ ಪಂಥದ ಪ್ರವರ್ತಕರು 'ವರ್ಣ'ಕ್ಕಿಂತ ಭಕ್ತಿಯೇ, ಭಕ್ತ ಮತ್ತು ದೇವರ ಸಂಬಂಧದಲ್ಲ ನಿರ್ಣಾಯಕ ಎಂದು ಪ್ರತಿಪಾದಿಸಿದರು. ವರ್ಣದಂತೇ ದೇವಾಲಯ, ಮಠ ಮುಂತಾದ ವ್ಯವಸ್ಥೆಗಳ ಬಗ್ಗೆ ಕೂಡಾ ವಿಮರ್ಶೆಗಳು ಬಂದವು.

ಭಕ್ತಿ ಪಂಥಗಳಲ್ಲಿ ಕೆಲವು ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುವಂಥವೂ ಇವೆ. ಸಮರ್ಥ ರಾಮದಾಸರು, ತುಳಸೀದಾಸರು ಮುಂತಾದವರು ಇಂಥ ಸಂತರಾಗಿದ್ದಾರೆ. ನಮಗೆ ಅವರು ಪ್ರಸ್ತುತರಲ್ಲ. ಇನ್ನು ಕೆಲವು ಪಂಥಗಳು ಮೂಲ ಆಚಾರ್ಯ ಪುರುಷರ ಕಾಲದಲ್ಲಿ ವರ್ಣ ವ್ಯವಸ್ಥೆಯನ್ನು ಮೀರಲು ಪ್ರಯತ್ನಿಸಿದರೂ ನಂತರ ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡಿರಬಹುದು. ಉದಾಹರಣೆಗೆ ರಾಮಾನುಜರು ಶ್ರೀರಂಗನ

ದಾಸರ ಪಂಥದ ಬ್ರಾಹ್ಮಣ ರೂಪವಾಗಿದ್ದಾರೆ. ಅವರು ಶ್ರೀರಂಗಂ ದೇವಾಲಯದಲ್ಲಿ ಎಲ್ಲ ಜಾತಿಯ ಭಕ್ತರಿಗೂ ಧಾರ್ಮಿಕ ಆಚರಣೆ ಹಾಗೂ ಆಡಳಿತದಲ್ಲಿ ಪಾಲು ದೊರೆಯುವಂತೆ ಮಾಡಿದರು. ಅಂದರೆ ಎಲ್ಲ ಜಾತಿಯವರನ್ನೂ ಬ್ರಾಹ್ಮಣೀಕರಿಸಲಿಲ್ಲ. ಬದಲಾಗಿ ಶೂದ್ರರನ್ನು 'ಜನಿವಾರವಿಲ್ಲದ ಪವಿತ್ರ ಜನರು' ಎಂದು ಕರೆದರು. ಸಂಸ್ಕೃತ ಮಂತ್ರಗಳ ಜೊತೆಗೇ ಆಳ್ವಾರರ ಭಕ್ತಿ ಪ್ರಬಂಧಗಳೂ ಮಂತ್ರಗಳಾದವು. ಈ ಕಾಲದಲ್ಲಿ ನಮ್ಮಾಳ್ವಾರ್, ತಿರುಪ್ಪಾಳ್ವಾರ್ ಮುಂತಾದ ಬ್ರಾಹ್ಮಣೇತರರೂ ಆಚಾರ್ಯ ಪರಂಪರೆ ಸೇರಿದರು. ಆದರೆ ಕಾಲಾಂತರದಲ್ಲಿ ಇದನ್ನು ವಿರೋಧಿಸುವ ವಡಗಲೈ ಪಂಥ ಅಸ್ತಿತ್ವಕ್ಕೆ ಬಂದಿತು. ವಡಗಲೈ ಪಂಥದವರು ರಾಮಾನುಜರ ಸುಧಾರಣೆಯ ದಾರಿಯಿಂದ ಪ್ರತ್ಯೇಕರಾಗಿ ಬ್ರಾಹ್ಮಣಿಕೆಗೆ ಮರಳಿದರು. ಆದರೆ ರಾಮಾನುಜರ ಸುಧಾರಣೆಯನ್ನು ಒಪ್ಪಿಕೊಂಡ ತೆಂಕಲೈ ಪಂಥದವರೂ ಇದ್ದಾರೆ. ಅಷ್ಟಾಗಿಯೂ ಪೂಜೆಯಲ್ಲಿ ಶೂದ್ರರಿಗೂ ಸ್ಥಾನಮಾನ ಕಲ್ಪಿಸುವ ವಿಚಾರಗಳು ಸಂಸ್ಕೃತ ಪುರಾಣಗಳಲ್ಲೂ, ವರ್ಣ ವ್ಯವಸ್ಥೆಯಲ್ಲೂ ಮಧ್ಯ ಕಾಲಕ್ಕಾಗಲೇ ಬಂದಿದ್ದವು. ರಾಮಾನುಜರು ಎಷ್ಟರಮಟ್ಟಿಗೆ ವರ್ಣ ವ್ಯವಸ್ಥೆಯನ್ನು ಈ ಮೂಲಕ ಮೀರುತ್ತಾರೆ ಎಂಬುದು ಗಮನಿಸಬೇಕಾದ ಪ್ರಶ್ನೆಯೇ ಆಗಿದೆ.

ರಾಮಾನುಜರ ಕಾಲದ ನಂತರ ಕರ್ನಾಟಕದಲ್ಲಿ ಆಗಿಹೋದ ಶೈವ ಜಂಗಮ ಶರಣರು, ಮಹಾರಾಷ್ಟ್ರದ ವಿಠಲನ ಭಕ್ತರು ಶೂದ್ರ ಪ್ರಧಾನ ಭಕ್ತಿ ಪಂಥಗಳನ್ನು ಹುಟ್ಟು ಹಾಕಿದರು. ಇವರು ಜಾತಿ ಪದ್ಧತಿಯ ಕಟುವಿಮರ್ಶೆ ನಡೆಸಿದ್ದಾರೆ. ಅಂತೆಯೇ ಹದಿನಾರು–ಹದಿನೇಳನೆಯ ಶತಮಾನದಲ್ಲಿ ಆಗಿ ಹೋದ ಚೈತನ್ಯ, ಸಂತ ಕಬೀರರು ಹಾಗೂ ಗುರುನಾನಕರು ಜಾತಿಯ ಜೊತೆಗೇ ಹಿಂದೂ–ಮುಸ್ಲಿಂ ಭೇದಗಳನ್ನು ವಿರೋಧಿಸಿದರು. ಜೊತೆಗೇ ಇನ್ನೂ ಅನೇಕ ಪ್ರಾದೇಶಿಕ ಪಂಥಗಳೂ ಆಗಿ ಹೋಗಿವೆ. ಇವುಗಳ ವೈಶಿಷ್ಟ್ಯ ಎಂದರೆ ಇವೆಲ್ಲ ಪ್ರಾದೇಶಿಕ ಸಂಸ್ಕೃತಿ, ಭಾಷೆ ಹಾಗೂ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಇವು ನೇರವಾಗಿ 'ಜಾತಿ'ಯನ್ನು ಕುರಿತು (ಪ್ರಾದೇಶಿಕ ಜಾತಿಗಳು) ಜನಸಾಮಾನ್ಯರು ಗ್ರಹಿಸಿದಂತೇ ಗ್ರಹಿಸಿ ತಮ್ಮ ಟೀಕೆಯನ್ನು ಮಂಡಿಸುತ್ತವೆ. ಇಂಥ ಟೀಕೆಗಳ ಸಾರಾಂಶ ಈ ರೀತಿಯಲ್ಲಿ ಇದೆ:

೧) ಜಾತಿಯಲ್ಲಿ ಮೇಲು–ಕೀಳು ಎಂಬುದು ಇಲ್ಲ. ಮನುಷ್ಯನ ಸತ್ವ ನಿರ್ಣಯವಾಗುವುದು ಆತನ ಪ್ರಾಮಾಣಿಕತೆ, ಸತ್ಯ, ನೀತಿ, ಜ್ಞಾನ, ಭಕ್ತಿ, ಸಾಧನೆ ಮುಂತಾದ ಸದ್ಗುಣಗಳಿಂದ. ಪರಮಾತ್ಮನು ಮನುಷ್ಯನ ಈ ಸದ್ಗುಣಗಳನ್ನು ನೋಡಿ ಅಳೆಯುತ್ತಾನೆಯೇ ಹೊರತು ಜಾತಿಯನ್ನಲ್ಲ.

೨) ಇವು ಬ್ರಾಹ್ಮಣ ಪೌರೋಹಿತ್ಯವನ್ನು ವಿರೋಧಿಸುತ್ತವೆ. ಭಕ್ತ ಮತ್ತು ಪರಮಾತ್ಮನ ಮಧ್ಯೆ ಮಂತ್ರ–ತಂತ್ರಗಳು, ಕೃತಕ ಶಾಸ್ತ್ರ, ಶ್ರೇಣೀಕರಣ, ಕ್ಲಿಷ್ಟ, ಅರ್ಥಹೀನ ಸಂಬಂಧ, ಆಡಂಬರ ಮುಂತಾದವು ಅನಗತ್ಯ. ಅಷ್ಟೇ ಅಲ್ಲ ಈ ಇಡೀ ವ್ಯವಸ್ಥೆಯನ್ನೇ ಒಂದು ಸ್ವಾರ್ಥ ಸಾಧನೆ ಎಂಬಂತೇ ನೋಡಲಾಗುತ್ತದೆ. ಆಸ್ತಿ–ಅಧಿಕಾರ ಹಾಗೂ ಅಂತಸ್ತು ಇರುವವರೇ ದೈವ ಕಲ್ಪನೆಯ ವಕ್ತಾರರಾಗುವ ಸಾಧ್ಯತೆಯನ್ನು ಅಲ್ಲಗಳೆದು ದೈವ ಕಲ್ಪನೆಯ ವಾರಸುದಾರಿಕೆಯನ್ನು ಕೆಲ ಮಾನವೀಯ ಮೌಲ್ಯಗಳ ಮೇಲೆ ನಿಲ್ಲಿಸಲು ಪ್ರಯತ್ನಿಸುತ್ತಾರೆ.

ಈ ಮೇಲಿನ ರೀತಿಯ ಟೀಕೆಗಳು ಜಾತಿ ವ್ಯವಸ್ಥೆಯ ವರ್ಣ ವಿಭಾಗದ ಟೀಕೆಯೇ ಆಗಿವೆ. ಒಂದು ಜಾತಿಗೆ ಅದರದ್ದೇ ಆದ ಗುಣ–ಸ್ವಭಾವ ಇರುತ್ತದೆ. ಆ ಜಾತ್ಯಸ್ಥರಲ್ಲೆಲ್ಲಾ ಆ ಗುಣ ಅಂತರ್ಗತವಾಗಿರುತ್ತದೆ. ಹಾಗಾಗಿ ಅವರಿಗೆ ಒಂದೇ ವೃತ್ತಿ ಹಾಗೂ ಸ್ಥಾನಮಾನ. ಈ ಸ್ಥಾನಮಾನ ಅಥವಾ ಜಾತಿ ಅದರಲ್ಲಿ ಹುಟ್ಟುವವರ ಪೂರ್ವಾರ್ಜಿತ ಕರ್ಮ ಎಂಬೆಲ್ಲಾ ತರ್ಕಗಳನ್ನು ಬೆಳೆಸಿದ್ದು ವರ್ಣ ವ್ಯವಸ್ಥೆ. ಮಧ್ಯ ಯುಗದ ಭಕ್ತಿ ಪಂಥಗಳಲ್ಲಿ ಹಲವು ಈ ವರ್ಣ ವ್ಯವಸ್ಥೆಯ ಪ್ರತಿಪಾದನೆಯನ್ನು ಅಲ್ಲಗಳೆವು. ಶೂದ್ರ ಹಾಗೂ ಅಸ್ಪೃಶ್ಯನೂ ಕೂಡ ಬ್ರಾಹ್ಮಣರಿಗೂ ಶ್ರೇಷ್ಠವಾದ ಸ್ಥಾನದಲ್ಲಿರುವ ಗುರುಗಳಾಗುಬಹುದು. ಅಷ್ಟೇ ಅಲ್ಲ ವೈಯಕ್ತಿಕ ವರ್ಚಸ್ಸು, ಸದ್ಗುಣಗಳಲ್ಲದೇ ಬರೀ ಬ್ರಾಹ್ಮಣನಾಗುವುದೊಂದೇ ಆಯಾ ವ್ಯಕ್ತಿಯ ಶ್ರೇಷ್ಠತೆ ಅಲ್ಲವೇ ಅಲ್ಲ ಎಂಬಂಥ ವಿಚಾರಗಳನ್ನು ಈ ಭಕ್ತಿ ಪಂಥದವರು ನಂಬಿ ಪ್ರತಿಪಾದಿಸಿದರು. ಹಾಗಾಗಿ ಕರ್ನಾಟಕದ ಜಂಗಮ ಶರಣರ ಪಂಥದಲ್ಲಿ ಹಾಗೂ ಮಹಾರಾಷ್ಟ್ರದ ವಿಠಲನ ಭಕ್ತರಲ್ಲಿ ಮಹಾತ್ಮರೆನಿಸಿಕೊಂಡವರು ಅಸ್ಪೃಶ್ಯರಾದಿಯಾಗಿ ನಾನಾ ಬ್ರಾಹ್ಮಣೇತರ ಜಾತಿಗಳಿಂದಲೂ ಬಂದಿದ್ದಾರೆ. ಜೇಡರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ ಮುಂತಾದ ಜಂಗಮರನ್ನು ಬಸವಣ್ಣನೇ ತನ್ನ ತಂದೆಯ ಸಮಾನರೆಂದು ಗೌರವಿಸಿದ್ದನು. ಅವರೆದುರು 'ತಾನು ಬ್ರಾಹ್ಮಣ ಎಂದರೆ ಕೂಡಲ ಸಂಗಮ ನಗುತ್ತಾನೆ' ಎಂದು ವಚನವೊಂದರಲ್ಲಿ ಬಸವಣ್ಣ ಹೇಳಿಕೊಳ್ಳುತ್ತಾನೆ. ಮಹಾರಾಷ್ಟ್ರದ ಮಹಾ ಸಂತರಾದ ತುಕಾರಾಂ, ನಾಮದೇವ, ಚೋಖಾಮೇಳಾ ಮುಂತಾದವರೂ ಇಂಥ ತತ್ವಗಳನ್ನು ಆಚರಿಸಿದರು. ಬಂಗಾಳದಲ್ಲಿ ಚೈತನ್ಯರ ಪಟ್ಟ ಶಿಷ್ಯರಲ್ಲಿ ಮುಸ್ಲಿಮರೂ, ಗೋಸ್ವಾಮಿಗಳೆನ್ನಿಸಿಕೊಂಡಿದ್ದಾರೆ. ಕಬೀರರು 'ಪ್ರಾರಂಭದಲ್ಲಿ ಟರ್ಕ, ಹಿಂದೂ ಎಂಬ ಗುರುತಿರಲಿಲ್ಲ, ಜಾತಿ ಜನಾಂಗಗಳೂ ಇರಲಿಲ್ಲ. ಇದನ್ನೆಲ್ಲ ಮನುಷ್ಯನೇ ಮಾಡಿಕೊಂಡಿದ್ದು' ಎಂದು ಸಾರಿದರು. ಮಧ್ಯಯುಗದಲ್ಲಿ ನಾನಾ ಜಾತಿಯವರು ಸಂತರಾಗಿ ಸಮಾಜದಲ್ಲಿ ಪೂಜೆಗೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ತುಳಸೀದಾಸರು ಇಂಥ ಪರಿಸ್ಥಿತಿಯ ಬಗ್ಗೆ ತಮ್ಮ ವರ್ಣಪರ ದೃಷ್ಟಿಯಿಂದ ವ್ಯಂಗ್ಯಮಾಡಿದ್ದಾರೆ: 'ಕುಂಬಾರ, ಚಂಡಾಲ, ಕಿರಾತ, ಕೋಲ್, ಕಲ್ವಾರ ಮುಂತಾದ ಕೀಳು ಜಾತಿಯವರೆಲ್ಲಾ ತಲೆ ಬೋಳಿಸಿಕೊಂಡು ಸನ್ಯಾಸಿಗಳಾಗುತ್ತಿದ್ದಾರೆ ಹಾಗೂ ಬ್ರಾಹ್ಮಣರು ಅವರ ಪಾದ ತೊಳೆದು ಪೂಜಿಸುತ್ತಿದ್ದಾರೆ'. ಹೀಗೆ ಮಧ್ಯ ಕಾಲದ ಭಕ್ತಿ ಪಂಥಗಳು ವರ್ಣ ಧರ್ಮ ಕಟ್ಟಿಕೊಟ್ಟ ಪವಿತ್ರ–ಅಪವಿತ್ರ ಕಲ್ಪನೆಗಳನ್ನು ಪಲ್ಲಟಮಾಡುವಲ್ಲಿ ಗಣನೀಯ ಯಶಸ್ಸು ಸಾಧಿಸಿದ್ದವು.

ಆದರೆ ಈ ಎಲ್ಲ ವಿಚಾರಗಳೂ ಜಾತಿಗಳ ಸ್ಥಾನ–ಮಾನದ ಕುರಿತಾಗಿ ವ್ಯಕ್ತವಾದ ವಿಚಾರಗಳೇ ಹೊರತು 'ಜಾತಿ' ಎಂಬುದೊಂದು ಸಾಮಾಜಿಕ ಘಟಕವಾಗಿ ಉಳಿಯಬೇಕೆ? ಎಂಬುದರ ಕುರಿತು ಅಲ್ಲ. ಒಂದು ಜಾತಿಗಿರುವ ವರ್ಣ ನಿರ್ಬಂಧವನ್ನು ಧಿಕ್ಕರಿಸಿದ ನಂತರವೂ ಜಾತಿ ಎನ್ನುವುದು ಉಳಿಯುತ್ತದೆ. ಅದನ್ನೇ ವಿನಾಶ ಮಾಡಬೇಕೆ? ಎಂಬ ಸ್ಪಷ್ಟವಿಚಾರಗಳು ಸಿಗುವುದಿಲ್ಲ. ಆದರೆ ವಚನಕಾರರು ಮಾತ್ರ ಈ ದೃಷ್ಟಿಯಿಂದ ಉಳಿದೆಲ್ಲ ಭಕ್ತಿ ಪಂಥಗಳಿಂದ ವಿಶಿಷ್ಟರಾಗುತ್ತಾರೆ. ವಚನಗಳಲ್ಲಿ ಜಾತಿ ಭೇದವನ್ನು ನಾನಾ ರೀತಿಯಲ್ಲಿ ಟೀಕಿಸಲಾಗಿದೆಯೆಂದೇ ಅಲ್ಲ, ಇದೆಲ್ಲದ, ತಾರ್ಕಿಕ ಅಂತ್ಯ ಎಂಬಂತೇ ಕಲ್ಯಾಣದಲ್ಲಿ ಬ್ರಾಹ್ಮಣ ಮಧುವರಸ ಹಾಗೂ ಅಸ್ಪೃಶ್ಯ ಹರಳಯ್ಯನವರ ಮಕ್ಕಳ ಮದುವೆಯಾಗಿ ಕೋಲಾಹಲವಾಗುತ್ತದೆ. ಈ ರೀತಿಯ ಮದುವೆಯನ್ನು ಧರ್ಮಶಾಸ್ತ್ರಗಳು ವರ್ಣ ಸಂಕರ ಎಂದು ಗುರುತಿಸಿದ್ದವು. ಹಾಗೂ ವರ್ಣ ಸಂಕರ ಎನ್ನುವುದು ಸಮಾಜವನ್ನೇ ನಾಶಮಾಡುತ್ತದೆ ಹಾಗಾಗಿ ಮಹಾಪಾಪ ಎಂದು ಧಿಕ್ಕರಿಸಿದ್ದವು. ಆದರೆ ಇತಿಹಾಸದುದ್ದಕ್ಕೂ ವರ್ಣ ಸಂಕರ

ವಿವಾಹಗಳು ನಡೆಯುತ್ತಲೇ ಬಂದಿವೆ. ಅವು ಯಾವುವೂ ಕಲ್ಯಾಣದ ಶರಣರ ಮದುವೆಯಂತೇ ವರ್ಣ ವ್ಯವಸ್ಥೆಗೆ 'ಅಪಾಯ'ದ ಸಂಕೇತಗಳಾಗಲಿಲ್ಲ. ಕಾರಣ ಎಂದರೆ ಸಂಕರ ವಿವಾಹಗಳನ್ನು ಅಧರ್ಮ ಎಂದು ನಿಷೇಧಿಸಲಾಗಿತ್ತು. ಯಾರಾದರೂ ಅಂಥ ವಿವಾಹವಾದರೆ ಅವರು ಸಾಮಾಜಿಕವಾಗಿ ಬಹಿಷ್ಕೃತರಾಗುತ್ತಿದ್ದರು. ಹಾಗೂ ತಮ್ಮದೇ ಬೇರೆ ಕೀಳು ಜಾತಿಯವರಾಗುತ್ತಿದ್ದರು. ವರ್ಣ ವ್ಯವಸ್ಥೆಯ ಸುಭದ್ರತೆಗೆ ಇಂಥ ಸಂಕರ ವಿವಾಹಗಳು ಹಾಗೂ ಬಹಿಷ್ಕೃತರು ಒಂದು ಋಣಾತ್ಮಕ ನಿದರ್ಶನಗಳಾಗುತ್ತಿದ್ದರು. ಶರಣರ ಮದುವೆ 'ಬಹಿಷ್ಕಾರ' ಸಂಪ್ರದಾಯವನ್ನು ಧಿಕ್ಕರಿಸುವ, ಸಂಕರ ವಿವಾಹಗಳನ್ನು 'ಸಮ್ಮತ' ವಿವಾಹಗಳನ್ನಾಗಿ ಮಾಡುವ ಪ್ರಯತ್ನವಾಗಿತ್ತು. ಇದು ಜಾತಿ ಪದ್ಧತಿಯ 'ಸಂಕರ' ವಿವಾಹವಾಗದೇ, 'ಸಂಕರ' ಕಲ್ಪನೆಯನ್ನೇ ಅಳಿಸುವ ನಿಟ್ಟಿನದಾಗಿತ್ತು. ಹಾಗಾಗಿ ಜಾತಿ ವ್ಯವಸ್ಥೆಗೆ ಸಂಬಂಧಿಸಿ ವಚನಕಾರರು ಆಧುನಿಕ ಪೂರ್ವಯುಗದ ಅದ್ವಿತೀಯ ವಿಮರ್ಶಕರು ಎನ್ನಬಹುದು.

ಹೀಗೆ ಆಧುನಿಕ ಪೂರ್ವ ಯುಗ ಜಾತಿ ವ್ಯವಸ್ಥೆಯ ವಿರೋಧದ ವಿಭಿನ್ನ ಹಂತಗಳ ತರ್ಕಗಳನ್ನು ಭಕ್ತಿ ಪಂಥಗಳ ಮೂಲಕ ಬೆಳೆಸಿಕೊಟ್ಟಿದೆ.

ಆಧುನಿಕ ಯುಗದಲ್ಲಿ ಜಾತಿ ಪದ್ಧತಿಯ ಕುರಿತ ವಿಮರ್ಶೆಗಳು:

ಭಾರತದಲ್ಲಿ ವಸಾಹತುಶಾಹಿ ಯುಗ ಹಾಗೂ ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಾರಂಭ ಹೊಸ ಚಿಂತನೆಗಳ ಬೆಳವಣಿಗೆಗೆ ಕಾರಣವಾಯಿತು. ಪಾಶ್ಚಾತ್ಯ ಮಾನವತಾವಾದದ ಹಾಗೂ ಸ್ವಯಂತಂತ್ರವಾದದ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಪ್ರಗತಿ, ವೈಚಾರಿಕತೆ, ವಿಜ್ಞಾನ ಮುಂತಾದವುಗಳಿಂದ ಪ್ರೇರಿತರಾದ ಭಾರತೀಯರು ಭಾರತೀಯ ಸಮಾಜವನ್ನು ಸುಧಾರಿಸುವ ಪ್ರಯತ್ನಗಳನ್ನು ನಡೆಸಿದರು. ಸ್ತ್ರೀಯರ ಸ್ಥಾನಮಾನ, ವಿದ್ಯಾಭ್ಯಾಸ, ವಿಧವಾ ವಿವಾಹ, ಸತಿ ಹಾಗೂ ಬಾಲ್ಯ ವಿವಾಹ ಮುಂತಾದ ಪದ್ಧತಿಗಳ ನಿರ್ಮೂಲನೆ, ಜಾತಿ ಪದ್ಧತಿ, ಅಸ್ಪೃಶ್ಯತೆಗಳ ನಿರ್ಮೂಲನೆ ಮುಂತಾದ ಅನೇಕ ಸುಧಾರಣೆಗಳ ಕುರಿತು ಸುಧಾರಣಾವಾದೀ ಮುಖಂಡರು ಪ್ರತಿಪಾದಿಸಿದರು. ಇಂಥ ಸುಧಾ ರಣಾವಾದಿಗಳನ್ನೆಲ್ಲ ಒಂದೇ ನಿಟ್ಟಿನಿಂದ ನೋಡುವುದು ಸಾಧ್ಯವಿಲ್ಲ. ಹತ್ತೊಂಭತ್ತನೆಯ ಶತಮಾನದ ಪ್ರಾರಂಭದಿಂದ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೆ ಸುಮಾರು ೧೫೫ ವರ್ಷಗಳವರೆಗೆ ಬೇರೆ ಬೇರೆ ಕಾಲದಲ್ಲಿ ಈ ಚಳುವಳಿಗಳು ನಡೆದಿವೆ. ಅವನ್ನು ಈ ಕೆಳಗಿನಂತೆ ವಿಂಗಡಿಸಬಹುದು:

ಅ) ಹತ್ತೊಂಭತ್ತನೆಯ ಶತಮಾನದ ಸಾಮಾಜಿಕ ಸುಧಾರಣಾ ವಾದಿಗಳು– ಇವರಲ್ಲಿ ರಾಜಾರಾಮ್ ಮೋಹನ್ ರಾಯ್, ಈಶ್ವರ ಚಂದ್ರ ವಿದ್ಯಾಸಾಗರ, ಮಹದೇವ ಗೋವಿಂದ ರಾನಡೆ, ಪಂಡಿತ ರಮಾಬಾಯಿ ಮುಂತಾದವರನ್ನು ಹೆಸರಿಸಬಹುದು.

ಆ) ಹತ್ತೊಂಭತ್ತನೆಯ ಶತಮಾನದ ಧಾರ್ಮಿಕ ಸುಧಾರಣಾ ವಾದಿಗಳು– ದಯಾನಂದ ಸರಸ್ವತಿಯವರು, ಸ್ವಾಮಿ ವಿವೇಕಾನಂದರು ಮುಂತಾದವರು. ರಾಜಾ ರಾಮ್ ಮೋಹನ್ ರಾಯ್ ಅವರ ಕಾಲದಿಂದ ಪ್ರಾರಂಭವಾದ ಸಾಮಾಜಿಕ ಸುಧಾರಣೆಗೆ ಸನಾತನಿಗಳು ಪ್ರತಿಕ್ರಿಯಿಸಿ, ಭಾರತೀಯ ಸಂಪ್ರ ದಾಯವನ್ನು ರಕ್ಷಿಸುವ ಪ್ರವೃತ್ತಿಗಿಳಿದರು. ಧಾರ್ಮಿಕ ಸುಧಾರಣಾವಾದಿಗಳು ಸಮಾಜ ಸುಧಾರಣಾವಾದಿಗಳ ಅನೇಕ ವಿಚಾರಗಳನ್ನು ಬೆಂಬಲಿಸಿ ಭಾರತೀಯ ಸಂಪ್ರದಾಯದ ಮರು ನಿರೂಪಣೆ ಮಾಡುವ ಪ್ರಯತ್ನ ನಡೆಸಿದರು.

ಇ) ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಸಂತ್ರಸ್ತರಾದವರ ಹೋರಾಟ– ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಮಹಾತ್ಮಾ ಫುಲೆಯವರು ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರರು. ಈ ರೀತಿಯ ಸುಧಾರಣಾವಾದಿಗಳಲ್ಲಿ ಅಗ್ರಗಣ್ಯರು. ಈ ಹೋರಾಟ ಒಟ್ಟಾರೆಯಾಗಿ ವರ್ಣ ವ್ಯವಸ್ಥೆ, ಬ್ರಾಹ್ಮಣ ಪುರೋಹಿತಶಾಹಿಗಳ ವಿರುದ್ಧ ನಡೆದದ್ದಾಗಿದೆ. ಬ್ರಾಹ್ಮಣ ಪುರೋಹಿತಶಾಹಿಯನ್ನು 'ಆರ್ಯ' ಸಂಸ್ಕೃತಿಗೆ ಸಮೀಕರಿಸಿದ ತಮಿಳ್ನಾಡಿನ ಪೆರಿಯಾರ್‌ರ ದ್ರಾವಿಡ ಚಳುವಳಿ ಕೂಡ ಈ ಸಾಲಿಗೆ ಸೇರುತ್ತದೆ. ಇವೆಲ್ಲ ಹತ್ತೊಂಭತ್ತನೆಯ ಶತಮಾನದಲ್ಲಿ ಸುಧಾರಣಾವಾದಿ ಹಾಗೂ ಸನಾತನವಾದಿ ಚಳುವಳಿಗಳಿಂದ ಬೆಳೆದ ಬ್ರಾಹ್ಮಣ ರಾಷ್ಟ್ರ ಕಲ್ಪನೆಯ ವಿರುದ್ಧ ತಮ್ಮ ಹೋರಾಟ ನಡೆಸಿದರು. ಈ ಹೋರಾಟಗಳಿಗೆ ಈ ಶತಮಾನದಲ್ಲಿ ಉಂಟಾದ ಮತ್ತೊಂದು ಮುಖ್ಯ ಕಾರಣ ಎಂದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಬ್ರಾಹ್ಮಣ ಸಂಸ್ಕೃತಿಯ ಯಜಮಾನಿಕೆಯನ್ನು ಪ್ರತಿಪಾದಿಸುತ್ತಿದೆ ಎಂಬ ಗ್ರಹಿಕೆ.

ಈ) ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳುಗಳು– ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸು ಸಮಾಜ ಸುಧಾರಣಾವಾದ ಹಾಗೂ ಧಾರ್ಮಿಕ ಸುಧಾರಣಾವಾದಗಳ ತತ್ವಗಳನ್ನು, ಮುಖಂಡರನ್ನು ಒಳಗೊಂಡಿತ್ತು. ಆದರೆ ಶೀಘ್ರದಲ್ಲೇ ಸಾಮಾಜಿಕ ಸುಧಾರಣೆ ರಾಷ್ಟ್ರೀಯ ಚಳುವಳಿಯನ್ನು ಕಟ್ಟುವಲ್ಲಿ ಅಡ್ಡಗೋಲಾಗುತ್ತದೆ ಎಂದು ಅರಿತು ತಿಲಕರಂಥ ಮುಂದಾಳುಗಳು ಅದನ್ನು ಕಾಂಗ್ರೆಸ್ಸಿನಿಂದ ಪ್ರತ್ಯೇಕಿಸಿದರು. ಕಾಂಗ್ರೆಸ್ಸಿನ ಈ ನಿಲುವು ಅಂಬೇಡ್ಕರ್‌ರಂಥ ಮುಂದಾಳುಗಳಿಂದ ಸಂಶಯಾಸ್ಪದವಾಗಿ ನೋಡಲ್ಪಟ್ಟಾಗ ಈ ಶತಮಾನದ ಇಪ್ಪತ್ತರ ದಶಕದ ಸುಮಾರಿಗೆ ಗಾಂಧಿಯಂಥ ಮುಂದಾಳುಗಳು ರಾಷ್ಟ್ರೀಯ ಹೋರಾಟಕ್ಕೆ ಧಕ್ಕೆ ಬರದ ರೀತಿಯಲ್ಲಿ ಸಮಾಜ ಸುಧಾರಣೆಯನ್ನು ಒಳಗೊಂಡರು.

ಈ ಮೇಲಿನ ಎಲ್ಲ ಪ್ರಕಾರದ ಸುಧಾರಣಾವಾದಿಗಳೂ ಭಾರತೀಯ ಜಾತಿ ವ್ಯವಸ್ಥೆಯನ್ನು ಟೀಕಿಸಿದ್ದಾರೆ. ಮೇಲಿನವರಲ್ಲಿ ಮೂರನೆಯ ಪ್ರಕಾರದವರನ್ನು ಬಿಟ್ಟು ಉಳಿದವರಿಗೆ ಜಾತಿ ಅವರ ಹೋರಾಟದ ಕೇಂದ್ರ ಸಮಸ್ಯೆಯಾಗುವುದಿಲ್ಲ. ಆದರರ್ಥ ಆ ಕುರಿತು ಅವರ ಪ್ರಾಮಾಣಿಕತೆಯನ್ನು ಸಂದೇಹಿಸುವ ಹೇಳಿಕೆ ಇದಲ್ಲ. ಅವರ ಹೋರಾಟದ ಸ್ವರೂಪವೇ ಹಾಗಿದೆ ಹಾಗೂ ಆ ಸುಧಾ ರಣಾವಾದಿಗಳ ನಿಲುವನ್ನು ಪ್ರೇರೇಪಿಸಿರುವ ಐತಿಹಾಸಿಕ ಸನ್ನಿವೇಶಗಳೇ ಬೇರೆಯಾಗಿವೆ. ಅವರು ವರ್ಣ ಧರ್ಮವನ್ನು ಒಂದು ವೈಚಾರಿಕ ವ್ಯವಸ್ಥೆಯನ್ನಾಗಿ ಉಳಿಸಿಕೊಳ್ಳಲು ಬಯಸುತ್ತಾರೆ ಹಾಗೂ ತಮ್ಮ ಸಮಕಾಲೀನ ಜಾತಿ ಪದ್ಧತಿ ಮೌಢ್ಯದಿಂದಾಗಿ ಬೆಳೆದಿದೆ; ಅದು 'ವರ್ಣ' ಕಲ್ಪನೆಯ ವಿಕಾರ ಎಂದು ನೋಡಬಯಸುತ್ತಾರೆ. ಈ ರೀತಿಯ ವಿಕಾರಾವಸ್ಥೆಗೆ ಬ್ರಾಹ್ಮಣ ಪುರೋಹಿತರು ಹಾಗೂ ಕಾಲಾಂತರದಲ್ಲಿ ಬೆಳೆದ ಅಜ್ಞಾನ ಕಾರಣವಾಗಿದೆ. ಈ ಅಜ್ಞಾನ– ಮೌಢ್ಯಗಳನ್ನೆಲ್ಲ ತೊಡೆದು ವೈಚಾರಿಕ ತಳಹದಿಯ ಮೇಲೆ ಈ ವ್ಯವಸ್ಥೆಯನ್ನು ನಿಲ್ಲಿಸಬೇಕು ಎಂಬ ಧೋರಣೆಯನ್ನು ಸ್ಥೂಲವಾಗಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ ಹಾಗೂ ಗಾಂಧೀಜಿಯವರಲ್ಲಿ ಕಾಣಬಹುದು. ಬಹುಶಃ ಈ ಸುಧಾರಣಾವಾದಿಗಳು ಭಾರತೀಯ ಧಾರ್ಮಿಕ ಪುನರುತ್ಥಾನ ಹಾಗೂ ರಾಷ್ಟ್ರೀಯತೆಯನ್ನು ತಮ್ಮ ಕೇಂದ್ರ ಸಮಸ್ಯೆಯನ್ನಾಗಿಟ್ಟುಕೊಂಡಿದ್ದರಿಂದ ಹೀಗಿರಬಹುದು.

ಆದರೆ ರಾಜಾರಾಮ್ ಮೋಹನ್‌ರಾಯ್ ಅವರು ಕಟ್ಟಾ ಆಧುನಿಕರಾಗಿದ್ದರು. ಅವರ 'ಬ್ರಹ್ಮ ಸಮಾಜ' ನಿರಾಕಾರ ಬ್ರಹ್ಮ ತತ್ವದ ಕಲ್ಪನೆಯ ಮೇಲೆ ಸರ್ವಸಮಾನ ಸಮಾಜವನ್ನು ಹುಟ್ಟುಹಾಕಲಿಕ್ಕಾಗಿ ಸ್ಥಾಪನೆಯಾದದ್ದು. 'ಜಾತಿ ಪದ್ಧತಿ ನಮ್ಮ ಸಮಾಜದ ಎಲ್ಲ ಅನಿಷ್ಟ

ಪದ್ಧತಿಗಳ ತಾಯಿಬೇರು. ಅದನ್ನು ಸಂಪೂರ್ಣವಾಗಿ ನಾಶ ಮಾಡದ ಹೊರತು ನಮಗೊಂದು ಉತ್ತಮ ಭವಿಷ್ಯ ಇಲ್ಲ ಎಂಬುದಕ್ಕಿಂತ ಅಪ್ಪಟ ಸತ್ಯ ಮತ್ತೊಂದಿರಲಾರದು' ಎಂದು ಅವರು ಪ್ರತಿಪಾದಿಸಿದರು. ಬ್ರಹ್ಮೋಸಮಾಜಿಗಳ ಈ ವಿಚಾರಧಾರೆ ಕೇಶವಚಂದ್ರ ಸೇನರು ಅದರ ಆಚಾರ್ಯರಾಗಿ ೧೮೬೨ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಆಚರಣೆಯಲ್ಲಿ ಬಂದಿತು. ಕೇಶವ ಚಂದ್ರಸೇನರು ಬ್ರಹ್ಮಸಮಾಜದವರಿಗೆ ಜಾತಿ ನಿರ್ಬಂಧವಿರ ಕೂಡದು ಎಂದು ವಾದಿಸಿದರು. ಅಷ್ಟೇ ಅಲ್ಲ ಅವರು ತಮ್ಮ ವಿವಾಹದಲ್ಲಿ ಜಾತೀಯ ವಿವಾಹ ವಿಧಿಗಳನ್ನು ಬಿಡಬೇಕು. ಈ ರೀತಿ ಅಂತರ್ಜಾತೀಯ ವಿವಾಹವೇ ಬ್ರಹ್ಮ ಸಮಾಜಿಯ ಆಚರಣೆಯಾಗಬೇಕು ಎಂದರು. ಇದಕ್ಕೆ ಕಾನೂನಿನ ಬೆಂಬಲ ದೊರಕಿಸುವಲ್ಲಿ ಕೂಡ ಅವರು ಸಫಲರಾದರು. ೧೮೭೨ ರಲ್ಲಿ ಬ್ರಿಟಿಷ್ ಸರ್ಕಾರ 'ಸಿವಿಲ್ ಮ್ಯಾರೇಜ್ ಆ್ಯಕ್ಟ್'ನ್ನು ಜಾರಿಯಲ್ಲಿ ತಂದಿತು. ಇದನ್ನು ಬ್ರಾಹ್ಮೆ ವಿವಾಹ ಕಾಯಿದೆ ಅಂತ ಕೂಡ ಕರೆಯುತ್ತಾರೆ. ಇದರ ಪ್ರಕಾರ 'ತಾನು ಹಿಂದುವಲ್ಲ, ಮುಸ್ಲಿಂ ಅಲ್ಲ, ಕ್ರಿಶ್ಚಿಯನ್ ಅಲ್ಲ' ಎಂದು ಪ್ರತಿಜ್ಞಾವಿಧಿ ಸ್ವೀಕರಿಸಿದ ಯಾರಾದರೂ ಜಾತಿ ಹಾಗೂ ಜಾತಿ ವಿಧಿಗಳನ್ನು ಧಿಕ್ಕರಿಸಿ ವಿವಾಹವಾಗಬಹುದು. ಆದರೆ ಅವರು ಕೆಲ ಷರತ್ತುಗಳನ್ನು ಪಾಲಿಸಬೇಕು. ಅಂಥವರು ಏಕಪತ್ನೀವ್ರತಸ್ಥರಾಗಿರಬೇಕು. ವಧುವಿಗೆ ೧೪ ವರ್ಷ ಹಾಗೂ ವರನಿಗೆ ೧೮ ವರ್ಷ ದಾಟಿರಬೇಕು.

ಕೇಶವ ಚಂದ್ರ ಸೇನರ ಈ ಕ್ರಾಂತಿಕಾರೀ ಹೆಜ್ಜೆಗೆ ಮೊದಲ ವಿರೋಧ ಬ್ರಹ್ಮಸಮಾಜದ ಅವರ ಆಚಾರ್ಯರಿಂದಲೇ ಬಂದಿತು. ಹಾಗಾಗಿ ಬ್ರಹ್ಮ ಸಮಾಜ ಒಡೆಯಿತು. ಆದರೂ ಕೇಶವ ಚಂದ್ರ ಸೇನರು ಹಿಂಜರಿಯಲಿಲ್ಲ. ಅವರು ಭಾರತದಾದ್ಯಂತ ಸಂಚರಿಸಿ ತಮ್ಮ ವಿಚಾರಗಳನ್ನು ಪ್ರತಿಪಾದಿಸಿದರು. ಮಹಾರಾಷ್ಟ್ರದಲ್ಲಿ ಅವರಿಂದ ಪ್ರಭಾವಿತರಾದ ಮಹದೇವ ಗೋವಿಂದ ರಾನಡೆ, ಆರ್. ಜಿ. ಭಂಡಾರಕರ್ ಮುಂತಾದವರು 'ಪ್ರಾರ್ಥನಾ ಸಮಾಜ'ವನ್ನು ಸ್ಥಾಪಿಸಿದರು. ಪ್ರಾರ್ಥನಾ ಸಮಾಜ ಜಾತಿ ನಿರ್ಮೂಲನೆಯ ಕುರಿತು ಘೋಷಣೆಗಳನ್ನು ಮಾಡಿದರೂ ಬ್ರಹ್ಮೋ ಸಮಾಜಿಗಳಂತೆಯೇ ಅದನ್ನು ಆಚರಣೆಯಲ್ಲಿ ತರಲಿಲ್ಲ. ನಂತರ ಕೇಶವಚಂದ್ರ ಸೇನರೇ ತಮ್ಮ ಅಪ್ರಾಪ್ತ ವಯಸ್ಸಿನ ಮಗಳನ್ನು ಜಾತಿ ವಿಧಿಬದ್ಧವಾಗಿ ಮದುವೆ ಮಾಡಿಕೊಟ್ಟ ಹಗರಣದಲ್ಲಿ ಸಿಲುಕಿದರು. ಅವರ ಶಿಷ್ಯರು ಅವರನ್ನು ಟೀಕಿಸಿ ಅವರಿಂದ ದೂರವಾದರು. ಮಹಾರಾಷ್ಟ್ರದಲ್ಲಿ ರಾನಡೆಯವರೂ ಕೂಡ ತಮ್ಮ ಆಪ್ತನೊಬ್ಬನಿಗೆ ಜಾತಿಯ ಪ್ರಾಯಶ್ಚಿತ್ತ ವಿಧಿಯನ್ನು ಪಾಲಿಸುವಂತೆ ಸಲಹೆ ನೀಡಿ ವಿವಾದಾಸ್ಪದರಾದರು. ಈ ರೀತಿ ಹತ್ತೊಂಭತ್ತನೆಯ ಶತಮಾನದ ಸುಧಾರಣಾವಾದಿಗಳು ಆ ಶತಮಾನದ ಅಂತ್ಯದ ವೇಳೆಗೆ ಒಂದೆಡೆ ನೂತನಿಗಳು ಹಾಗೂ ಮತ್ತೊಂದೆಡೆ ಆಧುನಿಕರಿಂದ ಟೀಕೆಗೆ ಗುರಿಯಾದರು.

ಅದೇನೇ ಇರಲಿ, ಈ ಸುಧಾರಣಾವಾದಿಗಳು ೧೮೮೭ರಲ್ಲಿ 'ನ್ಯಾಷನಲ್ ಸೋಶಿಯಲ್ ಕಾನ್‌ಫರೆನ್ಸ್' ಎಂಬ ಕಾಂಗ್ರೇಸ್ಸಿನಂಥ ವೇದಿಕೆಯನ್ನು ಸ್ಥಾಪಿಸಿದರು. ಕಾಂಗ್ರೆಸ್ಸು ಬಹುಬೇಗನೆ ಇದರೊಂದಿಗಿನ ತನ್ನ ಸಂಬಂಧವನ್ನು ಕಳಚಿಕೊಂಡಿತು. ಸೋಶಿಯಲ್ ಕಾನ್‌ಫರೆನ್ಸಿನ ಸಾಧನೆಗಳೆಂದರೆ ಅವರ ನಿರ್ದಿಷ್ಟ ಕಾಲಾವಧಿಯ ಸಮ್ಮೇಳನಗಳು ಹಾಗೂ ನಿರ್ಣಯಗಳು. ೧೯೩೮ರಲ್ಲಿ ಅದು ಜಾತಿ ಪದ್ಧತಿಯ ನಿರ್ಮೂಲನಕ್ಕಾಗಿ ಕೆಲ ನಿರ್ಣಯಗಳನ್ನು ತೆಗೆದುಕೊಂಡಿತು. ಜಾತಿ ಪದ್ಧತಿ ಹಿಂದೂ ಸಮಾಜದ ಏಕತೆಗೆ ಅಡ್ಡಿಯುಂಟುಮಾಡುತ್ತಿದೆ ಎಂಬ ರಾಷ್ಟ್ರೀಯ ಮೌಲ್ಯವನ್ನು ಇದರಲ್ಲಿ ಕಾಣಿಸಿದರು ಹಾಗೂ ಸಹಭೋಜನ, ಅಂತರ್ಜಾತೀಯ ವಿವಾಹ, ಅಸ್ಪೃಶ್ಯತಾ ನಿರ್ಮೂಲನೆಯನ್ನು ಸಾಧಿಸುವ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಮೇಲ್ಜಾತಿಯ ಸುಧಾರಣಾವಾದಿಗಳ ಇಂಥ 'ಸಮ್ಮೇಳನ–ಭಾಷಣ'ದ ಸುಧಾರಣಾವಾದವನ್ನು ಅಂಬೇಡ್ಕರರು ಕಟುವಾಗಿ ಟೀಕಿಸುತ್ತಾರೆ.

ಈ ಮೇಲಿನ ಸುಧಾರಣಾವಾದಿ ಚಳುವಳಿಗಳಿಗಿಂತ ಶೂದ್ರ, ದಲಿತ ಮುಂದಾಳುಗಳಿಂದ ಜಾತಿವ್ಯವಸ್ಥೆಯ ಕುರಿತು ಬಂದಿರುವ ಟೀಕೆಗೆ ವಿಭಿನ್ನ ಆಯಾಮವಿದೆ. ಜಾತಿವ್ಯವಸ್ಥೆಯ ದಮನಕ್ಕೆ ತುತ್ತಾದವರು ಅದರ ವಿರುದ್ಧ ಸಿಡಿದೆದ್ದುದನ್ನು ಹತ್ತೊಂಭತ್ತನೆಯ ಶತಮಾನದ ಅಂತ್ಯದ ಫುಲೆಯವರ ವಿಚಾರಗಳಲ್ಲಿ ಕಾಣಬಹುದು. ಫುಲೆಯವರು ಜಾತಿ ಪದ್ಧತಿ ಒಂದು ಅನ್ಯಾಯದ ವ್ಯವಸ್ಥೆ; ಇದಕ್ಕೆ ಬ್ರಾಹ್ಮಣರು ಹೊಣೆಗಾರರು. ಅವರು ತಮ್ಮ ವೇದ, ಪುರಾಣ, ಧರ್ಮಶಾಸ್ತ್ರಗಳಂಥ ಆಯುಧಗಳಿಂದ ಶೂದ್ರರನ್ನು ದಮನ ಮಾಡುತ್ತಿದ್ದಾರೆ ಎಂದು ಟೀಕಿಸಿ, ಬ್ರಾಹ್ಮಣ ಪೌರೋಹಿತ್ಯದಿಂದ ಶೂದ್ರರು ವಿಮೋಚನೆ ಹೊಂದಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಫುಲೆಯವರು ಅಸ್ಪೃಶ್ಯತೆ, ಸ್ತ್ರೀ ಶೋಷಣೆ ಕೂಡ ಈ ಬ್ರಾಹ್ಮಣಿಕೆಯ ಒಂದು ಪರಿಣಾಮ ಎಂದರು. ಹಾಗಾಗಿ ಸಾಮಾಜಿಕವಾಗಿ ಸಂತ್ರಸ್ತರಾದವರ ಸೇವೆಯನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡರು. ಈ ನಿಟ್ಟಿನಲ್ಲಿ 'ಸತ್ಯಶೋಧಕ ಸಭೆ'ಯನ್ನು ಸ್ಥಾಪಿಸಿದರು. ತಮಿಳ್ನಾಡಿನ 'ಪೆರಿಯಾರ್' (ರಾಮಸ್ವಾಮಿ) ರವರೂ ಫುಲೆಯವರಂತೆ ಬ್ರಾಹ್ಮಣಿಕೆಯನ್ನು ವಿರೋಧಿಸಿದರು. ೧೯೨೬ರಲ್ಲಿ ಸೆಲ್ಫ್ ರೆಸ್ಪೆಕ್ಟ್ ಲೀಗ್ ಎಂಬ ವೇದಿಕೆಯನ್ನು ಸ್ಥಾಪಿಸಿದರು. ಜಾತಿಯ ನಿರ್ಮೂಲನೆ, ಸ್ತ್ರೀಯರ ಸ್ಥಾನಮಾನ ಈ ಚಳುವಳಿಯ ಗುರಿಯಾಗಿತ್ತು. ಪೆರಿಯಾರ್‌ರವರು ನಿರೀಶ್ವರವಾದಿಗಳೂ ಆಗಿದ್ದರು. ಆದರೆ ಪೆರಿಯಾರ್ ಚಳುವಳಿ ಕ್ರಮೇಣ ರಾಜಕೀಯ ತಿರುವು ಪಡೆಯಿತು.

ಈ ಮೇಲಿನ ಬ್ರಾಹ್ಮಣೇತರ ಚಳುವಳಿಗಳ ಫಲವಾಗಿ ೧೯೦೬ರಲ್ಲಿ ಮಹಾರಾಷ್ಟ್ರದ ವಿ. ಆರ್. ಶಿಂಧೆಯವರು 'ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸೊಸೈಟಿ'ಯೆಂಬ ದಲಿತ ಜಾತಿಗಳ ಸಂಘಟನೆಯನ್ನು ಮುಂಬೈಯಲ್ಲಿ ಪ್ರಾರಂಭಿಸಿದರು. ಮದ್ರಾಸಿನಲ್ಲೂ ಇದೇ ಸಂಘಟನೆ ೧೯೦೯ರಲ್ಲಿ ಪ್ರಾರಂಭವಾಯಿತು. ೧೯೧೦ರಲ್ಲಿ "ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸಸ್ ಅಸೋಸಿಯೇಷನ್"ನ ಸ್ಥಾಪನೆಯಾಯಿತು. ಹಿಂದುಳಿದ ಹಾಗೂ ದಲಿತ ವರ್ಗಗಳಿಗಾಗಿರುವ ಅನ್ಯಾಯವನ್ನು ಹೋಗಲಾಡಿಸುವುದೇ ಇವರ ಧ್ಯೇಯ ವಾಗಿತ್ತು. ಇವರು ಕಾಂಗ್ರೆಸ್ಸಿನ ಜೊತೆ ಕೈಗೂಡಿಸಲು ೧೯೧೭ರಲ್ಲಿ ನಿರ್ಧರಿಸಿದರು. ಬ್ರಿಟಿಷರೂ ಕಾಂಗ್ರೆಸ್ಸಿಗೆ ಇವರ ಬೇಡಿಕೆಗಳನ್ನು ಪರಿಗಣಿಸುವಂತೆ ಷರತ್ತು ಹಾಕಿದ್ದರು. ಈ ಸಂಘಟನೆಯ ೧೯೨೦ರ ಪ್ರಥಮ ಸಮ್ಮೇಳನದಲ್ಲಿ ಬಾಬಾ ಸಾಹೇಬ ಅಂಬೇಡ್ಕರರು ತಮ್ಮ ಹೋರಾಟದ ಜೀವನಕ್ಕೆ ಪಾದಾರ್ಪಣ ಮಾಡಿದರು.

ನಂತರ ಅಂಬೇಡ್ಕರರು 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಘಟನೆಯನ್ನು ಅಸ್ಪೃಶ್ಯರ ಹಕ್ಕುಗಳಿಗಾಗಿ ಹೋರಾಟ ನಡೆಸುವ ಸಲುವಾಗಿ ಪ್ರಾರಂಭಿಸಿದರು. ೧೯೨೭ರ ಮಹಾಡ ಸತ್ಯಾಗ್ರಹದಲ್ಲಿ ಸಾರ್ವಜನಿಕ ಕುಡಿವ ನೀರಿನ ಕೆರೆಯನ್ನು ಉಪಯೋಗಿಸುವ ಅಧಿಕಾರವನ್ನು ದಲಿತರು ಸಾರಿದರು. ಜೊತೆಗೆ ವರ್ಣಧರ್ಮವನ್ನು ಪ್ರತಿಪಾದಿಸುವ ಮನುಸ್ಮೃತಿಯನ್ನು ದಹನ ಮಾಡಲಾಯಿತು. ಈ ಮೂಲಕ ಪ್ರಾರಂಭವಾದ ಅಂಬೇಡ್ಕರರ ಜೀವನವೇ ದಲಿತರ ಹಕ್ಕಿಗಾಗಿ ನಡೆಸಿದ ಒಂದು ದೀರ್ಘ ಹೋರಾಟವಾಯಿತು. ದಲಿತರಿಗೇ ಪ್ರತ್ಯೇಕ ಮತ ಕ್ಷೇತ್ರಗಳನ್ನು ನೀಡುವ

'ಕಮ್ಯುನಲ್ ಅವಾರ್ಡ್'ನ ಸಂಬಂಧಿಸಿ ಗಾಂಧಿಯವರಿಗೂ ಅಂಬೇಡ್ಕರರಿಗೂ ವಾಗ್ಯುದ್ಧ ನಡೆಯಿತು.

ಜಾತಿಯ ಕುರಿತ ಅಂಬೇಡ್ಕರರ ವಿಚಾರಗಳು ಅವರ 'ಜಾತಿ ವಿನಾಶ' ಎಂಬ ಪ್ರಬಂಧದಲ್ಲಿ ಪ್ರಖರವಾಗಿ ವ್ಯಕ್ತವಾಗಿವೆ. (ಈ ಪ್ರಬಂಧವನ್ನು ಪಂಜಾಬಿನ 'ಜಾತ್ ಪಾತ್ ತೋಡಕ್ ಮಂಡಳ'ದ ಸಮ್ಮೇಳನದ ಅಧ್ಯಕ್ಷ ಭಾಷಣಕ್ಕಾಗಿ ೧೯೩೬ರಲ್ಲಿ ತಯಾರಿಸಲಾಗಿತ್ತು. ಆದರೆ ಅಂಬೇಡ್ಕರರು ಈ ಪ್ರಬಂಧದ ಅಂತ್ಯದಲ್ಲಿ ತಾವು ಹಿಂದೂ ಧರ್ಮವನ್ನು ತ್ಯಜಿಸುವ ವಿಚಾರವನ್ನು ಪ್ರಸ್ತಾಪಿಸಿದ್ದರಿಂದ ಆ ಸಮ್ಮೇಳನವನ್ನೇ ನಡೆಸಲಿಲ್ಲ). ಈ ಪ್ರಬಂಧದಲ್ಲಿ ಅಂಬೇಡ್ಕರರ ವಾದ ಸ್ಥೂಲವಾಗಿ ಈ ರೀತಿ ಇದೆ–

೧) ಜಾತಿ ಎಂಬುದು ಹಿಂದೂ ಜನರನ್ನು ಛಿದ್ರ–ಛಿದ್ರಗೊಳಿಸಿದೆ. ಅವರ ಘನತೆಯನ್ನು ನಾಶ ಮಾಡಿದೆ. ಈ ಕಾರಣದಿಂದ ನಾವೆಲ್ಲ ಮೃಗಸಮಾನರಾಗಿದ್ದೇವೆ.

೨) ಜಾತಿ ಪದ್ಧತಿ, ಶ್ರಮ ವಿಭಜನೆ ಹಾಗೂ ಅದರ ಹಿಂದೆ ಒಳ್ಳೆಯ ಉದ್ದೇಶಗಳಿವೆ ಎನ್ನುವವರು ಈ ಹೀನ ವ್ಯವಸ್ಥೆಯನ್ನು ಸಮರ್ಥಿಸುತ್ತ ಅನ್ಯಾವೆಸಗುತ್ತಿದ್ದಾರೆ.

೩) ಹಿಂದೂ ಸಮಾಜವನ್ನು ಪುನಹ ಸಂಘಟಿಸುವುದಾದರೆ ಸ್ವಾತಂತ್ರ್ಯ, ಸಮಾನತೆ ಮುಂತಾದ ತತ್ವಗಳ ಮೇಲೆ ಸಂಘಟಿಸಬೇಕೇ ವಿನಃ ವರ್ಣ ಕಲ್ಪನೆಯಿಂದಲ್ಲ.

೪) ಈ ಮೇಲಿನ ಸಮಾಜವನ್ನು ಸಾಧಿಸಲು ಜಾತಿ ವಿನಾಶ ಹೊಂದಬೇಕು. ಜಾತಿಯನ್ನು ಸುಧಾರಿಸಲು ಸಾಧ್ಯವೇ ಇಲ್ಲ. ಅದರ ವಿನಾಶವೊಂದೇ ಮಾರ್ಗ. ಈ ನಿಟ್ಟಿನಲ್ಲಿ ಅವರು ಅಂತರ್ಜಾತಿ ವಿವಾಹಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ. "ಯಾವ ಸಮಾಜದ ಸಂಸಾರ ತುಂಡು ತುಕಡಿಗಳಾಗಿ ನೋಡುವವರ ಅಪಹಾಸ್ಯಕ್ಕೆ ಈಡಾಗಿದೆಯೋ ಅಂಥ ಸಮಾಜವನ್ನು ಒಂದು ಗೂಡಿಸಿ ಮಾನ ರಕ್ಷಣೆ ಮಾಡುವಂಥ ಜರೂರು ನಿರ್ಣಯ ಅಂತರ್ಜಾತೀಯ ಮದುವೆಗಳು'' ಜೊತೆಗೆ ಅವರು ಈ ಮಾತನ್ನೂ ಸೇರಿಸುತ್ತಾರೆ– "ಹಿಂದೂಗಳು ಜಾತಿ ಪದ್ಧತಿಯನ್ನು ಅನುಸರಿಸು ತ್ತಿರುವುದು ಅವರ ತಲೆ ಕೆಟ್ಟಿರುವುದರಿಂದಲ್ಲ ಅಥವಾ ಅವರು ಅಮಾನುಷರೂ ಅಲ್ಲ ಎಂಬುದನ್ನು ನಾವು ಗುರುತಿಸಬೇಕು. ಅವರು ಜಾತಿಯನ್ನು ಅನುಸರಿಸುತ್ತಿರುವುದಕ್ಕೆ ಮೂಲ ಕಾರಣ ಎಂದರೆ ಅವರ ಧಾರ್ಮಿಕ ನಂಬಿಕೆಗಳು. ಹಾಗಾಗಿ ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡುವ ಸರಿಯಾದ ವಿಧಾನವೆಂದರೆ ಅಂತರ್ಜಾತೀಯ ವಿವಾಹ, ಸಹಭೋಜನಗಳಿಗಿಂತ ಹೆಚ್ಚಾಗಿ ಅವರ ಈ ಧಾರ್ಮಿಕ ನಂಬಿಕೆಗಳನ್ನು ನಾಶಪಡಿಸುವುದು. ಈ ಧಾರ್ಮಿಕ ನಂಬಿಕೆಗಳನ್ನು ಬೇರೂರಿಸಿದ ಶಾಸ್ತ್ರಗಳನ್ನು ನಾಶಪಡಿಸಬೇಕು''.

ಅಂಬೇಡ್ಕರರ 'ಜಾತಿ ವಿನಾಶ' ಪ್ರಬಂಧವು ಅಂಬೇಡ್ಕರ್ ಹಾಗೂ ಗಾಂಧಿಯವರ ಮಧ್ಯೆ ಒಂದು ವಾಗ್ವಾದವನ್ನು ಹುಟ್ಟಿಹಾಕಿತು. ಇದಕ್ಕೆ ಪ್ರಥಮವಾಗಿ ಪ್ರತಿಕ್ರಿಯಿಸುತ್ತ ಗಾಂಧಿಯವರು "ಜಾತಿ ಹಿಂದೂಗಳು ಸ್ವಧರ್ಮಿಗಳೇ ಆದ ಅಸ್ಪೃಶ್ಯರನ್ನು ಅಮಾನುಷವಾಗಿ ನಡೆಸಿಕೊಂಡಿದ್ದಾರೆ. 'ಜಾತಿ ವಿನಾಶ' ಪ್ರಬಂಧದಿಂದ ಜಾತಿ ಹಿಂದೂಗಳು ಕಲಿಯ ಬೇಕಾದದ್ದು ಬಹಳಷ್ಟಿದೆ'' ಎಂದು ಈ ಪ್ರಬಂಧವನ್ನು ಸ್ವಾಗತಿಸುತ್ತ 'ಅಂದ ಮಾತ್ರಕ್ಕೆ ಈ ಭಾಷಣ ನಿಸ್ಸಂದೇಹವಾಗಿ ಪ್ರಶ್ನಾತೀತವಾದದ್ದು ಎಂದೇನೂ ಇದರ ಅರ್ಥವಲ್ಲ' ಎಂದು ತಮ್ಮ ಅಭಿಪ್ರಾಯ ಭೇದಗಳನ್ನು ಮಂಡಿಸುತ್ತಾರೆ. ಗಾಂಧಿಯವರ ಕಲ್ಪನೆಯಲ್ಲಿ ಈ ಜಾತಿ ಪದ್ಧತಿಯಿಂದ ಕೂಡಿದ 'ಹಿಂದೂ ಧರ್ಮ' ಒಂದೇ. ಈ ಹಿಂದೂ ಧರ್ಮ ಎಂದರೇನು ಎಂಬುದನ್ನು ಕೇವಲ ಶಾಸ್ತ್ರಿಗಳನ್ನು ಹಿಡಿದು ನಿರ್ಧರಿಸಬೇಕೆ? ಮಧ್ಯ ಯುಗದಲ್ಲಿ ಜಾತಿ ವ್ಯವಸ್ಥೆಯನ್ನೇ ವಿರೋಧಿಸಿದ ಸಂತರ ವಿಚಾರಗಳು ಶಾಸ್ತ್ರಗಳಾಗಬಾರದೇಕೆ? ಗಾಂಧಿಯವರು ಧರ್ಮವನ್ನು ಜಾತಿಯಿಂದ ಪ್ರತ್ಯೇಕಿಸುತ್ತಾರೆ. ಹಿಂದೂ ಧರ್ಮ ಎಂಬುದು ಸಾಧು–ಸಂತರ ಅಂತರಂಗ ಪ್ರಾಮಾಣ್ಯದಿಂದಲೇ ನಿರ್ಧರಿತವಾಗಿದೆ. 'ವರ್ಣ ಧರ್ಮ ಎಂಬುದು ಒಂದು ಕರ್ಮ ತತ್ವ' ಮುಂತಾದವು ಗಾಂಧಿಯವರ ವಾದಗಳು. ಇದನ್ನು ವಿರೋಧಿಸಿ ಅಂಬೇಡ್ಕರರು ಗಾಂಧಿಯವರಿಗೆ ಉತ್ತರವನ್ನು ಬರೆದರು. ಅದರಲ್ಲಿ ಮುಖ್ಯವಾಗಿ 'ಸಾಧು–ಸಂತರ' ಮಾರ್ಗ ವೈರಾಗ್ಯದ ಅಥವಾ ಅಪವಾದದ ಮಾರ್ಗವಾಗಿ ನಮ್ಮ ಸಮಾಜದಲ್ಲಿ ಮನ್ನಣೆ ಪಡೆದಿದೆಯೇ ಹೊರತು ಅದು ಜನರೆಲ್ಲರ ಆಚರಣೆಯಾಗಿರಲಿಲ್ಲ ಎಂದು ಅಂಬೇಡ್ಕರರು ವಾದಿಸಿದರು. ಜೊತೆಗೆ ಗಾಂಧಿಯವರಲ್ಲೇ ಇರುವ ವಿರೋಧಾಭಾಸಗಳನ್ನು ಅಂಬೇಡ್ಕರರು ಎತ್ತಿತೋರಿಸುತ್ತಾರೆ. ಗಾಂಧಿಯವರೇ ಮೊದಲು ಜಾತಿ ಪದ್ಧತಿ ಶ್ರೇಷ್ಠ ಎಂದು ವಾದಿಸಿದ್ದಾರೆ, ಅಂತರ್‌ಜಾತಿ ಕೂಟಗಳನ್ನು ವಿರೋಧಿಸಿದ್ದಾರೆ; ಈಗಲಾದರೂ ಜಾತಿ ಪದ್ಧತಿ ಅನಿಷ್ಟ ಎನ್ನುವ ನಿರ್ಧಾರಕ್ಕೆ ಬಂದಿರುವುದು ಶುಭದಾಯಕ. ಈಗಲೂ ಅವರು ನಂಬಿಕೊಂಡಿರುವ ವರ್ಣ ಸಿದ್ಧಾಂತಕ್ಕೂ ಜಾತಿ ಪದ್ಧತಿಗೂ ಯಾವ ವ್ಯತ್ಯಾಸವೂ ಇಲ್ಲ; ಅವೆರಡೂ ಬೇರೆ ಬೇರೆ ಎಂದು ಹೇಳುವುದು ಜಾತಿ ಪದ್ಧತಿಯನ್ನು ಸಮರ್ಥಿಸಿದ ಹಾಗೆ ಎಂದು ಅಂಬೇಡ್ಕರರು ಗಾಂಧಿಯವರನ್ನು ವಿಮರ್ಶಿಸಿದರು. ಗಾಂಧಿಯವರು ಆತ್ಮವಂಚನೆಯ ರಾಜಕೀಯ ಮಾಡುತ್ತಿದ್ದಾರೆ ಎಂಬುದಾಗಿ ಟೀಕಿಸಿದರು.

ಗಾಂಧಿಯವರು ವೈಯಕ್ತಿಕವಾಗಿ ಹಾಗೂ ಕಾಂಗ್ರೆಸ್ ನೀತಿಯಲ್ಲಿ ಅನೇಕ ಬದಲಾವಣೆಗಳನ್ನು ತಂದುಕೊಂಡರು. ಇದು ಒಂದು ರೀತಿಯಲ್ಲಿ ಅವರ ಅನೇಕ ವಿಚಾರಗಳಂತೆ ವಾಸ್ತವವನ್ನು ಗ್ರಹಿಸಿ ಉಂಟಾದ ಸ್ಪಂದನೆಯಾಗಿದೆ. ಅವರಿಗೂ ಪೂರ್ವದಲ್ಲಿ ಕಾಂಗ್ರೆಸ್ಸು ಸಮಾಜ ಸುಧಾರಣೆಯ ಕಾರ್ಯಕ್ರಮವನ್ನು ಬದಿಗಿಟ್ಟಿತ್ತು. ಜನರನ್ನು ಭಾವನಾತ್ಮಕವಾಗಿ ರಾಷ್ಟ್ರೀಯತೆಯ ನೆಲೆಯಲ್ಲಿ ಒಗ್ಗೂಡಿಸುವಾಗ ಸಮಾಜ ಸುಧಾರಣೆಯಂಥ ವಿಚಾರಗಳು ಹಲವರಿಗೆ ಕಹಿಯಾಗಬಹುದು. ಸಮಾಜ ಸುಧಾರಣೆ ಒಂದು ರೀತಿ ರಾಷ್ಟ್ರದ, 'ಸ್ವನಿಂದನೆ', 'ಸ್ವ–ವಿಮರ್ಶೆ'ಯಾಗಿದ್ದು, ಇದು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಅನುಕೂಲವಾಗುತ್ತದೆ ಎಂಬ ಧೋರಣೆಯನ್ನು ತಿಲಕರು ೧೮೯೫ರ ಸುಮಾರಿಗೆ ಬಿತ್ತರಿಸಿದರು. ಗಾಂಧಿಯವರು 'ಕಮ್ಯುನಲ್ ಅವಾರ್ಡ್'ನ್ನು ವಿರೋಧಿಸಿದ್ದೂ 'ರಾಷ್ಟ್ರ' ಕಲ್ಪನೆಯಲ್ಲೇ. ಹಿಂದೂ ಸಮಾಜದಲ್ಲಿ ಶೋಷಣೆ, ಅನಿಷ್ಟಗಳಿದ್ದರೆ ಸುಧಾರಿಸಿ ಸರಿಪಡಿಸಬೇಕೆ ಹೊರತು ಅದನ್ನೇ ಒಡೆಯ ಹೊರಟರೆ ಸಾಮ್ರಾಜ್ಯಶಾಹಿಗಳಿಗೆ ಇದೊಂದು ತಂತ್ರವಾಗಬಹುದು ಎಂದು ಅವರು ನಂಬಿದ್ದರು. ಇದಕ್ಕೆ ತಕ್ಕಂತೆ ಬ್ರಿಟಿಷರೂ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗ್ರಹಿಸಿ ಸನ್ನಿವೇಶದ ಲಾಭ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಈ ಹಿನ್ನೆಲೆಯಲ್ಲಿಯೆ ಅಂಬೇಡ್ಕರ್ ಹಾಗೂ ಗಾಂಧಿಯವರ ವಾಗ್ವಾದವನ್ನು ಗಮನಿಸಬೇಕಾಗುತ್ತದೆ. ಗಾಂಧಿಯವರು ಅಂಬೇಡ್ಕರರ ವಾದವನ್ನು ಮನಗಂಡು ಕಾಂಗ್ರೆಸ್ಸಿನಲ್ಲಿ ಅನೇಕ ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಅಸ್ಪೃಶ್ಯರ ಕುರಿತಾಗಿ ಅಳವಡಿಸಿದರು. ೧೯೨೦ರಲ್ಲೇ ಕಾಂಗ್ರೆಸ್ಸು ಅಸ್ಪೃಶ್ಯತಾ ನಿರ್ಮೂಲನೆಯ ಕುರಿತು ನಿರ್ಣಯ ತೆಗೆದುಕೊಂಡಿತ್ತು. ಆದರೆ 'ಪೂನಾ ಪ್ಯಾಕ್ಟ್' ನಂತರ ೧೯೩೨ರಲ್ಲಿ 'ಅಸ್ಪೃಶ್ಯರು ಜಾತಿ ಹಿಂದೂಗಳ ಜೊತೆ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ. ಅವರು ಸಾರ್ವಜನಿಕ ಬಾವಿ, ಶಾಲೆ, ರಸ್ತೆ ಹಾಗೂ ಸಂಸ್ಥೆ

ಗಳಲ್ಲಿ ಯಾವುದೇ ನಿರ್ಬಂಧವಿಲ್ಲದೆ ಹಕ್ಕು ಹೊಂದಬೇಕು' ಎಂದು ನಿರ್ಣಯ ಅಂಗೀಕರಿಸಲಾಯಿತು. ನಂತರ ಹರಿಜನರಿಗೆ ಹಿಂದೂ ದೇವಾಲಯಗಳಲ್ಲಿ ಪ್ರವೇಶ ನೀಡುವ ಚಳುವಳಿಯನ್ನು ಹಮ್ಮಿಕೊಳ್ಳಲಾಯಿತು. ಗಾಂಧಿಯವರು 'ಹರಿಜನ' ಎಂಬ ಪತ್ರಿಕೆಯನ್ನೇ ಹೊರಡಿಸುತ್ತಿದ್ದರು. ನಂತರ ಗಾಂಧಿಯವರು ಅಂತರ್ಜಾತೀಯ ಮದುವೆ ಹಾಗೂ ಸಹಭೋಜನ ಮುಂತಾದವುಗಳಿಗೆ ಪ್ರೋತ್ಸಾಹ ನೀಡಿದರು.

ಪ್ರಸ್ತುತ ಲೇಖನದಲ್ಲಿ ಭಾರತದಲ್ಲಿ ಜಾತಿ ವ್ಯವಸ್ಥೆಯ ಕುರಿತು ಬಂದ ವಿಮರ್ಶೆಗಳ ಮುಖ್ಯ ಎಳೆಯನ್ನಷ್ಟೇ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಆಧುನಿಕ ಹಾಗೂ ಆಧುನಿಕ ಪೂರ್ವ ಯುಗಗಳೆರಡರಲ್ಲೂ ಜಾತಿ ವ್ಯವಸ್ಥೆಯನ್ನು ಟೀಕಿಸಿದವರು ಮನುಷ್ಯ ವಿಮೋಚನೆಯ ಕಲ್ಪನೆಯನ್ನು ಕೇಂದ್ರದಲ್ಲಿಟ್ಟು ನೋಡಿದ್ದಾರೆ. ಈ ವಿಮೋಚನೆಯ ಪರಿಕಲ್ಪನೆ ಭಿನ್ನ-ಭಿನ್ನವಾಗಿರಬಹುದು. ಬೌದ್ಧ ಧರ್ಮ ಇದನ್ನು ನಿರ್ವಾಣ ಎಂದು ಕಲ್ಪಿಸಿದರೆ, ಭಕ್ತಿಪಂಥದ ಸಾಧು-ಸಂತರು ಪರಮಾತ್ಮ ಸಾಯುಜ್ಯವನ್ನು ಕಲ್ಪಿಸಿದರು. ಆಧುನಿಕರು ಪರಮಾತ್ಮ ಕಲ್ಪನೆಯ ಜೊತೆಗೆ ಅದಕ್ಕೆ ಪರ್ಯಾಯವಾಗಿ ಸ್ವಾತಂತ್ರ್ಯ-ಸಮಾನತೆಯ ತತ್ವಗಳನ್ನು ವಿಮೋಚನೆಯನ್ನಾಗಿ ಕಲ್ಪಿಸಿದರು. ಈ ಯಾವುದೇ ವಿಮೋಚನೆಯ ಕಲ್ಪನೆಯಲ್ಲೂ ಜಾತಿ ಪದ್ಧತಿಯನ್ನು ಒಂದು ತೊಡಕು ಎಂದು ಗ್ರಹಿಸಲಾಗಿದೆ. ಅದನ್ನು ಸುಧಾರಿಸಿ ಮಾನವೀಯ ತತ್ವಗಳ ಆಧಾರದ ಮೇಲೆ ನಿಲ್ಲಿಸಬೇಕು ಎಂದು ಒಂದು ಮಾರ್ಗದವರು ಪ್ರತಿಪಾದಿಸಿದರೆ, ಅದನ್ನು ತೊಡದೇ ಹಾಕಬೇಕು ಎಂದು ಇನ್ನೊಂದು ಮಾರ್ಗದವರು ವಾದಿಸಿದ್ದಾರೆ.

●

ಸಮಾಜ ಸುಧಾರಕರ ಒಂದು ಮಾಸಪತ್ರಿಕೆಯಲ್ಲಿ ನನ್ನನ್ನು ಶೂದ್ರನೆಂದು ಕರೆದು ಸಂನ್ಯಾಸಿಯಾಗಲು ಅಧಿಕಾರವಿಲ್ಲವೆಂದು ಹೇಳಿರುವರು. ನನ್ನನ್ನು ಶೂದ್ರನೆಂದು ಕರೆದುದಕ್ಕೆ ನನಗೆ ಕೊಂಚವೂ ವ್ಯಥೆ ಆಗುವುದಿಲ್ಲ. ನಮ್ಮ ಪೂರ್ವಿಕರು ದೀನರನ್ನು ನಿಕೃಷ್ಟ ದೃಷ್ಟಿಯಿಂದ ನೋಡಿದುದಕ್ಕೆ ಇದೊಂದು ಪ್ರಾಯಶ್ಚಿತ್ತವೆಂದು ತಿಳಿಯುತ್ತೇವೆ. ನಾನು ಹೊಲೆಯನಾಗಿದ್ದರೆ ಇನ್ನೂ ಹೆಚ್ಚು ಸಂತೋಷಪಡುತ್ತಿದ್ದೆ. ಚಂಡಾಲನ ಮನೆಯನ್ನು ಗುಡಿಸಿದ ಬ್ರಾಹ್ಮಣ ಶ್ರೇಷ್ಠನ (ಶ್ರೀ ರಾಮಕೃಷ್ಣ ಪರಮಹಂಸರು) ಶಿಷ್ಯ ನಾನು. ಚಂಡಾಲ ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಬ್ರಾಹ್ಮಣ ಸಂನ್ಯಾಸಿಗೆ ಆತ ತನ್ನ ಮನೆಯನ್ನು ಗುಡಿಸಲು ಹೇಗೆ ಒಪ್ಪಿಗೆ ಕೊಡುವನು? ನನ್ನ ಗುರುಗಳು ಅರ್ಧರಾತ್ರಿಯಲ್ಲಿ ಎದ್ದು ಚಂಡಾಲನ ಮನೆಯನ್ನು ಯಾರಿಗೂ ತಿಳಿಯದಂತೆ ಪ್ರವೇಶಿಸಿ ಅವನ ಕಕ್ಕಸನ್ನು ಗುಡಿಸಿ, ತಮ್ಮ ಕೇಶರಾಶಿಯಿಂದ ಆ ಸ್ಥಳವನ್ನು ಒರೆಸಿದರು. ದೀನರಲ್ಲಿ ದೀನರಾಗ ಬೇಕೆಂದೇ ಅವರ ಇಚ್ಛೆ. ಅವರ ಪಾದಗಳನ್ನು ನಾನು ಶಿರದಲ್ಲಿ ಧರಿಸಿರುವೆ. ಅವರೇ ನನ್ನ ಗುರುಗಳು. ನಮ್ಮ ಸುಧಾರಕರು ಚಂಡಾಲವನ್ನು ಕೂಡ ಸೇವಿಸುವಂತಹ ಜೀವನವನ್ನು ವ್ಯಕ್ತಗೊಳಿಸಲಿ. ಆಗ ನಾನು ಅವರ ಪದತಳದಲ್ಲಿ ಕುಳಿತು ಕೊಳ್ಳುತ್ತೇನೆ. ಅದಕ್ಕಿಂತ ಮುಂಚೆ ಅಲ್ಲ. ಎಳ್ಳಿನಷ್ಟು ಅನುಷ್ಠಾನ ಹೊರೆಯಷ್ಟು ಮಾತಿಗಿಂತ ಮೇಲು.

-ಸ್ವಾಮಿ ವಿವೇಕಾನಂದ

ಹಿಂದೂ ಮತ್ತು ಜಾತಿಪದ್ಧತಿಯಲ್ಲಿ ಅವನ ನಂಬಿಕೆ

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್

ಹಿಂದೂ ಸಮಾಜ ಸುಧಾರಕರಲ್ಲಿ ಸೌಮ್ಯವಾದಿ ಗುಂಪೊಂದಿದೆ. ಈ ಗುಂಪು ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಗಳು ಪ್ರತ್ಯೇಕವಾದವು ಎಂದು ನಂಬುತ್ತದೆ. ಈ ತಾತ್ವಿಕ ತಳಹದಿಯ ಮೇಲೆ ಅವರು ಜಾತಿಪದ್ಧತಿಯನ್ನು ವಿರೋಧಿಸದೆಯೇ ಅಸ್ಪೃಶ್ಯತೆಯನ್ನು ನಿವಾರಿಸಲು ಸಾಧ್ಯ ಎಂದು ವಾದಿ ಸುತ್ತಾರೆ. ಮತೀಯ ಮನಸ್ಸಿನ ಹಿಂದೂವು ಜಾತಿ ಪದ್ಧತಿಯ ನಿವಾರಣೆಯನ್ನು ವಿರೋಧಿಸುವಷ್ಟೇ ಅಸ್ಪೃಶ್ಯತೆಯ ನಿವಾರಣೆಯನ್ನೂ ವಿರೋಧಿಸುತ್ತಾನೆ. ಆತ ಈ ಸಮಾಜವನ್ನು ಒಂದೇ ಹಂತದಲ್ಲಿ ಬದಲಾಯಿಸುವುದನ್ನು ವಿರೋಧಿಸುವಷ್ಟೇ ಎರಡು ಹಂತಗಳಲ್ಲಿ ಬದಲಾಯಿಸುವುದನ್ನೂ ವಿರೋ ಧಿಸುತ್ತಾನೆ. ಆದರೆ ಈ ಯೋಚನೆ ರಾಜಕೀಯ ಬುದ್ಧಿಯ ಹಿಂದೂವಿಗೆ ಆಕರ್ಷಣೀಯವಾಗಿದೆ. ಅದಕ್ಕೆ ಎರಡು ಕಾರಣ– ಒಂದು, ಇದರಿಂದಾಗಿ ಹಿಂದೂವಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತಾನೆಷ್ಟಿದ್ದಾನೋ ಅದಕ್ಕಿಂತ ಹೆಚ್ಚು ಜನತಂತ್ರವಾದಿಯಾಗಿ ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಎರಡನೆಯದಾಗಿ– ಜಾತಿಪದ್ಧತಿಯನ್ನು, ಮುಟ್ಟದೆ ಇರುವುದರಿಂದ, ಮತೀಯ ಹಿಂದೂಗಳು ಕಾಂಗ್ರೆಸ್ಸನ್ನು ಕೈಬಿಡುವ ಅಪಾಯವಿರುವುದಿಲ್ಲ.

ಜಾತಿಪದ್ಧತಿಯನ್ನು ನಾಶಗೊಳಿಸದೆ ಅಸ್ಪೃಶ್ಯತೆಯನ್ನು ನಿವಾರಿಸುವ ಯೋಜನೆ ಹಾಕಿಕೊಂಡವರು ಮನುಸ್ಮೃತಿಯ ಅಧ್ಯಾಯ ಹತ್ತರ ನಾಲ್ಕನೇ ಶ್ಲೋಕವನ್ನು ತಮ್ಮ ಸಮರ್ಥನೆಗಾಗಿ ಬಳಸಿಕೊಳ್ಳುತ್ತಾರೆ. ಆ ಶ್ಲೋಕದಲ್ಲಿ ಮನು, ಇರುವುದು ನಾಲ್ಕೇ ವರ್ಣಗಳು, ಐದನೆಯ ವರ್ಣವೆಂಬುದಿಲ್ಲ ಎನ್ನುತ್ತಾನೆ. ಈ ಶ್ಲೋಕವನ್ನು ಹೀಗೆ ವ್ಯಾಖ್ಯಾನಿಸಿ ಅರ್ಥೈಸಲಾಗುತ್ತದೆ– ಐದನೆಯ ವರ್ಣವಿಲ್ಲವಾದ್ದರಿಂದ ಅಸ್ಪೃಶ್ಯರೂ ನಾಲ್ಕನೆಯ ವರ್ಣಕ್ಕೇ ಸೇರುತ್ತಾರೆ ಮತ್ತು ಆಗ ಅವರು ಶೂದ್ರರೆ ಎಂದಾಗುವುದರಿಂದ ಹಾಗೂ ಶೂದ್ರರನ್ನು ಮುಟ್ಟಲು ನಿಷೇಧವಿಲ್ಲದಿರುವುದರಿಂದ ಅಸ್ಪೃಶ್ಯರೂ ನಾಲ್ಕನೆಯ ವರ್ಣಕ್ಕೇ ಸೇರುತ್ತಾರೆ ಮತ್ತು ಆಗ ಅವರು ಶೂದ್ರರೆ ಎಂದಾಗುವುದರಿಂದ ಹಾಗೂ ಶೂದ್ರರನ್ನು ಮುಟ್ಟಲು ನಿಷೇಧವಿಲ್ಲದಿರುವುದರಿಂದ ಅಸ್ಪೃಶ್ಯರನ್ನೂ ಮುಟ್ಟಲು ಯಾವುದೇ ನಿಷೇಧವಿರುವುದಿಲ್ಲ. ಈ ವ್ಯಾಖ್ಯಾನ ರಾಜಕೀಯ ಬುದ್ಧಿಯ ಹಿಂದೂವಿನ ಕಿವಿಗಳಿಗೆ ಎಷ್ಟೇ ಅಪ್ಯಾಯಮಾನವಾಗಿರಲಿ, ಇದರ ಅರ್ಥ ಮನು ಒಟ್ಟಾರೆಯಾಗಿ ಹೇಳಹೊರಟಿರುವುದಕ್ಕಿಂತ ಭಿನ್ನವಾಗುವುದಿಲ್ಲ. ಈ ಶ್ಲೋಕವನ್ನು ಇನ್ನೊಂದು ರೀತಿಯಲ್ಲೂ ವ್ಯಾಖ್ಯಾನಿಸಬಹುದು: ಮನು ಚಾತುವರ್ಣ್ಯ ವ್ಯವಸ್ಥೆಯನ್ನು ವಿಸ್ತರಿಸಿ, ಆ ನಾಲ್ಕು ವರ್ಣಗಳ ಹೊರಗಿದ್ದ ಸಮುದಾಯಗಳನ್ನು ಕೂಡಿಸುವ ಮೂಲಕ ಪಂಚಮ ವರ್ಣವೊಂದನ್ನು ಸೃಷ್ಟಿಸಲು ಹಾಗೂ ಈ ವ್ಯವಸ್ಥೆಯನ್ನು ಪಂಚವರ್ಣ ವ್ಯವಸ್ಥೆಯಾಗಿ ಬದಲಿಸಲು ಸಿದ್ಧನಿರಲಿಲ್ಲ ಎಂದಾಗುತ್ತದೆ. ಮನು ಈ ನಾಲ್ಕೂ ವರ್ಣಗಳ ಹೊರಗಿರುವ ಜನರನ್ನು ಬಾಹ್ಯರು ಅಥವಾ ವರ್ಣಬಾಹ್ಯರು ಎಂದು ವರ್ಗೀಕರಿಸುವುದರಿಂದಲೇ ಅವನ ಈ ಉದ್ದೇಶ ಸ್ಪಷ್ಟವಾಗುತ್ತದೆ. ಮನುವು ಎಲ್ಲ ಜನರನ್ನೂ ನಾಲ್ಕು ವರ್ಣಗಳೊಳಗೇ ಸೇರಿಸ ಬಯಸಿದ್ದರೆ ಆತ ವರ್ಣಬಾಹ್ಯ ಎಂಬ ವರ್ಗದ ಬಗ್ಗೆ ಮಾತಾಡುವುದಕ್ಕೆ ಕಾರಣವಿಲ್ಲ. ಅಷ್ಟೇ ಅಲ್ಲ, ಆತ ಈ ವರ್ಣಬಾಹ್ಯ ವರ್ಗದಲ್ಲಿ ಎರಡು ವಿಭಾಗಗಳನ್ನು ಗುರುತಿಸುತ್ತಾನೆ– ಹೀನರು ಮತ್ತು ಅಂತ್ಯಾವಸಾಯಿಗಳು. ಈ ಕಾರಣಗಳಿಂದಾಗಿ ಮನುಸ್ಮೃತಿಯ ಈ ಶ್ಲೋಕಕ್ಕೆ ಸೌಮ್ಯವಾದಿಗಳು ಕೊಟ್ಟ ವ್ಯಾಖ್ಯಾನ ಆಸ್ತಿಕ ಹಿಂದೂವನ್ನು ಮೋಸಗೊಳಿಸಲಾರದು. ಆದ್ದರಿಂದ ಆಸ್ತಿಕ ಹಿಂದೂ, ಅಸ್ಪೃಶ್ಯತೆಯ ಆಚರಣೆ ಮನುಸ್ಮೃತಿಗೆ ವಿರುದ್ಧ ಎಂಬುದನ್ನಾಗಲಿ, ಅಸ್ಪೃಶ್ಯತೆಯ ನಿವಾರಣೆ ಹಿಂದೂ ಧರ್ಮಸೂತ್ರಗಳಿಗೆ ವಿರೋಧವಾದದ್ದಲ್ಲ ಎಂಬ ವಾದವನ್ನಾಗಲಿ ಒಪ್ಪಿಕೊಳ್ಳಲಾರ.

ಮನುವಿನ ಬರಹಕ್ಕೆ ಮೇಲೆ ನೀಡಲಾದ ವ್ಯಾಖ್ಯಾನ ಮತ್ತು ಅದನ್ನು ಆಧರಿಸಿದ ವಾದ ಸಾಧಾರಣ ಅಶಿಕ್ಷಿತ ಹಿಂದೂವಿಗೆ ತೀರ ಬೌದ್ಧಿಕ ಕಸರತ್ತು ಎನಿಸುವಂಥದು. ಅವನಿಗೆ ಗೊತ್ತಿರುವುದು ಎರಡೇ. ಮೊದಲನೆಯದಾಗಿ, ಸಾಮಾಜಿಕ ವ್ಯವಹಾರಗಳಲ್ಲಿ ತಾನು ಆಚರಿಸಬೇಕಾದ ಮೂರು ನಿಷೇಧಗಳು ಅವನಿಗೆ ಗೊತ್ತು ೧) ವಿಜಾತೀಯರೊಂದಿಗೆ ಸಹಭೋಜನ ಕೂಡದು (೨) ವಿಜಾತೀಯರೊಂದಿಗೆ ವಿವಾಹ ಕೂಡದು ಮತ್ತು ಅಸ್ಪೃಶ್ಯತೆಗೆ ಸಂಬಂಧಿಸಿದ ಮೂರನೆಯ ನಿಷೇಧ: (೩) ಕೆಲವು ಜನವರ್ಗಗಳನ್ನು ದೈಹಿಕವಾಗಿ ಸ್ಪರ್ಶಿಸಕೂಡದು ಎಂಬ ನಿಷೇಧ. ಮೊದಲ ಎರಡು ನಿಷೇಧಗಳಿಂದ ಜಾತಿ ಹುಟ್ಟುತ್ತದೆ, ಮೂರನೆಯ ನಿಷೇಧದಿಂದ ಅಸ್ಪೃಶ್ಯತೆ ಹುಟ್ಟುತ್ತದೆ. ಜಾತಿವಾದಿ ಹಿಂದೂವಿಗೆ ಈ ನಿಷೇಧಗಳ ಸಂಖ್ಯೆಯ ಬಗ್ಗೆಯೂ ಚಿಂತೆಯಿಲ್ಲ. ಈ ನಿಷೇಧಗಳನ್ನು ಆಚರಿಸುವುದರ ಬಗ್ಗೆ ಮಾತ್ರ ನಿಯತಿಯಿದೆ. ಇದನ್ನು ಆಚರಿಸಬಾರದು ಎಂದರೆ, ಏಕೆ ಆಚರಿಸಬಾರದು ಎಂದು ಆತ ತಿರುಗಿ ಕೇಳುತ್ತಾನೆ. ಅವನ ವಾದ–ನಾನು ಮೊದಲೆರಡು ನಿಷೇಧಗಳನ್ನು ಆಚರಿಸಬಹುದಾದರೆ ಮೂರನೆಯದನ್ನೂ ಆಚರಿಸುವುದು ಏಕೆ ತಪ್ಪು? ಮನೋವೈಜ್ಞಾನಿಕವಾಗಿ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಎರಡೂ ಒಂದೇ ತತ್ವದ ಮೇಲೆ ರೂಪಿತವಾದ ಎರಡು ವ್ಯವಸ್ಥೆಗಳು. ಜಾತಿವಾದಿ ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ, ಏಕೆಂದರೆ ಅವರು ಜಾತಿಪದ್ಧತಿಯನ್ನು ನಂಬುತ್ತಾರೆ.

ಈ ದೃಷ್ಟಿಯಿಂದ ನೋಡಿದಾಗ, ಜಾತಿಪದ್ಧತಿಯನ್ನು ನಾಶ ಮಾಡದೆ ಅಸ್ಪೃಶ್ಯತೆಯನ್ನು ನಿವಾರಿಸುವ ಯೋಜನೆ ಪೂರ್ಣ

ನಿರರ್ಥಕವಾದದ್ದು ಎಂಬುದು ತಿಳಿಯುತ್ತದೆ. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಬೇರೆ ಬೇರೆ ಸಂಗತಿಗಳು ಎಂಬ ಈ ವಾದದ ಮೂಲತತ್ವವೇ ಹುರುಳಿಲ್ಲದ್ದು. ಅವೆರಡೂ ಒಂದೇ ಮತ್ತು ಪ್ರತ್ಯೇಕಿಸಲಾಗದಂಥವು. ಅಸ್ಪೃಶ್ಯತೆಯೆನ್ನುವುದು ಜಾತಿಪದ್ಧತಿಯ ಒಂದು ವಿಸ್ತರಣೆ ಮಾತ್ರ. ಅವೆರಡರ ಮಧ್ಯೆ ಯಾವುದೇ ಬಿರುಕು ಇಲ್ಲ. ಎದ್ದು ನಿಂತರೆ ಅವೆರಡೂ ನಿಲ್ಲುತ್ತವೆ, ಬಿದ್ದರೆ ಎರಡೂ ಬೀಳುತ್ತವೆ.

ಅಸ್ಪೃಶ್ಯತೆಯು ಕಾನೂನಿನ ಅಥವಾ ವೈಚಾರಿಕವಾದ ತಂತ್ರದಿಂದ ನಿವಾರಣೆಯಾಗುವುದಿಲ್ಲ ಎನ್ನುವುದಕ್ಕೆ ಇನ್ನೊಂದು ಕಾರಣವಿದೆ. ಮೊದಲೇ ನೋಡಿರುವಂತೆ, ಹಿಂದೂ ಸಮಾಜ ವ್ಯವಸ್ಥೆ ನಿಂತಿರುವುದು ತಾರತಮ್ಯವಿರುವ ಅಸಮಾನತೆಯ ತಳಹದಿಯ ಮೇಲೆ. ಈ ವೈಶಿಷ್ಟ್ಯವನ್ನು ಹಲವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಸಮಾನತೆಯ ಮೇಲೆ ನಿಂತಿರುವ ಸಮಾಜ ವ್ಯವಸ್ಥೆಗೂ ತರತಮಗಳ ಅಸಮಾನತೆಯ ಮೇಲೆ ನಿಂತಿರುವ ಸಮಾಜ ವ್ಯವಸ್ಥೆಗೂ ಅದರ ತಳಪಾಯದಲ್ಲೇ ವ್ಯತ್ಯಾಸಗಳಿವೆ. ಮೊದಲನೆಯದು ದುರ್ಬಲ, ಹಾಗಾಗಿ ತನ್ನಿಂದ ತಾನೇ ಮುಂದುವರೆದುಕೊಂಡು ಹೋಗಲಾರದು. ಆದರೆ ಎರಡನೆಯದು, ತನ್ನನ್ನು ತಾನೇ ರಕ್ಷಿಸಿ ಮುಂದುವರೆಸಿಕೊಳ್ಳಬಲ್ಲದು. ಅಸಮಾನತೆಯನ್ನು ಆಧರಿಸಿದ ವ್ಯವಸ್ಥೆಯಲ್ಲಿ ಕೆಳವರ್ಗಗಳು ಒಟ್ಟಾಗಿ ವ್ಯವಸ್ಥೆಯನ್ನು ಕಿತ್ತೊಗೆಯಲು ಸಾಧ್ಯ. ಏಕೆಂದರೆ ಕೆಳವರ್ಗದ ಯಾರಿಗೂ ಅದನ್ನು ಹಾಗೇ ಮುಂದುವರೆಸುವ ಆಸಕ್ತಿ ಇರುವುದಿಲ್ಲ. ತರತಮವುಳ್ಳ ಅಸಮಾನತೆಯ ಮೇಲೆ ನಿಂತಿರುವ ಸಮಾಜ ವ್ಯವಸ್ಥೆಯಲ್ಲಿ, ಶೋಷಿತ ಜನರೆಲ್ಲ ಒಟ್ಟಾಗಿ ಉಳಿದವರನ್ನು ಎದುರಿಸುವ ಸಾಧ್ಯತೆ ಇಲ್ಲವೇ ಇಲ್ಲ. ತರತಮವುಳ್ಳ ಅಸಮಾನತೆಯ ವ್ಯವಸ್ಥೆಯಲ್ಲಿ ಶೋಷಿತ ಜನರೆಲ್ಲ ಒಂದೇ ಮಟ್ಟದವರಾಗಿರುವುದಿಲ್ಲ. ಎಲ್ಲರೂ ಉಚ್ಚರು ಅಥವಾ ನೀಚರು ಆಗಿದ್ದಾಗ ಮಾತ್ರ ಅವರಿಗೆ ಸಾಧಾರಣವಾದ ಕ್ರಿಯೆ ಹುಟ್ಟುವುದು ಸಾಧ್ಯ. ತರತಮವುಳ್ಳ ಅಸಮಾನತೆಯ ವ್ಯವಸ್ಥೆಯಲ್ಲಿ ಉಚ್ಚ ಉತ್ತಮರು (ಬ್ರಾಹ್ಮಣರು) ಇದ್ದಾರೆ. ಅವರ ಕೆಳಗೆ ಉಚ್ಚ ಮಧ್ಯಮರು (ಕ್ಷತ್ರಿಯರು) ಹಾಗೂ ಅವರ ಕೆಳಗೆ ಉಚ್ಚರು (ವೈಶ್ಯರು) ಇದ್ದಾರೆ. ಈ ಉಚ್ಚರ ಕೆಳಗೆ ನೀಚರು (ಶೂದ್ರರು) ಮತ್ತು ನೀಚರ ಕೆಳಗೆ ನೀಚ ಕನಿಷ್ಠರು (ಅಸ್ಪೃಶ್ಯರು) ಇದ್ದಾರೆ. ಇವರೆಲ್ಲರಿಗೂ ಉಚ್ಚಉತ್ತಮರ ಬಗ್ಗೆ ಅಸಮಾಧಾನವಿದೆ ಮತ್ತು ಅವರನ್ನು ಉರುಳಿಸುವ ಹಂಬಲವಿದೆ. ಆದರೆ ಅವರೆಲ್ಲ ಒಟ್ಟಾಗುವುದಿಲ್ಲ. ಉಚ್ಚಮಧ್ಯಮರು ಉಚ್ಚಉತ್ತಮರನ್ನು ನಿವಾರಿಸಬಯಸುತ್ತಾರೆ. ಆದರೆ ಅವರು ಉಚ್ಚ, ನೀಚ, ನೀಚಕನಿಷ್ಠರೊಂದಿಗೆ ಸೇರ ಬಯಸುವುದಿಲ್ಲ. ಹಾಗೆ ಸೇರಿದರೆ ಅವರೂ ತಮ್ಮೊಂದಿಗೆ ಕೂಡಿ ಸಮಾನರಾಗುತ್ತಾರೆಂಬ ಭಯವಿದೆ. ಉಚ್ಚರಿಗೆ ಉಚ್ಚಮಧ್ಯಮರನ್ನು ಕೆಡವಬೇಕೆಂದಿದೆ, ಆದರೆ ಅವರು ನೀಚ, ನೀಚ ಕನಿಷ್ಠರೊಂದಿಗೆ ಕೈಗೂಡಿಸುವುದಿಲ್ಲ. ಕಾರಣ, ಅವರು ಮೇಲೆ ಬಂದು ತಮ್ಮ ಸಮಾನ ಸ್ಥಾನಮಾನ ಗಳಿಸಿಬಿಡುತ್ತಾರೆಂಬ ಭಯ. ನೀಚನಿಗೆ ಉಚ್ಚ, ಉಚ್ಚಮಧ್ಯಮ, ಉಚ್ಚಉತ್ತಮರನ್ನು ಕೆಳಗೆಳೆಯುವ ಹಂಬಲವಿದೆ. ಆದರೆ ನೀಚ ಕನಿಷ್ಠನೊಂದಿಗೆ ಸೇರಿದರೆ ನೀಚ ಕನಿಷ್ಠನ ಸ್ಥಾನಮಾನ ಹೆಚ್ಚಾಗಿ ಆತ ತಮಗೆ ಸಮಾನನಾಗುತ್ತಾನೆಂಬ ಭಯದಿಂದ ಅವನೊಡನೆ ಸೇರಲು ಸಿದ್ಧನಿಲ್ಲ. ತರತಮವುಳ್ಳ ಅಸಮಾನತೆಯ ಸಮಾಜವ್ಯವಸ್ಥೆಯಲ್ಲಿ ಈ ವ್ಯವಸ್ಥೆಯ ಗೋಪುರದ ಅತ್ಯಂತ ಕೆಳಗಿರುವ ಒಂದು ವರ್ಗವನ್ನು ಬಿಟ್ಟರೆ ಇನ್ನಾವ ವರ್ಗವನ್ನೂ ವಿಶೇಷ ಗೌರವ ಸ್ಥಾನಮಾನಗಳಿಲ್ಲದ ವರ್ಗ ಎನ್ನುವಂತಿಲ್ಲ. ಈ ವಿಶೇಷ ಗೌರವ ಸ್ಥಾನಮಾನಗಳಲ್ಲಿ ತಾರತಮ್ಯವಿದೆ ಅಷ್ಟೆ. ನೀಚವರ್ಗವೂ ಕೂಡ ನೀಚಕನಿಷ್ಠರಿಗೆ ಹೋಲಿಸಿದರೆ ಸ್ಥಾನಮಾನವುಳ್ಳ ವರ್ಗವೇ. ಹೀಗೆ ಪ್ರತಿ ವರ್ಗಕ್ಕೂ ಅದರ ಸ್ಥಾನಮಾನ ಇರುವುದರಿಂದ ಪ್ರತಿವರ್ಗವೂ ಈ ಸಮಾಜ ವ್ಯವಸ್ಥೆಯನ್ನು ಹೀಗೇ ಮುಂದುವರೆಸಲು ಬಯಸುತ್ತದೆ.

ಅಸ್ಪೃಶ್ಯರಿಗೆ ಒಂದು ದುರಾದೃಷ್ಟವಾಗಿರಬಹುದು, ಆದರೆ ಹಿಂದೂಗಳಿಗೆ ಅದು ಖಂಡಿತವಾಗಿಯೂ ಒಂದು ಅದೃಷ್ಟವೇ. ಇದು ಅವರಿಗೆ ನೀಚರೆಂದು ಗಣಿಸಬಹುದಾದ ಒಂದು ವರ್ಗವನ್ನು ಕಲ್ಪಿಸಿಕೊಡುತ್ತದೆ. ಹಿಂದೂಗಳು ಅಸ್ತಿತ್ವಹೀನರಿಗೂ ಏನೋ ಒಂದು ಅಸ್ತಿತ್ವ ಸಿಗುವ ವ್ಯವಸ್ಥೆಯನ್ನು ಬಯಸುವುದಿಲ್ಲ, ಎಲ್ಲರಿಗೂ ಸಮಾನ ಅಸ್ತಿತ್ವವಿರುವ ವ್ಯವಸ್ಥೆಯನ್ನೂ ಬಯಸುವುದಿಲ್ಲ. ಅವರು ಬಯಸುವ ವ್ಯವಸ್ಥೆ, ಕೆಲವು ಅಸ್ತಿತ್ವ ಇರುವವರು ಮತ್ತು ಉಳಿದವರು ಅಸ್ತಿತ್ವಹೀನರು ಆಗಿರುವಂಥ ವ್ಯವಸ್ಥೆ. ಅಸ್ಪೃಶ್ಯರು ಅಸ್ತಿತ್ವಹೀನರು. ಇದರಿಂದಾಗಿ ಹಿಂದೂಗಳಿಗೆ ಒಂದು ಅಸ್ತಿತ್ವ ದೊರಕುತ್ತದೆ. ಅಸ್ಪೃಶ್ಯತೆಯ ವ್ಯವಸ್ಥೆ ಹಿಂದೂಗಳ ಸಹಜ ಹೆಗ್ಗಳಿಕೆಯನ್ನು ಉಳಿಸಿ ಬೆಳೆಸುತ್ತದೆ ಮತ್ತು ತಾವು ದೊಡ್ಡವರೆಂಬ ಗರ್ವವನ್ನು ಅವರಿಗೆ ತಂದುಕೊಡುತ್ತದೆ. ಹಿಂದೂಗಳು ಅದರಲ್ಲೂ ಮುಖ್ಯವಾಗಿ ಬಹುಸಂಖ್ಯಾತ ಕ್ಷುದ್ರಹಿಂದೂಗಳು ಅಸ್ಪೃಶ್ಯತೆಯನ್ನು ಬಿಡಲು ಸಿದ್ಧರಿಲ್ಲದಿರುವುದಕ್ಕೆ, ಇದೂ ಒಂದು ಮುಖ್ಯ ಕಾರಣ.

ಅಸ್ಪೃಶ್ಯತೆ ಮಾಯವಾಗುವುದು ಒಟ್ಟಾರೆ ಹಿಂದೂ ಸಮಾಜವ್ಯವಸ್ಥೆ, ಮುಖ್ಯವಾಗಿ ಜಾತಿಪದ್ಧತಿ ಪೂರ್ಣ ನಿರ್ನಾಮವಾದಾಗ ಮಾತ್ರ. ಇದು ಆಗಲು ಸಾಧ್ಯವೆ? ಯಾವುದೇ ಸಂಘಟನೆ ಉಳಿದುಕೊಳ್ಳುವುದು ಒಂದಲ್ಲ ಒಂದು ರೀತಿಯ ಅನುಮೋದನೆಯಿಂದ. ಒಂದು ಸಂಘಟನೆಗೆ ಮೂರು ಮೂಲಗಳಿಂದ ಅನುಮೋದನೆ ದೊರಕಬಹುದು– ಕಾನೂನಿಂದ, ಸಮಾಜದಿಂದ ಮತ್ತು ಧರ್ಮದಿಂದ. ಈ ಅನುಮೋದನೆಯ ಶಕ್ತಿ ಆ ಸಂಘಟನೆಯ ಜೀವಂತಿಕೆಯನ್ನು ನಿರ್ಧರಿಸುತ್ತದೆ. ಜಾತಿಪದ್ಧತಿಯ ಹಿಂದಿರುವ ಅನುಮೋದನೆಯ ಸ್ವರೂಪ ಎಂಥದು? ದುರದೃಷ್ಟವಶಾತ್ ಜಾತಿಪದ್ಧತಿಗೆ ಸಿಕ್ಕಿರುವುದು .ಧಾರ್ಮಿಕ ಅನುಮೋದನೆ. ಏಕೆಂದರೆ ವರ್ಣ ವ್ಯವಸ್ಥೆಯ ಹೊಸ ರೂಪವಾಗಿ ಬಂದ ಜಾತಿಪದ್ಧತಿಗೆ ವೇದಗಳ ಅನುಮೋದನೆ ದೊರಕಿದೆ ಹಾಗೂ ವೇದಗಳು ಎಂದೂ ಸುಳ್ಳಾಗದ ಹಿಂದೂಧರ್ಮದ ಪವಿತ್ರ ಗ್ರಂಥಗಳಾಗಿವೆ. ದುರದೃಷ್ಟವಶಾತ್ ಹೀಗಾದರೆ ಎಂದು ನಾನು ಹೇಳುವುದಕ್ಕೆ ಕಾರಣ, ಧಾರ್ಮಿಕ ಅನುಮೋದನೆ ದೊರೆತ ಯಾವುದೇ ವ್ಯವಸ್ಥೆಗೆ ಪವಿತ್ರ ಮತ್ತು ಸರ್ವಕಾಲೀನ ಗುಣಗಳು ಒದಗಿಬರುತ್ತವೆ. ಹಾಗಾಗಿ ಜಾತಿಪದ್ಧತಿಯೇ ಮಾಯವಾಗುವಂಥದಲ್ಲವಾದರೆ, ಇನ್ನು ಅಸ್ಪೃಶ್ಯತೆ ಮಾಯವಾಗುವ ಬಗೆ ಹೇಗೆ?

ಯಾರು ಬಹಳ ನಮ್ರರಾಗಿ ಕೆಳ ಕೆಳಗೆ ಇಳಿದರೋ ಅವರೆಲ್ಲರೂ ಪಾರಾದರು.
ಉಚ್ಚಕಲೀನರಾಗಿದ್ದು ಅಭಿಮಾನದ ದೋಣಿ ಹತ್ತಿದರೋ ಅವರು ಮುಳುಗಿದರು.
—ಕಬೀರ

ಜಾತಿ, ಲಿಂಗ ಕುರಿತ ಪ್ರತ್ಯೇಕತೆ

ಡಾ॥ ರಾಮ ಮನೋಹರ ಲೋಹಿಯಾ

ಇಡೀ ಜಗತ್ತಿನಲ್ಲೇ ಭಾರತೀಯರು ಕಡು ದುಃಖಿಗಳು. ಅವರು ಕಡುಬಡವಾಗಿರುವುದರ ಜೊತೆಗೆ ಅತ್ಯಂತ ರೋಗಪೀಡಿತರಾಗಿರುವುದು ಕೂಡ ಇದಕ್ಕೆ ಕಾರಣ. ಇದಕ್ಕೆ ಇನ್ನೊಂದು ಮಹತ್ವದ ಕಾರಣವೂ ಇದೆ. ಅದೆಂದರೆ, ಇತ್ತೀಚಿನ ಚರಿತ್ರೆಯಲ್ಲಿ ಅವರ ಚೇತನ ಪಡೆದುಕೊಂಡ ವಿಚಿತ್ರವಾದ ಒಂದು ತಿರುವು. ಅವರ ಬಾಯಿಂದ ನಿರ್ಲಿಪ್ತತೆಯ ತತ್ವದ ಮಾತೇನೋ ಬರುತ್ತದೆ. ಆದರೆ ಅವರು ಬದುಕುವ ಕ್ರಮದಲ್ಲಿ ಮಾತ್ರ ತೀರಾ ಕೀಳೆನ್ನಬಹುದಾದ ವ್ಯಾಮೋಹವೇ ಅತಿಯಾಗಿರುವುದು ಎದ್ದು ಕಾಣುತ್ತದೆ. ಭಾರತೀಯರು ಬದುಕಿಗೆ ಹೇಗೆ ಜೋತು ಬಿದ್ದಿದ್ದಾರೆಂದರೆ, ಅವರು ಕಡು ದುಃಖದ ಮಡುವಿನಲ್ಲೇ ನರಳಿ ಹೇಗೋ ಬದುಕು ನೂಕಬಯಸುವವರೇ ವಿನಃ ಏನಾದರೊಂದು ಮಹತ್ವದ ಪ್ರಯತ್ನ ಮಾಡುವ ಸಾಹಸಕ್ಕಿಳಿದವರಲ್ಲ. ಆದರೆ, ಹಣ ಹಾಗೂ ಅಧಿಕಾರ ಕುರಿತ ದುರಾಸೆಯಲ್ಲಿ ಜಗತ್ತಿನ ಯಾವ ಜನಾಂಗವೂ ಅವರನ್ನು ಮೀರಿಸಲಾರದು.

ಜಾತಿ ಹಾಗೂ ಸ್ತ್ರೀಯರನ್ನು ಕುರಿತ ಪ್ರತ್ಯೇಕತಾವಾದೀ ಮನೋಭಾವವೇ ಭಾರತೀಯ ಚೇತನದ ಈ ಅಧೋಗತಿಗೆ ಮೂಲಕಾರಣ ಎಂಬುದು ನನ್ನ ದೃಢ ನಂಬಿಕೆ. ಸಾಹಸವನ್ನೂ, ಆನಂದವನ್ನೂ ಸೃಷ್ಟಿಸುವ ಸಾಮರ್ಥ್ಯವನ್ನೇ ಕೊಲ್ಲಬಲ್ಲ ಶಕ್ತಿ ಪ್ರತ್ಯೇಕತಾವಾದಿ ಮನಸ್ಥಿತಿಗಿದೆ.

ಆಧುನಿಕ ಆರ್ಥಿಕ ಯೋಜನೆಗಳ ಮೂಲಕ ಬಡತನವನ್ನು ಹೊಡೆದೋಡಿಸಿದರೆ, ಈ ಎರಡೂ ಬಗೆಯ ಪ್ರತ್ಯೇಕತೆಗಳು ತಂತಾನೇ ಮಾಯವಾಗುತ್ತವೆಂದು ತಿಳಿಯುವವರು ದೊಡ್ಡ ತಪ್ಪು ಮಾಡುತ್ತಾರೆ. ಬಡತನ ಹಾಗೂ ಈ ಎರಡು ಬಗೆಯ ಪ್ರತ್ಯೇಕತೆಗಳು ಒಂದನ್ನೊಂದು ಪೋಷಿಸುತ್ತವೆ. ಈ ಎರಡೂ ಬಗೆಯ ಪ್ರತ್ಯೇಕತೆಗಳ ವಿರುದ್ಧ ಏಕಕಾಲಕ್ಕೆ ಪ್ರಜ್ಞಾಪೂರ್ವಕವಾದ ಹಾಗೂ ನಿರಂತರವಾದ ಹೋರಾಟ ನಡೆಸದಿದ್ದರೆ ಬಡತನದ ವಿರುದ್ಧ ನಾವು ಮಾಡುವ ಹೋರಾಟಗಳೆಲ್ಲ ಬರಿ ಬೊಗಳೆ ಯಾಗಿಬಿಡುತ್ತವೆ ಅಷ್ಟೆ.

ಕಾಶಿ ಪುಣ್ಯಕ್ಷೇತ್ರದಲ್ಲಿ ಭಾರತೀಯ ಗಣರಾಜ್ಯದ ಅಧ್ಯಕ್ಷರು ಸಾರ್ವಜನಿಕವಾಗಿ ಇನ್ನೂರು ಜನ ಬ್ರಾಹ್ಮಣರ ಕಾಲು ತೊಳೆದರು. ಹೀಗೆ ಸಾರ್ವಜನಿಕವಾಗಿ ಒಬ್ಬ ಇನ್ನೊಬ್ಬನ ಕಾಲು ತೊಳೆಯುವುದು ಅಸಹ್ಯವಾದದ್ದು. ಈ ಅಸಹ್ಯಕರ ಸವಲತ್ತನ್ನು ಬ್ರಾಹ್ಮಣ ಜಾತಿಗೆ ನೀಡಿರುವುದಂತೂ ಶಿಕ್ಷಾರ್ಹ ಅಪರಾಧವಾಗಬೇಕು. ವಿದ್ಯೆ, ಗುಣ ಒಂದೂ ಇಲ್ಲದ ಅನೇಕರಿಗೆ ಕೇವಲ ಬ್ರಾಹ್ಮಣರೆಂಬ ಆಧಾರದ ಮೇಲೆ ಈ ಸವಲತ್ತನ್ನು ನೀಡುವುದಂತೂ ತರತಮ ಪ್ರಜ್ಞೆ ಸಂಪೂರ್ಣ ಮಾಯವಾಗಿರುವುದರ ಸೂಚನೆ. ಸಹಜವಾಗಿಯೇ ಇವೆಲ್ಲ ಜಾತಿಪದ್ಧತಿ ಹಾಗೂ ತಿಕ್ಕಲುತನಗಳ ಜೊತೆಗೇ ಇರುತ್ತವೆ.

ರಾಷ್ಟ್ರಪತಿಗಳು ಇಂಥ ಅಸಹ್ಯಕರ ಪ್ರದರ್ಶನದಲ್ಲಿ ತೊಡಗುವುದೆಂದರೆ ನನ್ನಂಥವರನ್ನು ಕ್ರೂರವಾಗಿ ಅವಮಾನಿಸಿದಂತೆ. ಕಾರಣ, ಷಂಡ ಸಿಟ್ಟಿನಿಂದ ಉರಿದು ಬೀಳುವುದನ್ನು ಬಿಟ್ಟು ನಾವಿನ್ನೇನೂ ಮಾಡಲಾರೆವು.

ಈ ಅಪರಾಧದಲ್ಲಿ ಪಾಲ್ಗೊಂಡ, ಉತ್ತರ ಪ್ರದೇಶದ ಅಧಿಕಾರ ಕೇಂದ್ರಗಳಲ್ಲಿರುವ, ಇನ್ನಿಬ್ಬರನ್ನು ಕುರಿತು ನಾನು ಇಲ್ಲಿ ಎತ್ತಿ ಆಡುವುದಿಲ್ಲ. ಅವರಲ್ಲೊಬ್ಬ ಇಡೀ ಕಾಶಿ ತನ್ನನ್ನು ಬ್ರಾಹ್ಮಣನೆಂದು ಗುರುತಿಸಲಿ ಎಂಬ ಬಾಲಿಶ ಕಾತರ ವ್ಯಕ್ತಪಡಿಸುತ್ತಿದ್ದ. ಆದರೆ, ಇನ್ನೊಬ್ಬ ಪ್ರಾಯಶಃ ಸೋಲೊಪ್ಪಿಕೊಂಡು ಇದೀಗ ಹಿಂದೂ ಧರ್ಮದ ಅತ್ಯಂತ ಕೆಳ ನೆಲೆಗಳನ್ನೇ ಅದರ ಚಿಂತನೆ ಹಾಗೂ ಸಂಸ್ಕೃತಿಯ ಉನ್ನತ ಶಿಖರಗಳೆನ್ನುತ್ತಾ ಗೊಂದಲವೆಬ್ಬಿಸಿದ್ದಾನೆ.

ಈಚಿನ ವರ್ಷಗಳಲ್ಲಿ ಕಾಶಿ ಪಟ್ಟಣ ಒಂದು ಕೆಟ್ಟ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದೆ. ದ್ವಿಜರ ಇತರೆ ಗುಂಪುಗಳಿಗೆ ಬ್ರಾಹ್ಮಣನ ಸ್ಥಾನಮಾನ ನೀಡುವ ತನ್ನ ಪ್ರಯತ್ನದಲ್ಲಿ ಅದು 'ಕಾಯಕದ ಮೂಲಕ ಬ್ರಾಹ್ಮಣನಾದವನನ್ನು' ಮೇಲೆಂದು ತೋರಿಸುವ ಸಲುವಾಗಿ 'ಹುಟ್ಟು ಬ್ರಾಹ್ಮಣ' ಎಂದು ಕರೆಯಲ್ಪಡುವವನನ್ನು ಗೇಲಿ ಮಾಡುತ್ತದೆ. ಈ ಕೆಟ್ಟ ಸಂಪ್ರದಾಯಕ್ಕೆ ಕಟ್ಟುಬಿದ್ದವರು ಒಂದೋ ಬ್ರಾಹ್ಮಣರನ್ನು ಪೂಜಿಸುತ್ತಾರೆ, ಇಲ್ಲವೇ ತೆಗಳುತ್ತಾರೆ. ಈ ವ್ಯಸನಕ್ಕೆ ತುತ್ತಾದ ಬನಿಯಾಗಳು ಹಾಗೂ ಕಾಯಸ್ಥರಿಗೆ ಹುಟ್ಟು ಬ್ರಾಹ್ಮಣರ ಜೊತೆ ಸಮಾನತೆಯ ಸಂಬಂಧವನ್ನಿರಿಸಿ ಕೊಳ್ಳುವುದೇ ಅಸಾಧ್ಯವಾಗುತ್ತದೆ.

ರಾಷ್ಟ್ರಪತಿಗಳ ಆ ನಾಚಿಕೆಗೇಡಿನ ವರ್ತನೆಯ ಕತೆಯನ್ನು ನಾನು ಕೇಳಿದ್ದು ಕೂಡ ಒಬ್ಬ ಬ್ರಾಹ್ಮಣನಿಂದಲೇ ಎಂಬುದನ್ನು ಇಲ್ಲಿ ದಾಖಲಿಸಬೇಕು. ಭಾರತದ ರಾಷ್ಟ್ರಪತಿಯಿಂದ ಕಾಲು ತೊಳೆಸಿಕೊಳ್ಳಲು ಕರೆಸಲಾದ ಇನ್ನೂರು ಜನರಲ್ಲಿ ಇವನೂ ಒಬ್ಬನಾಗಿದ್ದ. ಆದರೆ ಆ ಹೀನ ಆಚರಣೆ ಶುರುವಾಗುವ ಮುನ್ನ, ತನ್ನ ದೇಶದ ರಾಷ್ಟ್ರಪತಿಯಿಂದ ಕಾಲು ತೊಳೆಸಿಕೊಳ್ಳುವ ಪಾಪ ಹೊರಬೇಕಾಗುತ್ತದೆ ಎಂಬ ಭಯದಿಂದ ನಡುಗಿಹೋದ ಏಕೈಕ ವ್ಯಕ್ತಿ ಈತ. ನಂತರ ಈತನ ಬದಲಿಗೆ ಇನ್ನೊಬ್ಬನನ್ನು ತರಲಾಯಿತು.

ಆ ಅನಾಗರಿಕ ರಾಕ್ಷಸ ಪಂದ್ಯದಲ್ಲಿ ಮನುಷ್ಯನಂತೆ ವರ್ತಿಸಿದ ಏಕೈಕ ವ್ಯಕ್ತಿ ಈತ. ಈ ಬಡ ಸಂಸ್ಕೃತ ಮೇಷ್ಟರನ್ನು ನಾನು ಎಂದೆಂದಿಗೂ ಗೌರವದಿಂದ ಕಾಣುತ್ತೇನೆ. ಹುಟ್ಟಿನಿಂದ ಬ್ರಾಹ್ಮಣರಾದರೂ, ಇಂಥವರೇ ಇಂದು ದಕ್ಷಿಣ ಭಾರತದ ವಿಕೃತ ಬ್ರಾಹ್ಮಣ ವಿರೋಧವು ಇಡೀ ದೇಶವನ್ನು ನುಂಗದಂತೆ ತಡೆಯುತ್ತಿದ್ದಾರೆ.

ಭಾರತೀಯ ಗಣರಾಜ್ಯ ಹಾಗೂ ಮಾನವ ಚೇತನ ಹೀಗೆ

ಅಧೋಗತಿಗಿಳಿಯುತ್ತಿರುವುದನ್ನು ಸುಮ್ಮನೆ ಕಣ್ಣು ಬಿಟ್ಟುಕೊಂಡು ನೋಡುತ್ತಿರುವ ಕಾಶಿ ಹಾಗೂ ಭಾರತದ ಇತರ ಭಾಗದ ಬ್ರಾಹ್ಮಣರಿಗೆ ಒಂದು ಮಾತು ನೆನಪಿರಲಿ: ದುರುಳ ವರ್ತನೆಗಳೂ ಅದರಿಂದ ಹುಟ್ಟುವ ಖುಷಿಯೂ ಒಂದಲ್ಲ ಒಂದು ದಿನ ಅವರಿಗೇ ಮುಳುವಾಗುತ್ತವೆ.

ವ್ಯಕ್ತಿಯೊಬ್ಬ ಬ್ರಾಹ್ಮಣನೆನ್ನುವ ಒಂದೇ ಆಧಾರದ ಮೇಲೆ ಇನ್ನೊಬ್ಬ ಅವನ ಕಾಲು ತೊಳೆಯುವುದೆಂದರೆ ಜಾತಿಪದ್ಧತಿ, ಬಡತನ ಹಾಗೂ ದುಃಖಗಳು ನಿರಾತಂಕವಾಗಿ ಮುಂದುವರೆಯಲು ಅನುವು ಮಾಡಿಕೊಡುವುದೆಂದೇ ಅರ್ಥ. ಇದರ ಜೊತೆಗೇ ನೇಪಾಳಿ ಬಾಬಾ, ಗಂಗಾಜಲದ ಮೇಲೆ ಆಣೆಯಿಡಿಸಿ ಓಟು ಕೇಳುವುದು ಇತ್ಯಾದಿಗಳು ಕೂಡ ಸರಪಳಿಯಂತೆ ಮುಂದುವರೆಯುತ್ತವೆ.

ಇಂಥ ಹೀನಕೃತ್ಯಗಳನ್ನು ಪ್ರೇರೇಪಿಸುವ ಮನಸ್ಸು ದೇಶದ ಕಲ್ಯಾಣ ಕುರಿತಾಗಲೀ, ಹೊಸ ಹೊಸ ಸಾಹಸಗಳನ್ನು ಕುರಿತಾಗಲೀ ಉತ್ಸಾಹದಿಂದ ಯೋಜನೆಗಳನ್ನು ರೂಪಿಸಲಾರದು. ಇಂಥ ಮನಸ್ಸು ಕೋಟ್ಯಾಂತರ ಜನ ಸಮೂಹವನ್ನು ಕೆಳಗೆ ತುಳಿಯುತ್ತಲೇ ಇರುತ್ತದೆ. ಅವರಿಗೆ ಆಧ್ಯಾತ್ಮಿಕ ಸಮಾನತೆಯನ್ನು ಕೊಡಲು ನಿರಾಕರಿಸಿದಂತೆ, ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯಿಂದಲೂ ಅವರನ್ನು ವಂಚಿಸುತ್ತಿರುತ್ತದೆ.

ಇಂಥ ಮನಸ್ಸು ದೇಶದ ಕೃಷಿಯನ್ನಾಗಲೀ, ಕೈಗಾರಿಕೆಯನ್ನಾಗಲೀ ಸುಧಾರಿಸಲಾರದು. ಕಾರಣ, ಈ ಬಗೆಯ ಮನಸ್ಸು ತಿಗಣೆ ಹಾಗೂ ಸೊಳ್ಳೆಗಳನ್ನು ಹುಟ್ಟು ಹಾಕುವ ತಿಪ್ಪೆ, ಕೊಳಚೆಗಳ ತವರೂರು. ಹೀಗಿರುವಾಗ ಕೇವಲ ಮೇಲುಜಾತಿಯ ಶ್ರೀಮಂತರ ಮನೆಯ ಸುತ್ತ ಡಿ.ಡಿ.ಟಿ. ಸಿಂಪಡಿಸಿದರೇನು ಪ್ರಯೋಜನ? ತಿಗಣೆ, ಸೊಳ್ಳೆ, ಬರಗಾಲ ಹಾಗೂ ಸಾರ್ವಜನಿಕವಾಗಿ ಬ್ರಾಹ್ಮಣರ ಕಾಲು ತೊಳೆಯುವುದು ಇವೆಲ್ಲ ಒಂದಕ್ಕೊಂದು ಪೂರಕವಾಗಿವೆ. ಜೊತೆಗೇ ಅವು ಮಾನಸಿಕ ಹಾದರವನ್ನೂ, ಆಲೋಚನೆಗಳಲ್ಲಿ ಕೂಪಮಂಡೂಕತ್ವವನ್ನೂ ನೀರೆರೆದು ಪೋಷಿಸುತ್ತವೆ. ಕಾರಣ, ವಿಭಿನ್ನ ಉದ್ಯೋಗಗಳಲ್ಲಿ ತೊಡಗಿದ, ವಿಭಿನ್ನ ಸಾಮಾಜಿಕ ಶ್ರೇಣಿಗಳಲ್ಲಿ ಹುಟ್ಟಿದ ಜನರ ಮನಸ್ಸುಗಳ ನಡುವಣ ಸಂವಾದದ ಸಾಧ್ಯತೆಯೇ ಇಲ್ಲಿ ಸತ್ತು ಹೋಗಿರುತ್ತದೆ.

ಕರಾಳ ನಿರಾಶೆ ಎಲ್ಲೆಡೆ ಕವಿದಿದೆ. ಎತ್ತ ನೋಡಿದರೂ ಹೊಸತನವಿಲ್ಲ. ಬ್ರಾಹ್ಮಣರ ಕಾಲು ತೊಳೆಯುವ ರಾಷ್ಟ್ರಪತಿಯಿರುವ ದೇಶದಲ್ಲಿ ಅರ್ಚಕ ಹಾಗೂ ಚಮ್ಮಾರನ ನಡುವೆ, ಶಿಕ್ಷಕ ಹಾಗೂ ಅಗಸಗಿತ್ತಿಯ ನಡುವೆ ಮುಕ್ತ ಮಾತುಕತೆಯ ಸಾಧ್ಯತೆಯೇ ಇರುವುದಿಲ್ಲ.

ರಾಷ್ಟ್ರಪತಿಯೊಬ್ಬನ ಬಗ್ಗೆ ನಮಗೆ ಭಿನ್ನಾಭಿಪ್ರಾಯಗಳಿರಬಹುದು, ಅವನ ನಡವಳಿಕೆಗಳು ನಮಗೆ ವಿಚಿತ್ರವೆನಿಸಬಹುದು. ಆದರೂ ಅವನನ್ನು ನಾವು ಗೌರವಿಸಬಯಸುತ್ತೇವೆ. ಆದರೆ ಅಂಥ ಗೌರವಕ್ಕೆ ಅರ್ಹನಾಗಬೇಕಾದರೆ ರಾಷ್ಟ್ರಪತಿ ಕೂಡ ನಾಗರೀಕ ನಡವಳಿಕೆಯ ಕೆಲವು ಮೂಲಭೂತ ನಿಯಮಗಳನ್ನು ಉಲ್ಲಂಘಿಸಕೂಡದು.

ಗಂಡು–ಹೆಣ್ಣುಗಳ ನಡುವಣ ಸಾಮಾಜಿಕ ಸಂಬಂಧ ಕುರಿತು ರಾಷ್ಟ್ರಪತಿಗಳು ವ್ಯಕ್ತಪಡಿಸಿದ ಅಭಿಪ್ರಾಯ ಕುರಿತು ಪ್ರತಿಕ್ರಿಯೆ–ಅದು ಪ್ರಕಟವಾಗಲಿಲ್ಲ–ನೀಡುವ ಸಂದರ್ಭ ಹಿಂದೊಮ್ಮೆ ನನಗೆ ಬಂದಿತ್ತು. ಆದರೆ ಆಗಿನ್ನೂ ಅವರ ಬಗೆಗೆ ನಾನು ಪೂರಾ ಗೌರವ ಕಳೆದುಕೊಂಡಿರಲಿಲ್ಲ. ಈಗ ಮಾತ್ರ ಅವರು ನನ್ನ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಸೋದರನನ್ನು ಸೋದರನೇ ಕೊಲ್ಲುವ ಈ ಅಪರಿಹಾರ್ಯ ಕೃತ್ಯದಿಂದಾಗಿ ಅವರು ನನ್ನ ಗೌರವವನ್ನು ಪೂರ್ತಿ ಕಳೆದುಕೊಂಡಿದ್ದಾರೆ. ಕಾರಣ, ಬ್ರಾಹ್ಮಣರ ಕಾಲುಗಳನ್ನು ಸಾರ್ವಜನಿಕವಾಗಿ ತೊಳೆಯುವ ಕೈಗಳು ಶೂದ್ರರನ್ನೂ, ದಲಿತರನ್ನೂ ಒದೆಯಬಲ್ಲ ಕಾಲುಗಳ ಜೊತೆಗೇ ಇರುತ್ತವೆ.

ಡಾ। ರಾಜೇಂದ್ರ ಪ್ರಸಾದರು ನನ್ನಂಥವರ ಗೌರವ ಕುರಿತು ಅಷ್ಟೇನೂ ತಲೆ ಕೆಡಿಸಿಕೊಳ್ಳಲಾರರು. ಕಾರಣ ಸಮಾಜವಾದ–ಅಷ್ಟೇ ಏಕೆ, ಪ್ರಜಾಪ್ರಭುತ್ವ ಕೂಡ ಇವತ್ತು ಭಾರತದಲ್ಲಿರುವಷ್ಟು ನಿರ್ವೀರ್ಯವಾಗಿರದಿದ್ದರೆ ಕಾಶಿಯ ಯುವಕರು ತೀವ್ರವಾಗಿ ದಿಗ್ಭ್ರಮೆಗೊಂಡಿರುತ್ತಿದ್ದರು. ನೂರಾರು ಜನರು ಪ್ರತಿಭಟನಾ ಪ್ರದರ್ಶನ ನಡೆಸಿ ಈ ಅಸಹ್ಯಕರ ಪ್ರದರ್ಶನ ಸಾಧ್ಯವಾಗದಂತೆ ತಡೆಯುತ್ತಿದ್ದರು. ಆದರೆ ಹಾಗಾಗಲಿಲ್ಲ.

ರಾಷ್ಟ್ರಪತಿ ಹಾಗೂ ಕಾಶಿಯ ಈ ಘಟನೆಯಲ್ಲಿ ಅವರ ಜೊತೆಗಿದ್ದ ಉತ್ತರ ಪ್ರದೇಶದ ಇತರರ ಅಪರಾಧದ ವ್ಯಾಪ್ತಿಯನ್ನು ತೋರಿಸಿಕೊಡಲು ಬೇರೆ ಬೇರೆ ವಿಧಾನಗಳಿರಬಹುದು. ಆದರೆ, ತಕ್ಷಣಕ್ಕೆ ಅವನು ನನ್ನ ಹಾಗೂ ನನ್ನಂಥ ಲಕ್ಷಾಂತರ ಜನರ ಗೌರವ ಕಳೆದುಕೊಂಡಿದ್ದಾರೆಂದು ಮತ್ತೆ ಮತ್ತೆ ಹೇಳಲೇಬೇಕಾಗಿದೆ.

ಭಾರತೀಯ ಗಣರಾಜ್ಯದ ಅಧ್ಯಕ್ಷರು ಹೀಗೆ ಸಾರ್ವಜನಿಕವಾಗಿ ತಮ್ಮ ಘನತೆಯನ್ನು ತಾವೇ ಕಳೆದುಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ಪ್ರಧಾನಿಯನ್ನಾಗಲೀ ಸರ್ಕಾರವನ್ನಾಗಲೀ ನಾನು ದೂಷಿಸುವುದಿಲ್ಲ. ಅವರ ವಿರುದ್ಧ ನನ್ನ ಆಪಾದನೆ ಮತ್ತಷ್ಟು ಗಂಭೀರವಾದದ್ದು. ಜಾತಿ ಪದ್ಧತಿಗೆ ಸಂಬಂಧಿಸಿದ ಈ ಸಮಸ್ಯೆಯಲ್ಲಿ ತನ್ನ ಪಾತ್ರವೇನೆಂಬುದನ್ನು ಯಾರಿಗೂ ಗೊತ್ತಾಗದಂತೆ ಕಿಲಾಡಿತನದಿಂದ ಮುಚ್ಚಿಡಬಲ್ಲ ಮನುಷ್ಯನೊಬ್ಬ ಅತ್ಯಂತ ಕಿಡಿಗೇಡಿಯೇ ಸರಿ.

ನೆಹರೂ ಒಮ್ಮೆ ಬ್ರಾಹ್ಮಣರ ಸೇವಾ ಮನೋಭಾವ (Brahminic spirit of service) ಎಂಬ ವಿಶೇಷಣಗಳನ್ನು ಬಳಸಿ ಬ್ರಾಹ್ಮಣರನ್ನು ಹೊಗಳಿದ ಮಾತುಗಳು ಈ ಹಿಂದೆಯೇ ಪ್ರಕಟವಾಗಿವೆ. ಅಂದರೆ, ಡಾ। ರಾಜೇಂದ್ರ ಪ್ರಸಾದರಂಥವರು ಏನನ್ನು ಬಹಿರಂಗವಾಗಿ ಮಾಡಿಬಿಡುತ್ತಾರೋ ಅಂಥದ್ದನ್ನು ನೆಹರೂ ಪ್ರತ್ಯಕ್ಷವಾಗಿ ಮಾಡದಿದ್ದರೂ ಪರೋಕ್ಷವಾಗಿ ಮಾಡಿಬಿಟ್ಟಿರುತ್ತಾರೆ.

ಜಾತಿ ಪದ್ಧತಿಯ ವಿರುದ್ಧ ಸರ್ವೇಸಾಮಾನ್ಯವಾದ ಬೊಗಳೆ ಭಾಷಣಗಳನ್ನು ಮಾಡಿರುವುದನ್ನು ಬಿಟ್ಟರೆ, ಜಾತಿ ಪದ್ಧತಿಯನ್ನು ಹೊಡೆದೋಡಿಸಿ ಸರ್ವಸಮಾನತೆ ತರಲು ಪ್ರಧಾನಮಂತ್ರಿ ಏನು ಮಾಡಿದ್ದಾರೆ ಎಂದು ತಿಳಿಯಲು ನಾನು ಕಾತರನಾಗಿದ್ದೇನೆ.

ಈ ದಿಸೆಯಲ್ಲಿ ಒಂದು ಸಣ್ಣ ಪ್ರಯೋಗವನ್ನೇ ಮಾಡಬಹುದು. ಆಡಳಿತಾತ್ಮಕ ಸೇವೆ ಹಾಗು ಸೇನೆಗೆ ಸಿಬ್ಬಂದಿಯನ್ನು ನೇಮಿಸುವಾಗ ಅಭ್ಯರ್ಥಿಗೆ ಇರಬೇಕಾದ ಎಲ್ಲ ಅರ್ಹತೆಗಳ ಜೊತೆಗೆ ಶೂದ್ರ ಮತ್ತು ಬ್ರಾಹ್ಮಣರ ನಡುವಣ ಅಂತರ್ಜಾತೀಯ ವಿವಾಹ ಕೂಡ ಒಂದು ಅರ್ಹತೆಯೆಂದು ಪರಿಗಣಿತವಾಗಬೇಕು. ಹಾಗೆಯೇ ಜಾತಿ ಜಾತಿಗಳ ನಡುವಣ ಸಹಭೋಜನವನ್ನು ಒಲ್ಲೆ ಎನ್ನುವುದು ಸರ್ಕಾರಿ ನೌಕರಿಗೆ ಸೇರಲು ಅನರ್ಹತೆಯಾಗಬೇಕು. ಆಗ ಮಾತ್ರ ಜಾತಿಪದ್ಧತಿಯ ವಿರುದ್ಧ ಪ್ರಾಮಾಣಿಕವಾದ ಯುದ್ಧ ಆರಂಭವಾಗುತ್ತದೆ. ಆದರೆ ಅಂಥ ದಿನ ಮಾತ್ರ ಇನ್ನೂ ಬರಬೇಕಾಗಿದೆ.

ಈಗ ನಾನು ಪ್ರತಿಪಾದಿಸುತ್ತಿರುವ ಬ್ರಾಹ್ಮಣ–ಶೂದ್ರರ ನಡುವಣ ವಿವಾಹವನ್ನು ಬನಿಯಾ ಹಾಗೂ ಬ್ರಾಹ್ಮಣರ ನಡುವಿನ ವಿವಾಹ

ಹಾಗೂ ಅಂಥ ಇನ್ನಿತರ ವಿವಾಹಗಳ ಜೊತೆಗೆ ಸೇರಿಸಿ ಗೊಂದಲ ಮಾಡಿಕೊಳ್ಳಬಾರದು. ಕಾರಣ ಬನಿಯಾ ಮತ್ತು ಬ್ರಾಹ್ಮಣರ ನಡುವಣ ವಿವಾಹಗಳು ಕೊಂಚ ಸುಲಭ ಹಾಗೂ ಅವು ಒಂದು ಚೌಕಟ್ಟಿನಲ್ಲೇ ನಡೆಯುವಂಥವು.

ನಾನು ಹೇಳುತ್ತಿರುವ ಮಾದರಿಯ ವಿವಾಹಗಳನ್ನು ಇಷ್ಟಪಡದ ಮಡಿವಂತರು ಇದು ನಾಗರೀಕ ಹಕ್ಕುಗಳ ಉಲ್ಲಂಘನೆ ಎಂದು ಹುಯಿಲೆಬ್ಬಿಸಬಹುದು. ಹಾಗಾದರೆ ಕೆಲವು ಆನುವಂಶಿಕ ಗುಂಪುಗಳಿಗೆ ಮಾನವ ಆಯ್ಕೆಗಳನ್ನು ಸೀಮಿತಗೊಳಿಸುವ ಕೆಟ್ಟ ಸಂಪ್ರದಾಯದಿಂದ ನಾಗರೀಕ ಹಕ್ಕುಗಳ ಉಲ್ಲಂಘನೆಯಾಗಿಲ್ಲವೆ? ಸರ್ಕಾರಿ ನೌಕರಿಗೆ ಆಯ್ಕೆ ಮಾಡುವಾಗ ಅಂತರ್ಜಾತೀಯ ವಿವಾಹವನ್ನು ಒಂದು ಅರ್ಹತೆಯನ್ನಾಗಿ ಪರಿಗಣಿಸುವುದನ್ನು ಕುರಿತು ಕೆಲವರು ನಗೆಯಾಡಬಹುದು. ಆದರೆ ಪ್ರತಿಯೊಂದು ರಾಷ್ಟ್ರಪ್ರಭುತ್ವಕ್ಕೂ ತನ್ನ ಭದ್ರತೆ ಹಾಗೂ ಐಕ್ಯತೆಗಾಗಿ ಹೋರಾಡುವ ಹಕ್ಕಿರುವಂತೆಯೇ, ಎಲ್ಲ ಬಗೆಯ ಹೊಸತನವೂ ಇಲ್ಲಿಂದ ಪಲಾಯನ ಮಾಡುವಂತೆ ಮಾಡಿರುವ ಈ ಕರಾಳ ನಿರಾಶೆಯನ್ನು ಹೊಡೆದೋಡಿಸುವ ಹಕ್ಕಿದೆ.

ಈ ಮಾತುಗಳನ್ನಾಡುವಾಗ ನನಗೆ ಮತ್ತೆ ಗಂಡು–ಹೆಣ್ಣುಗಳ ನಡುವಣ ಭೇದ ನೆನಪಾಗುತ್ತಿದೆ. ಜಾತ್ಯಾಧಾರಿತ ಪ್ರತ್ಯೇಕತೆಗೂ, ಲಿಂಗಾಧಾರಿತ ಪ್ರತ್ಯೇಕತೆಗೂ ಪರಸ್ಪರ ಸಂಬಂಧವಿದೆ. ಅವು ಒಂದನ್ನೊಂದು ಪೋಷಿಸುತ್ತಾ ಹೋಗುತ್ತವೆ. ಫಲವಾಗಿ, ನಮ್ಮ ಬದುಕಿನಲ್ಲಿ, ಪರಸ್ಪರ ಮಾತುಕತೆಗಳಲ್ಲಿ ಹೊಳಪೇ ಇಲ್ಲದಂತಾಗುತ್ತದೆ. ಜೀವನದಿಗಳು ಸರಾಗವಾಗಿ ಹರಿಯುವುದು ನಿಂತು ಹೋಗುತ್ತದೆ.

ಒಮ್ಮೆ ಕಾಫಿ ಹೌಸೊಂದರಲ್ಲಿ ಕೂತು ಹರಟುತ್ತಿದ್ದವರ ಜೊತೆಗೆ ಮಾತಾಡುತ್ತಿದ್ದೆ. ಇಂಥ ಕಾಫಿ– ಟೇಬಲ್ ಮಾತುಕತೆಗಳೇ ಫ್ರೆಂಚ್ ಕ್ರಾಂತಿಯನ್ನು ಬೆಳೆಸಿದವೆಂದು ಅವರಲ್ಲೊಬ್ಬ ಹೇಳಿದ. ನನಗೆ ಸಿಟ್ಟಿನಿಂದ ಮೈ ಉರಿಯತೊಡಗಿತು. ಅಲ್ಲಿ ನೋಡಿದರೆ ನಮ್ಮ ಜೊತೆ ಒಬ್ಬ ಶೂದ್ರನಾಗಲೀ, ಹೆಣ್ಣು ಮಗಳಾಗಲೀ ಇರಲಿಲ್ಲ. ಇಂಥ ನಿರ್ಜೀವ ಗುಂಪಿನಲ್ಲಿದ್ದ ನಮ್ಮಂಥ ಗೊಡ್ಡು ಜನರೆಲ್ಲ ನಿನ್ನೆಯ ಮೇವನ್ನು ಸುಮ್ಮನೆ ಮೆಲುಕು ಹಾಕುತ್ತಿರುವ ದನಗಳಂತಿದ್ದೆವು.

ಈ ದೇಶದಲ್ಲಿ ಕಮ್ಯುನಿಸ್ಟ್, ಕಾಂಗ್ರೆಸ್ ಹಾಗೂ ಸಮಾಜವಾದಿ ರಾಜಕಾರಣದಿಂದ ಹಿಡಿದು ಎಲ್ಲ ಬಗೆಯ ರಾಜಕಾರಣದಲ್ಲೂ ಉದ್ದೇಶ ಪೂರ್ವಕವಾಗಿಯೋ ಅಥವಾ ರೂಢಿಗತವಾಗಿಯೋ ಒಂದು ವಿಷಯ ಕುರಿತು ಮಾತ್ರ ರಾಷ್ಟ್ರೀಯ ಸಹಮತವಿದೆ. ಅದೆಂದರೆ, ಇಡೀ ಜನಸಂಖ್ಯೆಯ ಮುಕ್ಕಾಲು ಭಾಗದಷ್ಟಿರುವ ಶೂದ್ರರನ್ನೂ, ಸ್ತ್ರೀಯರನ್ನೂ ತುಳಿಯುವುದು ಹಾಗೂ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು.

ಭಾರತೀಯ ಹೆಣ್ಣಿನ ಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿದೆ. ಅವಳ ಅಡಿಗೆ ಮನೆಯ ಗುಲಾಮಗಿರಿಯ ಜೊತೆಗೆ, ಅವಳು ಬಯಸುವ ಒಲೆಯ ಉಸಿರು ಕಟ್ಟಿಸುವ ಹೊಗೆಯೂ ಸೇರಿಕೊಂಡು ಪರಿಸ್ಥಿತಿ ಇನ್ನಷ್ಟು ಕರುಣಾಜನಕವಾಗಿಬಿಟ್ಟಿದೆ. ಅವಳಿಗೂ ಅಡಿಗೆ, ಊಟಕ್ಕೆ ನಿಗದಿಯಾದ ವೇಳಾಪಟ್ಟಿಯೊಂದಿರಬೇಕು. ಅಡಿಗೆಮನೆಯಲ್ಲಿ ಹೊಗೆ ಸಲೀಸಾಗಿ ಹೋಗುವ ಚಿಮಣಿಯಿರಬೇಕು. ಅರೆ ಹೊಟ್ಟೆ, ನಿರುದ್ಯೋಗ ಹಾಗೂ ಅನ್ಯಾಯಗಳ ವಿರುದ್ಧದ ಹೋರಾಟದಲ್ಲಿ ಅವಳೂ ಪಾಲ್ಗೊಳ್ಳಬೇಕು.

ಭಾರತೀಯ ಸ್ತ್ರೀಯರನ್ನು ಕುರಿತು ಸೊಗಸಾದ ಲೇಖನಗಳನ್ನು ಬರೆಯುತ್ತಿರುವ ಶಕುಂತಲಾ ಶ್ರೀವಾಸ್ತವ ಅವರು ಮಾಮೂಲಿ ಸ್ತ್ರೀವಾದಿಗಳಂತೆ ಎಲ್ಲ ತಪ್ಪನ್ನೂ ಗಂಡಿನ ಮೇಲೆ ಹೇರುವ ಆವೇಶದಿಂದ ಮುಕ್ತರಾಗಿದ್ದಾರೆ ಎಂಬುದನ್ನು ಕಂಡು ನನಗೆ ಖುಷಿ. ಅಷ್ಟೇ ಅಲ್ಲ, ಗಂಡು ಹೆಣ್ಣುಗಳಿಬ್ಬರಲ್ಲೂ ಕೆಲವು ತಪ್ಪುಗಳಿವೆ–ಆದರೆ ಅವುಗಳ ಮಟ್ಟ ಬೇರೆಯಿರಬಹುದು ಎಂಬುದನ್ನು ಅವರು ಗುರುತಿಸಲು ತಯಾರಿದ್ದಾರೆ. ಆದರೂ ಅವರು ಕ್ರಮಿಸಬೇಕಾದ ಹಾದಿ ಇನ್ನೂ ದೂರವಿದೆ.

ಮಹತ್ವದ ಸಮ್ಮೇಳನವೊಂದರಲ್ಲಿ ಶಕುಂತಲಾ ಶ್ರೀವಾಸ್ತವ ಅವರು ವೇದಿಕೆಗೆ ಬರಬೇಕೆಂದು ಕೇಳಿಕೊಂಡಾಗ, ಆಕೆ ಪ್ರೇಕ್ಷಕರ ಗ್ಯಾಲರಿಯಿಂದ ಅಲುಗಾಡಲೂ ಒಲ್ಲೆನೆಂದದ್ದು ನನಗೆ ನೆನಪಿದೆ. ಅದಕ್ಕೇನು ಮಾಡಬೇಕೆಂದು ನನಗೆ ಗೊತ್ತಿತ್ತು. ರಟ್ಟೆ ಹಿಡಿದು ಎಳೆದುಕೊಂಡು ಹೋಗುತ್ತೇನೆ ಎಂದು ಬೆದರಿಕೆ ಹಾಕಿದ ಮೇಲೆಯೇ ಆಕೆ ಕೊಂಚ ಮೆದುವಾಗಿದ್ದು ಹಾಗೂ ಗ್ಯಾಲರಿಯಿಂದ ವೇದಿಕೆಗೆ ಬಂದದ್ದು.

ಯಾವುದು ಸನ್ನಡತೆ ಹಾಗೂ ಯಾವುದು ಪಾಪ ಎಂಬ ಪ್ರಶ್ನೆಯನ್ನು ಇನ್ನು ಹೆಚ್ಚು ಕಾಲ ಕಡೆಗಣಿಸಲಾಗದು. ಆಧ್ಯಾತ್ಮಿಕತೆ ಅಖಂಡವಾದದ್ದು. ಆದರೆ ನೈತಿಕತೆ ಸಾಪೇಕ್ಷವಾದದ್ದು; ಹೀಗಾಗಿ ಪ್ರತಿಯೊಂದು ಯುಗ ಹಾಗೂ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ನಿರ್ದಿಷ್ಟ ನೈತಿಕತೆಯನ್ನು ಹುಡುಕಿಕೊಳ್ಳಬೇಕು ಎಂಬುದು ನನ್ನ ನಂಬಿಕೆ.

ಉದಾಹರಣೆಗೆ ಇಬ್ಬರು ಸ್ತ್ರೀಯರನ್ನು ತೆಗೆದುಕೊಳ್ಳೋಣ. ಒಬ್ಬಳು ತನ್ನ ಇಡೀ ಜೀವಮಾನದಲ್ಲಿ ಒಂದೇ ಒಂದು ಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಆ ಮಗು ವೈವಾಹಿಕ ಚೌಕಟ್ಟಿನಾಚೆಗೆ ಜನಿಸಿದ್ದಾಗಿರಬಹುದು. ಇನ್ನೊಬ್ಬಳಿದ್ದಾಳೆ. ಆಕೆ ನೈತಿಕವಾಗಿಯೇ ಅರ್ಧ ಡಜನ್ ಪುಂಡರಿಗೆ ಜನ್ಮ ಕೊಟ್ಟಿದ್ದಾಳೆಂದಿಟ್ಟುಕೊಳ್ಳಿ. ಇವರಿಬ್ಬರಲ್ಲಿ ಯಾರು ಹೆಚ್ಚು ಸಜ್ಜನರು ಹಾಗೂ ಯಾರು ಹೆಚ್ಚು ನೈತಿಕತೆಯುಳ್ಳವರು? ಮೂವರು ಗಂಡಂದಿರಿಗೆ ವಿಚ್ಛೇದನ ನೀಡಿ ನಾಲ್ಕನೆಯ ಮದುವೆಯಾದ ಹೆಂಗಸು ಹಾಗೂ ತನ್ನ ಮೊದಲ ಮೂವರು ಹೆಂಡತಿಯರು ಒಬ್ಬರ ಹಿಂದೊಬ್ಬರು ತೀರಿಕೊಂಡಿದ್ದರಿಂದ ನಾಲ್ಕನೆಯ ಮದುವೆಯಾದ ಗಂಡಸು ಈ ಇಬ್ಬರ ನಡುವೆ ಯಾರು ಹೆಚ್ಚು ಸಭ್ಯರು ಹಾಗೂ ಹೆಚ್ಚು ನೈತಿಕತೆಯುಳ್ಳವರು?

ವಿವಾಹ ವಿಚ್ಛೇದನ ಹಾಗೂ ಅನೈತಿಕ ಸಂಬಂಧಗಳು ಒಂದರ್ಥದಲ್ಲಿ ಸೋತಿವೆ ಎಂಬುದನ್ನು ನಾನು ಅಲ್ಲಗಳೆಯಲಾರೆ. ಗಂಡು–ಹೆಣ್ಣುಗಳ ನಡುವಣ ಸಂಬಂಧದಲ್ಲಿ ಪ್ರಾಯಶಃ ನಾವು ಸಾಧಿಸಬೇಕಾದ ಆದರ್ಶಗಳೆಂದರೆ, ಏಕಪತ್ನಿ ನಿಷ್ಠೆ ಅಥವಾ ಏಕಪತಿನಿಷ್ಠೆ ಹಾಗೂ ಯಾರ ಒತ್ತಾಯವೂ ಇಲ್ಲದೆ ತಂತಾನೇ ಹುಟ್ಟಿದ ನಿಷ್ಠೆ ಎಂದು ಕಾಣುತ್ತದೆ. ಆದರೆ ಮಾನವ ಬದುಕಿನ ಇತರ ವಲಯಗಳಲ್ಲಾಗುವಂತೆ, ಇಲ್ಲೂ ಕೂಡ ಗಂಡು ಅಥವಾ ಹೆಣ್ಣು ಪರಿಪೂರ್ಣತೆ ಸಾಧಿಸಲು ಹೆಣಗಾಡಿದಾಗ ಅನೇಕ ಸಲ ಆ ಮಟ್ಟ ತಲುಪುವುದು ಅಸಾಧ್ಯವಾಗಬಹುದು.

ಹಾಗಾದರೆ ನಾವು ಮಾಡಬೇಕಾದ್ದೇನು? ವಿವಾಹದ ಚೌಕಟ್ಟಿನೊಳಗೇ ಹುಟ್ಟಿದ ಅರ್ಧ ಡಜನ್ ಪುಂಡ ಮಕ್ಕಳಿಗಿಂತ, ವಿವಾಹದ ಚೌಕಟ್ಟಿನಾಚೆಗೆ ಹುಟ್ಟಿದ ಒಂದು ಮಗು ಎಷ್ಟೋ ಪಾಲು ಸಭ್ಯವಾಗಿರುತ್ತದೆನ್ನುವುದರಲ್ಲಿ ನನಗಂತೂ ಅನುಮಾನವಿಲ್ಲ. ಹಾಗೆಯೇ ಈ ಹಿಂದೆ ಉಲ್ಲೇಖಿಸಿದ ಮೂವರು ಗಂಡಂದಿರು ಅಥವಾ ಹೆಂಡತಿಯರ ಸಾವು ಕೇವಲ ಆಕಸ್ಮಿಕವಾಗಿರಲಾರದು ಎಂಬುದು ಕೂಡ ಗ್ಯಾರಂಟಿ. ನಿರ್ಲಕ್ಷ್ಯ ಹಾಗೂ ಬಡತನ ಕೂಡ ಈ ಸಾವುಗಳಿಗೆ ಕಾರಣವಾಗಿರಬಹುದು. ಮೂರು

ನಾಲ್ಕು ವಿಚ್ಛೇದನಗಳಿಗೆ ಕಾರಣವಾದ ಘರ್ಷಣೆಗಳಿಗಿಂತ ಈ ಬಗೆಯ ನಿರ್ಲಕ್ಷ್ಯ ಹೆಚ್ಚು ಅನಾಗರೀಕವಾದದ್ದು.

ಇಂದು ಈ ಬಗೆಯ ತೀರ್ಮಾನಗಳಿಗೆ ಹೆಚ್ಚಿನ ಮಹತ್ವ ಬಂದಿದೆ. ಅವಕ್ಕೆ ಇಂದು ಸಾರ್ವತ್ರಿಕ ಮಹತ್ವವೂ ಬಂದಿದೆ. ಕಾರಣ, ಇವತ್ತು ಯಾವುದನ್ನಾದರೂ ಪಾಪ ಎಂದು ಕರೆಯುವುದಿದ್ದರೆ, ವಿವಾಹ ಹಾಗೂ ವಿವಾಹಾನಂತರದ ಬದುಕಿಗೆ ಸಂಬಂಧಿಸಿದ ಸ್ಥಿತಿಗಳನ್ನು ಹಾಗೆ ಕರೆಯಬಹುದು. ಇವತ್ತು ವರದಕ್ಷಿಣೆಯಿಲ್ಲದ ಹುಡುಗಿಯೆಂದರೆ ಗೊಡ್ಡು ಹಸುವಿನಂತೆ ಯಾವ ಕೆಲಸಕ್ಕೂ ಬಾರದವಳು ಎಂಬಂತಾಗಿಬಿಟ್ಟಿದೆ.

ವರದಕ್ಷಿಣೆ ಮೊತ್ತವನ್ನು ಪೂರ್ತಿ ಕೊಡದೆ ಹೋದದ್ದರಿಂದ, ತಮ್ಮ ಹೆಣ್ಣು ಮಕ್ಕಳನ್ನು ಅದೆಷ್ಟು ಹಿಂಸಿಸಲಾಗುತ್ತದೆ; ಎಷ್ಟೋ ಸಲ ಸಾವಿಗೂ ದೂಡಲಾಗುತ್ತದೆ ಎಂಬುದನ್ನು ಕುರಿತ ಕತೆಗಳನ್ನು ಎಷ್ಟೋ ಜನ ತಂದೆತಾಯಿಯರು ನನ್ನೊಡನೆ ಹೇಳುತ್ತಾ ಕಣ್ಣೀರಿಟ್ಟಿದ್ದಾರೆ. ವ್ಯವಸಾಯ ಕ್ಷೇತ್ರದಲ್ಲಾಗುವಂತೆ ಇಲ್ಲೂ ಆಗಿ ಬಿಟ್ಟಿದೆ. ಅಂದರೆ, ದುಡಿಯುವುದಕ್ಕಿಂತ ಜಮೀನನ್ನು ಬಾಡಿಗೆಗೆ ಕೊಟ್ಟರೆ ಹೆಚ್ಚು ಗಳಿಸುವ ರೈತನಂತೆ, ಇಲ್ಲಿ ಕೂಡ ಹೆಚ್ಚು ಓದದ ಹುಡುಗಿ ಓದಿದ ಹುಡುಗಿಗಿಂತ ಮೇಲೆನಿಸಿಬಿಟ್ಟಿದ್ದಾಳೆ. ಅದಕ್ಕೆ ಮುಖ್ಯಕಾರಣವೆಂದರೆ ಓದದ ಹುಡುಗಿ ಕೊಡಬೇಕಾದ ವರದಕ್ಷಿಣೆಯ ಮೊತ್ತವೂ ಕಡಿಮೆ ಎನ್ನುವುದು.

ಇಂದು ಭಾರತ ವಿಕೃತಗೊಂಡಿದೆ. ಕಾಮಕ್ಕೆ ಸಂಬಂಧಿಸಿದಂತೆ ಭಾರತೀಯರು ಎಷ್ಟೆಲ್ಲ ಪಾವಿತ್ರ್ಯದ ಮಾತಾಡಿದರೂ ಮದುವೆ ಹಾಗೂ ಕಾಮ ಕುರಿತ ವಿಚಾರಗಳಲ್ಲಿ ಮಾತ್ರ ಅವರು ಅತ್ಯಂತ ಕೊಳಕರಾಗಿಯೇ ಉಳಿದಿದ್ದಾರೆ.

ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಬೇಕು. ಆದರೆ ಅದರ ಜೊತೆಗೆ ಭಾರತೀಯ ಮನಸ್ಸು ಹಾಗೂ ಮೌಲ್ಯಗಳು ಕೂಡ ಬದಲಾಗಬೇಕು. ಒಂದು ಫೋಟೋ ನೋಡಿಯೋ, ಅಥವಾ ತಲೆತುಂಬ ಸೆರಗು ಹೊದ್ದ ಹುಡುಗಿಯೊಬ್ಬಳು ನಡುಗುತ್ತಾ ಚಹ ಕೊಡುವ ಭಯಮಿಶ್ರಿತ ವಾತಾವರಣದಲ್ಲೋ ನಿರ್ಧರಿಸಲಾದ ಇವತ್ತಿನ ಮದುವೆಗಳು ಹಿಂದಿನ ಕಾಲದಲ್ಲಿ ಕ್ಷೌರಿಕ ಅಥವಾ ಬ್ರಾಹ್ಮಣ ನಡೆಸಿಕೊಡುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದವಾಗಿವೆ. ಕೊಳ್ಳುವವನೆದುರು ಕುದುರೆಯನ್ನು ತಂದು ನಿಲ್ಲಿಸಿದರೂ ಅದರ ಗೊರಸುಗಳನ್ನು ಮುಟ್ಟಿನೋಡದೆ ಅಥವಾ ಅದರ ಹಲ್ಲುಗಳನ್ನು ಪರೀಕ್ಷಿಸದೇ ಕೊಂಡ ಹಾಗೆ– ಈ ಮದುವೆಗಳು ಕೂಡ.

ಹೀಗಾಗಿ ಇವತ್ತು ನಡುದಾರಿಯ ತಂಗುದಾಣಗಳಿಲ್ಲ. ಭಾರತ ತನ್ನ ಪ್ರಾಚೀನ ಕಸುವನ್ನು ಮರಳಿ ಗಳಿಸಲೇಬೇಕಾಗಿದೆ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತ ಆಧುನಿಕವಾಗಲೇ ಬೇಕಾಗಿದೆ.

ತಮ್ಮ ಮಗಳನ್ನು ಮದುವೆ ಮಾಡಿಕೊಡುವುದು ತಂದೆ ತಾಯಿಗಳ ಹೊಣೆಯೇನಲ್ಲ. ಅವಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಸಾಕಷ್ಟು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದಷ್ಟೆ ಅವರ ಹೊಣೆ. ಒಂದು ವೇಳೆ ಹುಡುಗಿಯೊಬ್ಬಳು ತನ್ನ ಇಷ್ಟದಂತೆ ನಡೆದುಕೊಂಡರೆ, ಇಷ್ಟ ಬಂದವನ ಜೊತೆ ಓಡಿ ಹೋದರೆ, ಅಥವಾ ಅನೈತಿಕ ಸಂಬಂಧ ಹೊಂದಿದರೆ, ಅದು ಗಂಡು–ಹೆಣ್ಣಿನ ನಡುವಣ ಸಹಜ ಸಂಬಂಧವನ್ನು ಸ್ಥಾಪಿಸುವ ಒಂದು ಬಗೆಯೇ ಹೊರತು ದೋಷವಲ್ಲ.

ಆದರೆ ಸಮಾಜ ಕ್ರೂರವಾಗಿದೆ. ಸ್ತ್ರೀಯರಂತೂ ಇನ್ನಷ್ಟು ಕ್ರೂರಿಗಳಾಗಬಲ್ಲರು. ಪರಪುರುಷರೊಂದಿಗೆ ಓಡಾಡುವ ಹೆಣ್ಣುಮಕ್ಕಳ ಬಗ್ಗೆ, ಅದರಲ್ಲೂ ಅವಿವಾಹಿತ ಹೆಣ್ಣುಮಕ್ಕಳ ಬಗ್ಗೆ–ವಿವಾಹಿತ ಸ್ತ್ರೀಗಳು ಎಷ್ಟು ಕೆಟ್ಟದಾಗಿ ಮಾತಾಡಿಕೊಳ್ಳುತ್ತಾರೆ ಹಾಗೂ ಕ್ಷುದ್ರವಾಗಿ ವರ್ತಿಸುತ್ತಾರೆ ಎಂಬುದನ್ನು ನೋಡಿದರೆ ದುಗುಡವಾಗುತ್ತದೆ. ಇಂಥ ಕ್ರೂರ ಮನಸ್ಸುಗಳಿರುವವರೆಗೆ ಗಂಡು–ಹೆಣ್ಣುಗಳ ನಡುವೆ ಭೇದಭಾವ ಮಾಡುವ ಪಾಪಾತ ಕೊನೆಗೊಳ್ಳಲಾರದು.

ಸಂತಾನ ನಿಯಂತ್ರಣ, ಜಾತಿ ಪದ್ಧತಿ ಕುರಿತ ಅಥವಾ ಜಾತಿ ಪದ್ಧತಿಯ ಒತ್ತಡದಿಂದ ಹುಟ್ಟಿದ ವಿಚಾರಗಳನ್ನು ಕುರಿತ ಅಪವಿತ್ರ ಆಲೋಚನೆಗಳಿಂದಾಗಿ ಶ್ರೀ ವಿನೋಬಾ ಭಾವೆ ತಮ್ಮ ಮಹತ್ವದ ಭೂದಾನ ಚಳುವಳಿಯನ್ನೇ ಕಲುಷಿತಗೊಳಿಸುವ ಪ್ರಚೋದನೆಗೊಳಗಾಗಿ ಬಿಟ್ಟಿದ್ದಾರೆ.

ಮೂರು ಮಕ್ಕಳನ್ನು ಹೆತ್ತ ಪ್ರತಿ ತಂದೆತಾಯಿಗಳು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲೇಬೇಕು. ಸಂತಾನ ಹರಣ ಮಾಡಿಸಿಕೊಳ್ಳುವ ಅಥವಾ ಸಂತಾನವನ್ನು ತಡೆಗಟ್ಟುವ ಸಲಕರಣೆಗಳು ಪ್ರತಿಯೊಬ್ಬ ಗಂಡು ಹೆಣ್ಣಿಗೂ ದೊರಕುವಂತಿರಬೇಕು. ಅವರು ವಿವಾಹಿತರಿರಲಿ, ಅವಿವಾಹಿತರಿರಲಿ, ಗರ್ಭಧಾರಣೆಯ ತಾಪತ್ರಯ ಬೇಡವೆಂದು ಅವರಿಗನಿಸಿದರೆ ಅಂಥವರಿಗೆ ಈ ಸಾಧನಗಳು ದಕ್ಕುವಂತಿರಬೇಕು.

ಸಾಮಾನ್ಯವಾಗಿ ಬ್ರಹ್ಮಚರ್ಯವೆಂದರೆ ಒಂದು ಸೆರೆಮನೆಯೇ. ತಮ್ಮ ಬ್ರಹ್ಮಚರ್ಯೆ ಹಾಗೂ ಕನ್ಯತ್ವಗಳ ಸಂಕೋಲೆಗಳಲ್ಲಿ ಸಿಕ್ಕಿಹಾಕಿಕೊಂಡು ತಮ್ಮ ವಿಮೋಚಕನಿಗಾಗಿ ಕಾಯುತ್ತಿರುವ ಇಂಥ ಸೆರೆಮನೆವಾಸಿಗಳನ್ನು ಯಾರು ತಾನೆ ಕಂಡಿಲ್ಲ?

ಇಂಥ ಸೆರೆಮನೆಯಲ್ಲಿ ಸಿಕ್ಕಿಕೊಂಡ ಅಸ್ಖಲಿತ ಬ್ರಹ್ಮಚಾರಿ ಜೆ. ಸಿ. ಕುಮಾರಪ್ಪನವರ ಈಚಿನ ಮಾತುಗಳಲ್ಲಿ ಅವರ ಮನಃಸ್ಥಿತಿ ವ್ಯಕ್ತವಾಗಿರುವ ಬಗೆ ಗಮನಿಸಿ. ರಷ್ಯನ್ ಹುಡುಗ–ಹುಡುಗಿಯರು ಪ್ರತ್ಯೇಕ ಗುಂಪುಗಳಲ್ಲಿ ಅಡ್ಡಾಡುತ್ತಿದ್ದರೆಂದು ಹೊಗಳಿದ ಕುಮಾರಪ್ಪನವರಿಗೆ ಪ್ರಾಯಶಃ ಅವರು ಸಾಮೂಹಿಕ ಪ್ರೇಮದಲ್ಲಿ ತೊಡಗಿದ್ದಿರಬಹುದೆಂಬುದು ಅರಿವಿಗೆ ಬರಲೇ ಇಲ್ಲವೇನೊ? ಆದರೆ ಕುಮಾರಪ್ಪ ತಮ್ಮ ಈ ಮಾತುಗಳ ಮೂಲಕ ತಾವೊಬ್ಬ ಆತ್ಮ ವಿಮೋಚಕನಿಗಾಗಿ ಕಾಯುತ್ತಿರುವುದನ್ನು ಅಪ್ರಜ್ಞಾಪೂರ್ವಕವಾಗಿ ಸೂಚಿಸುತ್ತಿದ್ದಾರಲ್ಲವೆ?

ಲೈಂಗಿಕ ಮೌಲ್ಯಗಳನ್ನು ಕುರಿತ ಇಂಥ ಕ್ಷುದ್ರ ಸಂಗತಿಗಳ ವಿರುದ್ಧ ತರುಣ ತರುಣಿಯರು ಬಂಡೇಳಲು ಇದು ಸಕಾಲ. ಲೈಂಗಿಕ ನೀತಿ ಸಂಹಿತೆಯಲ್ಲಿ ಎರಡೇ ಎರಡು ಅಕ್ಷಮ್ಯ ಅಪರಾಧಗಳಿವೆ ಎಂಬುದು ಮಾತ್ರ ಅವರಿಗೆ ನೆನಪಿರಲಿ: ಒಂದು ಅತ್ಯಾಚಾರ, ಎರಡು ಸುಳ್ಳುಹೇಳುವುದು ಅಥವಾ ಕೊಟ್ಟ ಮಾತಿಗೆ ತಪ್ಪುವುದು. ಮೂರನೆಯ ಅಪರಾಧವೂ ಒಂದಿದೆ. ಅದೆಂದರೆ ಇನ್ನೊಬ್ಬರಿಗೆ ನೋವುಂಟು ಮಾಡುವುದು. ಈ ಕುರಿತು ಸಾಧ್ಯವಾದಷ್ಟು ಅವರು ಎಚ್ಚರವಹಿಸಬೇಕು.

ಬದುಕು ಎಷ್ಟೊಂದು ಅಸಹನೀಯವಾಗಿಬಿಟ್ಟಿದೆಯೆಂದರೆ, ಇವತ್ತು ಸಮಾಜದ ಮುಂಚೂಣಿಯಲ್ಲಿರುವವರು ಬರೀ ಲಗ್ನಪತ್ರಿಕೆಗಾಗಿ ಐವತ್ತುಸಾವಿರ ಖರ್ಚು ಮಾಡುತ್ತಾರೆ. ಮದುವೆಯಾಗಲಿರುವ ಎರಡು ಜೀವಗಳು ಸಾಧಿಸಬೇಕಾದ ಆತ್ಮಗಳ ಮಿಲನದಲ್ಲಿ ವ್ಯಕ್ತವಾಗಬೇಕಾದ ಒಂದು ವಿವಾಹದ ಘನತೆ ಹಾಗೂ ವೈಭವ ಇಪ್ಪತ್ತು ಲಕ್ಷ ರೂಪಾಯಿಗಳ ನೆಕ್‌ಲೇಸಿನಲ್ಲೋ, ಐವತ್ತು ಸಾವಿರದ ಸೀರೆಗಳಲ್ಲೋ ವ್ಯಕ್ತವಾಗುತ್ತಿದೆ.

ಒಂದು ಚಹಾ ಕೂಟದಲ್ಲಿ ಇಂಥ ಲಕ್ಷಾಧೀಶನೊಬ್ಬ ಆಕಸ್ಮಿಕವಾಗಿ

ನನಗೆ ಎದುರಾಗಿ, 'ಅಂಥ ಸೀರೆಗಳೇ ಇರುವುದಿಲ್ಲವಲ್ಲ' ಎಂದು ಹಮ್ಮಿನಿಂದ ಹೇಳಿದ. ಅವನನ್ನು ಯಾವುದಾದರೂ ಶಿಶುವಿಹಾರಕ್ಕೆ ಕಳಿಸಬೇಕೆನಿಸಿತು. ಈ ವ್ಯಕ್ತಿಯನ್ನು ಹಿಂದೆ ನಾನು ಭೇಟಿಮಾಡಿದ್ದು ಒಂದೇ ಒಂದು ಸಲ. ಅದಾದದ್ದು ಕೆಲ ವರ್ಷಗಳ ಹಿಂದೆ. ಅವತ್ತು ಈ ವ್ಯಕ್ತಿ ಎರಡು ಗಂಟೆಗಳ ಕಾಲ ನನ್ನನ್ನು ಹೊಗಳಿ ಉಬ್ಬಿಸಲು ಪ್ರಯತ್ನಿಸಿದ್ದ. ಕಾರಣ, ತುಂಟನೊಬ್ಬ ಇವನ ಫ್ಯಾಕ್ಟರಿಯನ್ನು ನಮ್ಮ ಪಾರ್ಟಿಯ ಸದಸ್ಯರು ಸುಟ್ಟು ಹಾಕುತ್ತಾರೆಂದು ಹೇಳಿದ್ದನಂತೆ. ಈ ಹಿನ್ನೆಲೆಯಲ್ಲಿ ನನ್ನನ್ನು ಪ್ರಸನ್ನಗೊಳಿಸಲೆತ್ನಿಸುತ್ತ ಪಾರ್ಟಿ ಫಂಡಿಗೆ ಅಷ್ಟಿಷ್ಟು ಕೊಡಬಲ್ಲೆನೆಂದು ಹೇಳುವ ಧಾರ್ಷ್ಟ್ಯವನ್ನೂ ಅವನು ತೋರಿದ. ಆದರೆ ನಾನು ಅವನ ಅವ್ಯವಹಾರಗಳನ್ನು ಮುಚ್ಚಿ ಹಾಕಲು ಹಣ ತೆಗೆದುಕೊಳ್ಳುವಷ್ಟು ದುರುಳನಾಗಿರದಿದ್ದರಿಂದ ಮತ್ತೆ ಅವನೆಂದೂ ತನ್ನ ಉದಾರ ಬುದ್ಧಿಯನ್ನು ಪ್ರದರ್ಶಿಸಲಿಲ್ಲ.

ಇಂಥ ಸಂದರ್ಭಗಳಲ್ಲೇ ಬಾಂಬ್ ಅಥವಾ ಆಸಿಡ್ ಬಲ್ಬ್ ಬಳಸುವ ಕುರುಡು ಪ್ರಚೋದನೆ ಹುಟ್ಟುವುದು ಎಂದು ಕಾಣುತ್ತದೆ.

ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಕೊಳಕು ಕೆಲಸಗಳನ್ನೆಲ್ಲಾ ಕಾಯ್ದುಕೊಂಡು ಹೋಗಲು ರಾಜಕಾರಣ, ಧರ್ಮ, ವ್ಯಾಪಾರ ಹಾಗೂ ಪ್ರಚಾರಗಳು ಸಂಚು ಮಾಡುತ್ತಲೇ ಇರುತ್ತವೆ. ಅಪಕೀರ್ತಿ ಹಾಗೂ ಸಾವು ಎರಡನ್ನೂ ತರಬಲ್ಲ ಭಯಾನಕ ಶಕ್ತಿ ಈ ಈ ಯಥಾಸ್ಥಿತಿವಾದಿ ಸಂಚುಗಳಿಗಿದೆ. ನಾನು ಹೀಗೆಲ್ಲ ಬರೆದ್ದಕ್ಕಾಗಿ ನೇರವಾದ ಅಥವಾ ತಕ್ಷಣದ ಪ್ರತಿಕ್ರಿಯೆ ಬಾರದಿರಬಹುದು. ಆದರೆ ಎಂದಾದರೊಮ್ಮೆ ನಾನು ಉಗ್ರವಾದ ಪ್ರತೀಕಾರ ಎದುರಿಸಬೇಕಾಗುತ್ತದೆ ಎಂಬುದು ಖಚಿತವಾಗಿ ಗೊತ್ತು.

ತರುಣ, ತರುಣಿಯರು ತಮ್ಮ ಪ್ರಾಮಾಣಿಕತೆಯ ಕಾರಣದಿಂದಾಗಿಯೇ ಅಪಖ್ಯಾತಿಗೊಳಗಾದಾಗ ಒಂದು ಮಾತನ್ನು ನೆನಪಿನಲ್ಲಿಡಬೇಕು: ಕೆಸರು ರಾಡಿಯನ್ನೆಲ್ಲ ತೆಗೆದು ಮತ್ತೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ಅವರು ಅನಿವಾರ್ಯವಾಗಿ ತೆರಬೇಕಾದ ಬೆಲೆ ಇದು.

ಜಾತಿ ಹಾಗೂ ಲಿಂಗಗಳನ್ನು ಕುರಿತಂತೆ ಇರುವ ಅಸಹ್ಯಕರವಾದ ಪ್ರತ್ಯೇಕತೆಗಳನ್ನು ನಿರ್ನಾಮಗೊಳಿಸುವುದಕ್ಕಿಂತ ಮಿಗಿಲಾದ ಸತ್ಕಾರ್ಯ ಇವತ್ತು ಯಾವುದು ಇಲ್ಲ. ಈ ದಿಸೆಯಲ್ಲಿ ತೀರಾ ಒರಟಾಗಿರಬಾರದು ಹಾಗೂ ಇತರರಿಗೆ ನೋವುಂಟು ಮಾಡಬಾರದು ಎಂಬ ಎಚ್ಚರ ಮಾತ್ರ ಸದಾ ಇರಲಿ. ಕಾರಣ, ಗಂಡು–ಹೆಣ್ಣುಗಳ ನಡುವಣ ಸಂಬಂಧದಲ್ಲಿ ಅತಿಸೂಕ್ಷ್ಮವಾದ ಎಳೆಗಳಿವೆ. ಆ ಬಗೆಯ ಎಚ್ಚರವನ್ನು ಸದಾ ಕಾಯ್ದುಕೊಳ್ಳುವುದು ಸಾಧ್ಯವಾಗದಿರಬಹುದು. ಆದರೆ ಪ್ರಯತ್ನ ಮಾತ್ರ ಎಂದೆಂದಿಗೂ ನಿಲ್ಲದಿರಲಿ. ಅದಕ್ಕಿಂತ ಮಿಗಿಲಾಗಿ ಈ ದಟ್ಟ ನಿರಾಶೆಯನು ಚದುರಿಸಿ, ಸಂತಸದ ಗಳಿಗೆಗಳನ್ನು ಸೃಷ್ಟಿಸುವ ಸಾಹಸಕ್ಕೆ ಎಲ್ಲರೂ ಧುಮುಕಲಿ.

(೧೯೫೩, ಜನವರಿ)

(ಲೋಹಿಯಾ ಅವರ 'ದಿ ಕಾಸ್ಟ್ ಸಿಸ್ಟಮ್' ಪುಸ್ತಕದ ಮೊದಲನೆಯ ಅಧ್ಯಾಯ)

ಇಂಗ್ಲಿಷಿನಿಂದ ಕನ್ನಡಕ್ಕೆ: ನಟರಾಜ್ ಹುಳಿಯಾರ್.

ಧರ್ಮ ಎನ್ನುವುದು ಮಾತಿನ ಮಾಲೆಯಲ್ಲ
ಯಾರು ಎಲ್ಲರನ್ನೂ ಸಮಾನರೆಂದು ಕಾಣುತ್ತಾನೋ ಅವನೇ ನಿಜವಾದ ಧಾರ್ಮಿಕ ಮನುಷ್ಯ.
ಧರ್ಮ ಎಂದರೆ ಸಂತರ ಸಮಾಧಿಗಳನ್ನು ಸ್ಮಶಾನಗಳನ್ನು ಸಂದರ್ಶಿಸುವುದಲ್ಲ; ಅಥವಾ ಧ್ಯಾನ ಭಂಗಿಯಲ್ಲಿ ಕೂಡುವುದೂ ಅಲ್ಲ.
ಧರ್ಮವೆಂದರೆ ದೇಶದೇಶಗಳನ್ನು ಸುತ್ತುವುದಾಗಲೀ ತೀರ್ಥಗಳಲ್ಲಿ ಮುಳುಗುವುದಾಗಲೀ—ಅಲ್ಲ.
ಈ ಲೋಕದ ಮಾಲಿನ್ಯದ ಮಧ್ಯೆ ನಿರ್ಮಲವಾದದ್ದನ್ನು ಸಾಧಿಸುವುದೇ ಧರ್ಮ

—ಗುರು ನಾನಕ್

ವಿವಾಹ: ಕೆಲವು ಕಠಿಣ ಪ್ರಶ್ನೆಗಳು

ಮಹಾತ್ಮ ಗಾಂಧಿ

ನನ್ನ ವಿವೇಕದಲ್ಲಿಯೂ ಪ್ರಾಮಾಣಿಕತೆಯಲ್ಲಿಯೂ ನಂಬಿಕೆಯುಳ್ಳ ಮಹಿಳಾ ಗೆಳತಿಯೊಬ್ಬರು ಕೆಲವು ಜಟಿಲ ಪ್ರಶ್ನೆ ಕೇಳಿದ್ದಾರೆ. ಇವು ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಜಾಗರೂಕತೆಯಿಂದಿರುವ ಕೆಲವು ಗಂಡಂದಿರನ್ನು ರೇಗಿಸಿ, ಅವರು ವಾಗ್ವಾದಕ್ಕೆ ಎಲ್ಲಿ ಇಳಿಯುವರೋ ಎಂಬ ಭೀತಿಯಿಂದ ಈ ಪ್ರಶ್ನೆಗಳಿಂದ ದೂರವಿರಲು ನನ್ನ ಮನಸ್ಸು ಒಪ್ಪಿತು. ಆದರೆ, ಆಗಾಗ ಕಿರಿಕಿರಿ ಒದಗಿದರೂ, ಒಟ್ಟಿನಲ್ಲಿ ಕಳೆದ ನಲವತ್ತು ವರುಷಗಳಿಂದ ಸುಖಮಯ ಸಾಂಸಾರಿಕ ಜೀವನ ನಡೆಸಿದೆ ಎನ್ನಬಹುದಾದ ನಾನೂ ಗಂಡನಾಗಿ ನನ್ನ ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳಲು ಕಾತರನಾಗಿದ್ದೆ ಎಂಬ ಅಂಶವನ್ನು ಅರಿತ ಗಂಡಂದಿರು ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ.

ಮೊದಲನೆಯ ಪ್ರಶ್ನೆ ಉಚಿತವೂ ಸಕಾಲಿಕವೂ ಆಗಿದೆ. (ಇದರ ಮೂಲ ಮರಾಠೀ ಭಾಷೆಯಲ್ಲಿದೆ. ಆದುದರಿಂದ ಸರಳ ಭಾವಾನುವಾದ ಮಾತ್ರ ಕೊಟ್ಟಿದ್ದೇನೆ.):

ಒಬ್ಬ ಪುರುಷನೋ ಮಹಿಳೆಯೋ ರಾಷ್ಟ್ರಸೇವೆಯಲ್ಲಿ ಭಾಗವಹಿಸದೆ ಕೇವಲ ರಾಮನಾಮ ಪುನಶ್ಚರಣೆ ಮಾಡುವುದರಿಂದ ಆತ್ಮಸಾಕ್ಷಾತ್ಕಾರ ಪಡೆಯುವರೆ? ನನ್ನ ಕೆಲವು ಭಗಿನಿಯರು ಗೃಹಕೃತ್ಯದ ಕಾರ್ಯಗಳಲ್ಲಿ ತೊಡಗಿರುವುದು, ಆಗಾಗ ಬಡವರಿಗೆ ದಾನಧರ್ಮ ಮಾಡುವುದು ಹೊರತು ಬೇರೆ ಯಾವ ಕಾರ್ಯವನ್ನೂ ಮಾಡಬೇಕಾಗಿಲ್ಲವೆಂದು ಹೇಳುತ್ತಿರುವುದರಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ.

ಈ ಪ್ರಶ್ನೆ ಮಹಿಳೆಯರನ್ನಷ್ಟೇ ಅಲ್ಲ, ಅನೇಕ ಪುರುಷರನ್ನೂ ನನ್ನನ್ನೂ ತುಂಬ ಕಾಡಿದೆ. ಪೂರ್ಣ ನಿಷ್ಕ್ರಿಯತೆಯನ್ನೂ ಎಲ್ಲ ಪ್ರಯತ್ನಗಳ ಅಸಾರತೆಯನ್ನೂ ಬೋಧಿಸುವ ತತ್ವಜ್ಞಾನಪಂಥವೊಂದಿದೆ. ನನಗೆ ಗೊತ್ತು, ಆ ತತ್ವಜ್ಞಾನ ನನಗೆ ರುಚಿಸದಿದ್ದರೂ, ಕೇವಲ ವಾಚಾತರ್ಕಕ್ಕೋಸ್ಕರ ಅದಕ್ಕೆ ನನ್ನ ವಿವರಣೆ ಕೊಟ್ಟೇನು. ಪ್ರಗತಿಗೆ ಪ್ರಯತ್ನ ಅವಶ್ಯಕ. ಫಲವೇನೇ ಆಗಲಿ, ಪ್ರಯತ್ನವಂತೂ ನಡೆಯಲೇಬೇಕು. ರಾಮನಾಮವೋ ಬೇರೆ ಯಾವುದಾದರೂ ನಾಮವೋ ಬರೀ ಪುನಶ್ಚರಣೆಗಲ್ಲದೆ, ಶುದ್ಧಿಗಾಗಿಯೂ ಪರಾಶಕ್ತಿಯ ಪ್ರತ್ಯಕ್ಷ ಮಾರ್ಗದರ್ಶನಕ್ಕೆ ಸಾಧನ ರೂಪವಾಗಿಯೂ ಅವಶ್ಯಕ; ಪ್ರಯತ್ನ ತೀವ್ರಗತಿ ಹೊಂದುವುದಕ್ಕೂ ಅದನ್ನು ಸರಿಯಾದ ಪಥದಲ್ಲಿ ಒಯ್ಯುವುದಕ್ಕೂ ಅವಶ್ಯಕ. ಎಲ್ಲ ಪ್ರಯತ್ನ ನಿರರ್ಥಕವೆನ್ನುವುದಾದರೆ, ಕುಟುಂಬದ ಕೆಲಸವೂ ಆಗಾಗ ಬಡವರಿಗಾಗಿ ಧರ್ಮಕಾರ್ಯವೂ ಏತಕ್ಕೆ ಸಾಗಬೇಕು? ಈ ಪ್ರಯತ್ನದಲ್ಲಿಯೇ ರಾಷ್ಟ್ರಸೇವೆಯ ಬೀಜ ಅಡಗಿದೆ. ನನ್ನ ದೃಷ್ಟಿಯಲ್ಲಿ ರಾಷ್ಟ್ರಸೇವೆ ಎಂದರೆ ಮಾನವ ಸೇವೆ; ಹಾಗೆಯೇ ನಿಸ್ವಾರ್ಥಮಯ ಕುಟುಂಬಸೇವೆಯೂ ರಾಷ್ಟ್ರ ಸೇವೆಯೇ. ರಾಮನಾಮ ಪಠನ ಅನಾಸಕ್ತಿಯನ್ನು ಕಲ್ಪಿಸುತ್ತದಲ್ಲದೆ, ಶಕ್ತಿಯನ್ನೂ ನೀಡಿ ಪರೀಕ್ಷಾ ಸಮಯ ಬಂದಾಗ ಎಂದಿಗೂ ಆಯ ತಪ್ಪದಂತೆ ಕಾಪಾಡುತ್ತದೆ. ಅತ್ಯಂತ ದರಿದ್ರರ ಸೇವೆಗಾಗಿ ಅವರೊಂದಿಗೆ ಸಮರಸವಾಗದ ಹೊರತು ಆತ್ಮ–ಸಾಕಾತ್ಕಾರ ಲಭಿಸಲಾರದೆಂದು ನನ್ನ ನಂಬಿಕೆ. ಇನ್ನು ಎರಡನೆಯ ಪ್ರಶ್ನೆ:

ಹಿಂದೂ ಧರ್ಮದ ಪ್ರಕಾರ, ಪತಿ ಎಷ್ಟೇ ಪೈಶಾಚಿಕ ವರ್ತನೆಯುವನಿರಲಿ ಅಥವಾ ಪ್ರೇಮ ಮೂರ್ತಿಯಾಗಿರಲಿ, ಹೇಗಿದ್ದರೂ ಪತ್ನಿ ಆತನಲ್ಲಿ ಪೂರ್ಣವಾಗಿ ತಾದಾತ್ಮ್ಯ ಹೊಂದಿರುವುದು, ಪತಿಭಕ್ತಿಯಿಂದ ಕೂಡಿರುವುದು ಆಕೆಯ ಅತ್ಯಂತ ಹಿರಿಯ ಗುರಿ. ಇದು ಪತ್ನಿಗೆ ಉಚಿತವಾದ ನಡವಳಿಕೆಯಾದರೆ, ಆಕೆ ತನ್ನ ಪತಿಯ ಉಗ್ರವಿರೋಧವನ್ನೂ ನಿರ್ಲಕ್ಷಿಸಿ ರಾಷ್ಟ್ರಸೇವೆಯನ್ನು ಕೈಗೊಳ್ಳಬಹುದೆ? ಅಥವಾ ತನ್ನ ಪತಿ ಎಷ್ಟು ಅವಕಾಶ ನೀಡುವನೋ ಅಷ್ಟು ಮಾತ್ರ ಹೋಗಬೇಕೇ?

ನನ್ನ ಆದರ್ಶ ಪತ್ನಿ ಸೀತೆ; ನನ್ನ ಆದರ್ಶ ಪತಿ ರಾಮ. ಸೀತೆ ರಾಮನ ಗುಲಾಮಳಾಗಿರಲಿಲ್ಲ. ಇಬ್ಬರೂ ಪರಸ್ಪರ ವಶವರ್ತಿಗಳು. ಸೀತೆಯ ವಿಷಯದಲ್ಲಿ ರಾಮ ಸದಾ ದಾಕ್ಷಿಣ್ಯವರ್ತಿ. ನಿಜವಾದ ಪ್ರೇಮವಿರುವೆಡೆ ಮೇಲೆ ಕೇಳಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲಿ ನಿಜವಾದ ಪ್ರೇಮವಿಲ್ಲವೋ ಅಲ್ಲಿ ಒಡಂಬಡಿಕೆಯೇ ಇರುವುದಿಲ್ಲ. ಆದರೆ, ಇಂದಿನ ಹಿಂದೂ ಸಂಸಾರ ಒಗಟು. ಮದುವೆಯಾಗುವ ಸತಿಪತಿಗಳು ಒಬ್ಬರನ್ನೊಬ್ಬರು ಅರಿತಿರುವುದೇ ಇಲ್ಲ. ಪದ್ಧತಿ, ವಿವಾಹಿತರ ಸುಗಮ ಜೀವನ, ಇವುಗಳಿಂದ ಬಲ ಪಡೆದ ಧಾರ್ಮಿಕ ಆಧಾರ, ಇವು ಅಸಂಖ್ಯ ಹಿಂದೂ ಸಂಸಾರಗಳಲ್ಲಿ ಶಾಂತಿಯನ್ನು ರಕ್ಷಿಸಿವೆ. ಆದರೆ, ಪತಿಯೋ ಪತ್ನಿಯೋ ಅಸಾಮಾನ್ಯ ಅಭಿಪ್ರಾಯವನ್ನು ಹೊಂದಿದ್ದರೆ, ಆಗ ಕಿರಿಕಿರಿಯುಂಟಾಗುವ ಸಂಭವವಿದೆ. ಪತಿಗೆ ಯಾವ ಮಾನಸಿಕ ಆತಂಕವೂ ಇರದು. ತನ್ನ ಸಂಗಾತಿಯ ಅಭಿಪ್ರಾಯವನ್ನು ಕೇಳುವುದು ತನ್ನ ಕರ್ತವ್ಯವೆಂದು ಅವನು ಭಾವಿಸುವುದಿಲ್ಲ. ಪತ್ನಿ ಅವನ ಆಸ್ತಿ. ಪತಿಯ ಈ ವಾದವನ್ನು ನಂಬುವ ದೀನ ಸತಿ ತನ್ನನ್ನು ದಮನ ಮಾಡಿಕೊಳ್ಳುವಳು. ಇದಕ್ಕೆ ಒಂದು ಮಾರ್ಗವಿದೆ. ಅದನ್ನು ಮೀರಾಬಾಯಿ ತೋರಿಸಿದ್ದಾಳೆ. ಪತ್ನಿ ತನ್ನ ಸ್ವತಂತ್ರ ಮಾರ್ಗವನ್ನು ಆರಿಸಿಕೊಂಡು ತಾನು ಸರಿ ಎಂದು ಭಾವಿಸಿರುವ ಘನವಾದ ಉದ್ದೇಶಕ್ಕಾಗಿ ನಮ್ರಪೂರ್ವಕ ಧೈರ್ಯದಿಂದ ಪರಿಣಾಮಗಳನ್ನು ಎದುರಿಸಬೇಕು. ಇನ್ನು ಮೂರನೆಯ ಪ್ರಶ್ನೆ :

'ಪತಿ ಮಾಂಸಾಹಾರಿಯಾಗಿದ್ದು, ಪತ್ನಿ ಅದನ್ನು ಕೆಟ್ಟುದೆಂದು ಭಾವಿಸಿದರೆ, ಆಕೆ ತನ್ನ ಮನೋಭೀಷ್ಟದಂತ ನಡೆಯಬಹುದೆ? ಮಾಂಸಾಹಾರ ಮತ್ತಿತರ ಇಂಥದೇ ಆದ ಅಭ್ಯಾಸಗಳಿಂದ ತನ್ನ ಪತಿಯನ್ನು ತಪ್ಪಿಸಲು ಪ್ರೇಮಪೂರ್ವಕ ವಿಧಾನಗಳಿಂದ ಪ್ರಯತ್ನಿಸಬಹುದೆ? ಆಕೆ ತನ್ನ ಗಂಡನಿಗಾಗಿ ಮಾಂಸವನ್ನು ಬೇಯಿಸಲೇಬೇಕಾದರೆ ಅಥವಾ ಇನ್ನೂ ಕೆಟ್ಟುದೆಂದರೆ, ಆತನ ಇಚ್ಛೆಯ ಪ್ರಕಾರ ಮಾಂಸವನ್ನು ತಿನ್ನಲೇಬೇಕಾದರೆ, ಆ ರೀತಿ ಮಾಡಬಹುದೆ? ಇಂಥ ವಿಷಯಗಳಲ್ಲಿ ಪತ್ನಿ ತನ್ನ ಮಾರ್ಗವನ್ನು ಅನುಸರಿಸಬಹುದೆಂದರೆ, ಒಬ್ಬರ ಬಲಾತ್ಕಾರದಿಂದಲೂ, ಇನ್ನೊಬ್ಬರ ಪ್ರತಿಭಟನೆಯಿಂದಲೂ ಕೂಡಿದ ಸಾಂಸಾರಿಕ ಜೀವನ ಸಾಗೀತೇ?.

ಎರಡನೆಯ ಪ್ರಶ್ನೆಯ ಉತ್ತರದಲ್ಲಿ ಈ ಪ್ರಶ್ನೆಗೆ ಸ್ವಲ್ಪ ಉತ್ತರ ಇದೆ. ಒಬ್ಬ ಪತ್ನಿ ತನ್ನ ಪತಿಯ ದುಷ್ಕಾರ್ಯಗಳಿಗೆ ಬೆಂಬಲ ನೀಡಬೇಕೆಂಬ ನಿರ್ಬಂಧವಿಲ್ಲ. ಆಕೆಯ ದೃಷ್ಟಿಯಲ್ಲಿ ಯಾವುದಾದರೂ ತಪ್ಪೆಂದು ಕಂಡುಬಂದರೆ ಅದನ್ನು ಸರಿಪಡಿಸಲು ಆಕೆ ಧೈರ್ಯ ಮಾಡಬೇಕು. ಯಾವ ರೀತಿ ಪತಿ ಸಂಪಾದನೆಯ ಕಾರ್ಯ ಮಾಡಬೇಕೋ ಹಾಗೆಯೇ ಪತ್ನಿ ಗೃಹಕೃತ್ಯ ನಿರ್ವಾಹಕಳಾಗಿದ್ದು, ಅಡಿಗೆ ಮಾಡುವುದು ಆಕೆಯ ಕರ್ತವ್ಯವಾಗಿದ್ದಲ್ಲಿ ಮತ್ತು ಇಬ್ಬರೂ ಹಿಂದಿನಿಂದಲೂ ಮಾಂಸಾಹಾರಿಗಳಾಗಿದ್ದರೆ, ಆಗ ಆಕೆಯು ಸಂಸಾರಕ್ಕಾಗಿ ಮಾಂಸ ಬೇಯಿಸಲೇಬೇಕು. ಇದಕ್ಕೆ ಪ್ರತಿಯಾಗಿ ಒಂದು ಸಸ್ಯಾಹಾರೀ ಕುಟುಂಬದಲ್ಲಿ ಪತಿ ಮಾಂಸಾಹಾರಿಯಾಗಿಬಿಟ್ಟು, ತನ್ನ ಪತ್ನಿಯನ್ನು ಮಾಂಸ ಬೇಯಿಸಬೇಕೆಂದು ಬಲಾತ್ಕರಿಸಿದರೆ, ಆಕೆಗದು ಸರಿಯಲ್ಲವೆನಿಸಿದರೆ, ಆಕೆ ಆ ರೀತಿ ಮಾಡಬೇಕೆಂಬ ನಿರ್ಬಂಧವಿಲ್ಲ. ಕುಟುಂಬಶಾಂತಿ ಅತ್ಯಂತ ಅಪೇಕ್ಷಣೀಯ ಅಂಶವೇನೋ ಸರಿ. ಆದರೆ, ಅದೇ ಅಂತಿಮವಲ್ಲ. ಜೀವನದ ಇತರ ಅವಸ್ಥೆಗಳಂತೆಯೇ ವೈವಾಹಿಕ ಅವಸ್ಥೆಯೂ ಒಂದು ಸಾಧನಾಮಾರ್ಗ; ಶಿಸ್ತು ಎಂದು ನನ್ನ ಭಾವನೆ. ಬಾಳೊಂದು ಕರ್ತವ್ಯಕರ್ಮ; ಅದು ಪರೀಕ್ಷೆಯ ಕಾಲ. ಗೃಹಸ್ಥಾಶ್ರಮ ಇಹಪರಗಳೆರಡರಲ್ಲಿಯೂ ಸತಿಪತಿಗಳ ಪರಸ್ಪರ ಕಲ್ಯಾಣವನ್ನು ಗಳಿಸಿಕೊಳ್ಳುವ ಉದ್ದೇಶದಿಂದ ಕೂಡಿದೆ. ಜೊತೆಯಲ್ಲಿ ಲೋಕಸೇವೆಯನ್ನೂ ಸಾಧಿಸಬೇಕು. ಇಬ್ಬರಲ್ಲಿ ಯಾರಾದರೂ ಶಿಸ್ತಿನ ನಿಯಮಕ್ಕೆ ಭಂಗ ತಂದರೆ, ಇನ್ನೊಬ್ಬರಿಗೆ ಸಂಸಾರಬಂಧನದಿಂದ ಪ್ರತ್ಯೇಕವಾಗುವ ಹಕ್ಕು ಬರುತ್ತದೆ. ಇಲ್ಲಿ ಪ್ರತ್ಯೇಕವೆಂದರೆ, ನೈತಿಕ ಪ್ರತ್ಯೇಕತೆಯೇ ಹೊರತು ಭೌತಿಕ ಪ್ರತ್ಯೇಕತೆಯಲ್ಲ. ಇದರಲ್ಲಿ ವಿವಾಹ ವಿಚ್ಛೇದನಕ್ಕೆ ಸ್ಥಾನವಿಲ್ಲ. ಪತಿಪತ್ನಿಯರು ಪ್ರತ್ಯೇಕವಾದರೂ ಅದು ಅವರು ಯಾವ ಉದ್ದೇಶಕ್ಕೆ ಒಂದುಗೂಡಿದ್ದರೋ ಅದರ ಸಾರ್ಥಕ್ಯಕ್ಕಾಗಿ. ಇಬ್ಬರೂ ಎಲ್ಲ ವಿಧಗಳಲ್ಲಿಯೂ ಸಮಾನರು ಎಂದು ಪರಿಗಣಿಸುತ್ತದೆ ಹಿಂದೂ ಧರ್ಮ. ಆದರೆ ಇದಕ್ಕೆ ವಿರುದ್ಧವಾದ ಆಚರಣೆ ಎಂದಿನಿಂದಲೋ ಯಾರಿಗೂ ಅರಿವಿಲ್ಲದಂತೆ ನಡೆದು ಬಂದಿದೆ. ಹಾಗೆಯೇ ಇನ್ನೂ ಎಷ್ಟೋ ಕೆಟ್ಟ ಅಂಶಗಳು ನುಸುಳಿ ಬಂದಿವೆ. ಹಿಂಧೂಧರ್ಮ, ಪುರುಷ ಸ್ತ್ರೀ ಇಬ್ಬರಿಗೂ ಅವರು ಅಪೇಕ್ಷಿಸುವ ರೀತಿಯಲ್ಲಿ ಅವರ ಹುಟ್ಟಿನ ಏಕಮಾತ್ರ ಗುರಿಯಾದ ಆತ್ಮ ಸಾಕ್ಷಾತ್ಕಾರವನ್ನು ಹೊಂದಲು ಪೂರ್ಣ ವ್ಯಕ್ತಿಸ್ವಾತಂತ್ರ್ಯವನ್ನು ನೀಡುತ್ತದೆಂಬುದು ನನ್ನ ಸ್ಪಷ್ಟವಾದ ಗ್ರಹಿಕೆ.

(ಯಂಗ್ ಇಂಡಿಯ : ೨೧.೧೦.೪೬)

ಸರಳ ವಿವಾಹದ ಆವಶ್ಯಕತೆ

ಕರಾಚಿಯಲ್ಲಿ ಆಚರಿಸಲ್ಪಟ್ಟ ವಿವಾಹ ಸಮಾರಂಭವೊಂದನ್ನು ವಿವರಿಸಿ ಗೆಳೆಯರೊಬ್ಬರು ವರದಿ ಇತ್ತಿದ್ದಾರೆ.

ಸೇಠ್ ಲಾಲ್‌ಚಂದ್ ಎಂಬ ಹಣವಂತರು ತಮ್ಮ ಹದಿನಾರು ವರುಷದ ಕನ್ಯೆಯ ವಿವಾಹವನ್ನು ಅತ್ಯಂತ ಕಮ್ಮಿ ವೆಚ್ಚದಲ್ಲಿ ಮಾಡಿ, ಸಮಾರಂಭಕ್ಕೆ ಧಾರ್ಮಿಕ ಘನತೆಯುಳ್ಳ ಸ್ವರೂಪವನ್ನು ಕೊಟ್ಟರು. ಪೂರ್ಣ ವಿವಾಹ ಸಮಾರಂಭ ಎರಡು ಗಂಟೆಗಳ ಮೇಲೆ ಹಿಡಿಯಲಿಲ್ಲವೆಂದು ವರದಿಯಿಂದ ಗೊತ್ತಾಗುತ್ತದೆ. ಸಾಮಾನ್ಯವಾಗಿ ಇದು ದಿನಗಟ್ಟಲೆ ನಡೆದು ವೃಥಾ ವೆಚ್ಚವಾಗುತ್ತಿತ್ತು. ವಿವಾಹಮಹೋತ್ಸವವನ್ನು ನಡೆಸಿದ ಬ್ರಾಹ್ಮಣ ಪಂಡಿತರು ಆ ಸಂದರ್ಭದಲ್ಲಿ ದಂಪತಿಗಳು ಪಠಿಸಬೇಕಾಗಿದ್ದ ಮಂತ್ರಾರ್ಥವನ್ನು ಅವರಿಗೆ ತಿಳಿಸಿದರು. ಬಹಳ ಹಿಂದೆಯೇ ಆಗಬೇಕಾಗಿದ್ದುದು ಈ ಬಗೆಯ ಸುಧಾರಣೆ. ಇದನ್ನು ಆರಂಭ ಮಾಡಿದ ಸೇಠ್ ಲಾಲ್ ಚಂದ್ ಅವರನ್ನೂ .ಇದಕ್ಕೆ ಪೂರ್ಣ ಬೆಂಬಲವಿತ್ತ ಅವರ ಪತ್ನಿಯನ್ನೂ, ನಾ ಅಭಿನಂದಿಸುತ್ತೇನೆ. ಇವರ ಮಾರ್ಗ ಇತರ ಹಣವಂತರಿಂದ ಅನುಸರಿಸಲ್ಪಡುವುದೆಂದು ನಂಬಿದ್ದೇನೆ. ಈ ವಿವಾಹ ಸಮಾರಂಭ ಆಗ್ರಾ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ನಡೆದ ದೃಶ್ಯವನ್ನು ನನ್ನ ನೆನಪಿಗೆ ತರುತ್ತದೆ. ಸಂಯುಕ್ತ ಪ್ರಾಂತದಲ್ಲಿ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ವ್ಯಾಸಂಗ ಮಾಡುವ ತರುಣರು ಚಿಕ್ಕ ವಯಸ್ಸಿನಲ್ಲಿಯೇ ವಿವಾಹ ಮಾಡಿಕೊಳ್ಳಲಾಶಿಸುವರೆಂದೂ, ಇದಕ್ಕಾಗಿ ತಮ್ಮ ತಂದೆತಾಯಿಗಳು ಬೆಲೆಬಾಳುವ ತೊಡಿಗೆಗಳಿಗಾಗಿಯೂ, ಅನೇಕ ವೇಳೆ ಇದಕ್ಕಿಂತ ಹೆಚ್ಚು ಬೆಲೆಬಾಳುವ ಮನೋರಂಜನ ಕಾರ್ಯಗಳಿಗಾಗಿಯೂ, ದುಂದುವೆಚ್ಚ ಮಾಡಲಪೇಕ್ಷಿಸುವರೆಂದೂ ನನಗೆ ತಿಳಿದಿದ್ದ ವಾರ್ತೆಯನ್ನು ಅವರು ಸ್ಥಿರಪಡಿಸಿದರು. ತುಂಬ ವಿದ್ಯಾವಂತ ತಂದೆತಾಯಿಗಳೂ ದೊಡ್ಡಸ್ತಿಕೆಯ ಮದದಿಂದ ದೂರವಾಗಿರಲಿಲ್ಲವೆಂದೂ, ವೆಚ್ಚದ ಪ್ರಶ್ನೆ ಬಂದಾಗ ಅವರೂ ಅವಿದ್ಯಾವಂತರಾಗಿದ್ದ ಶ್ರೀಮಂತ ವರ್ತಕರಿಗಿಂತಲೂ ಅತಿಯಾಗಿದ್ದಾರೆಂಬ ಅಂಶವನ್ನು ಆ ವಾರ್ತೆ ತಂದಾತ ತಿಳಿಸಿದ್ದ. ಇಂಥವರೆಲ್ಲರಿಗೂ ಸೇಠ್ ಲಾಲ್ ಚಂದರ ಇತ್ತೀಚಿನ ನಿದರ್ಶನವೂ, ಸ್ವಲ್ಪ ಹಿಂದಿನದಾದ ಸೇಠ್ ಜಮುನಾ ಲಾಲ್ ಬಜಾಜರ ನಿದರ್ಶನವೂ ವೆಚ್ಚವನ್ನು ಕಮ್ಮಿ ಮಾಡಲು ಉತ್ತೇಜಕವಾದಾವು. ತಂದೆತಾಯಿಗಳಿಗಿಂತ ಹೆಚ್ಚಾಗಿ, ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವನ್ನೂ ಅದರಲ್ಲಿಯೂ ಅತಿ ಮುಖ್ಯವಾಗಿ ವಿದ್ಯಾರ್ಥಿದೆಸೆಯಲ್ಲಿರುವಾಗ ವಿವಾಹ ಮಾಡಿಕೊಳ್ಳುವುದನ್ನೂ, ವೆಚ್ಚ ಮಾಡುವುದನ್ನೂ ತರುಣರೇ ಪ್ರಬಲವಾಗಿ ತಡೆಗಟ್ಟುವುದು ಅವರ ಕರ್ತವ್ಯ. ವಾಸ್ತವಿಕವಾಗಿ ಮತಸಂಬಂಧವಾದ ಆಚರಣೆಗೆ ಹತ್ತು ರೂಪಾಯಿಗಳಿಗಿಂತಲೂ ಹೆಚ್ಚು ಅವಶ್ಯವೆಂದು ತಿಳಿಯಬಾರದು. ಈ ಆಚರಣೆಗೆ ಸಂಬಂಧಿಸದ ಯಾವುದನ್ನೂ ವಿವಾಹ ವಿಧಿಯ ಆವಶ್ಯಕ ಅಂಗವೆಂದು ಭಾವಿಸಲಾಗದು. ಬಡವ–ಶ್ರೀಮಂತ, ಮೇಲು–ಕೀಳು, ಎಂಬ ವ್ಯತ್ಯಾಸಗಳನ್ನು ನಿರ್ಮೂಲನಗೊಳಿಸಬೇಕೆಂಬ ಈ ಪ್ರಜಾಪ್ರಭುತ್ವದ ಯುಗದಲ್ಲಿ ಶ್ರೀಮಂತರು ತಮ್ಮ ಎಲ್ಲ ಸುಖಲೋಲುಪತೆಗಳ ಮೇಲೂ ಆತ್ಮ–ಸಂಯಮ ವಿಧಿಸಿಕೊಂಡು, ಭಗವದ್ಗೀತೆಯಲ್ಲಿ ಉಕ್ತವಾಗಿರುವ 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ'' (ಸಮಾಜದ ಹಿರಿಯರು ಎಂತು ಆಚರಿಸುವರೋ ಅಂತೆಯೇ ಇತರರೂ) ಎಂಬ ಸೂಕ್ತಿಯನ್ನು ನೆನಪಿನಲ್ಲಿಟ್ಟುಕೊಂಡು ಬಡವರಿಗೆ ತೃಪ್ತಿಯುತ ಜೀವನಕ್ಕೆ ಮಾರ್ಗದರ್ಶನ ಮಾಡಬೇಕು. ಈ ಸೂಕ್ತಿಯ ಸತ್ಯ ನಮ್ಮ ನಿತ್ಯ ಜೀವನದಲ್ಲಿ ಪ್ರತ್ಯಕ್ಷಾನುಭವಕ್ಕೆ ಬರುತ್ತಿದ್ದರೂ, ಎಲ್ಲಕ್ಕಿಂತ ಹೆಚ್ಚಾಗಿ ವಿವಾಹ ಮತ್ತು ಪಿತೃಶ್ರಾದ್ಧ ಕರ್ಮಗಳಲ್ಲಿ ಕಂಡು ಬರುತ್ತಿದೆ. ಇವುಗಳ ದೆಸೆಯಿಂದ ಸಹಸ್ರಾರು ಜನ ಬಡವರು ನಿತ್ಯಜೀವನದ

ಆವಶ್ಯಕತೆಗಳನ್ನೂ ಹೊಂದಲು ಗತಿ ಇಲ್ಲದಂತಾಗಿ, ವಿನಾಶಕ ಬಡ್ಡಿ ತರುವ ಹೊರೆಗೆ ಗುರಿಯಾಗಿದ್ದಾರೆ. ದೇಶದ ವಿದ್ಯಾವಂತ ತರುಣರು, ಅದರಲ್ಲಿಯೂ ಶ್ರೀಮಂತರ ಮಕ್ಕಳು, ತಮಗೋಸ್ಕರ ಇಂಥ ಎಲ್ಲ ಬಗೆಯ ದುಂದುವೆಚ್ಚವನ್ನೂ ಮಾಡದಿರುವ ಸ್ಥಿರಮನಸ್ಸನ್ನು ಮಾಡಿದರೆ, ಎಷ್ಟೋ ರೀತಿಯಲ್ಲಿ ರಾಷ್ಟ್ರ ಸಂಪತ್ತಿನ ನಷ್ಟ ನಿಂತೀತು.

(ಯಂಗ್ ಇಂಡಿಯಾ: ೨೬.೯.೨೯)

ಅಂತರ್ಜಾತೀಯ ವಿವಾಹಗಳು

ಪ್ರಶ್ನೆ: *ನೀವು ಅಂತರ್ಜಾತೀಯ ವಿವಾಹಗಳನ್ನು ಒಪ್ಪುವುದಾಗಿಯೂ ಅಂಥ ಸತಿಪತಿಗಳು ತಮ್ಮ ತಮ್ಮ ಮತಧರ್ಮದಲ್ಲಿಯೇ ಇರಬೇಕೆಂದೂ, ಆದುದರಿಂದ ಶಾಸನಿಕ ವಿವಾಹವನ್ನು (Civil marriage) ಸಹಿಸುವುದಾಗಿಯೂ ಹೇಳಿದ್ದೀರಿ. ವಿವಾಹಿತರಾದ ಸತಿಪತಿಗಳು ಬೇರೆ ಜಾತಿ ಮತಧರ್ಮದವರಾಗಿದ್ದು, ಅವುಗಳನ್ನು ಆಜೀವಪರ್ಯಂತ ಉಳಿಸಿಕೊಂಡಿರುವ ಯಾವುದಾದರೂ ನಿದರ್ಶನಗಳಿವೆಯೇ? ಶಾಸನಿಕ ವಿವಾಹ ಪದ್ಧತಿ ಮತಧರ್ಮಾಚರಣೆಗೆ ವಿರುದ್ಧವಾಗಿದ್ದು ಕೊನೆಗೆ ಧರ್ಮನಿಷ್ಠೆ ಸಡಿಲವಾಗುವುದಕ್ಕೆ ಆಸ್ಪದವಾಗುವುದಿಲ್ಲವೆ?*

ಉತ್ತರ: ಈ ಪ್ರಶ್ನೆಗಳು ಯೋಗ್ಯ. ಆಮರಣಾಂತ ತಮ್ಮ ತಮ್ಮ ಭಿನ್ನ ಭಿನ್ನ ಮತಧರ್ಮಗಳನ್ನು ಬಿಡದೆ ಅನುಸರಿಸಿರುವ ಸತಿಪತಿಗಳ ನಿದರ್ಶನಗಳು ನಮ್ಮ ಅನುಭವಕ್ಕಿನ್ನೂ ಬಂದಿಲ್ಲ. ಏಕೆಂದರೆ, ನನಗೆ ಪರಿಚಿತರಿರುವ ಅಂಥ ದಂಪತಿ ಗೆಳೆಯರು ಇನ್ನೂ ಮರಣ ಹೊಂದಿಲ್ಲ. ಭಿನ್ನ ಭಿನ್ನ ಮತಧರ್ಮಗಳವರಾದರೂ, ತಮ್ಮ ತಮ್ಮ ಮತಧರ್ಮವನ್ನು ಬಿಡದೆ ಅನುಸರಿಸುತ್ತಿರುವ ಸ್ತ್ರೀ–ಪುರುಷರು ತಮಗೆ ಗೊತ್ತು. ಇದಕ್ಕೋಸ್ಕರ ಹಿಂದಿನ ನಿದರ್ಶನಗಳನ್ನು ಕಂಡುಹಿಡಿಯುವವರೆಗೂ ಕಾಯಬೇಕಾಗಿಲ್ಲ. ಅಂಜುಕುಳಿಗಳ ಅಂಜುಕುಳಿತನವನ್ನು ಕಳೆಯುವುದಕ್ಕೋಸ್ಕರ ಹೊಸ ನಿದರ್ಶನಗಳನ್ನು ಸೃಷ್ಟಿ ಮಾಡಬೇಕು.

ಶಾಸನಿಕ ವಿವಾಹದಲ್ಲಿ ನನಗೆ ನಂಬಿಕೆ ಇಲ್ಲ, ಬಹು ದಿವಸಗಳಿಂದ ಆಗಬೇಕಾಗಿರುವ ಸುಧಾರಣೆಯೊಂದು ಆಚರಣೆಗೆ ಬರಬೇಕೆಂಬ ದೃಷ್ಟಿಯಿಂದ ಮಾತ್ರ ಅದನ್ನು ಸ್ವಾಗತಿಸುತ್ತೇನೆ. (ಹರಿಜನ: ೧೬–೩–೪೭)

ಮಾತ್ಸರ್ಯಪೂರಿತ ಹಾಗೂ ಪಕ್ಷಪಾತಯುಕ್ತ ಒಬ್ಬ ಪತ್ರವ್ಯವಹಾರಿ ಈ ರೀತಿ ಬರೆಯುತ್ತಾರೆ:

'ಅನೇಕ ವಿಷಯಗಳಲ್ಲಿ ಗೌರವಾನ್ವಿತರು, ಪ್ರಾಮಾಣಿಕರು, ವಿಶ್ವಾಸ ಹೃದಯರು, ಧರ್ಮನಿಷ್ಠರು, ಉದಾತ್ತ ಮನಸ್ಸಿನವರು ಆಗಿದ್ದರೂ ಕೇವಲ ಗಂಡುಸಂತಾನವಾಗಬೇಕೆಂಬ ಕಾರಣಕ್ಕಾಗಿ ಪುನರ್ವಿವಾಹ ಮಾಡಿಕೊಳ್ಳಲು ಯಾವ ಬಗೆಯ ಮಾನಸಿಕ ಅಳುಕೂ ಇಲ್ಲದ ಗೃಹಸ್ಥರು ಇಂದು ನಮ್ಮೊಡನೆ ಇದ್ದಾರೆ. ಹೆಣ್ಣು ಶಿಶುವಿನ ಜನನವನ್ನು ದೊಡ್ಡ ಅಪರಾಧವೆಂದು ಪರಿಗಣಿಸುವ ಹಿಂದೂಗಳ ನಂಬಿಕೆಯನ್ನು ನೀವು ಒಪ್ಪುವಿರಾ ಹೇಗೆ? ನಿಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿ ಬೇಡುತ್ತೇನೆ. ಪುತ್ರಸಂತಾನವಿಲ್ಲದೆ ಸ್ವರ್ಗ ದೊರಕದೆಂಬ ಸಂಪ್ರದಾಯಬದ್ಧ ಅಭಿಪ್ರಾಯವನ್ನು ನೀವೂ ಹೊಂದಿದೀರಾ?

'ದಾನಧರ್ಮಗಳನ್ನು ಮಾಡುವುದರಲ್ಲಿ ಎತ್ತಿದ ಕೈ ಎನಿಸಿಕೊಂಡ ಒಬ್ಬಾತನಿಗೆ ಮೂರು ಹೆಂಡತಿಯರಿದ್ದಾರೆ. ಆತನಿಗೆ ಗಂಡು ಸಂತಾನವಿಲ್ಲ. ಆತ ಈಗ ನಾಲ್ಕನೆಯ ವಿವಾಹ ಮಾಡಿಕೊಂಡಿದ್ದಾನೆ. ಕೆಲವು ತಿಂಗಳ ಕೆಳಗೆ ಆತ ಯಜ್ಞ ಮಾಡಿ, ದಿನವೂ ಐದುನೂರು ಜನ ಬ್ರಾಹ್ಮಣರಿಗೆ ಸಂತರ್ಪಣೆ ಏರ್ಪಡಿಸಿದ್ದ. ಈ ಕಾರ್ಯಕ್ಕಾಗಿ ಒಂದು ಲಕ್ಷ ರೂಪಾಯಿ ಮೇಲ್ಪಟ್ಟು ವೆಚ್ಚವಾಯಿತು. ಇಂಥ ಎಷ್ಟೋ ನಿದರ್ಶನಗಳನ್ನು ನಾನು ಕೊಡಬಲ್ಲೆ.'

ಪುತ್ರಸಂತಾನಕ್ಕಾಗಿ ಹಾತೊರೆಯುವುದು ಹಿಂದೂ ಧರ್ಮದಲ್ಲಿ ಸಾರ್ವತ್ರಿಕವಾಗಿ ಆವರಿಸಿದೆ. ಇದೊಂದು ದುರದೃಷ್ಟ. ಇದರ ಮೂಲವನ್ನು ಹುಡುಕಬೇಕಾದ ಪ್ರಮೇಯವಿಲ್ಲ. ಸ್ತ್ರೀಪುರುಷರ ಸಮಾನತೆಯ ಈ ಯುಗದಲ್ಲಿ ಸ್ತ್ರೀಯರ ಬಗ್ಗೆ ಈ ಮಾತ್ಸರ್ಯಪೂರಿತ ಪಕ್ಷಪಾತ ಕಾಲವಿರೋಧವೆನಿಸೀತು. ಮಗನ ಜನನಕ್ಕಾಗಿ ಹರ್ಷಿಸುವುದೂ, ಮಗಳ ಜನನಕ್ಕೆ ವಿಲಾಪಿಸುವುದೂ ನನಗೆ ಸರಿ ಎನಿಸದು. ಇಬ್ಬರೂ ದೇವರ ಕೊಡುಗೆಯೇ. ಇಬ್ಬರಿಗೂ ಸಮಾನವಾಗಿ ಬಾಳುವ ಹಕ್ಕಿದೆ. ಲೋಕಸಂಗ್ರಹಕ್ಕೆ ಇಬ್ಬರೂ ಆವಶ್ಯಕ. ಆದರೆ, ಯುಗಾಂತರಗಳಿಂದ ರೂಢಮೂಲವಾಗಿ ಬಂದಿರುವ ಇಂಥ ಪದ್ಧತಿಗಳನ್ನು ಇದ್ದಕ್ಕಿದ್ದಂತೆ ತೊಡೆದು ಹಾಕಲು ಸಾಧ್ಯವಿಲ್ಲ. ಸಾಮಾಜಿಕ ಮನೋಧರ್ಮವನ್ನು ಎಚ್ಚರಗೊಳಿಸುವುದರಿಂದಲೂ, ಮಹಿಳೆಯರ ನಿಜಸ್ಥಾನಮಾನ, ಗಾಂಭೀರ್ಯಗಳನ್ನು ಎತ್ತಿ ಹಿಡಿಯುವುದರಿಂದಲೂ ಮಾತ್ರ ಸಾಧ್ಯ. ಇಂದು ಸತಿಪತಿಯರಲ್ಲಿ ಗಂಡು ಸಂತಾನವಿಲ್ಲವೆಂಬ ಕಾರಣಕ್ಕಾಗಿ ಪತಿ ಪುನರ್ವಿವಾಹ ಮಾಡಿಕೊಳ್ಳಲು ಇಬ್ಬರೂ ಒಪ್ಪುತ್ತಾರೆ. ನನ್ನ ಪತ್ರವ್ಯವಹಾರಿಯಂಥ ಸುಧಾರಕರು ಇಂಥ ನಡವಳಿಕೆಯನ್ನು ಕಂಡು ಸಿಟ್ಟಿಗೇಳುವುದಾಗಲಿ ನಿರಾಶರಾಗುವುದಾಗಲಿ ಆಗದೆ, ಶಾಂತಿಯನ್ನು ಅಭ್ಯಸಿಸಬೇಕು. ತಾವು ಯಾವ ಧ್ಯೇಯ ಸಾಧನೆಗಾಗಿ ದುಡಿಯುತ್ತಿದ್ದಾರೋ ಅದರಲ್ಲಿ ಪೂರ್ಣ ವಿಶ್ವಾಸವುಳ್ಳವರಾಗಿಯೂ, ಒಂದಲ್ಲ ಒಂದು ದಿನ ಸಮಾಜ ಗಂಡು ಹೆಣ್ಣು ಸಂತಾನದ ವಿಷಯದಲ್ಲಿ ಮಾಡುತ್ತಿರುವ ಅರ್ಥಶೂನ್ಯ ಮಾತ್ಸರ್ಯಪೂರಿತ ಪಕ್ಷಪಾತವನ್ನು ಅರಿತುಕೊಳ್ಳುವುದೆಂಬ ನಂಬಿಕೆಯಿಂದಲೂ ಕೂಡಿರಬೇಕು.

ಸಹಭೋಜನ ಮತ್ತು ಜಾತ್ಯಂತರ ವಿವಾಹ

ಅಸ್ಪೃಶ್ಯತೆಯ ನಿವಾರಣೆಗೆ ಸಹಭೋಜನವೂ ಜಾತ್ಯಂತರ ವಿವಾಹವೂ ಆವಶ್ಯಕವೆ?

'ಇಲ್ಲ'– 'ಹೌದು' ಎರಡೂ ಉತ್ತರ. 'ಇಲ್ಲ' ಏಕೆಂದರೆ, ಅದು ಹರಿಜನ ಸೇವಕ ಸಂಘದ ಕಾರ್ಯಕ್ರಮದ ಅಂಶವಲ್ಲ. ಸಾಮಾನ್ಯವಾಗಿ ವಿವಾಹ, ಭೋಜನಗಳು ವ್ಯಕ್ತಿಗತ ವಿಷಯಗಳು. ಇನ್ನೊಬ್ಬನ ಮನಸ್ಸಿಗೆ ವಿರೋಧವಾಗಿ ಹುಡುಗಿಯೊಬ್ಬಳನ್ನು ಹೆಂಡತಿಯನ್ನಾಗಿ ಸ್ವೀಕರಿಸ ಬೇಕೆಂದಾಗಲಿ ಅಥವಾ ಭೋಜನ ಮಾಡಬೇಕೆಂದಾಗಲಿ ಹೇಳುವ ಹಕ್ಕನ್ನು ಯಾರೂ ಹೊಂದಿಲ್ಲ. ಇದನ್ನು ಹೇಳುವಾಗಲೇ ನನ್ನ ಉತ್ತರ 'ಹೌದು' ಎಂದಿದೆ; ಏಕೆಂದರೆ ಅಸ್ಪೃಶ್ಯತೆ ಅಥವಾ ಕೀಳುತನವೆಂಬ ಕಾರಣದ ಮೇಲೆ, ಇನ್ನೊಬ್ಬನಿಂದ ಸ್ಪರ್ಶವಾದ ಆಹಾರವನ್ನು ಒಬ್ಬನು ಸೇವಿಸಲು ನಿರಾಕರಿಸುವುದಾದರೆ, ಅವನು ಅಸ್ಪೃಶ್ಯತೆಯನ್ನು ಆಚರಿಸಿದಂತೆಯೇ ಸರಿ. ಇದನ್ನೇ ಬೇರೆ ಮಾತಿನಲ್ಲಿ ಹೇಳುವುದಾದರೆ, ಜಾತ್ಯಂತರ ವಿವಾಹ ಅಥವಾ ಸಹಭೋಜನ ನಿರೋಧಕ್ಕೆ ಅಸ್ಪೃಶ್ಯತೆ ಯಾವ ರೀತಿಯಿಂದಲೂ ಆಧಾರವಾಗಲಾರದು.

ಇಂದಿನ ಜಾತಿ ಪದ್ಧತಿ ವರ್ಣಾಶ್ರಮಕ್ಕೆ ಕೇವಲ ವಿರುದ್ಧವಾಗಿದೆ. ಇದನ್ನು ಸಾರ್ವಜನಿಕ ಅಭಿಪ್ರಾಯ ಎಷ್ಟು ಜಾಗ್ರತೆ ತೊಡೆದುಹಾಕುತ್ತದೆಯೋ ಅಷ್ಟೂ ಉತ್ತಮ.

ವರ್ಣಾಶ್ರಮದಲ್ಲಿ ಜಾತ್ಯಂತರ ವಿವಾಹ ಅಥವಾ ಸಹಭೋಜನಕ್ಕೆ

ಪ್ರತಿಬಂಧಕವಿರಲಿಲ್ಲ; ಇರಬಾರದು. ಲಾಭದಾಸೆಗಾಗಿ ತನ್ನ ಆನುವಂಶಿಕ ಉದ್ಯೋಗವನ್ನು ಬದಲಾವಣೆ ಮಾಡುವುದಕ್ಕೆ ಪ್ರತಿಬಂಧಕವೇನೋ ಇದೆ.

ಜಾತ್ಯಂತರ ವಿವಾಹ, ಸಹಭೋಜನಗಳ ವಿಷಯದಲ್ಲಿ ವರ್ಣಾಶ್ರಮ ನಿರೋಧ ಮಾಡದಿದ್ದರೂ ಬಲಾತ್ಕಾರಕ್ಕಂತೂ ಅವಕಾಶವೇ ಇಲ್ಲ. ಯಾರನ್ನು ವಿವಾಹವಾಗಬೇಕು, ಎಲ್ಲಿ ಭೋಜನ ಮಾಡಬೇಕು ಎಂಬ ಬಗೆಗೆ ವ್ಯಕ್ತಿಗೇ ಅನಿರ್ಬಂಧಿತ ಸ್ವಾತಂತ್ರ್ಯವಿರಬೇಕು. ವರ್ಣಾಶ್ರಮ ಧರ್ಮ ಅನುಸರಿಸಲ್ಪಟ್ಟರೆ ವಿವಾಹ ಸಂಬಂಧವನ್ನು ಜನರು ಸ್ವಾಭಾವಿಕವಾಗಿಯೇ ತಮ್ಮ ವರ್ಣಕ್ಕೆ ಪರಿಮಿತಿಗೊಳಿಸುವರು.

ಸುಧಾರಕರು ಅತ್ಯಂತ ಪ್ರಭಾವಯುತವೂ ಶೀಘ್ರವೂ ಅಪ್ರತಿಬಂಧಕವೂ ಆದ ರೀತಿಯಲ್ಲಿ ಜಾತಿಯನ್ನು ನಾಶ ಮಾಡಬೇಕೆಂದರೆ, ಅವರೇ ಅದನ್ನು ಆರಂಭಿಸಿ, ಆವಶ್ಯಕ ಬಿದ್ದರೆ ಸಾಮಾಜಿಕ ಬಹಿಷ್ಕಾರವನ್ನೂ ಸ್ವೀಕರಿಸಬೇಕು. ಸಂಪ್ರದಾಯಸ್ಥರ ಮೇಲೆ ಬೈಗಳನ್ನು ಸುರಿಸುತ್ತ ಮಾತನಾಡಿದರೆ ಸುಧಾರಣೆ ಆಗಲಾರದು. ಪರಿವರ್ತನೆ ಕ್ರಮವಾಗಿ ಆಗುತ್ತದೆ. ಉಚ್ಚ ವರ್ಗದವರು ಕೀಳು ವರ್ಗದವರ ಮನಸ್ಸಿನ ಮೇಲೆ ಏನಾದರೂ ಪರಿಣಾಮಗೈಯಬೇಕಾದರೆ, ಅವರು ತಮ್ಮ ದೊಡ್ಡಸ್ತಿಕೆಯಿಂದ ದೂರವಾಗಬೇಕು. ಪಟ್ಟಣವಾಸಿಗಳಿಗೂ ಗ್ರಾಮೀಣರಿಗೂ, ಉಚ್ಚ ವರ್ಗಗಳವರಿಗೂ ಕೀಳು ವರ್ಗಗಳವರಿಗೂ ಮಧ್ಯೆ ಇರುವ ಅಂತರವನ್ನು ಕೂಡಿಸುವ ಕಾರ್ಯ ಎಷ್ಟೊಂದು ದುಸ್ತರ ಎಂಬುದನ್ನು ಗ್ರಾಮಸೇವೆಯ ದೈನಂದಿನ ಅನುಭವ ತೋರಿಸುತ್ತದೆ.

(ಹರಿಜನ: ೧೬–೧೧–೩೫)

'ಜಾತಿ ನಿರ್ಮೂಲನವಾಗಬೇಕು' ಎಂಬ ಲೇಖನದಲ್ಲಿ ನಾನು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಈ ಪತ್ರಿಕೆಯಲ್ಲಿ ವಿವಿಧ ಶೀರ್ಷಿಕೆಗಳಡಿ ಆಗಾಗ ವ್ಯಕ್ತಪಡಿಸಲ್ಪಟ್ಟಿವೆ. ಜೊತೆಗೆ, ಆ ಲೇಖನ ಸವರ್ಣ ಹಿಂದೂಗಳಿಗೂ ಹರಿಜನ ಹಿಂದೂಗಳಿಗೂ ಇರುವ ಸಂಬಂಧವನ್ನು ಕುರಿತು ಹೇಳುವುದಿಲ್ಲ. ಅದು ಸವರ್ಣರಲ್ಲಿಯೇ ಆಗಬೇಕಾದ ಸುಧಾರಣೆಯನ್ನು ಮಾತ್ರ ಕುರಿತು ಹೇಳುತ್ತದೆ. ಅಸ್ಪೃಶ್ಯತೆ ಹೋದಾಗ ಅಸ್ಪೃಶ್ಯರು ಸವರ್ಣ ಹಿಂದೂಗಳ ಸ್ಥಾನವನ್ನೇ ಹೊಂದುವರು. ಯಾವ ನಿಯಮ ಅಥವಾ ಪದ್ಧತಿಗಳು ಸವರ್ಣ ಹಿಂದೂಗಳಿಗೆ ಅನ್ವಯಿಸುವುವೋ, ಅವೇ ಇನ್ನು ಮುಂದೆ ಹರಿಜನರೆನಿಸಿಕೊಳ್ಳದ ಹರಿಜನರಿಗೂ ಅನ್ವಯಿಸುತ್ತವೆ. ಆದುದರಿಂದ ಜಾತಿ ಇಂದಿರುವಂತೆಯೇ ಇರುವುದಾದರೆ, ಹರಿಜನರಿಗೂ ಸವರ್ಣ ಹಿಂದೂಗಳಿಗೂ ಸಹಭೋಜನ ಜಾತ್ಯಂತರ ವಿವಾಹಗಳು ಸಾಧ್ಯವಾಗವು. ಇಂದಿನ ರೂಪದಲ್ಲಿರುವ ಜಾತಿ ಹೋಗುವುದಾದರೆ– ಅದು ಎಂದಾದರೂ ಹೋಗಲೇಬೇಕು. ಸವರ್ಣೀಯರ ನಡುವೆ ಪರಸ್ಪರ ಇರುವಂತೆ ಸಹಭೋಜನವೂ ಜಾತ್ಯಂತರ ವಿವಾಹವೂ ನಿಸ್ಸಂದೇಹವಾಗಿ ಆಗುತ್ತದೆ. ಒಂದು ವೇಳೆ ವರ್ಣ ಸ್ಥಿರವಾಗಿ ನಿಲ್ಲುವುದಾದರೆ, ನಿಲ್ಲುವುದೆಂದು ನನ್ನ ನಂಬಿಕೆ. ಅದು ಪ್ರಾಚೀನ ಕಾಲದಲ್ಲಿದ್ದಂತೆ ಪರಿಮಿತವಾಗಿ ಇರುವುದು; ಸಹಭೋಜನಕ್ಕೂ ಜಾತ್ಯಂತರ ವಿವಾಹಕ್ಕೂ ಪ್ರಾಚೀನ ಕಾಲದಲ್ಲಿದ್ದಂತೆ ನಿರ್ಬಂಧವಿಲ್ಲದೆ ಇರುವುದು. ಏನೇ ಆಗಲಿ, ಅದು ಹರಿಜನ ಸೇವಕ ಸಂಘದ ಕಾರ್ಯಕ್ರಮದಿಂದಲೇ ಆಗಲಾರದು. ಸಂಘದ ಅಧೀನದಲ್ಲಿಲ್ಲದ, ಸಂಘ ಹತೋಟಿಯಲ್ಲಿಡಲಾರದ, ಇತರ ಶಕ್ತಿಗಳ ಪ್ರಭಾವದಿಂದ ಆಗುತ್ತದೆ. ವ್ಯಕ್ತಿಗತವಾಗಿ ಅದರ ಸದಸ್ಯರು ತಮ್ಮ ಮನಸ್ಸಿನ ಒಲವಿಗೆ ತಕ್ಕಂತೆ ಆ ಶಕ್ತಿಗಳಿಗೆ ಆಕಾರ ಬರುವಂತೆ ಮಾಡಲು ನಿಸ್ಸಂದೇಹವಾಗಿ ಪ್ರಯತ್ನಿಸುವರು.

(ಹರಿಜನ: ೩೦–೧೧–೩೫)

ಪ್ರಶ್ನೆ: ಹರಿಜನ ಸೇವಕ ಸಂಘದ ಸದಸ್ಯರು ಅಸ್ಪೃಶ್ಯರೊಂದಿಗೆ ಸಹಭೋಜನ ಮಾಡಲು ನಿರಾಕರಿಸಬಹುದೆ? ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಬದಲಾವಣೆ ಹೊಂದಿದೆಯೆ?

ಉತ್ತರ: ಒಂದು ಕಾಲದಲ್ಲಿ ಅಸ್ಪೃಶ್ಯತಾ ನಿವಾರಣೆಯ ಪ್ರಚಾರ ಕಾರ್ಯದಲ್ಲಿ ಅದು ಒಂದು ಆವಶ್ಯಕವಾದ ಭಾಗವಲ್ಲವೆಂದು ಹೇಳಿದ್ದುಂಟು. ವೈಯಕ್ತಿಕವಾಗಿ ಅದು ನನ್ನ ಅಭಿಪ್ರಾಯವಾಗಿತ್ತು. ಇಂದು ನಾನು ಸಹಭೋಜನಕ್ಕೆ ಪ್ರೋತ್ಸಾಹವೀಯುತ್ತೇನೆ. ವಾಸ್ತವಿಕವಾಗಿ ನಾನಿನ್ನೂ ಪುರೋಗಾಮಿ.

(ಹರಿಜನ: ೨೮–೭–೪೬)

ಹರಿಜನರಿಗೂ ಹರಿಜನೇತರರಿಗೂ ವಿವಾಹ

ಸೂರತ್ತಿನ ಪಾಟೀದಾರ್ ಆಶ್ರಮದ ಒಬ್ಬ ಗೆಳೆಯ ಶ್ರೀಹರಿ ಪಾರೀಖರಿಗೆ ಈ ರೀತಿ ಬರೆಯುತ್ತಾರೆ:

"ಗಾಂಧೀಜಿ ರಾಜಕೀಯ ಪ್ರವೇಶ ಮಾಡಿದಂದಿನಿಂದ ಭಾರತದಲ್ಲಿ ಅಸ್ಪೃಶ್ಯತಾ ನಿವಾರಣೆಯ ಚಳುವಳಿಗೆ ದೊಡ್ಡ ಜೋರು ಬಂದಿದೆ. ಸವರ್ಣ ಹಿಂದೂವನ್ನು ವಿವಾಹ ಮಾಡಿಕೊಳ್ಳುವ ವಿದ್ಯಾವಂತ ಹರಿಜನ ಕನ್ಯೆಯೊಬ್ಬಳು ಅವರಿಗೆ ಸಿಕ್ಕಿದರೆ, ಒಂದು ವಿಧದಲ್ಲಿ ಅದು ಚಳುವಳಿಗೆ ಸಹಾಯಕವಾದೀತು. ಈ ಸಮಸ್ಯೆಯನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬೇಕು. ಸ್ತ್ರೀಯರ ವಿದ್ಯಾ ಪ್ರಗತಿಯಲ್ಲಿ ನಮ್ಮ ದೇಶ ಇನ್ನೂ ಹಿಂದೆ ಬಿದ್ದಿದೆ. ಅದರಲ್ಲಿಯೂ, ಎಲ್ಲ ವಿಧಗಳಲ್ಲಿ ಹಿಂದೆ ಬಿದ್ದಿರುವ ಹರಿಜನರಲ್ಲಿ ವಿದ್ಯಾವಂತ ಕನ್ಯೆಯರನ್ನು ಬೆರಳ ತುದಿಯಲ್ಲಿ ಎಣಿಸಬಹುದು. ಅವರು ಸವರ್ಣ ಹಿಂದೂಗಳನ್ನು ವಿವಾಹವಾಗುವುದಾದರೆ, ಸಾಮಾನ್ಯವಾಗಿ ತಮ್ಮ ಜನರಿಂದ ದೂರವಾಗಿ, ಸವರ್ಣ ಹಿಂದೂಗಳಲ್ಲಿ ಲೀನವಾಗುವರು. ತಮ್ಮ ಹರಿಜನ ಸೋದರಿಯರಿಗೆ ಅವರೊಡನಿದ್ದು ಸೇವೆ ಸಲ್ಲಿಸಲು ಸಾಧ್ಯವಿಲ್ಲದೆ ಹೋಗುತ್ತದೆ. ಅಂಥ ಒಂದೆರಡು ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ.

"ಒಂದು ದೃಷ್ಟಿಯಿಂದ ಇಂಥ ವಿವಾಹಗಳು ಹರಿಜನರನ್ನು ಅಜ್ಞಾನದಲ್ಲಿಯೇ ಇಡಲು ನೆರವಾಗುತ್ತವೆಂದು ಯಾರಾದರೂ ವಾದಿಸಬಹುದು. ಒಂದು ಜನತೆಯ ಪ್ರಗತಿ ಅದರ ಸ್ತ್ರೀಯರ ಪ್ರಗತಿಯನ್ನು ಅವಲಂಬಿಸಿದೆ. ಹರಿಜನರಲ್ಲಿ ಅತಿ ಶ್ರೇಷ್ಠ ಹೆಣ್ಣನ್ನು ಸವರ್ಣ ಹಿಂದೂಗಳಿಗೆ ಕೊಟ್ಟು ವಿವಾಹ ಮಾಡುವದರಿಂದ ಇಂದು ತಾವಿರುವ ಅಂಧಕಾರದ ಕಮರಿಯಿಂದ ಪಾರಾಗಲು ಹರಿಜನರಿಗೆ ದಾರಿಯನ್ನೇ ಮುಚ್ಚಿದಂತಾಗುತ್ತದೆ. ಬಾಪೂ ಇದು ನಿಲ್ಲಬೇಕೆನಿಸುತ್ತದೆ ನನಗೆ. ಹರಿಜನ ಕನ್ಯೆಯರು ಸವರ್ಣ ಹಿಂದೂಗಳನ್ನು ವಿವಾಹ ಮಾಡಿಕೊಳ್ಳಬೇಕಾದರೆ, ಇಬ್ಬರೂ ಹರಿಜನ ಸೇವೆಗಾಗಿಯೇ, ತಮ್ಮ ಜೀವನವನ್ನು ಸಮರ್ಪಿಸಬೇಕೆಂಬ ಷರತ್ತು ಹಾಕಬೇಕು. ಇಲ್ಲವಾದರೆ ವಿದ್ಯಾವಂತ ಕನ್ಯೆಯರು ತಮ್ಮ ಜಾತಿಯ ವಿದ್ಯಾವಂತ ತರುಣರನ್ನೇ ವಿವಾಹ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಅವರು ನಿಜವಾಗಿಯೂ ವಿದ್ಯಾವಂತರಾದರೆ, ತಮ್ಮ ಜಾತಿಯವರಿಗೆ ಆದರ್ಶ ನಿದರ್ಶನಗಳಾದಾರು.

"ನಮ್ಮ ಆಶ್ರಮದಲ್ಲಿ ಹರಿಜನ ಮತ್ತು ಹರಿಜನೇತರ ವಿದ್ಯಾರ್ಥಿಗಳು ಯಾವ ಬಗೆಯ ವ್ಯತ್ಯಾಸವೂ ಇಲ್ಲದೆ ಒಟ್ಟಿಗೆ ವಾಸಿಸುತ್ತಿರುವುದನ್ನು ನೀವು ಅರಿತಿರಬಹುದು. ಪ್ರತಿ ವರುಷವೂ ಒಬ್ಬರಿಬ್ಬರು ಹರಿಜನ ವಿದ್ಯಾರ್ಥಿಗಳನ್ನು ಪರೀಕ್ಷಿತಲಾಲರು ಕಳಿಸುತ್ತಾರೆ, ಈ ವರುಷ ಇಬ್ಬರು

ಬಂದರು. ಅವರಲ್ಲಿ ಒಬ್ಬನು ನನ್ನಲ್ಲಿ ಹೀಗೆ ಹೇಳಿದ: *'ಬಾಪೂ ವಿದ್ಯಾವಂತ ಸವರ್ಣ ಹಿಂದೂ ಕನ್ಯೆಯರನ್ನು ವಿದ್ಯಾವಂತ ಹರಿಜನರಿಗೆ ಕೊಟ್ಟು ವಿವಾಹ ಮಾಡುವುದನ್ನು ಏಕೆ ಪ್ರೋತ್ಸಾಹಿಸುವುದಿಲ್ಲ? ಇದನ್ನೇ ಅವರು ನಿಜವಾಗಿ ಪ್ರೋತ್ಸಾಹಿಸಬೇಕು. ಸವರ್ಣ ಹಿಂದೂ ಕನ್ಯೆಯರು ಹರಿಜನ ಕನ್ಯೆಯರೊಂದಿಗೆ ಹರಿಜನರಂತೆಯೇ ವಾಸಿಸಿದರೆ ಹರಿಜನ ತಂಗಿಯರು ಅವರಿಂದ ಎಷ್ಟೋ ಕಲಿಯಲು ಸಾಧ್ಯವಾದೀತು. ಇದರಿಂದ ಹರಿಜನೋದ್ಧಾರ ಕಾರ್ಯಕ್ಕೆ ತುಂಬ ಪ್ರಗತಿ ಬಂದೀತು.' ನಾನೇ ಈ ಪ್ರಶ್ನೆಗೆ ಉತ್ತರವಿತ್ತೇನು. ಆದರೆ, ಬಾಪೂ ಕೊಟ್ಟರೆ ಉತ್ತಮ. ಇದಕ್ಕೆ ಗಂಭೀರವಾದ ಆಲೋಚನೆ ಅಗತ್ಯ''*

ನಾನು ಹೇಳುವುದಿಷ್ಟೆ : ಒಬ್ಬ ವಿದ್ಯಾವಂತ ಹರಿಜನ ಕನ್ಯೆ ಸವರ್ಣ ಹಿಂದೂವನ್ನು ವಿವಾಹ ಮಾಡಿಕೊಂಡರೆ, ದಂಪತಿಗಳಿಬ್ಬರೂ ಹರಿಜನ ಸೇವೆಗೆ ಶ್ರಮಿಸಬೇಕು. ಭೋಗೇಚ್ಛೆ ಎಂದಿಗೂ ಅಂಥ ವಿವಾಹದ ಉದ್ದೇಶವಾಗಬಾರದು. ಅದು ಅಯುಕ್ತ, ನಾನೆಂದಿಗೂ ಅದನ್ನು ಪ್ರೋತ್ಸಾಹಿಸಲಾರೆ. ಉತ್ತಮ ಸದುದ್ದೇಶಗಳಿಂದಲೇ ಆದ ವಿವಾಹ ಸಂಬಂಧವೂ ಭಂಗವಾಗುವುದು ಸಾಧ್ಯ. ಯಾರೂ ಅಂಥ ಆಕಸ್ಮಿಕಗಳನ್ನು ತಪ್ಪಿಸಲಾರರು. ಒಬ್ಬಳೇ ಒಬ್ಬಳು ಹರಿಜನ ಕನ್ಯೆ ಉತ್ತಮ ಶೀಲಭರಿತ ಸವರ್ಣ ಹಿಂದೂವನ್ನು ವಿವಾಹವಾಗುವುದಾದರೆ, ಅದು ಹರಿಜನ ಮತ್ತು ಸವರ್ಣ ಹಿಂದೂ ಇಬ್ಬರಿಗೂ ಒಳಿತನ್ನು ಮಾಡುತ್ತದೆ. ಅವರು ಒಳ್ಳೆಯ ಮೇಲುಪಂಕ್ತಿ. ಹರಿಜನ ಕನ್ಯೆ ನಿಜವಾಗಿಯೂ ಯೋಗ್ಯಳಾದರೆ, ಆಕೆ ತನ್ನ ಒಳ್ಳೆಯತನದ ಸೌರಭವನ್ನು ಎಲ್ಲೆಲ್ಲಿಯೂ ಬೀರಿ ತನ್ನ ಮೇಲುಪಂಕ್ತಿಯನ್ನು ಇತರರೂ ಅನುಸರಿಸಲು ಪ್ರೋತ್ಸಾಹಿಸುತ್ತಾಳೆ. ಇಂಥ ವಿವಾಹಗಳಿಂದ ಸಮಾಜದಲ್ಲಿ ಯಾವ ಗಾಬರಿಯೂ ಉಂಟಾಗದು. ಇದರಲ್ಲಿ ಯಾವ ತಪ್ಪೂ ಇಲ್ಲವೆಂದು ಎಲ್ಲರಿಗೂ ತಾನಾಗಿಯೇ ಗೋಚರಿಸುವುದು. ಇಂಥ ವಿವಾಹ ಸಂಬಂಧಗಳಿಂದ ಜನಿಸಿದ ಮಕ್ಕಳು ಒಳ್ಳೆಯವರಾದರೆ, ಅವರು ಅಸ್ಪೃಶ್ಯತಾ ನಿವಾರಣೆಗೆ ತುಂಬಾ ನೆರವಾದಾರು. ಎಲ್ಲ ಸುಧಾರಣೆಯೂ ಶಂಬುಕದ ಗತಿಯಲ್ಲಿ ಮುಂದುವರಿಯುತ್ತದೆ. ಇಂಥ ಪ್ರಗತಿ ನಿಧಾನವೆಂದು ಅತೃಪ್ತಿಗೊಳ್ಳುವುದು ಸುಧಾರಣಾ ಕೆಲಸದ ವಿಧಾನ ಅರಿವಿಲ್ಲದಿರುವುದನ್ನು ಎತ್ತಿ ತೋರಿಸುತ್ತದೆ.

ಸವರ್ಣ ಹಿಂದೂ ಕನ್ಯೆಯರು ಹರಿಜನ ವರಗಳನ್ನು ಆರಿಸಿಕೊಳ್ಳುವುದು ನಿಜಕ್ಕೂ ಅಪೇಕ್ಷಣೀಯ. ಇದು ಉತ್ತಮವೆಂದು ಹೇಳಲು ನಾ ಹಿಂಜರಿಯುತ್ತೇನೆ. ಹಾಗೆಂದರೆ, ಹೆಂಗಸರು ಗಂಡಸರಿಗಿಂತ ಕೀಳೆಂದು ಅರ್ಥವಾದೀತು. ಈ ಕಾರಣದಿಂದ, ಈಗ್ಗೆ ಸವರ್ಣ ಹಿಂದೂ ಕನ್ಯೆ ಹರಿಜನನೊಬ್ಬನನ್ನು ವಿವಾಹ ಮಾಡಿಕೊಳ್ಳುವುದು ಹರಿಜನ ಕನ್ಯೆ ಸವರ್ಣ ಹಿಂದೂವನ್ನು ಲಗ್ನ ಮಾಡಿಕೊಳ್ಳುವುದಕ್ಕಿಂತ ಉತ್ತಮವೆಂದು ನಾನು ಒಪ್ಪುತ್ತೇನೆ. ನನ್ನ ಪ್ರಭಾವಕ್ಕೆ ಬರುವ ಎಲ್ಲ ಸವರ್ಣ ಹಿಂದೂ ಕನ್ಯೆಯರೂ, ಸಾಧ್ಯವಾದರೆ ಹರಿಜನ ಪತಿಯನ್ನು ಆರಿಸಿಕೊಳ್ಳಲು ಒಪ್ಪಿಸಿಯೇನು. ಅದು ಬಹಳ ಕಠಿಣವೆಂದು ನನ್ನ ಅನುಭವ. ಹಳೆಯ ಅಭಿಪ್ರಾಯಗಳನ್ನು ಬಿಡುವುದು ಕಷ್ಟ. ಇಂಥ ಅಭಿಪ್ರಾಯಗಳನ್ನು ಕಂಡು ಗೇಲಿ ಮಾಡುವುದೂ ಸಾಧ್ಯವಿಲ್ಲ. ಅವು ತಾಳ್ಮೆಯಿಂದ ಜಯಿಸಲ್ಪಡಬೇಕು. ಒಬ್ಬ ಹುಡುಗಿ ಹರಿಜನನೊಬ್ಬನನ್ನು ಲಗ್ನ ಮಾಡಿಕೊಂಡು ಅಷ್ಟರಿಂದಲೇ ತನ್ನ ಕರ್ತವ್ಯ ಮುಕ್ತಾಯವಾಯಿತೆಂದು ಭಾವಿಸಿ ಅನಂತರ ಭೋಗಮಗ್ನಳಾದರೆ, ಅದು ಅನರ್ಥಕಾರಿ. ಪ್ರತಿ ವಿವಾಹದ ಅಂತಿಮ ಪರೀಕ್ಷೆ ಎಂದರೆ, ವಧೂವರರಲ್ಲಿ ಎಷ್ಟರಮಟ್ಟಿನ ಸೇವಾ ವೃತ್ತಿಯನ್ನುಂಟು ಮಾಡುತ್ತದೆ ಅದು ಎಂಬುದು. ಪ್ರತಿ ಮಿಶ್ರ ವಿವಾಹವೂ ಅಂಥ ವಿವಾಹಗಳ ಬಗೆಗೆ ಇರುವ ಕಳಂಕವನ್ನು ಸಾಧ್ಯವಾದಷ್ಟು ಕಮ್ಮಿ ಮಾಡುತ್ತದೆ. ಅಂತ್ಯದಲ್ಲಿ ಇರುವ ಜಾತಿ ಒಂದೇ– ಭಂಗಿ ಎಂದರೆ ಸುಧಾರಕ ಅಥವಾ ಎಲ್ಲ ಕಶ್ಮಲನಾಶಕ. ಅಂಥ ಸುದಿನ ಜಾಗ್ರತೆ ಬರಲೆಂದು ಎಲ್ಲರೂ ಪ್ರಾರ್ಥಿಸೋಣ.

ಕೇವಲ ಮಾತಿನಿಂದಲೇ ನನ್ನ ಎಲ್ಲ ಶ್ರೇಷ್ಠತಮ ಸದಾಶಯಗಳೂ ಯಥಾರ್ಥವಾಗಲಾರವೆಂಬುದನ್ನು ಪತ್ರಲೇಖಕ ಅರಿತಿರಬೇಕು. ಇದುವರೆಗೂ ಹರಿಜನ ಕನ್ಯೆಯೊಬ್ಬಳನ್ನು ಸವರ್ಣ ಹಿಂದೂವಿಗೆ ಕೊಟ್ಟು ವಿವಾಹ ನೆರವೇರಿಸುವುದರಲ್ಲಿ ನಾ ಜಯಶಾಲಿಯಾಗಿಲ್ಲ. ತನ್ನ ತಂದೆಯ ಆಶೆಯಂತೆಯೇ ಆತನು ಆಯ್ಕೆ ಮಾಡಿದ ಹರಿಜನನೊಬ್ಬನನ್ನು ಲಗ್ನ ಮಾಡಿಕೊಳ್ಳ ಬಯಸುವ ಸವರ್ಣ ಹಿಂದೂ ಕನ್ಯೆಯೊಬ್ಬಳು ನನ್ನೊಂದಿಗಿದ್ದಾಳೆ. ಸದ್ಯಕ್ಕೆ ಹುಡುಗ ಸೇವಾಗ್ರಾಮದಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ. ದೈವೇಚ್ಛೆ ಇದ್ದರೆ ಇಬ್ಬರ ವಿವಾಹವೂ ಸ್ವಲ್ಪ ಕಾಲದಲ್ಲಿಯೇ ನಡೆದೀತು.

(ಹರಿಜನ:೭–೭–೪೬)

ವರದಕ್ಷಿಣೆ

ಒಬ್ಬ ಪತ್ರಲೇಖಕ ನನಗೊಂದು ವೃತ್ತ ಪತ್ರಿಕೆಯಿಂದ ತೆಗೆದ ಭಾಗವನ್ನು ಕಳುಹಿಸಿ, ಸಿಂಧೂದೇಶದ ಹೈದರಾಬಾದಿನಲ್ಲಿ ಈಚೆಗೆ ವರಗಳ ಆವಶ್ಯಕತೆ ಭೀತಿಯನ್ನುಂಟುಮಾಡುವ ರೀತಿಯಲ್ಲಿ ಹೆಚ್ಚುತ್ತಿದೆ ಎಂದು ತಿಳಿಸಿದ್ದಾನೆ. ಇಂಪೀರಿಯಲ್ ಟೆಲಿಗ್ರಾಫ್ ಇಂಜಿನಿಯರಿಂಗ್ ಇಲಾಖೆಯ ನೌಕರನೊಬ್ಬ ೨೦,೦೦೦ ರೂಪಾಯಿಗಳ ನಗದು ವರದಕ್ಷಿಣೆಯನ್ನು ನಿಶ್ಚಿತಾರ್ಥ ಸಮಯದಲ್ಲಿಯೇ ಸೆಳೆದುಕೊಳ್ಳುವುದರ ಜೊತೆಗೆ ವಿವಾಹದ ದಿನವೂ ಮತ್ತಿತರ ವಿಶೇಷ ಸಮಾರಂಭ ಕಾಲದಲ್ಲಿಯೂ ಹೇರಳ ಕೊಡುಗೆಗಳ ವಾಗ್ದಾನವನ್ನೂ ಹೊಂದಿದನಂತೆ. ವಿವಾಹ ಮಾಡಿಕೊಳ್ಳಲು ವರದಕ್ಷಿಣೆಯ ಷರತ್ತನ್ನು ಹಾಕುವ ಯಾವ ಯುವಕನೇ ಆಗಲಿ, ತನ್ನ ವಿದ್ಯಾಭ್ಯಾಸಕ್ಕೆ, ತನ್ನ ದೇಶ ಹಾಗೂ ಸ್ತ್ರೀತ್ವಕ್ಕೆ ಅಪಮಾನವೆಸಗಿದಂತೆ. ದೇಶದಲ್ಲಿ ವಿವಿಧ ಯುವಜನ ಚಳುವಳಿಗಳಿವೆ. ಈ ಚಳುವಳಿಗಳು ಇಂಥ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುವುವೆಂದು ನಾನು ಅಪೇಕ್ಷಿಸುತ್ತೇನೆ. ಇಂಥ ಸಂಸ್ಥೆಗಳು ಆಂತರ್ಯದಿಂದ ಘನವಾದ ಸುಧಾರಣೆ ಮಾಡುವುದಕ್ಕೆ ಪ್ರತಿಯಾಗಿ ಬಹುಮಟ್ಟಿಗೆ ಆತ್ಮಸ್ತುತಿಯ ಸಂಸ್ಥೆಗಳಾಗಿಬಿಡುತ್ತವೆ. ಆಗಾಗ ಸಾರ್ವಜನಿಕ ಚಳುವಳಿಗೆ ಇವು ಮಾಡುವ ಸೇವೆ ಶ್ಲಾಘನೀಯವಾದರೂ, ಸಾರ್ವಜನಿಕರಿಂದ ಪಡೆಯುವ ಮೆಚ್ಚುಗೆಯೇ ತಮ್ಮ ಪ್ರತಿಫಲವೆಂದು ಯುವಜನ ಭಾವಿಸಬೇಕೆಂಬುದನ್ನು ಮರೆಯಬಾರದು. ಈ ಬಗೆಯ ಕೆಲಸ ಆಂತರ್ಯ ಸುಧಾರಣೆಯಿಂದ ಬೆಂಬಲ ಪಡೆಯದೆ ಹೋದರೆ, ಯುವಕರಲ್ಲಿ ನಿರಾಧಾರಯುತ ಆತ್ಮತೃಪ್ತಿಯನ್ನುಂಟುಮಾಡಿ, ಅವರನ್ನು ನೀತಿರಹಿತರನ್ನಾಗಿ ಮಾಡೀತು. ಈ ಹೀನ ವರದಕ್ಷಿಣೆ ಪದ್ಧತಿಯನ್ನು ಹಳಿಯಲು ಪ್ರಬಲವಾದ ಸಾರ್ವಜನಿಕ ಅಭಿಮತವನ್ನು ರೂಢಿಸಬೇಕು. ಇಂಥ ಅನ್ಯಾಯದ ಹಣದಿಂದ ತಮ್ಮ ಹಸ್ತವನ್ನು ಮಲೀನ ಮಾಡಿಕೊಳ್ಳುವ ಯುವಕರು ಸಮಾಜದಿಂದ ಬಹಿಷ್ಕೃತರಾಗಬೇಕು. ಕನ್ಯೆಯರ ತಂದೆತಾಯಿಗಳೂ ಇಂಗ್ಲಿಷ್ ಡಿಗ್ರಿಗಳಿಗೆ ಮೋಹಗೊಳ್ಳದೆ ತಮ್ಮ ಕನ್ಯೆಯರಿಗೆ ನಿಜವಾಗಿಯೂ ಧೀರರಾದ ಯುವಕರನ್ನು ಪಡೆಯಲು ತಮ್ಮ ಪುಟ್ಟ ಜಾತಿಗಳೂ ಪ್ರಾಂತಗಳಿಂದ ಹೊರಹೋಗಲು ಹಿಂದೆ ಮುಂದೆ ನೋಡಬಾರದು.

(ಯಂಗ್ ಇಂಡಿಯಾ: ೨೧–೬–೨೮)

ಕನ್ಯೆಯೊಬ್ಬಳನ್ನು ವಿವಾಹವಾಗಲು ಬೆಲೆಯನ್ನು ಸೆಳೆದುಕೊಳ್ಳುವ ತುಚ್ಛರೀತಿ ಒಂದು ಅಯೋಗ್ಯತೆ ಎಂದು ಪರಿಗಣಿತವಾಗದಿರುವುದು ನಮ್ಮ ದೌರ್ಭಾಗ್ಯವೇ ಸರಿ.

(ಹರಿಜನ: ೫-೯-೩೬)

ವರದಕ್ಷಿಣೆ ಪದ್ಧತಿ ಹೃದಯಶೂನ್ಯವೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ನನಗೆ ತಿಳಿದಂತೆ ಅದು ಲಕ್ಷಾಂತರ ಜನರಿಗೆ ಅನ್ವಯಿಸುವುದಿಲ್ಲ. ಭಾರತೀಯ ಜನ ಸಮುದಾಯದಲ್ಲಿ ಕೇವಲ ಹನಿಯಂತಿರುವ ಮಧ್ಯಮವರ್ಗದವರಿಗೆ ಮಾತ್ರ ಅನ್ವಯಿಸುತ್ತದೆ. ನಾನು ಕೆಟ್ಟ ಪದ್ಧತಿಗಳನ್ನು ಕುರಿತು ಯೋಚಿಸಿದಾಗಲೆಲ್ಲ ಸಾಮಾನ್ಯವಾಗಿ ಮಧ್ಯಮ ವರ್ಗದವರನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರುತ್ತೇವೆ. ಹಳ್ಳಿಗಳಲ್ಲಿ ವಾಸಿಸುವ ಲಕ್ಷಾಂತರ ಜನರಿಗೆ ತಮ್ಮದೇ ಆದ ಆಚಾರ ರೂಢಿಗಳಿವೆ, ದುಃಖ ಇದೆ. ಇವುಗಳ ವಿಚಾರವಾಗಿ ನಮ್ಮ ತಿಳುವಳಿಕೆ ಅತ್ಯಲ್ಪ.

ಹೀಗೆ ಹೇಳುವುದರ ಅರ್ಥ, ವರದಕ್ಷಿಣೆಯ ಕೆಟ್ಟ ಪದ್ಧತಿ ಈ ದೇಶದ ಎಲ್ಲೋ ಕೆಲವು ಮಂದಿಗೆ ಮಾತ್ರ ಸಂಬಂಧಿಸಿದ್ದು. ಆದ್ದರಿಂದ ಲಕ್ಷ್ಯಕ್ಕೆ ತಂದುಕೊಳ್ಳಬಾರದೆಂದಲ್ಲ, ಈ ಪದ್ಧತಿ ಹೋಗಲೇಬೇಕು. ತಂದೆತಾಯಿಗಳು ಹಣಕೋಸ್ಕರ ಮಾಡಿಕೊಳ್ಳುವ ವ್ಯವಹಾರ ಆಗಬಾರದು ಮದುವೆ. ಎಲ್ಲಿಯತನಕ ವರಗಳ ಆಯ್ಕೆ ಒಂದೇ ಜಾತಿಯ ಕೇವಲ ನೂರಾರು ಯುವಕ ಯುವತಿಯರಿಗೆ ಮಾತ್ರ ಪರಿಮಿತವಾಗಿರುತ್ತದೆಯೋ, ಅಲ್ಲಿಯತನಕ ಈ ಪದ್ಧತಿಯ ವಿರುದ್ಧ ಏನು ಹೇಳಿದರೂ ವ್ಯರ್ಥವೇ ಸರಿ. ಇದು ನಿರ್ನಾಮವಾಗಬೇಕಾದರೆ, ಹುಡುಗಿಯರೋ ಹುಡುಗರೋ ಅಥವಾ ತಂದೆ ತಾಯಿಗಳೋ ಜಾತಿಯ ಕಟ್ಟನ್ನು ಉಲ್ಲಂಘಿಸಬೇಕು. ಇದರ ಜೊತೆಗೆ ಮದುವೆಯ ವಯಸ್ಸೂ ಹೆಚ್ಚಬೇಕು. ಕನ್ಯೆಯರು ತಮಗೆ ಅನುಗುಣನಾದ ವರ ದೊರಕದಿದ್ದರೆ, ಅವಿವಾಹಿತ ವೃದ್ಧ ಕನ್ಯೆಯರಾಗಲು ಧೈರ್ಯ ಮಾಡಬೇಕು. ಇದೆಲ್ಲದರಿಂದ ರಾಷ್ಟ್ರದ ಯುವಕರ ಮನೋಧರ್ಮ ಕ್ರಾಂತಿಕಾರಕವಾಗಿ ಪರಿವರ್ತನೆ ಹೊಂದುವ ಶಿಕ್ಷಣವೇ ಆದೀತು. ದುರದೃಷ್ಟವಶಾತ್, ನಮ್ಮ ಶಿಕ್ಷಣ ಪದ್ಧತಿಗೂ ಸುತ್ತಮುತ್ತಲಿನ ಸನ್ನಿವೇಶಕ್ಕೂ ಸಂಬಂಧವಿಲ್ಲ. ಆದುದರಿಂದ ರಾಷ್ಟ್ರದ ಬಾಲಕ ಬಾಲಕಿಯರು, ಎಲ್ಲೋ ಅಣುವಿನಷ್ಟು ಅಲ್ಪಸಂಖ್ಯೆಯವರು, ಪಡೆವ ಶಿಕ್ಷಣದಿಂದ ಇದು ಶುದ್ಧಾಂಗವಾಗಿ ಪರಿಣಾಮ ಹೊಂದದೆ ಇದೆ. ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸಲು ಎಲ್ಲ ಪ್ರಯತ್ನವನ್ನೂ ಮಾಡಬೇಕು. ವೇಗವಾಗಿ ಪರಿವರ್ತನೆ ಹೊಂದುತ್ತಿರುವ ದೇಶದ ಸ್ಥಿತಿಗತಿಗಳೊಂದಿಗೆ ಹೊಂದಿಕೊಳ್ಳುವ ಶಿಕ್ಷಣದಿಂದ ಮಾತ್ರ ಈ ಕೆಟ್ಟ ಪದ್ಧತಿಯನ್ನೂ ಇದರಂಥ ಮತ್ತಿತರ ಕೆಟ್ಟ ಪದ್ಧತಿಗಳನ್ನೂ ಎದುರಿಸಲು ಸಾಧ್ಯವಾದೀತೆಂದು ನನಗೆ ಸ್ಪಷ್ಟವಾಗಿದೆ. ನಮ್ಮ ಭವಿಷ್ಯ ಜೀವನದ ಮೇಲೆ ಗಾಢವಾಗಿ ಪರಿಣಾಮ ಮಾಡುವ ವಿವಾಹದಂಥ ವಿಷಯಕ್ಕೆ ಸಂಬಂಧಪಟ್ಟ ಈ ಕೆಟ್ಟ ಪದ್ಧತಿಯನ್ನು ಕಾಲೇಜು ಶಿಕ್ಷಣ ಪಡೆದ ಅನೇಕ ಬಾಲಕ ಬಾಲಕಿಯರೂ ಪ್ರತಿಭಟಿಸಲು ಏಕೆ ಶಕ್ತರಾಗಿಲ್ಲವೋ, ಮನಸ್ಸು ಮಾಡಿಲ್ಲವೋ, ನನಗೊಂದು ಪ್ರಶ್ನೆಯಾಗಿದೆ. ಶಿಕ್ಷಣ ಹೊಂದಿದ ಬಾಲೆಯರು ತಮಗೆ ಯೋಗ್ಯ ವರ ಸಿಕ್ಕಲಿಲ್ಲವೆಂದು ಏಕೆ ಆತ್ಮಹತ್ಯೆ ಮಾಡಿಕೊಳ್ಳಬೇಕೋ? ಒಂದು ಪದ್ಧತಿ ರಕ್ಷಿಸಲಸಾಧ್ಯವೆಂದೂ ನೈತಿಕ ಭಾವನೆಗೆ ವಿರುದ್ಧವೆಂದೂ ಕಂಡುಬಂದರೆ ಅದನ್ನು ಪ್ರತಿಭಟಿಸುವ ಶಕ್ತಿ ನೀಡದಿರುವ ಶಿಕ್ಷಣದಿಂದ ಪ್ರಯೋಜನವಾದರೂ ಏನು? ಇದಕ್ಕೆ ಉತ್ತರ ಸ್ಪಷ್ಟ. ಸಾಮಾಜಿಕವೋ ಅಥವಾ ಇತರ ಸ್ವರೂಪದ ಕೆಟ್ಟ ಪದ್ಧತಿಯೋ ಅದನ್ನು ಎದುರಿಸಿ ಹೋರಾಡಲು ಬಾಲಕ ಬಾಲಕಿಯರಿಗೆ ಶಕ್ತಿ ನೀಡದಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಏನೋ ಮೂಲಭೂತ ನ್ಯೂನತೆ ಇದೆ. ಬಾಳಿನ ಎಲ್ಲ ಕ್ಷೇತ್ರಗಳ ಸಮಸ್ಯೆಗಳನ್ನೂ ಸರಿಯಾಗಿ ಬಿಡಿಸಲು ಸಾಮರ್ಥ್ಯ ಕೊಡುವಂತೆ ಬಾಲಕರ ಶಕ್ತಿ ವಿಶೇಷಗಳನ್ನು ಜಾಗೃತಗೊಳಿಸುವ ಶಿಕ್ಷಣವೇ ನಿಜ ಶಿಕ್ಷಣ.

(ಹರಿಜನ: ೨೫-೫-೩)

ತನ್ನ ಮಗಳ ವಿವಾಹಕ್ಕೆ ಆವಶ್ಯಕ ವರದಕ್ಷಿಣೆ ಹಣ ಶೇಖರಿಸಲು ಸಹಾಯ ಅಪೇಕ್ಷಿಸಿ ಬರೆದ ಬಂಗಾಳೀ ತಂದೆಯೊಬ್ಬನ ಪತ್ರದ ಸಂಬಂಧವಾಗಿ ಗಾಂಧೀಜೀ ಈ ರೀತಿ ಬರೆದರು:

ಈ ಬಂಗಾಳೀ ತಂದೆಗೆ ಇಂಥ ಪ್ರಸಂಗದಲ್ಲಿ ಹಣವನ್ನು ಸಾಲವಾಗಿಯೋ ದಾನವಾಗಿಯೋ ಕೊಡದಿರುವುದೇ ಶ್ರೇಷ್ಠ ಸಹಾಯ. ಆತ ತನ್ನ ಮಗಳ ವಿವಾಹಕ್ಕಾಗಿ ವರನನ್ನು ಕೊಂಡುಕೊಳ್ಳಲು ನಿರಾಕರಿಸುವ ಅಭಿಪ್ರಾಯವನ್ನು ಪ್ರೋತ್ಸಾಹಿಸಿ ಬಲಪಡಿಸುವುದಷ್ಟೇ ಅಲ್ಲದೆ, ಆತನೋ ಆಕೆಯೋ ಹಣವನ್ನು ಬಿಟ್ಟು ಪ್ರೇಮಕ್ಕಾಗಿ ವಿವಾಹ ಮಾಡಿಕೊಳ್ಳುವವರನ್ನು ಆರಿಸಿಕೊಳ್ಳಬೇಕು. ಇದರ ಅರ್ಥ, ಸ್ವೇಚ್ಛೆಯಿಂದಲೇ ವರನನ್ನು ಆರಿಸಿಕೊಳ್ಳುವ ಕ್ಷೇತ್ರವನ್ನು ವಿಶಾಲಗೊಳಿಸುವುದು. ಇದಕ್ಕಾಗಿ ಜಾತಿ, ಪ್ರಾಂತ, ಈ ಎರಡರ ಗೋಡೆಗಳನ್ನೂ ಒಡೆಯಬೇಕಾಗಿದೆ. ಭಾರತ ಅವಿಭಾಜ್ಯ ಏಕೈಕ ರಾಷ್ಟ್ರವೆನ್ನಬೇಕಾದರೆ, ಪರಸ್ಪರ ಸಹಭೋಜನ, ಮಿಶ್ರವಿವಾಹಗಳನ್ನು ಪ್ರತಿಬಂಧಿಸುವ, ಅಸಂಖ್ಯ ಪುಟ್ಟ ಗುಂಪುಗಳ ಕೃತಕ ಪ್ರತ್ಯೇಕತೆ ಖಂಡಿತ ಇರಬಾರದು. ಈ ಕ್ರೂರ ಪದ್ಧತಿಯಲ್ಲಿ ಯಾವ ಬಗೆಯ ಧರ್ಮವೂ ಇಲ್ಲ.

(ಹರಿಜನ: ೨೫-೭-೩೬)

ತುಂಬ ಹಾನಿದಾಯಕವಾದ ಜಾತಿಯ ಅಡ್ಡಿ ಆತಂಕಗಳನ್ನು ತೊಡೆದು ಹಾಕುವ ಆವಶ್ಯಕತೆಯನ್ನು ನಾನು ಒತ್ತಿ ಹೇಳಬೇಕು. ಈ ರೀತಿಯ ಅಡ್ಡಿ ಆತಂಕಗಳನ್ನು ತೊಡೆದು ಹಾಕುವುದರಿಂದ ವರಗಳನ್ನು ಆರಿಸಿಕೊಳ್ಳುವ ವಲಯ ವಿಸ್ತಾರವಾಗಿ, ಬಹುಮಟ್ಟಿಗಾದರೂ ವರದಕ್ಷಿಣೆಯ ಸುಲಿಗೆಯನ್ನು ಕಡಿಮೆ ಮಾಡೀತು.

(ಹರಿಜನ: ೫-೯-೩೬)

ಓರ್ವ ಮಹಿಳೆ ಹೀಗೆ ಬರೆಯುತ್ತಾಳೆ:

"ತಂದೆತಾಯಿಗಳು ಗಂಡು ಮಕ್ಕಳಿಗೆ ಸ್ವತಂತ್ರ ಜೀವನೋಪಾಯ ಪಡೆಯಲು ಶಿಕ್ಷಣ ಕೊಡಿಸುವಂತೆ, ಹೆಣ್ಣು ಮಕ್ಕಳಿಗೂ ಶಿಕ್ಷಣ ಕೊಡಿಸಿದರೆ ಅವರು ತಮ್ಮ ಹುಡುಗಿಯರಿಗೆ ವರಾನ್ವೇಷಣೆ ಮಾಡುವ ಆತಂಕ ತಪ್ಪುತ್ತದೆ. ಹುಡುಗಿಯರು ಸಾಕಷ್ಟು ರೀತಿಯಲ್ಲಿ ಮಾನಸಿಕ ಬೆಳವಣಿಗೆಯನ್ನು ಪಡೆಯುವ ಅವಕಾಶ ಹೊಂದಿ, ಗೌರವಾನ್ವಿತಿಯಲ್ಲಿ ತಮ್ಮ ಜೀವನ ನಡೆಸುವ ಸ್ಥಿತಿ ಪಡೆದರೆ, ಅವರು ವಿವಾಹ ಮಾಡಿಕೊಳ್ಳಬೇಕೆಂದು ಇಚ್ಛೆಸಿದಾಗ, ಯೋಗ್ಯ ವರನನ್ನು ಹೊಂದುವುದು ಕಷ್ಟವೆನಿಸಲಾರದು. ನಾನು ಪ್ರೌಢ ಶಿಕ್ಷಣವೆಂದು ಹೆಸರು ಪಡೆದಿರುವ ಶಿಕ್ಷಣವನ್ನು ಹುಡುಗಿಯರಿಗೆ ಪ್ರತಿಪಾದಿಸುತ್ತಿದ್ದೇನೆಂದು ಅರ್ಥ ಮಾಡಿಕೊಳ್ಳಬಾರದು. ಸಹಸ್ರಾರು ಹುಡುಗಿಯರಿಗೆ ಇದು ಸಾಧ್ಯವಿಲ್ಲವೆಂದು ನಾನು ತಿಳಿಸಿದ್ದೇನೆ. ಹುಡುಗಿಯರಿಗೆ ಉಪಯುಕ್ತ ಜ್ಞಾನ, ತಮ್ಮ ತಂದೆತಾಯಿಗಳ ಅಥವಾ ತಮ್ಮ ಭಾವೀ ಪತಿಗಳ ಆಶ್ರಯವಿಲ್ಲದೆ ಯಾವುದಾದರೊಂದು ಉದ್ಯೋಗವನ್ನವಲಂಬಿಸಿ, ಜಗತ್ತಿನಲ್ಲಿ ಸ್ವತಂತ್ರವಾಗಿ ಬಾಳಬಲ್ಲೆ ಎಂಬ ನಂಬಿಕೆ ಧೈರ್ಯಗಳನ್ನು ಹುಟ್ಟಿಸುವ ಶಿಕ್ಷಣ

ಕೊಡಬೇಕೆಂದು ನಾನು ಪ್ರತಿಪಾದಿಸುತ್ತೇನೆ. ತಮ್ಮ ಗಂಡಂದಿರಿಂದ ತ್ಯಜಿಸಲ್ಪಟ್ಟ ಕೆಲವು ಹುಡುಗಿಯರು ಈಗ ಅದೇ ಗಂಡಂದಿರ ಜೊತೆಯಲ್ಲಿ ಗೌರವಯುತ ಜೀವನ ನಡೆಸುತ್ತಿರುವುದನ್ನು ನಾನು ಬಲ್ಲೆ. ಇದಕ್ಕೆ ಕಾರಣ, ಅವರು ತ್ಯಜಿಸಲ್ಪಟ್ಟಿದ್ದ ಕಾಲದಲ್ಲಿ ಆತ್ಮಾಲಂಬಿಗಳಾಗಿ ಇರಲು ಅನುಕೂಲವಾಗುವಂಥ ಸಾಮಾನ್ಯ ಶಿಕ್ಷಣವನ್ನು ಪಡೆದ ಸುಯೋಗ ಇದ್ದುದೇ. ವಿವಾಹದ ವಯಸ್ಸಿನ ಹೆಣ್ಣು ಮಕ್ಕಳ ತಂದೆತಾಯಿಗಳ ಕಷ್ಟಗಳನ್ನು ಪರಿಗಣಿಸುವಾಗ ಈ ಪ್ರಶ್ನೆಯ ವಿಷಯವನ್ನು ನೀವು ಒತ್ತಿ ಹೇಳುವಿರೆಂದು ನಾನು ಆಶಿಸುತ್ತೇನೆ.''

ಈ ಲೇಖಕಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನಾನು ಹೃತ್ಪೂರ್ವಕವಾಗಿ ಒಪ್ಪುತ್ತೇನೆ.

(ಹರಿಜನ: ೫—೯—೩೬)

ಇಲ್ಲಿ ಅಸಹ್ಯ ಹುಟ್ಟಿಸುವ , ಯುವತಿಯರಿಗೆ ಯೋಗ್ಯ ವರಗಳು ದೊರಕುವುದನ್ನು ದುಸ್ತರ ಮಾಡುವ ವರದಕ್ಷಿಣೆ ಪದ್ಧತಿ ಇದೆಯೆಂದು ತಿಳಿಯಬಂತು. ವಯಸ್ಸಾದ ಹುಡುಗಿಯರು—ನಿಮ್ಮಲ್ಲಿ ಕೆಲವರು ವಯಸ್ಸಾದವರಿದ್ದೀರಿ— ಇಂಥ ಸೆಳೆತಗಳನ್ನು ಪ್ರತಿಭಟಿಸುವುದರಿಂದ ನಿಮ್ಮಲ್ಲಿ ಕೆಲವರು ಆಜೀವಪರ್ಯಂತವೋ, ಕೊನೆಯ ಪಕ್ಷ ಕೆಲವು ವರುಷಗಳೋ ಕನ್ಯೆಯರಾಗಿಯೇ ಇರಲು ಆರಂಭಮಾಡಿದರೆ, ನೀವು ವಿವಾಹವಾಗುವ ಕಾಲ ಪ್ರಾಪ್ತವಾದಾಗ, ನೀವು ಜೀವನ ಸಂಗಾತಿಯನ್ನು ಹೊಂದಲೇಬೇಕೆಂದು ಅಪೇಕ್ಷಿಸಿದಾಗ, ಹಣ, ಖ್ಯಾತಿ, ದೇಹಸೌಂದರ್ಯ ಇವುಗಳನ್ನು ಹೊಂದಿದವನಿಗಾಗಿ ಹಾತೊರೆಯುವುದಿಲ್ಲ. ಪಾರ್ವತಿಯಂತೆ ಒಬ್ಬನನ್ನು ಆರಿಸಿಕೊಳ್ಳುವಿರಿ. ಆತ ಸುಶೀಲತೆಯ ಅನುಪಮ ಗುಣಗಳಿಂದ ಕೂಡಿರುವನು. ನಾರದ ಪಾರ್ವತಿಗೆ ಶಿವನನ್ನು ವರ್ಣಿಸಿದ ರೀತಿಯನ್ನು ನೀವು ಕೇಳಿರಬೇಕು— 'ದರಿದ್ರತಮ, ಬೂದಿಬಡಕ, ಸೌಂದರ್ಯಹೀನ, ಬ್ರಹ್ಮಚಾರಿ'—ಇದಕ್ಕೆ ಪಾರ್ವತಿ ಕೊಟ್ಟ ಉತ್ತರ: 'ಹೌದು, ಆತನೇ ನನ್ನ ಪತಿ'. ಪಾರ್ವತಿಯಂತೆ ಸಹಸ್ರ ವರುಷಗಳಲ್ಲದಿದ್ದರೂ, ತಪಶ್ಚರ್ಯೆಯನ್ನು ಆಚರಿಸಲು ನೀವು ಮನಸ್ಸು ಮಾಡದ ಹೊರತು ಶಿವನಂಥ ಅನೇಕರನ್ನು ನೀವು ಹೊಂದಲಾರಿರಿ. ದುರ್ಬಲ ಮಾನವರಾದ ನಾವು ಆ ರೀತಿ ಮಾಡಲು ಶಕ್ಯವಿಲ್ಲವೆಂದರೂ ನೀವು ಮಾತ್ರ ನಿಮ್ಮ ಬಾಳಿನ ಅವಧಿಯಲ್ಲಾದರೂ ಆಚರಿಸಬಹುದು.

(ಅನು: ಡಾ। ಗೊರೂರು ರಾಮಸ್ವಾಮಿ ಅಯ್ಯಂಗಾರ್)

(ಈ ಟಿಪ್ಪಣಿಗಳನ್ನು ಗಾಂಧಿ ಸ್ಮಾರಕ ನಿಧಿ ಪ್ರಕಟಿಸಿರುವ ಸಮಾಜಧರ್ಮ ಎಂಬ ಪುಸ್ತಕದಿಂದ ಆಯ್ದು ಜೋಡಿಸಲಾಗಿದೆ : ಸಂ.)

●

ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದಲೂ ಮದುವೆ ಪ್ರತಿಯೊಂದು ಮತದ ಒಳಪಂಗಡಗಳಲ್ಲಿಯೇ ಪರಿಮಿತಿಗೊಂಡು ಎಂತಹ ಅವಸ್ಥೆಗೆ ತಂದಿದೆ ಎಂದರೆ, ಮದುವೆ ಎಂದರೆ ಭ್ರಾತೃವರ್ಗದವರು ಬಂಧುವರ್ಗದವರಿಗೆ ಮೀಸಲಾಗಿ ಹೋಗಿದೆ. ಪರಿಣಾಮವಾಗಿ ಎಲ್ಲ ಬಗೆಯ ರೋಗರುಜಿನಗಳು ಮತ್ತು ಇತರ ಕೆಡಕುಗಳಿಗೂ ಸುಲಭವಾಗಿ ಪ್ರವೇಶ ದೊರೆತಿದೆ. ಮದುವೆಯ ವೃತ್ತವನ್ನು ವಿಶಾಲವಾಗಿ ಮಾಡುವುದರ ಮೂಲಕ ಮಾತ್ರ ನಾವು ಹೊಸ ಬಗೆಯ ಬೇರೆ ವಿಧವಾದ ರಕ್ತವನ್ನು ಸಂತಾನಕ್ಕೆ ತುಂಬಬಹುದು. ನಮಗೆ ಅನೇಕ ವಿಧವಾದ ಸುಧಾರಣೆಗಳು ಬೇಕು. ಇದನ್ನು ನಿರಾಕರಿಸುವಷ್ಟು ದಡ್ಡರಾರಿದ್ದಾರೆ? ಉದಾಹರಣೆಗೆ ಭರತ ಖಂಡಕ್ಕೆ ಅಂತರ್ಜಾತೀಯ ವಿವಾಹ ಪದ್ಧತಿ ಅವಶ್ಯಕ...

—ಸ್ವಾಮಿ ವಿವೇಕಾನಂದ

ಜಾತಿ ವಿನಾಶ ಮತ್ತು ಎಡಪಂಥೀಯ ಚಳುವಳಿ

ಎಸ್. ಎಸ್. ಹಿರೇಮಠ

ನಮ್ಮ ನಾಡಿನ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಮೂಲಾಗ್ರ ಬದಲಾವಣೆಯ ಅಗತ್ಯವನ್ನು ಪ್ರತಿಪಾದಿಸುವ ಎಡವಾದಿಗಳಲ್ಲಿ ಸಮಾಜವಾದಿಗಳು, ಕಮ್ಯುನಿಷ್ಟರು, ಅಂಬೇಡ್ಕರವಾದಿಗಳು ಪ್ರಮುಖರು. ಮೂರೂ ಗುಂಪುಗಳಲ್ಲಿ ಹಲವಾರು ಒಳಭೇದಗಳು, ಪಕ್ಷಪಂಗಡಗಳಿವೆ. ಕಮ್ಯುನಿಷ್ಟರಲ್ಲಿ ಪ್ರಮುಖವಾಗಿ ಸಿ.ಪಿ.ಐ., ಸಿ.ಪಿ.ಐ.ಎಂ., ಸಿ.ಪಿ.ಐ.ಎಂ.ಎಲ್. ಮತ್ತು ಅದರ ಅನೇಕ ಗುಂಪುಗಳಿವೆ. ಈ ಯಾವ ಪಕ್ಷಗಳಿಗೂ ಸೇರದ ಕಮ್ಯುನಿಷ್ಟ್ ಚಿಂತಕರಿದ್ದಾರೆ.

ಭಾರತದ ಕ್ರಾಂತಿಯ ಸಾಮಾನ್ಯ ಕಲ್ಪನೆಯಿರುವವರು ವರ್ಗನಾಶದ ಜತೆ ಜಾತಿನಾಶ ಅಗತ್ಯವೆಂದು ಭಾವಿಸುತ್ತಾರೆ. ಈ ಜಾತಿನಾಶವೆಂಬುದು ವಿವರಣೆಯೇ ಬೇಕಿಲ್ಲದ ಪ್ರಶ್ನಾತೀತ ವಾದವಾಗಿ ಬೆಳೆದುದು ಒಂದು ಚೋದ್ಯವೇ.

ವಾಮವಾದಿಗಳಲ್ಲೇ ಹೆಚ್ಚು ಸುಸಂಘಟಿತವಾಗಿ ಕೆಲಸ ಮಾಡುತ್ತಿರುವ ಕಮ್ಯುನಿಷ್ಟ್ ಪಕ್ಷಗಳು ಜಾತಿ ಸಮಸ್ಯೆಗೆ ಸಂಬಂಧಿಸಿ ಬಹುತೇಕ ಒಂದೇ ಅಭಿಪ್ರಾಯ ಹೊಂದಿವೆ. ಅದೆಂದರೆ ವರ್ಗಹೋರಾಟವೇ ಮುಖ್ಯ. ಇದಕ್ಕಾಗಿ ಶೋಷಿತ ವರ್ಗಗಳೆಲ್ಲ ಒಟ್ಟಾಗಬೇಕಿರುವುದರಿಂದ, ಜಾತಿ ಸಮಸ್ಯೆ ಅಮುಖ್ಯ. ಎಲ್ಲ ಜಾತಿಗಳ ಬಡವರು ಒಂದಾಗಬೇಕು. ಜಾತಿಗಳ ನಡುವಿನ ಸಂಘರ್ಷ ಕಾರ್ಮಿಕ, ರೈತ, ಕೂಲಿಕಾರರ ಐಕ್ಯತೆಯನ್ನು ಭಂಗಪಡಿಸುತ್ತದೆ... ಎಲ್ಲ ಕಮ್ಯುನಿಷ್ಟ್ ಪಕ್ಷಗಳ ನಿಲುವನ್ನು ಕುರಿತು ಇಲ್ಲಿ ವಿಶ್ಲೇಷಿಸುವ ಅವಕಾಶವಿಲ್ಲ. ಹೆಚ್ಚು ಜನಪ್ರಿಯವಾಗಿರುವ ಸಿ.ಪಿ.ಎಂ. ಮತ್ತು ಸಿ.ಪಿ.ಐ.ಗಳ ಧೋರಣೆಯನ್ನು ಮಾತ್ರ ಇಲ್ಲಿ ಚರ್ಚೆಗೆತ್ತಿಕೊಳ್ಳುತ್ತೇನೆ.

ಯಾವುದೇ ವಾಮಪಕ್ಷ ತನ್ನ ಕ್ರಾಂತಿಕಾರಿ ಕಾರ್ಯಚಟುವಟಿಕೆಗೆ 'ಕಾರ್ಯಕ್ರಮ' (ಪ್ರೋಗ್ರಾಂ) ಮತ್ತು ಕಾರ್ಯತಂತ್ರಗಳನ್ನು (ಪಾಲಿಸಿ) ರೂಪಿಸಿಕೊಂಡಿರುತ್ತದೆ. ೧೯೫೧ರಲ್ಲಿ ಅವಿಭಜಿತ ಕಮ್ಯುನಿಷ್ಟ್ ಪಕ್ಷ ಅಂಗೀಕರಿಸಿದ್ದ ಕಾರ್ಯಕ್ರಮವನ್ನೇ ೧೯೬೪ರಲ್ಲಿ ಸಿ.ಪಿ.ಐ.ಎಂ. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಸ್ವೀಕರಿಸಿತು. ಆಶ್ಚರ್ಯವೆಂದರೆ ಸಾಕಷ್ಟು ಬದಲಿರುವ ರಾಜಕೀಯ ಸನ್ನಿವೇಶದಲ್ಲೂ ಅದೇ ಕಾರ್ಯಕ್ರಮ ಮತ್ತು ಕಾರ್ಯತಂತ್ರಗಳನ್ನು ಈ ಪಕ್ಷಗಳು ಈಗಲೂ ಅವಲಂಬಿಸಿ ಕೊಂಡಿರುವುದು.

ವರ್ಗ ಮಿತಿ, ಜಾತಿ ಎಲ್ಲಿ?

ರಾಷ್ಟ್ರೀಯ ವಿಮೋಚನಾ ಚಳುವಳಿಯ ಸಂದರ್ಭದಿಂದ ತನ್ನ ಕಾರ್ಯಕ್ರಮದ ತಾತ್ವಿಕತೆಯನ್ನು ಪ್ರಾರಂಭಿಸುವ ಪಕ್ಷ(ಗಳು) ಉದ್ದಕ್ಕೂ 'ವರ್ಗ' ಪರಿಕಲ್ಪನೆಯ ನೆಲೆಯಲ್ಲೇ ಯೋಚಿಸುತ್ತದೆ(ವೆ). 'ಜಾತಿ' ಎಂಬ ಪದ ಆಕಸ್ಮಿಕವಾಗಿ ಒಂದೆರಡು ಕಡೆ ಪ್ರಸ್ತಾಪವಾಗುತ್ತದೆ. ಉಳಿದಂತೆ ಜಮೀನುದಾರಿ, ಭೂಮಾಲೀಕ ವರ್ಗ, ಊಳಿಗಮಾನ್ಯ, ಪಾಳೆಯಗಾರಿ ಎಂಬ ಪದಗಳನ್ನು ಬಳಸುತ್ತದೆ. ಜಮೀನುದಾರಿ ಪದ್ಧತಿ ನಾಶವಾಗಿ ಬಡವರಿಗೆ ಕೃಷಿಕಾರ್ಮಿಕರಿಗೆ ಭೂಮಿ ಹಂಚಿಕೆಯಾಗಬೇಕು ಎಂಬುದು ಅದರ ಕ್ರಾಂತಿಯ ಮುಖ್ಯ ಧ್ಯೇಯ. ಸರಳರೂಪದ ಈ 'ಕ್ರಾಂತಿ ಸೂತ್ರ' ಗ್ರಾಮೀಣ ಭಾರತದ, ತುಂಬ ಸಂಕೀರ್ಣವಾದ ವರ್ಗಸಂಬಂಧ ಮತ್ತು ಜಾತಿ ಪದ್ಧತಿಗಳನ್ನು ನಾಶ ಮಾಡಲು ಸಾಕಾಗುತ್ತದೆಯೆ? ಭಾರತದ ಕಾರ್ಮಿಕ ವರ್ಗಸ್ವಭಾವ ಈ ಕ್ರಾಂತಿಕಾರ್ಯವನ್ನು ಪೂರೈಸುವುದಕ್ಕೆ ತಕ್ಕನಾಗಿದೆಯೆ? ಕೃಷಿ ಕಾರ್ಮಿಕರಲ್ಲಿ ಅತ್ಯಂತ ಶೋಷಣೆಗೆ ಒಳಗಾದ ದಲಿತರ, ಗಿರಿಜನರ ಸಮಸ್ಯೆಗಳು ಅನನ್ಯವಾಗಿಲ್ಲವೇ? ಗ್ರಾಮೀಣ ಭಾಗದಲ್ಲಿ ವರ್ಗ ಸಂಘಟನೆ ಮತ್ತು ಹೋರಾಟದ ಸಂದರ್ಭದಲ್ಲಿ ಹುಟ್ಟಿಬರುವ ಜಾತಿ ವೈಷಮ್ಯದ ಬಗ್ಗೆ ಚಕಾರವನ್ನೇಕೆ ಎತ್ತುವುದಿಲ್ಲ? ಅನ್ನ, ಬಟ್ಟೆ, ವಸತಿಯಂಥ ವರ್ಗ ಸಮಸ್ಯೆಗಿಂತ ಕೋಮು ಉಲ್ಬಣಗೊಂಡು ಕಾರ್ಮಿಕರ ಮಧ್ಯೆ ಒಡಕುಂಟಾಗುವುದಿಲ್ಲವೇ, ಒಡಕುಂಟಾಗಿಲ್ಲವೇ? ಗುಲಾಮಶಾಹಿ, ಪಾಳೆಗಾರಿ ಕಾಲಗಳಲ್ಲಿ 'ಜಾತಿ' ಪಡೆದ ರೂಪಗಳು ಬೇರೆಯಾಗಿದ್ದಂತೆ ಈಗಿನ ಬಂಡವಾಳಶಾಹಿ ಕಾಲದಲ್ಲೂ ಅದರ ರೂಪ ಬದಲುತ್ತಿದೆಯೆ ಹೊರತು ನಾಶವಾಗುತ್ತಿಲ್ಲ ಅಲ್ಲವೇ? ಹೀಗಿದ್ದಾಗ ದೇಶ ಬಂಡವಾಳಶಾಹಿ ಮಾರ್ಗದಲ್ಲಿ ಸಾಗುತ್ತಿದೆಯೆಂದು ಹೇಳಿದರೆ ಸಾಕೆ? ಅಂದರೆ ತಾತ್ವಿಕ ಚರ್ಚೆಗೆ ಮತ್ತು ಕಾರ್ಯಕ್ರಮ ರೂಪಣೆಗೆ 'ಪಾಳೇಗಾರಿ', 'ಸಾಮಂತಶಾಹಿ' ಮೊದಲಾದ 'ವರ್ಗಕಲ್ಪನೆ'ಗಳನ್ನು ಮಾತ್ರ ಸ್ವೀಕರಿಸಿ ಪ್ರಧಾನ ಸಾಮಾಜಿಕ ಪರಿಕಲ್ಪನೆಯಾಗಿದ್ದ ಜಾತಿಯನ್ನೇ ಕೈಬಿಟ್ಟದ್ದು ಅಪರಾಧವಲ್ಲವೇ?

ಕಾರ್ಯಕ್ರಮದ ೬೩ನೇ ಅಂಶ ಧರ್ಮ–ಜಾತಿ–ರಾಜಕೀಯ ಸಮಸ್ಯೆಗಳನ್ನು ಚರ್ಚಿಸುತ್ತದೆ. ಅಲ್ಲಿ ಜಾತ್ಯತೀತತೆಯನ್ನು ಪ್ರತಿಪಾದಿಸಲಾಗಿದೆ. ಧರ್ಮ ರಾಜಕೀಯಗಳನ್ನು ಬೆರೆಸದಿರುವ ಆದರ್ಶವನ್ನಿಡಲಾಗಿದೆ. ಅಲ್ಲಿ ಜಾತಿಯ ಸೂಕ್ಷ್ಮಗಳನ್ನು ಚಿಂತನೆ ಮಾಡಿಲ್ಲ. 'ಬಹುಸಂಖ್ಯಾತರ ಧರ್ಮವಾದ ಹಿಂದೂ ಧರ್ಮದ ಮತಾಂಧ ನಾಯಕರ ಮೇಲೆ ನಮ್ಮ ದಾಳಿ ಕೇಂದ್ರೀಕರಿಸಬೇಕು' ಎಂದು ಹೇಳಿಕೊಂಡಿದ್ದರೂ ರಾಮಜನ್ಮಭೂಮಿ ಸಂದರ್ಭದಲ್ಲಿ ಅದು ಹಿಂದೂ ಕೋಮುವಾದಿಗಳ ವಿರುದ್ಧ ಯಾವ ಹೋರಾಟ ಮಾಡಿತು? ತನ್ನ ಕ್ರಾಂತಿಯನ್ನು ಸಫಲಗೊಳಿಸುವ ಸಮುದಾಯವಾದ ರೈತರು, ಮಹಿಳೆಯರು ಕಾರ್ಮಿಕರ ಜಾತಿ ಕೋಮು ಧರ್ಮಗಳ ನಂಬಿಕೆ, ಆಚರಣೆ ಸಂಸ್ಕೃತಿಗಳ ಬಗ್ಗೆ ಅದೇನನ್ನೂ

ಯೋಚಿಸಲಿಲ್ಲ. ಅನ್ನ ಮೊದಲಾದ ಮೂಲಭೂತ ಭೌತಿಕ ಅಗತ್ಯಗಳನ್ನು ಮಾತ್ರ ನೆದುರಿನಲ್ಲಿಟ್ಟುಕೊಂಡು ವರ್ಗಹೋರಾಟ ಹೇಳಿದ ಕಮ್ಯುನಿಸ್ಟ್ ಪಕ್ಷ ಉದ್ದಕ್ಕೂ ಜಾತಿ, ಧರ್ಮ ಸಂಸ್ಕೃತಿಗಳಿಗೆ ಜನ ಅನ್ನಕ್ಕಿಂತ ಹೆಚ್ಚು ಬಲವಾಗಿ ಅಂಟಿಕೊಂಡಿರುವುದನ್ನು ಗುರುತಿಸಲೇ ಇಲ್ಲ. ಕಾರ್ಯಕ್ರಮದ ೯೭ನೇ ಅಂಶದಲ್ಲಿ 'ಬಂಡವಾಳಶಾಹಿ ಪೂರ್ವ ಸಮಾಜದ ಜಾತಿಯೇ ಮೊದಲಾದ ಅವಶೇಷಗಳು ಸಾಮಾಜಿಕ ಪದ್ಧತಿಯ ಮೂಲಕ ಹಳ್ಳಿಗಳನ್ನು ಪುರಾತನ ಹಿಂದುಳಿದ ಸ್ಥಿತಿಗೆ ಕಟ್ಟಿ ಹಾಕುತ್ತವೆ. ಆದರೆ ಸಾಮಾಜಿಕ ಪದ್ಧತಿಯಲ್ಲಿ ಅಂತಹ ತೀವ್ರ ಸುಧಾರಣೆಯನ್ನು ತರುವ ಕಾರ್ಯವು ಕಾರ್ಮಿಕ ಕ್ರಾಂತಿಯನ್ನು ಪೂರ್ಣಗೊಳಿಸುವುದರ ಜತೆ ನಿಕಟವಾಗಿ ಬಂಧಿಸಲ್ಪಟ್ಟಿದೆ. ಈ ವ್ಯವಸಾಯ ಕ್ರಾಂತಿಯು ನಿಜವಾಗಿಯೂ ಪ್ರಜಾಪ್ರಭುತ್ವ ಕ್ರಾಂತಿಯ ತಿರುಗಣೆಯಾಗಿದೆ ಎನ್ನಲಾಗಿದೆ. ಈ ಪಕ್ಷ ತಿಳಿದಿರುವಂತೆ ಜಾತಿ ಬರೀ ಅವಶೇಷವೇ? ಇದೊಂದೇ ವಾಕ್ಯದ ಮೂಲಕ ಜಾತಿ ಸಮಸ್ಯೆಯ ಸಮಸ್ತವನ್ನು ಓದುಗ ಅರ್ಥ ಮಾಡಿಕೊಳ್ಳಬೇಕು. ೧೯೮೨ರಲ್ಲಿ ವಿಜಯವಾಡಾ ಅಧಿವೇಶನದಲ್ಲಿ ಪಕ್ಷ ಕಾರ್ಮಿಕ ಸಂಘಗಳು ಮತ್ತು ಕಿಸಾನ ಸಭಾದಂತ ಸಾಮೂಹಿಕ ಸಂಘಟನೆಗಳು ಹರಿಜನರ ವಿಶೇಷ ಸಮಸ್ಯೆಗಳಿಗೆ ಗಮನ ಕೊಡುತ್ತಿಲ್ಲ; 'ಗಿರಿಜನರೂ ಕೂಡ ಹರಿಜನರಂತೆ ಈಗ ಕಾಂಗ್ರೆಸ್ (ಐ) ಪಾರ್ಟಿಯ ಕಾಯ್ದಿಟ್ಟ ಶಕ್ತಿಯಾಗಿಯೇ ಉಳಿದಿದ್ದಾರೆ'; 'ಇಂದು ಬಹುಸಂಖ್ಯಾತ ಮುಸಲ್ಮಾನರು, ಸಾಮ್ರಾಜ್ಯವರ್ಗ ಮತ್ತು ಜನತಾಂತ್ರಿಕ ಹೋರಾಟಗಳಿಂದ ದೂರ ಉಳಿದಿದ್ದಾರೆ' ಎಂದು ಹೇಳಿಕೊಂಡಿದೆ. ('ರಾಜಕೀಯ ನಿರ್ಣಯ') ಈ ಆತ್ಮವಿಮರ್ಶೆ ಆರೋಗ್ಯಕರವಾದರೂ ಇದಕ್ಕೆ ಕಾರಣಗಳನ್ನು ಹುಡುಕಿಕೊಳ್ಳು ವುದಿಲ್ಲ. ೧೯೯೪ರಲ್ಲಿ ಸಿ.ಪಿ.ಎಂ.ನ ಪಿ. ರಾಮಚಂದ್ರನ್ ರೈತ, ಕೃಷಿ ಕೂಲಿಕಾರರ ಬಗ್ಗೆ ಹೇಳುತ್ತ 'ಹರಿಜನ ಗಿರಿಜನರ ಮಧ್ಯೆ ನಮ್ಮ ಸಂಘಟನೆ ಏಕೆ ಬೆಳೆಯುತ್ತಿಲ್ಲ, ಯಾಕೆ ಸಮಾಜದ ಈ ಕೆಳಸ್ತರದಲ್ಲಿರುವ ಜನರನ್ನು ನಮ್ಮ ಸಂಘಟನೆಗಳೊಳಗೆ ಸೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಎಂದು ಪ್ರಶ್ನಿಸಿಕೊಳ್ಳುತ್ತಾರೆ. ('ಹೊಸ ತಿಳಿವು ಮೂಡಲಿ, ಕೆಲಸದ ವಿಧಾನ ಬದಲಾಗಲಿ' –೯೪) 'ಹರಿಜನ ಗಿರಿಜನರ ಸಾಮಾಜಿಕ ಪ್ರಶ್ನೆಗಳನ್ನು ಎತ್ತಿ ಹೋರಾಡುವಾಗ ಆರ್ಥಿಕ ಪ್ರಶ್ನೆಗಳನ್ನೆತ್ತಿ ಹೋರಾಡುವುದಷ್ಟೇ ಪ್ರಮುಖವಾಗಿದೆ. ಈಗ ಈ ಸಾಮಾಜಿಕ ಪ್ರಶ್ನೆಗಳನ್ನು ಕೆಲವು ಜಾತೀಯ ಸಂಘಟನೆಗಳು ಎತ್ತಿಕೊಳ್ಳುತ್ತಿವೆ' ಎನ್ನುತ್ತಾರೆ. (ಅದೇ)

ಭಾರತದ ಒಟ್ಟು ಚಾರಿತ್ರಿಕ ಗ್ರಹಿಕೆಯಲ್ಲೇ ಮೂಲಭೂತ ಸಮಸ್ಯೆಯಿರುವುದರಿಂದ ಕಮ್ಯುನಿಷ್ಟರು ಬೇರೆ ಏನನ್ನೂ ಮಾಡಲಾರರು.

ಸಿ.ಪಿ.ಐ.ನ ಎಸ್. ಜಿ. ಸರದೇಸಾಯಿ ಈ ದೃಷ್ಟಿಯಿಂದ ಸ್ವಲ್ಪ ವಾಸಿ. ಅವರು ಭಾರತದ ಚರಿತ್ರೆಯನ್ನು ದುಡಿಯುವ ಜನತೆಯ ಮೌಖಿಕ ಪರಂಪರೆಯಿಂದಲ್ಲ, ಲಿಖಿತ ವೈದಿಕ–ಅವೈದಿಕ ವಾಙ್ಮಯದ ಆಧಾರದಲ್ಲಿ ಗ್ರಹಿಸಲು ಗಂಭೀರವಾಗಿ ಯತ್ನಿಸುತ್ತ ಬಂದವರು. ಸಿ.ಪಿ.ಐ.ಎಂ., ಅಂಬೇಡ್ಕರ್ ಅವರ ಹೆಸರನ್ನು ಎತ್ತಲು ಕೂಡ ಹಿಂಜರಿಯುತ್ತಿದ್ದರೆ, ಸರದೇಸಾಯಿ 'ಗ್ರಾಮೀಣ ಭಾಗದ ವರ್ಗ ಹೋರಾಟ ಮತ್ತು ಜಾತಿ ಸಂಘರ್ಷದ' ಕುರಿತು ಪುಸ್ತಿಕೆ ಬರೆದರು. ಅಂಬೇಡ್ಕರ್ ಮತ್ತು ದಲಿತ ಪ್ಯಾಂಥರ್ಸ್ ಬಗ್ಗೆ ವಿಶ್ಲೇಷಣೆ ನೀಡಿ ದರು. ಆದರೆ ಇವರೂ ಕೂಡ ಕೃಷಿಕರ ವರ್ಗ ಸಮೈಕ್ಯತೆಯ ದೃಷ್ಟಿಯಿಂದಲೆ ಸಮಸ್ಯೆಯನ್ನು ನೋಡುತ್ತಾರೆ. ಗ್ರಾಮೀಣ ವರ್ಗಹೋರಾಟದಲ್ಲಿ ಜಾತಿ ಶ್ರೇಣೀಕರಣದ ವಿರುದ್ಧ ಹೋರಾಟವನ್ನು ಹೇಗೆ ಬೆಸೆಯಬೇಕೆಂಬ ಚಿಂತೆ ಕಾಡಿದೆ. ಅದು ಸಂಕೀರ್ಣ ಮತ್ತು ಕಷ್ಟಕರ ಸಮಸ್ಯೆ. 'ಪಟ್ಟಣದ ಕಾರ್ಮಿಕರ ಮಧ್ಯೆಯೂ ಜಾತಿ ಸಮಸ್ಯೆಯಿದೆ, ಅದು ಅಲ್ಪಸಂಖ್ಯಾತರ ಸಮಸ್ಯೆಯ ಭಾಗವೂ ಆಗಿದೆ. (ಕ್ಲಾಸ್ ಸ್ಟ್ರಗಲ್ ಎಂಡ್ ಕಾಸ್ಟ್ ಕಾನ್‌ಫ್ಲಿಕ್ಟ್ ಇನ್ ರೂರಲ್ ಏರಿಯಾಸ್:೧೯೭೯) ಎರಡು ವರ್ಷಗಳಲ್ಲಿ ದೇಶದಲ್ಲಿ ೨೩೦೦೦ ಹರಿಜನ ದೌರ್ಜನ್ಯ ಪ್ರಕರಣ ನಡೆದವು; ಸಾವಿರಾರು ಹರಿಜನರು ಕೊಲೆಯಾದರು; ಜೀವಂತ ಸುಡಲ್ಪಟ್ಟರು, ಪ್ರತಿ ದಂಗೆ ಪ್ರಕರಣದಲ್ಲಿ ಹರಿಜನರ ವಿರುದ್ಧ ಉಳಿದೆಲ್ಲ ಜಾತಿ ಜನ ಒಂದಾಗುತ್ತಿದ್ದರು. ಇದನ್ನು ಸರ್‌ದೇಸಾಯಿ 'ಸೋದರನ ವಿರುದ್ಧ ಸೋದರ' ಎಂದು ಅರ್ಥೈಸುತ್ತಾರೆ. ಕೃಷಿ ಕಾರ್ಮಿಕರ ಐಕ್ಯತೆಗೆ ಇದು ಹಾನಿಕಾರಕ ಎಂದು ತಿಳಿಯುತ್ತಾರೆ. ಕೃಷಿ ಸಮಸ್ಯೆಯ ಜತೆ ಜಾತಿ ಸಮಸ್ಯೆಯನ್ನು ಸೇರಿಸಿ ಹೋರಾಡಬೇಕೆಂದು; ಜಾತಿ ಪಡೆದಿರುವ ಹೊಸ ಆಯಾಮವನ್ನು ಅಧ್ಯಯನ ಮಾಡಬೇಕೆಂದು ಸೂಚಿಸುತ್ತಾರೆ. ಜಾತಿ ಬರಿ ಅವಶೇಷವೆಂದು ಹೇಳುವ ಸಿ.ಪಿ.ಎಂ.ನ ನಿಲುವಿಗೂ ಸಿ.ಪಿ.ಐ.ನ ಸರದೇಸಾಯಿಯವರ ವಾದಕ್ಕೂ ಇರುವ ಅಂತರವನ್ನು ಗಮನಿಸಿ. ಜಮೀನುದಾರರು ವರ್ಗ ಸಹಕಾರವನ್ನು ಒಡೆಯುವುದಕ್ಕೆ ಜಾತಿಯನ್ನು ಅಸ್ತ್ರವಾಗಿ ಬಳಸುತ್ತಾರೆಂದು ಅವರು ಆಪಾದಿಸುತ್ತಾರೆ. ಪಾರ್ಟಿಯ ಒಳಗೆ ಬೊಡ್ಡೆಯಿಂದ ತುದಿಯವರೆಗೆ ಈ ಬಗ್ಗೆ ಗಂಭೀರ ಚರ್ಚೆ ಆಗಬೇಕೆನ್ನುತ್ತಾರೆ. ಬರಿ ಆರ್ಥಿಕ ಬೇಡಿಕೆ ಈ ಸಮಸ್ಯೆ ಪರಿಹರಿಸದು ಎಂಬುದು ಅವರ ಸರಿಯಾದ ನಿಲುವು. ಪಾರ್ಟಿ ಈ ವಿಷಯವನ್ನು ಸಾಕಷ್ಟು ಗಮನಿಸಿಲ್ಲ ಎಂದು ಅವರ ಗ್ರಹಿಕೆ.

ಸರ್‌ದೇಸಾಯಿಯವರ ಪಶ್ಚಾತ್ತಾಪದ ದೃಷ್ಟಿ ಮೂಲಭೂತ ಪರಿಹಾರಕ್ಕಾಗಿ ಪ್ರಾಮಾಣಿಕವಾಗಿ ಕೊರಗುವ ಕಾಣ್ಕೆ. ಆದರೆ ಇದಿಷ್ಟರಿಂದ ಆಗುವುದೇನು? ೧೯೭೦ರಿಂದೀಚೆಗೆ ಮುಂಬೈ ಬಟ್ಟೆ ಗಿರಣಿ ಕಾರ್ಮಿಕರಲ್ಲಿ ಅಸ್ಪೃಶ್ಯತೆ ಇದ್ದು, ಪರಸ್ಪರ ಹೊಡೆದಾಡಿದ ಬಗ್ಗೆ, ಪ್ರತ್ಯೇಕ ಚಾಳುಗಳಲ್ಲಿ ಜನ ಈಗಲೂ ವಾಸವಾಗುತ್ತಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಜ್ಯೋತಿಬಾ ಫುಲೆ, ಅಂಬೇಡ್ಕರ್ ಅವರಂಥ ಹೋರಾಟಗಾರರ ಪ್ರದೇಶದಲ್ಲಿ ಹುಟ್ಟಿಬಂದ ಕಮ್ಯುನಿಷ್ಟ್ ಸರ್‌ದೇಸಾಯಿ ಇಷ್ಟಾದರೂ ಹೇಳುವ ಸ್ಥಿತಿಯುಂಟಾಯಿತು. ಆದರೆ ಇಂಥ ಪ್ರಯತ್ನಗಳಿಲ್ಲದ ಕೇರಳದ ಸಿ.ಪಿ.ಎಂ.ನ ನಂಬೂದಿರಿಪಾಡ್ ಜಾತಿ ಸಮಸ್ಯೆಯನ್ನು ಅನ್ವಯಿಕ ನೆಲೆಯಲ್ಲಿ ನೋಡಲಾರರು. ಸ್ವಾತಂತ್ರ್ಯ ಪೂರ್ವಕಾಲದ ಕಮ್ಯುನಿಷ್ಟ್ ಚಳುವಳಿಗಾರರು ಹರಿಜನ, ಕೆಳಜಾತಿ ಜನ, ಅಲ್ಪಸಂಖ್ಯಾತರುಗಳ ಸಮಸ್ಯೆಯನ್ನು ಮುಟ್ಟದೆಯಿದ್ದುದರಿಂದ ಅವರು ಸಾಮೂಹಿಕ ಚಳುವಳಿಗಳಿಂದ ದೂರ ಉಳಿದರು; ಇದು ಅವರ ಪ್ರತ್ಯೇಕ ಸಂಘಗಳಿಗೆ ದಾರಿ ಮಾಡಿಕೊಟ್ಟಿತೆಂದು ಸರ್‌ದೇಸಾಯಿ ಒಪ್ಪಿಕೊಳ್ಳುತ್ತಾರೆ. ಸರ್‌ದೇಸಾಯಿಯವರ ಪ್ರಾಮಾಣಿಕ ಕಳಕಳಿ ಮೆಚ್ಚುವಂಥದು. ಅವರು ಹರಿಜನರ ಸಮಸ್ಯೆಯನ್ನು ಪ್ರತ್ಯೇಕವಾಗಿ ಸ್ವೀಕರಿಸಿ, ಎಲ್ಲ ಹಂತದ ಕಾರ್ಯಕ್ರಮಗಳಲ್ಲಿ ಸೇರಿಸಬೇಕೆಂದು ಆಗ್ರಹಿಸಿದರು. 'ಲೀಗ್ ಫಾರ್ ದಿ ಅಬಾಲಿಶನ್ ಆಫ್ ಅನ್‌ಟಚಬಲಿಟಿ' ಎಂಬ ಸಂಸ್ಥೆಯನ್ನು ಹುಟ್ಟು ಹಾಕುವ ವಿಚಾರ ಮಂಡಿಸುತ್ತಾರೆ. ಆದರೆ ಸಿ.ಪಿ.ಐ.ನಲ್ಲಿ ಅವರದು ಒಂಟಿದನಿ. ಜಾತಿಪದ್ಧತಿಯನ್ನು ಮೂಲಭೂತ ಸೈದ್ಧಾಂತಿಕ ಪ್ರಶ್ನೆಯಾಗಿ ಸ್ವೀಕರಿಸದೇ ಇರುವಲ್ಲಿ ಅವರ ಪಕ್ಷದ ವೈಫಲ್ಯವಿದೆ. ಕಮ್ಯುನಿಷ್ಟರ ಈ ಕೊರತೆಯನ್ನು ಕಂಡೇ ಶರದ ಪಾಟೀಲ ಪಾರ್ಟಿ ಬಿಟ್ಟು 'ಸತ್ಯಶೋಧಕ ಕಮ್ಯುನಿಷ್ಟ್' ಪಕ್ಷ ಕಟ್ಟಿದರು. ('ಸತ್ಯಶೋಧಕ ಸಮಾಜ' ಫುಲೆಯವರು ಸ್ಥಾಪಿಸಿದ್ದ ಸಂಘ) ಫುಲೆ, ಅಂಬೇಡ್ಕರ್ ಅವರು ಹುಟ್ಟುಹಾಕಿದ ಚಳುವಳಿ ಈಗಲೂ ಏಳುಬೀಳಿನ ನಡುವೆ ಮಹಾರಾಷ್ಟ್ರದಲ್ಲಿ ಮುಂದುವರೆದಿದೆ. ಇದೇ ಸ್ಥಿತಿ ಕರ್ನಾಟಕದ ದಲಿತ ಸಂಘರ್ಷ

ಸಮಿತಿಯಲ್ಲಿ ಬೇರೆ ರೂಪದಲ್ಲಿದೆ. ಆದರೆ ಕಮ್ಯುನಿಷ್ಟರಿಗೆ ಬುದ್ಧಿ ಭೆಟ್ಟಿಯಾದಂತೆ ಕಾಣುವುದಿಲ್ಲ. ಜಾತಿ ಸಮಸ್ಯೆಯ ಬಗ್ಗೆ ಕಾಳಜಿಯಿಲ್ಲದಿರುವುದರಿಂದ ಭಾರತದ ಕಮ್ಯುನಿಷ್ಟರ ಕ್ರಾಂತಿಕಾರಿ ಕಾರ್ಮಿಕ ವರ್ಗದೃಷ್ಟಿಕೋನ ಮೇಲ್ಜಾತಿ ಪರವಾಗಿದೆ. ಹಾಗಾಗಿ ಕ್ರಾಂತಿ ವಿರೋಧಿಯಾಗಿದೆ. ದಲಿತವಾದಿ ಕಮ್ಯುನಿಷ್ಟ್ ಕಣ್ಣೋಟದಿಂದ ಮಾತ್ರ ಕ್ರಾಂತಿಯ ಪರ್ಯಾಯ ಸಾಧ್ಯವಾಗಬಹುದು.

ವೈದಿಕಾರ್ಯರ ಆಗಮನದ ಮೊದಲೇ ದ್ರಾವಿಡ ಬುಡಕಟ್ಟು ಸಂಸ್ಕೃತಿಯ 'ಕುಲ' ಪದ್ಧತಿಯಿಂದ ಜಾತಿ, ಅವಿಭಕ್ತ ಕುಟುಂಬ, ಹಳ್ಳಿಗಳ ರಚನೆಯಾಗಿದೆ. ಆರ್ಯ ವೈದಿಕರು ಅದನ್ನು ವರ್ಣಾಶ್ರಮ ತತ್ವದ ಮೂಲಕ ಶ್ರೇಣೀಕರಣಕ್ಕೆ, ಶೋಷಕ ವ್ಯವಸ್ಥೆಗೆ ಅಳವಡಿಸಿದರು. ಸಹಸ್ರಾರು ವರ್ಷಗಳಿಂದ ಉಳಿದುಬಂದಿರುವ ಈ ಸ್ಥಿತಿಯನ್ನು ನಿರ್ಲಕ್ಷಿಸುವುದರಿಂದ, ಸರಳಗೊಳಿಸುವುದರಿಂದ ಕ್ರಾಂತಿಗೆ ಅಪಚಾರ ಮಾಡಿದಂತಾಗುತ್ತದೆ.

ಜಾತಿನಾಶದ ಘೋಷಣೆಯ ಚರಿತ್ರೆ ಬುದ್ಧನಷ್ಟು ಹಿಂದಿದೆ. ಅವನಿಂದ ಮೊದಲುಗೊಂಡು ಆಧುನಿಕ ಕಾಲದವರೆಗೆ ಹೀಗೆ ಪ್ರಯತ್ನಿಸಿದವರ ವಾದಗಳು 'ಧರ್ಮ'ಗಳಾಗಿವೆ; ಜಾತಿಯ ಚೌಕಟ್ಟಿನ ಒಳಗೆ ಅಥವಾ ಹೊರಗೆ ಉಳಿದುಬಂದಿವೆ. ಇದರಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳೂ ಸೇರುತ್ತವೆ. ಮೇಲೆ ಹೇಳಿದಂತೆ ಜಾತಿ ವ್ಯವಸ್ಥೆಯನ್ನು ವರ್ಣಾಶ್ರಮದ ನೆಲೆಯಲ್ಲಿ ಪ್ರತಿಪಾದಿಸಿದ ಮತ್ತು ಬೆಂಬಲಿಸಿದ 'ವೈದಿಕಶಾಹಿ' ಆಳುವ ವರ್ಗಗಳ ಹಿತಾಸಕ್ತಿಗೆ ಅನುಕೂಲವಾಗಿತ್ತು. ಹಾಗಾಗಿ ಅದೇ ಗೆದ್ದಿತು. ಅದರ ಆಧುನಿಕ ರೂಪ ಬಿಜೆಪಿ ಕೇಂದ್ರದ ಅಧಿಕಾರ ಹಿಡಿವ ಮಟ್ಟಿಗೆ ಸಫಲವಾಗುತ್ತಿದೆ. ಮತಾಂತರದ ಮೂಲಕ ಜಾತಿಪದ್ಧತಿಗೆ ಪೆಟ್ಟುಕೊಟ್ಟ ಧರ್ಮಗಳು ವ್ಯವಸ್ಥೆಗೆ ವಿರೋಧವಿದ್ದುದರಿಂದ ಗೆಲ್ಲಲಿಲ್ಲ. ಅಲ್ಲದೇ ಅವು ಪ್ರತಿಜಾತಿ ಘಟಕದ ಸಂಸ್ಕೃತಿಯ ವಿರುದ್ಧ ಪರ್ಯಾಯ ಸಂಸ್ಕೃತಿಯನ್ನೇ ಹುಟ್ಟುಹಾಕುತ್ತಿದ್ದವು.

ಮೇಲ್ಜಾತಿ ಸಂಸ್ಕೃತಿ ಲಿಖಿತ ರೂಪದಲ್ಲಿ ಉಳಿಯಿತು. 'ಧರ್ಮ'ದ ಗೌರವಪೂರ್ಣ ಬೆಂಬಲ ಅದಕ್ಕಿತ್ತು. ಆದರೆ ಕೆಳಜಾತಿಗಳ ಶೋಷಿತರಿಗೆ ಲಿಖಿತ ಪರಂಪರೆಯಾಗಲಿ, ಧರ್ಮಗಳ ಬೆಂಬಲವಾಗಲಿ ಇರಲಿಲ್ಲ. ಅವು ತಮ್ಮರಕ್ಷಣೆಯ ತಂತ್ರಗಳನ್ನು ಬೇರೆ ವಿಧದಲ್ಲಿ ರೂಢಿಸಿಕೊಂಡವು. 'ಜಾತಿನಾಶ'ವೆಂದಾಗ ತಮ್ಮ ಧರ್ಮವಲ್ಲ, ಲಿಖಿತ ಪರಂಪರೆಯಲ್ಲ ಎಂದು ತಿಳಿಯುವವರಿದ್ದಾರೆ. ಜಾತಿಯಿಂದಾಗಿ ಅವಮಾನ, ಕೀಳರಿಮೆ ಅನುಭವಿಸುವ ವಿದ್ಯಾವಂತರಂತೂ 'ಹಾಳಾಗಿ ಹೋಗಲಿ ಜಾತಿ' ಎನ್ನುವವರೇ. ಸರಿ, ಎಲ್ಲರಿಗೂ ಜಾತಿ ನಾಶವಾಗಬೇಕಿದೆ. ಆದರೆ ಅದು ನಾವೆಲ್ಲ ತಿಳಿದಿರುವಷ್ಟು ಸುಲಭವಾಗಿ ನಾಶವಾಗಬಲ್ಲದೇ? ನಾಶವಾಗಬೇಕೆ? ಅದರಿಂದುಂಟಾದ ಸಮಾಜ, ಸಂಸ್ಕೃತಿ ಪರಂಪರೆಯೂ ನಾಶವಾಗಬೇಕೆಂದು ಹೇಳಿದ್ದಂತಾ ಗುವುದಿಲ್ಲವೇ? ಈ ಸಮಾಜ, ಸಂಸ್ಕೃತಿಯಲ್ಲಿ ಉಳಿಯಬೇಕಾದ ಇತ್ಯಾತ್ಮಕ ಅಂಶಗಳೇ ಇಲ್ಲವೇ? ಲಿಖಿತ ಪರಂಪರೆ ಮತ್ತು ಧರ್ಮಗಳ ಬೆಂಬಲವಿರುವ ಮೇಲ್ಜಾತಿಯ 'ಜಾತಿ' ನಾಶವಾಗುವುದೆಂದರೇನು? ಜಾತಿಯ ಎಲ್ಲ ಅಪಾಯ ಗಳನ್ನು ಗಮನದಲ್ಲಿಟ್ಟುಕೊಂಡೇ ಇಂಥ ಪ್ರಶ್ನೆ ಕೇಳಿಕೊಳ್ಳಬೇಕಿದೆ.

'ಉಪಸಂಸ್ಕೃತಿ ಅಥವಾ ಸಬಾಲ್ಟೆನ್ ಅಧ್ಯಯನಗಳು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳ ಚಿಂತನಾಕ್ರಮವನ್ನೇ ಬದಲಿಸುತ್ತಿರುವ ಹಿನ್ನೆಲೆಯಲ್ಲಿ ಜಾತಿಯ ಕುರಿತ ಆಲೋಚನೆ ಸೂಕ್ಷ್ಮವಾಗಬೇಕಿದೆ. ದ್ವಂದ್ವಮಾನ ಭೌತಿಕವಾದ, ಚಾರಿತ್ರಿಕ ಭೌತಿಕವಾದಗಳು ಮಾರ್ಕ್ಸ್ ಹೇಳುವ ವೈಜ್ಞಾನಿಕ ತತ್ವಜ್ಞಾನದ ದ್ವಿಧಾನೆಲೆಗಳು. ಒಂದು, ಪ್ರಕೃತಿಯ ಬದಲಾವಣೆಗಳನ್ನು, ಇನ್ನೊಂದು ಸಮಾಜದ ಚಲನಶೀಲತೆಯನ್ನು ವಿಶ್ಲೇಷಿಸುತ್ತವೆ. ಭಾರತಕ್ಕೆ ಇವನ್ನು ಅನ್ವಯಿಸಿದಾಗ 'ಮೊಟ್ಟಮೊದಲು ನಾಶವಾಗಬೇಕಾದುದು ಜಾತಿಯಲ್ಲ, ಧರ್ಮ' ಎಂದು ವಾದಿಸ ಬೇಕಾಗುತ್ತದೆ. ದ್ವಂದ್ವಮಾನ ಭೌತಿಕವಾದದ ನಿಕಷಕ್ಕೆ ಒಡ್ಡಿದರೆ ಭಾರತದ ಯಾವ ಧರ್ಮವೂ ಉಳಿಯಲಾರದು. ಉಳಿಯುವುದಾದರೆ ಲೋಕಾಯತ, ಚಾರ್ವಾಕ, ಯೋಗ, ತಂತ್ರ, ಜೈನ, ಬೌದ್ಧರ ಕೆಲವು ಅಂಶಗಳು ಮಾತ್ರ. ಧರ್ಮವನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡು ಸಫಲವಾಗುತ್ತಿರುವ ಬಿ.ಜೆ.ಪಿ. ಕಣ್ಣೆದುರೇ ಇರುವಾಗ ದ್ವಂದ್ವಮಾನ ಭೌತವಾದದ ಭಾರತೀಯ ಅನ್ವಯಿಕತೆಯ ಅಗತ್ಯ ತುಂಬ ಇತ್ತೆಂದು ಗೊತ್ತಾಗಬೇಕಿತ್ತು. ಆದರೆ ಈ ಧೈರ್ಯ ಕಮ್ಯುನಿಷ್ಟರಿಗಿರಲಿಲ್ಲ. ಸ್ವತಃ ಅವರೇ ಶಿಖೆಗಡ್ಡ ಬಿಟ್ಟು, ಪಟಗಾ ಸುತ್ತಿದವರು; ಜನಿವಾರ ಹಾಕಿಯೋ, ಹಾಕದೋ ಜಾತಿಯಲ್ಲೇ ಮದುವೆಯಾಗುತ್ತ, ಧಾರ್ಮಿಕ ಪದ್ಧತಿಯನ್ನು ಅನುಸರಿಸುತ್ತಿರುವವರು, ಜಾತಿ ಓಟುಗಳ ಲೆಕ್ಕಾಚಾರದಲ್ಲಿ ಚುನಾವಣೆ ಎದುರಿಸುತ್ತಿರುವವರು; ಜಾತಿ ಪ್ರಶ್ನೆ ಎತ್ತದೆ ವರ್ಗನಾಶದ ಚರ್ಚೆಯಲ್ಲಿ ತೂಕಡಿಸುವವರು.

'ಸಮಾಜಶಾಸ್ತ್ರಜ್ಞ'ರ ಪ್ರಕಾರ ಭಾರತದಲ್ಲಿ ಜಾತಿ ಘಟಕಗಳೇ 'ಸಮಾಜ'ದ ಎಲ್ಲ ಲಕ್ಷಣಗಳನ್ನು ಒಳಗೊಂಡಿವೆ. ಹೀಗಿರುವಾಗ ಯಾವ ಸಾಮಾಜಿಕ ಪರ್ಯಾಯವನ್ನು ಮುಂದಿಡದೆ 'ಜಾತಿನಾಶ' ವಾಗಬೇಕೆಂದಾಗ ಭಾರತದ ಇಡೀ 'ಹಿಂದು' ಸಮಾಜವೇ ನಾಶವಾಗ ಬೇಕೆಂದು ಹೇಳಿದಂತಾಗುತ್ತದೆ. ಇಲ್ಲಿ ಹಿಂದು ಎಂಬ ಪದವನ್ನು ಮೂಲಭೂತವಾದಿಗಳ ಅರ್ಥದಲ್ಲಿ ಬಳಸಿಲ್ಲ. ಅಂಬೇಡ್ಕರ್ ಅವರಂತೂ ದಲಿತರ ದೃಷ್ಟಿಕೋನದಿಂದ 'ಹಿಂದೂ ಸಮಾಜ' ನಾಶವಾಗಲೇಬೇಕೆಂದರು. ಆದರೆ ಹಿಂದೂ ಸಮಾಜದಲ್ಲಿ ದಲಿತರೂ ಸೇರುತ್ತಾರೆ, ವಿಸ್ಮೃತಿಗೀಡಾದ ಅವರ ಸಂಸ್ಕೃತಿಯಲ್ಲಿ ಭವ್ಯವಾದುದೂ ಇದೆ; ನಮ್ಮ ಸಮಾಜದಲ್ಲಿ ಹಿಂದೂವಲ್ಲದ ಅನೇಕ ಒಳಸೆಲೆಗಳಿವೆ ಎಂಬ ವಿಚಾರ ದೂರವುಳಿಯುತ್ತದೆ. (ದಲಿತರು, ಹಿಂದೂಗಳಲ್ಲ; ಇದರಂತೆ, ಲಿಂಗಾಯತರು, ಬೌದ್ಧರು, ಜೈನರು, ಶಿಖ್ಖರು, ಹಿಂದೂಗಳಲ್ಲ ಎಂಬ ವಾದವಂತೂ ಇದ್ದೇ ಇದೆ) ಭಾರತದ ಸಮಾಜ ರಚನೆಯನ್ನು ಕಮ್ಯುನಿಷ್ಟರಿಗಿಂತ ಹೆಚ್ಚು ವಸ್ತುನಿಷ್ಠವಾಗಿ ಅರಿಯಲು ಯತ್ನಿಸಿದ ಲೋಹಿಯಾ ಅವರೂ ಕೂಡ 'ಜಾತಿನಾಶ'ದ ಅಗತ್ಯವನ್ನು ಕಂಡರು. ಪೆರಿಯಾರ್ ಅವರು ದ್ರಾವಿಡವಾದ, ನಾಸ್ತಿಕ ವಾದಗಳ ಮೂಲಕ ಉತ್ತರದ ಪರಂಪರಾಗತ ಸಾಂಸ್ಕೃತಿಕ ಯಜಮಾನಿಕೆಯನ್ನು ಎದುರಿಸುವ ದಂಡನಾಯಕನಾದರು. ಹಿಂದೂ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆನ್ನುತ್ತಿದ್ದ ಗಾಂಧಿ ಜಾತಿವ್ಯವಸ್ಥೆಗೆ ಪೆಟ್ಟು ಕೊಡಬಹುದಾದ ಅಂತರ್‌ಜಾತಿ ವಿವಾಹಕ್ಕೆ ಒತ್ತುಕೊಟ್ಟರು. 'ಸುಧಾರಣಾವಾದಿ'ಗಳ ಕಾರ್ಯ ಚಟುವಟಿಕೆಗಳು ಮೇಲ್ಜಾತಿಗಳ ಸಾಂಪ್ರದಾಯಿಕ ಆಚರಣೆಗಳಿಗೆ ವಿರೋಧವಾದವು; ಆದರೆ ಕೆಳಜಾತಿಗಳ ಸಮಸ್ಯೆಗಳಿಂದ ದೂರವಿದ್ದವು. ಈ ಸಂಕೀರ್ಣಾನುಭವಗಳು ಆಧುನಿಕತೆಗೆ ಪ್ರವೇಶಿಸುತ್ತಿದ್ದ ವಸಾಹತುಶಾಹಿ ಮತ್ತು ನಂತರದ ಭಾರತದಲ್ಲಿ 'ಪ್ರಜ್ಞಾವಂತ' ರಿಂದ ಹುಟ್ಟುತ್ತಿದ್ದ ವಾದ–ವಿವಾದ; ನಡೆಯುತ್ತಿದ್ದ ಕ್ರಿಯೆಗಳೆಲ್ಲ 'ಮೇಲಿನಿಂದ ಕೆಳಗೆ' ಹರಿದು ಬರುವ ಲಕ್ಷಣದವೆಂಬುದನ್ನು ಸೂಚಿಸುತ್ತವೆ.

ವಿಚಿತ್ರವೆಂದರೆ ರಾಷ್ಟ್ರೀಯ ಚಿಂತಕರು ತಮ್ಮ ಸಮಾಜವನ್ನು ಬ್ರಿಟೀಷ್ ರಷ್ಟಾದರೂ ಸಹನೆಯಿಂದ, ವಸ್ತು ನಿಷ್ಠತೆಯಿಂದ ಅರಿಯಲು ಯತ್ನಿಸದಿರುವುದು. ಹಾಗಾಗಿ ವೈರುಧ್ಯಾತ್ಮಕ ಹೇಳಿಕೆ, ಚಟುವಟಿಕೆಗಳಿಂದ

ಗೋಜಲು ಗೊಂದಲಗಳುಂಟಾಗಿ, ಸ್ವಾತಂತ್ರ್ಯೋತ್ತರ ಭಾರತದ ಚಿಂತನೆಯೂ ಮುಂಗಾಣದಾಯಿತು. ನಾವೀಗ ಪ್ರಗತಿಪರ ಚಳುವಳಿಗಳಿಗೆ ಯಾವುದನ್ನು ಕೈದೀವಿಗೆಗಳೆಂದು ತಿಳಿದಿರುವೆವೋ, ಆ ಸಿದ್ಧಾಂತಗಳೆಲ್ಲ ರಾಷ್ಟ್ರೀಯ ವಿಮೋಚನಾ ಚಳುವಳಿಯ ಸಂದರ್ಭದ ಸೃಷ್ಟಿಗಳೆಂಬುದನ್ನು ಮರೆಯಬಾರದು. ಅದಾಗಿ ಅರ್ಧಶತಕ ಸಂದಿದೆ. ಇಂದಿನ ಸವಾಲುಗಳು ಬೇರೆ. ಪ್ರತಿಯೊಂದು ಜಾತಿ, ಬುಡಕಟ್ಟಿನಲ್ಲಿಯೂ ವಿದ್ಯಾವಂತರು ಉದಯವಾಗಿದೆ. ಆಂತರಿಕ ಚಲನೆಯ ಸ್ವರೂಪ ಸ್ಪಷ್ಟ ಆಕೃತಿಯನ್ನು ಧಾರಣ ಮಾಡುತ್ತಿದೆ. ಧರ್ಮ, ಜಾತಿ, ಸಮಾಜ, ಕ್ರಾಂತಿ ಮೊದಲಾದ ಪ್ರತಿಯೊಂದು ಪರಿಕಲ್ಪನೆಯೂ ಮರುಚಿಂತನೆಯ ಅಗ್ನಿ ದಿವ್ಯಕ್ಕೊಳಗಾಗುತ್ತಿದೆ. ಮೌಖಿಕ ಪರಂಪರೆಯ ಹೊಸ ಆವಿಷ್ಕಾರಗಳು ಲಿಖಿತ ಪರಂಪರೆಯ ಎಷ್ಟೋ ವಿಚಾರಗಳು 'ಪೂರ್ವಗ್ರಹ'ಗಳೆಂಬುದನ್ನು ಸಾಬೀತು ಮಾಡುತ್ತಿವೆ. ಬಡವ ಶ್ರೀಮಂತನಾಗುವ ಮೂಲಕ ಅವನ ವರ್ಗನಾಶವಾಗಬಹುದು. ಆದರೆ ಹೀಗೆ ಅವನ ಜಾತಿ ನಾಶವಾಗಲಾರದು.

ಸಮಾಜದ ಬಗ್ಗೆ ಮಾರ್ಕ್ಸ್‌ವಾದದ ಗ್ರಹಿಕೆಗಳೇನು? ಉತ್ಪಾದನಾ ಸಂಬಂಧಗಳು ಸಮಾಜದ ಆರ್ಥಿಕ ರಚನೆ (ಬೇಸಿಕ್ ಸ್ಟ್ರಕ್ಚರ್), ಅದರ ಮೇಲೆ ಧರ್ಮ, ನ್ಯಾಯ, ಶಿಕ್ಷಣ, ಸಂಸ್ಕೃತಿ, ರಾಜ್ಯ ಮೊದಲಾದವು ಅಧಿರಚನೆಯಾಗಿ (ಸೂಪರ್ ಸ್ಟ್ರಕ್ಚರ್) ಹುಟ್ಟಿ ಬೆಳೆಯುತ್ತವೆ. ಇದೆಲ್ಲವೂ ಸೇರಿ ಸಾಮಾಜಿಕ ವ್ಯವಸ್ಥೆಯಾಗುತ್ತದೆ. ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಯಾದಂತೆ ವ್ಯವಸ್ಥೆಯ ಬದಲಾವಣೆಯಾಗುತ್ತದೆ; ಇತ್ಯಾದಿ, ಅಲ್ಲವೆ?

ಭಾರತದ ಕಮ್ಯುನಿಷ್ಟ್ ಸಿದ್ಧಾಂತವನ್ನು ಕಟ್ಟಿಕೊಟ್ಟವರಲ್ಲಿ ಬ್ರಾಹ್ಮಣ ಪಂಡಿತರ ಪರಿಶ್ರಮವಿತ್ತು. ವರ್ಣ, ಜಾತಿ, ಧರ್ಮದಂಥ ಸೂಕ್ಷ್ಮ ವಿಷಯಗಳನ್ನು ಅವರು ಚಾಣಾಕ್ಷತನದಿಂದ ದೂರವಿಟ್ಟು ವರ್ಗ ಪರಿಕಲ್ಪನೆಯನ್ನಷ್ಟೇ ಪ್ರತಿ ಪಾದಿಸಿದರು. ಭಾರತದ ಕುರಿತ ಮಾರ್ಕ್ಸ್‌ನ ಚಿಂತನೆಗಳನ್ನು ನಿರ್ಲಕ್ಷಿಸಿದರು. ಜಾತಿ ಅಡಿಪಾಯಾತ್ಮಕ ಉತ್ಪಾದನಾ ಸಂಬಂಧವಾಗಿರಲಿಲ್ಲವೇ? ಇವರು ತಿಳಿದಂತೆ ಬರಿ ಮೇಲ್‌ರಚನೆಯಾಗಿತ್ತೆ? ಬಂಡವಾಳಶಾಹಿಕರಣದ ನಂತರವೂ ಜಾತಿ ನಿರ್ಣಾಯಕ ಶಕ್ತಿಯಾಗುಳಿಯುತ್ತಿದೆ ಏಕೆ? ಧರ್ಮ ಶೋಷಕರ ಸೈದ್ಧಾಂತಿಕ ಅಸ್ತ್ರ; ಅದು ನಿರ್ಗತಿಕರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತದೆ; ಅದು ನಾಶವಾಗಬೇಕೆಂದು ಹೇಳಿದ ಮಾರ್ಕ್ಸ್‌ವಾದಿ ಚಿಂತನೆಯನ್ನು ಭಾರತದ ಕಮ್ಯುನಿಷ್ಟರು ಧರ್ಮಗಳಿಗಲ್ಲ, ಜಾತಿಗಳಿಗೆ ಅನ್ವಯಿಸಿ ಹೇಳಿದರೇಕೆ? ನಿಜ, ಅಸ್ಪೃಶ್ಯತೆಯಂಥ ಜ್ವಲಂತ ಸಮಸ್ಯೆಗೆ ತುರ್ತು ಪರಿಹಾರ ಬೇಕಿತ್ತು. ಶ್ರೇಣೀಕರಣದ ಸಾಮಾಜಿಕತೆ ನಾಶವಾಗಬೇಕಿತ್ತು. ಹಾಗಾಗಿ ಸಾರಾಸಗಟಾಗಿ 'ಜಾತಿನಾಶ'ವೆಂಬ ಸ್ಲೋಗನ್ನಿನ ಮೂಲಕ ಪರಿಹಾರದ ಪ್ರಯತ್ನ ನಡೆಯಿತು. ಹೌದು ಇದು ಬರಿ ಸ್ಲೋಗನ್ನಾಯಿತು. ರಾಮಜನ್ಮಭೂಮಿಯಂಥ ಸಾಂಸ್ಕೃತಿಕ ಮತೀಯ ವಿಷಯದ ಮೂಲಕ ಬಿ.ಜೆ.ಪಿ.ಯಂಥ ಪಕ್ಷ ದೇಶದ ಅಧಿಕಾರ ಹಿಡಿಯುವ ಮಟ್ಟಿಗೆ ಬೆಳೆಯುತ್ತಿದೆ ಎಂದರೆ ಏನರ್ಥ? ಅನ್ನ, ವಸತಿ, ಶಿಕ್ಷಣದಂಥ ಮೂಲಭೂತ ಪ್ರಶ್ನೆಗಳಲ್ಲ ಜನತೆಯನ್ನು ಬಾಧಿಸುತ್ತಿರುವುದು ಎಂದೇ? ಮೂಲಭೂತ ಅಗತ್ಯಗಳಿಗೆ ಮತ್ತು ಸಂಸ್ಕೃತಿಗೆ ಬಿಡಿಸಲಾರದ ನಂಟಿರುವುದನ್ನು ನಿರ್ಲಕ್ಷಿಸುವುದರಿಂದಾಗಿ ಕಮ್ಯುನಿಷ್ಟರು ವಿಫಲರಾಗಲಿಲ್ಲವೇ? ಅಸಮಾನ ಬೆಳವಣಿಗೆ ಇರುವ ಭಾರತದ ವೈಶಿಷ್ಟ್ಯವಿರುವುದು ಅದರ 'ದೇಸಿತನ'ದಲ್ಲಿ. ಅದು ಭಾಷೆಯಿಂದಷ್ಟೇ ಅಲ್ಲ ಒಂದು ಭಾಷೆಯೊಳಗಿನ ನೂರಾರು ಘಟಕಗಳ ಸಿಡಿತ, ಸೆಳೆತಗಳನ್ನು ಆಧರಿಸಿದೆ. ಅಖಂಡ ದ್ರಾವಿಡತ್ವದ ಪ್ರಧಾನ ಕವಲಾದ ಕನ್ನಡ ಭಾಷೆ, ಜನಕುಲಗಳ ಅನುಭವವನ್ನೇ ಅವಲೋಕಿಸಿ. ಇಂಥ ಅವಲೋಕನ ಕಮ್ಯುನಿಷ್ಟರಲ್ಲಿ ಹುಟ್ಟಲೇ ಇಲ್ಲ.

ಜಾತಿನಾಶವಾಗಬೇಕು, ಆದರೆ ಅಷ್ಟು ಸುಲಭವಾಗಿ ಅದು ನಾಶವಾಗಲಾರದು. ಈ ಕಟು ವಾಸ್ತವದ ಎದುರು ನಿಲ್ಲುವ ಧೈರ್ಯ ಮಾಡೋಣ. ಈ ವಿಷಯದಲ್ಲಿ ಅಂಬೇಡ್ಕರ್ ಹೆಚ್ಚು ಕ್ರಾಂತಿಕಾರಿಯಾಗಿ, ಲೋಹಿಯಾ ಹೆಚ್ಚು ವಾಸ್ತವವಾಗಿ ಕಾಣಿಸುತ್ತಾರೆ. ಪೆರಿಯಾರ್ ಅವರಂತೂ ತಮಿಳುನಾಡಿನಲ್ಲಿ ಒಂದು ಮಿತಿಯಲ್ಲಿ ಸಫಲರಾದರು. ಕಮ್ಯುನಿಷ್ಟರ ಪಶ್ಚಿಮ ಬಂಗಾಲದ ಗೆಲುವು ಆ ಪ್ರದೇಶದ ಅನನ್ಯತೆಯನ್ನು ಅರಿತಿರುವುದರಿಂದ ಬಂದುದಲ್ಲವೇ? ಕಮ್ಯುನಿಷ್ಟ್ ಬ್ಲಾಕ್‌ಗಳು ರಾಷ್ಟ್ರೀಯ ವಿಮೋಚನಾ ಚಳು ವಳಿಯ ಸಂದರ್ಭದಲ್ಲಿ ಹುಟ್ಟಿದುದರಿಂದ 'ಉಳಿದು' ಬಂದುದಲ್ಲವೇ? ಕಮ್ಯುನಿಷ್ಟರು ತಿಳಿದಿರುವಂತೆ ಜಾತಿ ಊಳಿಗಮಾನ್ಯದ ಅವಶೇಷ ಮಾತ್ರವಲ್ಲ. ಅದು ನಾಶವಾಗುತ್ತಿಲ್ಲ. ಬೇರೆ ಬೇರೆ ಆಯಾಮ ಪಡೆಯುತ್ತಿದೆ. ಗ್ರಾಮಗಳು, ರೈತಾಪಿ ವರ್ಗ ಹೆಚ್ಚಿರುವ ಭಾರತದಲ್ಲಿ ಮಾವೋ ಪ್ರತಿಪಾದಿತ ಕೃಷಿಕ್ರಾಂತಿ ಅಸಾಧ್ಯ. ಕಾರ್ಮಿಕವರ್ಗ ದಲಿತರಷ್ಟು ಶೋಷಿತವಲ್ಲ. ಕೃಷಿ ಕಾರ್ಮಿಕರಲ್ಲೂ ದಲಿತರೇ ಶೋಷಿತರು. ಹಾಗಾಗಿ ದಲಿತರ ನೇತೃತ್ವದಲ್ಲಿ ಎಲ್ಲ ಶೋಷಿತ ಜಾತಿಗಳ ವರ್ಗಗಳ ಐಕ್ಯತೆಯಿಂದ ಕ್ರಾಂತಿಯ ಸಾಧ್ಯತೆಯನ್ನು ಯೋಚಿಸಬೇಕಿದೆ.

ಅಂತರ್‌ಜಾತಿ ಮತ್ತು ಜಾತ್ಯತೀತ ವಿವಾಹಗಳು ಸಾಮೂಹಿಕ ಚಳುವಳಿಯ ಸ್ವರೂಪ ಪಡೆಯಬೇಕಿದೆ. ಸಾಮಾಜಿಕ ಕ್ರಾಂತಿಯಾಗದೇ ಭಾರತದ ಕ್ರಾಂತಿಯ ಕಲ್ಪನೆ ಅಸಾಧ್ಯ ಎಂದ ಮಾರ್ಕ್ಸ್‌ನ ವಿಚಾರಗಳನ್ನು ಮತ್ತೆ ಪರ್ಯಾಲೋಚಿಸಬೇಕಿದೆ. ಜಾತಿ ಅಂತರ್‌ವೈವಾಹಿಕ ಅನುವಂಶೀಯತೆಯಾಗಿರುವುದರಿಂದ ('ಎಂಡೋಗ್ಯಾಮಸ್ಸಿ ಹೆರಿಡಿಟರಿ') ಜಾತಿ ಪಲ್ಲಟ ಪ್ರಕ್ರಿಯೆ ಶುರುವಾಗುವುದೇ ಅಂತರ್‌ಜಾತಿ ವಿವಾಹದಿಂದ. ನೆನಪಿರಲಿ, ಹಳ್ಳಿಗಾಡಿನಲ್ಲಿ ಒಬ್ಬ ಸಾಮಾನ್ಯ ರೈತ ಆರ್ಥಿಕವಾಗಿ ಅಷ್ಟೆ ಅಲ್ಲ ಸಾಮಾಜಿಕವಾಗಿ ಕೂಡ ದಲಿತ ಕೂಲಿಕಾರರನ್ನು ಹಿಂಸಿಸುತ್ತಾನೆ. ಪ್ರಜ್ಞಾವಂತ ದಲಿತ ವರ್ಗ ಸವರ್ಣೀಯರ ದಾಳಿ ದಬ್ಬಾಳಿಕೆಗೆ ತುತ್ತಾಗುತ್ತಿದೆ. ಅಂದರೆ ಶ್ರೇಣೀಕರಣ ಬರಿ ಜಾತಿಯಲ್ಲಿ ಅಷ್ಟೇ ಅಲ್ಲ ವರ್ಗ ದಲ್ಲೂ ಇದೆ. ಆದರೆ ವರ್ಗ ಶ್ರೇಣೀಕರಣ ನಾಶವಾದರೂ ಜಾತಿ ಶ್ರೇಣೀಕರಣ ನಾಶವಾಗಲಾರದು. ರಷ್ಯಾ ಮೊದಲಾದ ಕಮ್ಯುನಿಷ್ಟ್ ರಾಷ್ಟ್ರಗಳ ಪತನ-ವರ್ಗನಾಶವೂ ಸುಲಭವಲ್ಲ ಎಂಬುದನ್ನು ತೋರಿಸಿಕೊಟ್ಟಿವೆ. ಕಮ್ಯುನಿಷ್ಟರ ವರ್ಗದೃಷ್ಟಿಯೊಂದೇ ಭಾರತದ ಕ್ರಾಂತಿಯ ಸಫಲತೆಗೆ ಸಾಕಾಗಲಾರದು. 'ಜಾತಿದೃಷ್ಟಿ' ಜಾತಿಗಳ ವೈಜ್ಞಾನಿಕ ಅಧ್ಯಯನದಿಂದ ಮಾತ್ರ ಸ್ಪಷ್ಟವಾಗಬಹುದು. ವರ್ಗದೃಷ್ಟಿ ಜಾತಿದೃಷ್ಟಿಗಳ ಸಮ್ಮೈಕ್ಯತೆಯಲ್ಲಿ ಭಾರತದ ಕ್ರಾಂತಿಯ ಒಳನೋಟ ದಕ್ಕುವ ಸಾಧ್ಯತೆಯಿದೆ. 'ವರ್ಗ ಸಹಕಾರ ಜಾತಿ ನಾಶ' ಎಂಬ ಲೋಹಿಯಾ ವಾದ; 'ವರ್ಗನಾಶ ಜಾತಿ ಸಹಕಾರ' ಎಂಬ ಕಮ್ಯುನಿಷ್ಟ್ ವಾದ; 'ವರ್ಗ ನಾಶ ಜಾತಿ ನಾಶ' ಎಂಬ ಅಂಬೇಡ್ಕರ್ ವಾದಗಳ ಈವರೆಗಿನ ಅನುಭವದ ಹಿನ್ನೆಲೆಯಲ್ಲಿ ಕ್ರಾಂತಿಯ ಹೊಸ ಪರ್ಯಾಯ ಸೂತ್ರವೊಂದರ ಅಗತ್ಯವಿದೆ. ಕ್ರಾಂತಿಯ ಮೊದಲ ಹಂತದಲ್ಲಿ 'ವರ್ಗನಾಶ, ಧರ್ಮ ಮತ್ತು ಜಾತಿ ತಾರ ತಮ್ಯ ನಾಶ' ಎಂಬ ವಾದ ಹೊಂದಬಹುದೇ?

●

ಹಿಂದೂ–ಮುಸ್ಲಿಂ ವಿವಾಹದ ಸಾಧ್ಯಾಸಾಧ್ಯತೆಗಳು

ಸಾರಾ ಅಬೂಬಕ್ಕರ್

ಕೆಲವು ದಿನಗಳ ಹಿಂದೆ ನಾನೊಂದು ಸಂವಾದದಲ್ಲಿ ಭಾಗಿಯಾಗಿದ್ದಾಗ ಬಂದ ಪ್ರಶ್ನೆ, 'ವರದಕ್ಷಿಣೆಯ ಪಿಡುಗನ್ನು ನಿವಾರಿಸುವುದು ಹೇಗೆ?'

'ಪ್ರೇಮ ವಿವಾಹ ಮತ್ತು ಅಂತರ್ಜಾತೀಯ ವಿವಾಹವೇ ವರದಕ್ಷಿಣೆ ಪಿಡುಗಿನ ನಿವಾರಣೆಗೆ ಹಾದಿ' ಎಂಬುದೇ ಈ ಪ್ರಶ್ನೆಗೆ ನನ್ನ ಉತ್ತರವಾಗಿತ್ತು.

ಹಿಂದೂ ಧರ್ಮದೊಳಗಡೆಯೇ ನೂರಾರು ಜಾತಿಗಳಿದ್ದರೂ, ಅಲ್ಲಿ ಅಂತರ್ಜಾತೀಯ ವಿವಾಹಕ್ಕೆ ಎಷ್ಟೇ ಪ್ರತಿಭಟನೆ ಇದ್ದರೂ ಅದು ಒಂದು ಹಂತದವರೆಗೆ ಮಾತ್ರವಿರುತ್ತದೆ. ಇಂದು ಅದು ಒಂದು ಕೌಟುಂಬಿಕ ಸಮಸ್ಯೆ ಯಾಗಬಹುದಷ್ಟೆ ಹೊರತು ಸಾಮಾಜಿಕ ಸಮಸ್ಯೆಯಾಗುವುದು ಅಪರೂಪ. ಗಂಡ ಹೆಂಡತಿಯರಿಬ್ಬರೂ ಉದ್ಯೋಗದಲ್ಲಿದ್ದು, ಇಬ್ಬರೂ ಆರ್ಥಿಕ ಸ್ವಾವಲಂಬನೆ ಪಡೆದವರಾದರೆ ಬಹುಶಃ ಅಲ್ಲಿ ಯಾವುದೇ ಸಮಸ್ಯೆಯೂ ತಲೆದೋರಲಾರದೇನೊ. ಒಂದು ವೇಳೆ ಸಮಸ್ಯೆ ಇದ್ದರೂ ಅದು ಈ ಮದುವೆಗೆ ಸಂಬಂಧ ಪಟ್ಟ ದ್ದಾಗಿರಲಾರದು ಎಂಬುದು ನನ್ನ ಅನಿಸಿಕೆ.

ಆದರೆ ಎರಡು ಧರ್ಮಿಯರ ನಡುವಿನ ಸಮಸ್ಯೆ ಮಾತ್ರ ಸುಲಭದಲ್ಲಿ ಪರಿಹಾರವಾಗುವಂತಹುದಲ್ಲ, ಉದಾಹರಣೆಗೆ ಹಿಂದೂ ಮುಸ್ಲಿಂ ವಿವಾಹ, ಮುಸ್ಲಿಂ ಹೆಣ್ಣು ಮಗಳೊಬ್ಬಳು ಅನ್ಯ ಧರ್ಮಿಯನೊಬ್ಬನನ್ನು ವಿವಾಹವಾದರೆ ಆಕೆ ತನ್ನ ಕುಟುಂಬದ ಮಾತ್ರವಲ್ಲ ಇಡೀ ಸಮಾಜದ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈ ಮದುವೆಯಿಂದ ತಮ್ಮ ಸಮಾಜಕ್ಕೆ ಬಹಳ ದೊಡ್ಡ ಕಳಂಕ ತಟ್ಟಿದೆಯೆಂದೇ ಈ ಜನರು ತಿಳಿದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಗೆ ಧರ್ಮದ ಕೆಲವು ನಿಯಮಗಳೇ ಕಾರಣ.

೧೪೦೦ ವರ್ಷಗಳ ಹಿಂದೆ ಅರೇಬಿಯಾ ದೇಶದಲ್ಲಿ ಮಹಮ್ಮದ್ ಪೈಗಂಬರರು ಹುಟ್ಟಿದಾಗ ಅಲ್ಲಿದ್ದವರೆಲ್ಲರೂ ವಿಗ್ರಹಗಳನ್ನಾರಾಧಿಸುವ ಬಹುದೈವಾರಾಧಕರೇ ಆಗಿದ್ದರು. ಮಾತ್ರವಲ್ಲ ಎಲ್ಲ ರೀತಿಯ ಬರ್ಬರ ನಡವಳಿಕೆಗಳನ್ನು ಮೈಗೂಡಿಸಿಕೊಂಡ ಪಾತಕಿಗಳೂ ಆಗಿದ್ದರು. ಇವರನ್ನು ನಾಗರೀಕ ಮಾನವರಾಗಿಸಲು ಪೈಗಂಬರರು ವಿಗ್ರಹಾರಾಧನೆಯನ್ನು ನಿಷೇಧಿಸಿ, ನಿರಾಕಾರನಾದ ಏಕದೈವದಲ್ಲಿ ವಿಶ್ವಾಸವಿಡಬೇಕೆಂದು ಬೋಧಿಸಿ ಆ ಮೂಲಕವೇ ಜನರನ್ನು ಒಟ್ಟು ಗೂಡಿಸಿ ಅವರಲ್ಲಿ ಸಮಾನತೆ ಮತ್ತು ಸಹೋದರತೆಯನ್ನೂ ಬೋಧಿಸಿದರು. ಜನರ ಈ ಧಾರ್ಮಿಕ ನಂಬಿಕೆಯನ್ನು ಬದಲಾಯಿಸುವುದು ಸುಲಭದ ಕೆಲವೇನೂ ಆಗಿರಲಾರದು. ಅದಕ್ಕಾಗಿ ಅವರು ಬಹಳ ತ್ಯಾಗವನ್ನೂ ಮಾಡಬೇಕಾಗಿತ್ತು. ಕೊನೆಗೂ ಅವರು ತಮ್ಮ ಸಾಧನೆಯಲ್ಲಿ ಜಯವನ್ನೂ ಗಳಿಸಿದರು. ಆ ಸಂದರ್ಭದಲ್ಲಿ ಅವರು, ಹೆಣ್ಣು ಗಂಡುಗಳ ಮದುವೆ ಕೂಡಾ ಏಕದೈವಾರಾಧಕರ ನಡುವೆಯೇ ನಡೆಯುವುದು ಉತ್ತಮವೆಂದೂ ಬೋಧಿಸಿದರು. ಆದರೆ ಅದನ್ನು ಕಡ್ಡಾಯ ಮಾಡಲಿಲ್ಲ. ಪುರುಷನೊಬ್ಬನು ಮುಸ್ಲಿಮೇತರ ಸ್ತ್ರೀಯನ್ನು ಮದುವೆಯಾಗಬಹುದು. ಆದರೆ ಆಕೆ ವಿಗ್ರಹಾರಾಧನೆ ಮಾಡಬಾರದು ಎಂಬುದು ಮಾತ್ರ ಕಡ್ಡಾಯವಾಗಿತ್ತು. ದೈವ ವಿಶ್ವಾಸಿಯಾಗಿರಬೇಕು. ಇನ್ನುಳಿದಂತೆ ಆಕೆಗೆ ಇಷ್ಟಬಂದಂತೆ ಬದುಕಬಹುದು. ಮಕ್ಕಳನ್ನು ಮಾತ್ರ ಇಸ್ಲಾಂ ಧರ್ಮದ ನಿಯಮದಂತೆ ಬೆಳೆಸಬೇಕು ಎಂದಷ್ಟೆ ಬೋಧಿಸಿದರು. ಆದರೆ ಹೆಣ್ಣು ಮಗಳೊಬ್ಬಳಿಗೆ ಈ ಸ್ವಾತಂತ್ರ್ಯ ಇಲ್ಲ. ಆಕೆ ವಿವಾಹವಾಗುವವನು ಇಸ್ಲಾಂ ಧರ್ಮಾನುಯಾಯಿಯಾಗಿರಬೇಕು. ಮತಾಂತರ ಮಾಡಿದವನಾದರೂ ಆಗಬಹುದು. ಅಂತೂ ವಿಗ್ರಹಾರಾಧನೆ ಮಾಡದ ಏಕದೈವ ವಿಶ್ವಾಸಿಯಾಗಿರಬೇಕು.

ಈ ಕಡ್ಡಾಯ ನಿಯಮವಿರುವುದರಿಂದಲೇ ಮುಸ್ಲಿಂ ಹೆಣ್ಣು ಮಗಳಿಗೆ ಮುಸ್ಲಿಮೇತರನನ್ನು ವಿವಾಹವಾಗಲು ಸಮಾಜ ಅನುಮತಿ ನೀಡುವುದಿಲ್ಲ. ಮುಸ್ಲಿಮರು ಹೆಣ್ಣು ಮಕ್ಕಳನ್ನು ಬಂಧನದಲ್ಲಿಡುವುದೂ ಕೂಡಾ ಈ ಕಾರಣಕ್ಕಾಗಿಯೇ ಇರಬಹುದು.

ಆದರೆ ಪುರುಷರಿಗಾದರೆ ಇಂತಹ ಕಡ್ಡಾಯ ನಿಯಮವಿಲ್ಲ. ಆದುದರಿಂದಲೇ ಮುಸ್ಲಿಂ ಹುಡುಗರು ಮುಸ್ಲಿಮೇತರ ಹುಡುಗಿಯನ್ನು ಮದುವೆಯಾಗುವುದು ಇಂದು ಸಾಮಾನ್ಯವಾಗುತ್ತಿದೆ. ಮಂಗಳೂರಿನಲ್ಲಿ ನನಗೆ ತಿಳಿದ ಎಷ್ಟೋ ಕುಟುಂಬಗಳಲ್ಲಿ ಗಂಡು ಮಕ್ಕಳು ಇತರ ಧರ್ಮದ ಹುಡುಗಿಯರನ್ನು ಮದುವೆಯಾಗಿದ್ದಾರೆ. ದೊಡ್ಡ, ಐಶ್ವರ್ಯವಂತ ಕುಟುಂಬಗಳೂ ಇದರಿಂದ ಹೊರತಾಗಿಲ್ಲ. ವಿಶೇಷವೆಂದರೆ ಹೀಗೆ ಬಂದ ಹುಡುಗಿಯರು ಇಸ್ಲಾಂ ಧರ್ಮವನ್ನು ಸ್ವೀಕರಿಸಿಯೊ, ಸ್ವೀಕರಿಸದೆಯೊ ಅಂತೂ ಸುಖವಾಗಿ ಬದುಕುತ್ತಿದ್ದಾರೆ! ಮುಸ್ಲಿಂ ಕುಟುಂಬಗಳಲ್ಲಿ ಆಕೆ ಒಮ್ಮೆ ಸೊಸೆಯಾಗಿ ಬಂದರೆ ಬಳಿಕ ಮನೆಯ ಸೊಸೆಯೇ ಆಗುತ್ತಾಳೆ. ಯಾವುದೇ ರೀತಿಯಲ್ಲೂ ಆಕೆ ಕೀಳರಿಮೆಯನ್ನಾಗಲಿ, ಕಿರುಕುಳವನ್ನಾಗಲಿ ಅನುಭವಿಸಬೇಕಾಗುವುದಿಲ್ಲ. ಹೀಗೆ ಬಂದ ಯಾವ ಹೆಣ್ಣು ಮಗಳೂ ಪಶ್ಚಾತ್ತಾಪ ಪಟ್ಟದ್ದನ್ನು ನಾನು ನೋಡಿಲ್ಲ.

ನನ್ನ ಕುಟುಂಬದಲ್ಲಿ ನನ್ನ ಅಣ್ಣ ತಮ್ಮಂದಿರ ಮನೆಗಳಲ್ಲಿಯೇ ಬ್ರಾಹ್ಮಣ ಹೆಣ್ಣು ಮಕ್ಕಳು ಸೊಸೆಯರಾಗಿ ಬಂದಿದ್ದಾರೆ. ವಿಶೇಷವೆಂದರೆ ಈ ಎರಡೂ ಕುಟುಂಬಗಳಲ್ಲೂ ಬೀಗರು ಪರಸ್ಪರ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಪರಸ್ಪರರು ಹಬ್ಬ ಮತ್ತು ಇತರ ದಿನಗಳಲ್ಲಿ

ಬಂದು ಹೋಗುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. ಜಾತಿ, ಧರ್ಮ ಬೇರೆಯಾಗಿದ್ದರೂ ಎಲ್ಲರೂ ಮಾನವ ಜೀವಿಗಳೆಂಬ ತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಂಡವರೇ ಆದ ಕಾರಣ, ಯಾರೂ ಯಾವುದೇ ರೀತಿಯ ಮಾನಸಿಕ ಯಾತನೆಯನ್ನನುಭವಿಸುತ್ತಿಲ್ಲ. ಎಲ್ಲ ಕುಟುಂಬಗಳೂ ಶೈಕ್ಷಣಿಕವಾಗಿ ಮುಂದುವರಿದ ಕುಟುಂಬಗಳಾಗಿದ್ದು ಯಾವುದೇ ಸಂಕುಚಿತ ಭಾವನೆಗೂ ಎಡೆ ಇಲ್ಲದ ಕಾರಣ ಎಲ್ಲವೂ ಸುಖಾಂತವೇ ಆಗಿದೆ. ಬಹುಶಃ ಈ ಕುಟುಂಬಗಳ ಹೆಣ್ಣು ಮಗಳೊಬ್ಬಳು ಅನ್ಯಧರ್ಮಿಯೊಬ್ಬನನ್ನು ಮದುವೆಯಾಗಿದ್ದರೆ ಆಗಲೂ ಇವರ ನಡವಳಿಕೆಗಳು ಹೀಗೆಯೇ ಇರುತ್ತಿದ್ದವೇ? ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ!

ಮತಾಂತರ ಹೊಂದಿ ಮುಸ್ಲಿಂ ಹೆಣ್ಣು ಮಕ್ಕಳನ್ನು ಮದುವೆಯಾಗುವಾತನು ಕಡ್ಡಾಯವಾಗಿ ಧರ್ಮದ ನಿಯಮಗಳನ್ನು ಅನುಸರಿಸಬೇಕೆಂದೇನೂ ಇಲ್ಲ. ಮುಸ್ಲಿಮನಾಗಿ ಹುಟ್ಟಿದವನೇ ಧರ್ಮದ ಎಷ್ಟೋ ನಿಯಮಗಳನ್ನು ಅನುಸರಿಸುವುದಿಲ್ಲ. ಸಮಾಜದ ಕಣ್ಣಿನಲ್ಲಿ ಆತನು ಮುಸ್ಲಿಂ ಎಂಬ ಹೆಸರು ಪಡೆದರೆ ಸಾಕು. ಆದರೆ ಮುಸ್ಲಿಂ ಹೆಣ್ಣು ಮಕ್ಕಳ ಪ್ರೇಮದ ಹಾದಿಯಲ್ಲಿ ಬಹಳಷ್ಟು ಕಲ್ಲು ಮುಳ್ಳುಗಳಿವೆ. ಈ ಕಲ್ಲುಮುಳ್ಳುಗಳನ್ನು ತುಳಿದು ಪಾರಾದವರೂ ಸಾಕಷ್ಟು ಜನರಿದ್ದಾರೆ. ಮಂಗಳೂರಿನ ಖ್ಯಾತ ಹೃದಯ ತಜ್ಞ ಡಾ। ಗಣೇಶನ್ ಅವರ ಪತ್ನಿ, ಖ್ಯಾತ ರಾಜಕಾರಣಿ ಜಾರ್ಜ್ ಫರ್ನಾಂಡೀಸ್ ಅವರ ಪತ್ನಿ, ಖ್ಯಾತ ಉದ್ಯಮಿ ವಿಜಯ ಮಲ್ಯರ ಪತ್ನಿ ಇವರೆಲ್ಲರೂ ಮುಸ್ಲಿಮರು. ಹಾಗೆಯೇ ಕೊಡಗಿನ ಮಾಜಿ ಮಂತ್ರಿಯೊಬ್ಬರ ಪುತ್ರಿ ಮಂಗಳೂರಿನ ಖ್ಯಾತ ಮುಸ್ಲಿಂ ಉದ್ಯಮಿಯೊಬ್ಬರ ಪತ್ನಿ.

ಜಾತಿ ಧರ್ಮಗಳ ಅಡ್ಡಗೋಡೆಯನ್ನು ಕೆಡವಲು ಅಂತರ್ಜಾತೀಯ, ಅಂತರ ಧರ್ಮೀಯ ವಿವಾಹದಿಂದ ಸಾಧ್ಯ. ಆದರೆ ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ, ಜಗತ್ತಿನಲ್ಲಿಯೇ ಅಧಿಕಗೊಳ್ಳುತ್ತಿರುವ ಮೂಲಭೂತವಾದದಿಂದಾಗಿ ನಮ್ಮ ಜಾತ್ಯಾತೀತ ಸಮಾಜದ ಕನಸು ಕನಸಾಗಿಯೇ ಉಳಿದು ಬಿಡುವ ಸಾಧ್ಯತೆಗಳೇ ಹೆಚ್ಚಾಗಿವೆ.

●

ಭಗವಂತನು ಹಿಂದೂಗಳ ದೇವಾಲಯದಲ್ಲಿರುವಂತೆಯೇ ಮುಸಲ್ಮಾನರ ಮಸೀದಿಗಳಲ್ಲಿಯೂ ಇದ್ದಾನೆ. ಮೇಲೆ ಕಾಣು ಭೇದಗಳೇನಿದ್ದರೂ, ಮೂಲತಃ ಮನುಷ್ಯರೆಲ್ಲ ಒಂದೇ ಬೇರೆ ಬೇರೆಯ ಆಚಾರ–ವಿಚಾರಗಳಿದ್ದರೂ ಬೇರೆ ಬೇರೆಯ ಪರಿಸರಗಳ ಪ್ರಭಾವಕ್ಕೆ ಒಳಗದಾಗೂ ಹಿಂದೂಗಳೂ, ಮುಸಲ್ಮಾನರೂ ಒಂದೇ. ಅವರೆಲ್ಲರೂ, ಅದೇ ನೀರು, ನೆಲ, ಗಾಳಿಗಳಯ ಪಂಚಭೂತಗಳಿಂದ ಆದವರೇ, ಕುರಾನು, ಪುರಾಣಗಳ ಮೂಲಕ ಅವರೆಲ್ಲ ಸ್ತುತಿಸುವುದು ಆ ಒಬ್ಬೇ ಆದ ದೇವರನ್ನೇ ಯಾಕೆಂದರೆ ಅವರೆಲ್ಲರೂ ಜನಿಸಿರುವುದು ಒಬ್ಬ ದೇವರಿಂದಲೇ

–ಗುರು ಗೋವಿಂದಸಿಂಗ್

ಅಂತರ್ಜಾತೀಯ ವಿವಾಹಗಳ ಅವಶ್ಯಕತೆ

ನೀಲಗುಂದ ಸ್ವಾಮೀಜಿ

ಭಾರತೀಯ ಸಮಾಜ ವ್ಯವಸ್ಥೆಯ ಪರಂಪರೆಯಲ್ಲಿ ಜಾತಿ ವ್ಯವಸ್ಥೆಯು ಒಂದು ಪ್ರಮುಖವಾದ ಪ್ರಭಾವಶಾಲಿಯಾದ ಪರಿಣಾಮಕಾರಿಯಾದ ವ್ಯವಸ್ಥೆಯಾಗಿದೆ. ಜಾತಿ ವ್ಯವಸ್ಥೆಯ ಬಗೆಗೆ ಈಗ ಜಿಗುಪ್ಸೆಯ ಮನೋಭಾವನೆ ಉಂಟಾಗಿರಬಹುದಾದರೂ, ಒಂದು ಕಾಲದಲ್ಲಿ ಇದೇ ಒಂದು ಹೆಗ್ಗಳಿಕೆಯ ಸಂಕೇತವಾಗಿತ್ತು. ಅಂತೆಯೇ ಶ್ರೀಕೃಷ್ಣ 'ಚಾತುರ್ವರ್ಣ್ಯಂ ಮಯಾ ಸೃಷ್ಟ್ಯಾ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಆತ ಈ ವ್ಯವಸ್ಥೆಯನ್ನು 'ಗುಣ ಕರ್ಮ ವಿಭಾಗಶಃ' ಮಾಡಿದ್ದೇನೆಂದು ವಿವರಣೆ ನೀಡಿದ್ದರೂ, ಇದು ಸುಳ್ಳು ಎಂಬುದು ಕೌಶಿಕನು ವಿಶ್ವಾಮಿತ್ರನಾಗಿ ಪರಿವರ್ತನೆ ಹೊಂದಲು ನಡೆಸಿದ ಹೋರಾಟದಿಂದ ಸ್ಪಷ್ಟವಾಗುತ್ತದೆ. ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿ ಮಾಡುವಷ್ಟು ಸಾಮರ್ಥ್ಯವನ್ನಾತ ಪಡೆದರೂ ಅವನನ್ನು ಮಹರ್ಷಿ ಮಟ್ಟಕ್ಕೇ ಉಳಿಸಿದರೇ ಹೊರತು ಬ್ರಹ್ಮರ್ಷಿಯ ಪಟ್ಟಕ್ಕೆ ಏರಿಸಲಿಲ್ಲ.

ಜಾತಿ ವ್ಯವಸ್ಥೆಯು ಸಮಾಜವನ್ನು ವಿಭಜಿಸುವಷ್ಟು, ಮತ್ತಾವ ವ್ಯವಸ್ಥೆಯೂ ಮಾಡಲಾರದು. ಕಾರಣವೇ ಇಲ್ಲದೆ ಒಂದು ಜನಸಮೂದಾಯವನ್ನು ದ್ವೇಷಿಸಲು, ಸಂದೇಹಿಸಲು, ಪರಸ್ಪರ ಸಹಕರಿಸದಿರಲು ಪ್ರೇರಿಸುವ ಈ ಜಾತಿವ್ಯವಸ್ಥೆಯು ಸಮಾಜ ಪುರುಷನಿಗೆ ತಗಲಿದ ಭೀಕರ ರೋಗ. ಏಡ್ಸರೋಗ ತಗಲಿದವನಿಗೆ ಹತ್ತಾರು ವರ್ಷಗಳಲ್ಲಿ ಸಾವಿಗೆ ಗುರಿಯಾದಾಗಲಾದರೂ ಆತ ನರಳುವಿಕೆಯಿಂದ ಮುಕ್ತನಾಗುತ್ತಾನೆ. ಆದರೆ ಈ ಜಾತಿ ರೋಗ ಸಾವಿರಾರು ವರ್ಷಗಳಿಂದಲೂ ಮನುಷ್ಯ ಕಾಲವನ್ನು ಅತ್ತ ಸಾಯಲೂ ಬಿಡದೇ, ಇತ್ತ ನೆಮ್ಮದಿಯಿಂದರಲೂ ಬಿಡದೇ ಗೋಳಾಡಿಸುತ್ತಿದೆ. ಒಬ್ಬ ದಾರ್ಶನಿಕನ ಲೆಕ್ಕಾಚಾರದಂತೆ ಜಗತ್ತಿನಲ್ಲಿ ಜಾತಿ–ಧರ್ಮಗಳ ಹೆಸರಿನಲ್ಲಿಯೇ ಅಧಿಕ ಯುದ್ಧಗಳಾಗಿವೆ. ಕೋಟಿ ಕೋಟಿ ಜನ ಈ ಜಾತಿ ಧರ್ಮಗಳ ಹೆಸರಿನಲ್ಲಿಯೇ ಪ್ರಾಣ ತೆತ್ತಿದ್ದಾರೆ. ಸಂಕಷ್ಟಗಳಿಗೆ ಸಿಲುಕಿದ್ದಾರೆ.

ಅನುವಂಶಿಕತೆಗೂ, ಜಾತೀಯತೆಗೂ ತಳಕು ಹಾಕಿರುವುದರಿಂದ ಈ ಜಾತಿವ್ಯವಸ್ಥೆ ಜನಮಾನಸದಿಂದ ಕಿತ್ತೆಸೆಯಲಾರದಷ್ಟು ಮೆತ್ತಿಕೊಂಡು ಬಿಟ್ಟಿದೆ. ಸಮಾಜ ಸುಧಾರಣೆಯ ಕಳಕಳಿ ಹೊಂದಿರುವವರು ಈ ವ್ಯವಸ್ಥೆಯ ವಿರುದ್ಧ ಹೋರಾಡಿದಷ್ಟೂ, ಅವರ ಹೆಸರಿನಲ್ಲಿಯೇ ಮತ್ತೊಂದು ಜಾತಿಯನ್ನು ಸೃಷ್ಟಿಸುವಷ್ಟು ಈ ವ್ಯವಸ್ಥೆ ಬಲಿಷ್ಠವಾಗಿದೆ. ಯಾವ ಸಮಾಜ ಸುಧಾರಕರಿಗೂ ಜಗ್ಗದ, ಬಗ್ಗದ ಈ ವ್ಯವಸ್ಥೆಗೆ ಏಕೈಕ ಪರಿಹಾರೋಪಾಯವೆಂದರೆ ಅಂತರ್ಜಾತೀಯ ಒಲವಿನ ವಿವಾಹವೇ. ಜಾತಿಗಳ ಸೃಷ್ಟಿಗೆ ನೂರಾರು ಕಾರಣಗಳಿರಬಹುದಾದರೂ, ಜಾತಿ ವಿನಾಶಕ್ಕೆ ಏಕೈಕ ಸೂತ್ರವೆಂದರೆ ಅಂತರ್ಜಾತೀಯ ಒಲವಿನ ವಿವಾಹವೇ ಆಗಿದೆ.

ಭಾರತೀಯ ಸಮಾಜಕ್ಕೆ ಅಂತರ್ಜಾತೀಯ ಒಲವಿನ ವಿವಾಹಗಳು ಹೊಸವೇನಲ್ಲ. ಅಸ್ವೀಕೃತವೂ ಅಲ್ಲ. ಈ ದೇಶಕ್ಕೆ 'ಭಾರತ' ಎಂಬ ಹೆಸರು ಬರಲು ಕಾರಣನಾದ ಭರತನೇ ಅಂತರ್ಜಾತೀಯ ಒಲವಿನ ವಿವಾಹದ ಸಂತಾನ. ಬೇಡರ ಕುಲದವನಾದ ವಿಶ್ವಾಮಿತ್ರ ಮತ್ತು ಆರ್ಯಕುಲದ ಮೇನಕೆಯರಿಗೆ ಜನಿಸಿದವಳು ಶಾಂಕುತಲೆ. ಈ ಶಾಕುಂತಲೆಗೂ ಕ್ಷತ್ರಿಯರಾಜ ದುಷ್ಯಂತನಿಗೂ ಉಂಟಾದ ಒಲವಿನ ಕುಡಿಯಾಗಿ ಜನಿಸಿದವನೇ ಭರತ. ಇಲ್ಲಿ ಇನ್ನೂ ಒಂದು ಗಮನಾರ್ಹ ಸಂಗತಿಯೆಂದರೆ ವಿಶ್ವಾಮಿತ್ರ–ಮೇನಕೆಯರಾಗಲಿ, ದುಷ್ಯಂತ–ಶಾಕುಂತಲೆಯರೇ ಆಗಲಿ ಸಮಾಜದೆದುರು ಶಾಸ್ತ್ರೋಕ್ತವಾಗಿ ವಿವಾಹವಾದವರಲ್ಲ. ದುಷ್ಯಂತ–ಶಾಕುಂತಲೆಯರ ಚರಿತ್ರೆ ಬರೆಯುವಾಗ ಅದಕ್ಕೆ ಗಾಂಧರ್ವ ವಿವಾಹವೆಂದು ಕರೆದು ಗೌರವ ವಾಚಕವನ್ನಾಗಿ ಪರಿವರ್ತಿಸಿದರು ಅಷ್ಟೇ. ಅಂಥವರ ಸಂತಾನವಾದ ಭರತನ ಹೆಸರನ್ನು ಈ ದೇಶಕ್ಕೆ ಇಟ್ಟಿರುವಾಗ, ನಾವು ಭಾರತೀಯರು ಎಂದು ಕರೆಯಿಸಿಕೊಳ್ಳುವ ನಿಜವಾದ ಹಕ್ಕು–ಅರ್ಹತೆ–ಅಂತರ್ಜಾತೀಯ ಒಲವಿನ ವಿವಾಹಿತರಿಗೆ ಹಾಗೂ ಅವರ ಸಂತಾನಕ್ಕೆ ಮಾತ್ರ ಇರುತ್ತದೆಯೇ ಹೊರತು ಅನ್ಯರಿಗಲ್ಲ.

ವೇದಕಾಲದಿಂದಲೂ ದಾಖಲೆಯಾಗುತ್ತ ಬಂದಿರುವ ಇತಿಹಾಸದಲ್ಲಿ ಅಂತರ್ಜಾತೀಯ ವಿವಾಹಗಳು ಪುಂಖಾನುಪುಂಖವಾಗಿ ಉಲ್ಲೇಖವಾಗಿದೆ. ಒಲವಿನ ವಿವಾಹಗಳಿಗೂ ಕೊರತೆಯಿಲ್ಲ. ಸ್ವತಃ ಸೃಷ್ಟಿಕರ್ತನಾದ ಬ್ರಹ್ಮ–ಸರಸ್ವತಿಯರ ವಿವಾಹವೇ ಒಲವಿನ ತಳಹದಿಯದು (ಸರಸ್ವತಿಯು ಬ್ರಹ್ಮನ ಮಗಳೇ ಎಂಬುದು ಇನ್ನೂ ವಿಶೇಷ!) ವಿಷ್ಣು–ಲಕ್ಷ್ಮಿ–ಶ್ರೀದೇವಿ ಭೂದೇವಿಯರ ವಿವಾಹವೇ ಆಗಲಿ, ಶಿವ–ಪಾರ್ವತಿಯರ ವಿವಾಹವೇ ಆಗಲಿ ಒಲವಿನ ಮೂಲದಿಂದಲೇ ಆದವುಗಳು. ಶಿವ–ಗಂಗೆಯರ ಮಧ್ಯ ವಿವಾಹರಹಿತ ಒಲವಿನ ಸಂಬಂಧವೇ ಈವರೆಗೂ ಮುಂದುವರೆದು ಕೊಂಡು ಬಂದಿದೆ. ನಳ–ದಮಯಂತಿ, ಕೃಷ್ಣ–ರುಕ್ಮಿಣಿ, ಭೀಮ–ಹಿಡಿಂಬೆ, ಅರ್ಜುನ–ಉಲೂಪಿ, ಅರ್ಜುನ–ಚಿತ್ರಾಂಗದೆ, ಅರ್ಜುನ–ಪ್ರಮೀಳೆಯರ ವಿವಾಹಗಳು ಅಂತರ್ಜಾತೀಯ ಪ್ರೇಮ ವಿವಾಹಗಳೇ. ಇವರ ವಿವಾಹದ ಘಟನೆಗಳನ್ನು ನಾಟಕ, ಬಯಲಾಟ, ಯಕ್ಷಗಾನ, ಸಿನಿಮಾ, ದೂರದರ್ಶನಗಳ ಧಾರವಾಹಿಗಳಲ್ಲಿ ಸಂಭ್ರಮದಿಂದ ನೋಡುವಾಗ ನಮ್ಮ ಮನದಾಳದ ಮೂಲೆ–ಮೂಲೆಗಳಲ್ಲಿ ಒಲವಿನ ವಿವಾಹಗಳ ಪರವಾದ ಮನೋಭಾವನೆ ಸಹಜವಾಗಿ ಹೊರಹೊಮ್ಮುತ್ತದೆ. ಇಂಥ ವಿವಾಹ ಮಾಡಿಕೊಂಡಿರುವರೆಂಬ ಅರಿವಿದ್ದೂ ಅವರ ಬಗೆಗೆ ನಾವೆಲ್ಲ ಹೊಂದಿರುವ ಉದಾತ್ತವಾದ, ಪೂಜ್ಯವಾದ, ಗೌರವಪೂರ್ಣ ಮನೋಭಾವನೆಯೂ ಒಲವಿನ ವಿವಾಹಗಳ ಬಗೆಗೆ ನಮ್ಮಲ್ಲಿರುವ

ಅನುಕೂಲಕರ ಪ್ರತಿಕ್ರಿಯೆ ಪ್ರತೀಕವೇ ಆಗಿದೆ.

ಈ ಹಿನ್ನಲೆಯಿಂದ ಅಂತರ್ಜಾತೀಯ ಒಲವಿನ ವಿವಾಹಗಳು ಈಗಲೂ ಪುರಸ್ಕಾರಾನೀಯವೂ, ಅನುಕರಣೀಯವೂ ಆಗಿವೆ. ತನ್ನ ಜಾತಿಯ, ಪುಥಾದ ವಲಯವನ್ನು ಮೀರಿ ಪ್ರೀತಿಯನ್ನು ಹಂಚಿದವರು, ತಮ್ಮ ಹೃದಯಗಳ ಮೇರೆಯನ್ನು ವಿಸ್ತರಿಸಿದವರು ನಿಜವಾಗಿ ಆದರ್ಶ ವ್ಯಕ್ತಿಗಳು. ಜಾತೀಯತೆಯನ್ನು ವಿರೋಧಿಸಿ ಬೋಧಿಸುವುದೂ, ಹೀಗೆ ಬೋಧಿಸಿದವರನ್ನು ಪೂಜ್ಯತೆಯಿಂದ ಕಾಣುವುದೂ ಸುಲಭ. ಆದರೆ, ಸ್ವತಃ ಜಾತೀಯ ಸೀಮೆಯನ್ನು ದಾಟಿ ವಿವಾಹ ಸಂಬಂಧಗಳನ್ನು ಏರ್ಪಡಿಸಿ ಕೊಳ್ಳುವುದು ನಿಜಕ್ಕೂ ಹೆಚ್ಚು ದಿಟ್ಟತನದ ಸಾಧನೆ. ಮೊದಲಿನವರದು ಬರೀ ಬೋಧನೆ, ಆದರೆ ಇವರದು ಸಾಧನೆ.

ಅಂತರ್ಜಾತೀಯ ವಿವಾಹಿತರ ಮೊಟ್ಟ ಮೊದಲ ಕೊಡುಗೆಯೆಂದರೆ ತಮ್ಮ ಬಂಧು–ಬಳಗದ ವಲಯದ ಮಟ್ಟಿಗಾದರೂ ಎರಡು ಜಾತಿಗಳ ವಿಷಯದಲ್ಲಿ ದ್ವೇಷವನ್ನು ಶಮನಗೊಳಿಸುವುದು. ಒಂದೇ ಜಾತಿಯ ವರ್ತುಲದಲ್ಲಿ ಸುಳಿದಾಡುತ್ತಿದ್ದ ಬಾಂಧವ್ಯದ ಎಳೆಗಳನ್ನು ಎರಡು ಜಾತಿಗಳಷ್ಟು ವಿಸ್ತಾರವಾದ ವಲಯಗಳವರೆಗೆ ಸುಳಿಯಲು ಅವಕಾಶ ಮಾಡಿಕೊಟ್ಟದ್ದು. ಎರಡನೆಯ ಕೊಡುಗೆಯೆಂದರೆ–ತಂದೆ ಮತ್ತು ತಾಯಿಯ ಇಬ್ಬರ ಜಾತಿಗಳನ್ನೂ ಸಮಾನವಾಗಿ ಪ್ರೀತಿಸುವ, ಸಮಾನವಾಗಿ ಗೌರವಿಸುವ ಸಂತಾನವನ್ನು ನೀಡುವುದು. ಉಳಿದವರ ಮಕ್ಕಳು ಒಂದೇ ಜಾತಿಯನ್ನು ಪ್ರೀತಿಸುವಷ್ಟು ಸಂಕುಚಿತವಾದ ಮನಸ್ಸನ್ನು ಹೊಂದಿದ್ದರೆ, ಅಂತರ್ಜಾತೀಯ ದಂಪತಿಗಳ ಮಕ್ಕಳು ಕನಿಷ್ಟ ಎರಡು ಜಾತಿಗಳನ್ನಾದರೂ ಪ್ರೀತಿಸುವಷ್ಟು ವಿಶಾಲವಾದ ಮನಸ್ಸನ್ನು ಹೊಂದಿರುತ್ತಾರೆ. ಎರಡು ಜಾತಿಗಳನ್ನು ಪ್ರೀತಿಸಬಲ್ಲವರಲ್ಲಿ ಜಾತೀಯತೆಯ ಭಾವನೆಯೇ ಅಳಿಸಿರುತ್ತದೆ. ಅವರ ಕಣ್ಣಿಗೆ ಕಾಣ ತೊಡಗುವುದು ಜಾತಿಯಲ್ಲ; ಬರೀ ಮನುಷ್ಯತ್ವ. ಮಾನವೀಯತೆ. ನಮ್ಮ ದೇಶಕ್ಕೆ ಈಗ ಬೇಕಾಗಿರುವುದು ಇದೇ. ಇದಕ್ಕಾಗಿಯೇ ಈ ವಿವಾಹಗಳಿಗೆ ನಮ್ಮ ಪೂರ್ಣ ಬೆಂಬಲ. 'ಪ್ರೋತ್ಸಾಹ' ಸಹಕಾರ!

ಒಲವಿನ ವಿವಾಹಗಳಾಗಲಿ ನಾಡಿನ ಉಸಿರು!

ಎಲ್ಲೆಡೆ ಹರಡಲಿ ಶಾಂತಿಯ ಹಸಿರು!!

ಪ್ರಾಚೀನವಾದುದೆಲ್ಲವೂ, ಅದು ಪ್ರಾಚೀನವಾದುದು ಎಂಬ ಕಾರಣದಿಂದ ಒಳ್ಳೆಯದೆಂದು ನಾನು ಪ್ರತಿಪಾದಿಸುವುದಿಲ್ಲ. ದೇವರು ನಮಗೆ ಕೊಟ್ಟಿರುವ ಬುದ್ಧಿಶಕ್ತಿಯನ್ನು ಪ್ರಾಚೀನ ಪರಂಪರೆಯ ವಿಚಾರಗಳಿಗೆ ಸಮರ್ಪಿಸಬೇಕೆಂದು ನಾನು ಹೇಳುವುದಿಲ್ಲ.

ಯಾವುದೇ ಒಂದು ಪರಂಪರೆ, ಅದು ಎಷ್ಟೇ ಪ್ರಾಚೀನವಾದುದಾಗಲಿ ನಮ್ಮ ನೈತಿಕತೆಯೊಂದಿಗೆ ಹೊಂದಿಕೊಳ್ಳದೆ ಇದ್ದರೆ ಅದನ್ನು ಗಡೀಪಾರು ಮಾಡುವುದು ಒಳ್ಳೆಯದು. ಅಸ್ಪೃಶ್ಯತೆ ಎನ್ನುವುದು ಬಹು ಹಿಂದಿನಿಂದಲೂ ಬಂದ ಸಂಪ್ರದಾಯವಾಗಿರಬಹುದು; ಬಾಲ್ಯ ವಿವಾಹ ಹಾಗೂ ವೈಧವ್ಯಗಳು ಅತಿ ಪ್ರಾಚೀನ ಸಂಪ್ರದಾಯಗಳಾಗಿರಬಹುದು. ಹೀಗೆಯೇ ಅನೇಕ ಭಯಂಕರವಾದ ನಂಬಿಕೆಗಳೂ ಅಂಧಶ್ರದ್ಧೆಗಳೂ ಬಹುಕಾಲದಿಂದ ರೂಢಿಯಲ್ಲಿರಬಹುದು. ನನಗೆ ಶಕ್ತಿಯಿದ್ದಲ್ಲಿ ಅವುಗಳನ್ನು ನಾನು ಗುಡಿಸಿ ಹಾಕುತ್ತೇನೆ.

–ಮಹಾತ್ಮ ಗಾಂಧಿ

ಜೀವ ಭಾವದ ಬೆಸುಗೆ

ಕಣ್ಣಿನ ಒಳಗಾಣ್ಕೆಗೆ ಮಾತ್ರ
ಒಲವಿನ ಹಾದಿ ಸುಗಮ ಸುಂದರ

ಶಬ್ದಗಳ ಅಬ್ಬರಕೆ ಬೆಚ್ಚುತ್ತ
ಹಾದಿಗಳ ಸುತ್ತುತ್ತ ಗಿರಕಿ ಹೊಡೆದು,
ಮುಳ್ಳುಗಳ ಹೆಣೆದ ಬಡಿಗೆ ಹೊಡೆತ
ತಿಂದ ಸವಿ ಹಂಚುವಂತಿಲ್ಲ!
ಒಡಲಾಳದೊಳಗೆ ಉರಿವ ಪಂಜು
ಉರಿದುರಿದು ತುಂಬಿ ಬಂದ ಹೊಗೆ
ಗಂಟಲ ಹಿಚುಕುತ್ತಿದ್ದರೂ
ನಕಲಿ ನಗುವಿನ ನಾಟಕ ಇನ್ನೆಷ್ಟು ದಿನ?
ಮತ್ತದೇ ಆಲದ ಮರಕೆ ನೇಣು ಹಾಕಿಕೊಂಡು
ನೇತಾಡುತ್ತ ಇರುವವರೆಲ್ಲ ಇರಲಿ ಬಿಡಿ ಹಾಗೆ....

ಪ್ರಕೃತಿಯೊಳಗೆ ನಾವೋ ನಮ್ಮೊಳಗೆ ಪ್ರಕೃತಿಯೋ
ಮೂರನೆಯವರ ಹಂಗು ಬೇಕಿಲ್ಲ.
ಕಟ್ಟುಪಾಡಿನ ಕಗ್ಗಂಟುಗಳ ಬಿಡಿಸಿ
ನೇರ ಮಾಡಿದ ಎಳೆಗಳನ್ನೆಲ್ಲ ಕೂಡಿಸುವ ಕಾಲ.
ದೊರೆತುದನ್ನ ದಕ್ಕಿಸಿಕೊಳ್ಳುವ ಛಾತಿ
ಮನಸ್ಸುಗಳ ಮಿಡಿತದಲಿ ಗಟ್ಟಿಗೊಂಡು
ಮೊಗ್ಗುಗಳು ಅರಳಿದಾಗ ಹಿಗ್ಗು ತರುತಿದೆ.
ಸಂತೆಯ ಮಂದಿಗೇಕೆ ನಮ್ಮ ಚಿಂತೆ?
ನಾವಿನ್ನ ನಡೆದದ್ದೆ ಹಾದಿ ನಿಂತಿದ್ದೆ ನೆಲೆ.

ತಂಪಿನ ಇಬ್ಬನಿ, ಸುಳಿದು ಬೀಸುವ
ತಂಗಾಳಿ ಕಂಗೊಳಿಸುವ ಬೆಳಕಾಗಿ
ಸಿಹಿ ಕಹಿಗಳ ಸಮ್ಮಿಲನ ಸವಿದು
ಜೀವ ಭಾವಗಳ ಬೆಸುಗೆ ಹಾಕಿ
ಸಾಗಿದ್ದೆ ಒಲವಿನ ಹಾದಿ ಎನ್ನೋಣ !

—ಆರ್. ಸುವರ್ಣ ಕಾಡನಕುಪ್ಪೆ

ಚಿಂತನ

ಜಾತಿಪದ್ಧತಿಯ ಸಮಸ್ಯೆಗಳು ಹಾಗೂ ಅದರ ಪರಿಹಾರಗಳನ್ನು ಕುರಿತ ನಮ್ಮ ಮೂರು ಪ್ರಶ್ನೆಗಳಿಗೆ ನಾಡಿನ ಕೆಲವು ಆಯ್ದ ಹಿರಿಯರು ನೀಡಿರುವ ಉತ್ತರಗಳು ಇಲ್ಲಿವೆ. ನಾವು ಕೇಳಿದ ಪ್ರಶ್ನೆಗಳೆಂದರೆ:

೧. ಜಾತಿಪದ್ಧತಿಯ ಉದ್ದೇಶಗಳಾದರೂ ಏನಾಗಿತ್ತು? ಇಂದು ಜಾತಿ ಪದ್ಧತಿಯ ಅನುಸರಣೆ ಸಾಧ್ಯವೇ?

೨. ಅಂತರ್ಜಾತೀಯ ವಿವಾಹಗಳಿಗೆ ನಿಮ್ಮ ಬೆಂಬಲವಿದೆಯೇ? ಇರುವುದಾದರೆ। ಇಲ್ಲವಾದರೆ ಏಕೆ?

೩. ಜಾತಿ ಸಮಸ್ಯೆಗೆ ನೀವು ಸೂಚಿಸುವ ಪರಿಹಾರಗಳಾವುವು?

ಪು. ತಿ. ನ.

ಹಿರಿಯ ಕವಿ, ಚಿಂತಕ

೧. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳುತ್ತಾನೆ, 'ಚಾತುರ್ ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ'–ಎಂಬುದಾಗಿ. ಅದರ ಉದ್ದೇಶ ಪರಸ್ಪರ ಸಹಕಾರದಿಂದ ಒಂದು ಸರ್ವ ಸಮೃದ್ಧವಾದ ಸಮಾಜವನ್ನು ನಿರ್ಮಿಸಬೇಕೆಂಬುದು. ನಮ್ಮ ಭಾರತ ದೇಶ ಸಿರಿ–ಸಂಪತ್ತಿನಿಂದ ಕೂಡಿದ ದೇಶವಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಹೊನ್ನು ಹೊಳೆ ಬೀದಿ ಬೀದಿಗಳಲ್ಲಿ ಹರಿದಿತ್ತು. ಜನರಲ್ಲಿ ವಿದ್ಯಾಕೌಶಲ ಮತ್ತು ಕರ್ಮಶ್ರದ್ಧೆ ಇಲ್ಲದೆ ಹೋಗಿದ್ದರೆ ಹೊನ್ನು ಹೊಳೆ ಹೇಗೆ ಹರಿಯುತ್ತದೆ ದೇಶದಲ್ಲಿ? ಮೊಗಲರ ಕಾಲದಲ್ಲಿ ಕೂಡ ಇಷ್ಟು ದಾರಿದ್ರ್ಯ ದೇಶದಲ್ಲಿರಲಿಲ್ಲ. ದೇಶ ಬಡವಾದದ್ದು ಬ್ರಿಟಿಷರ ಕಾಲದಲ್ಲಿ. ವಿಷ್ಣು ಸಹಸ್ರನಾಮದ ಫಲಶ್ರುತಿಯಲ್ಲಿ ಈ ಮಾತುಗಳು ಬರುತ್ತವೆ– 'ವೇದಾಂತ ಗೋಬ್ರಾಹ್ಮಣಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ವೈಶ್ಯೋಧನ ಸಮೃದ್ಧ ಸ್ಯಾತ್ ಶೂದ್ರಸ್ತು ಸುಖ ಮಾಸ್ನುಯಾತ್,' ಆದುದರಿಂದ ಆಯಾಯ ಗುಣಕರ್ಮ ಪ್ರವೃತ್ತಿವುಳ್ಳವರು ಸಾಂಸ್ಕೃತಿಕವಾಗಿ ಮೂರು ವಲಯಗಳಲ್ಲಿ ಸ್ವತಂತ್ರವೂ ಆದರೆ ಪರಸ್ಪರ ಅವಲಂಬಿತರೂ ಆಗಿ ಕಾರ್ಯನಿರತರಾಗಿ ಇತರರಿಗೆ ಸಹಾಯಕರಾಗಿ, ತಾವೂ ಸುಖದಿಂದ ಇರುವ ಒಂದು ಸಮಾಜದ ವ್ಯವಸ್ಥೆ ಈ ಹರಕೆಯಲ್ಲಿದೆ. 'ವೈಶ್ಯೋಧನಸಮೃದ್ಧಸ್ಯಾತ್' ಎಂಬುದು ಬಹಳ ಮುಖ್ಯವಾದ ಮಾತು. ಕೃಷಿ, ವಾಣಿಜ್ಯ, ಗೋರಕ್ಷಾ ವೈಶ್ಯಂ ಕರ್ಮ ಸ್ವಭಾವಜಂ' ಎಂದು ಹೇಳಿದ್ದಾರೆ. ಬಾಕಿ ಮಿಕ್ಕ ಎರಡು ಈ ಮೂರನೆಯ ವಲಯವನ್ನು ಸುರಕ್ಷಿತವಾಗಿಯೂ, ಕಾರ್ಯನಿರತವಾಗಿಯೂ ಮಾಡುವಂತೆ ಹೊಣೆಯನ್ನು ಹೊತ್ತಿವೆ. ದೇಶದ ಐಶ್ವರ್ಯ–ಸುಖ–ಸಮೃದ್ಧಿ–ಸಂಪತ್ತನ್ನು ತರುವ ಎಲ್ಲ ಕಸುಬುಗಳೂ ವೈಶ್ಯರನ್ನವಲಂಬಿಸಿದೆ. ಪೂರ್ವಿಕರ ಉದ್ದೇಶ ಇದಾಗಿತ್ತು ಎಂದು ಕಾಣುತ್ತದೆ. ಸಾಮಾನ್ಯ ಜನರಲ್ಲಿ ಕೂಡ ವಿದ್ಯಾ, ಕರ್ಮ ಶ್ರದ್ಧೆ ಮತ್ತು ಕೌಶಲ ಇಲ್ಲದೇ ಹೋಗಿದ್ದರೆ ಐಶ್ವರ್ಯ ಎಂಬುದು ಬರೀ ಕನಸಿನ ಮಾತಾಗುತ್ತಿತ್ತು. ಈ ರೀತಿ ನನ್ನ ಆಲೋಚನೆ ಈಗ ಸದ್ಯಕ್ಕೆ ಓಡುತ್ತಿದೆ. ಆದರೆ ಇದು ತುಂಬಾ ಗಹನವಾದ ವಿಚಾರ. ನನ್ನ ಎಟುಕಿಗೆ ಮೀರಿದ್ದು. ಶುದ್ಧಾತ್ಮರು, ಲೋಕ ಹಿತಾಕಾಂಕ್ಷಿಗಳೂ ಆದ ತಿಳುವಳಿಕಸ್ಥರಿಂದ ಬಿಡಿಸ ಬೇಕಾದ ಸಮಸ್ಯೆ.

ಈಗ ಜಾತಿ ಪದ್ಧತಿಯ ಅನುಸರಣೆಯಿಂದ ಇತರರ ಮನಸ್ಸಿಗೆ ನೋವಾಗುವುದಾದರೆ, ಮೈತ್ರಿಭಾವ ಕೆಡುವುದಾದರೆ ಅದನ್ನು ಬಿಡುವುದು ಒಳ್ಳೆಯದು. ಈ ಸಂದರ್ಭದಲ್ಲಿ ವಿಷ್ಣು ಪುರಾಣದಲ್ಲಿ ಬರುವ ಮಾತನ್ನು ಹೇಳಬಯಸುವೆ. '**ನಯಸ್ಯ ಜನ್ಮಕರ್ಮಭ್ಯಾಂನವರ್ಣಾಶ್ರಮ ಜಾತಿಭಿಃ ಸಜ್ಜತೇಸ್ಮಿನ್ ಅಹಂಭಾವಃ ದೇ ಹೇ ವೈ ಸಹರೇ ಪ್ರಿಯಃ**–ಅಂದರೆ, ಯಾರಿಗೆ ತಮ್ಮ ಹುಟ್ಟನಿಂದಾಗಲೀ, ಕರ್ಮದಿಂದಾಗಲೀ, ವರ್ಣದಿಂದಾಗಲೀ, ಜಾತಿಯಿಂದಾಗಲೀ, ಆಶ್ರಮದಿಂದಾಗಲೀ ತಾನು ಸುಂದರ, ದೇಹದಿಂದ ಒಳ್ಳೆ ಬಲಿಷ್ಠ ಎಂದಾಗಲೀ ಅಹಂಕಾರ ಹುಟ್ಟುವುದಿಲ್ಲವೋ ಅವನು ಭಗವಂತನ ಪ್ರೀತಿಗೆ ಪಾತ್ರ.'

ಪ್ರಪಂಚದಲ್ಲಿ ಎಲ್ಲ ವೈಷಮ್ಯಗಳಿಗೂ ಅಹಂಕಾರವೇ ಮೂಲ. ಅದನ್ನು ನಾವು ಯಾವುದಾದರೂ ಒಂದು ದೊಡ್ಡ ಧ್ಯೇಯದಲ್ಲಿ ಲೀನಗೊಳಿಸಿ ನಾಶಪಡಿಸಬೇಕು. ಆ ದೊಡ್ಡ ಧ್ಯೇಯವೇ ಪರಸ್ಪರ ಪ್ರೀತಿ, ಮೈತ್ರಿ, ಸಮಾಧಾನ ಮತ್ತು ಸಹಕಾರ ಭಾವ.

೨. ನನ್ನ ಬೆಂಬಲವುಂಟು. ಏಕೆಂದರೆ, ಪರಸ್ಪರ ಪ್ರೀತಿ ಇಲ್ಲದೆ ಯಾರೂ ಯಾರನ್ನು ಮದುವೆ ಮಾಡಿಕೊಳ್ಳಕೂಡದು. ಈ ವಿಷಯದಲ್ಲಿ ಕಾಳಿದಾಸನು ಈ ಮಾತು ಗಮನಾರ್ಹವಾಗಿದೆ :– '**ವ್ಯತಿಷಜತಿ ಪದಾರ್ಥನಾಂತರಃ ಕೋಪಿ ಹೇತುಃ ನಖಲು ಬಹಿರ್ ಉಪಾಧೀನ್ ಪ್ರೀತಯಃ ಸಮ್ಶ್ರಯಂತೇ**'–ವ್ಯಕ್ತಿಗಳಿಗೆ ಹೊರಗಿನ ಉಪಾಧಿಗಳು ಏನೇ ಇರಲಿ ಪ್ರೀತಿಯೆಂಬುದನ್ನು ಅವರನ್ನು ಯಾವುದೋ ಒಂದು ಕಾರಣದಿಂದ ಕೂಡಿಸುತ್ತದೆ. ನಾನೂ ನನ್ನ ಹರಿಚರಿತೆಯಲ್ಲಿ ಈ ಮಾತನ್ನು ಬರೆದಿದ್ದೇನೆ– 'ಸ್ತ್ರೀ ಪುರುಷ ತನು ಮಿಲನ ಒಲವಿದ್ದರೆ ಎನಿತು ಪಚರಿವಂಗೈವುದು ದೈವಕೆ'– ಎಂದು. ಈ ಸಂದರ್ಭದಲ್ಲಿ ಅಂತರ್ಜಾತಿ ವಿವಾಹ ಸಮಾನ ಮನೋವೃತ್ತಿಯುಳ್ಳವರ ಜತೆಯಲ್ಲಿ ನಡೆಯುತ್ತಿದೆ. ಅದನ್ನು ಯಾರೂ ತಪ್ಪಿಸುವ ಹಾಗಿಲ್ಲ. ಅದನ್ನು ನಾನು ಸಾಧುವೂ ಹೌದು ಒಪ್ಪಿಕೊಳ್ಳುವೆ. ಅದು ಬರೀ ವ್ಯಾಮೋಹವಾಗದೆ, ಪ್ರೀತಿಯಲ್ಲಿ ನೆಲೆಯಾಗಿ ನಿಲ್ಲಲಿ ಎಂದು ಹಾರೈಸುತ್ತೇನೆ.

೩. ಗುಣ ಪಕ್ಷಪಾತ, ಮೈತ್ರಿ, ಪರಸ್ಪರ ಸಹಕಾರ ಭಾವನೆ, ಸ್ವಾಹಂಕಾರ ದಮನ– ಅಷ್ಟೆ.

ಎಸ್. ನಿಜಲಿಂಗಪ್ಪ

ಮಾಜಿ ಮುಖ್ಯಮಂತ್ರಿಗಳು

೧. ಜಾತಿ ಪದ್ಧತಿಯ ಉದ್ದೇಶವನ್ನು ಹುಡುಕುವುದು ತುಂಬಾ ಕಷ್ಟ. ಬಹುಶಃ ಕಸುಬಿನಿಂದ ಹುಟ್ಟಿರಬಹುದು. ಅಥವಾ ಯಾವುದಾದರೂ ಸಮಾಜ ಸುಧಾರಕನ ಅಭಿಪ್ರಾಯ ಮತ್ತು ಅದಕ್ಕೆ ತಕ್ಕ ಪ್ರಯತ್ನಗಳಿಂದ ಜಾತಿಗಳು ಹುಟ್ಟಿರಬಹುದು. ಕಾಲಕ್ರಮೇಣ ತಾನು ಯಾವ ಉದ್ದೇಶ, ಚಿಂತನೆಗಳಿಂದ ಹುಟ್ಟಿದೆ ಎಂಬುದನ್ನು ಮರೆತು ಕಡೆಗೆ ಅದರ ಗಮನವಿಲ್ಲದೆ, ಹೊಂದಾಣಿಕೆಯಿಲ್ಲದೆ ಹಾಗೂ ವಿಚಾರ ವಿಹೀನತೆಯಿಂದಲೂ ಅಂಧ ಅನುಕರಣೆಯಿಂದಲೂ ಬೆಳೆದು ಬಂದಿರಬೇಕು. ಅನೇಕರಿಗೆ ಬಹುಮಟ್ಟಿಗೆ ತಾವು ಅನುಸರಿಸುತ್ತಿರುವ ಜಾತಿಯ ಕುರುಹಾಗಲೀ, ಮೂಲವಾಗಲೀ, ಅವುಗಳ ಕಾರಣವಾಗಲೀ ತಿಳಿಯದು. ಅವುಗಳ ಬೇರುಗಳೇ ಮರೆತು ಹೋಗಿರುವುದರಿಂದ, ಅವುಗಳ ಅನುಕರಣೆ ಸಾಧುವಲ್ಲ.

೨. ಮೇಲ್ಕಂಡ ಕಾರಣಗಳ ಆಧಾರದ ಮೇಲೆ ಹೇಳುವುದಾದರೆ ಅಂತರ ಜಾತೀಯ ವಿವಾಹಕ್ಕೆ ನನ್ನ ಪೂರ್ಣಬೆಂಬಲವಿದೆ. ಆದರೂ ಮನುಷ್ಯ ಸಾಕಷ್ಟು ವಿಚಾರಪರನಾಗಿ, ಸಮಾಜದ ಜವಾಬ್ದಾರಿಗಳನ್ನು ತಿಳಿದು ಬೆಳೆಯುತ್ತ ಬಂದಿದ್ದಾನೆ. ಆದ್ದರಿಂದ ಯಾರು ಬೇಕಾದರೂ ಯಾರನ್ನಾದರೂ ಮನಸ್ಸಿಗೆ ಬಂದಂತೆ ವಿವಾಹವಾಗುವುದು ಸರಿಯಲ್ಲ. ಲಗ್ನವೆನ್ನುವುದು ಸಮಾಜದ ಅತ್ಯಂತ ಜವಾಬ್ದಾರಿಯ ಏರ್ಪಾಡು. ಅದು ಶಾಶ್ವತ ಹಾಗೂ ಪವಿತ್ರ ಹೊಂದಾಣಿಕೆ. ಗಂಡು ಹೆಣ್ಣು ಒಂದಾಗಿ ಸಂಬಂಧದ ಆ ಪವಿತ್ರತೆಯನ್ನು ಕಾಯ್ದುಕೊಂಡು, ಸಂಸಾರದ ಜವಾಬ್ದಾರಿಯನ್ನು ಕಾಪಾಡಿಕೊಂಡು ಹೋಗುವ ಏರ್ಪಾಡಿಗೆ ಒಪ್ಪಿ, ಸಂಬಧವನ್ನು ಕಲ್ಪಿಸಿಕೊಳ್ಳುವುದಾದರೆ, ಪೂರ್ತಿ ಜವಾಬ್ದಾರಿಯನ್ನು ಅರಿತು ಮದುವೆಯಾಗುವುದಾದರೆ, ಜಾತಿಮತ ಅಡ್ಡಿ ಬರಬೇಕಾಗಿಲ್ಲ. ಅಂತಹ ವಿವಾಹ ಸ್ವಾಗತಕ್ಕೆ ಯೋಗ್ಯವಾದುದು.

೩. ಇಂದಿನ ಜಾತಿ ಹೆಚ್ಚು ಕಡಿಮೆ ಭೂತಕಾರವಾಗಿ ಬೆಳೆದು ನಿಂತಿರುವುದು, ಯೋಗ್ಯ ಉದ್ಯೋಗಗಳ ಅಭಾವದ ಕಾರಣಕ್ಕಾಗಿ. ಈಗಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, ಮುಖ್ಯವಾಗಿ ಸರಕಾರಿ ನೌಕರಿಗಾಗಿ ಪ್ರಾಮುಖ್ಯತೆ ಪಡೆದಿರುವುದು ಸ್ಪಷ್ಟವಾಗುತ್ತದೆ. ಜಾತೀಯ ಆಧಾರದ ಮೇಲೆ ಮುಖ್ಯವಾಗಿ ನೌಕರಿಗೆ ಸೇರಿಸಿಕೊಳ್ಳದೆ, ಯೋಗ್ಯತೆ ಹಾಗೂ ಆರ್ಥಿಕ ಪರಿಸ್ಥಿತಿಗಳನ್ನು ಅವಲಂಬಿಸಿದರೆ, ಯಾವುದೇ ಅನ್ಯಾಯ ಆಗದೇ, ಯೋಗ್ಯರಿಗೆ ಜೀವನೋಪಾಯ ಮಾರ್ಗ ದೊರೆಯುತ್ತದೆ. ಈಗ ಜಾತಿಯ ಹೆಸರಿನಲ್ಲಿ, ದಲಿತರೂ, ಹಿಂದುಳಿದವರೂ ಆದವರಲ್ಲಿ, ಪ್ರಭಾವಶಾಲಿಗಳಿಗೆ ಅನುಕೂಲವಾಗುತ್ತಿದೆಯೇ ವಿನಹ ಅರ್ಹರಿಗಲ್ಲ. ಜಾತಿಯನ್ನು ಬಿಟ್ಟು ಬಡತನದ ರೇಖೆಯನ್ನು ನಿರ್ಧರಿಸಿ ಬಡವರಿಗೇ ಕಾಯ್ದಿಡುವುದು ಯೋಗ್ಯ.

ಎಚ್. ನರಸಿಂಹಯ್ಯ

ಶಿಕ್ಷಣ ತಜ್ಞ, ವಿಜ್ಞಾನಿ

೧. ಜಾತಿ ಪದ್ಧತಿಯ ಉದ್ದೇಶ ಏನಾಗಿತ್ತು ಅಂತ ನನಗೆ ಗೊತ್ತಿಲ್ಲ. ಆದರೆ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ. "ಚಾತುರ್ವಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ....": ಅಂದರೆ ನಾನು ಚಾತುರ್ವಣ್ಯವನ್ನು ಗುಣ ಕರ್ಮ ವಿಭಾಗದ ಮೇಲೆ ಸೃಷ್ಟಿಸಿದೆ. ನಮ್ಮಲ್ಲಿರುವುದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ನಾಲ್ಕು ವರ್ಣ (ಜಾತಿ) ಗಳನ್ನು ಶ್ರೀಕೃಷ್ಣ ಸೃಷ್ಟಿಸಿದ ಎಂದ ಹಾಗಾಯಿತು. ಈ ವರ್ಣ ಅಥವಾ ಜಾತಿ, ಗುಣ ಮತ್ತು ಅವನು ಮಾಡುವ ಕೆಲಸದ (ಕರ್ಮದ) ಮೇಲೆ ಅವಲಂಬಿಸಬೇಕು. ಖಂಡಿತ ಹುಟ್ಟಿನ ಮೇಲಲ್ಲ. ಅಂದರೆ ವಿದ್ಯೆಗೆ, ಪಾಂಡಿತ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುವವನು ಬ್ರಾಹ್ಮಣ, ಯುದ್ಧ ಮಾಡುವವನು ಕ್ಷತ್ರಿಯ, ವ್ಯವಸಾಯವನ್ನು ವಾಣಿಜ್ಯವನ್ನು ಅನುಸರಿಸುವವನು ವೈಶ್ಯ, ಪರಿಚಾರಿಕೆ ಕೆಲಸ, ಸೇವೆ ಮಾಡುವವನು ಶೂದ್ರ. ಶ್ರೀಕೃಷ್ಣನು ಹೇಳಿಕೆಯಂತೆ ಶೂದ್ರನ ಮಗ ಬ್ರಾಹ್ಮಣರ ಗುಣ, ಕರ್ಮಗಳನ್ನು ಅವಲಂಬಿಸಿದರೆ ಅವನು ಬ್ರಾಹ್ಮಣನಾಗಲು ಸಾಧ್ಯ. ಯಾರೇ ಸೈನ್ಯಕ್ಕೆ ಸೇರಲಿ ಅವನು ಕ್ಷತ್ರಿಯ. ಬ್ರಾಹ್ಮಣನ ಮಗ ಪರಿಚಾರಿಕೆ ಕೆಲಸ ಮಾಡಿದರೆ ಅವನು ಶೂದ್ರನಾಗುತ್ತಾನೆ. ಇವೆಲ್ಲಾ ಆಯಾಯ ಕಸುಬಿನ ಮೇಲೆ ಮಾತ್ರ ಅವಲಂಬಿಸುತ್ತದೆ.

ಈ ತಾರ್ಕಿಕವಾದ ವಿಗಂಡಣೆ ಪ್ರಪಂಚದಲ್ಲೆಲ್ಲಾ ಇದೆ. ಶ್ರೀಕೃಷ್ಣ ಹುಟ್ಟುವುದಕ್ಕಿಂತ ಮುಂಚೆಯೂ ಇತ್ತು. ಆದರೆ ಕಾಲಕ್ರಮೇಣ ಹುಟ್ಟು ಜಾತಿಯನ್ನು ನಿರ್ಧರಿಸುತ್ತದೆ ಎಂಬ ಸ್ಥಿತಿಗೆ ಬಂತು. ಜಾತಿಪದ್ಧತಿ ಒಂದು ಅನಿಷ್ಟ ಪದ್ಧತಿ. ಇದೊಂದು ಅಪೂರ್ವ ಸಾಮಾಜಿಕ ಅನ್ಯಾಯ. ಕೇವಲ ಹುಟ್ಟಿನ ಆಕಸ್ಮಿಕದ ಮೇಲೆ ಒಬ್ಬನ ಗುಣಾವಗುಣಗಳನ್ನು ಜೀವನ ಪರ್ಯಂತ ಅಳೆಯುವುದು ಅತ್ಯಂತ ಮೂರ್ಖತನ. ಹಿಂದೂಧರ್ಮದ ಅವಿಭಾಜ್ಯ ಅಂಗವಾಗಿರುವ ಈ ಜಾತಿಪದ್ಧತಿ ಒಂದು ಶಾಪವಾಗಿದೆ. ಇಂದೇ ಅಲ್ಲ ಎಂದೇ ಆಗಲಿ ಜಾತಿಪದ್ಧತಿಯನ್ನು ಅನುಸರಿಸುವುದು ಸರ್ವದಾ ಸಾಧುವಲ್ಲ.

೨. ಅಂತರ್ಜಾತೀಯ ವಿವಾಹಗಳಿಗೆ ನನ್ನ ಬೆಂಬಲ ಕೇವಲ ಔಪಚಾರಿಕವಾದದ್ದಲ್ಲ, ಅಚಲವಾದದ್ದು. ಏಕೆಂದರೆ ಜಾತಿಪದ್ಧತಿಯಿಂದ ನಮ್ಮ ಸಮಾಜಕ್ಕೆ ಅತ್ಯಂತ ಹೆಚ್ಚಿನ ಹಾನಿಯಾಗಿದೆ. ಅತ್ಯಂತ ಬಹುಸಂಖ್ಯಾತರಾಗಿರುವ ಶೂದ್ರ ಮತ್ತು ಪರಿಶಿಷ್ಟ ವರ್ಗದಲ್ಲಿ ಹುಟ್ಟಿದ ಕೋಟ್ಯಾಂತರ ಪ್ರತಿಭಾವಂತ ಮಕ್ಕಳು ಜಾತಿಯ ಆಧಾರದ ಮೇಲೆ ಮುಂದೆ ಬರಲು ಅವಕಾಶವಿಲ್ಲದೆ ಹಾಗೇ ನಂದಿಹೋಗಿದ್ದಾರೆ. ಶತಶತಮಾನಗಳಿಂದ ಬಂದಿರುವ ಈ ಸಾಮಾಜಿಕ ಅನ್ಯಾಯವನ್ನು ಮಾನವೀಯತೆಯಲ್ಲಿ ನಂಬಿಕೆ ಇರುವ ಯಾವ ಪ್ರಜ್ಞಾವಂತನೂ ಒಪ್ಪಲು ಸಾಧ್ಯವಿಲ್ಲ.

ಈಗ ಅಲ್ಲಲ್ಲಿ ಅಂತರ್ಜಾತಿಯ ವಿವಾಹಗಳಾಗುತ್ತಿವೆ. ಅಂತರ್ಜಾತೀಯ ವಿವಾಹಗಳು ಜಾತಿಪದ್ಧತಿಯನ್ನು ಹೋಗಲಾಡಿಸಲು ಮೊದಲನೆಯ ಅತ್ಯಂತ ಮುಖ್ಯ ದಿಟ್ಟ ಹೆಜ್ಜೆ. ಇದರಿಂದ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ಅಳಿಸಲು ಸಾಧ್ಯವಿಲ್ಲ. ಜಾತಿಪದ್ಧತಿಯ ಬಿಗಿಯನ್ನು

ಸಡಿಲಿಸುವುದರಲ್ಲಿ ಯಶಸ್ವಿಯಾಗಿದೆ. ಆದರೆ ಇದರಲ್ಲಿ ಜಾತಿಗಳು ಅಳಿಯಲು ಒಂದು ಬಲವಾದ ಅಡ್ಡಿ ಇದೆ. ಈಗ ಆಗುತ್ತಿರುವ ಅಂತರ್ಜಾತಿ ವಿವಾಹಗಳಲ್ಲಿ ಗಂಡು, ಹೆಣ್ಣು ಇಬ್ಬರಿಗೂ ಸಾಮಾನ್ಯವಾಗಿ ಜಾತಿಗಳಲ್ಲಿ ನಂಬಿಕೆ ಇರುತ್ತದೆ. ಒಬ್ಬರನ್ನೊಬ್ಬರು ಮೆಚ್ಚಿರುವ ಪ್ರಯುಕ್ತ ಜಾತಿಕಟ್ಟಳೆಯನ್ನು ಮೀರಿ ಮದುವೆ ಆಗುತ್ತಾರೆ. ಆದರೆ ಇಬ್ಬರಿಗೂ ಜಾತಿಗಳಲ್ಲಿ ನಂಬಿಕೆ ಇರುವುದರಿಂದ ಸಾಮಾನ್ಯವಾಗಿ ಈಗಿನ ನಿಯಮದಂತೆ ಗಂಡಿನ ಜಾತಿಗೆ ಹೆಂಡತಿಯು ಸೇರುತ್ತಾಳೆ. ಇದರಿಂದ ಹೆಂಡತಿಯ ಜಾತಿಯ ಜನಸಂಖ್ಯೆ ಒಂದು ಕಡಿಮೆ ಆದ ಹಾಗಾಯಿತು, ಗಂಡನ ಜಾತಿಯ ಜನಸಂಖ್ಯೆ ಒಂದು ಹೆಚ್ಚಿದ ಹಾಗಾಯಿತು ಅಷ್ಟೆ!. ಅವರ ಮಕ್ಕಳೂ ಅಪ್ಪನ ಜಾತಿಗೇ ಸೇರಿದವರೆಂದು ಪರಿಗಣಿಸಲ್ಪಡುತ್ತಾರೆ. ಆದುದರಿಂದ ಜಾತಿಪದ್ಧತಿ ಯಥಾವತ್ತಾಗಿ ಮುಂದುವರಿಯುತ್ತಲೇ ಇರುತ್ತದೆ. ಆದರೆ ಅಂತರ್ಜಾತಿ ವಿವಾಹಗಳು ಜಾತಿಪದ್ಧತಿ ಬಿಗಿಯನ್ನು ಸಡಿಲಿಸಲು ಮತ್ತು ಜಾತಿರಹಿತ ಸಮಾಜ ಕಟ್ಟಲು ಸಹಕಾರಿಯಾಗುತ್ತದೆ.

೩. ಜಾತಿರಹಿತ ಮದುವೆಗಳು ಜಾತಿ ವಿನಾಶಕ್ಕೆ ಅತ್ಯಂತ ಪರಿಣಾಮಕಾರಿಯಾದ ಮಾರ್ಗ. ಈ ಜಾತಿರಹಿತ ಮದುವೆಗಳಲ್ಲಿ ಗಂಡು, ಹೆಣ್ಣು ಇಬ್ಬರಿಗೂ ಜಾತಿಗಳಲ್ಲಿ ನಂಬಿಕೆ ಇರುವುದಿಲ್ಲ. ಆದುದರಿಂದ ಒಬ್ಬರು ಇನ್ನೊಬ್ಬರ ಜಾತಿಯನ್ನು ಸೇರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದುದರಿಂದ ಜಾತಿರಹಿತ ಮದುವೆಗಳಿಗೆ ಪ್ರೋತ್ಸಾಹ ಕೊಡಬೇಕು. ಅಂತರ್ಜಾತೀಯ ಅಥವಾ ಜಾತಿರಹಿತ ಮದುವೆಗಳಾಗಲು ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಟ್ಟವೂ ಸಹಕಾರಿಯಾಗಿರುತ್ತವೆ. ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಮುಂದಿರುವ 'ಕಡಿಮೆ' ಜಾತಿಯವರಿಗೂ ಮತ್ತು ಮೇಲ್ಜಾತಿಯವರಿಗೂ ಈಗೀಗ ಮದುವೆಗಳಾಗುತ್ತವೆ. ಆರ್ಥಿಕ ಸುಭದ್ರತೆ ಮತ್ತು ಸಂಸ್ಕೃತಿ ಮುಖ್ಯವಾಗುತ್ತದೆ, ಜಾತಿ ಗೌಣವಾಗುತ್ತದೆ ಮತ್ತು ನಮಗೆಲ್ಲಾ ತಿಳಿದ ಹಾಗೆ ಸಾಮಾಜಿಕ ಬದಲಾವಣೆಗೆ ಅತ್ಯಂತ ಮುಖ್ಯವಾದ ಸಾಧನ ಶಿಕ್ಷಣ. ಆದುದರಿಂದ ಶಿಕ್ಷಣವನ್ನು ಈ ಕಾರ್ಯ ಸಾಧನೆಗಾಗಿ ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು. ಜಾತಿಪದ್ಧತಿಯಿಂದ ಆಗುವ, ಆಗುತ್ತಿರುವ ಅನ್ಯಾಯಗಳನ್ನು ಶಿಕ್ಷಣ ಪದ್ಧತಿಯಲ್ಲಿ ಸೇರಿಸಬೇಕು. ಅಂತರ್ಜಾತೀಯ ಮತ್ತು ಜಾತಿ ರಹಿತ ಮದುವೆಗಳಿಂದ ಜಾತಿ ನಾಶವಾಗುವ ಸಂಭವವನ್ನು ತಿಳಿಸಬೇಕು. ಸರ್ಕಾರ ಸಕ್ರಿಯವಾಗಿ ಇದನ್ನು ಕಾರ್ಯಗತ ಮಾಡಲು ಎಲ್ಲಾ ವಿಧವಾದ ಪ್ರೋತ್ಸಾಹ ಕೊಡಬೇಕು. ಪ್ರಗತಿಪರ ರಾಜಕೀಯ ಪಕ್ಷಗಳು, ಸಮಾಜಸೇವಾ ಸಂಸ್ಥೆಗಳು ಮತ್ತು ಸಮಾಜಸೇವಕರು ಮೇಲ್ಪಂಕ್ತಿ ಹಾಕಿಕೊಟ್ಟು ಮಾರ್ಗದರ್ಶನ ಮಾಡಬೇಕು.

ಚದುರಂಗ

ಹಿರಿಯ ಸಾಹಿತಿಗಳು

೧. ಜಾತಿ ಪದ್ಧತಿಯ ಉದ್ದೇಶ ಸ್ಪಷ್ಟ–ಶ್ರೇಣೀಕೃತ ಸಮಾಜವನ್ನು ಉಳಿಸಿ ಕೊಳ್ಳುವುದು. ಇಂದು ಖಂಡಿತ ಸಾಧ್ಯವಿಲ್ಲ.

೨. ಅಂತರ್ಜಾತೀಯ/ ಅಂತರ್ಧರ್ಮೀಯ ವಿವಾಹಗಳಿಗೆ ನನ್ನ ಬೆಂಬಲ ಇದೆ. ನಾನೇ ಪ್ರಮುಖವಾಗಿ ನಿಂತು ಇಂಥ ವಿವಾಹಗಳನ್ನು ನಡೆಸಿಕೊಟ್ಟಿರುವುದೂ ಉಂಟು.

೩. ಇಂದಿನ ಜಾತಿ ವ್ಯವಸ್ಥೆಗೆ ನನಗೆ ತಿಳಿದಿರುವ ಒಂದೇ ಪರಿಹಾರವೆಂದರೆ– ಅಂತರ್ಜಾತೀಯ/ ಅಂತರ್ಧರ್ಮೀಯ ವಿವಾಹಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುವಂತೆ ಮಾಡುವುದು. ವಿಚಾರವಂತರು ಒಟ್ಟಾಗಿ ಅಂಥವರಿಗೆ ನೆರವಾಗುವುದು.

ಕೆ.ವಿ. ಸುಬ್ಬಣ್ಣ

ಮ್ಯಾಗ್ಸಸೆ ಪ್ರಶಸ್ತಿ ವಿಜೇತ, ಹಿರಿಯ ರಂಗತಜ್ಞ

ಜಾತಿ ಪದ್ಧತಿಯು ನಮ್ಮ ಇತಿಹಾಸದಲ್ಲಿ ಬಹಳ ದೀರ್ಘಕಾಲ ಬಾಳಿಕೊಂಡು ಬಂದಿದೆ. ಇದರ ಉದ್ದೇಶವೇನಾಗಿತ್ತು ಮತ್ತು ಅದು ಎಷ್ಟು ಉಪಯುಕ್ತವಾಗಿತ್ತು ಅಥವಾ ಎಷ್ಟು ಅಪಾಯಕಾರಿಯಾಗಿತ್ತು– ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ. ಅದನ್ನು ಖಚಿತವಾಗಿ ಹೇಳಲು ಪ್ರಾಯಶಃ ಸಿಗುವ ಆಧಾರಗಳು ಸಾಲದೆ ಹೋಗಬಹುದು ಮತ್ತು ಅತ್ಯಂತ ಸಂಕೀರ್ಣವಾಗಿರುವ ಈ ವಿಷಯದ ಬಗ್ಗೆ ಅತ್ಯಂತ ವ್ಯಾಪಕ ಸಂಶೋಧನೆಯನ್ನು ನಡೆಸಬೇಕಾದೀತು. ಇಂಥ ಸಂಶೋಧನೆಗೆ ಅನೇಕ ಕ್ಷೇತ್ರ–ಭಾಷೆಗಳಲ್ಲಿ ವ್ಯಾಪಕ ಪಾಂಡಿತ್ಯವೂ ಅಗತ್ಯವಾಗುತ್ತದೆ. ಈ ಬಗ್ಗೆ ಈಗಾಗಲೇ ಅಸಂಖ್ಯಾತ ಬರವಣಿಗೆಗಳು ಪ್ರಕಟವಾಗಿವೆ ಮತ್ತು ಅಂತಿಮವಾಗಿ ಯಾವುದೂ ಪೂರ್ತಾ ತೃಪ್ತಿಕರವೆನ್ನಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಅಂಥ ಪಾಂಡಿತ್ಯವಿಲ್ಲದ ನಾನು ಜಾತಿಪದ್ಧತಿಯ ಹಿಂದಿನ ಉದ್ದೇಶ ಉಪಯುಕ್ತತೆ ಅಪಾಯಗಳ ಬಗ್ಗೆ ನಿರ್ವಹಿಸಲಾರೆ. ಆದರೆ, ಜಾತಿ ಪದ್ಧತಿಯು ಕೆಲವೇ ಮಂದಿ 'ಪಟ್ಟಭದ್ರರ ಹಿತಾಸಕ್ತಿ' ಯನ್ನು ಕಾಯಲಿಕ್ಕಾಗಿಯೇ ಹುಟ್ಟಿ ಹಾಗೇ ಈ ದೀರ್ಘಕಾಲವೂ ಬೆಳೆದು ಕೊಂಡು ಬಂದಿತು ಎನ್ನುವ ಸರಳೀಕೃತವಾದವನ್ನೂ ಒಪ್ಪಿಕೊಳ್ಳಲಾರೆ.

ಹೇಗೂ ಇವತ್ತಿನ ಕಾಲಕ್ಕೆ ಅದು ನಿಷ್ಪ್ರಯೋಜಕ ಮತ್ತು ಸದ್ಯದ ನಮ್ಮ ಬದುಕಿಗೆ ಅಪಾಯಕಾರಿ, ವಿನಾಶಕಾರಿ ಎನ್ನುವುದನ್ನು ನಾವು ಸುಮಾರು ಒಂದು ಶತಮಾನದ ನಮ್ಮ ಹೊಸ ಇತಿಹಾಸದಲ್ಲಿ ಕಂಡು

ಖಚಿತಪಡಿಸಿಕೊಂಡಿದ್ದೇವೆ. ಆದಕಾರಣ, ಈಗ ನಮ್ಮ ಗಮನವಷ್ಟು ಮುಖ್ಯವಾಗಿ, ಜಾತಿಪದ್ಧತಿಯನ್ನು ಸಂಪೂರ್ಣವಾಗಿ ಮೂಲೋತ್ಪಾಟನ ಮಾಡುವ ಬಗ್ಗೆಯೇ ಕೇಂದ್ರೀಕೃತವಾಗಬೇಕು.

ಕಳೆದ ಒಂದು ಶತಮಾನದ ಅವಧಿಯಲ್ಲಿ ನಮಗೆ ಅದು ಅನಗತ್ಯ, ಅಪಾಯಕಾರಿ ಅಂತ ಕಂಡಿದೆ ಎಂದೇನಲ್ಲ? ಈ ಕಾರಣದಿಂದಲೇ ನಮಲ್ಲಿ ಜಾತಿಪದ್ಧತಿಯ ನಿರ್ಮೂಲನದ ಬಗ್ಗೆ ಅನೇಕ ಬಗೆಯ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳೆಲ್ಲಾ ಯಶಸ್ವಿಯಾಗಿದೆ ಎನ್ನಲಾರೆವಾದರೂ ಸುಮಾರು ಕಳೆದ ಐವತ್ತು ವರ್ಷಗಳನ್ನು ಗಮನದಲ್ಲಿಟ್ಟು ನೋಡುವಾಗ ದಶಕದಿಂದ ದಶಕಕ್ಕೆ ಈ ಜಾತಿಪದ್ಧತಿಯ ಬಗೆಗಿನ ನಂಬಿಕೆ– ಆಚರಣೆಗಳು ಕಡಿಮೆಯಾಗುತ್ತ ಬಂದಿರುವುದನ್ನು ಗಮನಿಸಬಹುದು. ಸಹಸ್ರಾರು ವರ್ಷಗಳಿಂದ ಆಚರಣೆಯಲ್ಲಿ ಬಂದಿರುವ ಈ ಪದ್ಧತಿಯನ್ನು ಸಂಪೂರ್ಣವಾಗಿ ಉಚ್ಚಾಟನೆಗೊಳಿಸಲಿಕ್ಕೆ ಇನ್ನೂ ಹೆಚ್ಚು ಕಾಲವು ಹಿಡಿದೀತು ಮತ್ತು ಈ ದಿಶೆಯಲ್ಲಿ ನಾವು ಅರಿವನ್ನು ಬೆಳೆಸಿಕೊಳ್ಳುತ್ತ, ಇನ್ನೂ ಮೌಲಿಕವಾದ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ತಕ್ಕ ದೃಢ ನಿಶ್ಚಯವನ್ನೂ ತಾಳ್ಮೆಯನ್ನೂ ನಾವು ಬೆಳೆಸಿಕೊಳ್ಳಬೇಕು ಮತ್ತು ಈ ಬಗ್ಗೆ ಭರವಸೆ ತಾಳಿ ಪ್ರಯತ್ನ ನಡೆಸಬೇಕು.

ನಮ್ಮ ಸ್ವಾತಂತ್ರ್ಯಾನಂತರದ ಪ್ರಜಾಪ್ರಭುತ್ವ ವ್ಯವಸ್ಥೆಯ ದಿನಗಳಲ್ಲಿ, ಅಂದರೆ ಈ ಐವತ್ತು ವರ್ಷಗಳಲ್ಲಿ, ಜಾತಿಪದ್ಧತಿಯು ಹೆಚ್ಚುತ್ತ, ಬೆಳೆದುಕೊಳ್ಳುತ್ತ ಬರುತ್ತಿದೆ ಎನ್ನುವುದುಂಟು. ಪ್ರಾಯಶಃ, ಅದು ಸುಳ್ಳಲ್ಲ, ಏಕೆ ಹೀಗೆ? ಹಿಂದೆ ಪಟ್ಟಭದ್ರರು ತಮ್ಮ ಹಿತಾಸಕ್ತಿಗಾಗಿ ಜಾತಿ ಪದ್ಧತಿಯನ್ನು ದುರುಪಯೋಗ ಮಾಡಿಕೊಂಡ ಹಾಗೆ, ಇವತ್ತು ನಮ್ಮ ರಾಜಕಾರಣಿಗಳು ಮತ್ತು ಜಿಲ್ಲಾ ಕ್ಷೇತ್ರಗಳವರೂ ಜಾತಿಯನ್ನು ತಮ್ಮ ವೈಯಕ್ತಿಕ ಲಾಭ ವರ್ಚಸ್ಸುಗಳಿಗಾಗಿ ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ ಎಂಬುದಂತೂ ನಿಜವೇ. ಅದು ಮಾತ್ರವಲ್ಲ, ರಾಷ್ಟ್ರಾದ್ಯಂತ ಸಾಮಾನ್ಯ ಜನವರ್ಗಗಳಲ್ಲೂ ಈ ಜಾತಿ ಪ್ರೀತಿಯು ಕ್ರಮೇಣ ಹೆಚ್ಚುತ್ತಲೇ ಬರುತ್ತಿದೆಯಲ್ಲವೆ–ಅಂತ ಯಾರಾದರೂ ಕೇಳಿದರೆ, ಮೇಲುನೋಟಕ್ಕೆ ಅದು ಹೌದು ಅಂತಲೇ ಒಪ್ಪಿಕೊಳ್ಳಬೇಕಾಗುತ್ತದೆ. ಇದು ಯಾತಕ್ಕೆ?

ಕಳೆದ ಒಂದೆರಡು ದಶಕಗಳಲ್ಲಿ ಸಾಮಾನ್ಯ ಜನರು ತಮ್ಮ ಜಾತಿಗಳನ್ನು ಗುರುತಿಸಿಕೊಳ್ಳುವುದರಲ್ಲಿ ಭಾರೀ ಆಸಕ್ತಿ ತೋರಿಸುತ್ತಿದ್ದಾರೆ ಎನ್ನುವುದು ನಿಜವಾದರೂ ಅದು ವಾಸ್ತವವಾಗಿ ಹಿಂದಿನ ಸಾಂಪ್ರದಾಯಿಕ ಜಾತಿಯ ಬಗೆಗಿನ ಪ್ರೀತಿಯಲ್ಲ ಎಂಬ ಸೂಕ್ಷ್ಮವನ್ನು ನಾವು ಗಮನಿಸಬೇಕು. ಇವತ್ತು ಜಾತಿಯ ಬಗ್ಗೆ ಆಸಕ್ತಿ ತೋರಿಸುತ್ತಿರುವವರು, ಹಿಂದೆ ಇದ್ದ ಆಯಾ ಜಾತಿಗಳ ನಂಬಿಕೆ–ಆಚಾರ–ನಡವಳಿಕೆಗಳನ್ನು ಕೈಬಿಟ್ಟು ಆಧುನಿಕವಾದ ನಂಬಿಕೆ–ಆಚಾರ–ನಡಾವಳಿಗಳನ್ನು ಅಳವಡಿಸಿ ಕೊಳ್ಳಲು ಉತ್ಸುಕರಾಗಿದ್ದಾರೆ. ಅಂದರೆ ಇದರ ಅರ್ಥ, ನಿಜವಾಗಿಯೂ ಈಗ ನಮಗೆ ಸಾಮಾನ್ಯ ಜನವರ್ಗದಲ್ಲಿ ಕಾಣುವ ಜಾತೀಯತೆಯು ಹಳೆಯ ರೀತಿಯ ಜಾತೀಯತೆಯಲ್ಲ–ಎಂಬುದು.

ನಮ್ಮ ರಾಷ್ಟ್ರವು ಸ್ವತಂತ್ರವಾದಮೇಲೆ, ನಾವು ನಮ್ಮ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಯೋಚಿಸಿಕೊಂಡಂತೆ, ಆ ಸ್ವಾತಂತ್ರ್ಯವನ್ನು– ಅರ್ಥಾತ್, ಅಧಿಕಾರವನ್ನು ಜನವರ್ಗಗಳಿಗೆ ಪ್ರದೇಶಗಳಿಗೆ ಬಿಟ್ಟು ಕೊಡದೆ ಕೆಲಕೆಲವು ಕೇಂದ್ರಗಳಲ್ಲಿ ಕೇಂದ್ರೀಕರಿಸಿ ಇಟ್ಟುಕೊಂಡಿದ್ದೇವೆ. ಹೀಗೆ ಸ್ವಾತಂತ್ರ್ಯದಿಂದ, ಅಧಿಕಾರದಿಂದ ವಂಚಿತರಾಗಿರುವ ಜನರು ಈ ಐವತ್ತು ವರ್ಷಗಳಲ್ಲಿ ಹೆಚ್ಚು ಹೆಚ್ಚು ಅತೃಪ್ತರಾಗುತ್ತಿದ್ದಾರೆ, ಅಸಹನೆಗೊಳ್ಳುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಜನರು ತಮ್ಮ ಸ್ಥಳೀಯ ಕಿರು ಸಮುದಾಯಗಳ ಅಸ್ತಿತ್ವ, ಅಧಿಕಾರಗಳನ್ನು ಪಡೆದುಕೊಳ್ಳಲು ಕಾತರರಾಗಿದ್ದಾರೆ. ಚುನಾವಣೆಗಳಲ್ಲಿ, ಮೀಸಲಾತಿಗಳಲ್ಲಿ, ಅಧಿಕಾರದ ಹಂಚಿಕೆಗಳಲ್ಲಿ ಮತ್ತು ಇನ್ನಿತರ ಸಂಗತಿಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿ ಕೊಳ್ಳಲಿಕ್ಕಾಗಿ ಜನರು ಸಮುದಾಯಗಳಾಗಿ ಸಂಘಟಿತಗೊಳ್ಳ ಬೇಕಾಗಿದೆ. ಇಂಥ ಸಂಘಟನೆಗೆ ಅವರಿಗೆ ಸುಲಭವಾಗಿ ಒದಗಿರುವ ಸಾಧನವೆಂದರೆ, ಬಹುಕಾಲದಿಂದ ಈ ದೇಶದಲ್ಲಿ ಬಾಳಿಕೊಂಡು ಬಂದಿರುವ 'ಜಾತಿ'ಯೇ.

ನಾವು ಈಗಿನ ನಮ್ಮ ರಾಜನೀತಿಯ ದಿಕ್ಕನ್ನು ಬದಲಿಸಿ, ಇಡೀ ರಾಷ್ಟ್ರ ವ್ಯವಹಾರವು ವಿಕೇಂದ್ರೀಕೃತವಾಗಿ ನಡೆಯುವಂತೆ, ರಾಷ್ಟ್ರವು ಅಂತಿಮವಾಗಿ ಲಕ್ಷಾಂತರ ಸ್ವತಂತ್ರ ಕಿರು ಗ್ರಾಮ ಸಮುದಾಯಗಳ ಮಹಾಒಕ್ಕೂಟವಾಗುವಂತೆ ಮಾಡಲು ಶ್ರಮಿಸಬೇಕು. ಇಂಥ ವಿಕೇಂದ್ರೀಕರಣದಿಂದ ಸ್ಥಳೀಯ ಕಿರುಸಮುದಾಯಗಳಿಗೆ ಅವುಗಳ ಆಜನ್ಮ ಹಕ್ಕಾಗಿರುವ ಸ್ವಾತಂತ್ರ್ಯವು ಲಭ್ಯವಾಗುತ್ತದೆ ಮತ್ತು ಆಗ ಅವು ಬೇರೆ ಉಪಾಯವಿಲ್ಲದೆ ಈಗ ಮುಷ್ಟಿಯಲ್ಲಿ ಬಿಗಿ ಹಿಡಿದು ಕೊಂಡಿರುವ 'ಜಾತಿ' ಯನ್ನು ಬಿಟ್ಟುಕೊಟ್ಟು 'ಪ್ರದೇಶ ಸಮುದಾಯ' ಅಥವಾ 'ಗ್ರಾಮ ಸಮುದಾಯ'ಗಳಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತವೆ. ಜಾತಿ ಪದ್ಧತಿಯನ್ನು ನಿರ್ಮೂಲಗೊಳಿಸಲಿಕ್ಕೆ ಇವತ್ತು ನಮ್ಮಲ್ಲಿ ಆಗಬೇಕಾದ ಅತಿಮುಖ್ಯವಾದ ಕೆಲಸವೆಂದರೆ, ವಿಕೇಂದ್ರೀಕರಣ ಮತ್ತು ಆ ಮೂಲಕ ಹೊಸ ಕಿರು ಗ್ರಾಮಸಮುದಾಯಗಳ ಪುನರ್ನಿರ್ಮಾಣ.

ಜಾತಿಪದ್ಧತಿಯ ನಿವಾರಣೆಯ ಬಗ್ಗೆ ನಮ್ಮ ಅರಿವನ್ನು ಜೀವಂತವಾಗಿಟ್ಟು ಕೊಳ್ಳಲಿಕ್ಕೆ ಮತ್ತು ತೀವ್ರಗೊಳಿಸಿಕೊಳ್ಳಲಿಕ್ಕೆ ಹಲವು ಬಗೆಯ ಸಾಮುದಾಯಿಕ–ವಿಧಾಯಕ ಕಾರ್ಯಕ್ರಮಗಳನ್ನು ಸತತವಾಗಿ ನಡೆಸಿಕೊಳ್ಳುತ್ತ ಹೋಗುವುದೂ ಅತ್ಯಗತ್ಯ. ಇಂಥ ಕಾರ್ಯಕ್ರಮಗಳಲ್ಲಿ ಅತ್ಯಂತ ಮೌಲಿಕವೂ ಮುಖ್ಯವೂ ಆದದ್ದು, ಅಂತರ್ಜಾತಿ ವಿವಾಹ. ಜಾತಿಪದ್ಧತಿಯು ಮುಖ್ಯವಾಗಿ ನಿಂತಿರುವುದು ರಕ್ತ ಸಂಬಂಧಗಳನ್ನು ಆಧರಿಸಿಯೇ. ಆದ್ದರಿಂದ ರಕ್ತ ಸಂಬಂಧಗಳಲ್ಲಿನ ಸಂಕರದಿಂದ ಜಾತಿ ರೂಢಿಯು ತಂತಾನೇ ನಾಶಗೊಳ್ಳತೊಡಗುತ್ತದೆ. ಆದರೆ ಈ ಕಾರ್ಯಕ್ರಮವು ಎಷ್ಟು ಮುಖ್ಯವಾದದ್ದೋ ಅಷ್ಟೇ ಕಷ್ಟವಾದದ್ದು ಕೂಡಾ. ಮದುವೆಯೆನ್ನುವುದು ಪ್ರಥಮತಃ, ಹೆಣ್ಣು ಗಂಡಿನ ಸಮಾನ ಮನಸ್ಕತೆ ಸಹೃದಯತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿರುತ್ತದೆ. ಅದನ್ನು ಕಡೆಗಣಿಸಲಿಕ್ಕೆ ಬರುವುದಿಲ್ಲ. ಅದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಕೊಂಡು ಅನಂತರ, ಅದರ ಜತೆಯಲ್ಲಿ ಸಮಾಜಸುಧಾರಣೆಯ ಜಾತಿ ನಿರ್ಮೂಲನದ ಸಂಗತಿಗಳು ಹೊಂದಿ ಕೊಳ್ಳುವಂತೆ ನೋಡಿಕೊಳ್ಳ ಬೇಕಾಗುತ್ತದೆ. ಆದ್ದರಿಂದಲೇ ಇದು ಸುಲಭವಾದದ್ದಲ್ಲ. ಸುಲಭವಲ್ಲದಿದ್ದಾಗ್ಯೂ ಈ ದಿಶೆಯಲ್ಲಿ ನಮ್ಮ ತೀವ್ರವಾದ ಪ್ರಯತ್ನಗಳು ನಡೆಯಲೇಬೇಕು.

(ಈ ಕಿರು ಟಿಪ್ಪಣಿಯು ನನ್ನನ್ನು ಕೇಳಲಾದ ಮೂರು ಪ್ರಶ್ನೆಗಳಿಗೆ ಒಟ್ಟೂ ಉತ್ತರವಾಗಿ ಬರೆದದ್ದು– ಲೇ.)

ಇದೋ ನಮ್ಮ ನಮನ

ನಾಡಿನೊಲವಿನ ವಿವಾಹಿತರಿಗೆ ಇದೋ ನಮ್ಮ ನಮನ
ಹಾಡುತಲಿವೆ ಖಗ ಕೋಗಿಲೆಗಳು ನಿಮ್ಮದೇ ಗಾನ
ಜನಜನರೆದೆಯಲಿ ಪ್ರೀತಿಯ ಬೆಲೆಯನು
ತೋರಿದ ಸಾಧನೆ ಹಿರಿದು
ಸಂತರು ಶರಣರು ಮಹಾತ್ಮರಾದುದು
ಇದೇ ತತ್ತ್ವವನರಿದು
ಜಾತೀಯ ಭೂತಕೆ ಇನಿತೂ ಅಳುಕದೆ
ಗುಣಾದರ್ಶಗಳ ಮೆಚ್ಚಿದಿರಿ
ಪ್ರೀತಿಯ ಮಂತ್ರದ ಬಿಡದಲೆ ಜಪಿಸುತ
ಜಾತೀಯ ಭೂತವ ಬಿಡಿಸಿದಿರಿ
ಜಾತಿಯ ಕತ್ತಲೆ ಹರಡಿರುವಲ್ಲಿ ಪ್ರೀತಿಯ ಹಣತೆಯ ಹಚ್ಚಿದಿರಿ
ಹಣವಂತಸ್ತುಗಳ ಗೊಂಡಾರಣ್ಯದಿ ಪ್ರೇಮದ ಪರಿಮಳ ಹರಡದಿರಿ
ನಾಡಿನಲೀಗ ನೀವೇ ರವಿಶಶಿ
ನೀವು ನಡೆದುದೇ ಬೆಳಕು
ನಿಮ್ಮ ಧೈರ್ಯ, ನಿಷ್ಠೆ, ಛಲಗಳು
ತೊಳೆಯಲಿ ಜಾತಿಯ ಕೊಳಕು
ಹಿರಿಯರ ಹರಕೆ ಇರಲಿ, ಬಿಡಲಿ; ನಾವು ಜೊತೆಯಲಿ ಬರುತಿಹೆವು
ಜಾತಿ ಹಣಗಳ ಅದ್ದೂರಿತನಗಳ ಮರೆತವರೊಂದಿಗೆ ಇರುತಿಹೆವು

ಬೇಡರ ಕುಲದ ವಿಶ್ವಾಮಿತ್ರನು, ಅರ್ಯಕನ್ನಿಕೆ ಮೇನಕೆಯು
ಇವರ ಸುತೆಯನು ಮೋಹಿಸಿದಾತನು ಕ್ಷತ್ರಿಯರಾಜ ದುಷ್ಯಂತನು
ದುಷ್ಯಂತ ಶಾಕುಂತಲೆಯರ ಒಲವಿನ ಕುಡಿಯೇ ವೀರ ಭರತನು
ಜಾತಿಯೇ ಇಲ್ಲದ ಒಲವಿನ ಪುತ್ರನ ಹೆಸರೇ ಭಾರತ ದೇಶದ್ದು

ಭಾರತ ಮಾತೆಯ ಭವ್ಯ ಹೆಸರಿನ ಹಿನ್ನೆಲೆಯನ್ನು ಅರಿಯೋಣ
ಜಾತಿಮತಗಳ ಕತ್ತಲೆಯನ್ನು ದೇಶದಿಂದಲೇ ಅಳಿಸೋಣ
ಒಲವಿನ ವಿವಾಹಿತರೇ ನಿಜಭಾರತೀಯರು
ಜಾತ್ಯಾತೀತರೇ ಭಾರತಾಂಬೆ ಸುಪುತ್ರರು
ನಾಡಿನೊಲವಿನ ವಿವಾಹಿತರೇ ನಿಮಗಿದೋ ನಮ್ಮ ನಮನ
ನವ ಸಮಾಜದ ಮಹಾರಥಿಗಳೇ ಶುಭ ಕೋರುತಿದೆ ನಮ್ಮ ಮನ

—ನೀಲಗುಂದ ಶ್ರೀ ವೀರಮಹಂತೇಶ್ವರ
ಶಿವಾಚಾರ್ಯ ಮಹಾಸ್ವಾಮಿಗಳು

ಮಂಥನ

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮತ್ತು ಅಂತರ್ಜಾತಿ ವಿವಾಹವಾಗಿರುವ ಆಯ್ದ ಕೆಲವು ಮಹನೀಯರುಗಳಿಗೆ ಐದು ಪ್ರಶ್ನೆಗಳನ್ನು ಕಳಿಸಿ, ತರಿಸಿಕೊಂಡ ಉತ್ತರಗಳು ಇಲ್ಲಿವೆ. ನಾವು ಕೇಳಿದ ಪ್ರಶ್ನೆಗಳು ಇವು:

೧. ತಾವು ಅಂತರ್ಜಾತಿ ವಿವಾಹವಾದುದಕ್ಕೆ ಒಲವು ಮಾತ್ರ ಕಾರಣವೋ? ಅಥವಾ ಏನಾದರೂ ಸಾಮಾಜಿಕ ಪ್ರತಿಭಟನೆಯ ಉದ್ದೇಶವಿದ್ದಿತೋ?

೨. ತಮ್ಮ ವಿವಾಹಕ್ಕೆ ಸಮಾಜದ/ಬಂಧು ಬಾಂಧವರ ಪ್ರತಿಕ್ರಿಯೆ ಹೇಗಿತ್ತು?

೩. ವಿಭಿನ್ನ ಸಾಮಾಜಿಕ/ಸಂಸ್ಕಾರಗಳ ಹಿನ್ನೆಲೆಗಳಿರುವುದರಿಂದ ಅಂತರ್ಜಾತಿ ವಿವಾಹಗಳಲ್ಲಿ 'ಅಪಾಯ'ದ ಅಂಶ ಹೆಚ್ಚು ಎನ್ನುವುದು ಎಷ್ಟು ಸರಿ?

೪. ಅಂತರ್ಜಾತಿ ವಿವಾಹಗಳಿಗೆ ಸರ್ಕಾರದ ಪ್ರೋತ್ಸಾಹ ಬೇಕೆ?

೫. ಅಂತರ್ಜಾತಿ ವಿವಾಹವಾಗಬಯಸುವವರಿಗೆ ನೀವು ವಿಶೇಷವಾಗಿ ಏನು ಹೇಳ ಬಯಸುವಿರಿ.

ಡಾ॥ ಕೆ. ಶಿವರಾಮ ಕಾರಂತ

ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ

೧. ನಾನು ಪ್ರಬುದ್ಧನಾಗತೊಡಗಿದಾಗಲೇ ವಿವಾಹ ಬಂಧನಕ್ಕೆ ಜಾತಿ ನಿರ್ಬಂಧ ಬೇಕಿಲ್ಲ ಎಂದು ತಿಳಿದವನು. ಹೀಗಾಗಿ ಸ್ವತಂತ್ರ ಜೀವನ ನಡೆಸುತ್ತಿದ್ದ ನನಗೆ ಸಮಾಜದ ಭಯ ಇರಲಿಲ್ಲ.

೨. ಸ್ವಜಾತಿಯ ಬಂಧು ಬಾಂಧವರ ಹಾಗೂ ನನ್ನ ತಂದೆ–ತಾಯಿಯವರ ಸಮ್ಮತಿ ಸಿಗಲಾರದೆಂಬುದು ಸ್ಪಷ್ಟ. ಅನುಮತಿ ಹಾರೈಸಲೂ ಇಲ್ಲ.

೩. ಸಮಾಜದವರು ನನ್ನ ಕೋಟ ಬ್ರಾಹ್ಮಣರು ಉಸಿರೆತ್ತಲಿಲ್ಲ. ಉಡುಪಿ ಮಠದ ಒಬ್ಬ ವಿದ್ವಾಂಸ ಬಹಿರಂಗವಾಗಿ ಅಪಾರ್ಥ ಬರುವ ಚರ್ಚೆ ಮಾಡಿದ. ಅವನ ನಿಂದಾತ್ಮಕ ಲೇಖನಕ್ಕೆ–ಅಪಾರ್ಥ ಬರುವಂತಿದ್ದರಿಂದ–ಅವನ ಮೇಲೆ ಮಾನನಷ್ಟ ಹೂಡಬೇಕಾಯಿತು. ಅದು ಹೈಕೋರ್ಟಿನ ತನಕ ಹೋಯಿತು. ಕೋರ್ಟು ಅವನಿಗೆ ದಂಡ ವಿಧಿಸಿತು. ಆತ ದಂಡ ತೆರದೆ ಜೈಲಿಗೆ ಹೋದ. ಉಡುಪಿ ಮಠಗಳಲ್ಲಿ ಕೆಲವು ಅವನನ್ನು ಆದರದಿಂದ ಸ್ವಾಗತಿಸಿದುವು. ಆಕ್ಷೇಪಿಸಿದ ನನ್ನ ಬಂಧುಗಳು ನಂತರ ನಮ್ಮನ್ನು ಆದರದಿಂದ ಕಂಡಿದ್ದಾರೆ.

೪. ಸರ್ಕಾರ ತನ್ನ ಪಾಡಿಗೆ ತಾನಿರಲಿ. ಅದರಿಂದ ಲಾಭ ಪಡೆಯಲು ಇಂಥ ವಿವಾಹ ಆಗಬೇಕಿಲ್ಲ.

೫. ನನ್ನನ್ನು ಆ ಬಗ್ಗೆ ಯಾರೂ ಕೇಳಲು ಬಂದಿಲ್ಲ. ಬಂದರೆ ಹೇಳಬಹುದಾದ ವಿಷಯ–ಪರಸ್ಪರ ಪ್ರೀತಿಯಿಂದ ಮರ್ಯಾದೆಯಿಂದ ಬಾಳಿ ಎಂದು.

ಡಾ। ಕಮಲಾ ಹಂಪನಾ

ಲೇಖಕಿ, ಸಂಶೋಧಕಿ, ಅಧ್ಯಾಪಕಿ

೧. ನಾನು ಹಾಗೂ ಡಾ। ಹಂಪ. ನಾಗರಾಜಯ್ಯ ಅಂತರ್ಜಾತಿಯ ವಿವಾಹವಾಗುವುದಕ್ಕೆ ಮೊದಲ ಮತ್ತು ಅತ್ಯಂತಿಕವಾದ ಕಾರಣ ಪ್ರೇರಣೆ, ಒಲವು. ನಮ್ಮದು ಮೊದಲ ನೋಟದ ಧಿಡೀರ್ ಪ್ರೇಮವಲ್ಲ. ನಾವು ಆರು ವರ್ಷಗಳು ಸಹಪಾಠಿಗಳಾಗಿದ್ದೆವು. (೨ ವರ್ಷ ಇಂಟರ್‌ಮೀಡಿಯೆಟ್, ತುಮಕೂರಿನಲ್ಲಿ, ೧೯೫೩–೫೫: ೩ ವರ್ಷ ಬಿ.ಎ. ಆನರ್ಸ್ ಮತ್ತು ಒಂದು ವರ್ಷ, ಎಂ.ಎ–ಮೈಸೂರು ಮಹಾರಾಜ ಕಾಲೇಜು : ೧೯೫೫–೫೯) ವಿದ್ಯಾರ್ಥಿ ಜೀವನದ ಈ ಸುದೀರ್ಘ ಪ್ರಯಾಣದಲ್ಲಿ ಒಲವಿನೊಂದಿಗೆ ಸಮಾನ ಅಭಿರುಚಿಯ ಸಾಹಿತ್ಯಾಸಕ್ತಿ, ಸಾಂಸ್ಕೃತಿಕ ಚಟುವಟಿಕೆ, ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಕೂಡ ನಮ್ಮನ್ನು ಹತ್ತಿರ ತಂದವು. ಒಬ್ಬರನ್ನೊಬ್ಬರು ಅರಿತೆವು, ಇಷ್ಟಪಟ್ಟೆವು, ಬಯಸಿ ಬೆರೆತೆವು. ಅಂತರಜಾತಿಯ ವಿವಾಹದ ಬಗ್ಗೆ ವೇದಿಕೆಯಿಂದ ಬೆಂಬಲಿಸಿ ಪ್ರಗತಿಪರರಂತೆ ಮಾತನಾಡುತ್ತ ತಮ್ಮ ತಮ್ಮ ಜಾತಿಗಳ ಒಳಗೆ ಬಲವಾಗಿ ಕಾಲೂರಿ ನಿಂತ ಕಟ್ಟಾ ಜಾತಿವಾದಿಗಳನ್ನು ನೋಡಿ ಸಾಕಾಗಿತ್ತು. ನಾವು ಆ ರೀತಿ ಆಗಬಾರದೆಂದು ತೀರ್ಮಾನಿಸಿದೆವು.

ನಮ್ಮ ಒಲವು ದಟ್ಟವಾಗುತ್ತ ಹೋದ ಹಾಗೆ ಅದರ ಭಾವುಕ ಲೋಕದ ಅಕುಟಿಲತೆಯ ಪುಳಕಾನುಭವದ ಜೊತೆ ಜೊತೆಗೆ, ವಾಸ್ತವ ಸಮಾಜದ ಜಾತಿಕೋಮುಗಳ ಗೋಡೆಗಳಿಗೆ ಢಿಕ್ಕಿ ಹೊಡೆಯುವ ಸಹಜತೆಯ ಪರಿಚಯವೂ ಆಯಿತು, ನಾನು ಪರಿಶಿಷ್ಟವರ್ಗಕ್ಕೆ ಸೇರಿದವಳು, ಹಂಪನಾ ಜೈನಧರ್ಮಿಯರು. ಇದು ಜಾತಿಯ ಲೋಕದಲ್ಲಿ ಉಸಿರು ಕಟ್ಟಿಸುವ ಎರಡು ಧ್ರುವಗಳು. ಆದರೆ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೂ ಚುಂಬಕ ಒಲವಿನ ಗಾಳಿ ಆಮ್ಲಜನಕವಾಗಿ ಉಸಿರಾಡಿಸುತ್ತಿತ್ತು. ಪರಸ್ಪರರಲ್ಲಿ ಒಲವು ಸುಲಭವಾಗಿ ಮೂಡಿದರೂ ಅದನ್ನು ಮದುವೆಯ ಚೌಕಟ್ಟಿನಲ್ಲಿ ಉಳಿಸಿ–ಬೆಳೆಸಿ ದಾಂಪತ್ಯ ಜೀವನದ ಭದ್ರ ಬುನಾದಿಯಾಗಿಸಿಕೊಳ್ಳುವುದಕ್ಕೆ ಜಾತಿ ಸೂತಕಗಳು ಏಳನೆಯ ಶನಿಯಾಗಿ ಕಾಡುತ್ತವೆ. ನಾವು ಮದುವೆಯಾಗಲು ಎರಡೂ ಕಡೆಯ ಅಡ್ಡಿಗಳಲ್ಲದೆ ಮೇಲು ಜಾತಿಯ ಗೆಳೆಯರು ಗೋಮುಖ ವ್ಯಾಘ್ರವಾಗಿ ಕಾಡಿದರು. ನಮ್ಮ ಹಿತಶತ್ರುಗಳಿಗೆ ನಾವು ಬಾಳುವುದಕ್ಕಿಂತಾ ಹಾಳಾಗುವುದು ಬೇಕಿತ್ತು. ಸಂಪ್ರದಾಯವಾದಿ ಕುಟುಂಬಗಳ, ಜಾತಿವ್ಯವಸ್ಥೆ ನಿಷ್ಠರ ಭಾವನೆಗಳು ಅರ್ಥವಾಗುತ್ತವೆ. ಆದರೆ ವಿದ್ಯಾವಂತರೆನಿಸಿಕೊಂಡವರ ವಿಚಿತ್ರಪ್ರತಿಗಾಮಿ ವರ್ತನೆಗಳು ತುಂಬಾ ಅಪಾಯಕಾರಿ ಎನಿಸಿದವು.

ನಾವು ಈ ಪ್ರತಿಕೂಲ ಪರಿಸ್ಥಿತಿಯಲ್ಲಿ ಹತಾಶರಾಗಲಿಲ್ಲ. ಪ್ರತಿಭಟನೆಯನ್ನು ಎದುರಿಸಿ ಬಾಳಲು ಗಟ್ಟಿಮನಸ್ಸು ಮಾಡಿದೆವು. ಸಾಮಾಜಿಕ ಬದ್ಧತೆಯಿಂದಾಗಿ ಹೋರಾಟ ಅನಿವಾರ್ಯವಾಯಿತು. ಜೊತೆಗೆ ನಾವಿಬ್ಬರೂ ನಮ್ಮ ಮುಂದಿನ ಹೆಜ್ಜೆಗಳನ್ನು ನಿರ್ಧರಿಸುವಾಗ ನಮ್ಮ ಗ್ರಹಿಕೆ ಇದ್ದುದು ಹೀಗೆ–ಅಂತರ್ಜಾತಿ ವಿವಾಹವಾದವರು–ಆಗುವವರು ಎಂದೂ ಯಾವ ಕಾರಣಕ್ಕೂ ಸೋಲಬಾರದು. ಅವರ ಸಂಸಾರಗಳು ಮುರಿದು ಮೂರಾಬಟ್ಟೆಯಾಗಬಾರದು, ಹಾಗೆ ಆದರೆ ಆಡಿಕೊಳ್ಳುವವರ ಮುಂದೆ ಎಡವಿ ಬಿದ್ದಹಾಗೆ. ಅದಕ್ಕೆ ಅವಕಾಶ ನೀಡಬಾರದು.

೨. ಮೊದಲನೆಯ ಪ್ರಶ್ನೆಗೆ ಉತ್ತರಿಸುವಾಗ ಹೇಳಿರುವಂತೆ, ನಮ್ಮ ಮದುವೆಗೆ ಎರಡೂ ಕಡೆಯಿಂದಲೂ ವಿರೋಧವಿತ್ತು. ಈ ಅಂತರ್ಜಾತೀಯ ನಮ್ಮ ವಿವಾಹಕ್ಕೆ ಅಂತೂ ಕಡೆಗೆ ನಮ್ಮ ಕಡೆಯವರನ್ನು ಒಪ್ಪಿಸಿದ್ದಾಯಿತು. ಆದರೆ ಹಂಪನಾ ಮನೆಯವರು ಉಡದ ಹಿಡಿತ ಹಾಕಿದ್ದರು; ಉಗ್ರ ಪ್ರತಿಭಟನೆ ಅಚಲವಾಗಿತ್ತು. ಹಂಪನಾ ತನ್ನ ತಂದೆಗೆ ತಕ್ಕ ಮಗ, ತನ್ನ ಅಪ್ಪನಿಗಿಂತಾ ಹೆಚ್ಚು ಛಲವಾದಿ, ನನಗಾಗಿ ಎಂತಹುದೇ ತ್ಯಾಗಕ್ಕೂ ಸಿದ್ಧವಾಗಿದ್ದರು. ೧೫ ರೂಪಾಯಿಗಳ ಛಾಪಾಕಾಗದದಲ್ಲಿ ತಮಗೆ ವಂಶ ಪಾರಂಪರ್ಯವಾಗಿ ಆಸ್ತಿಯಲ್ಲಿ ಬರಬೇಕಾದ ಯಾವ ಪಾಲೂ ಬೇಕಿಲ್ಲವೆಂದು ಉಪ–ನೋಂದಣಿ ಕಚೇರಿಯಲ್ಲಿ ಮುಚ್ಚಳಿಕೆ ಬರೆದುಕೊಟ್ಟರು.

ನಾವು ಸಬ್–ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ಡ್ ಮದುವೆ ಆದೆವು (೨೪.೧೧.೧೯೬೧). ನಮ್ಮ ಈ ಸರಳ ವಿವಾಹಕ್ಕೆ ಸರ್ಕಾರಿ ಕಡತದಲ್ಲಿ ಸಾಕ್ಷಿಗಳಾಗಿ ಸಹಿ ಮಾಡಿದವರು ಐಲೆಂಟು ಜಾತಿಯ ಗೆಳೆಯರು.

ನಮ್ಮ ಮದುವೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಮದುವೆಯಾದ ಮೊದಲ ಮೂರು–ನಾಲ್ಕು ವರುಷಗಳು ವೇದನೆಯ ದಿನಗಳು. ಕೆಲವರಿಗೆ ಇದೊಂದು ತಮಾಷೆಯ ಗೇಲಿ ವಿಷಯ, ಇನ್ನು ಕೆಲವರಿಗೆ ಇದು ಹೇಗೆ ಮುಗಿಯುತ್ತದೆಯೋ ನೋಡೋಣ ಎನ್ನುವ ಕುತೂಹಲ ಮತ್ತೆ ಕೆಲವರಿಗೆ 'ಕಾಲ ಹಾಳಾಗಿ ಹೋಯಿತು'–ಎಂಬ ಮಾತಿಗೆ ಇನ್ನೊಂದು ದೃಷ್ಟಾಂತ ದೊರಕಿತೆಂಬ ಸಮಾಧಾನ. ಆದರೆ ಈ ಬಿರು ಬೇಸಿಗೆಯ ಮರಳುಗಾಡಿನಲ್ಲಿ ನೀರ್ದಾಣದ ಓಯಸಸ್ಸುಗಳಿದ್ದುವು. ನಮ್ಮ ಒಲುವು ಬಾಡದ ಹಾಗೆ ನೀರೆರೆಯುವರ ಸಂಖ್ಯೆಯೂ ಹೆಚ್ಚಾಗಿ ಇದ್ದಿತು. ಇವೆಲ್ಲಕ್ಕೂ ಮಿಗಿಲಾಗಿ ನಮ್ಮ ದಾರಿ–ಗುರಿ ನಮಗೆ ಖಚಿತವಾಗಿತ್ತು.

೩. 'ಅಪಾಯ' ಎಂಬುದು ಕೇವಲ ಅಂತರ್ಜಾತಿ ವಿವಾಹಗಳಿಗಷ್ಟೇ ಸೀಮಿತವಾದುದ್ದಲ್ಲ. ವಧುದಹನ, ವರದಕ್ಷಿಣೆ, ಕಿರುಕುಳ, ನಿರಂತರ ಹಿಂಸೆ, ಪರಸ್ಪರ ಅಪನಂಬಿಕೆ–ಇವು ಒಂದೇ ಜಾತಿಯೊಳಗೆ ಒಮ್ಮತದಿಂದ, ಜಾತಕ ನೋಡಿ ಮಾಡಿದ ವಿವಾಹಗಳಲ್ಲಿಯೂ ಇದೆ. ಹಾಗೆ ಹೋಲಿಸಿ ನೋಡುವುದಾದರೆ, ಅಂತರ್ಜಾತೀಯ ಅಥವಾ ಸ್ವಜಾತೀಯ ಪ್ರೇಮ ವಿವಾಹಗಳಲ್ಲಿ ಇಂತಹ ಅಪಾಯಗಳು ಕಡಿಮೆ. ಗಂಡು–ಹೆಣ್ಣು ಒಬ್ಬರಿಗೊಬ್ಬರು ಆಸರೆಯಾಗಿ ಅವರ ಕಾದಲು ಕದಲಿಸಲಾಗದಂತಿದ್ದರೆ ಹೊರಗಿನ ಎಲ್ಲ ಅಪಾಯಗಳಿಂದ ಸುಲಭವಾಗಿ ಪಾರಾಗಬಹುದು. ಒಲಿದು ಒಂದಾದವರಲ್ಲಿಯೇ ನಲ್ಮೆ–ನಂಬಿಕೆಗಳ ಬೇರು ಸಡಿಲವಾದರೆ ಸಂಸಾರ ಸೊರಗುತ್ತದೆ. ಅಂತಹ ದುರ್ಬಲ ಗಳಿಗೆಯಲ್ಲಿ ವಿಘ್ನಗಳು ನುಸುಳುತ್ತವೆ. ಆದರೆ ಆರ್ಥಿಕವಾಗಿ ಭದ್ರಬುನಾದಿಯ ಮೇಲೆ ಇವರ ಕುಟುಂಬ ನಿಂತಿದೆ ಎಂದು ಖಾತ್ರಿಯಾದೊಡನೆ ನೆಂಟರಿಷ್ಟರ, ಮಿತ್ರ ವೃಂದದವರ ಮುತ್ತಿಗೆ ಪ್ರಾರಂಭವಾಗುವುದು ಸಹಜ ತಾನೆ!

ಇನ್ನು ಧಾರ್ಮಿಕಾದಿ ಆಚರಣೆಗಳೂ ಕೌಟುಂಬಿಕ ಬಿರುಕುಗಳಿಗೆ ಕಾರಣವಾಗಬಹುದು. ನನ್ನ ಮನೆಯ ಸಂಪ್ರದಾಯವೇ ನಡೆಯ ಬೇಕೆಂಬ ಮೇಲಾಳಿಕೆಗಳಿದ್ದರೆ ವಿರಸ ಹೊಗೆಯಾಡಬಹುದು. ಎಲ್ಲ ವಿಪತ್ತುಗಳನ್ನು ಆರಿಸಬಲ್ಲ ತಂಪು ನಲ್ಮೆ ತವನಿಧಿಯಾಗಿದ್ದರೆ ಸಂಸಾರ ಹೂಹಾರ!

೪. ಸರ್ಕಾರದ ಪ್ರೋತ್ಸಾಹವೇನೋ ಅವಶ್ಯ ಇರಬೇಕು. ಆದರೆ ಸರ್ಕಾರದ ನೆರವು ಸಿಗುತ್ತದೆಂಬುದೇ ವಿವಾಹಕ್ಕೆ ಪ್ರೇರಣೆಯಾದರೆ ದುರಂತ ನಿಶ್ಚಿತ. ಹಣ ಬೇರೆ, ಪ್ರೀತಿಪ್ರೇಮ ಇತ್ಯಾದಿ ಬೇರೆ. ನಾವು ಒಲಿದು ಒಂದಾದಾಗ ಅಥವಾ ಅನಂತರದ ಈ ಮುವ್ವತ್ತೇಳು ವರುಷಗಳಲ್ಲಿ, ಅಂತರ್ಜಾತೀಯ ವಿವಾಹವಾದ ದಂಪತಿಗಳೆಂಬ ಕಾರಣ ಕ್ಕಾಗಿ ಯಾವುದೇ ಆರ್ಥಿಕ ಸಹಾಯ, ಮುಂಬಡ್ತಿ ಸರ್ಕಾರದಿಂದ ಬಂದಿಲ್ಲ, ಪಡೆದಿಲ್ಲ. ಹಾಗೆಂದು ಸರ್ಕಾರದ ಮೇಲಾಗಲಿ, ಸಮಾಜದ ವಿಚಾರದಲ್ಲಾಗಲೀ ನಮಗೆ ಯಾವ ಅಸಮಧಾನಗಳೂ ಇಲ್ಲ. ಅಲ್ಲದೆ ಇಲ್ಲಿಯೇ ಹೇಳಬೇಕಾದ ಇನ್ನೊಂದು ಮಾತಿದೆ. ನಮ್ಮ ಮೂವರು ಮಕ್ಕಳೂ ಸಹ ಅಂತರ್ಜಾತೀಯ ವಿವಾಹವಾಗಿದ್ದಾರೆಂಬುದು. ಅವರಿಗೂ ಈ ಕಾರಣಕ್ಕಾಗಿ ಸರ್ಕಾರದಿಂದ ಯುವ ಪ್ರೋತ್ಸಾಹವೂ ಬಂದಿಲ್ಲ.

ನಮ್ಮ ಮನೆಯಲ್ಲಿ ನಾವು, ನಮ್ಮ ಮಕ್ಕಳು ಸರ್ಕಾರದಿಂದ ಪ್ರೋತ್ಸಾಹ ಪಡೆಯಲಿಲ್ಲವೆಂಬ ಕಾರಣದಿಂದ ಬೇರೆಯವರಿಗೂ ಅದು ಬೇಡವೆಂಬುದು ನನ್ನ ಅಭಿಪ್ರಾಯವಲ್ಲ. ಅರ್ಥಹೀನ ಕೊಳಕು ಸಂಪ್ರದಾಯ, ಪ್ರೇಮಿಗಳನ್ನು ವಿಷಹಾಕಿ ಕೊಲ್ಲುತ್ತಿದೆ. ನಾಲ್ಕಾರು ಕಡೆಯ, ನಾಲ್ಕಾರು ರೀತಿಯ ಚಿತ್ರಹಿಂಸೆಗಳಿಂದ ಸೊರಗುವ ಅಂತರ್ಜಾತೀಯ ಮದುವೆ ಗಳಾದವರಿಗೆ ಸರ್ಕಾರದ ಸಕಾಲಿಕ ನೆರವು, ನೆಮ್ಮದಿಯಾಗಿ ಸಿಗಬೇಕು. ಪ್ರೇಮಿಗಳು ಹೆಣವಾಗುವ ಮೊದಲೇ ಸಕಾಲದಲ್ಲಿ ಈ ಸಹಾಯ ದೊರಕಬೇಕು.

೫. ಒಲವು–ದಾಂಪತ್ಯ ಇವು ಸೂಕ್ಷ್ಮವಾದ ವೈಯಕ್ತಿಕ ಸಂಗತಿಗಳು. ಸಂಸಾರದಲ್ಲಿ ಸರಸ–ವಿರಸಗಳು ಇದ್ದೇ ಇರುತ್ತವೆ. ಸಮಸ್ಯೆ–ಸಂಕಟಗಳಿಗೆ ಕಾರಣಗಳು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು. ಅಂತರ್ಜಾತೀಯ ವಿವಾಹವಾದವರ ಮೇಲೆ ಹೊಣೆಗಾರಿಕೆಯೊಂದು ಇದ್ದೇ ಇರುತ್ತದೆ. ಅಂತಿಮವಾಗಿ ಅವರ ಸೋಲು–ಗೆಲವುಗಳು ಒಟ್ಟು ಅಂತರ್ಜಾತಿಯ ವಿವಾಹ ಸಿದ್ಧಾಂತದ ಸೋಲು–ಗೆಲವುಗಳಾಗುತ್ತವೆ. ಸಣ್ಣಪುಟ್ಟದ್ದಿರಲಿ, ಎಷ್ಟೇ ದೊಡ್ಡ ಭಿನ್ನಾಭಿಪ್ರಾಯ ಸ್ಫೋಟಿಸಿದಾಗಲೂ ವಿಚ್ಛೇದನ ಪರಿಹಾರವೆನಿಸ ಬಾರದು. ಒಬ್ಬರನ್ನೊಬ್ಬರು ಅನುಮಾನಿಸಲೂ ಬಾರದು, ಅವಮಾನಿಸಲೂ ಬಾರದು. ನಂಬಿಕೆ ಮತ್ತು ತ್ಯಾಗ ಎಂಬೆರಡು ಗಾಲಿಗಳಿದ್ದರೆ ಅಂತರ್ಜಾತೀಯವೇ ಏನು, ಎಲ್ಲ ಸಂಸಾರ ರಥಗಳೂ ಮುಂದೆ ಹೋಗುತ್ತವೆ.

ವೀಣಾ ಶಾಂತೇಶ್ವರ

ಖ್ಯಾತ ಲೇಖಕಿ

೧. ಒಲವು ಮಾತ್ರ ಕಾರಣ, ಬೇರಾವ ಉದ್ದೇಶವೂ ಇರಲಿಲ್ಲ.

೨. ಪ್ರಗತಿಪರ ಮನೋಭಾವದವರಾದ ನನ್ನ ಕುಟುಂಬದವರು ನನ್ನನ್ನು ಬಹಳ ಪ್ರೀತಿಸುವುದರಿಂದ ನನ್ನ ವಿವಾಹದ ಬಗ್ಗೆ ಅವರ ವಿರೋಧವಿರಲಿಲ್ಲ. ಸಮಾಜದಲ್ಲಿ ಹಲವರು ಸಹಜವಾಗಿಯೇ ಟೀಕಿಸಿದರು, ಅಪಶಬ್ದ ಆಡಿದರು. ಆದರೆ ಪ್ರೀತಿಯಿಂದ ಸಹಕರಿಸಿದವರೂ ಇದ್ದರು.

೩. ಪ್ರೀತಿಯಿದ್ದಾಗ ಯಾವ ಭಿನ್ನಾಭಿಪ್ರಾಯಗಳೂ ಏನೂ ಒಡಕುಂಟು ಮಾಡಲು ಶಕ್ಯವಿಲ್ಲ, ಭಿನ್ನ ಹಿನ್ನೆಲೆಗಳು ಒಂದಾದ ಮನಸ್ಸುಗಳನ್ನು ದೂರ ಮಾಡಲಾರವು.

೪. ಸರಕಾರ ಪ್ರೋತ್ಸಾಹ ಕೊಡತೊಡಗಿದರೆ ಅದನ್ನು ಪಡೆಯಲಿಕ್ಕಾಗಿಯೇ ಅಂತರ್ಜಾತಿ ವಿವಾಹ ಮಾಡಿಕೊಳ್ಳಲು ಜನ ಮುಂದಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ಸರಕಾರದ ಪ್ರೋತ್ಸಾಹಕ್ಕಿಂತ ನಮ್ಮ ಜನರ ವಿಶಾಲ ದೃಷ್ಟಿಕೋನವೇ ಅಂತರ್ಜಾತಿ ಉದಾಹರಣೆಗಳಿಗೆ ಹೆಚ್ಚಿನ ಸಹಾಯವಾಗಬಲ್ಲ.

೫. ಸುತ್ತಲಿನ ಜನರ ಗುಸು–ಗುಸು ಟೀಕೆ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಉಳಿದವರಿಂದ ಬಿರುನೋಟ, ಮಕ್ಕಳು ಎದುರಿಸಬೇಕಾದ ಗೊಂದಲ–ಇವನ್ನೆಲ್ಲ ಧೈರ್ಯವಾಗಿ ಎದುರಿಸಲು ಸಿದ್ಧವಿದ್ದವರು ಮಾತ್ರ ಅಂತರ್ಜಾತಿ ವಿವಾಹವಾಗಬೇಕು.

ಶಂಕರ ಪಾಟೀಲ

ಖ್ಯಾತ ಚಿತ್ರಕಾರ

೧. ಮೈತ್ರಿಗೆ ಒಲವಿನ ನೆಲೆಯೇ ಮೂಲವಾದಾಗ ಅರ್ಥಪೂರ್ಣ ಚೆಲುವು ಹೊರ ಹೊಮ್ಮುವುದು. ಇದು ಗಂಡು–ಹೆಣ್ಣಿನ ಸಂಬಂಧಕ್ಕಷ್ಟೇ ಅನ್ವಯಿಸುವ ಮಾತಲ್ಲ. ನಮ್ಮೆಲ್ಲ ಮಾನವೀಯ ಸಂಬಂಧಗಳ ಮೂಲವೂ ಆಗಿದೆ. ಯಾವುದೇ ಉದ್ದೇಶದ ಸಾಧನೆಯ ಸಂಬಂಧಗಳು ಸಂತೋಷ ದಾಯಕವಾಗಲಾರವು; ನಿರಂತರವೂ ಆಗಲಾರವು. ಸಸ್ಯಕ್ಕೆ ನೀರಿನ ಮೈತ್ರಿ ಸಹಜವಾಗೇ ಪ್ರಫುಲ್ಲತೆಯನ್ನು ಕೊಡಬಲ್ಲದು. ಅದೇ ರೀತಿ ಮಾನವ ಸಂಬಂಧಗಳು ಪರಸ್ಪರ ಪ್ರಯೋಜನ ಪಡೆದು ವಿಕಾಸ ಹೊಂದಲು ಸಾಧ್ಯವಾಗ ಬಹುದು. ಸಹಜ ಒಲುವೆಯೇ ನಮ್ಮ ಮದುವೆಗೆ ಕಾರಣವಾದದ್ದು.

೨. ನಮ್ಮ ಸುತ್ತಮುತ್ತ ಇರುವ ಪರಿಚಿತರೇ ನಮ್ಮ ಸಮಾಜ. ಸಹಬಾಳ್ವೆಯ ಪ್ರತೀಕವೇ ನಮ್ಮ ಸಮಾಜ. ಬೇರೆ ಬೇರೆ ಧರ್ಮದವರ ಪ್ರತೀಕಗಳು ಬೇರೆ ಬೇರೆ ಇರಬಹುದು. ಆಚರಣೆಯ ವಿಧಿ ವಿಧಾನಗಳು ಬೇರೆ ಬೇರೆ ಆಗಿರಬಹುದು. ಆದರೆ ಸಹಬಾಳ್ವೆಯೇ ಎಲ್ಲ ಧರ್ಮಗಳ ಮೂಲ ಸಿದ್ಧಾಂತವಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮಾನವ ಸಹಜ ಪ್ರವೃತ್ತಿಗಳಾದ ಪ್ರೀತಿ ಹಾಗೂ ದಯೆ ಎಲ್ಲ ಧರ್ಮಗಳ ಮೂಲ. ಪ್ರತಿಯೊಬ್ಬ ಮಾನವನ ಗುಣಾವಗುಣಗಳನ್ನು ಒಳಗೊಂಡು ಆತನನ್ನು ಗೌರವಿಸಿದಾಗ ಪ್ರೀತಿಸಿದಾಗ ಎಲ್ಲರೂ ಬಂಧುಗಳು ಬಾಂಧವರಾಗೇ ಇರುತ್ತಾರೆ. ಆಗ ಎಲ್ಲರ ಪ್ರತಿಕ್ರಿಯೆ ಕೂಡ ಸಹಜವಾಗಿಯೇ ಅನುಕೂಲಕರವಾಗೇ ಇರುತ್ತದೆ. ಅದನ್ನು ನಿಭಾಯಿಸಿಕೊಂಡು ಹೋಗುವವರು ಮಾತ್ರ ಪ್ರತಿಯೊಬ್ಬ ವ್ಯಕ್ತಿಯ ತನ್ನ ಸ್ವಂತದ ಜವಾಬ್ದಾರಿಯಾಗಿರುತ್ತದೆ. ತನ್ನನ್ನು ತಾನು ನಂಬುವ ಪ್ರೀತಿಸುವ ವ್ಯಕ್ತಿಗೆ ಈ ಜವಾಬ್ದಾರಿ ತಾನಾಗೇ ನೆರವಾಗುತ್ತದೆ.

೩. ನಾವು ನಿಜವಾಗಿ ಧರ್ಮವನ್ನು ಪ್ರೀತಿಸುವವರಾಗಿದ್ದರೆ ಪ್ರತಿಯೊಂದು ಜಾತಿಯನ್ನು, ಅವರವರ ಸಂಸ್ಕಾರಗಳನ್ನು, ವಿಭಿನ್ನ ಸಾಮಾಜಿಕ ಪರಿಸರವನ್ನು, ಅವುಗಳ ವೈವಿಧ್ಯತೆಯನ್ನು ಸಾಂಸ್ಕೃತಿಕವಾಗಿ ಆನಂದಿಸಲು ಸಾಧ್ಯವಾಗುತ್ತದೆ. ಇವೆಲ್ಲಾ ಅಧ್ಯಯನ ವಸ್ತುಗಳಾಗಿ, ವಿಕಾಸಕ್ಕೆ ಸಾಮಗ್ರಿಗಳಾಗಿ, ಸಂತೋಷದ ಸಾಧನಗಳಾಗಿ ಪರಿಣಮಿಸುತ್ತವೆ. ಸೃಷ್ಟಿಯ ಸೌಂದರ್ಯವನ್ನು ವೈವಿಧ್ಯತೆಯನ್ನು ಸವಿಯಲು ಸಾವಿರಾರು ಮೈಲು ಪ್ರಯಾಣ ಮಾಡುತ್ತೇವೆ. ಸಾವಿರಾರು ರೂಪಾಯಿ ಖರ್ಚು ಮಾಡುತ್ತೇವೆ. ಆದರೆ ನಮ್ಮ ಪರಿಸರದಲ್ಲೇ ಇರುವ ನಮ್ಮ ಸುತ್ತಮುತ್ತಲಲ್ಲೇ ಇರುವ ಸಾಂಸ್ಕೃತಿಕ ಸೊಬಗನ್ನು ಅದರ ವೈವಿಧ್ಯತೆಯನ್ನು ಆನಂದಿಸದೆ ಅಪಾಯಕಾರಿ ಸನ್ನಿವೇಶಗಳನ್ನು ನಾವೇ ಸೃಷ್ಟಿಸಿಕೊಳ್ಳುತ್ತೇವೆ.

ಸಾಂಸ್ಕೃತಿಕ ಸನ್ನಿವೇಶಗಳು ರಾಜಕೀಯ ಸನ್ನಿವೇಶಗಳಾಗಲು ಕೈಬಿಡುವುದು ಅತ್ಯಂತ ಅಪಾಯಕಾರಿಯಾಗಿದೆ. ಜಗತ್ತಿನಾದ್ಯಂತ ಸಂಸ್ಕೃತಿಯ ರಾಯಭಾರಿಗಳಾದ ಕವಿಗಳು, ಚಿತ್ರಕಲಾವಿದರು, ಸಾಹಿತಿಗಳು, ಸಂಗೀತಗಾರರು, ನೃತ್ಯ ಹಾಗೂ ನಾಟಕಕಾರರು, ಜಾನಪದ ಕಲಾವಿದರು ಹಾಗೂ ವಿಚಾರವಾದಿಗಳು ಇವರ್‍ಯಾರೂ ಜಾತಿವಾದಿಗಳಲ್ಲ. ಮಾನವ ಕುಲವನ್ನೇ ಒಂದಾಗಿ ಕಾಣುವ, ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರೀತಿಸುವ, ವೈಯಕ್ತಿಕ ಸ್ವಾತಂತ್ರ್ಯವನ್ನು ಸೃಜನ ಶೀಲತೆಯನ್ನು ಗೌರವಿಸುವ ಜನ ಇವರು. ಇವರೆಲ್ಲಾ ಎಂದಿಗಿಂತ ಇಂದು ಹೆಚ್ಚಾಗಿ ಅಪಾಯದ ಅಂಚಿನಲ್ಲಿದ್ದಾರೆ. ಜಾತೀಯತೆಯಿಂದ ಭಯಾನಕ ಸನ್ನಿವೇಶಗಳನ್ನು ಸೃಷ್ಟಿಸಿ ಜನರನ್ನು ಜನರಿಂದ ದೂರ ಮಾಡುವತ್ತಿರುವ, ಅಣುಬಾಂಬು ಹಾಗೂ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಸರಕಾರಗಳನ್ನು ಬದಲಿಸಿ, ಪ್ರೀತಿ, ಗೌರವ ಹಾಗೂ ಸಹಬಾಳ್ವೆಗೆ ಯೋಗ್ಯವಾದ ಶಾಂತಿಯುತವಾದ ವಾತಾವರಣ ನಿರ್ಮಿಸುವ ಅಗತ್ಯ ಪೂರೈಸಲು ವಿಶ್ವ ಮಾನವರಾಗಲು ಸನ್ನದ್ಧರಾಗಬೇಕಾಗಿದೆ.

೪. ಮನಸ್ಸು ಮೆದುಳಿನ ಮೂಲದಿಂದ ಯೋಚಿಸುತ್ತದೆ. ಪ್ರಯೋಜಕ ಅಪ್ರಯೋಜಕತೆಗಳ ಕಾರಣಗಳನ್ನು ಹುಡುಕುತ್ತದೆ. ವಿಚಾರ ವಿಶ್ಲೇಷಣೆಗಳ ಮಧ್ಯೆ ತೊಳಲಾಡುತ್ತದೆ. ಮನಸ್ಸು ಸುರಕ್ಷತೆಯನ್ನು ಆಶ್ರಯವನ್ನು ಬಯಸುತ್ತದೆ. ಹೀಗಾಗಿ ಅದು ತೆಗೆದುಕೊಂಡ ತೀರ್ಮಾನ ಸ್ವಾರ್ಥದಿಂದ ಕೂಡಿರಬಹುದಾಗಿದೆ. ಆದರೆ ಪ್ರೀತಿ ಹೃದಯದಲ್ಲಿ ಮೂಡುವಂಥದ್ದು. ಹೂವು ಅರಳುವಂತೆ ಹೃದಯ ಆನಂದಕ್ಕಾಗಿ ಆನಂದದಲ್ಲಿ ಅರಳುವಂಥದ್ದು. ಈ ಸಹಜ ಸಂವೇದನೆ ಸೃಷ್ಟಿಯ ಮೂಲದ್ದು. ಹೃದಯ ಶ್ರೀಮಂತ ಪ್ರೀತಿಗೆ ಸ್ವಂತದ ಗೌರವವಿದೆ. ಬಾಳಿಗೆ ಅದೇ ಪ್ರೇರಣೆ ಅದೇ ಪ್ರೋತ್ಸಾಹ ಸಾಕು ಎನಿಸುತ್ತದೆ.

೫. ಸೂರ್ಯೋದಯವನ್ನು ಸೂರ್ಯಾಸ್ತವನ್ನು ಅದರ ಹೊಂಬಣ್ಣವನ್ನು, ಹೂಗಳನ್ನು ಅವುಗಳ ಸುಂದರ ಸೊಬಗನ್ನು ಪರಿಮಳವನ್ನು, ನಿರಾಕಾರ ಅನಂತ ಆಕಾಶದ ಅಸಂಖ್ಯಾತ ನೀಲಿ ಛಾಯೆಗಳನ್ನು, ನಮ್ಮ ಕಲ್ಪನೆ ಇರುವಷ್ಟು ಆಕಾರಗಳನ್ನು ಊಹಿಸಲು ಅನುವು ಮಾಡಿಕೊಡುವ ತೇಲುವ ಮೋಡಗಳನ್ನು ಆನಂದಿಸುವ, ಅನುಭವಿಸುವ ಗುಣ ಉಳ್ಳವ ಕವಿ ಆಗುತ್ತಾನೆ, ಕಲಾವಿದನಾಗುತ್ತಾನೆ. ಎಂ.ಎ. ಪದವಿಗೆ ನನ್ನ ಸಲಹೆ ಕೇಳಿ ಪಠ್ಯ ಕ್ರಮ ರಚಿಸಬಹುದು. ವಿದ್ಯಾರ್ಥಿ ಎಂ.ಎ. ಪದವಿಯನ್ನೂ ಪಡೆದುಕೊಳ್ಳಬಹುದು. ಆದರೆ ಆತ ಕವಿ ಅಥವಾ ಕಲಾವಿದನಾಗುತ್ತಾನೆ ಎನ್ನಲು ಬರುವುದಿಲ್ಲ.

ಕೃತಿ ರಚನೆ ಆನಂದದಲ್ಲಿ ನಡೆಯುವ ಒಂದು ಸಹಜ ಕ್ರಿಯೆ. ಅದು ಸಾಧನೆಯಲ್ಲ, ಹೂವು ಅರಳಿದಂತೆ ಅರಳುವುದೇ ಅದರ ಕ್ರಿಯೆ. ಅರಳುವುದೇ ಅದರ ಸಾಧನೆ. ಅಂತರಜಾತಿಯ ವಿವಾಹವಾಗುವುದು ಎಂದರೆ ಏನೋ ಒಂದು ಸಾಧನೆ ಮಾಡಿದಂತೆ ಎನ್ನುವುದು ಅಲ್ಲ. ಬೇರೆ ವಿವಾಹಗಳಂತೆ ಅದೂ ಒಂದು ವಿವಾಹ. ಎಲ್ಲ ವಿವಾಹಗಳಲ್ಲೂ ತಮ್ಮವೇ ಆದ ಸಮಸ್ಯೆ ಗಳು ಉದ್ಭವಿಸುವದು ಸ್ವಾಭಾವಿಕ. ಎಲ್ಲರಂತೆ ಅವರೂ ತಮ್ಮ ತಮ್ಮ ಸಂದರ್ಭಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ. ಪ್ರೀತಿಯಿಂದ ಒಬ್ಬರನ್ನೊಬ್ಬರು ಗೌರವಿಸಿಕೊಂಡು ಬೇರೆ ಬೇರೆ ಜಾತಿಯ ಇಬ್ಬರು ಗಂಡಸರೋ ಹೆಂಗಸರೋ ಗೆಳೆಯರಾಗಿ ಇರಲು ಸಾಧ್ಯವಾಗುವುದಾದರೆ, ಬೇರೆ ಬೇರೆ ಜಾತಿಯ ಗಂಡು ಹೆಣ್ಣು ಸೇರಿ ಬೇರೆ ಏನನ್ನು ಯೋಚಿಸದೆ ಸುಖವಾಗಿ ದಾಂಪತ್ಯ ಜೀವನ ನಡೆಸಬಹುದು ಎಂದು ಅನಿಸುವುದಿಲ್ಲವೇ?.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಖ್ಯಾತ ಚಿಂತಕ, ಲೇಖಕ

ನಾನು ಮದುವೆಯಾಗಿದ್ದು ನನ್ನ ಹೆಂಡತಿಯಾಗಿರುವ ಶ್ರೀಮತಿ ರಾಜೇಶ್ವರಿಯನ್ನು ಮದುವೆಯಾಗಬೇಕೆಂದು ಅನ್ನಿಸಿದ್ದರಿಂದ. ನಾನು ಸಾಂಪ್ರದಾಯಕ ವಿವಾಹಗಳನ್ನು ವಿರೋಧಿಸುವವನು. ಆದರೆ ಅಂತರ್ಜಾತೀಯ ವಿವಾಹವಾಗಬೇಕೆಂದೇ ಯಾರನ್ನಾದರೂ ಮದುವೆಯಾಗುವುದು ಸಾಂಪ್ರದಾಯಕ ವಿವಾಹಕ್ಕಿಂತ ಮೇಲೆಂದು ಹೇಳಬಹುದೇ ಹೊರತು ಅದನ್ನು ಅತ್ಯುತ್ತಮ ಆದರ್ಶವೆಂದು ಹೇಳಲಾರೆ. ನಮ್ಮ ಯುವಕರು ಜಾತಿಪದ್ಧತಿಯನ್ನು ಸಂಪೂರ್ಣ ತಿರಸ್ಕರಿಸಿ ತಮಗೆ ಯಾರು ಇಷ್ಟವಾಗುತ್ತಾರೋ ಅವರನ್ನು ಮದುವೆಯಾಗುವಂಥ ಪೂರ್ಣ ಸ್ವತಂತ್ರ ಪರಿಸರ ಒಂದನ್ನು ನಿರ್ಮಾಣ ಮಾಡುವುದೇ ಅಂತರ್ಜಾತೀಯ ವಿವಾಹಿತರ ಸಮಾವೇಶದ ಗುರಿಯಾಗಿರಬೇಕು.

ಜಾತಿಪದ್ಧತಿಯ ಹಿಡಿತದಲ್ಲಿರುವ ನಮ್ಮ ಸಮಾಜದಲ್ಲಿ ಜಾತ್ಯತೀತ ಧೋರಣೆಯನ್ನು ಒಪ್ಪಿದ ನಮ್ಮ ಯುವಕ ಯುವತಿಯರಿಗೆ ಬೇರೆ ಜಾತಿಯವರು ಪರಿಚಯವೇ ಆಗದಂಥ ಪರಿಸ್ಥಿತಿ ಇದೆ. ಆದ್ದರಿಂದಲೇ ನಾವೀಗ ನಮ್ಮ ಯುವಜನರನ್ನು ಅಂತರ್ಜಾತೀಯ ವಿವಾಹವಾಗುವಂತೆ ಪ್ರೋತ್ಸಾಹಿಸ ಬೇಕಾದುದು ಅನಿವಾರ್ಯ. ಆದರೆ ಅದು ಎಲ್ಲ ಪೂರ್ವಗ್ರಹ ವಿಮುಕ್ತವಾದ ಪ್ರೇಮ ವಿವಾಹದತ್ತ ಇಡುವ ಮೊದಲ ಹೆಜ್ಜೆಯಾಗಬೇಕೇ ಹೊರತು ಅಂತರ್ಜಾತೀಯ ವಿವಾಹ, ಜಾತೀಯ ವಿವಾಹದಂಥದೇ ಇನ್ನೊಂದು ಸಂಪ್ರದಾಯಕ್ಕೆ ನಾಂದಿಯಾಗದಂತೆ ಎಚ್ಚರ ವಹಿಸುವುದನ್ನು ಅಂತರ್ಜಾತೀಯ ವಿವಾಹಿತರು ಮರೆಯಬಾರದು. ಪ್ರೀತಿಸಿ ಮದುವೆಯಾಗುವವರನ್ನು ಅವರಿಬ್ಬರೂ ಒಂದೇ ಜಾತಿಯವರು ಎನ್ನುವ ಕಾರಣಕ್ಕೆ ನಾವು ತಿರಸ್ಕಾರದಿಂದ ನೋಡಬಾರದು.

ನಾನು ಮದುವೆಯಾದಾಗ ನಮಗಿದ್ದ ಸುಸಂಸ್ಕೃತ ಹಿನ್ನೆಲೆಯ ಕಾರಣ ನಮಗೆ ಬಂಧು ಬಾಂಧವರಿಂದಾಗಲೀ ಸಮಾಜ ದಿಂದಾಗಲೀ ಯಾವುದೇ ವಿಶೇಷವಾದ ಪ್ರತಿರೋಧ ಕಂಡುಬರಲಿಲ್ಲ. ಹಲಕೆಲವರಿಂದ ತಿರಸ್ಕಾರದ ಮಾತುಗಳು ಬಂದಿರಬಹುದಷ್ಟೇ. ಆದ್ದರಿಂದ ನಮ್ಮ ಉದಾಹರಣೆಯನ್ನು ಅಂತರ್ಜಾತೀಯ ವಿವಾಹವಾದವರ ಪ್ರಾತಿನಿಧಿಕ ಉದಾಹರಣೆ ಎಂದು ತೆಗೆದುಕೊಳ್ಳುವುದು ತುಂಬಾ ತಪ್ಪಾಗುತ್ತದೆ. ಅಂತರ್ಜಾತೀಯ ವಿವಾಹಿತರು ತುಂಬ ಪ್ರತಿರೋಧವನ್ನೆದುರಿಸ ಬೇಕಾದ ಸಂದರ್ಭಗಳನ್ನು ಎರಡು ವಿಧಗಳಾಗಿ ವರ್ಗೀಕರಿಸಬಹುದು.

ವಿರೋಧಿಸುವವರ ಸಂಪ್ರದಾಯ ನಿಷ್ಠೆಯೇ ಅವರ ವಿರೋಧಕ್ಕೆ ಕಾರಣವೆಂದು ನಾವು ಸಾಧಾರಣವಾಗಿ ತಿಳಿಯುತ್ತೇವೆ. ಆದರೆ ಅವರ ಪ್ರತಿ ಕ್ರಿಯೆಗಳಲ್ಲಿ ಇನ್ನೂ ಅನೇಕ ಆರ್ಥಿಕ ಮತ್ತು ಸಾಮಾಜಿಕ ಒತ್ತಡಗಳಿರುವುದನ್ನು ಗಮನಿಸಬಹುದು. ಪಿತ್ರಾರ್ಜಿತವಾಗಿ ಬಂದ ಮನೆತನದ ಆಸ್ತಿ ಮತ್ತು ಸಂಪತ್ತು ಮುಂದೆ ಮಕ್ಕಳಿಗೆ ದಕ್ಕುವುದರಿಂದ ಅದು ತಮ್ಮ ಜಾತಿ ಮತ್ತು ಕುಟುಂಬದ ಸೀಮಿತ ವಲಯದಲ್ಲೇ ಉಳಿಯಬೇಕೆಂಬುದೂ ವಧೂವರರ ತಂದೆತಾಯಿಗಳ ಆಕಾಂಕ್ಷೆಯಾಗಿರುತ್ತದೆ. ಜಾತಿಪದ್ಧತಿ, ಸಂಪ್ರದಾಯ ನಿಷ್ಠೆ ಮತ್ತು ಆಸ್ತಿ ಹಕ್ಕುದಾರಿಕೆ ಇವೆಲ್ಲ ಪರಸ್ಪರ ಸಂಬಂಧಿಗಳಾಗಿರುವುದನ್ನು ಇಲ್ಲೆಲ್ಲ ನೋಡಬಹುದು.

ತೀರಾ ಕೆಳವರ್ಗದ ಸಮಾಜದಲ್ಲಿ ಯಾವ ಬಂಡವಾಳವೂ ಇಲ್ಲದ ಅವರಿಗೆ ಜಾತಿಯೇ ದೊಡ್ಡ ಬಂಡವಾಳವಾಗಿರುತ್ತದೆ. ಯಾವ ಸಂಪತ್ತೂ ಇಲ್ಲದ ಅವರಿಗೆ ಕೊನೇ ಪಕ್ಷ ಜಾತಿಯಸ್ಥರಿಂದ ಕಿಂಚಿತ್ ಸಹಾಯ ಮತ್ತು ಸಹಾನುಭೂತಿಯಾದರೂ ಸಿಗುತ್ತದೆ. ಮಕ್ಕಳು ಜಾತಿಯನ್ನು ನಿರ್ಲಕ್ಷಿಸಿದಾಗ ಅವರಿಗೆ ಉಂಟಾಗುವ ಅಭದ್ರಸ್ಥಿತಿಯೇ ಇಂಥ ಸಮಾಜದ ಪ್ರತಿಕೂಲ ಪ್ರತಿಕ್ರಿಯೆಗೆ ಕಾರಣ. ಸಾಂಪ್ರದಾಯಕ ವಿವಾಹಗಳನ್ನು ನಾವು ವಿರೋಧಿಸುವಾಗ ಕೇವಲ ಧಾರ್ಮಿಕ ಮತ್ತು ತಾತ್ವಿಕ ನೆಲೆಗಳನ್ನು ಮಾತ್ರ ಪರಿಗಣಿಸಿ ಮಾತನಾಡಿದರೆ ಸಾಂಪ್ರದಾಯ ನಿಷ್ಠೆಯ ಹಿಂದಿರುವ ಅನೇಕ ಆರ್ಥಿಕ ಮತ್ತು ಸಾಮಾಜಿಕ ಒತ್ತಡಗಳನ್ನು ನಾವು ಮರೆಯುತ್ತೇವೆ. ಜಾತಿಪದ್ಧತಿ ಮತ್ತು ಜಾತೀಯ ವಿವಾಹಗಳು ಇಂದು ಬಹುಪಾಲು ಅವುಗಳಿಂದೊದಗುವ ಆರ್ಥಿಕ ಮತ್ತು ಸಾಮಾಜಿಕ ಅನುಕೂಲಗಳಿಗಾಗಿಯೇ ಆಚರಣೆಯಲ್ಲಿವೆ, ಯುವಕ ಯುವತಿಯರ ಮೇಲಿನ ಸಂಪ್ರದಾಯಸ್ಥರ ಬಲಾತ್ಕಾರ ಮತ್ತು ದಿಗ್ಬಂಧನಗಳಿಗೆ ಇವೂ ಬಹು ಮುಖ್ಯ ಕಾರಣಗಳು.

ಅಂತರ್ಜಾತೀಯ ವಿವಾಹಗಳು ಸಾಂಪ್ರದಾಯಕ ವಿವಾಹಗಳಿಗಿಂತ ವಿಫಲವಾಗುವುದು ಹೆಚ್ಚು ಎನ್ನುವುದು ಸುಳ್ಳು. ಸಾಧಾರಣವಾಗಿ ಅಂತರ್ಜಾತೀಯ ವಿವಾಹಗಳು ವಿದ್ಯಾವಂತರ ನಡುವೆಯೇ ಹೆಚ್ಚಾಗಿ ಆಗುವುದರಿಂದ ಹೆಣ್ಣು ಹೆಚ್ಚು ಸ್ವಾಭಿಮಾನ ಉಳ್ಳವಳೂ, ಸಮಾನತೆಯ ಅಪೇಕ್ಷೆಯುಳ್ಳವಳೂ ಆಗಿರುವುದು ಸಹಜ. ಹಾಗಾಗಿ ಗಂಡ ಹೆಂಡಿರ ನಡುವಿನ ಭಿನ್ನಾಭಿಪ್ರಾಯಗಳು ವ್ಯಕ್ತವಾಗುವುದು ಹೆಚ್ಚು. ಸಾಂಪ್ರದಾಯಕ ವಿವಾಹಗಳಲ್ಲಿಯಂತೆ ಪತಿಯೇ ಪರದೈವವೆಂದು ನಂಬಿ ತಮ್ಮೆಲ್ಲ ಯಾತನೆಗಳನ್ನೂ ಮೂಕವಾಗಿ ಹೆಣ್ಣು ಸಹಿಸದಿರುವುದರಿಂದಲೇ ಅಂತರ್ಜಾತೀಯ ವಿವಾಹಗಳಲ್ಲಿ ವೈಫಲ್ಯ ಹೆಚ್ಚೆಂದು ಅಭಿಪ್ರಾಯ ಬರಲು ಕಾರಣ. ಸಂಪ್ರದಾಯ ವಿವಾಹಗಳಲ್ಲಿ ಗಂಡಿಗೆ ಹೆಣ್ಣನ್ನು ಶೋಷಿಸಲು ಇರುವ ಸೌಲಭ್ಯ, ಅಂತರ್ಜಾತೀಯ ವಿವಾಹಗಳಲ್ಲಿ ಕೆಲಮಟ್ಟಿಗೆ ಕಡಿಮೆ ಇದೆ ಎನ್ನುವುದು ವಾಸ್ತವಾಂಶ.

ಅಂತೆಯೆ ಗಂಡ ಹೆಂಡಿರು ಪರಸ್ಪರ ಒಬ್ಬರನ್ನೊಬ್ಬರು ಅರಿತು ಅರ್ಥಮಾಡಿಕೊಂಡು ಬದುಕಬೇಕಾದ ಜವಾಬ್ದಾರಿ ಸಹ ಅಂತರ್ಜಾತೀಯ ವಿವಾಹಿತರಿಗೆ ಹೆಚ್ಚು. ಸಂಪ್ರದಾಯ ವಿವಾಹಗಳಲ್ಲಿ ಹೆಣ್ಣಿನ ಕಡೆಯವರೂ ಗಂಡಿನ ಕಡೆಯವರೂ ವಧೂವರರ ಸಂಸಾರದ ಬಗ್ಗೆ ವಹಿಸುವ ಸಾಮೂಹಿಕ ಜವಾಬ್ದಾರಿ, ವೈಮನಸ್ಯಗಳು ಉಂಟಾದಾಗ ನಡೆಸುವ ಮಧ್ಯಸ್ತಿಕೆ ಮೊದಲಾದವು ಅಂತರ್ಜಾತೀಯ ವಿವಾಹದ ಸಂದರ್ಭದಲ್ಲಿ ಇರುವುದಿಲ್ಲ. ಈ ಬಗೆಯ ಸಾಮೂಹಿಕ ಹಸ್ತಕ್ಷೇಪ ಒಳಿತನ್ನು ಉಂಟು ಮಾಡುವಂತೆಯೇ ಕೆಡುಕು ಕಿರಿಕಿರಿಗಳಿಗೂ ಕಾರಣವಾಗಬಹುದು ಎಂಬುದನ್ನು ನಾವು ಮರೆಯಬಾರದು.

ಯಾವ ಕ್ರಮದ ವಿವಾಹವೇ ಆಗಲಿ ಅದರ ಸಫಲತೆ ಮತ್ತು ವಿಫಲತೆಗಳಿಗೆ ಕಾರಣಗಳನ್ನು ಗಂಡು ಹೆಣ್ಣಿನ ವ್ಯಕ್ತಿವೈಲಕ್ಷಣ್ಯಗಳಲ್ಲಿ ನಾವು ಹುಡುಕಬೇಕೇ ಹೊರತು ಅವರ ವಿವಾಹಕ್ರಮದಲ್ಲಿ ಹುಡುಕುವುದು ವ್ಯರ್ಥ. ಮದುವೆಯಿಂದ ಅತಿಯನ್ನು ಅಪೇಕ್ಷಿಸದೆ, ತಾಳ್ಮೆ ಸಂಯಮಗಳಿಂದ ಬದುಕುವುದಕ್ಕೆ ಪರ್ಯಾಯ ಯಾವುದೂ ಇಲ್ಲ. ಈ ಕನಿಷ್ಠ ಶಿಸ್ತು

ಇಲ್ಲದಿದ್ದಲ್ಲಿ ಅಂತರ್ಜಾತೀಯ ವಿವಾಹವಾದರೂ ಕಲಹ ವೈಮನಸ್ಯಗಳು ತಪ್ಪಿದ್ದಲ್ಲ, ಸಂಪ್ರದಾಯಬದ್ಧವಾಗಿ ಆದರೂ ತಪ್ಪಿದ್ದಲ್ಲ.

ಅಂತರ್ಜಾತೀಯ ವಿವಾಹಿತರ ಸಮಾವೇಶದಲ್ಲಿ ಚರ್ಚಿಸ ಬೇಕಾದ ಬಹುಮುಖ್ಯ ಪ್ರಶ್ನೆ ಅಂತರ್ಜಾತೀಯವಾಗಿ ವಿವಾಹವಾದವರು ಎಲ್ಲ ಜಾತೀಯ ಗುಂಪುಗಳಂತೆ ಸಂಘಟಿತರಾಗಬೇಕೆ? ಹಾಗಿದ್ದರೆ ನಾವು ಜಾತ್ಯತೀತ ಸಮಾಜ ನಿರ್ಮಾಣದ ಹಾದಿಯಲ್ಲಿದ್ದೇವೆಯೆ? ಸಂಘಟಿತರಾಗಿ ನಾವು ಮಾಡಬಹುದಾದ ಕಾರ್ಯಕ್ರಮಗಳೇನು? ಈ ಗುಂಪಿಗೆ ಸರ್ಕಾರದ ನೀತಿ ನಿಯಮಗಳಲ್ಲಿ, ಧೋರಣೆಗಳಲ್ಲಿ ಯಾವ ರೀತಿಯ ಸ್ಥಾನಮಾನಗಳು ಅವಶ್ಯಕ? ಎನ್ನುವುದು.

ಅಂತರ್ಜಾತೀಯ ವಿವಾಹದ ಚರಿತ್ರೆಯನ್ನು ಗಮನಿಸಿದರೆ ಸ್ವಾತಂತ್ರ್ಯ ಪೂರ್ವದ ಮಹಾತ್ಮ ಗಾಂಧಿಯವರ ಕಾಲದಿಂದಲೂ ಪ್ರತಿಯೊಬ್ಬರೂ ಇದನ್ನು ಬಲವಾಗಿ ಪ್ರತಿಪಾದಿಸಿರುವುದು ಕಂಡುಬರುತ್ತದೆ. ಭಾರತವನ್ನು ಅನಿಷ್ಟ ಜಾತಿಪದ್ಧತಿಯ, ಅಸ್ಪೃಶ್ಯತೆ ಮುಂತಾದವುಗಳ ಹಿಡಿತದಿಂದ ತಪ್ಪಿಸಿ ಸೆಕ್ಯೂಲರ್ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಸಹಪಂಕ್ತಿ ಭೋಜನ ಮತ್ತು ಅಂತರ್ಜಾತೀಯ ವಿವಾಹಗಳನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲವೆಂದು ಗಾಂಧೀಜಿ ಹೇಳಿದರು. ಎಲ್ಲರೂ ಸಾರ್ವತ್ರಿಕವಾಗಿ ಇದನ್ನು ಒಪ್ಪಿ ಭಾರತದ ಸಂವಿಧಾನದಲ್ಲಿ ಸಹ ಇದನ್ನೊಂದು ಆದರ್ಶವನ್ನಾಗಿ ಸೇರಿಸಲಾಯ್ತು. ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ತರುವಾಯ ನಾವೆಲ್ಲ ಈ ದಿಕ್ಕಿನಲ್ಲಿ ಎಷ್ಟು ಮುಂದುವರಿದಿದ್ದೇವೆ? ಏನನ್ನು ಸಾಧಿಸಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು.

ಇಂದು ಸುಶಿಕ್ಷಿತ ಸಮಾಜದಲ್ಲಿ ಬೇಕಾದಷ್ಟು ಅಂತರ್ಜಾತೀಯ ವಿವಾಹಗಳು ನಡೆಯುತ್ತಿವೆ ಎನ್ನುವುದು ನಿಜ. ಸಹಸ್ರಾರು ಯುವಕ ಯುವತಿಯರು ತಮ್ಮ ಜಾತೀಯ ಸಂಕೋಲೆಗಳನ್ನು ಕಿತ್ತೊಗೆದು ತಮಗೆ ಇಷ್ಟಬಂದವರನ್ನು ಮದುವೆಯಾಗಿದ್ದಾರೆ ಅನ್ನುವುದೂ ನಿಜ. ಆದರೆ ಭಾರತದ ವಿಸ್ತಾರ ಮತ್ತು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಈ ವ್ಯಕ್ತಿಗತ ಸಾಧನೆಗಳು ಭಾರತೀಯ ಸೆಕ್ಯೂಲರ್ ಸಮಾಜ ನಿರ್ಮಾಣದ ಹಾದಿಯಲ್ಲಿ ಗಣನೀಯ ಸಾಧನೆಗಳೆಂದು ಹೇಳಬರುವುದಿಲ್ಲ. ಇವು ವೈಯಕ್ತಿಕ ಸಾಧನೆಗಳಾದುವೇ ಹೊರತು ಸಾಮಾಜಿಕ ಬದಲಾವಣೆ ಆಗಲೇ ಇಲ್ಲ.

ಇದಕ್ಕಿಂತ ಕಳವಳಕಾರಕ ಸಂಗತಿ ಎಂದರೆ ಜಾತೀಯತೆ, ಜಾತಿವೈಷಮ್ಯ ಮುಂತಾದವು ಸ್ವಾತಂತ್ರ್ಯಾನಂತರ ಹೆಚ್ಚುತ್ತಾ ಬಂದಿರುವುದು. ಜಾತ್ಯತೀತ ಭಾರತದ ನಿರ್ಮಾಣಕ್ಕೆ ಮೊದಲ ಕಂಟಕವಾಗಿ ರೂಪುಗೊಳ್ಳುತ್ತಿರುವುದು ಭಾರತದ ರಾಜಕಾರಣ. ಪ್ರತಿಯೊಂದು ಪಕ್ಷವೂ ತನ್ನ ಪ್ರಣಾಳಿಕೆಯಲ್ಲಿ ಜಾತ್ಯತೀತ ಧೋರಣೆಯನ್ನು ಪ್ರಕಟಿಸಿದರೂ ಯಾವುದೇ ಮುಚ್ಚು ಮರೆ ಇಲ್ಲದೆ ಜಾತಿಯ ಆಧಾರದ ಮೇಲೇ ರಾಜಕೀಯ ಮಾಡುತ್ತವೆ, ಚುನಾವಣೆಗಳನ್ನೂ ಎದುರಿಸುತ್ತವೆ. ಜಾತಿಯೊಂದನ್ನೇ ಬಂಡವಾಳವನ್ನಾಗಿ ಉಪಯೋಗಿಸಿ ಚುನಾಯಿತರಾದ ರಾಜಕಾರಣಿಗಳಾಗಲಿ, ಅಧಿಕಾರಕ್ಕೆ ಬರುವ ಪಕ್ಷವಾಗಲಿ ಜಾತೀಯತೆಯನ್ನು ತೊಡೆದು ಹಾಕಲು ಅಧಿಕಾರ ಉಪಯೋಗಿಸುತ್ತದೆಯೆ? ಅಂಥ ಸರ್ಕಾರಗಳು ತನ್ನನ್ನು ಅಧಿಕಾರಕ್ಕೆ ತಂದ ಸಾಧನಗಳನ್ನು ಇನ್ನಷ್ಟು ಬಲಪಡಿಸೀತೆ ಹೊರತು ನಾಶ ಮಾಡುವುದಿಲ್ಲ. ಜಾತೀಯ ಸಂಘಟನೆ, ಸಂಸ್ಥೆಗಳ ಅಡಿಯಾಳುಗಳಂತೆ ವರ್ತಿಸುವ ರಾಜಕಾರಣಿಗಳು ಇಂದು ದೇಶದ ಉನ್ನತ ಪದವಿಗಳನ್ನು ಸಹ ಆಕ್ರಮಿಸುತ್ತಿದ್ದಾರೆ. ಎಲ್ಲ ಪಕ್ಷಗಳ, ಎಲ್ಲ ರಾಜಕಾರಣಿಗಳ ಜೀವನದ ಚರಮೋದ್ದೇಶವೇ ಓಟಿನ ಬೇಟೆಯಾಗಿರುವುದರಿಂದ ನೆಹರೂ ಕಾಲದಲ್ಲಿದ್ದ ಜಾತ್ಯತೀತ ರಾಷ್ಟ್ರದ ಕನಸು ಸಹ ಇಂದು ಅಸ್ತಂಗತವಾಗುತ್ತಿದೆ.

ಹಾಗಿದ್ದರೆ ಸ್ವಾತಂತ್ರ್ಯಪೂರ್ವ ಭಾರತದ ಜಾತಿ ವ್ಯವಸ್ಥೆ, ಸಾಮಾಜಿಕ ಕಟ್ಟಳೆಗಳು ಸ್ವಾತಂತ್ರ್ಯಾನಂತರವೂ ಹಾಗೇ ಮುಂದುವರಿದಿದೆಯೆ? ಆಧುನಿಕ ನಾಗರೀಕತೆ, ಜಾಗತಿಕ ವೈಜ್ಞಾನಿಕ ಮುನ್ನಡೆಗಳು, ವಿಸ್ತರಿಸಿದ ವಿದ್ಯಾಭ್ಯಾಸ ಮೊದಲಾದವುಗಳ ಪ್ರಭಾವದಿಂದ ಭಾರತದ ಸಂಪ್ರದಾಯಕ ಪರಿಸರ ಬದಲಾಗಲಿಲ್ಲವೆ? ಬದಲಾಗಿದ್ದರೆ ಹೇಗೆ ಬದಲಾಗಿದೆ?

ಸ್ವಾತಂತ್ರ್ಯಾನಂತರ ಭಾರತದ ಸಾಮಾಜಿಕ ಸನ್ನಿವೇಶ ಕ್ರಾಂತಿಕಾರಕವಾಗಿ ಬದಲಾಗತೊಡಗಿತು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಮೂರು ನಾಲ್ಕು ಶತಮಾನಗಳ ಪರಕೀಯರ ಆಳ್ವಿಕೆಯಲ್ಲಿ, ಗೊಡ್ಡು ಸಂಪ್ರದಾಯಗಳ, ಜಾತಿಪದ್ಧತಿಯ ಉಕ್ಕಿನ ಹಿಡಿತದಲ್ಲಿ ಸ್ಥಗಿತಗೊಂಡು ಜಡವಾಗಿದ್ದ ಭಾರತೀಯ ಸಮಾಜಕ್ಕೆ ಮತ್ತೆ ಚಲನೆ ಚೈತನ್ಯ ಉಂಟುಮಾಡಿದ್ದು ಗಾಂಧೀಜಿಯವರ ಮಹತ್ಸಾಧನೆಗಳಲ್ಲಿ ಒಂದು. ಇದರಲ್ಲಿ ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ್ ನಾರಾಯಣ ಮೊದಲಾದ ಮಹನೀಯರ ಪಾಲೂ ಇದೆಯೆನ್ನುವುದನ್ನು ನಾವು ಮರೆಯಲಾಗದು. ಅದರಲ್ಲೂ ನಮ್ಮ ಸಮಾಜದ ತೀರಾ ಹಿಂದುಳಿದ ಜಾತಿಗಳಿಗೆ, ಹರಿಜನ ವರ್ಗಕ್ಕೆ ವಿಶೇಷ ಸವಲತ್ತುಗಳನ್ನು ಸಂವಿಧಾನದತ್ತವಾಗೇ ಕಲ್ಪಿಸಿದ್ದು ಜಾತಿಗಳಲ್ಲಿ ಆರ್ಥಿಕ ಸಮಾನತೆ ತರಲು ಭಾರತ ನಡೆಸಿದ ಅಸಾಧಾರಣ ಪ್ರಯತ್ನವೆಂದೇ ಹೇಳಬಹುದು. ಇದರನಂತರ ಭಾರತದ ಅನೇಕ ರಾಜ್ಯಗಳಲ್ಲಿ ನಿಯಮಿಸಿದ ಹಿಂದುಳಿದ ವರ್ಗಗಳ ಆಯೋಗಗಳ ಶಿಫಾರಸ್ಸಿನ ಮೇರೆಗೆ ಕೈಗೊಂಡ ವಿವಿಧ ಸರ್ಕಾರಿ ಕಾರ್ಯಕ್ರಮಗಳೂ ಹಿಂದುಳಿದ ಅನೇಕ ಜಾತಿಗಳಲ್ಲಿ ಮುಂದುವರಿಯುವ ಆಸೆ ಆಕಾಂಕ್ಷೆಗಳನ್ನು ಉದ್ದೀಪಿಸಲು, ಸಂಘಟಿತ ಪ್ರಯತ್ನ ಮಾಡಲು ಪ್ರೇರೇಪಿಸಿದುವು. ಸ್ವಾತಂತ್ರ್ಯಾನಂತರದ ಐದು ದಶಕಗಳ ಚರಿತ್ರೆಯನ್ನು ಅವಲೋಕಿಸಿದರೆ ಜಾತಿ ಪದ್ಧತಿಯ ಶ್ರೇಣೀಕೃತ ರಚನೆಯಲ್ಲಿ ನಿಧಾನವಾಗಿ ವ್ಯತ್ಯಾಸ ತಲೆದೋರಿರುವುದನ್ನು ಕಾಣಬಹುದು.

ಆದರೆ ಈ ಚರಿತ್ರೆಯ ಅವಲೋಕನದಿಂದ ಕಂಡುಬರುವ ಇನ್ನೊಂದು ಕಳವಳಕಾರಕ ಅಂಶವೆಂದರೆ ಈ ಮೇಲಿನ ಕಾರ್ಯಕ್ರಮಗಳೆಲ್ಲ ಹಿಂದುಳಿದ ವರ್ಗ, ಜಾತಿಗಳನ್ನು ಮೇಲೆತ್ತಲು ಸಹಾಯ ಮಾಡಿದರೂ ಜಾತಿ ಪದ್ಧತಿಯನ್ನೂ, ಜಾತೀಯತೆಯನ್ನೂ ಮತ್ತಷ್ಟು ಉಲ್ಬಣಗೊಳಿಸಿತೇ ಹೊರತು ಜಾತ್ಯತೀತ ಸಮಾಜದತ್ತ ಭಾರತ ಹೆಜ್ಜೆ ಇಡಲೇ ಇಲ್ಲ ಎನ್ನುವುದು. ನಮ್ಮ ಹಿಂದುಳಿದ ವರ್ಗಗಳ ಆಯೋಗಗಳ ಉದಾಹರಣೆಯನ್ನೇ ಗಮನಿಸಿ. ಪ್ರತಿಯೊಂದು ಸಾರಿ ಆಯೋಗಗಳನ್ನು ರಚಿಸಿದಾಗಲೂ ಎಲ್ಲ ಜಾತಿಯವರೂ ತಾವು ಎಲ್ಲರಿಗಿಂತ ಹಿಂದುಳಿದವರೆಂದು ವಾದಿಸುತ್ತಾ ಬೀದಿ ಜಗಳ ಪ್ರಾರಂಭಿಸುತ್ತಾರೆ. ಹಿಂದುಳಿದ ಎಲ್ಲ ಜಾತಿಗಳಲ್ಲೂ ಹೊಸದಾಗಿ ದೊರಕಿದ ವಿಶೇಷ ಸವಲತ್ತುಗಳಿಂದ ನವೀನ ಮುಂದುವರಿದ ವರ್ಗವೊಂದು ಸೃಷ್ಟಿಯಾಗಿ ತಮ್ಮತಮ್ಮ ಜಾತಿಗಳ ಹಿಂದುಳಿದಿರುವಿಕೆಯನ್ನೇ ಶೋಷಣೆಗೆ ಉಪಯೋಗಿಸುತ್ತಿರುವುದನ್ನು ಕಾಣಬಹುದು. ಇದಕ್ಕಿಂತ ದುರ್ದೈವದ ಸಂಗತಿಯೆಂದರೆ ಹಿಂದುಳಿದ ವರ್ಗಗಳೇ ಅನೇಕ ಗುಂಪುಗಳಾಗಿ ಒಡೆದು ಅನೇಕ ಹೊಸ ಹೊಸ ಜಾತಿಗಳಾಗಿ ರೂಪುಗೊಳ್ಳುತ್ತ ನಾವು ಅತ್ಯಂತ ಹಿಂದುಳಿದವರೆಂದು ಸಾಧಿಸಲು ಮುಂದಾಗಿರುವುದು. ರಕ್ತಬೀಜಾಸುರನಂತೆ ಜಾತಿಗಳೇ ಒಂದು ಹತ್ತಾಗಿ, ಹತ್ತು ನೂರಾಗಿ ರೂಪುಗೊಳ್ಳ ತೊಡಗಿದರೆ ತಾವು

ನಿಜವಾಗಿಯೂ ಜಾತ್ಯತೀತ ಸಮಾಜದ ದಿಕ್ಕು ಹಿಡಿದಿದ್ದೇವೆಯೆ ಎಂದು ಆತ್ಮವಿಮರ್ಶೆ ಮಾಡಿಕೊಳ್ಳುವುದು ಒಳ್ಳೆಯದು.

ನಾನು ಈ ಆಯೋಗಗಳು ನಿಷ್ಪ್ರಯೋಜಕವೆಂದೂ, ಇವುಗಳ ಸಲಹೆಗಳನ್ನು ಸರ್ಕಾರ ಅಂಗೀಕರಿಸಿ ಆಚರಣೆಗೆ ತಂದಿದ್ದು ತಪ್ಪೆಂದೂ ಹೇಳುತ್ತಿಲ್ಲ. ಆದರೆ ಇದು ಭಾರತದಲ್ಲಿ ಜಾತ್ಯತೀತ ಸಮಾಜ ನಿರ್ಮಾಣ ಮಾಡುವತ್ತ ಇಡುತ್ತಿರುವ ಹೆಜ್ಜೆಗಳಂತೆ ತೋರುತ್ತಿಲ್ಲ ಎಂದು ಮಾತ್ರ ಹೇಳಬಯಸುತ್ತೇನೆ.

ಹಾಗಿದ್ದರೆ ನಾವು ನಿಜವಾಗಿಯೂ ದಾರಿತಪ್ಪಿದ್ದೆಲ್ಲಿ? ನಮ್ಮ ಕಾರ್ಯಕ್ರಮಗಳು ನಮ್ಮ ಉದ್ದೇಶಕ್ಕೆ ಸಂಪೂರ್ಣ ವ್ಯತಿರಿಕ್ತವಾದ ಫಲಿತಾಂಶಗಳನ್ನು ನೀಡತೊಡಗಿರುವುದೇಕೆ?

ಕಳೆದ ಐವತ್ತು ವರ್ಷಗಳ ಚರಿತ್ರೆಯನ್ನು ವಿಶ್ಲೇಷಿಸಿದರೆ ಗಾಂಧಿ, ಅಂಬೇಡ್ಕರ್, ಲೋಹಿಯಾ ಮೊದಲಾದವರ ಕೆಲವು ಊಹೆಗಳು ಅಷ್ಟು ಸಮರ್ಪಕವಾಗಿಲ್ಲ ಎಂದೆನ್ನಿಸುತ್ತದೆ. ಇವರೆಲ್ಲ ಸಮಾಜದ ಕೆಳವರ್ಗದಲ್ಲಿದ್ದ ಜಾತಿಗಳನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಮೇಲೆತ್ತಿದರೆ, ಎಂದರೆ ಜಾತಿಗಳ ನಡುವೆ ಒಂದು ಮಟ್ಟದ ಸಮಾನತೆಯನ್ನಾದರೂ ಸಾಧಿಸಿದರೆ ಜಾತಿ ಪದ್ಧತಿ ಮತ್ತು ಜಾತೀಯ ಸಂಕೋಲೆಗಳು ತನ್ನಿಂದ ತಾನೆ ಸಡಿಲಾಗುತ್ತ ವರ್ಣಾಶ್ರಮ ಮೂಲ ಸಮಾಜ ನಿಧಾನವಾಗಿ ವರ್ಗಮೂಲ ಸಮಾಜವಾಗಿ ರೂಪಾಂತರಗೊಳ್ಳುತ್ತದೆ ಎಂದು ಊಹಿಸಿದರು. ಇವರೆಲ್ಲರ ಈ ತಾತ್ವಿಕ ನಿಲುವಿಗೆ ಆ ದಶಕಗಳಲ್ಲಿದ್ದ ಡೈಲೆಕ್ಟಿಕಲ್ ಮೆಟೀರಿಯಲಿಸಂ ಪ್ರಭಾವವೂ ಕಾರಣವಿರಬಹುದು. ಗಾಂಧೀಜಿಯವರ "ಗುರಿ ಮತ್ತು ದಾರಿ ಎರಡೂ ಅವಿಭಾಜ್ಯವಾಗಿರಬೇಕು, ಸುಳ್ಳಿನಿಂದ ಸತ್ಯವನ್ನಾಗಲೀ, ಕೇಡಿನಿಂದ ಒಳಿತನ್ನಾಗಲೀ, ಹಿಂಸೆಯಿಂದ ಅಹಿಂಸೆಯನ್ನಾಗಲೀ ಸಾಧಿಸಲು ಸಾಧ್ಯವಿಲ್ಲ'' ಎನ್ನುವ ತಾತ್ವಿಕ ನಿಯಮವನ್ನು ಸದ್ಯದ ಚಾರಿತ್ರಿಕ ವಾಸ್ತವಕ್ಕೆ ಅನ್ವಯಿಸಿ ನಾವು ಜಾತ್ಯತೀತ ಸಮಾಜದತ್ತ ಮುಂದುವರಿಯುತ್ತಿದ್ದೇವೆಯೆ ಎಂದು ಯೋಚಿಸಿ. ಉಲ್ಬಣಗೊಳ್ಳುತ್ತಿರುವ ಜಾತೀಯತೆ, ಒಂದಕ್ಕೆ ಹತ್ತಾಗಿ ದ್ವಿಗುಣಗೊಳ್ಳುತ್ತಿರುವ ಜಾತಿಗಳು, ಎಲ್ಲ ಜಾತಿಗಳಲ್ಲೂ ತಲೆಯೆತ್ತುತ್ತಿರುವ ಮೂಲಭೂತವಾದಿ ಧೋರಣೆಗಳು ಇವೆಲ್ಲ ನಾವು ಎಲ್ಲೋ ದಾರಿತಪ್ಪಿದ್ದೇವೆಂಬ ಸಂಶಯ ಉಂಟುಮಾಡುವುದಿಲ್ಲವೆ?

ಹಲವು ಶತಮಾನಗಳ ಪರಕೀಯರ ಆಳ್ವಿಕೆ ಕೊನೆಗೊಂಡು ಸ್ವಾತಂತ್ರ್ಯ ಬಂದಾಗ ಭಾರತದಲ್ಲಿದ್ದ ಬಹುಸಂಖ್ಯಾತ ಹಿಂದುಳಿದವರನ್ನು ಮೇಲೆತ್ತಲು ಅವರಿಗೆ ವಿಶೇಷ ಸವಲತ್ತುಗಳನ್ನು ನೀಡಬೇಕಾದುದು ಅನಿವಾರ್ಯವಾಗಿತ್ತು. ಜಾತಿಗಳು ಮೊಟ್ಟಮೊದಲು ರಾಜಕೀಯ ಪ್ರಾಧಾನ್ಯತೆ ಪಡೆಯಲು ಪ್ರಾರಂಭವಾಗಿದ್ದು ಇಲ್ಲಿಂದಲೇ. ಜಾತಿ ಕಾರಣವಾಗೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದ ಜನಸಮುದಾಯಗಳಿಗೆ ವಿಶೇಷ ಸವಲತ್ತುಗಳನ್ನು ಕೊಡಲು ಜಾತಿ ಮುಖಾಂತರವೇ ಅವರನ್ನು ಗುರುತಿಸದೆ ಗತ್ಯಂತರವೇ ಇರಲಿಲ್ಲ. ಹಾಗಾಗಿ ಒಬ್ಬ ಮುಂದುವರಿದವನಾಗಲಿ ಭಾರತೀಯನಾಗಿ ಅಸ್ತಿತ್ವ ಪಡೆಯಲು ಯಾವುದಾದರೂ ಒಂದು ಜಾತಿಗೆ ಸೇರಿದವನಾಗಲೇ ಬೇಕಾಯ್ತು. ಇದರ ದೂರಗಾಮಿಯಾದ ಪರಿಣಾಮಗಳನ್ನು ಆಗ ನಾವು ಊಹಿಸಲು ಸಾಧ್ಯವಾಗಲಿಲ್ಲ. ಅಸ್ಪಷ್ಟವಾಗಿದ್ದ, ಸಡಿಲವಾಗಿದ್ದ ಜಾತಿಸಮುದಾಯಗಳೆಲ್ಲಾ ನಿಧಾನವಾಗಿ ಸ್ನಿಗ್ಧವಾಗುತ್ತ, ಸಂಘಟಿತ ಜಾತಿಗಳೊಡನೆ ಪೈಪೋಟಿಯಲ್ಲಿ ತಾನೂ ಮಠಗಳನ್ನೂ ಜಗದ್ಗುರುಗಳನ್ನೂ ರೂಪಿಸಿಕೊಳ್ಳುತ್ತ, ಜಾತೀಯ ಮೂಲಭೂತವಾದದತ್ತ ಸಾಗತೊಡಗಿದುವು. ವರ್ಗ ಮತ್ತು ವರ್ಣ ಸಮಾನತೆಯ ಜಾತ್ಯತೀತ ಭಾರತ ನಿರ್ಮಾಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳೇ ಅದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ನಮ್ಮನ್ನು ಸೆಳೆಯಲು ಪ್ರಾರಂಭಿಸಿದ್ದು ಇಲ್ಲಿಂದಲೇ. ತನ್ನ ಅಸ್ತಿತ್ವಕ್ಕೆ ಜಾತಿಯೊಂದನ್ನು ಅವಲಂಬಿಸಲೇ ಬೇಕಾದ ಸಂವಿಧಾನಾತ್ಮಕ ನಿರ್ಬಂಧವನ್ನು ನಾವು ಸೃಷ್ಟಿಸಿದೆವು. ಯಾವ ಜಾತಿಗೂ ಸೇರಲಿಷ್ಟವಿಲ್ಲದ ಜಾತ್ಯತೀತ ಗುಂಪುಗಳು ಎಲ್ಲಿಯೂ ಸಲ್ಲದ ಮುಖರಹಿತ ತ್ರಿಶಂಕುಗಳಾದರು. ಸಮಾಜ, ಬಂಧುಬಳಗ ಎಲ್ಲವನ್ನೂ ಎದುರು ಹಾಕಿಕೊಂಡು ಜಾತೀಯ ಸಂಕೋಲೆಗಳನ್ನು ಕಿತ್ತೊಗೆದು ಅಂತರ್ಜಾತೀಯ ವಿವಾಹವಾದವರು ಕೊನೆಗೂ ಅವರವರ ಜಾತಿಯ ಕೂಪ ಗಳಿಗೇ ಹಿಂದಿರುಗುವಂತೆ ಸಂವಿಧಾನಾತ್ಮಕ ಅನಿವಾರ್ಯತೆ ಸೃಷ್ಟಿಸಿದ್ದು ಭಾರತದ ಸೆಕ್ಯೂಲರ್ ಆಂದೋಳನದ ಘೋರ ದುರಂತಗಳಲ್ಲಿ ಒಂದು.

ಇವತ್ತು ಜಾತ್ಯತೀತರೆಂದು, ಆದರ್ಶವಾದಿಗಳೆಂದು ಪರಿಭಾವಿಸಿಕೊಂಡು ಸಮ್ಮೇಳನ ಸೇರಿದ್ದರೂ ಭಾರತದ ರಾಜ್ಯಾಂಗದ ಪ್ರಕಾರ ಅಂತರ್ಜಾತೀಯ ವಿವಾಹ ಮತಾಂತರವೇ ಹೊರತು ಬೇರೇನೂ ಅಲ್ಲ. ಅಂತರ್ಜಾತೀಯ ವಿವಾಹವಾದವರು ಮತ್ತು ಅವರ ಮಕ್ಕಳು ಗಂಡಸಿನ ಜಾತಿಯೊಂದಿಗೆ ಗುರುತಿಸಿಕೊಳ್ಳಲೇಬೇಕಾದ ಕಡ್ಡಾಯವಿರುವವರೆಗೆ, ಹಣದ, ಹೆಂಡದ ಆಸೆ ತೋರಿಸಿ ನಡೆಯುವ ಮತಾಂತರಗಳಂತೆಯೇ ಅಂತರ್ಜಾತೀಯ ವಿವಾಹವೂ ಆದರ್ಶದ ಆಮಿಷದಲ್ಲಿ ನಡೆಯುವ ಮತಾಂತರವೇ ಸರಿ, ನಮ್ಮ ಕಾನೂನಿನ ಮತ್ತು ರಾಜ್ಯಾಂಗದ ಪ್ರಕಾರ.

ಹಿಂದುಳಿದ ವರ್ಗಗಳ ಆಯೋಗದಲ್ಲಿ ಕೆಲಸ ಮಾಡಿದ ಶ್ರೀ ಹಾವನೂರು, ಶ್ರೀವೆಂಕಟಸ್ವಾಮಿ ಮೊದಲಾದವರಿಗೆ ಹಿಂದುಳಿದ ಜಾತಿಗಳನ್ನು ಮುಂದೆ ತರಬೇಕೆನ್ನುವ ಕಳಕಳಿಯೇನೋ ಇತ್ತು, ಆದರೆ ಅಂತಿಮವಾಗಿ ಭಾರತೀಯ ಸಮಾಜವನ್ನು ಈ ಜಾತೀಯ ವಿಷವೃತ್ತದಿಂದ ಬಿಡುಗಡೆ ಮಾಡುವುದು ಹೇಗೆಂದು ಯೋಚಿಸಲಿಲ್ಲ. ಸತತವಾಗಿ ಮುಂದುವರಿಯುತ್ತಲೇ ಇರುವ ನಾಗರೀಕತೆಯೊಂದರಲ್ಲಿ ಹಿಂದುಳಿದಿರುವಿಕೆಯ ಮಾನದಂಡಗಳನ್ನು ನಿರಂತರವಾಗಿ ಬದಲಿಸುತ್ತ ಸಮಾಜದ ಅನೇಕ ಜನಸಮುದಾಯಗಳು ಶಾಶ್ವತವಾಗಿ ನಿರಂತರ ಹಿಂದುಳಿದಿರುವಿಕೆಗೆ ಜೋತು ಬೀಳುತ್ತವೆ ಎನ್ನುವುದನ್ನು ಅವರು ಗ್ರಹಿಸಲಿಲ್ಲ.

ಹೀಗಾಗಿ ಮೀಸಲಾತಿ ಇಂದು ಜಾತೀಯ ಅಸಮಾನತೆಯನ್ನು ಕಡಿಮೆ ಮಾಡುವ ದಾರಿಯಲ್ಲೇ ಜಾತೀಯತೆಯನ್ನು ಹೆಚ್ಚು ಮಾಡುತ್ತಿರುವುದು ನಾವು ಕಾಣುತ್ತಿರುವ ವಿಪರ್ಯಾಸಗಳಲ್ಲಿ ಒಂದು.

ಈ ಚಕ್ರವ್ಯೂಹದಿಂದ, ಈ ವಿಷವೃತ್ತದಿಂದ ನಾವೇನಾದರೂ ಹೊರಹೋಗಬೇಕೆಂದಾದರೆ ಮೀಸಲಾತಿಯಲ್ಲೇ ನಾವು ಹೊರದಾರಿಗಳನ್ನು ನಿಯೋಜಿಸಬೇಕಾಗುತ್ತದೆ. ನಾವೀಗ ಯಾವೊಂದು ಜಾತಿಯೊಂದಿಗೂ ನಮ್ಮನ್ನು ಗುರುತಿಸಿಕೊಳ್ಳದೆ ಭಾರತೀಯರಾಗಿ ಈ ಸಮಾಜದಲ್ಲೇ ಅಸ್ತಿತ್ವ ಪಡೆಯಬೇಕೆಂದಾದರೆ ನಮ್ಮನ್ನು ಜಾತ್ಯತೀತರೆಂದು ಗುರುತಿಸಿಕೊಳ್ಳಲು ಸರ್ಕಾರದಿಂದ ಮೊಟ್ಟಮೊದಲು ಪಡೆದುಕೊಳ್ಳಬೇಕಾದುದು, ಈ ಸಮುದಾಯಕ್ಕೆ ಮನ್ನಣೆ, ಜಾತ್ಯತೀತ ಎಂದರೆ ಏನೆಂಬ ಅಧಿಕೃತ ವಿವರಣೆ, ಸರ್ಕಾರಕ್ಕೆ ಸಂಬಂಧಪಟ್ಟ ಎಲ್ಲ ಅರ್ಜಿಗಳಲ್ಲೂ ಈ ಸಮುದಾಯಕ್ಕೆ ಒಂದು ಕಾಲಂ.

ನಿಮಗೆಲ್ಲ ಇದೇನೂ ಅಂಥ ಗಣನೀಯ ಬೇಡಿಕೆಯಲ್ಲವೆಂದು ಅನ್ನಿಸಬಹುದು. ಇದರಿಂದ ತತ್ಕಾಲಕ್ಕೆ ಯಾವುದೇ ಸಾಮಾಜಿಕ ಮತ್ತು ಆರ್ಥಿಕ ಲಾಭ ಇಲ್ಲದಿದ್ದರೂ ಅಂತರ್ಜಾತೀಯ ವಿವಾಹವಾಗಿ ಜಾತಿ

ಪದ್ಧತಿಯ ಕಾರಾಗೃಹಗಳಿಂದ ಬಿಡುಗಡೆ ಹೊಂದಿದವರನ್ನು ಮತ್ತೆ ತಮ್ಮ ಸಾಮಾಜಿಕ ಅಸ್ತಿತ್ವಕ್ಕಾಗಿ ತಮ್ಮ ತಮ್ಮ ಜಾತಿಯ ಕೂಪಗಳಿಗೇ ಹಿಂತಿರುಗುವ ಕಾನೂನಿನ ಕಡ್ಡಾಯ ಮತ್ತು ಅನಿವಾರ್ಯತೆಯಿಂದ ತಪ್ಪಿಸುತ್ತದೆ.

ಇದಕ್ಕಾಗಿ ಈ ಸಮುದಾಯಕ್ಕೆ ಶೇಕಡ ಒಂದರಷ್ಟಾದರೂ ಮೀಸಲಾತಿಯನ್ನು ನಾವು ಕೇಳಬೇಕಾಗುತ್ತದೆ. ಸಾಮಾಜಿಕವಾಗಿ ಆರ್ಥಿಕವಾಗಿ ಅಂತರ್ಜಾತೀಯ ವಿವಾಹವಾದವರು ಜಾತೀಯ ಕಾರಣಗಳಿಂದ ಹಿಂದುಳಿದಿರುವ ಅನೇಕರಿಗಿಂತ ಮುಂದುವರಿದಿರುವವರಾದರೂ ಜಾತೀಯ ಪರಿಸರದಲ್ಲಿ ಅವರು ಎದುರಿಸಬೇಕಾಗಿರುವ ವಿಶಿಷ್ಟ ಸಮಸ್ಯೆಗಳ ದೆಸೆಯಿಂದ ಹಾಗೂ ಜಾತ್ಯತೀತ ರಾಷ್ಟ್ರನಿರ್ಮಾಣದಲ್ಲಿ ಅವರು ವಹಿಸುತ್ತಿರುವ ಪಾತ್ರಕ್ಕಾಗಿ ಈ ಸಮುದಾಯಕ್ಕೆ, ಅಂತರ್ಜಾತೀಯ ವಿವಾಹವಾದವರಿಗೆ ಒಂದು ತಲೆಮಾರಿಗೆ ನೌಕರಿಯಲ್ಲಿ ಶೇಕಡ ಒಂದರಷ್ಟು ಮೀಸಲಾತಿಯನ್ನೂ ಅವರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಶೇಕಡ ಒಂದರಷ್ಟು ಮೀಸಲಾತಿಯನ್ನೂ ಪ್ರಾರಂಭದಲ್ಲಿ ಕೊಡುವುದರಿಂದ ಯಾರೂ ಅಸೂಯೆ ಪಡಲಾರರೆಂದು ತಿಳಿದಿದ್ದೇನೆ.

ಅಲ್ಲದೆ ಇತರ ಜಾತಿಗಳು ಮುಂದುವರಿದಂತೆಯೂ ಅವರಿಗೆ ಕಡಿಮೆ ಮಾಡುವ ಮೀಸಲಾತಿಯನ್ನು ಜಾತ್ಯತೀತ ಸಮುದಾಯಕ್ಕೇ ಸೇರಿಸುತ್ತಾ ಮೀಸಲಾತಿಯನ್ನು ಹೆಚ್ಚಿಸುತ್ತಾ ಹೋಗಬೇಕು. ಇದರಿಂದ ಒಂದು ಸಾರಿಗೇ ನಾವು ಎರಡು ಜಾತಿಗಳಿಗೆ ಮೀಸಲಾತಿ ಸೌಲಭ್ಯ ಕೊಟ್ಟಂತಾಗುವುದಲ್ಲದೆ ಎಲ್ಲ ಜಾತಿಗಳೂ ಮುಂದೆ ಎಂದಾದರೊಂದು ದಿನ ಸಮಾನತೆಯ ಹಂತ ತಲುಪುವ ವೇಳೆಗೆ ಅಷ್ಟು ಮೀಸಲಾತಿಯೂ ಜಾತ್ಯಾತೀತ ರಾಷ್ಟ್ರ ರೂಪಿಸುವ ಈ ಸಮುದಾಯಕ್ಕೇ ದೊರಕುವಂತಾಗಬೇಕು. ಜಾತ್ಯತೀತ ಸಮಾಜ ರೂಪಿಸುವ ಕಾರ್ಯದಲ್ಲಿ ಒಂದು ಸಂಘಟಿತ ಸಮುದಾಯವಾಗಿ ಅಂತರ್ಜಾತೀಯ ವಿವಾಹವಾದವರು ಕೈಗೊಳ್ಳಬಹುದಾದ ಅತಿ ಮುಖ್ಯ ರಚನಾತ್ಮಕ ಕಾರ್ಯಕ್ರಮ ಇದು.

ಈ ಕುರಿತು ಗೆಳೆಯ ಸಿದ್ದಲಿಂಗಯ್ಯನವರು ಮೇಲ್ಮನೆಯಲ್ಲಿ ಪ್ರಸ್ತಾಪವೆತ್ತಿದಾಗ ಯಾವ ರಾಜಕಾರಣಿಯೂ ಅದನ್ನು ವಿರೋಧಿಸದಿದ್ದರೂ ಅದರ ಬಗ್ಗೆ ಉತ್ಸಾಹವನ್ನಾಗಲಿ ಕಾಳಜಿಯನ್ನಾಗಲಿ ತೋರಲಿಲ್ಲ. ನಾನು ಸಹ ಅನೇಕ ಉನ್ನತ ಸ್ಥಾನದಲ್ಲಿರುವ ರಾಜಕಾರಣಿಗಳ ಬಳಿ ಈ ಕುರಿತು ಮನವಿ ಮಾಡಿಕೊಂಡಿದ್ದೇನೆ. ನನಗೂ ಶ್ರೀ ಸಿದ್ದಲಿಂಗಯ್ಯನವರಿಗೆ ದೊರೆತ ಪ್ರತಿಕ್ರಿಯೆಯೇ ದೊರೆತಿರುವುದು. ಇದಕ್ಕೆ ಮೊದಲನೆ ಕಾರಣ ಇದೊಂದು ಅಸಂಘಟಿತ ಸಮುದಾಯವಾಗಿರುವುದು. ಎರಡನೆಯದು ಆದರ್ಶವಾದಿಗಳಾದ ನಾವು ಸರ್ಕಾರಿ ಸಹಾಯವನ್ನು ಯಾಚಿಸುವುದು ನಮ್ಮ ಆತ್ಮಗೌರವಕ್ಕೆ ಕಡಿಮೆ ಎಂದು ಯಾವ ಪ್ರಯತ್ನವನ್ನೂ ಮಾಡದಿರುವುದು.

ನಮ್ಮ ಆತ್ಮಗೌರವಕ್ಕಾಗೇ ನಾವು ಮೇಲೆ ಸೂಚಿಸಿದ ರಚನಾತ್ಮಕ ಕಾರ್ಯಕ್ರಮಗಳ ಅಗತ್ಯ ಇದೆ ಎನ್ನಿಸುತ್ತದೆ. ಅಂತರ್ಜಾತೀಯ ವಿವಾಹವಾದವರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ತಮ್ಮ ವಿವಾಹವನ್ನು ಅಧಿಕೃತವಾಗಿ ನೊಂದಾಯಿಸಲು ಹೋದರೂ ಸಹ ಇವತ್ತು ಎಷ್ಟು ಅವಮಾನಕರವಾದ ಸನ್ನಿವೇಶ ಎದುರಿಸಬೇಕಾಗಿದೆ ಎನ್ನುವುದನ್ನು ಯೋಚಿಸಿ. ಭ್ರಷ್ಟಾಚಾರದ ಆಗರಗಳಾಗಿರುವ ಆ ಕಚೇರಿಗಳಲ್ಲಿನ ಪ್ರತಿಯೊಬ್ಬ ಪದಾಧಿಕಾರಿಯೂ ವಿವಾಹಿತ ತರುಣ ದಂಪತಿಗಳನ್ನು ತಲೆಹಿಡುಕ ಮತ್ತು ಸೂಳೆಯಂತೆ ನಡೆಸಿಕೊಳ್ಳುತ್ತಾನೆ. ಇಲ್ಲವೇ ಹುಡುಗಿಯನ್ನು ಹಾರಿಸಿಕೊಂಡು ಬಂದಿರುವ ಸಮಾಜಘಾತಕನಂತೆ ಭಾವಿಸುತ್ತಾನೆ. ಅಲ್ಲದೆ ಆತನಿಗಿರುವ ಪ್ರತಿಕೂಲ ಸನ್ನಿವೇಶಗಳನ್ನು ಅರಿತು ಲಂಚಕ್ಕಾಗಿ ಆದಷ್ಟು ಸತಾಯಿಸುತ್ತಾನೆ. ತಂಟೆ ತಕರಾರು ಮಾಡುವ ಹಿರಿಯರೂ ತಂದೆತಾಯಿಗಳೂ ಇದ್ದರಂತೂ ಅವರ ಕಾಟ ಇನ್ನೂ ಮಿಗಿಲಾಗುತ್ತದೆ. ವಿವಾಹ ನೊಂದಾವಣೆಯನ್ನು ರಿಜಿಸ್ಟ್ರಾರ್ ಕಚೇರಿಯಿಂದ ತಪ್ಪಿಸಿ ಕುಟುಂಬ ನ್ಯಾಯಾಲಯಗಳಂಥ ಹೆಚ್ಚು ಸಂಸ್ಥೆಗಳ ಸುಪರ್ದಿಗೆ ವಹಿಸಲು ಸಹ ಯಾರೂ ಸಂಘಟಿತಪ್ರಯತ್ನ ಕೈಗೊಂಡಿಲ್ಲ. ನೊಂದಾಯಿಸದ ವಿವಾಹಗಳಲ್ಲಿ ಹೆಣ್ಣು ತೀರ ನಿಸ್ಸಹಾಯಕಳಾಗಿ ಶೋಷಣೆಗೆ ಸಿಕ್ಕಿಕೊಳ್ಳುವ ವಾಸ್ತವಾಂಶ ಗೊತ್ತಿದ್ದೂ ನೊಂದಾವಣೆಯಲ್ಲಿರುವ ಈ ಅಸಹನೀಯ ಅಡ್ಡಿಯನ್ನು ಯಾರೂ ಸಹ ಮುಖ್ಯವೆಂದು ಪರಿಗಣಿಸದಿರುವುದು ಅವಮಾನಕರ. ಭಾರತದಲ್ಲಿ ನಡೆಯುತ್ತಿರುವ ಮಹತ್ತಾದ ಸಾಮಾಜಿಕ ಪರಿವರ್ತನೆಗೆ ಈ ಭ್ರಷ್ಟಾಚಾರದ ಆಗರವಾಗಿರುವ ಸಬ್‌ರಿಜಿಸ್ಟ್ರಾರ್ ಕಚೇರಿಯ ಕಂಟಕ ನಿವಾರಣೆಗೆ ಅಂತರ್ಜಾತೀಯ ವಿವಾಹಿತರ ಸಮಾವೇಶ ಏನಾದರೂ ತುರ್ತು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಂತರ್ಜಾತೀಯ ವಿವಾಹವಾಗಿ ೧೯೬೪ರಿಂದ ಲೋಹಿಯಾ ಸಮಾಜವಾದಿ ಪಕ್ಷದಲ್ಲಿ ಜಾತಿವಿನಾಶ ಕಾರ್ಯಕ್ರಮದಡಿಯಲ್ಲಿ ಅನೇಕ ಚಳವಳಿ, ಪ್ರತಿಭಟನೆ, ಆಂದೋಳನಗಳಲ್ಲೆಲ್ಲ ಭಾಗವಹಿಸಿ, ಮುವ್ವತ್ತು ವರ್ಷಗಳ ತರುವಾಯ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿರುವ ನನ್ನ ಮಿತ್ರರಿಗೆ ಹೇಳಬಹುದಾದ ನನ್ನ ಅನ್ನಿಸಿಕೆಗಳು ಮೇಲೆ ವಿವರಿಸಿರುವ ಐದು ಎಂದೆನ್ನಿಸುತ್ತದೆ. ಅವುಗಳನ್ನೆ ಮತ್ತೆ ಸಂಕ್ಷೇಪಿಸಿ ತಮ್ಮೆದುರು ಇಡಬಯಸುತ್ತೇನೆ.

೧. ಅಂತರ್ಜಾತೀಯ ವಿವಾಹಿತರ ಸಮುದಾಯಕ್ಕೆ ಸರ್ಕಾರದಿಂದ ಪ್ರತ್ಯೇಕ ಸಮುದಾಯವಾಗಿ ಮನ್ನಣೆ.

೨. ಈ ಸಮುದಾಯದ ಅಧಿಕೃತ ವಿಶ್ಲೇಷಣೆ ಮತ್ತು ವಿವರಣೆ.

೩. ತಮ್ಮನ್ನು ಗುರುತಿಸಿಕೊಳ್ಳಲು ಎಲ್ಲ ಸರ್ಕಾರೀ ಅರ್ಜಿಗಳಲ್ಲಿ ಕಾಲಂ ಅಥವಾ ಜಾತ್ಯತೀತರೆಂಬ ಹೆಸರು ನಮೂದನೆ.

೪. ಮೀಸಲಾತಿಯಲ್ಲಿ ಔಪಚಾರಿಕವಾಗಿ, ಅಂತರ್ಜಾತೀಯ ವಿವಾಹವಾದವರಿಗೆ ಸರ್ಕಾರಿ ನೌಕರಿಯಲ್ಲಿ ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ, ಒಂದು ತಲೆಮಾರಿಗೆ ಮಾತ್ರ ಶೇಕಡ ಒಂದರಷ್ಟು ಮೀಸಲಾತಿ. ಹಾಗೂ ಇತರ ಜಾತಿಗಳು ಮುಂದುವರಿದಂತೆ ಅವರಿಗೆ ಕಡಿಮೆ ಮಾಡುವ ಮೀಸಲಾತಿ ಪ್ರಮಾಣವನ್ನು ಅಂತರ್ಜಾತೀಯ ಸಮುದಾಯಕ್ಕೆ ಸೇರಿಸುತ್ತಾ ಹೋಗುವುದು.


೫. ಅಂತರ್ಜಾತೀಯ ವಿವಾಹಗಳಿಗೆ ಕಂಟಕಪ್ರಾಯವಾಗಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಿಂದ ವಿವಾಹ ನೊಂದಣಿಯನ್ನು ತಪ್ಪಿಸಿ ಕುಟುಂಬ ನ್ಯಾಯಾಲಯಗಳಂಥ ಹೆಚ್ಚು ನಾಗರಿಕ ಸಂಸ್ಥೆಗಳಿಗೆ ವಿವಾಹ ನೊಂದಣಿಯನ್ನು ವಹಿಸುವುದು.

(ನಾವು ಕೇಳಿದ ಪ್ರಶ್ನೆಗಳಿಗೆ ತೇಜಸ್ವಿ ಅವರು ಉತ್ತರ ರೂಪವಾಗಿ ಬರೆದು ಕಳಿಸಿದ ಲೇಖನ ಇದು– ಸಂ.)

ಕಥನ

ಅಂತರ್ಜಾತಿ ವಿವಾಹವಾದವರ ಅನುಭವ ಕಥನಮಾಲೆ ಇದು. ಪ್ರೀತಿಗಾಗಿ, ಹೊಸ ಸಮಾಜ ಕಟ್ಟುವ ಆದರ್ಶಕ್ಕಾಗಿ ಜಾತಿಗಳನ್ನು ಮೆಟ್ಟಿನಿಂತವರ ಕಷ್ಟ–ಸುಖಗಳೆರಡೂ ಇಲ್ಲಿವೆ. ಅವರ ಸಾಹಸ ಪ್ರತಿಭಟನೆ, ಬದ್ಧತೆ, ಪ್ರೇಮ, ಖುಷಿ, ಹುಡುಗಾಟ, ಕನಸು, ಗೊಂದಲ, ಆವೇಶ, ಆವಾಹನೆ, ವಿಷಾದ, ಅರಿವು ಎಲ್ಲವೂ ಇಲ್ಲಿದೆ. –ಸಂ.

ಕ್ರಾಂತಿಯ ದೊಂದಿ ಹಚ್ಚಿದರು



ನನ್ನ ತಂದೆ ತಾಯಿಯವರು ದಕ್ಷಿಣ ಕನ್ನಡದ ಬ್ರಾಹ್ಮಣ ಕುಟುಂಬದವರಾಗಿದ್ದಾರೆ. ತಂದೆ–ಕುಡುಕೋಣೆ ರಾಮಚಂದ್ರ ಐತಾಳ್; ತಾಯಿ ಅನಸೂಯ. ಇವರ ಎರಡನೇ ಮಗಳಾಗಿ ನಾನು ಸೊರಬದ ನನ್ನ ಅಜ್ಜನವರಾದ ಪರಮೇಶ್ವರ ಅಡಿಗರವರ ಮನೆಯಲ್ಲಿ ಜನಿಸಿದೆನಾದರೂ, ನನ್ನ ತಂದೆಯವರ ಹೋಟೆಲ್ ಉದ್ಯಮದ ಕಾರಣ, ಅವರು ಭದ್ರಾವತಿಯಲ್ಲಿ ನೆಲೆಸಿದ್ದರಿಂದ, ನನ್ನ ಬದುಕು ಭದ್ರಾವತಿಯಲ್ಲೇ ಬೆಳೆದು ಬಂದಿತು. ಆರ್ಥಿಕವಾಗಿ ಹೇಳುವುದಾದರೆ ನನ್ನ ತಂದೆಯವರು ಲಕ್ಷಾಧೀಶ್ವರರು. ದವಸ–ಧಾನ್ಯದ ತುಂಬಿದ ಕಣಜದಲ್ಲೇ ಬೆಳೆದವಳು. ಇರಲಿಕ್ಕೆ ಮೂರಂತಸ್ತಿನ ಮನೆ, ಅಕ್ಕ, ತಂಗಿ, ತಮ್ಮಂದಿರ ಒಡನಾಟ, ಪ್ರೀತಿಯ ತಂದೆ ತಾಯಿ ಸ್ನೇಹಮಯ ಬಂಧುಬಳಗ ಮೊಗೇರಿ, ಮಹಾಬಲೇಶ್ವರ ಪಡುಕೋಣೆ, ಕುಂದಾಪುರ, ಸೊರಬ, ಸಾಗರದ ಮಲೆನಾಡಿನ ಪರಿಸರದಲ್ಲಿನ ನನ್ನ ಬಾಲ್ಯ ಅರಳಿತ್ತು. ಅಜ್ಜ ಸೊರಬದಲ್ಲೇ ಪ್ರಖ್ಯಾತರಾದ ಜ್ಯೋತಿಷಿಗಳು, ಪಂಚಾಂಗ ಪಂಡಿತರು, ಪೂಜೆ ಭಟ್ಟರೆಂದೇ ಪ್ರಸಿದ್ಧರಾಗಿದ್ದರು. ಮೊಗೇರಿಯಲ್ಲಿನ ಅವರ ವಂಶ ಶಾಸ್ತ್ರ, ಸಂಪ್ರದಾಯ, ಸಂಪ್ರದಾಯ, ಧರ್ಮಾಚರಣೆ, ಅಧ್ಯಾತ್ಮಗಳಿಗೆ ದಕ್ಷಿಣ ಕನ್ನಡದಲ್ಲೇ ಖ್ಯಾತವಾಗಿತ್ತು. ಅದರಂತೆ ನಮ್ಮ ಕುಟುಂಬವೂ ಹಿಂದೂಸಾಂಪ್ರದಾಯಿಕ ಮೌಲ್ಯಗಳನ್ನೊಳಗೊಂಡ ವ್ಯವಸ್ಥೆಯನ್ನು ಹೊಂದಿತ್ತು. ನಮ್ಮ ತಂದೆ ತಾಯಿ ಪ್ರಾಥಮಿಕ ವಿದ್ಯಾರ್ಹತೆ ಪಡೆದವರಾಗಿದ್ದರೂ ಪ್ರಸ್ತುತ ಕಾಲಧರ್ಮಕ್ಕನುಗುಣವಾಗಿ ಎಸ್.ಎಸ್.ಎಲ್.ಸಿ.ಯವರೆಗೆ ಓದಿಸುವಷ್ಟು ಉದಾರ ಮನೋಭಾವವುಳ್ಳವರಾಗಿದ್ದರು. ಈಗ್ಗೆ ೨೫ ವರ್ಷಗಳ ಹಿಂದೆ ತಾಲ್ಲೂಕು ಮಟ್ಟದಲ್ಲಿ ಡಿಗ್ರಿ ಕಾಲೇಜುಗಳಿರಲಿಲ್ಲ ನನ್ನ ಅದೃಷ್ಟವೆಂಬಂತೆ ಭದ್ರಾವತಿಯಲ್ಲಿ ಖಾಸಗಿಯವರು ಭದ್ರಾ ಕಾಲೇಜ್ ತೆರೆದರು. ನಾನು ಕಾಡಿ–ಬೇಡಿ–ಹಠ ಮಾಡಿ–ಕಾಲೇಜಿಗೆ ಸೇರಿದೆ. ಹೆಣ್ಣು ಮಕ್ಕಳಿಗೂ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವ ಅಗತ್ಯ ಇಲ್ಲವೆಂದುಕೊಂಡಾಗಿನ ಕಾಲವದು. ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ನಾನು ತೆಗೆದುಕೊಂಡ ಐಚ್ಛಿಕ ವಿಷಯಗಳಾಗಿದ್ದವು. ನಮ್ಮ ಸಾಂಪ್ರದಾಯಿಕ ಹಿಂದೂ, ಬ್ರಾಹ್ಮಣ ಕುಟುಂಬದಲ್ಲಿರುವ ಜಾತಿಮತ ಭೇದ, ಪುರುಷ–ಸ್ತ್ರೀ ತಾರತಮ್ಯ, ಕಂದಾಚಾರಗಳ ನಡುವೆ ಬೆಳೆಯುತ್ತಿದ್ದರೂ, ನನ್ನ ಮನಸ್ಸಿನಲ್ಲಿ ಅವುಗಳ ವಿರೋಧಿ ಮನೋಧರ್ಮ ರೂಪುಗೊಳ್ಳುತ್ತಿತ್ತು. ಚರಿತ್ರೆ, ರಾಜಕೀಯ ಓದುತ್ತಾ ಹೋದಂತೆ, ಎಲ್ಲಾ ಭೇದಭಾವಗಳ ವಿರುದ್ಧದ ಹೋರಾಟಗಳು, ಸ್ವಾವಲಂಬನೆ, ಸ್ವಾಭಿಮಾನ, ಸ್ವಾತಂತ್ರ್ಯದ ಚಿಂತಕರು, ಪ್ರಚಾರಕರು; ಅದಕ್ಕಾಗಿ ದುಡಿದು ಮಡಿದವರು, ಅದರಲ್ಲೂ ಬುದ್ಧ, ಬಸವ, ಗಾಂಧಿ, ರಾಜರಾಮ ಮೋಹನ್‌ರಾಯ್‌ರವರ ವಿಚಾರ ಕ್ರಾಂತಿಗಳು ನನ್ನ ಮೇಲೆ ಅಪಾರ ಪ್ರಭಾವ ಬೀರಿದ್ದವು.

ಇಂಥಹ ವೇಳೆಯಲ್ಲಿ ಬಿ. ಕೃಷ್ಣಪ್ಪನವರು ಉಪನ್ಯಾಸಕರಾಗಿ ಅದೇ ಕಾಲೇಜಿಗೆ ಬಂದಿದ್ದರು. ಅವರ ವೈಚಾರಿಕ ವಿಚಾರಧಾರೆಗಳು, ಅಪಾರ ಭಾಷಜ್ಞಾನ, ನಿರರ್ಗಳ ಶೈಲಿ, ವಾಕ್‌ಪಟುತ್ವ, ವಿಷಯದಲ್ಲಿನ ಪಾಂಡಿತ್ಯ ನನಗೆ ಬಹುವಾಗಿ ಮೆಚ್ಚುಗೆಯಾಗಿತ್ತು. ಇದರ ಜೊತೆಗೆ ಅವರ ಭಾವನಾತ್ಮಕ ಹಾಡುಗಾರಿಕೆ ಮನಸೂರೆಗೊಂಡಿತ್ತು. ಆದರೆ ಅವರಿಗೆ ಮೂಗಿನ ಮೇಲೆ ಕೋಪ; ಅವರು ಸಿಡಿಗುಂಡಾಗಿದ್ದರು. ಖಾಸಗಿ ಕಾಲೇಜಿನ ರಾಜಕೀಯ, ಅಧ್ಯಾಪಕ ವೃಂದದಲ್ಲಿ ತಾರತಮ್ಯ ಮನೋಭಾವ ಇವುಗಳಿಂದ ಅವರು ನಲುಗಿ ಹೋಗುತ್ತಿದ್ದರು. ಅವರಿಂದ ಅವರ ಕುಟುಂಬದ ಬಗ್ಗೆ ಅಷ್ಟಿಷ್ಟು ತಿಳಿದು ಬಂದ ವಿಷಯವೆಂದರೆ–ಇವರು ತಂದೆತಾಯಿ, ಬಂಧುಬಳಗದವರನ್ನು ಬಿಟ್ಟು ಬಂದಿದ್ದಾರೆಂದು. ಇಂಥಹ ಪರಿಸ್ಥಿತಿಯಲ್ಲಿ ಅವರ ವ್ಯಕ್ತಿತ್ವವೇ ಎಲ್ಲಿ ನಶಿಸಿಹೋಗುವುದೋ ಎನಿಸಿತ್ತು. ಅವರೊಳಗಣ ಅಂತಃಶಕ್ತಿಗೆ ಒಂದು ರೂಪ ಕೊಡಬೇಕು ಎನ್ನಿಸಿತು. ಅವರನ್ನು ಒಂದು ಶಕ್ತಿಯಾಗಿ ಈ ಜಗತ್ತಿಗೆ ತೋರಿಸಬೇಕು ಎನ್ನಿಸಿತು. ಇಂಥಹ ವೇಳೆಯಲ್ಲಿ ಅಂದರೆ ೧೯.೧.೭೦ರಲ್ಲಿ ನಾನು ಅವರಿಗೊಂದು ಪತ್ರ ಬರೆದೆ. ಅದರ ಪ್ರಮುಖ ತುಣುಕುಗಳು– "ಈ ಕಾಲೇಜಿಗೆ ಬರುವವರಿಗೇ ಮಾತ್ರ ಶಕ್ತಿ ಕೊಟ್ಟಂತಾಯಿತಲ್ಲವೇ ಸಾರ್. ಹಾಗಾಗಬಾರದು. ಸಕಲರೂ ನಿಮ್ಮ ಶಕ್ತಿಯ ಉಪಯೋಗ ಪಡೆಯಬೇಕು. ಆದ್ದರಿಂದ ಏನನ್ನಾದರೂ, ನಿರಂತರವೂ, ಸಕಲರಿಗೂ ಶಕ್ತಿ ಕೊಡುವಂಥಹದ್ದನ್ನೊಂದು ಸೃಷ್ಟಿಸಬೇಕು ಸಾರ್, ಆ ಶಕ್ತಿ ನಿಮ್ಮಲ್ಲಿದೆ. ಅದನ್ನು ನಿರ್ಮಾಣ ಕಾರ್ಯದಲ್ಲಿ ತೊಡಗಿಸಿ ಸಾರ್. ಇದೇ ನನಗೆ ತುಂಬಾ ಆಸೆ. ದೇವರೊ, ಪ್ರಕೃತಿಯೋ, ಒಂದು ಶಕ್ತಿಯನ್ನು ಕೊಟ್ಟಿರುವಾಗ ಅದನ್ನು ವ್ಯರ್ಥಮಾಡಬಾರದಲ್ಲವೇ? ನಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡಂತಾಗುವುದಿಲ್ಲವೇ? ನಾವು ಬರಿಯ ಈ ಕಾಲಕ್ಕೆ, ಈ ದೇಶಕ್ಕೆ, ಈ ಕೆಲವೇ ಜನರಿಗೆ ಉಪಯೋಗವಾಗುವಂತಿರಬಾರದು. ಇರುವ ಕಾಲದಲ್ಲೇ ಇರುವ ಕಾಲವನ್ನು ಉಪಯೋಗಿಸಿಕೊಂಡು ಪರಿಪೂರ್ಣದೆಡೆಗೆ ಸಾಗಲು ಪ್ರಯತ್ನಿಸ ಬೇಕಲ್ಲವೇ?''

ಅಲ್ಲಿಂದ ನಮ್ಮ ನಡುವೆ ಒಲವು–ಪ್ರೀತಿಗಳ ಹೆಮ್ಮರ ಬೆಳೆಯಿತು. ನಮ್ಮ ಮನೆಯಲ್ಲಿ ಈ ವಿಷಯ, ಬಚ್ಚಿಟ್ಟ ಅವರ ಒಂದು ಪತ್ರದ ಮೂಲಕ ತಿಳಿದು ಹೋಯಿತು. ಅಲ್ಲಿಂದ ಸಂಘರ್ಷ ಪ್ರಾರಂಭ ವಾಯಿತು. ನಮ್ಮ ತಂದೆ ವಿಷ ಕುಡಿಯುವ ಬೆದರಿಕೆ ಹಾಕಿದರು. ನಮ್ಮನ್ನೆಲ್ಲಾ ಕೊಂದು,

ಆಸ್ತಿ–ಅಂತಸ್ತುಗಳಲ್ಲಿ ನೀನು ಮೆರೆ ಎಂದರು. ಈ ಘಟ್ಟದಲ್ಲಿ ಕೃಷ್ಣಪ್ಪನವರು ದಲಿತರು ಎಂಬುದು ತಿಳಿದು ಬಂದಿತು. ಬೇಗನೇ ನನ್ನ ಮದುವೆ ಬೇರೆ ಕಡೆ ಮಾಡುವ ಪ್ರಯತ್ನಗಳು ನಡೆದವು. ನಾನು–ಅವರು ಭೇಟಿಯಾಗದಂತೆ, ಪತ್ರ ವಿನಿಮಯವಾಗದಂಥಹ ವ್ಯವಸ್ಥೆ ಮಾಡಿದರು. ನನ್ನನ್ನು ಅಜ್ಞಾತವಾಸದಲ್ಲಿರಿಸಿದರು. ಈ ಹಂತ ದಲ್ಲಿ ತೀರಾ ಹತಾಶಳಾಗಿದ್ದೆ. ನನ್ನ brain wash ಮಾಡುವ ಕೆಲಸವೂ ನಡೆಯಿತು. "ನನ್ನ ತಂದೆ ತಾಯಿಗಳಿಗಾಗಿ ನಾನು ಪ್ರೇಮತ್ಯಾಗ ಮಾಡುತ್ತೇನೆಂದು ಕೃಷ್ಣಪ್ಪನವರಿಗೆ ಬರೆಯಿಸಲಾಯಿತು. ನಮ್ಮ ಮನೆಯಲ್ಲಿದ್ದ ನಿಕಟವರ್ತಿಗಳು ಕೃಷ್ಣಪ್ಪನವರ ಚಾರಿತ್ರ್ಯವಧೆಯಾಗುವಂತೆ, ಅಶ್ಲೀಲ ಪತ್ರಗಳನ್ನು ಕೊಲೆ ಬೆದರಿಕೆಗಳನ್ನು ಹಾಕಿದರು. ಅದೇ ರೀತಿ ಅವರ ಸಮೀಪವರ್ತಿಗಳು ನನ್ನ ಮೇಲೆ ಅಪಪ್ರಚಾರಗಳನ್ನು ಪತ್ರಗಳ ಮೂಲಕ ಹಬ್ಬಿಸಿದರು. ಇದರಿಂದ ನಮ್ಮ ಮನೆಯಲ್ಲಿ ವಾತಾವರಣ ಇನ್ನಷ್ಟು ಬಿಗಿಗೊಂಡಿತು. ನನ್ನ ಮನವೊಂದು ಅಗ್ನಿಕುಂಡವಾಗಿದ್ದಿತು. ಅಗ್ನಿಕುಂಡದಲ್ಲಿ ದಹಿಸಿ ಹೋಗುವುದು; ಇಲ್ಲಾ–ಅಗ್ನಿಕುಂಡದಿಂದ ಹಾರಿ ಹೊರ ನಡೆಯುವುದುಃ ನಾನು ಎರಡನೇ ಮಾರ್ಗ ಹಿಡಿದೆ. ಇದುವರೆಗಿನ ಘಟನೆಗಳ ಸವಿಸ್ತಾರದ ಪತ್ರವನ್ನು ನನ್ನ ಮನೆ ಪಾಠದ ವಿದ್ಯಾರ್ಥಿ ಮೂಲಕ ಕೃಷ್ಣಪ್ಪನವರಿಗೆ ತಲುಪಿಸಿದೆ. ಆ ವೇಳೆಗೆ ಕೃಷ್ಣಪ್ಪನವರು ಜ್ವಾಲಾಮುಖಿಯಾಗಿದ್ದರು. ನನ್ನ ಪತ್ರ ಅವರಲ್ಲಿ ಪಾತಾಳಗಂಗೆಯೋ ಪಾದಿಯಲ್ಲಿ ಪ್ರವಹಿಸಿತ್ತು. ಆಗ ಅವರು ಬರೆದ ಪತ್ರದ ಕೆಲವು ಭಾಗ– "ಇಷ್ಟು ದಿನಗಳು ನನ್ನ ನಿನ್ನ ಮಧ್ಯೆ ಬೀಸಿದ ಬಿರುಗಾಳಿ ಎಂತಹುದು. ನೆನೆಸಿಕೊಂಡರೆ ನನ್ನ ನರನಾಡಿಗಳು ಕಣ್ಣೀರು ಸುರಿಸುತ್ತವೆ. ಈ ಸಮಾಜ, ಈ ಜನ ನಮ್ಮ ಮಧ್ಯೆ ದೊಡ್ಡ ಗೋಡೆಯಾಗಿ ಅಗಲಿಸ ಹೊರಟಿತ್ತು. ಈ ಸಮಾಜದ ಬಗ್ಗೆ ನನಗೆ ತೀರಾ ರೋಚ್ಚಿದೆ. ನಾವು ವಿಚಾರವಂತರಾದ್ದರಿಂದ ಆ ಬಿರುಗಾಳಿಯನ್ನು ಮೆಟ್ಟಿ ನಿಲ್ಲಲು ಸಾಧ್ಯವಾಯಿತು. ಈ ಊರಿನ ಸಮಾಜವಾದಿ ಯುವಜನ ಸಭಾದವರು ಏನಾದರೂ ಈ ಲಗ್ನ ಆಗಲೇ ಬೇಕೆನ್ನುತ್ತಾರೆ. ಸಮಾಜವಾದಿ ಯುವಜನ ಸಭಾ ಭಾರತದಲ್ಲಿನ ಒಂದು ಯುವಕ ಸಂಘಟನೆ. ಅದರ ಶಾಖೆಯನ್ನು ಆರಂಭಿಸಿದ್ದೇನೆ. ಅದರ ಕಾರ್ಯದರ್ಶಿಯೂ ನಾನೇ, ಇದರ ತತ್ವಗಳು ಜಾತಿ–ನಿರ್ಮೂಲನೆ, ಅಂತರ ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ಮೂಢನಂಬಿಕೆ ಕಂದಾಚಾರಗಳ ವಿರೋಧ, ಸರ್ವಸಮಾನತೆ ಇತ್ಯಾದಿ.

ವ್ಯಕ್ತಿ ಎಷ್ಟೇ ದೊಡ್ಡವನಾದರೂ ದುಃಖದ ಕೈಯಲ್ಲಿ ಅವನು ಮಗು. ನನ್ನ ಪಾಲಿಗೆ ನೀನು ಇನ್ನಿಲ್ಲ ಎಂದಾಗ ಹೇಗಾಯಿತು ಗೊತ್ತೆ? ನನಗೆ ಪ್ರಪಂಚವೇ ಕುಸಿದುಹೋದ ಹಾಗಾಯಿತು. ನಿನ್ನನ್ನು ಬಿಟ್ಟಿರುವುದೂ, ಸಾವು– ನನಗೆ ಎರಡೂ ಒಂದೇ. ನನ್ನ ಎಲ್ಲಾ ಕ್ರಿಯಾಶಕ್ತಿಯ ಹಿಂದೆ ನೀನೇ ಇದ್ದೀಯೆ. ಈ ಪ್ರಪಂಚ ಸಾಹಸಿಗಳಿಗೆ ಮಾತ್ರವೇ ಹೊರತು ಅಂಜುಕುಳಿಗಳಿಗಲ್ಲ ಎಂಬುದನ್ನು ಜ್ಞಾಪನದಲ್ಲಿಟ್ಟುಕೋ. ನನ್ನ ಅಸ್ತವ್ಯಸ್ತ ಬದುಕಿಗೊಂದು ವ್ಯವಸ್ಥೆಯನ್ನೂ ನನ್ನನ್ನು ಒಂದು ಪ್ರಚಂಡ ಕ್ರಿಯಾಶಕ್ತಿಯನ್ನು ನಿರ್ಮಾಣಮಾಡು.

ನಾನೊಬ್ಬ ಕ್ರಾಂತಿಕಾರಿಯಾಗಿ ಬದುಕಲು ಇಚ್ಚಿಸುತ್ತೇನೆ. ಅಯ್ಯೋ ಎಂಥಹವನನ್ನು ಕಟ್ಟಿಕೊಂಡೆ ಅಂತ ನಿನಗೆ ಅನ್ನಿಸದ ಹಾಗೆ ಬಾಳುತ್ತೇನೆ. ನನ್ನಿಂದ ನಿನಗೆ ಬೆಲೆ ಬರಬೇಕು. ಕೀರ್ತಿ ಬರಬೇಕು. ಅದೇ ನನಗೆ ಇಷ್ಟ. ಸತ್ತ ಮೇಲೆ ಎಲ್ಲರನ್ನು ಮಣ್ಣಿನಲ್ಲಿ ಹೂಳುತ್ತಾರೆ. ಆಗ ಯಾರೂ ಅವನ ಜಾತಿ ಕುಲ ಐಶ್ವರ್ಯಗಳನ್ನು ಕೇಳುವುದಿಲ್ಲ. ಇವನು ಈ ದೇಶಕ್ಕೆ, ಮಾನವ ಜನಾಂಗಕ್ಕೆ ಏನು ಮೌಲ್ಯಗಳನ್ನು ಕೊಟ್ಟಿದ್ದಾನೆ ಎಂದು ಪ್ರಶ್ನಿಸುತ್ತಾರೆ. ಅಂಥಹ ಪ್ರಶ್ನೆಗಳಿಗೆ ಶಾಶ್ವತವಾದ ಉತ್ತರಗಳನ್ನು ಬಿಟ್ಟು ಹೋಗಬೇಕೆಂಬುದೇ ನನ್ನ ಇಚ್ಛೆ. ಅಂತಹ ಎಲ್ಲಾ ಕಾರ್ಯಗಳಿಗೂ ನೀನು ಊರುಗೋಲು. ಸ್ಫೂರ್ತಿಶಕ್ತಿ.

ಮನುಷ್ಯ ಜೀವಿಸಬೇಕು. ಹೋರಾಡಿ ಬದುಕಬೇಕು ಅಲ್ಲಿಯೇ ಅವನ ವ್ಯಕ್ತಿತ್ವದ ಕೆಚ್ಚು ಇರುವುದು. ಅದಿಲ್ಲದ ಬದುಕು ಒಂದು ಬದುಕೆ? ನಾವು ಪ್ರವಾಹಕ್ಕೆ ಎದುರಾಗಿ ಈಜಲು ಹೊರಟದ್ದೇವೆ ಎಂಬ ಅರಿವು ನಿನಗಿರಲಿ, ನಾವು ಧೃಡ ಮನಸ್ಕರಾಗಿದ್ದರೆ, ಕೆಚ್ಚೆದೆಯವರಾಗಿದ್ದರೆ, ಆ ಪ್ರವಾಹವೂ ನಮಗೆ ಹಗುರವಾಗುತ್ತದೆ. ಇಲ್ಲದೆ ಹೋದರೆ ಅದು ನಮ್ಮನ್ನು ನುಂಗಿ ಹಾಕೀತು. ಈಗ ನಾವು ಎಂತಹ ದಿಟ್ಟಹೆಜ್ಜೆಯನ್ನು ಇಟ್ಟಿದ್ದೇವೆಯೊ ಅದರಿಂದ ಎಂದೂ ವಿಮುಖರಾಗದಿರೋಣ. ನಮ್ಮ ಬದುಕಿನ ಸಾಧನೆಯಲ್ಲಿ ಇದೇ ಪ್ರಮುಖ ಹಾಗೂ ಮೊದಲನೇ ಘಟ್ಟ. ಇದರಲ್ಲಿ ನಾವು ಜಯಿಸಿದೆವೋ ಮುಂದಿನ ಜಯ ತಾನೇ ತಾನಾಗಿ ಸಾಧಿತವಾಗುತ್ತದೆ. ನನ್ನ ಈ ಮದುವೆ ಒಂದು ಸಾಧನೆಗಾಗಿ ಎಂಬುದನ್ನು ನಾವು ಮರೆಯದಿರೋಣ. ನೀನಿಲ್ಲದೆ ನಾನಿಲ್ಲ, ನೀನಿಲ್ಲದೆ ಹೋದರೆ ನಾನು ಪ್ರಚಂಡ ದೈತ್ಯನಾಗುತ್ತೇನೆ.

ನೀನು ಒಬ್ಬ ಕ್ರಾಂತಿಕಾರಿಯ ಪತ್ನಿಯಾಗಿ ಕ್ರಾಂತಿ ಪುರುಷಳಾಗ ಬಯಸುತ್ತೀಯೋ ಅಥವಾ ಸಂಪ್ರದಾಯದ ಮೌಢ್ಯದಾಸ್ಯಕ್ಕೆ ಬಲಿಯಾಗಿ ಹೇಳ ಹೆಸರಿಲ್ಲದೆ ನಾಶವಾಗಬಯಸುತ್ತೀಯೋ? ಒಂದು ಮಹತ್ತರ ಸಾಧನೆಯ ಪಥದಲ್ಲಿ ತಂದೆ ತಾಯಿ, ಬಂಧು ಬಳಗ ಅತಿಗೌಣವಾಗುವುದಿಲ್ಲವೇನು? ಬುದ್ಧನನ್ನು ಜ್ಞಾಪಿಸಿಕೋ, ಶಂಕರರನ್ನು ಜ್ಞಾಪಿಸಿಕೋ ಪ್ರಪಂಚದ ಯಾವನೇ ಮಹಾಪುರುಷನನ್ನೇ ನೆನೆಸಿಕೋ, ಸಾಧನೆಯಿಂದ ಸಾಮಾನ್ಯನೂ ಮಹಾಪುರುಷನಾಗುತ್ತಾನೆ. ನಾನು ನಿನ್ನನ್ನು ಬಯಸುವುದು ಕಾಮತೃಷೆಗಾಗಿ ಅಲ್ಲ, ನಿನ್ನಿಂದ ನಾನು ಜ್ವಲಂತ ಶಕ್ತಿಯಾಗಲು, ಈ ಮೂಲಕ ಪೂರ್ಣಶಕ್ತಿಯ ಕ್ರಾಂತಿಕಾರಿಗಳಾಗಲು. ನಿರರ್ಥಕವಾದ ಬದುಕು ಸಾವಿಗಿಂತ ಘೋರವಲ್ಲದೇ? ನಮ್ಮ ಕ್ರಾಂತಿ ಯಾವುದರ ವಿರುದ್ಧ– ಜಾತಿ ಮತಗಳ ವಿರುದ್ಧ, ಸಂಪ್ರದಾಯ–ಮೌಢ್ಯತೆಗಳ ವಿರುದ್ಧ, ಅಸಮಾನತೆಯ ವಿರುದ್ಧ, ಹೊಸ ಸಂಸ್ಕೃತಿಯನ್ನು ಕಟ್ಟುವಲ್ಲಿ, ಹಳೆ ಸಂಸ್ಕೃತಿಯ ವಿರುದ್ಧ. ಜೀವನದ ಸುಖ–ದುಃಖಗಳನ್ನು ಸಮನಾಗಿ ಹಂಚಿಕೊಳ್ಳೋಣ, ಹೊಟ್ಟೆಗಿಲ್ಲದಿದ್ದರೆ ಒಟ್ಟಿಗೇ ಹೋರಾಡಿ ಸಾಯೋಣ"
ಈ ಮಾತುಗಳು ನನ್ನಲ್ಲಿ ಕ್ರಾಂತಿಯ ದೊಂದಿಯನ್ನೇ ಹಚ್ಚಿದರು. ಆ ದೊಂದಿಯ ಬೆಳಕಲ್ಲಿ ನಾನು, ನನ್ನ ತಂದೆ ತಾಯಿ ಬಂಧು ಬಳಗ, ಸುಖ–ಸೌಕರ್ಯ ಸಂಪತ್ತುಗಳ ಕಡಿವಾಣಗಳನ್ನು ದಾಟಿ ನನ್ನ ಚೇತನದೆಡೆಗೆ ದಿ. ೧೧.೫.೭೪ರಂದು ಧಾವಿಸಿ ಬಂದಿದ್ದೆ. ಅವರ ಗೆಳೆಯರು, ವಿದ್ಯಾರ್ಥಿಮಿತ್ರರ ಸಹಾಯದಿಂದ ಕಡೂರಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಮ್ಮ ವಿವಾಹ ೧೨.೫.೭೪ರಂದು ನಡೆಯಿತು. ಅಲ್ಲಿಂದಾಚೆ ನಮ್ಮಿಬ್ಬರ ಬದುಕು ತೆರೆದಿಟ್ಟ ಪುಸ್ತಕ.

ಅವರು ಕೆಲಸ ಮಾಡುತ್ತಿದ್ದ ಕಾಲೇಜಿನ ಹಾಗೂ ಭದ್ರಾವತಿಯ ಪುರೋಹಿತಶಾಹಿಗಳು ಇವರನ್ನು ಕೆಲಸದಿಂದ ತೆಗೆಯಬೇಕೆಂದು ಬಹಳಷ್ಟು ಪ್ರಯತ್ನಗಳನ್ನು ಮಾಡಿದರು. ನಮ್ಮ ಮದುವೆಯೊಂದು ಪ್ರೇರಣಶಕ್ತಿಯಾಗಿ, ಅಂತರ ಜಾತಿಯ–ಅಂತರಮತೀಯ ವಿವಾಹಗಳು ಸರತಿಯ ಸಾಲಿನೋಪಾದಿಯಲ್ಲಿ ನಡೆಯಲಾರಂಭಿಸಿದವು. ಇದರಿಂದ, ಈ ಎಲ್ಲಾ ಮದುವೆಗಳ ಹಿಂದೆ, ಕೃಷ್ಣಪ್ಪನವರಿದ್ದಾರೆಂದು, ಅವರನ್ನು ಬಹಿಷ್ಕರಿಸುವ, ಅವರ ಚಾರಿತ್ರವಧೆ ಮಾಡುವ ಪ್ರಯತ್ನಗಳೂ ನಡೆದವು. ಯಾವುದಕ್ಕೂ ತಲೆ ಬಾಗದೆ, ದಿಟ್ಟತನದಿಂದ ಎದುರಿಸಿ, ಅದೇ ಜನರ ನಡುವೆ, ಅದೇ ಸಮಾಜದಲ್ಲಿ ಅದೇ ಊರಿನಲ್ಲಿ ಮಾದರಿಯಾಗಿ ಬದುಕಿದೆವು. ನನ್ನ ಬಂಧು–ಬಾಂಧವರು ಯಾವುದೇ ಪ್ರತಿಕ್ರಿಯೆ ತೋರಿಸದೆ ಸುಮ್ಮನಿದ್ದಾರೆ.

ನನ್ನವರ ಮನೆಯವರು ನಮ್ಮೊಂದಿಗೇ ಕಷ್ಟ ಸುಖಗಳಲ್ಲಿ ಸಹಭಾಗಿಯಾಗಿ ಬದುಕುತ್ತಿದ್ದಾರೆ.

ನನ್ನವರು ಮೊದಲು ಉಪನ್ಯಾಸಕರಾಗಿ, ರೀಡರ್, ಪ್ರೊಫೆಸರ್, ನಂತರ ಪ್ರಿನ್ಸಿಪಾಲರಾಗಿ ಅದೇ ಕಾಲೇಜಿನಲ್ಲಿ ಸಮರ್ಥ ಆಡಳಿತಗಾರರಾಗಿ ಶ್ರೇಷ್ಠ ಪ್ರೊಫೆಸರ್‌ರಾಗಿ ಸೇವೆ ಸಲ್ಲಿಸಿದರು. ನಾನು ಗೃಹಿಣಿ, ತಾಯಿ ಸರ್ಕಾರಿ ನೌಕರಳು. ಬರಹಗಾರಳಾಗಿ, ಸ್ವತಂತ್ರ, ಸ್ವಾಭಿಮಾನ, ವೈಚಾರಿಕ, ಮಾನವೀಯ ಮೌಲ್ಯಗಳುಳ್ಳ ಮನುಷ್ಯಳಾಗಿ ಬಾಳುತ್ತಿದ್ದೇನೆ.


ಈ ಲೇಖನದ ಕರಡು ಪ್ರತಿ ಬರೆಯುತ್ತಿದ್ದಾಗ ಇದ್ದ ನನ್ನವರು, ಲೇಖನ ಬರೆದು ಮುಗಿಸಿದಾಗ ಇತಿಹಾಸಕ್ಕೆ ಸೇರಿ ಹೋಗಿದ್ದಾರೆ. ಕಾಲೇಜಿನ ಕೆಲಸದೊಂದಿಗೇ, ಮೊದಲು ಯುವಜನ ಸಭಾ, ನಂತರ ಜೆ.ಪಿ. ಚಳುವಳಿ, ಕರ್ನಾಟಕದ ಸಮಾಜವಾದಿ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕೃಷ್ಣಪ್ಪನವರು, ಕಳೆದ ೨೫ ವರ್ಷಗಳಿಂದ ಈ ನಾಡಿನ ದಲಿತರ ವಿಮೋಚನೆಗಾಗಿಯೇ ಹೋರಾಡಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಟ್ಟಿ ಬೆಳೆಸಿದರು. ದಲಿತ–ಹಿಂದುಳಿದ ಅಲ್ಪ ಸಂಖ್ಯಾತರ ಸಂಘಟನೆಗಾಗಿ ಅವಿಶ್ರಾಂತವಾಗಿ ದುಡಿದು, ಅದೇ ಸಂಘಟನೆಗೆ ತಮ್ಮನ್ನೇ ಸಮರ್ಪಿಸಿ ಕೊಂಡುಬಿಟ್ಟರು.

ಅವರ ಎಲ್ಲಾ ಚಳುವಳಿ–ಹೋರಾಟಗಳಲ್ಲಿ ನಾನು ಸಕ್ರಿಯವಾಗಿ–ನಿರಂತರವಾಗಿ ಭಾಗವಹಿಸಲಾಗದಿದ್ದರೂ, ಪ್ರಮುಖ ಘಟನೆ ಅಂದರೆ ಜೆ.ಪಿ. ಚಳುವಳಿ, ಚಂದ್ರಗುತ್ತಿ ಜಾತ್ರೆ ನಿಷೇಧ, ದಲಿತ ಚಳುವಳಿಯ ಪ್ರಾರಂಭಿಕ ಅವಧಿಯಲ್ಲಿ ನಾನು ಭಾಗಿಯಾಗಿದ್ದೆ. ಅವರ ಎಲ್ಲಾ ಹೋರಾಟದಲ್ಲಿ ನಾನು ಜೊತೆಯಾಗಿರದಿದ್ದರೂ, ಭಾವನಾತ್ಮಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಗುಣಾತ್ಮಕವಾಗಿ ಅವರ ಶಕ್ತಿಯಾಗಿ ಭಾಗಿಯಾದ ಸಂತೃಪ್ತಿ ನನಗಿದೆ. ಅಂತರ ಜಾತೀಯ ವಿವಾಹವಾದ್ದರಿಂದ ಸಮಾನತೆಯ ಸಮಾಜ ಕಟ್ಟುವಲ್ಲಿ, ನಿರ್ಮಲವಾದ, ಮಾನವೀಯ ಮೌಲ್ಯಗಳುಳ್ಳ ಸುಂದರ ಬದುಕನ್ನು ಉದಾಹರಣೆಯಾಗಿ ತೋರಿಸಿಕೊಟ್ಟ ಸಂತೋಷ ನಮಗಿದೆ.

– ಇಂದಿರಾ

ವ್ಯವಸ್ಥಾಪಕರು: ತಾಲ್ಲೂಕು ಪಂಚಾಯ್ತಿ,
ಯಲಹಂಕ, ಬೆಂಗಳೂರು.

'ಮದುವೆ ಗಂಡು' ಭೂಗತ!



ಮಾನಸಗಂಗೋತ್ರಿಯ ಶಾಲೆಯಲ್ಲಿ ಕಲಿಯುತ್ತಿದ್ದ ನಮ್ಮ ಪುಟ್ಟ ಸ್ನೇಹಾ ಒಮ್ಮೆ ಮನೆಗೆ ಬರುತ್ತಿದ್ದಂತೆಯೇ ಅವಳ ಕುತೂಹಲಕ್ಕೆ ಕಾರಣವಾಗಿದ್ದ ಪ್ರಶ್ನೆಯನ್ನು ಮುಗ್ಧವಾಗಿ ರಾಮದಾಸ್ ಬಳಿ ಕೇಳಿದಳು–

"ಅಪ್ಪ, ಜಾತಿ ಎಂದರೆ ಏನಪ್ಪ?"

"ಅದೊಂದು ಮೂಢ ನಂಬಿಕೆ. ಜಾತಿ ಅಂತ ಏನೂ ಇಲ್ಲ"

"ಹಾಗಾದರೆ ನಮಗೆ ಜಾತಿ ಇಲ್ಲ!"

"ನಮಗ್ಯಾವ ಜಾತಿಯೂ ಇಲ್ಲ"

"ಮತ್ತೆ ಸ್ಕೂಲಲ್ಲಿ ಎಲ್ಲರೂ ನಿಮ್ಮ ಜಾತಿ ಯಾವುದೂಂತ ಕೇಳ್ತಾರೆ"

"ನಾವು ಮನುಷ್ಯರ ಜಾತಿ ಅಂತ ಹೇಳು"

ಜಾತಿಯ ಸೋಂಕಿಲ್ಲದ ಕುಟುಂಬದಲ್ಲಿ ಬೆಳೆಯುತ್ತಿದ್ದ ಸ್ನೇಹಳ ಮನಸ್ಸಿನಲ್ಲಿ ಶಾಲೆಯ ಪರಿಸರ ಗೊಂದಲವನ್ನು ಹುಟ್ಟು ಹಾಕಿತ್ತು. ಆಗ ಅಪ್ಪ ಕೊಟ್ಟ ಉತ್ತರದಿಂದ ಅವಳಿಗೆ ಅದೇನು ಅರ್ಥವಾಗಿತ್ತೋ ಗೊತ್ತಿಲ್ಲ. ಹಲವು ವರ್ಷಗಳ ಹಿಂದೆ ನಡೆದ ಅಪ್ಪ–ಮಗಳ ಈ ಮಾತುಕತೆಗೆ ನಮ್ಮ ಮದುವೆಯ ಪ್ರಸಂಗವೇ ಹಿನ್ನೆಲೆಯಾಗಿದೆ.

೧೯೭೪, ಚೈತ್ರ ವೈಶಾಖದ ಬಿರು ಬಿಸಿಲು. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಪದವಿ ಪರೀಕ್ಷೆಗಳ ಕನ್ನಡ ಮೌಲ್ಯಮಾಪನ ಕಾರ್ಯ ನಡೆದಿತ್ತು. ಆಗ ನಡೆದ ಸಂತೋಷ ಕೂಟದಲ್ಲಿ ತಲೆಯೆತ್ತಿ ಎದೆ ಸೆಟಸಿ ನಿಂತು ತುಂಬು ಕಂಠದಿಂದ ಮಾತನಾಡಿದ ಆ ದಿಟ್ಟ ಯುವಕನ ಕಣ್ಣುಗಳಲ್ಲಿ ಅಂತಃಕರಣದ ಸೆಳೆತವಿತ್ತು. ಬೇರೊಂದು ಕೊಠಡಿಯಲ್ಲಿ ಉತ್ತರ ಪತ್ರಿಕೆ ತಿದ್ದುತ್ತಿದ್ದ ಆತನನ್ನು ಮತ್ತೆ ಮತ್ತೆ ನೋಡುವ ಮಾತನಾಡಿಸುವ ಅದಮ್ಯ ಬಯಕೆಯಾಗುತ್ತಿತ್ತು. ಸಾಮಾನ್ಯ ಮಾತುಕತೆಯ ಒಳಗೂ ಆತನ ಎದೆನವಿರನ್ನು ಮುಟ್ಟುತ್ತಿದ್ದೇನೆಂಬ ತೀವ್ರ ಅನಿಸಿಕೆಯಾಗುತ್ತಿತ್ತು. ಮನದ ಭಾವನೆಗಳನ್ನು ಯಾರೊಂದಿಗೂ ಹಂಚಿಕೊಳ್ಳಲಾಗದ ಸಂಕೋಚ. ಬೆಂಗಳೂರು ಮನೆಗೆ, ಕೋಲಾರದ ಕಾಲೇಜಿನ ಕೆಲಸಕ್ಕೆ ಮರಳಿದ ಮೇಲೆ ಸಹ ನುಗ್ಗಿ ಬರುತ್ತಿದ್ದವು, ನೆನಪುಗಳು.

೧೯೭೫, ಮೌಲ್ಯಮಾಪನಕ್ಕೆ ಕರೆ ಬರದಿದ್ದಾಗ ಏನೋ ಚಡಪಡಿಕೆ. ಕೊನೆಗೊಮ್ಮೆ ಕರೆ ಬಂದಾಗ ನೆಮ್ಮದಿಯ ನಿಟ್ಟುಸಿರು. ತುಂಬ ಕಾವೇರಿಯನ್ನು ದಾಟಿ, ನಿಶ್ಚಲ ಚಾಮುಂಡಿ ಬೆಟ್ಟದ ತಪ್ಪಲಿನ ಮೈಸೂರಿಗೆ ಬಂದಿಳಿದಾಗ

ಹುಚ್ಚು ಮನಸ್ಸಿಗೆ ಅದೆಷ್ಟೋ ಹಿಗ್ಗು. ಆದರಾತ ಮೌಲ್ಯಮಾಪನ ಕೇಂದ್ರದಲ್ಲಿರಲಿಲ್ಲ.

ಕ್ರಾಫರ್ಡ್ ಭವನದಲ್ಲಿ ನೀರಸ ಮೌಲ್ಯ ಮಾಪನ ನಡೆದಿದ್ದಾಗ ನನ್ನ ಹಿತೈಷಿ ಗುರುಗಳೂ, ಆತನ ಸಹೋದ್ಯೋಗಿ ಮಿತ್ರರೂ ಆದ ಎನ್. ಬೋರಲಿಂಗಯ್ಯನವರು ಅನಿರೀಕ್ಷಿತವಾಗಿ ಆತನ ಮದುವೆಯ ಪ್ರಸ್ತಾಪವನ್ನು ಮುಂದಿಟ್ಟರು. ಅಚ್ಚರಿ–ಸಂತೋಷ ಒಮ್ಮೆಲೇ ಒತ್ತರಿಸಿಕೊಂಡು ಬಂದು ಗೊಂದಲವಾಯಿತು. ಜಾತಿ ಮತಗಳಾಚೆಯ ಬೆಚ್ಚನೆಯ ಪ್ರೀತಿಯ ಕರೆ ಅಲ್ಲಿತ್ತು.

ಯೌವನ ಸಹಜ ಬಯಕೆಗಳು ತಂದ ನಸುಕಂಪನದ ಜೊತೆಯಲ್ಲೇ, ಜಾತಿ ವರ್ತುಲದೊಳಗೆ ಬೆಳೆದ ನಾನು ಅದನ್ನು ದಾಟ ಬಲ್ಲೆನೆ ಎಂಬ ಆತಂಕ, ಪ್ರೀತಿ ಸ್ಪಂದನದ ಜೊತೆಗೆ ಭವಿಷ್ಯವನ್ನು ಕುರಿತ ಭೀತಿ. ಮನದ ಕಣ್ಣಿನ ಮುಂದೆ, ಕಂಡು ಕೇಳಿದ್ದ ಅಂತರ್ಜಾತಿ ವಿವಾಹಿತರ ಮೆರವಣಿಗೆ. ಆ ಕ್ಷಣದಲ್ಲಿ ಆತನ ಜೊತೆಯಲ್ಲಿ ಹೆಜ್ಜೆಯಿಡಲು ನಿರ್ಧರಿಸಲು ಧೈರ್ಯ ತುಂಬಿಕೊಟ್ಟ ವ್ಯಕ್ತಿ ನಿರಂಜನರ 'ಅನುಪಮಾ'. ಅನಂತರದ ದಿನಗಳಲ್ಲಿ ಪ್ರತಿಸಂಜೆ ಜಾವಾ ಮೋಟಾರ್ ಬೈಕ್ ಕ್ರಾಫರ್ಡ್ ಭವನದ ಮೆಟ್ಟಿಲುಗಳ ಬಳಿ ಕಾದಿರುತಿತ್ತು.

ಆ್ಯನಿ ಬೆಸೆಂಟ್, ಥಿಯಾಸೋಫಿ ಮತ್ತು ಜಿಡ್ಡು ಕೃಷ್ಣಮೂರ್ತಿಯವರ ವಿಚಾರಗಳಿಗೆ ಸ್ಪಂದಿಸುತ್ತ ವಿಶ್ವಭ್ರಾತೃತ್ವದಲ್ಲಿ ನಂಬಿಕೆಯಿಟ್ಟಿದ್ದ ಅಣ್ಣಾವರು (ತಂದೆ) ನಮ್ಮ ಮದುವೆಯ ನಿರ್ಧಾರವನ್ನು ಅಕ್ಕರೆಯಿಂದ ಸ್ವಾಗತಿಸಿದರು. ತಮ್ಮ ಕುಲಸ್ಥರು 'ರಾಮಚಂದ್ರನ ಮಗಳು ಯಾರೊಂದಿಗೋ ಓಡಿ ಹೋದಳೆಂದು' ಆಡಿಕೊಳ್ಳಬಹುದೆಂಬ ಆತಂಕ ಹೆತ್ತ ತಾಯಿ ರಾಜಮ್ಮನವರನ್ನು ಕಾಡಿತ್ತು. ಆ ಕಾಲಕ್ಕೆ ಅವರಿದ್ದ ಮನಸ್ಥಿತಿಗೆ ಅದು ಸಹಜವೇ ಆಗಿತ್ತು. ಮನೆಮಗಳ ನಿರ್ಧಾರ ಗಟ್ಟಿಯಾದದ್ದೆಂದು ಖಚಿತವಾದಾಗ ತುಂಬು ಕುಟುಂಬದ ಇತರ ಸದಸ್ಯರು ತಮ್ಮ ಜಾತಿ ಹಣೆಪಟ್ಟಿಯನ್ನು ಮದುವೆ ಗಂಡಿಗೆ ಕಟ್ಟಿ ಅವಸರದಲ್ಲಿ ವಾಲಗ ಊದಿಸಿಬಿಡುವ ಇಷ್ಟವನ್ನೂ ವ್ಯಕ್ತಪಡಿಸಿದರು.

ಜಾತಿಯ ನೆಲೆ–ನಿರ್ಬಂಧಗಳಿಲ್ಲದೆ ತಾಯಿಯೊಬ್ಬರ ಪ್ರೀತಿಯಲ್ಲೇ ಬೆಳೆದಿದ್ದ ರಾಮದಾಸ್, ಸ್ವಂತ ಊರು–ಆಸ್ತಿಗಳಿಲ್ಲದ ಅಲೆಮಾರಿಗಳಂತೆ ಏಕಾಂಗಿಯಾಗಿ ಮೈಸೂರು ಸೇರಿದ್ದರು. ಅತ್ಯಂತ ದಾರುಣ ಪರಿಸ್ಥಿತಿಯಲ್ಲೂ ಮಗನನ್ನು ಜತನದಿಂದ ಕಾಪಾಡಿಕೊಂಡು ವಿದ್ಯಾವಂತನನ್ನಾಗಿ ಮಾಡಿದ್ದ ಮಂಜಮ್ಮನವರು ಮಗನ ಮದುವೆಗೆ ಕಾತರದಿಂದ ಕಾಯುತ್ತಿದ್ದರು. ಮಗನ ಯಾವ ಅಪೇಕ್ಷೆಯನ್ನೂ ಎಂದೂ ತಿರಸ್ಕರಿಸದಿದ್ದ ಅವರು ಮಗನ ಆಯ್ಕೆಯ ಬಾಳಸಂಗಾತಿಯನ್ನು ಅತ್ಯಂತ ಸಂಭ್ರಮದಿಂದ ಸ್ವೀಕರಿಸಿದರು. ಧಾರ್ಮಿಕ ಸಂಪ್ರದಾಯಗಳನ್ನು ಆಡಂಬರದ ಮದುವೆಗಳನ್ನು ತಿರಸ್ಕರಿಸಿದ್ದ ರಾಮದಾಸ್ ನಮ್ಮ ಕುಟುಂಬದವರ ಇಷ್ಟದಂತೆ ಮದುವೆಯಾಗುವುದು ಅಸಂಭವವಾಗಿತ್ತು. ಸರಳ, ಜಾತಿ ರಹಿತ ಮದುವೆಗೆ ಅಣ್ಣಾವರು ಸಂತೋಷದಿಂದ ಒಪ್ಪಿಗೆ ಕೊಟ್ಟರು. ಕುಟುಂಬದ ಇತರ ಆತ್ಮೀಯರೊಡನೆ ಮಾತಿನ ಘರ್ಷಣೆ. ಸಾವಿನ ಮಾತು, ನೋವಿನ ಮಾತು, ಆಡಬಾರದ ಮಾತುಗಳೆಲ್ಲ ತುಟಿಯಾಚೆ ನೆಗೆದಿದ್ದವು. ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡರು.

ಪತ್ರಿಕೆಗಳಲ್ಲಿ ಮಾತ್ರ ಓದಿದ್ದ ಮೈಸೂರಿನ ಕನ್ನಡ ಬೆಳೆಸಿ– ಇಂಗ್ಲಿಷ್ ಇಳಿಸಿ, ನವ ನಿರ್ಮಾಣ ಕ್ರಾಂತಿ, ಸಮಾಜವಾದಿ ಯುವ ಜನ ಸಭಾ, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಒಕ್ಕೂಟಗಳ ವಿವರಗಳನ್ನು ರಾಮದಾಸರ ಮಾತಿನಲ್ಲಿ ತಿಳಿದುಕೊಳ್ಳುತ್ತಾ ನಾನು ಗಟ್ಟಿಯಾಗ ತೊಡಗಿದ್ದೆ. ೧೯೭೬ರ ಆಗಸ್ಟ್ ೧೬ರಂದು ಎರಡು ಕುಟುಂಬಗಳ ಆಪ್ತ ಮಿತ್ರರ ಸಮ್ಮುಖದಲ್ಲಿ ಸರಳವಾಗಿ ಮದುವೆಯಾಗಲು ನಾವಿಬ್ಬರು ನಿರ್ಧರಿಸಿದ್ದೆವು. ಅಷ್ಟರಲ್ಲಿ ತುರ್ತು ಪರಿಸ್ಥಿತಿಯ ಭೀಕರ ಯಾತನೆಯ ದಿನಗಳು ಆರಂಭವಾಗಿ ಬಿಟ್ಟವು. ಮಾನಸಗಂಗೋತ್ರಿಯ ಟಿ–೧೯ನಲ್ಲಿ ಮದುವೆಯ ನೆಪದಲ್ಲಿ ರಾಜಕೀಯ ಷಡ್ಯಂತ್ರವೇನೋ ರೂಪಿತವಾಗುತ್ತಿದೆಯೆಂಬ ಗುಮಾನಿ ದೇವರಾಜ ಅರಸು ಸರ್ಕಾರದ ಪೊಲೀಸ್ ಇಲಾಖೆಗೆ ಬಂದು ಬಿಟ್ಟಿತ್ತು. ಮೈಸೂರಿನಲ್ಲಿ ರಾಮದಾಸರ ಅನೇಕ ಗೆಳೆಯರು ಬಂಧಿತರಾದರು. ಮದುವೆಗೆ ಮಂಚಿನ ರಾತ್ರಿ ಜಿ. ಎಚ್. ನಾಯಕರ ಮನೆಯಲ್ಲಿ 'ಮದುವೆ ಗಂಡು' ಭೂಗತನಾಗಿದ್ದುದರಿಂದ ಬೆಳಗ್ಗೆ ಮದುವೆ ನಿರಾತಂಕವಾಗಿ ನಡೆಯಿತು. ಮೈಸೂರು–ಕೋಲಾರದ ದಾರಿಯಲ್ಲಿ ಓಡಾಡುತ್ತ ವಾರಾಂತ್ಯದ ದಾಂಪತ್ಯ ನಡೆಸುತ್ತಿದ್ದ ದಿನಗಳಲ್ಲಿ ಪೋಲೀಸರು ನಮ್ಮ ಹಿಂದೆ ಬಿದ್ದದ್ದೂ ಉಂಟು.


ಐವತ್ತರ ಅಂಚಿನಲ್ಲಿ ಹಿಂದಿರುಗಿ ನೋಡಿದರೆ, ಮನಮೆಚ್ಚಿದವನನ್ನು ಪಡೆದುಕೊಳ್ಳುವ ತೀವ್ರ ತುಡಿತದಲ್ಲಿ ಜಾತಿ ರಹಿತ ಸರಳ ಮದುವೆಗೆ ತವರನ್ನು ಒಪ್ಪಿಸುವ ಉದ್ವೇಗದಲ್ಲಿ ಎಷ್ಟು ಎಳಸಾಗಿ ಒರಟಾಗಿ ವರ್ತಿಸಿದ್ದೆನಲ್ಲ ಎನಿಸುತ್ತದೆ. ಆದರೆ ತವರು ಮನೆ ಅದನ್ನೆಲ್ಲಾ ಮನ್ನಿಸಿ ಆತ್ಮೀಯ ಸಂಬಂಧವನ್ನು ಉಳಿಸಿಕೊಂಡಿದೆ. ಬಯಲು ಸೀಮೆಯ ಈ ಹೆಣ್ಣನ್ನು ಮಲೆನಾಡ ಮಂಜಮ್ಮನವರು ತಾಯ ಮಮತೆಯಿಂದ ಅವಳೆಲ್ಲ ಗುಣಾವಗುಣಗಳೊಂದಿಗೆ ಇಡಿಯಾಗಿ ಒಪ್ಪಿಕೊಂಡಿದ್ದಾರೆ. ಆ ಹಿರಿಯರೆಲ್ಲರ ಪ್ರೀತಿ ಅಂತಃಕರಣ ದೊಡ್ಡದು.

ಕಳೆದ ಇಪ್ಪತ್ತೆರಡು ವರ್ಷಗಳಲ್ಲಿ ನಾವಿಬ್ಬರು ಸಾವಿರಾರು ಮೈಲಿಗಳನ್ನು ಮೋಟಾರ್ ಬೈಕ್‌ನಲ್ಲಿ ಸುತ್ತಿ ಸಂಭ್ರಮಿಸಿದ್ದೇವೆ. ಸಣ್ಣಪುಟ್ಟ ಕಾರಣಗಳಿಗೆ ದೊಡ್ಡದಾಗಿ ಜಗಳವಾಡಿದ್ದೇವೆ. ಮರುಕ್ಷಣದಲ್ಲೇ ಮೌನವಾಗಿ ಪರಸ್ಪರರಿಗೆ ಸ್ಪಂದಿಸಿದ್ದೇವೆ. ರಕ್ತ ಸಂಬಂಧಿಗಳಿಗಿಂತ ಆತ್ಮೀಯವಾಗಿ ಭಾವಿಸುವ ಗೆಳೆಯರ ದೊಡ್ಡ ಬಳಗ ನಮ್ಮ ಪಾಲಿಗಿದೆ. ಪಾರದರ್ಶಕ ವ್ಯಕ್ತಿತ್ವದ ನೇರ ನಿಷ್ಠುರ ನುಡಿಯ, ಪ್ರತಿಭಟನೆಯ ಸ್ವಭಾವದ ರಾಮದಾಸ್ ಅನೇಕ ಹೋರಾಟಗಳಲ್ಲಿ ಏಕಾಂಗಿಯಾಗಿ, 'ತಬ್ಬಲಿತನ'ವನ್ನು ಅನುಭವಿಸಿದ್ದಾರೆ. ಕುಟುಂಬದ ಎಲ್ಲ ಸದಸ್ಯರ ಪ್ರೀತಿಯಲ್ಲಿ, ತಾಯಿಯ ಅಪಾರ ಮಮತೆಯಲ್ಲಿ ಅದೆಲ್ಲವೂ ಅವರಿಗೆ ಸಹನೀಯವಾಗಿದೆ.

'ಜಾತಿ ಎಂದರೇನು?' ಎಂದು ಅಂದು ಪ್ರಶ್ನಿಸಿದ್ದ ಸ್ನೇಹಾಗೆ ಈಗ ಇಪ್ಪತ್ತರ ಹರೆಯ. ಅಂತರಜಾತಿಯ ಅಂತರ ಧರ್ಮೀಯ, ಜಾತಿ ರಹಿತ ಮದುವೆಗಳಿಗೆ ಖುಷಿಯಾಗಿ ಸ್ಪಂದಿಸುವ ಅವಳನ್ನು ನೋಡುತ್ತ ನಡೆದು ಬಂದ ದಾರಿಯ ಕಡೆಗೆ ತಿರುಗಿದರೆ ನಮಗೆ ಹೆಮ್ಮೆಯಾಗುತ್ತದೆ; ಅವಳ ಉಲ್ಲಾಸದಲ್ಲಿ ಬದುಕಿನ ಪ್ರೀತಿ ಕಾಣುತ್ತದೆ.

–ನಿರ್ಮಲಾ ರಾಮದಾಸ್
ಪ್ರಾಧ್ಯಾಪಕರು
ಮಹಾರಾಣಿ ಕಲಾ ಕಾಲೇಜು,
ಮೈಸೂರು.

ಸಿದ್ಧಾಂತಗಳಿಂದ ಸ್ಫೂರ್ತಿ



ಜಾತಿ–ಮತೀಯ ಬೇಗುದಿಯಲ್ಲಿ ಬೆಂದು ಮೇಲಿಂದ ಮೇಲೆ ಪರಕೀಯರ ದಾಳಿ–ತುಳಿತಕ್ಕೆ ತುತ್ತಾಗಿ ನಲುಗಿರುವ ಭಾರತವು ಸ್ವಾತಂತ್ರ್ಯ ನಂತರವೂ ಅದೇ ಪರಿಸ್ಥಿತಿಯಲ್ಲಿ ತೊಳಲಾಡದಿರಲೆಂಬ ಪರಮೋದ್ದೇಶದಿಂದ ರಾಷ್ಟ್ರದ ಸಂವಿಧಾನ ಕರ್ತೃಗಳು ಭಾರತವನ್ನು ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಘೋಷಿಸುವುದರ ಜೊತೆಗೆ ಸಮಾಜವಾದಿ ಹಾಗೂ ಜಾತ್ಯಾತೀತ ರಾಷ್ಟ್ರವೆಂಬುದಕ್ಕೂ ಸಹ ಒತ್ತು ಕೊಟ್ಟಿದ್ದಾರೆ. ರಾಷ್ಟ್ರದ ಸ್ವಾತಂತ್ರ್ಯಕ್ಕೆ ಮೂಂಚೂಣಿಯಲ್ಲಿ ನಿಂತು ಹೋರಾಡಿದ ಮಹಾತ್ಮಗಾಂಧಿ, ಸುಭಾಷ್‌ಚಂದ್ರಬೋಸ್ ಇವರೇ ಮೊದಲಾದ ಅಪ್ರತಿಮ ನೇತಾರರು ಹಲವು ಜಾತಿ–ಧರ್ಮ–ಸಂಸ್ಕೃತಿ–ಭಾಷೆಯನ್ನಾಡುವ ಭಾರತದಲ್ಲಿ ಎಲ್ಲರನ್ನು ಒಗ್ಗಟ್ಟಾಗಿಟ್ಟುಕೊಂಡು ಮುನ್ನಡೆಯ ಬೇಕಾದರೆ ಸಮಾಜವಾದಿ ತಳಹದಿಯ ಮೇಲೆ ಜಾತ್ಯಾತೀತ ರಾಷ್ಟ್ರವಾಗಿ ಸಾಗುವುದು ಅನಿವಾರ್ಯ–ಅಗತ್ಯವೆಂಬ ಅಂಶವನ್ನು ಮನಗಂಡು ಪ್ರತಿಪಾದಿಸಿದ್ದರು. ಅದರಂತೆಯೇ ಈ ದೇಶಕ್ಕೆ ಗಾಂಧೀಜಿಯವರ ಆರ್ಥಿಕ ಸಿದ್ಧಾಂತದಿಂದ ಮಾತ್ರ ಮೋಕ್ಷ ಸಾಧ್ಯ ಎಂಬುದನ್ನು ಸಾರಿ ಹೇಳಿದ ಧೀಮಂತ ಸಮಾಜವಾದಿ ನಾಯಕ ಡಾ। ರಾಮ ಮನೋಹರ ಲೋಹಿಯಾ ಅವರ ತತ್ವಾದರ್ಶಗಳಿಂದ ಪ್ರೇರಿತವಾಗಿ ಹಾಗೂ ಮಹಾ ಮಾನವತಾವಾದಿ ಪೆರಿಯಾರ್ ಈ.ವಿ. ರಾಮಸ್ವಾಮಿ ನಾಯ್ಕರ್ ಅವರ ಸ್ವಮರ್ಯಾದೆ ಚಳವಳಿಯಿಂದ ಸ್ಫೂರ್ತಿಗೊಂಡು ನಾನು ಸಜಾತಿ ಹಾಗೂ ಸಂಪ್ರದಾಯದ ಮದುವೆಗಳ ವಿರುದ್ಧದ ಮನೋಭಾವವನ್ನು ರೂಢಿಸಿಕೊಂಡೆ. ಸಂಪ್ರದಾಯದ ಮದುವೆಗಳ ಹೆಸರಿನಲ್ಲಿ ನಡೆಯುತ್ತಿದ್ದ (ಈಗಲೂ ಬಹಳವಾಗಿ ನಡೆಯುತ್ತಿರುವ) ಶೋಷಣೆ ಹಿಂಸೆಗಳಿಂದ ಹೆಣ್ಣು ಹೆತ್ತವರ ತೊಳಲಾಟ ಹಾಗೂ ಹೀನ–ದೀನ ಪರಿಸ್ಥಿತಿಯನ್ನು ಕಂಡು ಜಿಗುಪ್ಸೆಗೊಂಡಿದ್ದೆ. ಸಂಪ್ರದಾಯದ ಹೆಸರಿನಲ್ಲಿ ಪುರೋಹಿತ ಶಾಹಿ ಸಂಸ್ಕೃತಿಯು ಜಾತ್ಯತೀತ ರಾಷ್ಟ್ರದಲ್ಲಿ ಅಟ್ಟಹಾಸ ಗೈಯುತ್ತಿರುವುದನ್ನು ಕಂಡು ಸಹಿಸದವನಾಗಿದ್ದೆ. ಮದುವೆ ಮಂತ್ರದಲ್ಲಿ ಹೆಣ್ಣು ತನ್ನ ಬಾಳ ಸಂಗಾತಿಯಾಗುವವನಿಗೆ ನಾಲ್ಕನೇ ಪತ್ನಿ ಎಂಬುದಾಗಿ ಸಾರುವುದನ್ನು ಕಂಡು ಅಂತಹ ಮದುವೆ ಮಂತ್ರ ಹೇಳುವ ಪುರೋಹಿತ–ಅಗ್ನಿ–ಸಾಕ್ಷಿಗಳ ಗೊಡವೆ ಇಲ್ಲದೆಯೇ, ನಾನು ಮದೆಯಾಗುವಾಕೆ, ನನ್ನೊಬ್ಬನಿಗೇ ಹೆಂಡತಿಯಾಗುವ ರೀತಿಯಲ್ಲಿ ಪೆರಿಯಾರರು ಪ್ರತಿಪಾದಿಸಿದ "ಸ್ವಯಂ ಮರ್ಯಾದೆಯ ಮದುವೆ" ಮಾಡಿಕೊಂಡು ಜಾತ್ಯತೀತವಾಗಿ ಬಾಳುವೆ ಮಾಡಬೇಕೆಂಬ ಹಂಬಲ ಹೊತ್ತೆ.

ನನ್ನ ಈ ಹಂಬಲಕ್ಕೆ ಇಂಬುಕೊಟ್ಟವಳು ಕಳೆದ ಇಪ್ಪತ್ತೈದು ವರ್ಷಗಳಿಂದ ನನ್ನ ಬಾಳ ಸಂಗಾತಿಯಾಗಿರುವ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಮಂಗಳವಾಡದ ವೀರಯ್ಯನವರ ಪುತ್ರಿ ಗಾಯತ್ರಿ. ಈಕೆ ನನಗೆ ಪರಿಚಯವಾದುದು, ಪರಸ್ಪರ ಪ್ರೀತಿಸಿ ಅಂತರಜಾತಿ ಮದುವೆಯಾಗಿ ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿರುವ ಡಾ। ಹಂಪನಾ ದಂಪತಿಗಳ ಮನೆಯಲ್ಲಿ. ಡಾ। ಕಮಲಾ ಹಂಪನಾ ಅವರ ಅಕ್ಕನ ಮಗಳಾದ ಗಾಯತ್ರಿ ಅವರ ಮನೆಯಲ್ಲಿದ್ದು ಕೊಂಡೇ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕುಳಿತಿದ್ದವಳು. ಕೇವಲ ಕನ್ನಡಪರ ಹೋರಾಟಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದ ನನಗೆ ಪೆರಿಯಾರ್, ಡಾ। ಲೋಹಿಯಾ, ಡಾ। ಅಂಬೇಡ್ಕರ್ ಇವರ ವಿಚಾರಗಳನ್ನು ತಲೆಗೆ ತುಂಬಿ ನನ್ನನ್ನು ಸಮಾಜವಾದಿ ಪಥದಲ್ಲಿ ಮುನ್ನಡೆಯುವುದಕ್ಕೆ ಹಾಗೂ ಜಾತ್ಯಾತೀತ ಮನೋಭಾವವನ್ನು ರೂಢಿಸಿಕೊಳ್ಳುವುದಕ್ಕೆ ಕಾರಣಕರ್ತರಾದ ಹೆಸರಾಂತ ವಿಚಾರವಾಗ ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರ ಸಂಪಾಕತ್ವದ 'ಜನ ಪ್ರಗತಿ' ಪತ್ರಿಕೆಗೆ ಹಂಪನಾ ಅವರಿಂದ ಪ್ರತಿವಾರ ಲೇಖನ ಪಡೆದು ಬರಲು ಹೋಗುತ್ತಿದ್ದಾಗ ಗಾಯತ್ರಿಯ ಪರಿಚಯವಾಯಿತು. ಬೆಂಗಳೂರು ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಾನು ಬಿ.ಎಸ್ಸಿ. ಕಲಿಯುತ್ತಿದ್ದಾಗ ಹಂಪನಾ ನನಗೆ ಕನ್ನಡ ಮಾಸ್ತರು. ಅವರದು ಅಂತರಜಾತೀಯ ಮದುವೆ ಎಂಬುದನ್ನು ಆಗಲೇ ಅರಿತಿದ್ದೆ. ಆ ಹಿನ್ನೆಲೆಯಿಂದಲೇ ನಾನು ಗಾಯತ್ರಿಯನ್ನು ನನ್ನನ್ನು ಮದುವೆಯಾಗುವ ಬಗೆಗೆ ಆಸಕ್ತಿ ಇದೆಯೇ ಎಂಬುದಾಗಿ ವಿಚಾರಿಸಲು ಮುಂದಾದದ್ದು. ಗಾಯತ್ರಿ ಆಗಿನ್ನು ಹದಿನೇಳರ ಹುಡುಗಿ. ಅಪ್ರಾಪ್ತ ವಯಸ್ಸಿನವಳು. ಆದರೆ ತಾನು ಪ್ರಾಥಮಿಕ ಶಾಲೆ ಕಲಿಯುತ್ತಿದ್ದಾಗ, ಕಮಲಾ–ಹಂಪನಾ ವಿಜಾತಿ ವಿವಾಹವಾದಾಗ ತಮ್ಮ ಕುಟುಂಬದಲ್ಲಿ ನಡೆದ ವಿದ್ಯಾಮಾನಗಳನ್ನು ಕಣ್ಣಾರೆಕಂಡು ಕಿವಿಯಾರೆ ಕೇಳಿದ್ದಳು. ತನ್ನ ತಂದೆ ಪಕ್ಕಾ ಜಾತಿ ಅಭಿಮಾನಿ ಎಂಬುದರ ಅರಿವಿದ್ದೂ, ನನ್ನನ್ನು ಮದುವೆಯಾಗಲು ಸಮ್ಮತಿಸಿದಳು.

ಗಾಯತ್ರಿಯ ತಂದೆ ಜೀ. ವೀರಯ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸಮಾಜವನ್ನು ತಿದ್ದಿ–ಬುದ್ಧಿ ಹೇಳುವ ಪತ್ರಕರ್ತರಾಗಿದ್ದರು ಸಹ, ಕಟ್ಟಾ ಜಾತಿವಾದಿಯಾಗಿದ್ದರು. ತಮ್ಮ ಜಾತಿಯ ಐತಿಹಾಸಿಕ ವೀರ ಬಿಚ್ಚುಗತ್ತಿ ಭರಮ ನಾಯಕನ ಹಿಂದಿನ "ಬಿಚ್ಚು ಗತ್ತಿ" ಹಾಗೂ ತಮ್ಮ ನಾಯಕ ಜಾತಿಯನ್ನು ಹೊಂದಿರುವ "ನಾಯಕವಾಣಿ" ಎಂಬ ಹೆಸರಿನ ಪತ್ರಿಕೆಗಳನ್ನು ಅವರು ನಡೆಸುತ್ತಿದ್ದರು. ಗಾಯತ್ರಿಯು ನನ್ನನ್ನು ಮದುವೆಯಾಗಲು ಒಪ್ಪಿದ ಬಳಿಕವೇ ನಾನು ಆಕೆ ಜೊತೆಯಾಗಿ ಓಡಾಡಲಾರಂಭಿಸಿದ್ದೆವು. ಆಕೆ ಮಹಾರಾಣಿ ಕಾಲೇಜಿಗೆ ಪಿ.ಯು.ಸಿ ಕಲಿಯಲು ಸೇರಿದ್ದಳು. ಕನ್ನಡ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾಲೇಜಿನ ವ್ಯಾಸಂಗದ ಕಡೆ ಅಷ್ಟಾಗಿ ಗಮನ ನೀಡದೇ ಇದ್ದ ನಾನು ಬಿಎಸ್ಸಿ ತೇರ್ಗಡೆಯಾಗಿರಲಿಲ್ಲ. ತಂದೆಗೆ ಒಬ್ಬನೇ 'ಮಗ'ನಾಗಿದ್ದ ನಾನು ಪದವಿ ಪಡೆಯದೇ ಹೋದ ಬಗ್ಗೆ ನಮ್ಮ ತಂದೆ (ಕೋಡಿಹೊಸಹಳ್ಳಿ ಹುಚ್ಚೇಗೌಡರು) ಯವರಿಗೆ ಬೇಸರವಿತ್ತು.

ನನ್ನನ್ನು ಚಿಕ್ಕಂದಿನಿಂದ ಸಾಕಿ ಬೆಳೆಸಿದ ಅಕ್ಕನ ಮಗಳನ್ನು ತಂದು ಕೊಳ್ಳಬೇಕೆಂಬ ಹೆಬ್ಬಯಕೆ ಹೊಂದಿದ್ದ ತಂದೆಯವರಿಗೆ ನಾನು ಸಜಾತಿ ಮದುವೆಗೆ ಒಪ್ಪಲಾರೆ ಎಂಬುದರ ಬಗ್ಗೆ ಮನ ಮುಟ್ಟುವ ಹಾಗೆ

ವಿಮಾಸಿದ್ದೆ. ಅವರಿಗೆ ನನ್ನ ವಿವರಣೆಯು ಸಮಧಾನ ಕೊಟ್ಟಿರಲಾರದು. ನಾನು ಏಕ ಮಾತ್ರ ಪುತ್ರನಾಗಿದ್ದ ಕಾರಣ, ಚಿಕ್ಕಂದಿನಲ್ಲಿ 'ಟೈ ಫಾಯಿಡ್' ನಿಂದ, ಉಳಿಯುವುದಕ್ಕೇ ಕಷ್ಟವಾಗಿದ್ದ ಪರಿಸ್ಥಿತಿಯಲ್ಲಿ ನನ್ನನ್ನು ಬದುಕಿಸಿಕೊಳ್ಳಲು ಸಾಕಷ್ಟು ಹೆಣಗಾಡಿದ ಗಾಢ ಪ್ರೀತಿಯ ನೆಲೆಯಲ್ಲಿ ಅವರು ನನ್ನ ಈ ಅಂತರಜಾತಿ ಮದುವೆಗೆ ಸಮ್ಮತಿ ಕೊಟ್ಟಿದ್ದರು.

ಮೊದಲೇ ತಿಳಿಸಿದ್ದ ಹಾಗೆ ಪುರೋಹಿತ, ಅಗ್ನಿ–ಸಾಕ್ಷಿ, ಮದುವೆ ಮಂತ್ರಗಳಿಗೆ ನಾನು ವಿರೋಧಿಯಾಗಿದ್ದುದರಿಂದ ಮತ್ತು ಮದುವೆ ಎಂಬುದು ಹೆಣ್ಣು ಗಂಡುಗಳ ಜೋಡಿಯೊಂದು ಖಾಸಗಿ ಬದುಕು ನಡೆಸುವುದಕ್ಕೆ ಅವಕಾಶ ಕಲ್ಪಿಸುವ ಸಾಧನ ಮಾತ್ರವಾಗಿದ್ದುದರಿಂದ ನನ್ನ ಈ ಮದುವೆ ಡಾಣಾ ಡಂಗುರ ಸಾರಿ ಮಾಡಿಕೊಳ್ಳಲಿಚ್ಚಿಸದೆ, ಈ ನೆಲದ ಕಾನೂನಿನಂತೆ ನೊಂದಣಿ ಮಾಡಿಸಿ ಮದುವೆಯಾದೆ. ಕೆಂಪೇಗೌಡ ರಸ್ತೆಯ ತಾಲ್ಲೂಕು ಕಚೇರಿಯ ಹಿಂಬದಿಯಲ್ಲಿನ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಸುಮಾರು ಮೂವತ್ತು ಮಂದಿ ಆತ್ಮೀಯ–ಮಿತ್ರರು ಹಾಗೂ ಬಂಧುಗಳ ಸಮ್ಮುಖದಲ್ಲಿ ದಿನಾಂಕ ೨೫–೫–೧೯೭೨ರಂದು ನಾನು ಗಾಯತ್ರಿ ಬಾಳ ಸಂಗಾತಿಗಳಾದೆವು. ಮದುವೆಗೆ ಮುಂಚೆ ಸುಮಾರು ಒಂದು–ಒಂದೂವರೆ ವರ್ಷ ಸಾಕಷ್ಟು ಅಡ್ಡಿ–ಆತಂಕಗಳನ್ನು ಎದುರಿಸಿ ಜಯಶಾಲಿಯಾಗಿದ್ದ ನಮಗೆ ಮದುವೆಯಾದ ಬಳಿಕ ಆರ್ಥಿಕ ಅನಾನುಕೂಲತೆಗಳು ಎದುರಾದುದು ಬಿಟ್ಟರೆ, ಸಾಮಾಜಿಕವಾಗಿ ಅಂತಹ ಅಡಚಣೆಗಳಾವು ಒದಗಲಿಲ್ಲ. ಗಾಯತ್ರಿಯ ಮನೆಯಲ್ಲಂತೂ (ತಂದೆ–ತಾಯಿ) ನಮ್ಮ ಬಗೆಗೆ ಅನುಕೂಲ ವಾತಾವರಣವಿರಲಿಲ್ಲ. ಮದುವೆಯಾದ ನಾಲ್ಕು ವರ್ಷಗಳ ಬಳಿಕ ನಾನು ಅವರ ಮನೆಗೆ ಹೋಗಿದ್ದು.

ನಮ್ಮ ಕುಟುಂಬದಲ್ಲಿಯಂತೂ ಮೊದಲೇ ಭೂಮಿಕೆ ಸಿದ್ಧ ಪಡಿಸಿದ್ದರಿಂದ ಯಾವುದೇ ಮುಜುಗರದ ಪರಿಸ್ಥಿತಿ ಉಂಟಾಗಲಿಲ್ಲ. ಮದುವೆಯಾದ ವಾರದೊಳಗೇ ತಂದೆ ಬಂದು, ಸೊಸೆಗೆ ಒಡವೆಕೊಟ್ಟು ಊರಿಗೆ ಬರಲು ಆಮಂತ್ರಣ ನೀಡಿ ಹೋಗಿದ್ದರು. ಊರಿನಲ್ಲಿ (ಚನ್ನಪಟ್ಟಣ ತಾಲ್ಲೂಕು ಕೋಡಿ ಹೊಸಹಳ್ಳಿ) ನಮ್ಮ ಮದುವೆ ಬಗ್ಗೆ ನಾನಾ ರೀತಿಯ ಗಾಳಿ ಸುದ್ದಿ ಹಬ್ಬಿದ್ದರಿಂದ ಅಂತಹವುಗಳಿಗೆ ಕಡಿವಾಣ ಹಾಕಲು ತಂದೆ ಬೇಗ ಬರಲು ತಿಳಿಸಿದ್ದರು.

ನಾನು ಮದುವೆಯಾದಾಗ 'ಸಂಯುಕ್ತ ಕರ್ನಾಟಕ'ದಲ್ಲಿ ಕೈಗೆ ಬರುತ್ತಿದ್ದ ಸಂಬಳ ಸುಮಾರು ೨೦೦ ರೂ. ಗಳಾದ್ದರಿಂದ; ಏನನ್ನೂ ನಿರೀಕ್ಷಿಸದೆ ಸಾಲ ಮಾಡಿ ಸಂಸಾರ ಹೂಡಿದ್ದ ನಮಗೆ ನನ್ನ ಊರಿಂದ ಸ್ವಲ್ಪ ಅಕ್ಕಿ–ರಾಗಿ, ಕಾಳು ಕಡ್ಡಿಯ ನೆರವು ಒದಗಿ ಬಂದು ನಾವು ಸ್ವಾಭಿಮಾನಿ ಬದುಕು ಸಾಗಿಸಲು ಸಹಕಾರಿಯಾಯಿತು. ಮದುವೆಯಾದ ಬಳಿಕ ಸೊಸೆಯನ್ನು ನಮ್ಮ ತಂದೆ ತಾಯಿ ನನ್ನಷ್ಟೇ ಪ್ರೀತಿಸತೊಡಗಿದರು. ಮದುವೆಯಾದ ಒಂದೂಕಾಲು ವರ್ಷದ ಬಳಿಕ ಹುಟ್ಟಿದ ನನ್ನ ಮಗ ಸಂಜಯನ ಬಾಣಂತನ ಕೋಡಿಹೊಸಹಳ್ಳಿಯಲ್ಲಿಯೇ ನನ್ನ ತಾಯಿಯ ಆರೈಕೆಯಲ್ಲಿಯೇ ಜರುಗಿತು. ಎಲ್ಲ ಬಂಧು–ಬಾಂಧವರೂ ಗಾಯತ್ರಿಯನ್ನು ಪರಜಾತಿಯವಳೆಂಬ ಭಾವನೆ ತೋರದೆ ಆತ್ಮೀಯವಾಗಿ ಕಂಡರು. ಮೊದಲು ಒಂದೆರಡು ಸಲ ಅಡಿಗೆ ಮನೆಯ ಹೊಕ್ಕಾಟಕ್ಕೆ ಅವಕಾಶವಿರದಿದ್ದರೂ ಮುಂದೆ ಆ ಯಾವ ಅಡ್ಡಿಯೂ ಕಂಡು ಬರಲಿಲ್ಲ. ಇಬ್ಬರು ಕುಟುಂಬದವರು ಮುಂದೆ ನಮ್ಮ ಮನೆಗೆ ಬಂದು ಹೋಗುವ, ನಾವು ಸಹ ಅವಕಾಶವಾದಾಗಲೆಲ್ಲಾ ಹೋಗಿ ಬರುವ ಪರಿಪಾಠ ಬೆಳೆಸಿಕೊಂಡೆವು.

ಮದುವೆಯಾದಾಗ ಬಿ.ಎ. ಕಲಿಯುತ್ತಿದ್ದ ನಾನು, ಮಗ ಹುಟ್ಟಿದ ಮೇಲೆ ಪದವೀಧರನಾದೆ. ಗಾಯಿತ್ರಿ ಪಿಯು.ಸಿ.ಗೆ ವ್ಯಾಸಂಗ ನಿಲ್ಲಿಸಿದ್ದವಳು. ಮಕ್ಕಳಿಬ್ಬರಾದ ಬಳಿಕ ಟಿ.ಸಿ.ಎಚ್.ಗೆ ಸೇರಿ ತೇರ್ಗಡೆಯಾಗಿ, ಕೆಲ ತಿಂಗಳಲ್ಲೇ ಸರ್ಕಾರೀ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕಿಯಾಗುವ ಅವಕಾಶವೂ ಒದಗಿತು. ಮುಂದೆ ಆಕೆ ಪಿ.ಯು.ಸಿ, ಬಿ.ಎ. ಎಂ.ಎ. ಬಿಇಡ್ ವ್ಯಾಸಂಗವನ್ನು ಮುಗಿಸಿದ್ದಳು. ಈಗ ಸುಗಮ ಸಂಗೀತ ಅಭ್ಯಾಸ ಮಾಡಿ 'ಸುಗಮ ಸಂಗೀತ' ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದಾಳೆ. ಕವನಗಳ ರಚನೆಯಲ್ಲಿಯೂ ತೊಡಗಿ ಅನೇಕ ಕವಿಗೋಷ್ಠಿಗಳಲ್ಲಿಯೂ ಪಾಲ್ಗೊಂಡಿದ್ದಾಳೆ.


ನಾವಿಬ್ಬರೂ ದಾಂಪತ್ಯ ಜೀವನದ ಏಳು ಬೀಳುಗಳನ್ನೆದುರಿಸಿ ಇಪ್ಪತ್ತೈದು ವರ್ಷಗಳಲ್ಲಿ ಪರಸ್ಪರ ಅರಿವಿನಿಂದ ಬಾಳುವೆ ನಡೆಸಿದ್ದೇವೆ. ಮೊದಲಿನಿಂದಲೂ ಕನ್ನಡ ಪರ ಹೋರಾಟ, ಪತ್ರಿಕಾ ಕ್ಷೇತ್ರದಲ್ಲಿ ವೃತ್ತಿ ಪರ ಸಂಘಟನೆಗಳ ಕ್ರಿಯಾಶೀಲ ಕಾರ್ಯಕರ್ತ, ಸಾಮಾಜಿಕ ಸಮಸ್ಯೆಗಳ ಬಗೆಗೆ ಸಕ್ರಿಯವಾಗಿ ಸ್ಪಂದಿಸುವ ನನ್ನ ಜಾಯಮಾನದಲ್ಲಿ ನನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ನನ್ನಾಕೆ ನನ್ನ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿದ್ದಾಳೆ. ಸಹಕಾರ ನೀಡಲಾಗದ ಪರಿಸ್ಥಿತಿಯಲ್ಲಿ ವಿರೋಧ ಮಾಡದೆ ತನ್ನ ಪಾಡಿಗೆ ಇರುತ್ತಾಳೆ. ನನ್ನ ವೃತ್ತಿಪರ ಹಾಗೂ ಸಾಮಾಜಿಕ ನಿಲುವಿನಿಂದಾಗಿ ನಾನು ಅನೇಕ ಪತ್ರಕರ್ತರು ಹಾಗೂ ಪತ್ರಿಕಾ ಮಾಲೀಕರಿಗೆ ಬೇಡದವನಾಗಿದ್ದೇನೆ. ನನಗೆ ಒಂದು ಸಣ್ಣ ಪತ್ರಿಕೆಯನ್ನು ಮಾಡುವ ಧೈರ್ಯವಿನ್ನೂ ಬಂದಿಲ್ಲ. ಪತ್ರಿಕೆ ಮಾಡಿ ಸ್ವಾಭಿಮಾನದಿಂದ ಬದುಕಲು ಸಾಧ್ಯವೇ ಎಂಬ ಅಳುಕು ನನ್ನನ್ನು ಕಾಡಿಸುತ್ತಿದೆ.

–ಎಚ್. ರಾಮಣ್ಣ ಕೋಡಿಹೊಸಹಳ್ಳಿ
ಅಧ್ಯಕ್ಷ
ಕನ್ನಡ ಸಂಘರ್ಷ ಸಮಿತಿ (ನೋಂ)
ಸಂಪರ್ಕ ವಿಳಾಸ: ಎ.೩೩/೨
ಜೀವನ ಬಿಮಾ ನಗರ, ಬೆಂಗಳೂರು ೫೬೦ ೦೭೫

ಮಠದಲ್ಲಿ ಮದುವೆ

ಸ್ವಂತದ ಬಗ್ಗೆ ಅದರಲ್ಲೂ ಪ್ರೀತಿ ಮತ್ತು ಮದುವೆಯಂಥ ಅತ್ಯಂತ ವೈಯಕ್ತಿಕವೂ ಖಾಸಗಿಯೂ ಆದ ವಿಚಾರದ ಬಗ್ಗೆ ಬರೆಯುವುದು ಸ್ವಲ್ಪ ಕಷ್ಟದ ಕೆಲಸ. ನಾವು ನಿರೂಪಿಸುವ ಕೆಲವು ನೋವುಗಳು ಕಾಲದ ಹರಿವಿನಲ್ಲಿ ತಮ್ಮ ಮೊನಚನ್ನು ಕಳೆದುಕೊಳ್ಳಬಹುದು. ಇನ್ನು ಕೆಲವು ವಿಚಾರಗಳು ನಮ್ಮ ವೈಯಕ್ತಿಕತೆಯ ಗುಂಗಿನಲ್ಲಿ ವೈಭವೀಕೃತವಾಗಬಹುದು. ಕೆಲವೊಮ್ಮೆ ನಮ್ಮ ಅಪಕ್ವತೆಗಳನ್ನು ನಿರೂಪಿಸಲು ನಮಗೇ ಲಜ್ಜೆಯಾಗಲೂಬಹುದು. ಇದಕ್ಕೆಲ್ಲ ನಾನೇನೂ ಹೊರತಲ್ಲ. ಆದರೂ ನಡೆದ ದಾರಿಯ ಹೂವು ಮುಳ್ಳುಗಳನ್ನು ಒಮ್ಮೆ ತಿರುಗಿ ನೋಡಬಹುದು.

ನಾವಿಬ್ಬರೂ ವಿಭಿನ್ನ ಸಾಮಾಜಿಕ ಹಿನ್ನೆಲೆಯಿಂದ ಬಂದವರು. ನನ್ನ ತಾಯಿತಂದೆಗಳು ಹಳೆಯ ಮೈಸೂರಿನ ಸುಶಿಕ್ಷಿತ ಸರ್ಕಾರಿ ನೌಕರರು. ಎರಡೂ ಕಡೆಯ ಅಜ್ಜ ಅಜ್ಜಿಯರು ಬದುಕಿದ್ದ ಸಂಪ್ರದಾಯಸ್ಥ ಬ್ರಾಹ್ಮಣಕುಟುಂಬ ನಮ್ಮದು. ನಾನು ಹೆಚ್ಚಾಗಿ ಬೆಳೆದದ್ದೆಲ್ಲ ನನ್ನ



ತಾಯಿಯ ತಂದೆಯ ಮನೆಯಲ್ಲಿ. ನನ್ನ ಅಜ್ಜ ಒಂದು ಟ್ಯುಟೋರಿಯಲ್ ಕಾಲೇಜನ್ನೂ, ಒಂದು ಪ್ರಕಾಶನ ಸಂಸ್ಥೆಯನ್ನೂ ಇನ್ನೂ ಕೆಲವು ಹುಚ್ಚು ಸಾಹಸಗಳನ್ನು ಮಾಡಿ ಕೊನೆಗೆ ಸಾಲದಲ್ಲಿ ಮುಳುಗಿ ತಮ್ಮ ಒಬ್ಬಳೇ ಮಗಳಾದ ನನ್ನ ತಾಯಿಯ ಆಸರೆಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದರು. ಹಲವು ಆಸಕ್ತಿಗಳ ಹುಚ್ಚು ಪ್ರೀತಿಯ ವ್ಯಕ್ತಿ. ನನಗೆ ಸಾಹಿತ್ಯದ ರುಚಿಯನ್ನು ಚಿಕ್ಕಂದಿನಿಂದಲೇ ಕಲಿಸಿದರು. ನನ್ನ ಅಜ್ಜಿ ಕಸೂತಿ ಅಡಿಗೆಗಳಲ್ಲಿ ಪ್ರವೀಣೆ. ತಾತನ ಆರ್ಥಿಕ ಸ್ಥಿತಿ ಕೆಟ್ಟಾಗ ದುಡಿದು, ಅವರನ್ನು ಕೆಲಕಾಲ ಸಲಹಿದ ಟಲಗಾತಿ. ಹಬ್ಬಗಳು, ತಿಥಿಗಳು ಹಲವು ಜನರು ಸೇರಿ ಊಟ ಮಾಡುವ ಪ್ರಸಂಗಗಳು ಹೆಚ್ಚು ಹೆಚ್ಚು ಇರುತ್ತಿದ್ದ, ಮಡಿ ಮೈಲಿಗೆಯ ಕಟ್ಟು ಕಟ್ಟಳೆಗಳೂ ಅಷ್ಟೇ ಬಿಗಿಯಾಗಿದ್ದ ಕುಟುಂಬ ನನ್ನಜ್ಜ ಅಜ್ಜಿಯರದು.

ನನ್ನನ್ನು ಮದುವೆಯಾಗಿರುವ ಮಂಜಪ್ಪನವರ ತಂದೆತಾಯಿಗಳು ಶಿವಮೊಗ್ಗ ಜಿಲ್ಲೆಯ ಹಿತ್ತಲ ಎಂಬ ಸಣ್ಣ ಹಳ್ಳಿಯ ವೀರಶೈವ ಕೃಷಿಕ ಸಮಾಜಕ್ಕೆ ಸೇರಿದವರು. ಮಂಜಪ್ಪ ಆ ಕುಟುಂಬದ ಪ್ರಥಮ ಪದವೀಧರರು. ಅವರೂರಿನ ಓದಿದ ಹುಡುಗರೆಲ್ಲ ಒಂದು ಕುಟುಂಬದವರೇನೋ ಎಂಬಂತೆ ಇರುವರು. ನಗರದ ಸಾಮಾಜಿಕ ಸಂಬಂಧಗಳಿಗಿಂತಲೂ ಅವರೂರಿನ ಸಾಮಾಜಿಕ ಸಂಬಂಧಗಳು ಆಳವಾದವು.

ನಮ್ಮ ಪ್ರೀತಿ ನಾವು ಓದುತ್ತಿರುವಾಗ ಬೆಳೆಯಿತು. ನಾವು ಬೆಳೆದ ವಾತಾವರಣದಲ್ಲಿ ಒಂದೆರಡು ಅಂತರಜಾತೀಯ ವಿವಾಹಗಳನ್ನು ನಾವು ನೋಡಿದ್ದೆವು. ನಮಗೆ ಅವರ ಬಗ್ಗೆ ಪ್ರೀತಿ–ಗೌರವಗಳಿದ್ದರೂ ನಮ್ಮ ಮದುವೆ ಕೇವಲ ತಾತ್ವಿಕ ಪ್ರೇರಣೆಯಿಂದ ಆದುದಲ್ಲ. ಜಾತ್ಯತೀತವಾದ ಮನಸ್ಸು ಮತ್ತು ಜಾತ್ಯತೀತವಾದ ಜೀವನ, ಜಾತಿಯೊಳಗೆ ಮದುವೆಯಾದವರಿಗೂ ಇರಬಹುದು. ಜಾತಿ ಬಿಟ್ಟು ಮದುವೆಯಾದವರಿಗೆ ಇಲ್ಲದೆಯೂ ಇರಬಹುದು.

ನಮ್ಮ ವಿದ್ಯಾಭ್ಯಾಸ ಮುಗಿದಾಗ ನಮ್ಮ ಪ್ರೀತಿಯ ವಿಷಯವನ್ನು ತಿಳಿದು ನಮಗೆ ಉದ್ಯೋಗದ ಅವಕಾಶವನ್ನು ಒದಗಿಸಿದವರು ತರಳಬಾಳು ವಿದ್ಯಾಸಂಸ್ಥೆಯ ಅಧ್ಯಕ್ಷರೂ ಸಿರಿಗೆರೆ ಮಠದ ಗುರುಗಳೂ ಆಗಿದ್ದ ತರಳ ಬಾಳು ಜಗದ್ಗುರುಗಳವರು. ನಮ್ಮ ಮದುವೆಯಲ್ಲಿ ನಮ್ಮ ಬಂಧುಗಳಿಗಿಂತಲೂ ಹೆಚ್ಚು ಸಂಭ್ರಮದಿಂದ ಓಡಾಡಿ, ದೂರದೂರದ ಊರುಗಳಿಂದ ಬಂದು ಹೋದುದಲ್ಲದೆ, ಅವರ ಊರಿನ ಸಂಪ್ರದಾಯಸ್ಥರ ವಿರೋಧವಿದ್ದರೂ ನಮ್ಮ ಮೆರವಣಿಗೆ ಮಾಡಿದವರು ನಮ್ಮ ಮಿತ್ರರು. ಮಂಜಪ್ಪನವರ ಮನೆಯಲ್ಲಿ ಯಾವುದೇ ನವವಿವಾಹಿತರನ್ನು ಮನೆ ದುಂಬಿಸಿಕೊಳ್ಳುವಂತೆ ನನ್ನನ್ನು ಮನೆದುಂಬಿಸಿಕೊಳ್ಳಲು ಕಾರಣರಾದವರು ಆ ಊರಿನ ಹಿರಿಯರಾದ ಶ್ರೀ ವೀರಬಸಪ್ಪಗೌಡರು. ನನ್ನ ನಂತರ ಇದ್ದ ಇಬ್ಬರು ತಂಗಿಯರ ಮದುವೆಯ ಸಮಸ್ಯೆ ತಮ್ಮ ಕಣ್ಣೆದುರಿಗಿದ್ದರೂ ತಮ್ಮ ನೋವನ್ನೆಲ್ಲ ನುಂಗಿಕೊಂಡು ನನ್ನ ಮದುವೆಗೆ ಬಂದು, ತಮ್ಮ ಮಿತಿಗಳಲ್ಲಿ ನಮಗೊಂದು ಪುಟ್ಟ ಆರತಕ್ಷತೆ ಮಾಡಿ, ತಂದೆಯ ವಿರೋಧವನ್ನೂ ಸಹಿಸಿ, ನಮ್ಮನ್ನು ನಮ್ಮನ್ನು ಆದರಿಸಿದವರು ನನ್ನ ತಾಯಿ. ನನ್ನ ಮೊದಲ ಬಾಣಂತನವನ್ನು ಅತ್ಯಂತ ಅಕ್ಕರೆಯಿಂದ ದೇಹ ಶ್ರಮ ಪಟ್ಟು ಮಾಡಿದವರು ನನ್ನ ಅಜ್ಜಿ. ಇವರ್ಯಾರೂ ಸಾಂಪ್ರದಾಯಿಕ ಜಾತಿ ವ್ಯವಸ್ಥೆಯನ್ನು ಕಾಣುವಂತೆ ಉಲ್ಲಂಘಿಸಿದವರಲ್ಲ. ಸಾಂಪ್ರದಾಯಿಕ ವ್ಯವಸ್ಥೆಯೊಳಗೇ ಬಂಡಾಯಕ್ಕೆ ಆಸರೆ ಇತ್ತವರು.

ನಮ್ಮ ಬಂಧುವರ್ಗದಲ್ಲಿ ಯಾರೂ ಪ್ರಕಟವಾಗಿ, ಎದುರಿಗೆ ನಮ್ಮ ವಿವಾಹವನ್ನು ವಿರೋಧಿಸಲಿಲ್ಲ. ಕೆಲವರು ನಮ್ಮ ಅನುಪಸ್ಥಿತಿಯಲ್ಲಿ ಟೀಕಿಸಿದರು. ನಮ್ಮಿಬ್ಬರಿಗೂ ಇದ್ದ ಮುಖ್ಯ ಸಮಸ್ಯೆ, ನಮಗೆ ಅವಿವಾಹಿತರಾದ ತಂಗಿಯರಿದ್ದುದು. ತಂಗಿಯರ ಮದುವೆ ಹೇಗೆ ಆಗುವುದೋ ಎಂಬ ಅಳುಕು ನಮಗೂ ಸಹ ಇದ್ದಿತು. ಈ ಸಂದರ್ಭದಲ್ಲಿ ನಮಗೆ ಮತ್ತೆ ಆಸರೆಯಾಗಿ ನಿಂತವರು ಹಿರಿಯ ತರಳಬಾಳು ಜಗದ್ಗುರುಗಳವರು. "ಜಾತಿಯನ್ನು ಹುಟ್ಟುಹಾಕಿದ್ದು ಮಠಗಳು; ಜಾತಿ ನಿವಾರಣೆಯ ಈ ಕೆಲಸಕ್ಕೆ ಸಹಾಯವಾಗಬೇಕಾದ್ದು ಮಠಗಳ ಕೆಲಸ" ಎಂಬ ಉನ್ನತ ವಿಚಾರದಿಂದ ಅವರು ನಮ್ಮ ಮದುವೆ ಮಾಡಿಸಿ ನಮ್ಮ ವೈಯಕ್ತಿಕ ವಿವಾಹ ವೆಚ್ಚಕ್ಕೆ ಸಾಲವನ್ನು ಕೊಟ್ಟು, ಮಂಜಪ್ಪನವರ ತಂಗಿ ಸಹ ಅಂತರ್ಜಾತಿ ವಿವಾಹದ ಆದರ್ಶನವನ್ನು ಒಪ್ಪಿಕೊಳ್ಳುವಂಥ ಒಂದು ಸುಸಂಸ್ಕೃತ ಕುಟುಂಬದ ಸಂಬಂಧವನ್ನು ತೋರಿಸಿಕೊಟ್ಟರು. ಮಠ ಮಾನ್ಯದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಇಂಥ ಅನೇಕ ಬಂಡಾಯದ ಕೆಲಸಗಳನ್ನು ಮಾಡಿದ ಅವರ ನೆನಪು ಮತ್ತು ಪ್ರೀತಿಗಳು ನಮ್ಮ ಬದುಕಿನ ಶ್ರೀಮಂತ ಅನುಭವಗಳಲ್ಲಿ ಒಂದು.


ನಾವು ನಡೆದ ದಾರಿಯಲ್ಲಿ ಮುಳ್ಳುಗಳಿಲ್ಲವೆಂದಲ್ಲ. ಸಾಮಾಜಿಕ ಸಮಾರಂಭಗಳಲ್ಲಿ ನಡೆಯುವ ಕೆಲವು ಸಣ್ಣ ನಿರ್ಲಕ್ಷ್ಯಗಳು, ಕುಟುಂಬ ವರ್ಗದೊಳಗೇ ನಡೆಯುವ ಸಣ್ಣ ಭೇದನೀತಿಗಳು ಎಲ್ಲ ಸಂಸಾರದಲ್ಲೂ ಇರುತ್ತವೆ. ಜಾತಿಯೊಳಗಿನ ಮದುವೆಯಾಗಲಿ, ಜಾತಿ ಬಿಟ್ಟ ಮದುವೆಯಾಗಲಿ ಕುಟುಂಬದವರ ಒಪ್ಪಿಗೆ ಪಡೆಯದೆ ಮದುವೆಯಾದಾಗ ಕೆಲವು ಸಾಂಪ್ರದಾಯಿಕ ಅನುಕೂಲಗಳಿಗೆ ದಂಪತಿಗಳು ಎರವಾಗಬೇಕಾಗುತ್ತದೆ. ಅದನ್ನು ತಡೆದುಕೊಳ್ಳುವ ಗಟ್ಟಿ ಮನಸ್ಸು ಮತ್ತು ಆರ್ಥಿಕ ಸ್ವಾವಲಂಬನೆ ಮತ್ತು ಬಂಧು ಬಳಗದವರಿಂದ ಏನನ್ನೂ ನಿರೀಕ್ಷಿಸದೆ, ಅವರಿಗೆ ತಮ್ಮಿಂದಾದ ಸಹಾಯವನ್ನು ಅವರಿಗೆ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಪ್ರೀತಿ ವಿಶ್ವಾಸಗಳಿಗೆ ಯಾವ ಕೊರತೆಯೂ ಆಗುವುದಿಲ್ಲ. ಆರ್ಥಿಕ ಸ್ವಾವಲಂಬನೆಯಿಲ್ಲದೆ ಸಂಬಂಧಿಗಳ ಕೃಪೆಯಲ್ಲಿ ಬದುಕಬೇಕಾದ ಒಂದೆರಡು ಇಂಥ ಕುಟುಂಬಗಳನ್ನು ನಾನು ನೋಡಿದ್ದೇನೆ. ಮಗುವಿಗೆ ಅನಾರೋಗ್ಯವೆಂದು ಔಷಧಿ ಕೊಡಿಸಲು ಹಣ ಕೈಗಡ ಕೇಳಬಂದ, ಗಂಡನ ದೂರ ಸಂಬಂಧಿಗಳ ಮನೆಯಲ್ಲಿ ಸಂಪಾದನೆಯಿಲ್ಲದೆ ಬಾಣಂತನದ ಅವಧಿಯನ್ನು ಕಳೆಯಬೇಕಾದ ಇಬ್ಬರು ಹುಡುಗಿಯರ ಚಿತ್ರಗಳು ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿವೆ.

ಜಾತಿಯು ಇಂದು ಕೇವಲ ವಿವಾಹ ವ್ಯವಸ್ಥೆಯ ಮೂಲಕ ಉಲ್ಲಂಘಿಸಬೇಕಾದ ಸಾಮಾಜಿಕ ಕೆಡುಕಾಗಿ ಉಳಿದಿಲ್ಲ. ಓಟು ಹಾಕುವಾಗ, ಕೆಲಸ ಕೊಡುವಾಗ, ಕಂಟ್ರಾಕ್ಟು ಕೊಡುವಾಗ ಅರ್ಹತೆಗಿಂತಲೂ ಉಳಿದ ವಿಷಯಗಳನ್ನು ನೋಡುವ ಪರಿಸ್ಥಿತಿ ಈಗ ಇದೆ. ಇಂಥ ಅನೇಕ ಸಾಮಾಜಿಕ ಪಿಡುಗುಗಳಲ್ಲಿ ಜಾತಿಯೂ ಒಂದು ಆಂಶಿಕ ಪಿಡುಗೆಂದೇ

ನನ್ನ ಭಾವನೆ. ಈಗ ನಮ್ಮ ಮದುವೆಯಾಗಿ ಇಪ್ಪತ್ನಾಲ್ಕನೇ ವರ್ಷ ನಡೆಯುತ್ತಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ನಮಗೆ ಹೇಳಿಕೊಳ್ಳುವಂಥ ವಿಶೇಷ ಸಮಸ್ಯೆಗಳೇನೂ ಇಲ್ಲ ಅಥವಾ ನಮಗಿರುವ ಸಮಸ್ಯೆಗಳಾವುವೂ ಕೇವಲ ಅಂತರ್ಜಾತೀಯ ವಿವಾಹದಿಂದ ಬಂದುವಲ್ಲ. ಈ ಜನಾರಣ್ಯದಲ್ಲಿ "ಒಂದು ಹೆಣ್ಣಿಗೊಂದು ಗಂಡು ಹೇಗೋ ಏನೋ ಹೊಂದಿಕೊಂಡು ಕಷ್ಟ ಸಹಿಸಿ ಬದುಕುವಾಗ'' ಯಾರಿಗೆ ಬೇಕಾದರೂ ಬರಬಹುದಾದವು. ಅದಕ್ಕೇ ಅಡಿಗರಂಥವರು "ನಿನಗೆ ನೀನೇ ಗೆಳೆಯ ನಿನಗೆ ನೀನೇ'' ಎಂದರೆ ನಾನು "ನನಗೆ ನೀನೂ ಗೆಳೆಯ ನಿನಗೆ ನಾನೂ'' ಎನ್ನುತ್ತೇನೆ. "ನೀ ನನಗಿರುವುದರಿಂದಲೇ ನಾನಿನಗೆ'' ಎಂಬುದು ನನ್ನ ಧ್ಯೇಯ ದರ್ಶನ ಎಲ್ಲವೂ.

– ಸ. ಉಷಾ
ಕನ್ನಡ ಪ್ರಾಧ್ಯಾಪಕರು,
ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ.

ಊರಲ್ಲಿ ಮೆರವಣಿಗೆ



ನಾನು ಮಧ್ಯಮ ವರ್ಗದ ಕುರುಬ ಜಾತಿಗೆ ಸೇರಿದ ಕುಟುಂಬದಲ್ಲಿ ಜನಿಸಿದೆ. ನಮ್ಮ ತಂದೆ ಭದ್ರಾವತಿಯ ವಿ.ಐ.ಎಸ್.ಎಲ್. ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದರು. ನನಗೆ ಇಬ್ಬರು ಅಕ್ಕಂದಿರು ಹಾಗೂ ಒಬ್ಬ ಅಣ್ಣ, ನಾನೇ ಕಡೆಯವಳು. ನಮ್ಮ ತಂದೆ ಪೂಜೆ ಪುನಸ್ಕಾರಕ್ಕಿಂತ "ಕಾಯಕವೇ ಕೈಲಾಸ'' ಎಂಬ ಮಾತಿನಲ್ಲಿ ನಂಬಿಕೆ ಇಟ್ಟವರು ಹಾಗೂ ಕರ್ತವ್ಯನಿಷ್ಠ, ಪ್ರಾಮಾಣಿಕತೆ, ಶಿಸ್ತನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರಲ್ಲದೆ, ಸರಳತೆಯನ್ನು ಮೈಗೂಡಿಸಿಕೊಂಡವರು. ನಮಗೆ ಅವರನ್ನು ಕಂಡರೆ ಭಯ ಹಾಗೂ ಗೌರವ. ತಾಯಿ ಎಲ್. ಎಸ್.ವರೆಗೆ ಓದಿದ್ದರು. ಕತೆ (ಕಾದಂಬರಿ) ಪುಸ್ತಕಗಳನ್ನು ಹಾಗೂ ಪತ್ರಿಕೆಗಳನ್ನು ಓದುವ ಹವ್ಯಾಸ ಉಳ್ಳವರು. ಸ್ತ್ರೀಯರಿಗೆ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯ ಅಗತ್ಯ ಎಂಬ ಅಭಿಪ್ರಾಯ ಉಳ್ಳವರು. ನನ್ನ ಬಾಲ್ಯ, ಸಂತೋಷವಾಗಿ ಸ್ವತಂತ್ರವಾಗಿ ಉತ್ತಮ ಸ್ನೇಹಿತರ ಸಹವಾಸದಲ್ಲಿ ಕಳೆಯಿತು. ನಾನು ಬಾಲಕಿಯರ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಲವಲವಿಕೆಯಿಂದ ಕೂಡಿದ, ಚುರುಕಾದ, ಸಂತೋಷವಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ. ಯುವ ಶಿಕ್ಷಕಿಯರನ್ನು ಕಂಡು, ನಾನೂ ಶಿಕ್ಷಕಿಯಾಗಿ ಸೇವೆ ಸಲ್ಲಿಸಬೇಕೆಂಬ ಗುರಿಯನ್ನು ಇಟ್ಟುಕೊಂಡೆ. ಮನೆಯಲ್ಲಿ ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಲ್ಲ, ರೀತಿ ರಿವಾಜುಗಳ ಸಂಕೋಲೆಗಳಿಲ್ಲ. ಹೊರಗೆ ಉತ್ತಮ ಗೆಳತಿಯರ ಸಹವಾಸದಿಂದ ಆರಾಮವಾಗಿ ಸ್ವತಂತ್ರವಾಗಿ ಸಂತೋಷವಾಗಿ ಕಾಲ ಕಳೆಯುತ್ತಿದ್ದ ನನಗೆ ಪುಸ್ತಕಗಳನ್ನು ಓದುವ ಹವ್ಯಾಸವಿತ್ತು. ಪ್ರೌಢಶಾಲೆಯ ಮಟ್ಟದಲ್ಲೆ ತ್ರಿವೇಣಿ, ಎಂ. ಕೆ. ಇಂದಿರಾ, ಜಯಲಕ್ಷ್ಮಿ ಇತ್ಯಾದಿ ಸ್ತ್ರೀ ಲೇಖಕಿಯರ ಪುಸ್ತಕಗಳನ್ನೆಲ್ಲಾ ಓದಿ ಮುಗಿಸಿದ ನಾನು, ಪಿ.ಯು.ಸಿ. ಹೊತ್ತಿಗೆ ಶಿವರಾಮಕಾರಂತರ ಕಾದಂಬರಿಗಳನ್ನು ಓದಿ ಅವರ ವಿಚಾರಧಾರೆಗಳಿಗೆ ಮನಸೋತೆ. ಸಾಕಷ್ಟು ಬಂಗಾಳಿ ಕಾದಂಬರಿಗಳನ್ನು ನಾನು ಓದುತ್ತಿದ್ದೆ. ಅಲ್ಲದೆ ನಮ್ಮ ಸಮಾಜದ ಸಾಮಾಜಿಕ ಪಿಡುಗುಗಳಾದ ಜಾತಿ, ಧರ್ಮ, ಮೂಢನಂಬಿಕೆಗಳು, ಸಂಪ್ರದಾಯ ಹಾಗೂ ಸ್ತ್ರೀ ಶೋಷಣೆಗಳ ಬಗ್ಗೆ ಚಿಂತಿಸುತ್ತಿದ್ದೆ ಹಾಗೂ ಅವುಗಳನ್ನು ವಿರೋಧಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡೆ.

ನಾನು ಬಿ.ಎ. ಓದಿದ್ದು ಭದ್ರಾವತಿಯ ಭದ್ರಾ ಕಲಾ ಕಾಲೇಜಿನಲ್ಲಿ. ನಮ್ಮದು ಮೊದಲನೆ ತಂಡವಾಗಿದ್ದರಿಂದ ಅಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು, ನಮ್ಮಲ್ಲಿ ಅನ್ಯೋನ್ಯತೆ ಇತ್ತು. ಉತ್ತಮ ಯುವ ಉಪನ್ಯಾಸಕರ ಮಾರ್ಗದರ್ಶನ ಸಿಕ್ಕಿತು. ಒಂದು ಕಡೆ ಕ್ರಾಂತಿಕಾರಿ ವಿಚಾರಗಳನ್ನು ನಮ್ಮಲ್ಲಿ ಬಡಿದೆಬ್ಬಿಸಿದ ಪ್ರೊ. ಬಿ. ಕೃಷ್ಣಪ್ಪ ಕನ್ನಡ ಉಪನ್ಯಾಸಕರಾದರೆ, ಇನ್ನೊಂದು ಕಡೆ ಗಾಂಧೀವಾದಿ, ರಾಜ್ಯಶಾಸ್ತ್ರ ಉಪನ್ಯಾಸಕರಾದ ವಾಸುದೇವ್ ನನ್ನಲ್ಲಿ ಗಾಂಧೀಜಿಯ ಬಗ್ಗೆ ಗೌರವ ಮೂಡಿಸಿದರು.

ನಾನು ಬಿ.ಎ. ಓದುತ್ತಿದ್ದಾಗ ನಮ್ಮ ತಂದೆಯ ಹಠಾತ್ ಮರಣ ನನಗೆ ಮರೆಯಲಾರದ ಮಾನಸಿಕ ಆಘಾತ. ನನಗೆ ಪುನಃ ಚೇತನ ನೀಡಿದ್ದೇ ಪುಸ್ತಕಗಳು. ಶಿಕ್ಷಕಿಯಾಗಬೇಕೆಂದಿದ್ದ ನಾನು, ಬಿ.ಎಡ್.ಗೆ ಸೇರಿದೆ. ನನ್ನದು ಇಂಗ್ಲಿಷ್ ಮತ್ತು ಇತಿಹಾಸ ಮುಖ್ಯ ವಿಷಯವಾಗಿತ್ತು. ಒಮ್ಮೆ ನಮ್ಮ ಗುಂಪಿನ ವಿದ್ಯಾರ್ಥಿಗಳೆಲ್ಲಾ ಉಪನ್ಯಾಸಕರು ಬರದಿದ್ದ ಕಾರಣ ನಮ್ಮ ಮಾತಿನ ಲೋಕದಲ್ಲಿ ಮುಳುಗಿದ್ದೆವು. ನನ್ನ ಸಹ ವಿದ್ಯಾರ್ಥಿಯಾಗಿದ್ದ 'ನಿಸಾರ್' ಜಾತಿ, ಧರ್ಮ, ದೇವರು ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಲಾರಂಭಿಸಿದರು. ಅದು ಚರ್ಚೆಗೆ ತಿರುಗಿತು. ನನಗೆ ಅವರ ಅಭಿಪ್ರಾಯಗಳು ಇಷ್ಟವಾಗಿ ನಾನು ಅವರನ್ನು ಬೆಂಬಲಿಸಿದೆ ಹಾಗೂ ಸಂಪ್ರದಾಯವಾದಿಗಳ ಕೋಪಕ್ಕೆ ಗುರಿಯಾದೆ. ಹೀಗೆ ನನ್ನ ಹಾಗೂ ನಿಸಾರ್ ಪರಿಚಯವಾಗಿ ಅದು ಸ್ನೇಹಕ್ಕೆ ತಿರುಗಿತು. ನಾವು ಕಾಲೇಜಿನಲ್ಲಿ ಸಮಯ ಸಿಕ್ಕಾಗಲೆಲ್ಲಾ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದೆವು. ಹೆಚ್ಚಾಗಿ ನಮ್ಮ ವಿಷಯ ಸಾಮಾಜಿಕ ಪಿಡುಗುಗಳು ಹಾಗೂ ಮಹಿಳಾ ಶೋಷಣೆಯ ಬಗ್ಗೆ ಇರುತ್ತಿತ್ತು. ನಂತರ ನಿಸಾರ್‌ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೌಕರಿ ಸಿಕ್ಕಿತು. ನನಗೆ ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಾಲಾ ಸಹಶಿಕ್ಷಕಿಯಾಗಿ ನೌಕರಿ ಸಿಕ್ಕ ಮೇಲೆ ನಾನು ನಿಸಾರ್‌ರವರನ್ನು ಮದುವೆಯಾಗಲು ನಿರ್ಧರಿಸಿದೆ. ೧೯೭೬ರಲ್ಲಿ ನನ್ನ ಸಹೋದರಿ ವಿಜಯಾ ಬ್ಯಾಂಕ್ ಉದ್ಯೋಗದಲ್ಲಿದ್ದವರಿಗೆ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಬಿ. ಎನ್. ಸುಬ್ಬೇಗೌಡ


ರೊಂದಿಗೆ ಧರ್ಮಸ್ಥಳದಲ್ಲಿ ಹಾರ ಬದಲಾಯಿಸುವುದರ ಮೂಲಕ ಸರಳ ವಿವಾಹವಾಗಿತ್ತು. ಇದು ನಮ್ಮ ಮನೆಯವರೆಲ್ಲರು ಒಪ್ಪಿ ಮಾಡಿದ ಸರಳ ವಿವಾಹವಾಗಿತ್ತು. ಇಂಥಹ ವಿಶಾಲ ಮನೋಭಾವ ಉಳ್ಳವರಾಗಿದ್ದ ನಮ್ಮ ಮನೆಯವರು ನನ್ನ ಮದುವೆಯನ್ನು ವಿರೋಧಿಸಲಿಲ್ಲ. ನಿಸಾರ್, ಲೋಹಿಯಾ ವಿಚಾರ ವೇದಿಕೆಯ ಸದಸ್ಯರಾಗಿದ್ದುದರಿಂದ ನಮಗೆ ವೇದಿಕೆಯ ಬೆಂಬಲವಿತ್ತು. ನಾವು ಏಪ್ರಿಲ್ ೬, ೧೯೭೮ರಂದು ಬೆಂಗಳೂರಿನ ಸಬ್–ರಿಜಿಸ್ಟರ್ ಕಚೇರಿಯಲ್ಲಿ ಮದುವೆಯಾದೆವು. ಈ ಮದುವೆಗೆ ನಮ್ಮ ಅಕ್ಕ, ಅಣ್ಣ, ಸೋದರತ್ತೆ ಮಕ್ಕಳು, ನನ್ನ ಸಹೋದ್ಯೋಗಿಗಳು ಬಂದಿದ್ದರು. ನನ್ನ ಸಹೋದ್ಯೋಗಿ ನಂಜುಂಡೇಗೌಡ ಅವರು ನಮಗೆ ಹಾರ ಬದಲಾಯಿಸಿ ಅಭಿನಂದಿಸಿದರು. ನಂತರ ಏಪ್ರಿಲ್ ೧೫, ೧೯೭೮ ರಂದು ಶಿವಮೊಗ್ಗದ ಶಿಕ್ಷಕರ ಭವನದಲ್ಲಿ ಲೋಹಿಯಾ ವೇದಿಕೆಯ ವತಿಯಿಂದ ವಿವಾಹ ಸಂಹಿತೆಯ ಆಧಾರದ ಮೇಲೆ ನಡೆಯಿತು. ಕೇವಲ ೨ ಗಂಟೆಗಳ ಅವಧಿಯಲ್ಲಿ ನಡೆದ ಈ ಸರಳ ಸಮಾರಂಭಕ್ಕೆ ಅಪಾರವಾದ ನಮ್ಮ ಬೆಂಬಲಿಗರು, ಸಂಬಂಧಿಕರು, ಸ್ನೇಹಿತರು, ಪತ್ರಕರ್ತರು ಆಗಮಿಸಿದರು. ನಮ್ಮ ಮದುವೆ ನಡೆಸಿಕೊಟ್ಟವರಲ್ಲಿ ಪ್ರಮುಖರು, ಪ್ರೊ। ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ರವಿವರ್ಮ ಕುಮಾರ್, ಸುಂದರೇಶ್, ಪ್ರೊ. ಬಿ. ಕೃಷ್ಣಪ್ಪ ಇತ್ಯಾದಿ. ಈ ಮದುವೆಗೆ ನಿಸಾರ್ ಖರ್ಚು ಮಾಡಿದ ಹಣ ಕೇವಲ ೫೦೦ ರೂ. ಗಳು. ಊಟಿಯಲ್ಲಿ ಮಧುಚಂದ್ರ ಮುಗಿಸಿದ ನಾವು, ಹೊನ್ನಾಳಿಯಲ್ಲಿ ನೆಲೆಸಿದೆವು. ನಮ್ಮ ವಿವಾಹದಿಂದ ನಮಗೆ ಹೇಳಿಕೊಳ್ಳುವ ಯಾವ ಸಮಸ್ಯೆಗಳೂ ಇಲ್ಲ. ನಮಗೆ ಇಬ್ಬರು ಮಕ್ಕಳಿದ್ದಾರೆ. ಮಗ ಫೋಪಾಲ್ ಮಗಳು ಪ್ರಿಯಾಂಕ. ನಾವು ರಾಷ್ಟ್ರೀಯ ಹಬ್ಬಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದೇವೆ. ನಾವು ಶಾಲೆಗೆ ಸೇರಿಸುವಾಗ ಧರ್ಮದ ಕಾಲಂನಲ್ಲಿ 'Agnostic ಎಂದು ಬರೆಸಿದ್ದೇವೆ. ನಾವು ಚೆನ್ನಾಗಿರುವುದು ನೋಡಿ ನಮ್ಮ ಸ್ನೇಹಿತರು ಕೆಲವರು ಸರಳ ಹಾಗೂ ಅಂತರ್‌ಜಾತಿಯ ವಿವಾಹ ಮಾಡಿಕೊಂಡಿದ್ದಾರೆ. ಅವರಲ್ಲಿ ಮೊದಲಿಗರು ಬೆಂಗಳೂರಿನಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ನಂಜುಂಡೇ ಗೌಡ. ನಮ್ಮ ಮನೆಗೆ ಎಲ್ಲಾ ಜಾತಿ, ಧರ್ಮಗಳ ಜನರು ಬರುತ್ತಾರೆ. ಶಿವಮೊಗ್ಗದಲ್ಲಿ ಒಮ್ಮೆ ಮತೀಯ ಗಲಭೆಗಳು ನಡೆದಾಗ ನಮ್ಮ ಸ್ನೇಹಿತರೊಬ್ಬರು ನಮ್ಮಿಬ್ಬರನ್ನು ಒಂದು ಮೆರವಣಿಗೆ ಮಾಡಿಸಿದ್ದರು. ನಿಮ್ಮನ್ನು ನೋಡಿ ನೋಡಿಯಾದರೂ ಜಾತಿ, ಧರ್ಮದ ಹೆಸರಿನಲ್ಲಿ ಹಿಂಸೆ, ಲೂಟಿ, ಕೊಲೆ, ರಕ್ತಪಾತ ಮಾಡುವವರು ಬುದ್ಧಿಯನ್ನು ಕಲಿಯಬೇಕು ಎಂದಿದ್ದರು.

ನಮ್ಮ ವಿಶಾಲವಾದ ಜಾತ್ಯತೀತ ಭಾವನೆ, ಮಿಶ್ರ ಕುಟುಂಬದ ಅಭಿಪ್ರಾಯ, ಸಜ್ಜನರ, ಸಾಹಿತಿಗಳ ಸಹವಾಸ, ಸ್ನೇಹಿತರ ಬೆಂಬಲದಿಂದ ನಮ್ಮ ಜೀವನ ಯಾವ ತೊಂದರೆಯು ಇಲ್ಲದೆ, ಸಂತೋಷದಿಂದ ಸಾಗುತ್ತಿದೆ. ಯಾವತ್ತೂ ನಮ್ಮಿಬ್ಬರ ನಡುವೆ ಜಾತಿ, ಭಾಷೆ ಧರ್ಮಗಳ ಬಗ್ಗೆ ವಿರಸ ಬಂದಿಲ್ಲ. ನಮ್ಮ ಮನೆ ಭಾಷೆ ಕನ್ನಡ. ಮಕ್ಕಳಿಬ್ಬರು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ನಾವು ಅವರನ್ನು ಸ್ವತಂತ್ರವಾಗಿ ಬೆಳೆಯಲು (ಜಾತಿ ಧರ್ಮಗಳ ಕಟ್ಟುಪಾಡುಗಳಿಲ್ಲದೆ) ಅವಕಾಶ ಮಾಡಿಕೊಟ್ಟಿದ್ದೇವೆ.

ಜಾತ್ಯತೀತ ಭಾವನೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡ ನಮಗೆ ಮಾನವ ಮಂಟಪದ ಸ್ಥಾಪನೆ ಸಂತೋಷವನ್ನುಂಟುಮಾಡಿದೆ. ಮುಂದಿನ ಜನಾಂಗಕ್ಕೆ ಕುವೆಂಪುರವರ "ವಿಶ್ವ ಮಾನವತವಾದ"ದ ಅಗತ್ಯವಿದೆ. ಈ ದಿಸೆಯಲ್ಲಿ ನಿಮ್ಮ ಪ್ರಯತ್ನ ಅಗತ್ಯ ಹಾಗೂ ಅನಿವಾರ್ಯ. ನಿಮ್ಮ ಪ್ರಯತ್ನದಲ್ಲಿ ನಮ್ಮ ಸಹಾಯಹಸ್ತವಿದೆ ಹಾಗೂ ನನಗೆ, ನಾನು ನಡೆದು ಬಂದ ದಾರಿಯನ್ನು ಹಿಂತಿರುಗಿ ನೋಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳು.

–ಮನೋರಮ ನಿಸಾರ್ ಅಹಮದ್
C/o ನಿಸಾರ್ ಅಹಮದ್
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳ ಕಚೇರಿ,
ಬಿ. ಹೆಚ್. ರಸ್ತೆ, ಶಿವಮೊಗ್ಗ.

ಕರಿ ಜಾತಿ ಬಿಳಿ ಜಾತಿ!



ನನ್ನ ಮತ್ತು ಗೋವಿಂದಯ್ಯನ ಒಡನಾಟದ ಹತ್ತೊಂಬತ್ತು ವರ್ಷಗಳು ಜಗಳ ಪ್ರೀತಿಗಳೊಡನೆ ರಾಜಿ ಮಾಡಿಕೊಂಡು ಕಳೆಯುತ್ತಾ ಬಂದಿವೆ. ಹದಿನೆಂಟರ ಚೆಲುವೆ, ಹದಿಮೂರರ ಚಿರಂತನ ನಮ್ಮ ಪ್ರೀತಿಯ ಮಕ್ಕಳು. ಕೊಡಗಿನ ಗುಡ್ಡಗಾಡಿನ ನನ್ನನ್ನು ಬಯಲು ಸೀಮೆಯ ಗೋವಿಂದಯ್ಯನನ್ನು ನೋಡಿದ ಗೆಳೆಯರೊಬ್ಬರು ಬೆಟ್ಟದ ನೆಲ್ಲಿಗಾಯಿ ಸಮುದ್ರದ ಉಪ್ಪು ನೀವು ಎಂದಿದ್ದರು.

ನಮ್ಮ ಊರು ದಕ್ಷಿಣ ಕೊಡಗಿನ ತಿತಿಮತಿಯ ಕಾಟೇ ಬೆಟ್ಟ. ಕೂರ್ಗಿ ಗೌಡರಾದ ಬಾರಿಯಂಡ ರಾಮಪ್ಪ, ಅಚ್ಚಮ್ಮ ನನ್ನ ಅಪ್ಪ ಅಮ್ಮ, ನಾನು ಮತ್ತು ತಮ್ಮ ಜೋಯಪ್ಪ ಇವರ ಇಳಿ ವಯಸ್ಸಿನ ಕಣ್ಮಣಿಗಳು. ಮಕ್ಕಳಿಲ್ಲದ ಕೊರಗು–ದಾಯಾದಿಗಳ ಕಾಟದಿಂದ ಇದ್ದ ಬದ್ದ ಅಷ್ಟಿಷ್ಟು ಆಸ್ತಿಯನ್ನು ಮಾರಿದ ಅಪ್ಪ, ದನದ ವ್ಯಾಪಾರದಿಂದ ಎಲ್ಲವನ್ನೂ ಕಳೆದು ಕೊಂಡು, ಶ್ರೀಮಂತ ಕೊಡಗರು ಮನೆಯ ಗೇಣಿದಾರ ರೈತನಾಗಿ ದುಡಿಯ ಬೇಕಾಯಿತು. ಕೊನೆಗೊಮ್ಮೆ ಕಾಟೇಬೆಟ್ಟದ ಸುತ್ತಮುತ್ತಲಿನ ತಗ್ಗು ಮತ್ತು ಜೌಗು ನೆಲವನ್ನು ಸಾಗುವಳಿ ಮಾಡಲು ಅರಣ್ಯ ಇಲಾಖೆಯಿಂದ ಅನುಮತಿ ದೊರೆತಾಗ್ಯೂ, ಅಪಾರ ಕಷ್ಟದ ಜೀವನ. ಮುಂಗೋಪದ ವಿದ್ಯಾಭಿಮಾನ ಅಪ್ಪ, ಸ್ವಾಭಿಮಾನ ಛಲದ ಅವ್ವ ನಮ್ಮ ಅವಿದ್ಯಾವಂತ

ಗುರುಗಳು! ನಾನು ಮತ್ತು ನನ್ನ ತಮ್ಮ ಮೈಸೂರಿಗೆ ಬಂದುದು ಒಂದು ದೊಡ್ಡ ಆಕಸ್ಮಿಕ. ನಾವು ಪಿಯುಸಿ ವಿದ್ಯಾಭ್ಯಾಸ ಮುಗಿಸುವಷ್ಟರಲ್ಲಿ ಅಪ್ಪ ಕಾಯಿಲೆಯಿಂದ ಹಾಸಿಗೆ ಹಿಡಿದು ಪೂರ್ಣ ಸಂಸಾರದ ಹೊರೆ ಅವ್ವನ ಮೇಲೇ ಬಿದ್ದಿತ್ತು. ಗದ್ದೆ ಉಳುಮೆ ಒಂದನ್ನು ಬಿಟ್ಟು ಉಳಿದೆಲ್ಲ ಕೆಲಸವನ್ನು ಅವ್ವನೇ ನಮ್ಮನ್ನು ಕಟ್ಟಿಕೊಂಡು ಮಾಡಬೇಕಾಗಿತ್ತು. ಬಂಧುಗಳಾರು ನಮ್ಮ ನೆರವಿಗೆ ಇರಲಿಲ್ಲ. ಕಾಡು ಕುರುಬರು ಫಣಿಯರ ಎರವರು ನಮ್ಮ ಆತ್ಮೀಯರು. ಅಪ್ಪನಿಗೆ ಸದಾ ನಮ್ಮದೇ ಚಿಂತೆ. ನಮಗೆ ಓದು ಬರಹ ತಪಸ್ಸು ಪೂಜೆಯಂತೆ. ಕಾಡಿನ ಎಂಟತ್ತು ಮೈಲಿಗಳ ಅಂತರ ಶಾಲೆ. ಅದರೂ ನಾವು ಶಿಕ್ಷಣದ ಪ್ರಗತಿಯಲ್ಲಿ ಮುಂದು. ಶಾಲೆಯ ಊರಿನ ಜನರ ಮೆಚ್ಚಿನ ಆದರ್ಶದ ಮಕ್ಕಳು. ಪಿಯುಸಿಯ ನಂತರ ಓದುವ ಯಾವ ಮಾರ್ಗವೂ ನಮ್ಮ ಮುಂದಿರಲಿಲ್ಲ. ಈಗ ಕೆಲಸಕ್ಕಾಗಿ ಕನಸು, ಹುಡುಗಿಯರು ನರ್ಸ್ ಕೆಲಸಕ್ಕೆ, ಹುಡುಗರು ಸೈನ್ಯಕ್ಕೆ ಸೇರುವುದು ಬಡಮಧ್ಯಮ ವರ್ಗದ ಸಾಧ್ಯತೆಗಳು. ಈ ಸಂದರ್ಭದಲ್ಲಿ ನೆರವಿಗೆ ಬಂದವಳು ನನ್ನ ನೆಚ್ಚಿನ ಗುರುಗಳಾದ ನಾರಾಯಣ ಶಾಸ್ತ್ರಿಯವರ ಮಗಳು. ಅವಳು ಡಿಗ್ರಿಗೆ ಮೈಸೂರಿಗೆ ಹೊರಟಿದ್ದಳು. ಪ್ರಸಾರಂಗ ಪ್ರೆಸ್‌ನಲ್ಲಿ 'ಗಳಿಕೆ–ಕಲಿಕೆ' ಸ್ಕೀಂ ಇದೆಯೆಂದೂ ನಾನು ಅದಕ್ಕೆ ಸೇರಿಕೊಂಡು ಓದು ಮುಂದುವರೆಸಬಹುದೆಂದೂ ಇಬ್ಬರೂ ರೂಂ ಮಾಡಿಕೊಂಡು ಒಟ್ಟಿಗೆ ಇರಬಹುದೆಂದೂ ಸಲಹೆ ಇತ್ತಳು. ಆ ವರ್ಷ ಕಾಲೇಜಿನ ಅತ್ಯಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಯಾಗಿ ನಾನು ಬಹುಮಾನಗಳಿಸಿದ್ದೆ. ಉಪಾಧ್ಯಾಯರೆಲ್ಲರೂ ನಾನು ಮುಂದೆ ಓದಲೇ ಬೇಕೆಂದ, ಒತ್ತಾಸೆ ಕೊಟ್ಟರು. ನಾನು ನರ್ಸ್ ಆಗುವ ಕನಸನ್ನು ಬಿಟ್ಟು, ಮೈಸೂರು ಬಸ್ ಹತ್ತುವ ಕನಸನ್ನು ತುಂಬಿಕೊಂಡೆ. ಅಪ್ಪ ಏನಾದರೂ ಒಪ್ಪಲಿಲ್ಲ. ಅವ್ವನಿಗೆ ನನ್ನಲ್ಲಿ ಅಚಲ ವಿಶ್ವಾಸ. ಆದರೂ ಅಪ್ಪ ಯಜಮಾನನಲ್ಲವೆ? ಉಪವಾಸ ಸತ್ಯಾಗ್ರಹ ಮಾಡಿದೆ. ಅಪ್ಪ ಸೋತಿತು ಮಗಳು ಗೆದ್ದಳು.

ಜಡಿಮಳೆಯ ಒಂದು ಬೆಳಿಗ್ಗೆ ನೂರೈವತ್ತುರೂಪಾಯಿ, ಎರಡು ಜತೆ ಹಳೆ ಲಂಗ ರವಿಕೆ, ಒಂದು ಟ್ರಂಕ್ ಐದು ಕೆ.ಜಿ.ಅಕ್ಕಿಯೊಡನೆ ಮೈಸೂರಿಗೆ ಹೊರಟೆ. ನನ್ನ ತಮ್ಮನೂ ಜತೆಗೆ ಬಂದಿದ್ದ. ಅಗ್ರಹಾರದ ಒಂದು ಪುಟ್ಟ ರೂಂ ನಮ್ಮ ಮನೆಯಾಯಿತು. ಗೆಳತಿ ಕೆಲವೇ ಕೆಲವು ದಿವಸಗಳ ಅಂತರದಲ್ಲಿ ಅವತಾರ ಬದಲಾಯಿಸಿದಳು. ಅವಳು ಯಜಮಾನಿ ನಾನು ಸೇವಕಿ. ನನ್ನ ಸ್ವಾಭಿಮಾನ ಕೆಣಕಿತು. ಮಾತಿಗೆ ಮಾತು. ಆಕೆ ನನ್ನನ್ನು ಬಿಟ್ಟು ಅಕ್ಕನ ಮನೆಗೆ ಹೋದಳು. ಈಗ ಅಪ್ಪನ ಎಚ್ಚರಿಕೆಯ ಮಾತುಗಳು ಅಣಕಿಸತೊಡಗಿದವು. ರಾತ್ರಿಗಳೆಲ್ಲವೂ ಹಗಲುಗಳೇ ಆದವು. ತಂದಿದ್ದ ಹಣವನ್ನು ಮನೆ ಬಾಡಿಗೆಗಾಗಿ ಅಡ್ವಾನ್ಸ್ ಕೊಟ್ಟಿದ್ದೆ. ಅಕ್ಕಿಯೂ ಮುಗಿಯುತ್ತಿದೆ. ಮುಂದಿನ ತಿಂಗಳ ಬಾಡಿಗೆ ಕಟ್ಟಬೇಕು. ಇಲ್ಲಿ ಉಳಿಯುವಂತಿಲ್ಲ; ಊರಿಗೆ ಹೋಗುವಂತಿರಲಿಲ್ಲ. ಮುಂದೆ ಊಟಕ್ಕೇನು? ಯಾರ ಸಹಕಾರ ಕೋರುವುದು? ಇದೇ ಸಮಯಕ್ಕೆ ಸರಿಯಾಗಿ ನನ್ನ ನೆರವಿಗೆ ಬಂದವಳು ನನ್ನ ಕಾಲೇಜಿನ ಸಹಪಾಠಿ ಮಂಜುಳಾ. ಜೀವನದಲ್ಲಿ ತುಂಬಾ ನೊಂದಿದ್ದ ಆಕೆ ಸಹಜವಾಗಿಯೇ ನನ್ನ ಕಷ್ಟಗಳಿಗೆ ಸ್ಪಂದಿಸಿದಳು. ನಾನು ಮತ್ತು ಅವಳು ಇಬ್ಬರೂ ಗಳಿಕೆ–ಕಲಿಕೆ ಸ್ಕೀಂಗೆ ಆಯ್ಕೆ ಆದೆವು. ಎರಡು ಘಂಟೆಯ ಕೆಲಸ ನಲವತ್ತು ರೂ ಸಂಬಳ.

ಎರಡನೆಯ ವರ್ಷಕ್ಕೆ ನನ್ನ ತಮ್ಮ ನನ್ನೊಡನೆ ಬಂದ. ಹಣದ ಮುಗ್ಗಟ್ಟಿನಿಂದ ಅತನನ್ನು ಕಾಲೇಜಿಗೆ ಸೇರಿಸಲಾಗಲಿಲ್ಲ. ಕಾಲೇಜಿನ ಗೆಳತಿಯರ ಪರಿಚಯದಿಂದ ಅಷ್ಟಿಷ್ಟು ಜನಬಳಕೆಯಾಗಿತ್ತು. ನನ್ನ ತಮ್ಮನಿಗೆ ಸಣ್ಣಪುಟ್ಟ ಕೆಲಸ ನೋಡುತ್ತಿದ್ದೆವು. ನಾವಿದ್ದ ರೂಂ ಮೈಸೂರಿನ ಕೊಪ್ಪಲಿಗೆ ಬಂತು. ನನ್ನ ಸ್ವಾತಂತ್ರ್ಯವನ್ನೂ ಸ್ವಾಭಿಮಾನವನ್ನೂ ಆತ್ಮಸ್ಥೈರ್ಯವನ್ನೂ ಕಾಪಾಡಿಕೊಳ್ಳುವುದು ದಿನದಿನಕ್ಕೂ ಸವಾಲು ಆಗುತ್ತಿತ್ತು. ಆದರೆ ಅಪ್ಪನ ಎಚ್ಚರಿಕೆಯ ಮಾತು ಅವ್ವನ ನಂಬಿಕೆಯ ಒತ್ತಾಸೆ, ನನ್ನ ಮುಂದಿನ ನಿಚ್ಚಳ ದಾರಿಯ ಹುಡುಕಾಟ, ಅವೆಲ್ಲಕ್ಕಿಂತಲೂ ಹೆಚ್ಚಾಗಿ ನನ್ನ ಮೌನ ನನ್ನನ್ನು ಸದಾ ಕಾಪಾಡುತ್ತಾ ಬಂತು. ಅದೇ ಸಮಯಕ್ಕೆ ಸರಿಯಾಗಿ ನನ್ನ ತಮ್ಮನಿಗೆ ಆಂದೋಲನ ಪ್ರೆಸಿನಲ್ಲಿ ಕೆಲಸ ಸಿಕ್ಕಿತು. ಮುಂದಿನ ನಮ್ಮ ಬದುಕಿನ ಹೊಸದಾರಿ, ಹೊಸ ವಿಚಾರ ಪರಿಪೂರ್ಣ ಬದಲಾವಣೆಯ ಕೀರ್ತಿ ಆಂದೋಲನ ಪತ್ರಿಕೆ ಮತ್ತು ಆ ಪ್ರೆಸ್ಸಿನದ್ದು. ನನ್ನ ತಮ್ಮನೂ ಶ್ರೀ ಕೆ. ರಾಮದಾಸರ ಸಹಕಾರ ಪ್ರೋತ್ಸಾಹದಿಂದ ರಾತ್ರಿ ಕಾಲೇಜನ್ನು ಸೇರಿದ. ಇದೀಗ ಪ್ರೆಸ್ಸಿನ ಮೂಲಕ ಹಲವು ತರಾವರಿ ವಿಚಾರವಂತರ ಪರಿಚಯ ನನ್ನ ತಮ್ಮನಿಗಾಗಿತ್ತು. ಅವರ ವಿಚಾರಗಳನ್ನೂ ನಡೆನುಡಿಗಳನ್ನೂ ನನಗೆ ತಂದು ಒಪ್ಪಿಸುತ್ತಿದ್ದ. ಅವರಲ್ಲಿ ಪುರುಷೋತ್ತಮ ಶ್ರೀ ಗೋವಿಂದಯ್ಯ ಒಬ್ಬರಾಗಿದ್ದರು. ಯಾರನ್ನೂ ಅಷ್ಟು ಬೇಗ ಒಪ್ಪಿಕೊಳ್ಳದ ನನ್ನ ತಮ್ಮ ಗೋವಿಂದಯ್ಯನನ್ನು ಮೆಚ್ಚಿಕೊಂಡಿದ್ದ. ಆತನ ಕವನಗಳನ್ನು ತಂದುಕೊಟ್ಟಿದ್ದ. ಆತನ ಸರಳತನ ಮಾನವೀಯ ಗುಣಗಳನ್ನು ಹೊಗಳುತ್ತಿದ್ದ. ಒಮ್ಮೆ ಊರಿಗೆ ಹೋದಾಗ ಒಬ್ಬರು ಮದುವೆಗಾಗಿ ನನ್ನನ್ನು ಒತ್ತಾಯಿಸುತ್ತಿದ್ದರು. ನಾನು ಆತನಿಂದ ತಪ್ಪಿಸಿಕೊಳ್ಳಲು ನನ್ನ ಮದುವೆ ನಿಶ್ಚಯವಾಗಿದೆ ಆತ ಗೋವಿಂದಯ್ಯ ಎಂದು ಬಿಟ್ಟೆ. ನನಗೆ ತಕ್ಷಣ ಹೊಳೆದದ್ದು ಆತ. ನಿಜ ಹೇಳಬೇಕೆಂದರೆ ಆತನನ್ನು ನೋಡಿಯೂ ಇರಲಿಲ್ಲ! ಹೀಗೆ ಗೋವಿಂದಯ್ಯ ಗೊತ್ತಿಲ್ಲದಂತೆ ಹತ್ತಿರವಾಗುತ್ತಿದ್ದ.

ಒಮ್ಮೆ ಜೋಯಪ್ಪ ಇದ್ದಾರಾ ಎಂದು ಯಾರೋ ಬಾಗಿಲು ತಟ್ಟಿದರು. ಆಚೆ ಇಬ್ಬರು ಯುವಕರು. ಅದರಲ್ಲಿ ಒಬ್ಬರು ಗೋವಿಂದಯ್ಯ ಎಂದು ತಿಳಿಯಿತು. ಅಷ್ಟು ಹೊತ್ತಿನಲ್ಲಿ ತಮ್ಮ ಇರುವುದಿಲ್ಲವೆಂದು ಗೊತ್ತಿದ್ದರೂ, ಅಕ್ಕನನ್ನು ನೋಡಲು ಅವರ ಪ್ರಯತ್ನವಾಗಿತ್ತು. ಆತನ ಬರುವಿಕೆಯನ್ನು ನಾವು ವಿರೋಧಿಸಲಿಲ್ಲ. ಮುಖ ನೋಡಿ ಮಾತಾಡಲು ಸಂಕೋಚ ಪಡುವಂತೆ ನಟಿಸುತ್ತಾ, ಮಾತುಗಳಿಗಾಗಿ ಸಿದ್ಧನ ಹುಂಡಿಯಿಂದಲೇ ಹೊತ್ತು ತಂದಂತೆ ತಡಕಾಡುತ್ತಾ ಉಸಿರಾಡುತ್ತಿದ್ದರು. ನಾನು ಮುಕ್ತಳಾಗುತ್ತಾ ಹೋದಂತೆ ಆತನ ಸಂಕೋಚವೂ ಕಡಿಮೆಯಾಗುತ್ತಾ ಬಂತು. ನಾನು ಬಹಳ ಬೇಗ ನಂಬಿಕೆಯನ್ನು ಕಳೆದುಕೊಳ್ಳುತ್ತೇನೆ ಯಾರ ಸ್ನೇಹವೂ ಗಟ್ಟಿಯಾಗಿ ಉಳಿಯುವುದೇ ಇಲ್ಲವೆಂದು ತನ್ನ ಗುಟ್ಟನ್ನು ಹೇಳಿಕೊಂಡಿದ್ದರು. ಕೆಲಸ ಸಿಕ್ಕಿದರೂ ಊರಿಗೇ ಹೋಗುವುದನ್ನು ಬಿಟ್ಟಿದ್ದಂತೆ. ಬೀದಿ ಬಸವ ಮಗನಿಗೆ ಮದುವೆ ಮಾಡಿಸಿದರೆ ಸರಿ ಹೋಗಬಹುದೆಂದು ಈ ವಿಚಾರ ವಂತನಿಗೆ ಹೆಣ್ಣು ಹುಡುಕುತ್ತಿದ್ದರಂತೆ. ಅದ್ಯಾರೋ ಕುಂಬಳ ಕಾಯಿ ಗಾತ್ರದ ಹೊನ್ನು ಕೊಡಲು ಮುಂದೆ ಬಂದಿದ್ದರಂತೆ. ಈತನ ಆದರ್ಶ ಅದನ್ನು ತಿರಸ್ಕರಿಸಿತಂತೆ! ಈತನಿಗೆ ಸರಳವಾದ ಹೆಣ್ಣು ಬೇಕಾಗಿತ್ತಂತೆ. ಹೀಗೆ......... ಗೋವಿಂದಯ್ಯ ತನ್ನ ಅಂತರಂಗವನ್ನು ಬಹಿರಂಗಗೊಳಿಸಿದರು. ನಾನು 'ನಾವೇ ಏಕೆ ಮದುವೆ ಆಗಬಾರದು' ಎಂದು ಹೇಳಿ ಅವರು ನಾಚಿಕೊಳ್ಳುವಂತೆ ಮಾಡಿದೆ. ಆತನ ಮನಸ್ಸು ಅದನ್ನೇ ಕೇಳ ಬೇಕೆಂದಿದ್ದದ್ದು ಇಷ್ಟು ಸರಳವಾಗಿ ಸುಲಭದ ಹೆಣ್ಣಿನಿಂದ ಸಮಸ್ಯೆ ಬಗೆಹರಿದಿತ್ತು.

ಈಗ ಜಾತಿಯ ಪ್ರಶ್ನೆಬಂತು. ಆತನ ಜಾತಿ ಗೊತ್ತಾದುದು ಈಗಲೇ. ನನ್ನ ಜಾತಿ ಗೊತ್ತಾದರೆ ನೀವು ಬೇಡ ಅನ್ನುತ್ತೀರಿ ಅಂದರು. ಕಾಡು ಕುರುಬರು ನನ್ನ ಜಾತಿಯನ್ನು ಎಂದೋ ಮರೆಯುವಂತೆ ಮಾಡಿದ್ದರು. ನಾನು ನಿರ್ಧಾರ ತೆಗೆದುಕೊಳ್ಳುವುದು ಒಂದೇ ಸಲ. ಅದನ್ನ ಬದಲಾಯಿಸು ವುದೇ ಇಲ್ಲ ಎಂದೆ. ಇಲ್ಲ ನೀವು ಯೋಚಿಸಿ, ನಿಮಗೆ ಬೇಕಾದಷ್ಟು ಅವಕಾಶಗಳಿವೆ ನಾಳೆ ತೊಂದರೆಯಾಗಬಾರದು, ಮನೆಯವರು ಒಪ್ಪುತ್ತಾರಾ?

ಊರಿನವರು ಬಿಡುತ್ತಾರಾ? ಎಂದೆಲ್ಲ ತನ್ನ ಆಂತಕಗಳನ್ನು ತೋಡಿಕೊಂಡರು. ಮುದುಕರಾದ ಅಪ್ಪ ಅವ್ವನಿಗೆ ಮಕ್ಕಳಾದ ನಾವೇ ಆಧಾರ. ಅಪ್ಪ ನಮ್ಮನ್ನು ಸ್ವತಂತ್ರವಾಗಿ ಬಿಟ್ಟಿದ್ದರು. ದರ್ಪ ತೋರಿಸುವ ಅಣ್ಣಂದಿರಲಿಲ್ಲ. ನನ್ನ ತಮ್ಮ ಸಾಧು ಸ್ವಭಾವದ ಮುಗ್ಧ. ನನ್ನದೇ ಅಂತಿಮ ತೀರ್ಮಾನವೆಂದು ಗೋವಿಂದಯ್ಯನಿಗೆ ಮನವರಿಕೆ ಮಾಡಿದೆ. ಅಲ್ಲದೆ ನನಗೆ ಕೊಡಗಿನ ಜಾತಿಯ ಕಟ್ಟುಪಾಡು ಆದರ ಪ್ರಭಾವಕ್ಕಿಂತಲೂ ಕೊಡಗರ ದರ್ಪ ತಿಳಿದಿತ್ತಷ್ಟೆ ನಮ್ಮ ತಂದೆ ತಾಯಿ ನಮ್ಮ ಬಗ್ಗೆ ತುಂಬಾ ಲಿಬರಲ್ ಆಗಿರುವುದನ್ನು ತಿಳಿದು ಕೊಂಡ ನಾನು ಅವರನ್ನು ಒಪ್ಪಿಸಬಹುದು ಎಂದು ಕೊಂಡೆ. ತಮ್ಮನ ಮೂಲಕ ಮದುವೆಯ ಮಾತುಕತೆಯನ್ನು ತಿಳಿಸಿದೆ. ಯಾವ ಜಾತಿ ಎಂದಾಗ ಗೊತ್ತಿಲ್ಲ ಎಂದನಂತೆ. ನಮ್ಮ ಹಾಗೆ ಯಾರೋ ಮೈಸೂರಿನ ಕಡೆಯವರಂತೆ. ಅಲ್ಲಿ ಯಾರೂ ಯಾರನ್ನು ಜಾತಿ ಕೇಳುವುದಿಲ್ಲ. ಜಾತಿಯಿಂದ ಮೈಸೂರು ಮುಕ್ತವಾಗಿದೆ ಎಂದು ಮೈಸೂರಿಗೆ ಇಲ್ಲದ ಕೋಡುಕೊಂಬು ಮೂಡಿಸಿ ಬಂದಿದ್ದ.

ಮನೆಯಲ್ಲಿ ತಿಳಿಸಲೋಸುಗ ಗೋವಿಂದಯ್ಯನ ಒತ್ತಾಯಕ್ಕೆ ನಾನೇ ಊರಿಗೆ ಹೋದೆ. ಸಂಜೆ ಆರರ ಸಮಯ. ಅಪ್ಪ ಜಗಲಿಯ ಮೇಲೆ ನಿಂತು ಯಾರ ಮೇಲೋ ರೇಗಾಡುತ್ತಿತ್ತು. ನನ್ನನ್ನು ನೋಡಿ ಸುಮ್ಮನಾದರೂ ಸಿಟ್ಟು ಇಳಿದಿರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ "ಅಲ್ಲ ಮಗಳೇ ಅವಂಗೆ ಎಷ್ಟು ಸೊಕ್ಕು ನೀರ ಕೇಳಿ ಕೆಳಗೆ ನಿತ್ ಕುಡಿಯೋಕೊ ಬ್ಯಾಡ್ವೇ ಅಂವ ಬೆಂಚಿಲಿ ಕುದ್ರುದೊ ಹೊಲಯ! ಗಾರ್ಡ್ ಗಡ ಗಾರ್ಡ್ ಅಷ್ಟೆ ಸಸಾರ ಅವಂಗೆ!'' ಎಂದಿತು. ನನಗೆ ಕೈಕಾಲು ನಡುಗಲು ಶುರುವಾಯಿತು. ಮಾದಿಗರ ಹುಡುಗ ಅಳಿಯನಾಗುತ್ತಾನೆಂದರೆ ನನ್ನನ್ನು ಕತ್ತರಿಸಿಯೇ ಬಿಡುತ್ತೇನೆಂದು ಹೇಳಿಯೇ ಹೇಳುತ್ತಿತ್ತು! ಅಯ್ಯೋ ದೇವರು ಬೇರೆ ಹಾಳಾಗಿ ಹೋಗಿದ್ದಾನೆ. ನಾನೇನು ಮಾಡಲಿ? ಹೇಗೆ?....... ಇದ್ದಕ್ಕಿದ್ದಂತೆ ಇವರು ಬೇರೆ ಅವ್ವ, ಅಪ್ಪ ಅನ್ನಿಸಲು ತೊಡಗಿತು. ಅಪ್ಪನ ಹಠ ಗೊತ್ತಿತ್ತು. ನನ್ನೊಡನೆ ಬರಲು ಒಪ್ಪದೆ ಬೇಕಾದರೆ ದೇಶಾಂತರ ಹೋಗಿ ಸಾಯುತ್ತೇನೆಂದು ಮನೆ ಬಿಟ್ಟು ಹೋಗಿ ಬಿಡುವುದು ಗ್ಯಾರಂಟಿ ಎಂದು ಅರ್ಥವಾಯಿತು. ಬದುಕಿನ ಪೂರ್ತಿ ಹೋರಾಡಿ ನೊಂದವರಿಗೆ, ನೋವು ಕೊಡುವುದು ಸರಿ ಅಲ್ಲ ಅನಿಸಿತು. ಅಪ್ರಿಯ ಸತ್ಯವನ್ನು ಮರೆ ಮಾಚಿದರೆ ಹೇಗೆ? ಹೇಗೂ ಮೈಸೂರಿಗೆ ಬಂದರೆ ಅವರಿಗೆ ಜಾತಿ ಪತ್ತೆ ಹಚ್ಚಲು ಆಗಲಾರರು. ನಮ್ಮಲ್ಲಿಯ ಆಚಾರ ವಿಚಾರ ಇಲ್ಲಿಯ ಅಚಾರ ವಿಚಾರಗಳಿಗೆ ವ್ಯತ್ಯಾಸವೂ ಭಾಷೆಯೂ ವ್ಯತ್ಯಾಸವೂ, ಇರುವ ಕಾರಣ ಗೊತ್ತಾಗುವುದಿಲ್ಲ. ಒಂದು ವೇಳೆ ಹಾಗೆ ಆದರೆ ಆಮೇಲೆ ನೋಡೋಣವೆಂದು ನಿರ್ಧರಿಸಿ ವಾಪಸ್ಸು ಬಂದೆ.

ತಂದೆಯವರ ಬಳಿ ಹೇಳಲು ಆಗಲಿಲ್ಲ ಎಂದು ನಡೆದ ಘಟನೆಯನ್ನು ಗೋವಿಂದಯ್ಯನಿಗೆ ತಿಳಿಸಿದೆ. "ಅಲ್ಲ ಕಣ್ರೀ ನೀವು ಹೇಳ ಬೇಕಾಗಿತ್ತು. ಹೇಳೋದೆ ಒಳ್ಳೆಯದು'' ಎಂದಾಗ ನನಗೆ ಮತ್ತೊಮ್ಮೆ ನಿದ್ದೆ ಕೆಡುವ ಭಾಗ್ಯ ಬಂತು. ಈ ನಡುವೆ ಬಿ.ಇಡಿ ಕಾಲೇಜಿಗೂ ಗೋವಿಂದಯ್ಯನ ಸಹಾಯದಿಂದ ಸೇರಿದೆ. ಈಗ ತಿತಿಮತಿಯಲ್ಲಿ ನಾಗರಹೊಳೆ ಅಭಯಾರಣ್ಯಕ್ಕೆ ಜನರಿಂದ ತೊಂದರೆಯಾಗುತ್ತದೆಂದು ನೆಪವೊಡ್ಡಿ ಸರಕಾರ ಒಕ್ಕಲೆಬ್ಬಿಸುವ ತಯಾರಿ ನಡೆಸಿತ್ತು. ಮನೆ ಕಳೆದುಕೊಂಡರೆ ಅಪ್ಪ ಅವ್ವನವರನ್ನು ಎಲ್ಲಿರಿಸುವುದೆಂಬ ಚಿಂತೆ ಬೇರೆ. ನನಗೆ ಕೆಲವಿಲ್ಲ, ತಮ್ಮನ ಶಿಕ್ಷಣ ಪೂರ್ಣ ಆಗಿಲ್ಲ. ಪ್ರೆಸ್ಸಿನಲ್ಲಿ ಕೊಡುವ ಸಂಬಳ ಸಾಲದು, ಈ ಸಂದರ್ಭದಲ್ಲಿ ಮಾನಸಿಕ ಸ್ಥಿರತೆಯನ್ನು ನೀಡಿದವರು ಗೋವಿಂದಯ್ಯ. ಮದುವೆಯಾಗಿ ಬಿಡುವುದೇ ಸರಿ ಅನ್ನಿಸಿತು.

ಮದುವೆ ವಿಚಾರದಲ್ಲಿ ಸಿದ್ಧನಹುಂಡಿಯವರು ಅಷ್ಟು ಸುಲಭದಲ್ಲಿರಲಿಲ್ಲ. ಮೊದಲೇ ಮನೆ ಬಿಟ್ಟು ಹೋದ ಮಗ, ಯಾವುದೋ ಊರಿನ ಜಾತಿಯ ಹೆಣ್ಣನ್ನು ಮದುವೆಯಾಗುವುದೆಂದರೆ ಹೇಗೆ? ಈಗ ನಮ್ಮ ನೆರವಿಗೆ ಬಂದವರು ಅವರ ಅತ್ತಿಗೆಯ ಅಣ್ಣ ಮಲ್ಲೇಶ್. ಅವರ ರಾಯಭಾರಿತನದಲ್ಲಿ ಒಂದೆರಡು ತಿಂಗಳಲ್ಲಿಯೇ ಅವರಣ್ಣನವರನ್ನು ಒಪ್ಪಿಸುವುದರ ಮೂಲಕ ಉಳಿದವರನ್ನು ಒಪ್ಪಿಸಲಾಯಿತು. ನನ್ನನ್ನು ಅವರ ಅತ್ತಿಗೆಯ ತಂದೆ ಮನೆಗೆ ಕರೆದುಕೊಂಡು ಹೋದರು. ನಾನು ನನ್ನ ತಮ್ಮ ಅಳುಕುತ್ತಾ ಅಂಜುತ್ತಾ ಹೋದೆವು. ನನಗೆ ಮದುವೆ ಹುಡುಗಾಟ ಅಲ್ಲ ಎನ್ನಿಸಿತು. ಆದರೂ ನಮ್ಮ ಕಾಲು ನಮ್ಮ ತಲೆ! ನಮ್ಮ ಓರಗಿತ್ತಿಯ ತಂದೆ ತಾಯಿವರು ನಮ್ಮನ್ನು ಆತ್ಮೀಯವಾಗಿಯೇ ಬರಮಾಡಿಕೊಂಡರು. ಹಿರಿಯರಾದ ಶ್ರೀ ಅಂಕಯ್ಯನವರ ಮಾತುಕತೆ, ನಡೆನುಡಿ ಗಮನಿಸಿದ ಆ ಕ್ಷಣವೇ ಇವರು ನಮ್ಮವರು ನಮಗೆ ತೊಂದರೆಯಾಗಲಾರರು ಎಂಬ ಆತ್ಮೀಯತೆ ಮೂಡಿತು. ಮುಂದೆ ಅದು ನಿಜವೂ ಆಯಿತು. ಇಂದಿಗೂ ಅವರು ನಮ್ಮ ಪೋಷಕರಂತೆಯೇ ಇದ್ದಾರೆ. ವರನ ತಾಯಿ ಸೊಸೆಯಾಗುವಳ ಕೈ ಕೆನ್ನೆ ಸವರಿತು. ಮುಟ್ಟಿತು. ಗಟ್ಟಿಯೋ ಮೃದೋ ಎನ್ನುವಂತೆ. ನನಗೆ ಒಳಗೊಳಗೆ ಅಳು ಬರುತ್ತಿತ್ತು. ಉಳಿದ ಅವರ ಕಡೆಯವರು ಅಸಹನೆಯನ್ನು ತೋರಿಸುವಂತಿದ್ದರು. ಅವರಕ್ಕನಿಗೆ ಮಗಳನ್ನು ತಮ್ಮನಿಗೆ ಕೊಟ್ಟು ತವರನ್ನು ತನ್ನದನ್ನಾಗಿ ಮಾಡಿಕೊಳ್ಳುವ ಆಸೆ ಇತ್ತಂತೆ. ಹಾಗೆಂತ ಅವರಪ್ಪ ಮಾತು ಕೊಟ್ಟಿದ್ದರಂತೆ. ಸಧ್ಯಕ್ಕೆ ನಾನು ಅವರ ಪಾಲಿನ ಮಾರಿಯಂತೆ ಕಾಣಿಸಿರಬೇಕು. ಆ ಕಿರಿಕಿರಿಯನ್ನು ಕೆಲವು ವರ್ಷಗಳ ಕಾಲ ನಾನು ಅನುಭವಿಸಬೇಕಾಯಿತು.

ಅಂತು ಮದುವೆ ದಿನ ಬಂತು. ಅಪ್ಪ ಅವ್ವ ದೂರದಿಂದಲೇ ಹರಸಿದ್ದರು. ಆ ದಿನ ಮಧ್ಯಾಹ್ನ ಕಾಲೇಜಿನಲ್ಲಿ ಟೆಸ್ಟ್, ಮದುವೆಗಾಗಿ ರಜೆ ಹಾಕುವಂತಿಲ್ಲ! ಬೆಳಗ್ಗೆ ಹತ್ತು ಗಂಟೆಗೆ ತಾಲ್ಲೂಕು ಆಫೀಸಿಗೆ ಹೋದೆವು. ಹೆಣ್ಣಿನ ಕಡೆಯವರು ನಾನು ನನ್ನ ತಮ್ಮ! ರಾಜಶೇಖರಕೋಟಿ, ದೇವನೂರ ಮಹಾದೇವ, ಸುಮಿತ್ರಬಾಯಿ, ಶ್ರೀ ಅಂಕಯ್ಯನವರು ಮತ್ತು ಗೋವಿಂದಯ್ಯನವರ ಹಿರಿಯ ಅಣ್ಣ ಉಳಿದಂತೆ ಇನ್ನೊಂದಿಬ್ಬರು ಗೆಳೆಯರು ಇವರಿಷ್ಟೆ. ಚಿಕ್ಕವಳಿದ್ದಾಗ ನಮ್ಮೂರ ಮದುವೆಯ ನೋಡಿ, ಆ ರೀತಿಯ ಮದುವೆ ಕನಸು ಕಂಡಿದ್ದೆ. ಈಗ ಆ ಕನಸಿಲ್ಲ, ಮನಸ್ಸಿನ ತುಂಬಾ ಸುಂದರ ಭಾವನೆಗಳಿಗೆ ಬದಲಾಗಿ ನೋವಿನ ಆತಂಕದ ಅವಮಾನದ ಭಾವನೆಗಳೇ ತುಂಬಿವೆ. ಅಪ್ಪ ಅವ್ವ ದೂರದಲ್ಲಿದ್ದಾರೆ, ಇದ್ದೂ ಇಲ್ಲದಂತೆ. ದುಡ್ಡಿಲ್ಲ, ದುಗ್ಗಾಣಿ ಇಲ್ಲ, ತಾಳಿ, ಹೂವಿನ ಹಾರಗಳಿಲ್ಲ, ಕೊಂಬು ಕಹಳೆ ಓಲಗವಿಲ್ಲ. ಎಷ್ಟು 'ಸುಂದರ ಸರಳ ಮದುವೆ' ರಿಜಿಸ್ಟ್ರೇಷನ್ ದಾಖಲಾತಿಗೆ ಸಹಿ ಹಾಕಲು ಹೇಳಿದರು. ಸಾಕ್ಷಿಗಾಗಿ ಬಂದ ಮಹನೀಯರು ರುಜು ಮಾಡಿದ 'ಶಾಶ್ವತ ಮದುವೆಯ ಸರ್ಟಿಫಿಕೇಟ್' ನಮ್ಮ ಕೈಗೆ ಬಂತು! ನಾನು ಗೋವಿಂದಯ್ಯ 'ಸತಿ–ಪತಿ' ಗಳಾದೆವು. ಕಚೇರಿಯಿಂದ ಈಚೆ ಬರುತ್ತಿದ್ದಂತೆ ಶ್ರೀ ಅಂಕಯ್ಯನವರು ಹೂವಿನ ಹಾರವೂ ಇಲ್ಲದ ಮದುವೆ ಎಂಥದೆಂದು ತಕ್ಷಣ ಯಾರನ್ನೊ ಕಳುಹಿಸಿ ಎರಡು ಹಾರವನ್ನು ತರಿಸಿದ್ದರಂತೆ, ನನಗೆ ಈಗ ಯೋಕೋ ಕೈ ನಡುಗಿತು, ಕಣ್ಣೀರುಬಂತು. ಎಲ್ಲಿಯೋ ನನ್ನ ಸ್ವಂತಿಕೆ, ಸ್ವತಂತ್ರ ಜಾರಿ ಹೋಗುತ್ತಿದ್ದಂತೆ ಅನುಭವ! ಗೆಳೆಯರಿಗೆ ಕಾಫಿ ಕುಡಿಸಿ ಅಥವಾ ಗೆಳೆಯರೇ ನಮಗೆ ಕಾಫಿ ಕುಡಿಸಿದರೆಂದು ಕಾಣುತ್ತದೆ. ಅಂತು ಇಪ್ಪತ್ತು ರೂಪಾಯಿಯ ಟಿಕೇಟನಿಂದ ಮುಂದಿನ ಗೃಹಸ್ತಾಶ್ರಮದ ಬಾಗಿಲು ದಾಟದೆವು. ನಾನು ಕಾಲೇಜಿಗೆ ಹೋದೆ; ಗೋವಿಂದಯ್ಯ......?

ಮದುವೆಯ ನಂತರ ಕುಕ್ಕರ ಹಳ್ಳಿಯ ಪುಟ್ಟ ಮನೆಗೆ ಬಂದೆವು. ಆದರ್ಶ ಕುಟುಂಬದ ಒಲೆ ಹತ್ತಿತ್ತು. ಗೋವಿಂದಯ್ಯನ ಕಡೆಯವರು ಊರಿನ ದೇವಸ್ಥಾನದಲ್ಲಿ ತಾಳಿ ಕಟ್ಟುವ ಶಾಸ್ತ್ರೋಕ್ತ ಮದುವೆ ಆಗಬೇಕೆಂದು ಹಠ ಹಿಡಿದರು. ಗೋವಿಂದಯ್ಯನೂ ಅದಕ್ಕೆ ಒಪ್ಪಿದಂತಿತ್ತು. 'ತಾಳಿ ಗೀಳಿ ಪೂಜೆ ನೀನೇ ಮಾಡಿಸಿಕೋ ನಾನು ಬರಲಾರೆ, ಎಂದೆ. ಮತ್ತಗೆ ಅನುರಾಗದ ಜಗಳ ಆರಂಭವಾಗಿತ್ತು. ಆ ವಿಷಯ ಅಲ್ಲಿಗೇ ನಿಂತಿತು. ಅವರ ಊರಿಗೆ ನಂತರ ನಮ್ಮ ಕಾಡಿಗೆ ಹೋಗಿ ಬಂದೆವು. ಅಪ್ಪ ಅಳಿಯನನ್ನು ನೋಡಿದ ತಕ್ಷಣ ಹೈದಾ ಕಪ್ಪು ಎಂದರು. ನಾನು 'ಬಿಳಿ ಹೈದಾ ಸಿಕ್ತ್ಲೆ' ಎಂದು ಹೈದಾನ ಮುಖವನ್ನು ನೋಡಿದೆ! ಜಾತಿ ಗೊತ್ತಿಲ್ಲದ ಕಾರಣ ಮನೆಯ ವಾತಾವರಣ ಲಿಬರಲ್ ಆಗಿತ್ತು. ಸದ್ಯಕ್ಕಂತು ಜಾತಿ ಹಾಳಾಗಲಿ ಮುಂದೆ ನೋಡಿಕೊಂಡರಾ ಯಿತು ಎಂದು ಮತ್ತೊಮ್ಮೆ ಧೈರ್ಯ ತೆಗೆದುಕೊಂಡೆ. ಬೆಟ್ಟಗುಡ್ಡ ಕಾಡೆಲ್ಲ ಸುತ್ತಿದೆವು. ಅಳಿಯನಿಗೋ ಏನೋ ಹೊಸ ಅನುಭವ ಅಂದು ಅವ್ವ ಯಾವ ಪ್ರತಿಕ್ರಿಯೆಯನ್ನೋ ತೋರ್ಪಡಿಸದೆ ಮೌನವಾಗಿಯೇ ಇದ್ದು ಶುಚಿಯಾದ ಕೋಳಿ ಸಾರನ್ನು ಅಳಿಯನಿಗೆ ಬಡಿಸಿದಳು. ಅಳಿಯನ ಮುಖವರಳಿತು. ಮದುವೆಯ ಸುದ್ದಿ ಊರಿಗೆಲ್ಲ ಟಾಂ ಟಾಂ ಆಯಿತು. ರಾಮಪ್ಪನ ಮಗಳು ಹಾಗಂತೆ ಹೀಗಂತೆ ಎಂದು ನೂರು ಮಾತುಗಳನ್ನು ಆಡಿಕೊಂಡದ್ದು ಆಯಿತು. ಈಗ ಕಾಲ ಸರಿಯುತ್ತಾ ಬಂದಿದೆ. ನಾನು ಬಿ.ಎಡ್. ಮುಗಿಸಿ ಅಧ್ಯಾಪಕಿಯೂ ಆಗಿರುವೆ. ಆಗ ಆಡಿಕೊಂಡವರ ಬಾಯಿಗೆಲ್ಲಾ ಈಗ ಬೀಗ ಬಿದ್ದಿದೆ. ನಾನು ಕೆಲಸ ಮಾಡುವ ಕಡೆ ಆರಂಭದಲ್ಲಿ ದಾರಿತಪ್ಪಿದವಳೆಂಬಂತೆ ಆಡಿಕೊಂಡರೂ ಈಗೀಗ ಆತ್ಮೀಯತೆ ಯಿಂದ ಗೌರವದಿಂದ ಕಾಣತೊಡಗಿದ್ದಾರೆ ನಮ್ಮ ಗೋವಿಂದಯ್ಯ...... ನಮ್ಮ "ಮಂದಣ್ಣಿ'' ಬರಿಗೈಯಲ್ಲಿಯೂ ತುಂಬು ಹೃದಯದಿಂದ ನಮ್ಮ ತಂದೆ ಮತ್ತು ತಾಯಿ ಮನೆಗೆ ನೊಂದು ಬಂದವರನ್ನೆಲ್ಲಾ ಸಂತೈಸಿದ್ದಾನೆ. ಯಾವ ಕಾರಣಕ್ಕೂ ಅತ್ತೆ ಮಾವನಿಗೆ ಅಳಿಯನ ಮನೆ ಎಂಬ ನೋವನ್ನು ಕೊಡದೆ ನೋಡಿಕೊಂಡಿದ್ದಾನೆ. ಅವರೆಲ್ಲರ 'ಪ್ರೀತಿಯ ಅಳಿಯ' ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ.

ನಮ್ಮ ಮಗ ಹುಟ್ಟುವ ವೇಳೆಗೆ 'ಜಾತಿಯ ಗೋಡೆ' ಅಸಹನೆಯ ವರ್ತನೆಗಳೆಲ್ಲ ಮಾಯವಾಗಿದ್ದವು. ನಮ್ಮ ಅತ್ತೆಗೆ ನಾನು ಪ್ರೀತಿಯ ಸೊಸೆ ಮನೆಯ ಲಕ್ಷ್ಮಿ ಆಗಿದ್ದೆ.


ನಮ್ಮ ಮಕ್ಕಳು ಅಪ್ಪನ ಚಾಕಲೇಟ್ ಪ್ರೀತಿಯಿಂದ ಬೆಳೆಯುತ್ತಿದ್ದಾರೆ! ಈಗೀಗ ನನ್ನ ಪತಿರಾಯರಿಗೆ ಬೀದಿಯ ಸುಖ ಶಾಂತಿ ಅರ್ಥವಾಗಿ ಮನೆ ಬೇಕು ಅನಿಸುತ್ತಿದೆಯಂತೆ. ಅಂತೂ 'ಪ್ರೌಢತೆ' ಬಂದಿದೆ. ನನ್ನ ಸಿಟ್ಟು ಕುಣಿದಾಟ ಆದರ್ಶದ ದರ್ಶನದಿಂದ ತಣ್ಣಗಾಗುತ್ತಿದೆ. ನಮ್ಮ ತಂದೆ ತಾಯಿ—ಮಗಳು ಜಾತಿಗೆಡುವ ತಪ್ಪು ಮಾಡಿಲ್ಲ ಎಂಬ ನಂಬಿಕೆಯಲ್ಲಿಯೇ ಕಣ್ಮರೆಯಾಗಿದ್ದಾರೆ. ನಂಬಿ ಕೆಟ್ಟವಲ್ಲ ಅಲ್ಲವೇ?! ಮಕ್ಕಳು ಮಡಿಕೇರಿಗೂ ಸಿದ್ದನ ಹುಂಡಿಯ ಪ್ರೀತಿಗೂ ವ್ಯತ್ಯಾಸ ಗೊತ್ತಾಗದಂತೆ ಬೆಳೆಯುತ್ತಿದ್ದಾರೆ. ಮಗಳು ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದಾಗ, ಗೆಳತಿಯರು ನಿನ್ನ ಜಾತಿ ಯಾವುದು ಎಂದು ಕೇಳಿದ್ದಕ್ಕೆ ತಬ್ಬಿಬ್ಬಾಗಿ 'ಅಪ್ಪ ಕರಿ ಜಾತಿ, ಅಮ್ಮ ಬಿಳಿ ಜಾತಿ' ಎಂದಿದ್ದಳಂತೆ! ಮಗ ೩ನೇ ತರಗತಿಯಲ್ಲಿದ್ದಾಗ ತನ್ನ ಪುಸ್ತಕದ ಮೇಲೆಲ್ಲ ಎಸ್.ಸಿ. ಚಿರಂತನ ಎಂದು ಬರೆದುಕೊಂಡು ಬಂದಿದ್ದ. ಕೇಳಿದಕ್ಕೆ ನಮ್ಮ ಅಂಟಿ ಕ್ಲಾಸಿಗೆ ಬಂದು ಎಸ್ಸಿಗಳು ಯಾರು ಎಂದರಂತೆ. ಇವನಿಗೆ ಗೊತ್ತಾಗಿರಲಿಲ್ಲ. ಅಪ್ಪನ ಜಾತಿಯನ್ನು ಫಾರಂನಲ್ಲಿ ಭರ್ತಿ ಮಾಡಿದ್ದು ಅವನಿಗೇನು ಗೊತ್ತು? ಟೀಚರ್ ಚಿರಂತನ ನೀನು ಎಸ್ಸೀ ಎಂದರಂತೆ. ಈಗ ಆತ ಎಸ್ಸಿ. ಚಿರಂತನಾದ! ಮಗಳು ಕಾಲೇಜಿನ ಯುವತಿ. ಅವಳ ಡಬ್ಬಿಯ ತಿಂಡಿ ಕೆಲವರಿಗೆ ಎಸ್ಸಿಯಂತೆ ಕಾಣುತ್ತದಂತೆ (ಹುಡುಗಿಯರಿಗೆ) ಕೆಲವು ಹುಡುಗರು ನೀನು ನಮ್ಮ ಜಾತಿಯವಳು ನಾವೆಲ್ಲ ಒಗ್ಗಟ್ಟಾಗಿರಬೇಕು ಎಂದು ಹೇಳುತ್ತಾರಂತೆ. ಅವಳಿಗೆ ಗೊಂದಲ, ಖಿನ್ನತೆ... ಅವಳಿಗೆ ನಾನೇ ಜಾತಿ ಎಂದರೇನು ಎಂದು ಕೇಳುತ್ತೇನೆ! ಅವಳು ಪ್ರೌಢವಾಗಿ ಯೋಚನೆ ಮಾಡುತ್ತಾಳೆ. ನಾನು ಜಾತಿಯ ಬಗ್ಗೆ ಅದರ ಇತಿಹಾಸ ಹಿನ್ನಲೆ ಅವಮಾನ, ಪೊಳ್ಳುತನದ ಬಗ್ಗೆ ಹೇಳುತ್ತಿರುತ್ತೇನೆ. ಮಕ್ಕಳು ಕೇವಲ ಪ್ರೀತಿಯನ್ನು ನೀತಿಯನ್ನು ಮೈಗೂಡಿಸಿಕೊಂಡು ಗಡಿಯಾರದ ಮುಳ್ಳಿಗೆ ಹೆಜ್ಜೆ ಜೋಡಿಸುತ್ತಿದ್ದಾರೆ. ನನ್ನ ಆತಂಕ, ತಳಮಳ ಕಡಿಮೆಯಾಗುತ್ತಿದೆ. ಜನರೆಲ್ಲ ಹತ್ತಿರವಾಗುತ್ತಿದ್ದಾರೆ. ಜಾತಿಗೆ ಮೀರಿದ ನೀತಿಯೊಂದಿದೆ; ಸಣ್ಣತನ, ಸಂಕೋಚ, ಹಿರಿಮೆ ಮತ್ತು ವಂಚನೆ ಮೋಸಗಳಿವೆಯೆಂದು ಅರ್ಥವಾಗುತ್ತಿದೆ. 'ಮಾನವ ಜಾತಿ ತಾನೊಂದೆ ವಲಂ' ಎಂಬ ಪಂಪ ಕವಿಯ ಮಾತಿಗೆ ನಾನು ಮನೆಯಲ್ಲಿ ಶಿಕ್ಷಕಿಯಾಗಿಯೂ ಪುಷ್ಟಿಕೊಡುತ್ತಿದ್ದೇನೆ! ಎಲ್ಲಿದೆ ಜಾತಿ?

—ಗೋಪಮ್ಮ
ಪ್ರಾಂಶುಪಾಲರು
ಜೆಎಸ್‌ಎಸ್ ಸಂಯೋಜಿತ
ಪದವಿಪೂರ್ವ ಕಾಲೇಜು
ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ

ಉಟ್ಟ ಬಟ್ಟೆಯಲ್ಲೇ ಮದುವೆ

ನಮ್ಮ ಊರು ಹನಗವಾಡಿ, ಕಟ್ಟಾ ಬಯಲು ಸೀಮೆ ಎಂದು ಪ್ರತೀತಿಯಲ್ಲಿದ್ದರೂ ಸುತ್ತ ತೋಟಗಳಿಂದಾಗಿ ಮಲೆನಾಡಿನಂತೆ ದೂರದಿಂದ ನೋಡಿದವರಿಗೆ ಕಾಣಿಸುತ್ತಿತ್ತು. ನಮ್ಮ ಅಪ್ಪ ಈ ಊರಲ್ಲಿಯೇ ಕಪ್ಪಲಿಯಿಂದ ತೋಟ ಮಾಡಿ ಕೊಂಡಿದ್ದರು. ಅವ್ವ ಓದು ಬರಹ ತಿಳಿಯದ ಹಳ್ಳಿಗಳು. ಅಪ್ಪನಿಗೆ ಇದ್ದದ್ದು ಮಾಳಿಗೆ ಮನೆ. ಅಪ್ಪನಿಗೆ ಆಗ ಶಾಲಾ ಮಾಸ್ತರಿಕೆ ಸಿಕ್ಕಿತ್ತೆಂತಲೂ, ದಲಿತರನ್ನೆಲ್ಲಾ ಕ್ರಿಶ್ಚಿಯನ್ ಜಾತಿಗೆ ಸೇರಿಸಿಕೊಂಡು ಭ್ರಷ್ಟಗೊಳಿಸುವ ಅಂಜಿಕೆಯಿಂದಾಗಿ ನಮ್ಮ ಅಜ್ಜಿ ಮಾಸ್ತರಿಕೆ ಕೆಲಸವನ್ನು ಬಿಡಿಸಿದ್ದಳಂತೆ. ಆದಾಗ್ಯೂ ಓದಿನ ಆಸಕ್ತಿ ಪೂರ್ಣಗೊಳಿಸಲೋ ಎಂಬಂತೆ ನನ್ನನ್ನುಓದಿಸಬೇಕೆಂಬ ಹಟ ಅವನಲ್ಲಿತ್ತು. ಎಸ್.ಎಸ್.ಎಲ್.ಸಿ. ಪಾಸು ಮಾಡಿದ ನಂತರ ಓದು ಸಾಗರದಲ್ಲಿ ಮುಂದುವರಿಸಿ, ನಾನು ಮೈಸೂರಿನಲ್ಲಿ ಸ್ನಾತಕೋತ್ತರ ಪದವಿ ಪಡೆದು, ೧೯೭೭ರಲ್ಲಿ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದೆ.

೧೯೭೩ರಲ್ಲಿ ಮೈಸೂರಿನಿಂದ, ಬಿ. ಆರ್.ಪಿ. ಪಿ.ಜಿ. ಸೆಂಟರ್‌ಗೆ ವರ್ಗವಾಗಿ ಬಂದಾಗ ಅತೀವ ಬೇಸರವಾಗಿತ್ತು. ನನ್ನ ಬೇಸರದ ನೋವಿನ ದಿನಗಳಲ್ಲಿ ಭದ್ರಾವತಿಗೆ ಹೋಗುವುದು, ಕೃಷ್ಣಪ್ಪನವರ ಮನೆಯಲ್ಲಿ ಸಮಾಜವಾದಿ ಯುವಜನ ಸಭಾ, ದಲಿತ ಸಂಘರ್ಷ ಸಮಿತಿ ಕುರಿತಾದ



ಚರ್ಚೆಯಲ್ಲಿ ಸಂಘಟನೆಯಲ್ಲಿ ಪಾಲ್ಗೊಳ್ಳುತ್ತಾ, ನಾನು ಗಟ್ಟಿಗೊಳ್ಳತೊಡಗಿದೆ. ಆಗ ನಡೆದ ಹಲವಾರು ಅಂತರಜಾತೀಯ ಮದುವೆಗಳಿಂದಾಗಿ, ನಾನು ಅಂತರಜಾತೀಯ ಮದುವೆಯಾಗುವುದು ಸಮಸ್ಯೆಯಲ್ಲ ಎನ್ನುವ ಭಾವನೆ ಮೂಡುತ್ತಿತ್ತು.

ನನ್ನ ಹೆಂಡತಿ ಗಾಯಿತ್ರಿಯ ಊರು ಶೃಂಗೇರಿ ಹತ್ತಿರದ ನರಸಿಂಹರಾಜಪುರ. ಅದೊಂದು ತಾಲ್ಲೂಕು ಕೇಂದ್ರವಾದರೂ ದೊಡ್ಡ ಹಳ್ಳಿಯಂತೆ ಈಗಲೂ ಗೋಚರಿಸುತ್ತದೆ. ನನ್ನ ಹೆಂಡತಿಯ ಮನೆಯವರು ಶೃಂಗೇರಿ ಮಠದ ಅನುಯಾಯಿಗಳಾಗಿದ್ದು, ಮಠದ ನಿಕಟ ಸಂಪರ್ಕ ಹೊಂದಿದ್ದರು. ಮಲೆನಾಡಿನ ಸಮೃದ್ಧ ಜೀವನ ಅವರದ್ದಾಗಿತ್ತು.

ಈ ಹಿನ್ನೆಲೆಗಳಿಂದ ಬಂದ ನಾವಿಬ್ಬರು ಸಂಧಿಸಿದ್ದು ಅಧ್ಯಾಪಕ ಹಾಗೂ ವಿದ್ಯಾರ್ಥಿನಿಯರಾಗಿ. ಒಬ್ಬರನ್ನೊಬ್ಬರು ಮೆಚ್ಚಿದೆವು. ಎರಡು ವರ್ಷಗಳ ನಂತರ ನನ್ನ ಗಾಯಿತ್ರಿ ಎಂ.ಎ. ಪದವಿ ಪಡೆದು ಕಾಲೇಜನ್ನು ಬಿಟ್ಟಾಗ ಒಬ್ಬರಿಗೊಬ್ಬರು ಹತ್ತಿರವಾದೆವು. ನನ್ನ ಹೆಂಡತಿಯ ಹಿನ್ನೆಲೆಯಲ್ಲಿ, ಅವಳ ಮನೆಯವರನ್ನು ಒಪ್ಪಿಸಿಕೊಂಡು ಮದುವೆಯಾಗುವುದು ಹೇಗೆ ಎಂಬ ಬಗ್ಗೆ ಚರ್ಚೆ, ವಿಚಾರಗಳು ನಡೆಯುತ್ತಿದ್ದುವು. ಈ ವೇಳೆಗಾಗಲೇ ಅನಂತಮೂರ್ತಿ, ಕೃಷ್ಣಪ್ಪ ಮುಂತಾದ ಹಿರಿಯರ ಅಂತರ್ಜಾತಿ ಮದುವೆಗಳು ಆಗಿದ್ದರಿಂದ ಬೇರೆ ಜಾತಿಯ ಹುಡುಗಿಯನ್ನು ಮದುವೆ ಆಗುವುದು ಅಷ್ಟಾಗಿ ಕಷ್ಟ ಅನ್ನಿಸಿರಲಿಲ್ಲ. ಇದರಿಂದ ನಾನು ಬಂದ ಸಂಬಳವನ್ನೆಲ್ಲಾ ಖರ್ಚು ಮಾಡಿಕೊಂಡು ಪ್ರೀತಿ–ಪ್ರೇಮಗಳ ಗುಂಗಿನಲ್ಲಿದ್ದೆ. ತೀರಾ ಅನಿರೀಕ್ಷಿತವಾಗಿ, ಗಾಯಿತ್ರಿಗೆ ಬೇರೆ ಕಡೆ ಗಂಡು ನೋಡಿ ಮದುವೆ ಮಾಡುವರೆಂಬ ಸುದ್ದಿ ಯೋಚನೆಗಿಟ್ಟುಕೊಂಡಿತು. ಇದೊಂದು ಸಾಮಾನ್ಯವೆಂದು ಹುಡುಗಾಟಕೆಯಲ್ಲಿದ್ದ ನನಗೆ ನಾನೇ ಮದುವೆ ಮಾಡಿಕೊಳ್ಳಬೇಕಾದ ಸ್ಥಿತಿ ಹಾಗೂ ಜೀವನದ ಮುಖ್ಯ ನಿರ್ಧಾರವೊಂದನ್ನು ತುರ್ತಾಗಿ ನಿರ್ಣಯಿಸಿಕೊಳ್ಳಬೇಕಾದ ತುಮುಲ ಆತಂಕವನ್ನುಂಟು ಮಾಡಿತ್ತು. ಆಗ ನನ್ನ ಸ್ನೇಹಿತರ ಒತ್ತಾಸೆ, ಬೆಂಬಲಗಳು ಇಲ್ಲದಿದ್ದರೆ ನಮ್ಮ ಪ್ರೀತಿ ಫಲಪ್ರದವಾಗುತ್ತಿರಲಿಲ್ಲ. ಹಾಗಾಗಿ ದಿ. ೪–೬–೭೮ರಲ್ಲಿ ಭದ್ರಾವತಿಯ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಸ್ನೇಹಿತರ ಸಮ್ಮುಖದಲ್ಲಿ ವಿವಾಹವಾದೆವು. ಅಂದೇ ಈರ್ವರ ಕಡೆಯ ಸಂಬಂಧಿಗಳಿಗೆ ವಿಷಯವನ್ನು ಮಿತ್ರರಾದ ಡಾ. ಕೇಶವಮೂರ್ತಿ ಹಾಗೂ ಪ್ರಭು ಇವರ ಮೂಲಕ ತಿಳಿಸಲಾಯಿತು.

ರಿಜಿಸ್ಟರ್ ಮಾಡಿಸಿದ ನಂತರ ಕೃಷ್ಣಪ್ಪನವರ ಮನೆಗೋದರೆ ನನ್ನ ಹೆಂಡತಿಯ ಕಡೆಯವರು ಬಂದು ಕಿರಿಕಿರಿ ಮಾಡುವರೆಂದು ತಿಳಿದು ಭದ್ರಾವತಿಯ ಮುನೀರ್ ಮನೆಗೆ ಹೋದೆವು. ಅವರ ತಾಯಿ ಬಚ್ಚಮ್ಮ ನಮಗೋಸ್ಕರ ಮೊದಲ ರಾತ್ರಿಯ ಊಟೋಪಚಾರ ತಯಾರಿಸಿದ್ದರೂ ರಾತ್ರಿಯಿಡೀ ಕಳವಳದಲ್ಲಿಯೇ ಕಳೆಯಿತು. ಅಲ್ಲೇ ಇರುವ ಪರಿಸ್ಥಿತಿ ಇಲ್ಲದ್ದರಿಂದ, ಬೇರೆ ಊರಿಗೋಗುವುದೆಂದು ತಯಾರಿ ಮಾಡಿಕೊಂಡೆ. ಉಟ್ಟ ಸೀರೆಯಲ್ಲಿ ಬಂದ ನನ್ನವಳಿಗೆ ಕೃಷ್ಣಪ್ಪನವರ ಪತ್ನಿ ಇಂದಿರಾರವರು ಸೀರೆ ಕುಪ್ಪಸ ಜೋಡಿಸಿ ಸೂಟ್‌ಕೇಸ್‌ನೊಂದಿಗೆ ಬೀಳ್ಕೊಟ್ಟಿದ್ದರು. ಮದುವೆಗೋಸ್ಕರ ಬಟ್ಟೆ ಹೊಲಿಯಲು ಹಾಕಿದ್ದರೂ ಸಮಯಾಭಾವದಿಂದ, ಉಟ್ಟ ಬಟ್ಟೆಯಲ್ಲೇ ಮದುವೆ ನಡೆದುಹೋಗಿತ್ತು. ಇವೆಲ್ಲಾ ಆತಂಕ–ಗೊಂದಲಗಳ ನಡುವೆ ಮೈಸೂರಿಗೆ ಹೋದೆವು. ನಂತರ ಸ್ನೇಹಿತರೆಲ್ಲರೊಂದಿಗೆ ಒಂದು ಸಂತೋಷ ಕೂಟ ಇಟ್ಟುಕೊಳ್ಳಲು ಯೋಚಿಸಿ, ಗಾಯಿತ್ರಿ ಮನೆಯವರಿಗೆ ಸಂತೋಷ ಕೂಟಕ್ಕೆ ಬರಲು ಆಹ್ವಾನವಿತ್ತೆವು. ಶಿವಮೊಗ್ಗದ ಡಿ.ಸಿ.ಸಿ. ಬ್ಯಾಂಕ್ ಸಭಾಂಗಣದಲ್ಲಿ ಆಯೋಜಿಸಲಾದ ಈ ಸಮಾರಂಭವನ್ನು ನನ್ನ ಮಾವನ ಮನೆಯವರ ಒತ್ತಾಯದ ಮೇರೆಗೆ ಬಿ.ಆರ್.ಪಿ.ಯ ಪಿ. ಜಿ. ಸೆಂಟರ್ ಸಭಾಂಗಣಕ್ಕೆ ಬದಲಾಯಿಸಿಕೊಂಡೆವು.

ದಿ. ೧೦.೬.೭೮ ರಂದು, ನಡೆಯುತ್ತಿದ್ದ ಸಂತೋಷ ಕೂಟದ ಸ್ಥಳಕ್ಕೆ ಗಾಯತ್ರಿಯ ತಂದೆಯವರು, ಅಣ್ಣಂದಿರುಗಳು ಬಂದು ವಾಗ್ವಾದಕ್ಕಿಳಿದರು. ಜನ ಸೇರಿ ಗಲಾಟೆಯಾಗುವ ಪರಿಸ್ಥಿತಿ ಕಂಡು ಬಂದಿದ್ದರಿಂದ ಕಾರ್ಯಕ್ರಮ ಮೊಟಕುಗೊಳಿಸಿ ಕಾರಿನಲ್ಲಿ ಭದ್ರಾವತಿ ಸೇರಿಕೊಂಡೆವು.

ನಿಜವಾದ ಸಮಸ್ಯೆಗಳ ಅರಿವಾದದ್ದು ಇದಾದ ನಂತರವೇ. ಸದ್ಯ ಬಾಡಿಗೆ ಮನೆಯೊಂದು ಬಿಟ್ಟರೆ ಬೇರೇನೂ ಅನುಕೂಲಗಳಿಲ್ಲದ ನಾವು ಸಂಸಾರ ಹೂಡಿದ್ದೆವು. ನಾವು ಹೇಗೆ ಬದುಕುತ್ತಿದ್ದೇವೆ ಎಂದು ಪರೀಕ್ಷಿಸಲು ಬರುವವರ ಸಂಖ್ಯೆ ಒಂದು ಕಡೆಗಾದರೆ, ಮೂರು ತಿಂಗಳಲ್ಲಿ ಒಡೆದುಹೋಗುವ ಮದುವೆ ಇದು ಎಂದು ಆಡಿಕೊಳ್ಳುವವರ ಮಾತು ಇನ್ನೊಂದೆಡೆ. ಇಲಾಖೆಯಲ್ಲಿ ಅಧ್ಯಾಪಕ ಮಿತ್ರರು ಸಹಜವಾಗಿದ್ದಾರೆಂದು ತೋರಿಸಿಕೊಂಡರೂ, ನನ್ನಿಂದಾಗಿಯೇ ಇಡೀ ಇಲಾಖೆಗೇ ಅಪಖ್ಯಾತಿ ಬಂತು ಎಂದು ಕೆಲವರು ಗುಸು ಗುಸು ಮಾತನಾಡಿಕೊಳ್ಳುತ್ತಾ, ಅವರ ಅಸಹನೆಯನ್ನು ಸಣ್ಣಪುಟ್ಟ ವಿಷಯಗಳಲ್ಲಿ ವ್ಯಕ್ತಪಡಿಸುತ್ತಿದ್ದರು.

ನಮ್ಮ ಹನಗವಾಡಿಯಲ್ಲಿ ಏನೂ ಅಪಾಯಗಳು ಆಗುವುದಿಲ್ಲವೆಂದು ನನಗೆ ಗೊತ್ತಿತ್ತು. ಆದರೆ ಹೇಳದೆ ಕೇಳದೆ ಮದುವೆಯಾದ ಬಗ್ಗೆ ಅಸಮಧಾನಗೊಂಡ ನನ್ನಪ್ಪ, "ಅವ್ವ ಸತ್ತು ಹೋಗಿದ್ದಾಳೆ" ಎಂದು ಟೆಲಿಗ್ರಾಂ ಕಳುಹಿಸಿದ್ದರು. ಅವ್ವನ ಆರೋಗ್ಯದ ಬಗ್ಗೆ ಅರಿವಿದ್ದ ನಾನು ವಿಚಲಿತನಾಗಲಿಲ್ಲ. ನಮ್ಮ ಸಂತೋಷ ಕೂಟಕ್ಕೆ ನಮ್ಮ ಊರಿನಿಂದ ಮಾಂತೇಶಿ ಮತ್ತು ವೀರಪ್ಪ ಮಾಸ್ತರರು ಮತ್ತಿತರ ಗೆಳೆಯರನ್ನು ಬಿಟ್ಟರೆ, ಬಂಧುಗಳ್ಯಾರು ಬಂದಿರಲಿಲ್ಲ.

ನನ್ನ ಹೆಂಡತಿಯ ಕಡೆಯವರು ಅತಿ ಭಾವುಕರು. ಗಾಯಿತ್ರಿ ಕಟ್ಟಿಕೊಂಡವನು 'ಎಷ್ಟು ಗಟ್ಟಿ' ಎಂದು ತಿಳಿಯುವ ಕುತೂಹಲದಿಂದ ತೀರಾ ಹತ್ತಿರದಲ್ಲಿದ್ದವರ ಮುಖಾಂತರ ತಿಳಿದುಕೊಳ್ಳುವ ಪ್ರಯತ್ನಗಳನ್ನು ಆಗಾಗ ಮಾಡುತ್ತಿದ್ದರು. ನಾನೊಬ್ಬ ಮುದುಕನೆಂತಲೂ, ದಿನವೂ ಮಾಂಸ ತಂದು ಅಡಿಗೆ ಮಾಡಲು ಹೆಂಡತಿಗೆ ಹಿಂಸಿಸುತ್ತಿರುವುದಾಗಿಯೂ, ಬೇರೊಬ್ಬಳೊಂದಿಗೆ ತೋಕೆರೆಯಲ್ಲಿ ಮದುವೆಯಾಗಿ ಅಡ್ಡಾಡುತ್ತಿರುವುದನ್ನು ನೋಡಿರುವುದಾಗಿಯೂ, ಹಲವು ಹತ್ತಾರು ಪುಕಾರುಗಳನ್ನು ವಯಸ್ಸಾದ ಅತ್ತೆ, ಮಾವನವರಿಗೆ ಮುಟ್ಟಿಸಿ ನೋವುಂಟು ಮಾಡುತ್ತಿದ್ದರು.

ಹೀಗಿದ್ದರೂ, ಊಟೋಪಚಾರಗಳಲ್ಲಿ ಸ್ಪಷ್ಟ ತದ್ವಿರುದ್ಧವಾಗಿದ್ದರೂ ಸಹ ನನ್ನ ಹೆಂಡತಿಯ ಪಾಕ ಪ್ರಾವೀಣ್ಯತೆಯಿಂದಾಗಿ, ನನಗ್ಯಾವ ಸಮಸ್ಯೆಗಳೂ ಉಂಟಾಗಲಿಲ್ಲ. ನನ್ನ ಹೆಂಡತಿಯ ಅಕ್ಕಂದಿರು ಅವಳ ಮೇಲಿನ ಪ್ರೀತಿಯಿಂದಾಗಿ ಎರಡು ವರ್ಷಗಳೊಳಗೆ ನಮ್ಮ ಮನೆಗೆ

ಬಂದು ಹೋಗಲಾರಂಭಿಸಿದರು. ನನ್ನ ಷಡ್ಡಕರು ದೇಶ ವಿದೇಶಗಳನ್ನು ಸುತ್ತಿದವರು, ಸಾಕಷ್ಟು ಪ್ರಪಂಚ ಜ್ಞಾನವುಳ್ಳವರಾಗಿದ್ದ ಕಾರಣ ನನ್ನೊಡನೆ ಹೊಂದಾಣಿಕೆ ಆಗಲು ಕಷ್ಟವಾಗಲಿಲ್ಲ.

ಮದುವೆಯಾದ ಒಂದೆರಡು ತಿಂಗಳಲ್ಲಿ ನಮ್ಮ ಅವ್ವ, ಸಂಸಾರ ನೋಡಲು ಬಂದಳು. ಅವಳಿಗೆ ತನ್ನ ಸಿಟ್ಟು ತೋಡಿಕೊಳ್ಳುವುದರ ಜೊತೆಗೆ ಕಣ್ಣೀರು ಸುರಿಸುವುದು ಸಾಮಾನ್ಯ ಪರಿಪಾಠ. ಅದರ ಜೊತೆಗೆ ನನ್ನ ಹೆಂಡತಿಯದೂ ಸಹಮತವಿರುವ ಕಾರಣ ಅತ್ತೆ–ಸೊಸೆಯರು ಹೊಂದಿಕೊಂಡರು.

ಈಗ ಜೂನ್ ನಾಲ್ಕಕ್ಕೆ, ನಾವು ಮದುವೆಯಾಗಿ ಹದಿನೆಂಟು ವರ್ಷಗಳಾಗುತ್ತಿವೆ. ಎರಡೂ ಮನೆಯವರು, ನಾವು ಮಾಡಿಕೊಂಡ ಮದುವೆಯೊಂದು ಆದರ್ಶಪ್ರಾಯವೆಂಬುದನ್ನು ಒಪ್ಪಿಕೊಂಡಿದ್ದಾರೆ. ನಾನು, ನನ್ನ ಹೆಂಡತಿ, ಎರಡು ಮಕ್ಕಳು, ಎರಡೂ ಕಡೆ ಓಡಾಡಿಕೊಂಡಿದ್ದರೂ, ಎರಡು ಜಾತಿಗಳ ನಡುವೆ ನಿಜವಾದ ಸೇತುವೆಯಾಗಬೇಕಾದ ಬೆಸುಗೆ ಆಗಿಲ್ಲವೆಂದೇ ಹೇಳಬೇಕು. ಅದೂ ಇಷ್ಟು ಅಲ್ಪಾವಧಿಯಲ್ಲಿ ಆಗುವುದಲ್ಲ ಎನ್ನುವ ಅರಿವು ನಮ್ಮಿಬ್ಬರಿಗೂ ಇದೆ. ಆದರೆ ನಮ್ಮ ಮದುವೆಯಿಂದಾಗಿ ಎರಡೂ ಕಡೆ ಸಾಕಷ್ಟು ಚಿಂತನೆ ಮತ್ತು ಸಮಾನತೆಯ ಅರಿವು ಮೂಡಿದೆ.

– ರುದ್ರಪ್ಪ ಹನಗವಾಡಿ

ಆಯುಕ್ತರು,

ಪಟ್ಟಣ ಪಂಚಾಯತ್, ಯಲಹಂಕ

ಬೆಂಗಳೂರು.

"ಲಕ್ಷದಲ್ಲಿ ಒಂದು ಮದುವೆ!'



ಅಂದು ಪೂರ್ಣ ಸೂರ್ಯ ಗ್ರಹಣ. ೧೯೮೦ ಫೆಬ್ರುವರಿ ೧೬. ಆಫೀಸಿಗೆ ರಜೆ. ಎಲ್ಲೂ ಜನವೇ ಇಲ್ಲ. ಮಧ್ಯಾಹ್ನದ ಪ್ರಸಾರ ಮುಗಿಸಿದ ರಮಾ ಆಕಾಶವಾಣಿಯ ಹಜಾರದಲ್ಲಿ ಒಬ್ಬರೇ ಕುಳಿತಿದ್ದರು. ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ಅವರ ಕೈಯಲ್ಲಿತ್ತು. ನಾನು ಹೋಗಿ ಮಾತಿಗೆ ಎಳೆದೆ. ಸದಾ ಹಸಿರಾಗಿರುತ್ತಿದ್ದ ಆಕೆಯ ಮನದಾಳದ ಕಹಿ ಹೊಳಹುಗಳು ನನ್ನ ಹೃದಯದ ಬಾಗಿಲನ್ನು ತಟ್ಟಿದವು. ಬಹುಶಃ ಹಿಂತಿರುಗಿ ನೋಡಿದಾಗ ನಮ್ಮ 'ವಿವಾಹ ಕಥನ'ದ ಮೊದಲ ಹೆಜ್ಜೆ ಗುರುತುಗಳು ಕಾಣುವುದು ಇಲ್ಲಿಯೆ.

ಅಂದಿನಿಂದ ನಾವು ಹತ್ತಿರವಾಗುತ್ತ ಹೋದೆವು. ಅವರ ಮನೆ ರಾಜಾಜಿನಗರದ 'ಪ್ರಸನ್ನ'ಬಳಿ; ನಮ್ಮದು ಆರ್‌ಪಿಸಿ ಲೇಔಟ್. ದಿಕ್ಕು ಒಂದೆ, ದಾರಿಯೂ ಒಂದೇ. ಸುದ್ದಿ ಮನೆಯವರೆಗೆ. ಅಪ್ಪ ಉರಿದೆದ್ದರು. ಆದರೆ ನನ್ನನ್ನು ಏನೂ ಕೇಳಲಿಲ್ಲ. ಮನೆಯನ್ನು ಜೀವನಭೀಮಾ ನಗರಕ್ಕೆ ಬದಲಾಯಿಸಿದರು. ಮನೆಯ ದಿಕ್ಕು ಬದಲಾದರೂ, ಮನದ ದಿಕ್ಕು ಬದಲಾಗಲಿಲ್ಲ. 'ಮದುವೆ ಮಾಡಿದರೆ ಎಲ್ಲ ಸರಿಹೋಗುತ್ತೆ' ಎಂದು ಅಪ್ಪ ತಿಳಿದರು. ಅದಕ್ಕಾಗಿ ಕನ್ಯಾನ್ವೇಷಣೆ. 'ಈಗ ಮದುವೆ ಬೇಡ' ಎಂದರೂ ಕೇಳದೆ ಬದಾಮಿಗೆ ಕರೆದುಕೊಂಡು ಹೋದರು. ಹುಡುಗಿ ನಿಜಕ್ಕೂ ಲಕ್ಷಣವಾಗಿದ್ದಳು. ಯಾವುದೇ ದೃಷ್ಟಿಯಿಂದ 'ಬೇಡ' ಎಂದು ಹೇಳಲು ಸಾಧ್ಯವಾಗಲಿಲ್ಲ. ಸುಮ್ಮನಿದ್ದೆ. ಅದಕ್ಕೆ ಇನ್ನೊಂದು ಕಾರಣ, ಹೋಗುವುದಕ್ಕಿಂತ ಮುಂಚೆ ರಮಾಗೆ ಆ ವಿಷಯ ತಿಳಿಸಿದಾಗ ಆಕೆ "Best of Luck" ಎಂದು ಹೇಳಿದ್ದಳು! ಬದಾಮಿಯಿಂದ ಬಂದ ಮೇಲೆ ಮದುವೆಯ ಮಾತುಗಳು ಆರಂಭ ವಾದವು. ನನ್ನಲ್ಲಿ ಗೊಂದಲವುಂಟಾಯಿತು. ನಿರ್ಧಾರ ನಿಚ್ಚಳಿಕೆ ಏರಿತು. ಅಂದು ಎರಡನೇ ಶನಿವಾರ. ಮುಂಜಾನೆಯ ಡ್ಯೂಟಿ ಆದ ನಂತರ ರಮಾಳಲ್ಲಿ ನನ್ನ ಮನಸ್ಸನ್ನು ಬಿಚ್ಚಿಟ್ಟೆ. ಸಾಕಷ್ಟು ಚರ್ಚೆಯ ನಂತರ ಆಕೆ ಸಂತೋಷದಿಂದ ಒಪ್ಪಿದಳು. ಅಂದು ಬಿಟ್ಟು ಬಿಟ್ಟು ಬರುತ್ತಿದ್ದ ಮಳೆಯಲ್ಲಿ ಅವರ ಮನೆಯವರೆಗೆ ನಡೆಯುತ್ತಲೇ ಹೋದದ್ದು, ನಮ್ಮಿಬ್ಬರ ಜೀವನದಲ್ಲೂ ಒಂದು ಅನಿರ್ವಚನೀಯ ಅನುಭವ. ಇನ್ನೂ ಅರ್ಧ ದಾರಿಯಲ್ಲಿದ್ದ ನನ್ನ ಮದುವೆಯನ್ನು ತಪ್ಪಿಸಬೇಕಾಗಿತ್ತು. ಅಪ್ಪನ ಮುಂದೆ ಎಲ್ಲವನ್ನೂ ಹೇಳಲು ಧೈರ್ಯ ಸಾಕಾಗಲಿಲ್ಲ. ಸಿನಿಮೀಯ ರೀತಿಯಲ್ಲಿ ಯೋಚನೆ ಮಾಡಿ 'ಹುಡುಗನ ನಡತೆ ಸರಿ ಯಾಗಿಲ್ಲ; ಮುಂದುವರಿಯಬೇಡಿ' ಎಂದು ಹಿತೈಷಿಯೊಬ್ಬರ ಹೆಸರಿನಲ್ಲಿ ಬದಾಮಿಗೆ ತಂತಿ ಕಳಿಸಿದೆ. ಅದು ಕೆಲಸ ಮಾಡಿತು. ಮದುವೆ ತಪ್ಪಿತು.

ಆಕಾಶವಾಣಿಯ ಸುಸಂಸ್ಕೃತ ಸಜ್ಜನ ಸ್ನೇಹಿತರ ಪ್ರತಿಕ್ರಿಯೆ ನನ್ನನ್ನು ಕಲ್ಲನ್ನಾಗಿ ಮಾಡಿತು. ಹಿರಿಯ ಸ್ವಜಾತಿ ಸ್ನೇಹಿತರು 'ನಿನಗೆ ಎಂಥ ಹುಡುಗಿ ಬೇಕೊ ಅಂಥವಳನ್ನು ಮದುವೆ ಮಾಡಿಸುತ್ತೇವೆ, ಈ ಮದುವೆ ಬೇಡ' ಎಂದರು. ಇನ್ನು ಕೆಲವರು 'ಆ ಹುಡುಗಿ ಮೊದಲೇ ನೊಂದಿದ್ದಾಳೆ; ಗಾಯಕ್ಕೆ ಬರೆ ಎಳೆಯುವ ಕೆಲಸ ಮಾಡಬೇಡಿ' ಎಂದು ಎಚ್ಚರಿಕೆ ನೀಡಿದರು. ಮತ್ತೆ ಒಬ್ಬರು 'ಆ ಹುಡುಗಿಯ ಮೂಗಿಗೆ ತುಪ್ಪ ಸವರಿ, ತಮಾಷೆ ನೋಡಬೇಡಿ' ಎಂದು ವ್ಯಂಗ್ಯವಾಡಿದರು. 'ಪ್ರವಾಹದ ವಿರುದ್ಧ ಹೋರಾಡಬೇಡಿ, ನಿಮಗೆ ಮೊದಲೇ ಈಜು ಬರುವುದಿಲ್ಲ' ಎಂದು ಹಾಸ್ಯಮಾಡಿದವರೂ ಇದ್ದಾರೆ. ಆದರೆ ಯಾರಿಂದಲೂ ನನ್ನ ನಿರ್ಧಾರವನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ.

೧೯೮೧ರ ಜನವರಿ ೧೦ರಂದು ಶನಿವಾರ ಬೆಂಗಳೂರಿನ ಆರ್ಯ ಸಮಾಜದಲ್ಲಿ ನಮ್ಮ ಮದುವೆ ನಡೆಯಿತು. ರಾಹು ಕಾಲದಲ್ಲೇ ಮದುವೆ ಯಾಗುವ ಉದ್ದೇಶದಿಂದ ಸ್ನೇಹಿತರಿಗೆ ಬೆಳಿಗ್ಗೆ ೯.೩೦ಕ್ಕೆ ಬರಲು ಹೇಳಿದ್ದೆ.

ಆದರೆ ಒಬ್ಬನೇ ಒಬ್ಬ ಸ್ನೇಹಿತನನ್ನು ಬಿಟ್ಟರೆ ಯಾರೂ ಬರಲಿಲ್ಲ. ಮದುವೆ ಮಾಡಿಸುವ ಆರ್ಯ ಸಮಾಜದ ವ್ಯಕ್ತಿಯಿಂದ ಹಿಡಿದು, ಹೆಣ್ಣಿನ ಕಡೆಯವರೆಲ್ಲರೂ ಬಂದಿದ್ದು, ರಾಹುಕಾಲ ಮುಗಿದ ಮೇಲೆಯೇ. ನನಗೆ ಸ್ವಲ್ಪ ಅಸಮಾಧಾನವಾದರೂ ಬಂದ ಎಲ್ಲರಿಗೂ ಏನೋ ಗಂಡಾಂತರ ಕಳೆದಷ್ಟು ಸಂತೋಷವಾಗಿತ್ತು. ಮದುವೆ ನಂತರ ನಮ್ಮ ಮನೆಯವರಿಗೆ ವಿಷಯ ತಿಳಿಯಿತು. ಅವ್ವ ಕಣ್ಣೀರು ಹಾಕಿದರು; ಅಪ್ಪ ಮಾತಾಡಲಿಲ್ಲ. ಸ್ವಲ್ಪ ದಿನಗಳ ನಂತರ ಎಲ್ಲ ಸರಿಹೋಯಿತು. ಈ ಮಧ್ಯೆ ರಮಾಳಿಗೆ 'ಲಿಂಗದೀಕ್ಷೆ' ಕೊಡಿಸುವ ಪ್ರಯತ್ನವೂ ನಡೆಯಿತು. ಈಗಲೂ ನನ್ನ ಅವ್ವ ಮನೆಗೆ ಬರುವಾಗ 'ವಿಭೂತಿ'ತರಲು ಮರೆಯುವುದಿಲ್ಲ. ಅವರು ಇರುವವರೆಗೆ ಮಕ್ಕಳಿಗೆ ತಾವೇ ವಿಭೂತಿ ಹಚ್ಚಿ, ನೋಡಿ ಸಂತೋಷಪಡುತ್ತಾರೆ. ಮಕ್ಕಳು ನಾಟಕದ ಪಾತ್ರಧಾರಿಗಳಂತೆ 'ಓಂ ನಮಃ ಶಿವಾಯ' ಎಂದು ಕನ್ನಡಿಯಲ್ಲಿ ನೋಡಿ ನಗುತ್ತಾರೆ. ಹಾಗೆಯೆ ರಮಾಳ ಅಮ್ಮ ಬಂದರೆ ಮಕ್ಕಳ 'ಮುಂಜಿ'ಯ ಮಾತು ಎತ್ತುತ್ತಾರೆ. ಅಂತೂ ಎರಡು ಕಡೆಯವರು ಮಕ್ಕಳನ್ನು ಅವರವರ ಕಡೆ ಎಳೆದುಕೊಳ್ಳಲು ಪ್ರಯತ್ನ ನಡೆಸಿಯೇ ಇದ್ದಾರೆ.

ಆಶ್ಚರ್ಯವೆಂದರೆ ಮದುವೆಯ ನಂತರ ಆಕಾಶವಾಣಿಯ ಸ್ನೇಹಿತರ ಪ್ರತಿಕ್ರಿಯೆ ನಿಜಕ್ಕೂ ಗುಣಾತ್ಮಕವಾಗಿತ್ತು. 'ಲಕ್ಷದಲ್ಲಿ ಒಂದು ಮದುವೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರೆ, ಸ್ನೇಹಿತರು 'ಮಹಿಳಾ ಕಾರ್ಯಕ್ರಮ'ದಲ್ಲಿ ನನ್ನ ಸಂದರ್ಶನವನ್ನೇ ಮಾಡಿದರು! ಮನಸ್ಸು ನಿರಾಳವಾಯಿತು. ಹೆಮ್ಮೆಯಿಂದ ಬೀಗಿತು.

ರಮಾ ಮತ್ತೆ ಮದುವೆಯಾದದ್ದು, ಹಳೆಯ ನೆನಪುಗಳಿಂದ ಹೊರಬಂದು ಹೊಸ ಜೀವನ ಆರಂಭಿಸಿದ್ದು ಭಾರತೀಯ ಸಮಾಜದಲ್ಲಿ ಸಾಹಸವೆಂದೇ ನನ್ನ ಭಾವನೆ. ಎಲ್ಲಕ್ಕೂ ನನ್ನ ಧೈರ್ಯ ಆಕೆಗಿದ್ದರೆ, ಆಕೆಯದು ನನಗಿತ್ತು. ಮದುವೆ-ಸಮಾರಂಭಗಳಲ್ಲಿ ನಡೆದ ಸಣ್ಣಪುಟ್ಟ ಕಿರಿಕಿರಿಗಳನ್ನು ಸಹಜವಾಗಿ ಸ್ವೀಕರಿಸಿದೆವು.

ನಮ್ಮ ಜೀವನ ಶೈಲಿಯಲ್ಲಿ ಅನೇಕ ಮಾರ್ಪಾಟುಗಳಾದವು. ತಮಿಳರ ತಲೆಯನ್ನು ಕಂಡರೆ ಆಗದಿದ್ದ ನನಗೆ ತಮಿಳು ಮೂಲದ 'ಸಂಗಾತಿ' ಗಂಟು ಬಿದ್ದದ್ದು ಒಂದು ವಿಪರ್ಯಾಸವೇ ಸರಿ. ಸಿಹಿಕಂಡರೆ ಮುನಿಸಿಕೊಳ್ಳುತ್ತಿದ್ದ, ಹೋಳಿಗೆಗೆ ಉಪ್ಪಿನಕಾಯಿ ಸವರಿ ತಿನ್ನುತ್ತಿದ್ದ ಆಕೆ, ಸಿಹಿ ಎಂದರೆ ಸ್ವರ್ಗವೆಂದು ತಿಳಿದಿದ್ದ ನನಗೆ ಬೇಕಾದ ಸಿಹಿಗಳನ್ನೆಲ್ಲಾ ಮಾಡಿದಳು. ಹಾಗೆಯೇ ತಿನ್ನಲೂ ಆರಂಭಿಸಿದಳು. ಹಿಂಗು-ಬೆಳ್ಳುಳ್ಳಿಗಳೆರಡಕ್ಕೂ ಅಡಿಗೆಯಲ್ಲಿ ಸಮಾನ ಸ್ಥಾನ-ಮಾನ ದೊರೆತವು. ಚೋಮಾಯಿ, ಕೊಳಕಟ್ಟೆ, ಗೊಜ್ಜುಗಳ ಪರಿಚಯ ನನಗಾದರೆ, ರೊಟ್ಟಿ, ಎಣ್ಣೆಗಾಯಿ, ಗುಳುಂಬ, ಚಟ್ನಿಪುಡಿಗಳ ಪರಿಚಯ ಅವಳಿಗಾಯಿತು. ರಮಾ ಮತ್ತು ಅವರ ಮನೆಯವರು 'ಮಾತುಗಂಟರು', ನಾನೋ 'ಶಾಂತಿಪ್ರಿಯ'. ಈ ಸಣ್ಣಪುಟ್ಟ ವ್ಯತ್ಯಾಸಗಳು, ವಿಪರ್ಯಾಸಗಳು, ಕಿರಿಕಿರಿಗಳು ನಮ್ಮ ಸುಮಧುರ ಜೀವನದ ಮೇಲೆ ಯಾವುದೇ ಪರಿಣಾಮ ಬೀರಲು ಸಮರ್ಥವಾಗಿಲ್ಲ.

-ಎಸ್. ಎಸ್. ಹಿರೇಮಠ
ಸಹಾಯಕ ನಿಲಯ ನಿರ್ದೇಶಕರು.
'ಆಕಾಶವಾಣಿ'
ಧಾರವಾಡ-೮

ಸಂಪಿಗೆ-ಮಲ್ಲಿಗೆ



ಮೊದಲಿನಿಂದಲೂ ನನ್ನ ಮನಸ್ಸಿನಲ್ಲಿ ಈ ದೇವರು, ಜಾತಿ, ಸಂಪ್ರದಾಯ, ಆಚಾರ-ವಿಚಾರಗಳ ಬಗ್ಗೆ ಒಂದು ರೀತಿ ಬೇಸರ. ವರದಕ್ಷಿಣೆಗಾಗಿ ಹೆಣ್ಣು ಹೆತ್ತ ತಂದೆ-ತಾಯಿಗಳ ಶೋಷಣೆ, ವೈಭವದ ಮದುವೆ, ಈ ಎಲ್ಲವುಗಳನ್ನು ಕಂಡರೆ ಎಲ್ಲಿಲ್ಲದ ಕೋಪ. ಈ ಎಲ್ಲಾ ವಿಚಾರಗಳು ನನ್ನ ಚಿಕ್ಕ ವಯಸ್ಸಿನಿಂದಲೇ ಮನಸ್ಸಿನಲ್ಲಿ ತುಮುಲವುಂಟುಮಾಡಿದ್ದವು. ನಾನು ಮಧ್ಯಮ ವರ್ಗದ ವೀರಶೈವ ಕುಟುಂಬದಲ್ಲಿ ಜನಿಸಿದವನು. ನನ್ನ ತಂದೆ-ತಾಯಿಗಳು ಶಿವ, ಪಾರ್ವತಿಯರ ಆರಾಧಕರು. ಇಂತಹವರ ಹೊಟ್ಟೆಯಲ್ಲಿ ಜನಿಸಿದ ಏಳು ಜನ ಮಕ್ಕಳ ಪೈಕಿ ಮೂರನೆಯವನಾದ ನಾನು, ನನ್ನ ಚಿಕ್ಕ ವಯಸ್ಸಿನಿಂದಲೇ ದೇವರು, ಜಾತಿ, ಮಠಾಧಿಪತಿಗಳು, ಸಂಪ್ರದಾಯಗಳ ವಿರುದ್ಧ ಸೆಟೆದು ನಿಂತು ಅವುಗಳನ್ನು ವಿರೋಧಿಸುತ್ತಾ ಬಂದಿದ್ದೆನು. ಇಂತಹ ವಿಚಾರದ ಪ್ರಭಾವದಿಂದಲೋ ಏನೋ ಮದುವೆಯಾಗುವುದಾದರೆ ಬೇರೆ ಜಾತಿಯ ಹುಡುಗಿಯನ್ನು ಪ್ರೀತಿಸಿ ಮದುವೆ ಮಾಡಿಕೊಳ್ಳಬೇಕೆಂಬ ವಿಚಾರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ಇಳಿಸಲು ಪ್ರಯತ್ನಿಸಿದೆನು.

ನಾನು ಬಿ.ಎ. ಓದುತ್ತಿರುವಾಗ, ಈ ವಿಚಾರಗಳ ಬಗ್ಗೆ ಈಗಾಗಲೇ ಕೆಲವರು ತಮ್ಮದೇ ಆದ ಸಿದ್ಧಾಂತವನ್ನು ಪ್ರತಿಪಾದಿಸಿದುದನ್ನು ಕೇಳಿ ತಿಳಿದು ಓದಿ ಅರಿತುಕೊಂಡೆನು. ಇದರಿಂದ ನನ್ನ ಮನಸ್ಸಿನ ವಿಚಾರಧಾರೆ ಮತ್ತಷ್ಟು ಪರಿಪಕ್ವವಾಗಿ ದೃಢವಾಯಿತು. ಇದರಿಂದ ಪ್ರೋತ್ಸಾಹ ದೊರೆತ ನನಗೆ ಬೇರೆ ಜಾತಿಯ ಹುಡುಗಿಯ ಪರಿಚಯವಾಗಿ, ಅದು ಪ್ರೇಮದ ಹಾದಿಯಲ್ಲಿ ನಡೆಯಿತು. ಈ ನಮ್ಮ ಪ್ರೇಮ ಐದು ವರ್ಷಗಳಷ್ಟಾಗಿದ್ದರು ಒಮ್ಮೆ ಸ್ಫೋಟಗೊಂಡು ಹುಡುಗಿಯ ಕಡೆಯವರು ನಮ್ಮನ್ನು ಬೇರೆ ಬೇರೆ ಮಾಡಿ ಅಗಲಿಸಿದರು. ನಾನು ಭಗ್ನ ಪ್ರೇಮದಲ್ಲಿ ಬೆಂದು ಹೆಣ್ಣನ್ನು ನಂಬಬಾರದೆಂದು ತೀರ್ಮಾನಿಸಿಕೊಂಡೆನು.

ನನ್ನ ವಿಚಾರಧಾರೆಗಳು ಇನ್ನೆಂದೂ ನನಸಾಗಲು ಸಾಧ್ಯವಿಲ್ಲವೆಂದು ತಿಳಿದು ಓದಿನ ಕಡೆ ಗಮನಹರಿಸಿ ಭೂಗೋಳಶಾಸ್ತ್ರದಲ್ಲಿ ಸ್ನಾತಕೋತ್ತರ

ಪದವಿಯನ್ನು ಸಂಪಾದಿಸಿದೆನು. ಪದವಿಯಲ್ಲಿ ನನ್ನ ಸಹಪಾಠಿಯಾಗಿದ್ದ ರಾಮಣ್ಣ ಕೋಟೆ ಹೊಸಹಳ್ಳಿ ಅವರು ನನಗಿಂತ ಮೂರ್ನಾಲ್ಕು ವರ್ಷ ಹಿರಿಯರು. ಅವರ ವಿಚಾರಧಾರೆಗಳು ಸಹ ನನ್ನಂತೇ ಇದ್ದುದರಿಂದ ಅವರ ಸ್ನೇಹ ತುಂಬಾ ಹತ್ತಿರವಾಯಿತು. ಅವರೂ ಸಹ ಬಿ.ಎ. ಓದು ತ್ತಿರುವಾಗಲೇ ಅಂತರಜಾತಿ ವಿವಾಹವಾದರು. ಈ ನಮ್ಮ ಸ್ನೇಹ ಇದ ರಿಂದ ಇನ್ನೂ ಹತ್ತಿರವಾಗಿ ನನಗೆ ಆತ್ಮೀಯರೆನಿಸಿದರು. ಅವರ ಚಿಕ್ಕಮ್ಮನ ಮಗಳಾದ ಶಶಿಕಲಾ ಮೈಸೂರಿನಲ್ಲಿ ಪಿ.ಯು.ಸಿ ವ್ಯಾಸಂಗ ಮಾಡುತ್ತಿದ್ದರು. ತನ್ನ ಅಣ್ಣ ರಾಮಣ್ಣನ ಮನೆಗೆ ರಜೆಯಲ್ಲಿ ಆಗಾಗ್ಗೆ ಬರುತ್ತಿದ್ದಳು. ಇದರಿಂದ ಶಶಿಕಲಾಳ ಪರಿಚಯ ವಾಯಿತು. ನನ್ನನ್ನು, ನನ್ನ ಸಿದ್ಧಾಂತವನ್ನು ಚೆನ್ನಾಗಿ ಬಲ್ಲ ರಾಮಣ್ಣನವರು ತನ್ನ ತಂಗಿಯನ್ನು ಮದುವೆಯಾಗಲು ನನ್ನ ಒಪ್ಪಿಗೆಯನ್ನು ಕೇಳಿದರು. ನಾನು ಸ್ವಲ್ಪ ಸಮಯ ತೆಗೆದುಕೊಂಡು ನನ್ನ ಬಹುದಿನದ ಆಸೆ ನನಸಾಗುವುದೆಂದು ತಿಳಿದು ಮದುವೆಗೆ ಒಪ್ಪಿಗೆ ನೀಡಿದೆನು

ಶಶಿಕಲಾಳು ಸಹ ಮಧ್ಯಮ ವರ್ಗದ ಒಕ್ಕಲಿಗರ ಕುಟುಂಬದಲ್ಲಿ ಜನಿಸಿದವಳು. ಅವರ ತಂದೆ ತಾಯಿಗಳು ಮೈಸೂರಿನವರು. ಈ ಮೈಸೂರು ಮಲ್ಲಿಗೆಯನ್ನು ಮದುವೆಯಾಗಲು ಇಷ್ಟಪಟ್ಟ ನಂತರ ನನ್ನ ವಿಚಾರಧಾರೆಗಳ ಬಗ್ಗೆ ತಿಳಿಸಿದೆನು. ಅವಳು ಸಹ ನನ್ನ ವಿಚಾರಧಾರೆಗಳ ಬಗ್ಗೆ ಸ್ಪಂದಿಸಿದಳು. ಅನಂತರ ಅವರ ತಂದೆ–ತಾಯಿಗಳನ್ನು ಮದುವೆಗೆ ರಾಮಣ್ಣ ನಾನು ಹೋಗಿ ಒಪ್ಪಿಸಿದೆವು. ಇನ್ನೂ ನಮ್ಮ ಮನೆಯ ಕಡೆ ಮದುವೆಯ ಬಗ್ಗೆ ವಿರೋಧ ವ್ಯಕ್ತವಾಯಿತು. ಈ ವಿರೋಧ ಅಂತಹ ಶಕ್ತಿಯುತವಾಗಿರಲಿಲ್ಲವೆಂಬು ಒಂದು ಸಮಾಧಾನಕರ ಅಂಶ.

ನಾನು ರಾಮಣ್ಣನವರು ಹಾಗೂ ಆತ್ಮೀಯ ಗೆಳೆಯರು ಒಂದೆಡೆ ಕಲೆತು ಮದುವೆ ಯಾವ ರೀತಿ ಆಗುವುದು ಎಂಬ ಬಗ್ಗೆ ಚರ್ಚೆ ನಡೆಸಿದೆವು. ಒಟ್ಟಾರೆ ಅಭಿಪ್ರಾಯದಂತೆ ಸರಳ ಮದುವೆಯಾಗಲು ವೇದಿಕೆಯನ್ನು ಸಿದ್ಧಪಡಿಸಿಕೊಂಡೆವು. ನಾನು, ರಾಮಣ್ಣ "ವಿವಾಹ ಸಂಹಿತೆ"ಯನ್ನು ಸಿದ್ಧಪಡಿಸಿದೆವು. ಸರಳ, ನಿರಾಡಂಬರ, ಜಾತ್ಯತೀತತೆಯ ಪ್ರತಿಪಾದಕರಾದ ರಾಷ್ಟ್ರಪಿತ ಗಾಂಧೀಜಿಯವರ ಜಯಂತಿ ದಿನವು ನನ್ನ ಮದುವೆಗೆ ಸೂಕ್ತ ದಿನವೆಂದು ಗೊತ್ತುಪಡಿಸಿದೆವು.

ಈ ಸರಳ ಸುಧಾರಣಾ ಅಂತರ ಜಾತಿಯ ವಿವಾಹವು ಅಂದಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಹಂಪನಾರವರ ನೇತೃತ್ವದಲ್ಲಿ ನಡೆಯಿತು. ಯಾವುದೇ ರೀತಿಯ ಮುಹೂರ್ತ, ಶಾಸ್ತ್ರಾಚಾರ, ಧಾರ್ಮಿಕ ವಿಧಿ–ವಿಧಾನಗಳನ್ನು ಅನುಸರಿಸದೇ, ಗೊಡ್ಡು ಸಂಪ್ರದಾಯಗಳ ವಿರುದ್ಧ ಸಮರ ಸಾರಿ "ವಿವಾಹ ಸಂಹಿತೆ"ಯ ವಾಚನ ನಂತರ ಮದುವೆ ಮಾಡುತ್ತಿರುವ ಸಂಕೇತವಾಗಿ ತಾಳಿ ಕಟ್ಟಲಾಯಿತು.

"ಪರಸ್ಪರ ಪ್ರೀತಿ–ವಿಶ್ವಾಸ ಹೊಂದಿಲ್ಲದೆ ಯಾವ ಶಾಸ್ತ್ರಾಚಾರದ ಪ್ರಕಾರ ತಾಳಿ ಕಟ್ಟಿಕೊಂಡರೂ, ಯಾವ ಅಗ್ನಿಯನ್ನು ಸುತ್ತಿದರೂ, ಎಷ್ಟೇ ವೈಭವದಿಂದ ಮದುವೆಯಾದರೂ ವ್ಯರ್ಥವೆಂದು ನಾವು ತಿಳಿದಿದ್ದೇವೆ. ಪ್ರೀತಿಯೊಂದೆ ಗಂಡ–ಹೆಂಡತಿಯರನ್ನು ಒಟ್ಟಿಗೆ ಬದುಕುವಂತೆ ಮಾಡುವ ಏಕೈಕ ಸಾಧನ, ಅಂತಹ ಪ್ರೀತಿಗೆ ನಾವಿಬ್ಬರೂ ಕಟ್ಟುಬಿದ್ದಿದ್ದೇವೆ. ಇನ್ನೂ ನಾವು ಯಾವುದೇ ಮತ ಧರ್ಮಕ್ಕೂ, ಯಾವುದೇ ಜಾತಿಗೂ ಸೇರಿ ದವರಲ್ಲ. ಮತಧರ್ಮ ಸಂಬಂಧವಾದ ಯಾವುದೇ ಶಾಸ್ತ್ರಾಚಾರಗಳನ್ನು ಅನುಸರಿಸುವುದಿಲ್ಲ. ಮೌಢ್ಯ ಅಜ್ಞಾನ, ಅಂಧಕಾರಗಳ ವಿರುದ್ಧ ನಡೆ ಯುತ್ತಿರುವ ಹೋರಾಟಗಳಲ್ಲಿ ಭಾಗಿಗಳಾಗಲು ನಮಗೆ ಹೆಮ್ಮೆಯಾಗು ತ್ತಿದೆ. ಎಲ್ಲ ಬಗೆಯ ಶೋಷಣೆಯ ವಿರುದ್ಧ ನಡೆಯುವ ಆಂದೋಲನವನ್ನು ನಾವು ಬೆಂಬಲಿಸುತ್ತೇವೆ. ನಾವು ಜೀವನದಾದ್ಯಂತ ಪರಸ್ಪರ ಪ್ರೀತಿ–ವಿಶ್ವಾಸದಿಂದ, ಸುಖ–ದುಃಖ, ನೋವು–ನಲಿವುಗಳಿಗೆ ಸಮಭಾಗಿಗಳಾ ಗಿರುತ್ತೇವೆ ಇತ್ಯಾದಿ ಏಳು ಘೋಷಣೆಗಳು ಪಾಸಿದ "ವಿವಾಹ ಸಂಹಿತೆ" ಯಲ್ಲಿ ಅಡಕವಾಗಿದ್ದವು.

ಬೆಂಗಳೂರು ಸಂಪಿಗೆ–ಮೈಸೂರು ಮಲ್ಲಿಗೆಯ ಪ್ರೇಮ ಬಂಧನದ ವಿವಾಹಕ್ಕೆ ನಮ್ಮ ಕುಟುಂಬದ ಎಲ್ಲರೂ, ಹತ್ತಿರದ ಸಂಬಂಧಿಗಳು ಹಾಗೂ ವಿಚಾರವಾದಿಗಳು, ಪತ್ರಕರ್ತರು, ಉಪನ್ಯಾಸಕರು, ವಕೀಲರೂ, ಅಧಿಕಾರಿಗಳು, ಬಂಧುಮಿತ್ರರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು.

ನಮ್ಮ ಮದುವೆಯನಂತರ ನಾವು ನಮ್ಮ ತಂದೆ–ತಾಯಿಯರ ಮನೆಯಲ್ಲೇ ವಾಸ ಮಾಡಿದ್ದೆವು. ಮೊದಲೇ ಈ ನಮ್ಮ ಮದುವೆಗೆ ವಿರೋಧ ವ್ಯಕ್ತಪಡಿಸಿದ್ದ ನಮ್ಮ ತಾಯಿಯವರು ಆರಂಭದಲ್ಲಿ ನನ್ನ ಪತ್ನಿ ಶಶಿಕಲಾಳನ್ನು ಅಡುಗೆ ಮನೆಗೆ ಸೇರಿಸಲು ಪ್ರತಿರೋಧಿಸುತ್ತಿದ್ದರು. ಈ ಒಂದು ವಿಚಾರವನ್ನು ಬಿಟ್ಟರೆ ಬೇರ್‍ಯಾವ ರೀತಿ ಕಿರುಕುಳ ಕಂಡು ಬರಲಿಲ್ಲ. ಮೊದಲ ಮಗುವಾದ ನಂತರ ನಾವೇ ಸ್ವತಂತ್ರವಾಗಿ ಸಂಸಾರವನ್ನು ನಮ್ಮ ತಂದೆಯವರು ನೀಡಿದ ಮನೆಯಲ್ಲಿ ಹೂಡಿದೆವು. ಕಾಲಕಳೆದಂತೆ ಎರಡನೆ ಮಗುವಾದ ನಂತರ ನಮ್ಮ ತಂದೆ–ತಾಯಿಗಳು ಹತ್ತಿರವಾದರು.

ಇನ್ನೂ ನನ್ನ ಪತ್ನಿ ಶಶಿಕಲಾಳ ತಂದೆ–ತಾಯಿ ಅವರ ಮನೆಯಲ್ಲಿ ಯಾವ ರೀತಿ ವಿರೋಧ ವ್ಯಕ್ತವಾಗಲಿಲ್ಲ. ಕಾರಣ ಮದುವೆಗೆ ಮೊದಲೇ ಅವರುಗಳ ಒಪ್ಪಿಗೆಯನ್ನು ಪಡೆಯಲಾಗಿತ್ತು. ಉಳಿದಂತೆ ಸಂಬಂಧಿಕರ ಬಗ್ಗೆ ನಾನು ಮೊದಲೇ ಅಷ್ಟಕಷ್ಟೆ. ಇದರಿಂದ ಅವರುಗಳು ನಮ್ಮ ಬಗ್ಗೆ ಪ್ರತಿಕ್ರಿಯಿಸಲು ಹಿಂಜರಿಯುತ್ತಿದ್ದರು.

ಈ ಮೊದಲೇ ತಿಳಿಸಿದಂತೆ ನಮಗೆ ದೇವರಲ್ಲಿ ಆಚಾರ–ವಿಚಾರಗಳಲ್ಲಿ ನಂಬಿಕೆಯಿಲ್ಲ. ಮಾನವ ಧರ್ಮದಲ್ಲಿ ನಂಬಿಕೆ. ಒಳ್ಳೆಯ ಮನಸ್ಸಿನಿಂದ ತನ್ನಂತೆ ಪರರನ್ನು ಕಾಣು ಎಂಬ ಮಾರ್ಗದಲ್ಲಿ ನಡೆಯುತ್ತಾ ಹದಿನೇಳು ವರ್ಷಗಳ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದೇವೆ. ಹದಿನಾರು ವರ್ಷದ ಮೊದಲನೆ ಮಗ ಸುಚಿತ್‌ಪ್ರಕಾಶ್ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ್ತಿದ್ದು, ಹನ್ನೆರಡು ವರ್ಷದ ಎರಡನೆ ಮಗ ಸುಮಿತ್ ಪ್ರಕಾಶ್ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ.

ಈ ಇಬ್ಬರು ಮಕ್ಕಳು ಪ್ರಾಥಮಿಕ ಹಂತದವರೆಗೆ ಕನ್ನಡ ಮಾಧ್ಯಮದಲ್ಲೆ ವ್ಯಾಸಂಗ ಮಾಡಿರುತ್ತಾರೆ. ಇವರುಗಳನ್ನು ಶಾಲೆಗೆ ಸೇರಿಸುವ ಸಂದರ್ಭದಲ್ಲಿ ಆದ ತೊಂದರೆ ಏನೆಂದರೆ. ಶಾಲೆಗೆ ಸೇರಿಸುವ ಅರ್ಜಿಯಲ್ಲಿ ಜಾತಿ/ಮತ ಇವುಗಳ ಕಲಂ ಇದೆ. ಈ ಕಲಂನಲ್ಲಿ ಜಾತಿ–ಜಾತ್ಯತೀತ, ಮತ, ಭಾರತೀಯ ಎಂದು ಭರ್ತಿ ಮಾಡಿರುವುದಕ್ಕೆ ಶಾಲೆಯ ಮುಖ್ಯಸ್ಥರಿಂದ ಆಕ್ಷೇಪ. ಈ ಬಗ್ಗೆ ನಾನು ನನ್ನ ಪತ್ನಿ ಶಶಿಕಲಾ ಶಾಲೆಯ ಮುಖ್ಯಸ್ಥರೊಡನೆ ವಾಗ್ವಾದ ನಡೆಸಬೇಕಾದ ಕಹಿ ಪ್ರಸಂಗ. ಕೊನೆಗೆ ಜಾತಿ ಕಲಂನಲ್ಲಿ ಜಾತ್ಯತೀತ ಭರ್ತಿಯಾಯಿತು. ಆದರೆ ಮತದ ಕಲಂನಲ್ಲಿ ಭಾರತೀಯ ರದ್ದಾಗಿ ಹಿಂದೂ ಎಂದೂ ಭರ್ತಿ ಮಾಡಿಸಿದರು ನಾನು "ಹಿಂದೂ" ಅಲ್ಲವೆಂದು ಎಷ್ಟೇ ಪ್ರತಿಪಾದಿಸಿದರೂ ಅದು ವ್ಯರ್ಥದ ಕೆಲಸವಾಯಿತು. ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಈ ಸಣ್ಣ ಒಪ್ಪಂದಕ್ಕೆ ಸೋಲಬೇಕಾಯಿತು.


ಸಿದ್ಧಾಂತವುಳ್ಳ ಅಂತರಜಾತಿ ವಿವಾಹಿತರು ಇಂತಹ ಪ್ರಸಂಗಗಳನ್ನು ಎದುರಿಸಬೇಕಾಗಿ ಬರುತ್ತದೆ. ಈ ಎಲ್ಲಕ್ಕೂ ಒಂದು ಕಡಿವಾಣ ಹಾಕಲು ಅಂತರಜಾತಿ ವಿವಾಹಿತರು ಸಂಘಟಿತರಾಗಿ ಭಾರತ ಸಂವಿಧಾನದಲ್ಲಿ ತಿಳಿಸಿರುವಂತೆ ಜಾತ್ಯತೀತರಾಗಿ ಬಾಳಲು ಸರ್ಕಾರವು ಅನುವು ಮಾಡಿ ಕೊಡಲು ಒತ್ತಡ ತರಬೇಕು.

ನಮ್ಮ ಈ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ಹೊಸದಾಗಿ ಪ್ರೀತಿಸಿ ಅಂತರಜಾತಿ ವಿವಾಹವಾಗುವರು, ಯಾವುದೇ ಅಡ್ಡಿ ಆತಂಕಗಳನ್ನು, ವಿರೋಧಗಳನ್ನು ಧೈರ್ಯದಿಂದ ಎದುರಿಸುವಂತಹ ಬಲ ಹೊಂದಿರಬೇಕು. ನಾವು ಕೆಳಗೆ ಬಿದ್ದಾಗ ಸಮಾಜವು ನಮ್ಮನ್ನು ನೋಡಿ ಅಪಹಾಸ್ಯ ಮಾಡುತ್ತದೆ. ಆದರೆ ನಾವೇ ಈ ಎಲ್ಲವನ್ನು ಧೈರ್ಯದಿಂದ ಮೆಟ್ಟಿ ನಿಂತಾಗ ಅದೇ ಸಮಾಜ ನಮ್ಮನ್ನು ಪ್ರಶಂಸಿಸುತ್ತದೆ.

ಭಾರತದಲ್ಲಿ ಜಾತೀಯತೆಯನ್ನು ಹೊಡೆದು ಓಡಿಸಲು ಅಂತರಜಾತಿ ವಿವಾಹವೇ ಒಂದು ಮಾರ್ಗ. ಇದರಿಂದ ಅಂತರಜಾತಿ ವಿವಾಹಿತರು ಯಾವುದೇ ಜಾತಿಯೊಳಗೆ ಸೇರದೇ ಭಾರತವನ್ನು ಜಾತ್ಯತೀತ ರಾಷ್ಟ್ರವನ್ನಾಗಿ ಮಾಡಲು ಶ್ರಮ ಪಡಬೇಕು.

– ಸಂಪಿಗೆ ಶಿವಪ್ರಕಾಶ್
೨೨೩ "ಅನ್ನಪೂರ್ಣ"
೧೧ನೇ ಸಿ ಕ್ರಾಸ್, ೩ನೇ ಮೈನ್
ಮಹಾಲಕ್ಷ್ಮಿ ಬಡಾವಣೆ
ಬೆಂಗಳೂರು– ೫೬೦ ೦೮೬

ಪೋಲೀಸರ ನಡುವೆ ಮದುವೆ



ತಮಿಳುನಾಡಿನ ಕಾಂಜೀಪುರಂ ಮೂಲದ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಹೆಣ್ಣುಮಗಳು ನಾನು. ಚತುರ್ವೇದಾಭ್ಯಾಸ ಮಾಡಿ ನೂರು ಯಾಗ ನಡೆಸಿಕೊಟ್ಟ ಹೆಗ್ಗಳಿಕೆಯಲ್ಲಿ ಇಂದೂ ಬೀಗುವ ಕುಟುಂಬದ ಹತ್ತು ಮಕ್ಕಳಲ್ಲಿ ನಾನು ಒಂಭತ್ತನೆಯವಳು. ಕಷ್ಟ ಏನೆಂದರೇನು ಗೊತ್ತಿಲ್ಲದ ಹಾಗೆ 'ಸಕ್ಕರೆ' ಎಂದೇ ನನ್ನನ್ನು ಮನೆಯಲ್ಲಿ ಕರೆಯುತ್ತಾರೆ. ಮುದ್ದಿಗೆ 'ಗಿಟಾರ್' ಎನ್ನುತ್ತಾರೆ 'ಗೀತಾ' ಅನ್ನುವುದಿಲ್ಲ. ಮನೆಯಲ್ಲಿ ಜರುಗಿರುವ ಮೂರ್ನಾಲ್ಕು ಅಂತರ್ಜಾತೀಯ ವಿವಾಹಗಳು, ಇಂಗ್ಲಿಷ್ ಭಾಷಾ ಮೋಹ, ಆಧುನಿಕತೆಯ ರಂಗು ರಂಗಿನ ಪರಿಧಿಯನ್ನು ನನ್ನ ಸುತ್ತ ಹೆಣೆದಿವೆ. ಇಷ್ಟಾದರೂ ಜಾತಿ ಸಂಪ್ರದಾಯದ ಕುರಿತು ನಮ್ಮನೆಯಲ್ಲಿನ 'ಕಟ್ಟು' ಸಡಲಿಲ್ಲವಾಗಿ, ನಾನೂ ಸಹಜವಾಗಿಯೇ ನನ್ನವನನ್ನು ಜಾತಿ, ಅಂತಸ್ತು, ಸಂಪ್ರದಾಯದಲ್ಲೆಲ್ಲ ಬಾನೆತ್ತರದ ಕಲ್ಪನೆಯಲ್ಲೇ ಕಲ್ಪಿಸಿದ್ದೆ. ಹೀಗಿರುವಾಗ ತಂದೆ ತಾಯಿಲ್ಲದ ನನಗೆ ಪ್ರೀತಿಯ ಅಣ್ಣನೆ ನನ್ನ ಕಲ್ಪನೆಯಂತೆಯೇ 'ಅಷ್ಟೆತ್ತರ'ದ ಗಂಡು ಗೊತ್ತು ಮಾಡಿದ್ದ. ಹುಡುಗ ಬೊಂಬಾಯಿನಲ್ಲಿನ ಒಬ್ಬ ಸುಂದರ ಇಂಜಿನಿಯರಾಗಿದ್ದ. ನನ್ನ ಪಕ್ಕಾ ಜಾತಿವಾದಿ ಬುದ್ಧಿಗೆ, ಅಂತಸ್ತಿನ ಕಲ್ಪನೆಗೆ ತಕ್ಕ ಹಾಗೇ ಇದ್ದ. ಇದು ಆಗಸ್ಟ್ ೧೯೮೭.

ಈ ವೇಳೆಗೆ ನಾನು ಅಧ್ಯಾಪಕಿಯಾಗಿದ್ದೆ. ಮದುವೆಯ ಜಂಬದ ಪುಕ್ಕ ಕೆದರಿಕೊಳ್ಳುತ್ತಿರುವಾಗಲೇ ಆಗಸ್ಟಿನ ಮದುವೆ ಡಿಸಂಬರಕ್ಕೆ ಬಿಸಾಡಿ ಹೋಯಿತು. ಕಾರಣವೋ? ಹುಡುಗನಿಗೆ ಕೊಡಮಾಡಬೇಕಿದ್ದ ವಜ್ರದುಂಗುರವೂ, ಧಿಮಾಕಿನ ಚೈನೂ ಸಿದ್ಧವಾಗಲೇ ಇಲ್ಲ. ಈ ಒಂದು ಜುಜುಬಿ ಕಾರಣಕ್ಕಾಗಿ ಗಂಡಿನವರು ತೋರಿದ ಆ ಒಂದು 'ಇದು' – ಅದನ್ನೇನು ಹೇಳುವುದು? ಪೊಗರು? ಅದು ನನ್ನನ್ನು ನೋಯಿಸಿತು. ಎಂದೂ ಕಂಡಿಲ್ಲದ ಕಷ್ಟ ನನಗೀಗ ಕಾಣಿಸಿತು. ಎಂದೂ ಯಾವುದಕ್ಕೂ ವಿರೋಧಿಸುವ ಅಗತ್ಯವೇ ಕಂಡಿರದಿದ್ದ ಹಾಗೂ ಯಾವುದಕ್ಕೂ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯವೇ ಕಂಡಿರದಿದ್ದ ನನ್ನೊಳಗೆ ಈಗ ಮೂಡಲಾರಂಭಿಸಿದ್ದ ಪ್ರತಿಭಟನೆಯ ಧ್ವನಿ ನನಗೇ ಹೊಸತಾಗಿತ್ತು. ಎಂದಾದರೂ ತಮ್ಮದೇ ಆಗಿರುತ್ತಿದ್ದ ಕನಿಷ್ಠ ಒಡವೆಗಳಿಗಾಗಿ ಮಾನವೀಯತೆಯನ್ನು ಮರೆತ ವ್ಯಕ್ತಿ ನಾನು ಕಲ್ಪಿಸಿಕೊಂಡ ಬಾನೆತ್ತರದ ವ್ಯಕ್ತಿಯಾಗಿಲ್ಲದ್ದನ್ನು ನನ್ನಿಂದ ಸಹಿಸಿಕೊಳ್ಳಲಾಗಲಿಲ್ಲ.

ಈ ವೇಳೆಗೆ ನನಗೆ ನೆನಪು ಬಂದದ್ದು ನನ್ನ ಹಾಡುಗಾರ ಗೆಳೆಯ ಹಾಗೂ ಆತನ ಸ್ನೇಹಿತ ರಾಜೂ. ರಾಜೂ ಮಡಿಕೇರಿಯ ಡಿ.ಎ.ಆರ್. ಪೊಲೀಸು ಕಚೇರಿಯಲ್ಲಿ ಉದ್ಯೋಗಿ. ಅತಿ ಸರಳ ಹಾಗೂ ವಿನಯಿ. ಕಷ್ಟಪಟ್ಟೇ ಬೆಳೆದು ಜೀವನದ ನಿಷ್ಠುರತೆಯೊಂದಿಗೆ ಹೋರಾಡುತ್ತಲೇ ಉತ್ತಮಿಕೆಯನ್ನು ರೂಢಿಸಿಕೊಂಡ ವ್ಯಕ್ತಿ. ಅವರೆಂದರೆ ನನಗೆ ತುಂಬ ಮೆಚ್ಚುಗೆಯಿತ್ತು. ಪ್ರೀತಿಗೀತಿಯೆಂಬ 'ಗರ'ಯೇನಿರಲಿಲ್ಲ. ಬಹಳ ವಾತ್ಸಲ್ಯಮಯಿ. ಇಂತವರೊಂದಿಗೆ ನನ್ನ ಸಮಸ್ಯೆ, ಬರೀ ನನ್ನದೇ ಆಗಿದ್ದ, ನಾನೇ ಬಿಡಿಸಬೇಕಿದ್ದ, ನನ್ನ ಜೀವನದಲ್ಲಿ ನನಗರ್ಥವಾಗಿದೆ ಎಂದು ನಾನಂದುಕೊಂಡಿದ್ದ ಮೊಟ್ಟ ಮೊದಲ ಸಮಸ್ಯೆ ಕುರಿತು ಚರ್ಚಿಸಿದೆ. ಶ್ರೀಮಂತಿಕೆಯ ಪೊಗರು ನಿಜಕ್ಕೂ ನನ್ನಿಂದ ಇಳಿದಿತ್ತು. ರಾಜೂಗೆ ನನ್ನ ಅಂತರಂಗ ತಿಳಿಸಿದೆ– 'ನಾವು ಮದುವೆಯಾಗೋಣವೇ?'

ಅಂತಸ್ತಿನ ಮೇಲ್ಮಾಳಿಗೆಯಲ್ಲಿರಬಹುದಾದ ಈ ಧ್ವನಿ ಅವರನ್ನು ಬೆಚ್ಚಿಬೀಳಿಸಿತು. ಆತ ಜಗತ್ತು ಕಂಡವರು. ನೆಲದ ಬದುಕಿನ ನಿಷ್ಠುರ ನೆಲೆ ಅರಿತವರು. ಹುಟ್ಟಿಂದ ಬದುಕಿನ ಸಿಹಿಕವಚದೊಳಗೇ ಇದ್ದ ನನ್ನನ್ನು ಅರ್ಥ ಮಾಡಿಕೊಂಡಿದ್ದವರು ನನ್ನ ಸಲಹೆಗೆ ಒಪ್ಪಲಿಲ್ಲ. ನಾನು ಬಿಡಲಿಲ್ಲ. ಕಾಡಿ ಬೇಡಿ ಹಿಂದಿಂದೆ ಅಲೆದು ಒಪ್ಪಿಸಿದೆ. ಅದು ಸೆಪ್ಟೆಂಬರ್ ೧೯೮೭.

ಗೆಳೆಯನಿಗೂ ಸುದ್ದಿ ಸಿಕ್ಕಿತು. ಆದಿಕರ್ನಾಟಕ ಜಾತಿ ಪಂಗಡಕ್ಕೆ ಸೇರಿದ, ಹಾಗೂ ಬೆಳಗಿನ ದುಡಿತವೇ ಸಂಜೆಯ ಊಟವಾಗಿದ್ದ ನನ್ನವರನ್ನು ಬಿಟ್ಟುಬಿಡಲು ಉಪದೇಶಿಸಿದ. ನೆಲದ ಮೇಲೆ ನಿಂತಿರಲಾರದ ನನ್ನ ನಿರ್ಧಾರದ ಮೇಲೆ ಆತನಿಗೆ ಸಂಶಯವಿದ್ದಂತಿತ್ತು. ಇದು ನೆರವೇರಬೇಕಾದರೆ, ಈ ಮದುವೆಯ ಎಲ್ಲ ಜವಾಬ್ದಾರಿ ತನಗೆ

ವಹಿಸಬೇಕೆಂಬುದು ಅವನ ಇರಾದೆಯಾಗಿತ್ತು. ಇದಾದ ಹತ್ತೇ ದಿನಗಳಿಗೆ ಅಂದರೆ, ಸೆಪ್ಟೆಂಬರ್ ೨೮, ೧೯೮೭ಕ್ಕೆ ನನ್ನ ಮದುವೆಯೆಂಬ ಪತ್ರಿಕೆ ಅಚ್ಚಾಯಿತು. ಕೇವಲ ೫೦ ಪತ್ರಿಕೆಗಳು. ೨೭ರಂದು ಮೊಟ್ಟಮೊದಲ ಪತ್ರಿಕೆ ಪೋಲಿಸ್ ವರಿಷ್ಠಾಧಿಕಾರಿಯವರಿಗೆ ವಿತರಣೆಯಾದ ಮೇಲೆಯೇ ನಮಗೆ ತಿಳಿದದ್ದು. ನಾನು ಮನಸ್ಸು ಬದಲಿಸಬಹುದೆಂಬ ಭಯಂಕರ ನಂಬಿಕೆಯೊಂದಿಗೆ ಆತ ನಮಗೆ ಮೊದಲೇ ಸುದ್ದಿ ಕೊಟ್ಟಿರಲಿಲ್ಲ. ನಾಳೆಯೇ ನನ್ನ ಮದುವೆಯೆಂದು ಗೊತ್ತಾದಾಗ ವಿಚಿತ್ರ ಸಂಕಟವಾಯಿತು. ಖುಷಿಯೇನೂ ಆಗಲಿಲ್ಲ. ಅತೀವ ಕಳವಳ, ದುಃಖಗಳೊಂದಿಗೆ ಮದುವೆ ನಡೆದುಹೋಯಿತು. ಕೆಲವೇ ಪತ್ರಕರ್ತರು ಆರೇಳು ಮಂದಿ ಮಿತ್ರರು, ಕೆಲವೇ ಪೋಲೀಸರ ನಡುವೆ.

ನಾನು ಜಾತಿ, ಅಂತಸ್ತನ್ನು ದಾಟದ ಬಗೆ, ನಮ್ಮವರಿಗೆ ಆಘಾತ ತಂದಿತ್ತು. ತಮ್ಮ ಮನೆಯ 'ಯಥಾಜಾತೆ' ಇಂಥ ಕೆಲಸ ಮಾಡಲು ಸಾಧ್ಯವೇ ಇಲ್ಲವಾದ ಕಾರಣ ಈ ಇವನೇ ಏನೋ ಮಸಲತ್ತು ಮಾಡಿರಬೇಕೆಂಬ ಗುಮಾನಿ ಅವರಿಗಿತ್ತು. ಸಮಾಜದಲ್ಲಿ ಭದ್ರವಾದ ಅಂತಸ್ತಲ್ಲೂ, ಸ್ಥಾನಮಾನಗಳಲ್ಲೂ ಇರುವ ನಮ್ಮನೆಯವರಿಗೆ ನಮ್ಮಿಬ್ಬರನ್ನೂ ಬೇರ್ಪಡಿಸುವುದು ಅತ್ಯಂತ ತುರ್ತಿನ ಹಾಗೂ ಮರ್ಯಾದೆಯ ಪ್ರಶ್ನೆಯಾಗಿತ್ತು.


ಆದರೆ ಸಾಕಷ್ಟು ವಿವೇಕದಿಂದಲೇ ನಿರ್ಧಾರಕ್ಕೆ ಬಂದುದರಿಂದಲೂ, ಪ್ರೀತೀಗೀತಿಯೆಂಬ ಭಾವಾವೇಶ ಮಾತ್ರವೇ ನಮ್ಮ ಮದುವೆಗೆ ಕಾರಣವಾಗದ್ದರಿಂದಲೂ ನಾವು ಎದೆಗೆಡಲಿಲ್ಲ. ಇವೆಲ್ಲ ಸಹಜ ಎಂಬುದು ನಮಗೆ ಗೊತ್ತಿತ್ತು. ಬೆಳಗ್ಗೆ ಮದುವೆಯಾಗಿದ್ದು, ಮಧ್ಯಾಹ್ನ ಕಚೇರಿ ಕೆಲಸಕ್ಕೆ ಹಾಜರಾಗಿದ್ದ ನಮ್ಮನ್ನು ಕಂಡು ಯಾರ್‍ಯಾರು ದಂಗಾದರೋ, ಹುಚ್ಚು ಎಂದರೋ, ಎಳಸು ಎಂದರೋ ಎಲ್ಲಕ್ಕೂ ನಮ್ಮದು ಜಾಣಕಿವುಡು. ಖಂಡಿತಾ ಈವತ್ತಿಗೂ ಜಾತಿ ಅಂತಸ್ತಿನ ಬಂಧ ನಮ್ಮ ತವರುಗಳಲ್ಲಿದೆ ನಮ್ಮಿಬ್ಬರ ನಡುವೆ ಇಲ್ಲ. ಜಾತಿ ಎಂಬುದೇನು ಸಾಮಾನ್ಯವೆ? ಯಾವತ್ತೂ ನಮ್ಮ ನಡೆ, ನುಡಿ, ನೋಟಗಳಲ್ಲೂ ಇಣುಕುತ್ತಲ್ಲವೆ? ಇದಕ್ಕೆ ಇಂಡಿಯಾದಂಥ ದೇಶದಲ್ಲಿ ಇನ್ನೂ ಘಾಟು ಜಾಸ್ತಿ. ನಮಗೂ ಹೀಗೇ ಘಾಟು ಜಾಸ್ತಿಯಾದಾಗ ಸೀನಿದ್ದೇವೆ, ಆರೋಗ್ಯ ಕೆಡಿಸಿಕೊಂಡಿಲ್ಲ ಅಷ್ಟೆ. ಕೋಳಿ ಮರಿಯೊ, ಗೊಜ್ಜು ಮಜ್ಜಿಗೆ ಹುಳಿಯೋ ಆಗಾಗ ತಮ್ಮ ತಲೆಹರಟೆತನದಿಂದ ನಮ್ಮ ನಡುವೆ ನುಗ್ಗಿವೆ. ಇದೂ ಸಹಜ. ಭಿನ್ನಾಭಿಪ್ರಾಯಗಳು ಎಲ್ಲಿಲ್ಲ ಹೇಳಿ? ಆದರೆ ಜೀವನದ ಸುಂದರ ಕ್ಷಣಗಳನ್ನು ಹಾಳು ಮಾಡುವಷ್ಟು ಇವನ್ನು ನಾವು ಬೆಳೆಸಿಲ್ಲ.

ನಮ್ಮವರೆಂದೂ ನನ್ನನ್ನು 'ನೀನು ಹೀಗೇ ಇರಬೇಕು' ಎಂದು ವಿಧಿಸಿಲ್ಲ. ನನ್ನೆಲ್ಲ ಸಂಗತಿಗಳಿಗೆ ಅವರು ಜೊತೆ. ಕನಿಷ್ಠ ಅನ್ನ ಕುದಿಸಲೂ ಗೊತ್ತಿರದಿದ್ದ ನನಗೆ ಬಾಳಲು ಬೇಕಾದ ಎಷ್ಟೋ ಅವರೇ ಕಲಿಸಿದ್ದಾರೆ. ಮಾನಸಿಕ ಎತ್ತರ ಎಂಬುದು ಸಂಸಾರದಲ್ಲಿ ತುಂಬ ಮುಖ್ಯ ಎಂಬುದು ಹಾಗೂ ಎಂದಾದರೂ ವಿಮಾನವೆಂಬುದು ಧರೆಗಿಳಿಯಲೇಬೇಕು ಹಾಗೂ ಮಣ್ಣನ್ನು ತುಳಿಯಲೇಬೇಕು ಎಂಬುದು ನನಗೀಗ ಅರ್ಥವಾಗಿದೆ. ನನ್ನವರ ಸರಳ ಸಜ್ಜನಿಕೆಯೇ ಇದಕ್ಕೆ ಕಾರಣವಾಗಿದೆ.

ನಮ್ಮ ಬದುಕಿನ ಈ ರೀತಿ ನನ್ನೆದುರಿಗಿರುವ ಸಮಾಜಕ್ಕೆ ಅರಿವಾಗಲಿ ಹಾಗೂ ಅರ್ಥವಿಲ್ಲದ ಕಟ್ಟುಬಂಧಗಳನ್ನು ಸಡಿಲಿಸಲಿ ಎಂಬುದು ನನ್ನ ಈ ಬರಹದ ಆಶಯವಾಗಿದೆ.

– ಗೀತಾ ನಾವಲ್
ಕನ್ನಡ ಉಪನ್ಯಾಸಕಿ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುಶಾಲನಗರ, ಕೊಡಗು.

ಯಾವ ಜನ್ಮದ ಮೈತ್ರಿ..



ಮಾರಿ ಕಣ್ಣಿಗೆ ಮರುಳಾಗಿ
ನೆಚ್ಚಿ ಮೆಚ್ಚಿ ಕೂಡಿದ್ದೇವ
ಬೇರ ಇಲ್ಲಾ। ಇದ್ದರೆ
ಶಿವನೆ ಬಲ್ಲಾ.

ಬಹುಶಃ ಬೇಂದ್ರೆಯವರು ನಮ್ಮಂಥವರನ್ನೇ ನೋಡಿ ಪದ್ಯ ಬರೆದಿರಬೇಕು ಎಂದು ಎಷ್ಟೋ ಬಾರಿ ನಾನು ಯೋಚಿಸಿದ್ದುಂಟು! ನನ್ನ ಅನೇಕ ಗೆಳೆಯ–ಗೆಳತಿಯರು ನಿಮ್ಮಿಬ್ಬರದು ಹೇಗೆ ಮದುವೆಯಾಯಿತು ಎಂದು ಕೇಳಿದಾಗೆಲ್ಲ ಹೀಗೆ... ಆಯಿತು ಹೇಗೊ ಆಯಿತು ಎಂದು ಅರ್ಧಂಬರ್ಧ ವಿಷಯ ತಿಳಿಸಿ ನಾನು ಜಾರಿಕೊಂಡದ್ದುಂಟು. ಆದರೆ ಇದೀಗ ಇದ್ದದ್ದನ್ನು ಇದ್ದ ಹಾಗೆಯೆ ಹೇಳಲೇಬೇಕಾಗಿದೆ. ಇದೀಗ ನಾವು ಮದುವೆಯಾಗಿ ಹನ್ನೆರಡು ವರುಷಗಳೇ ಕಳೆದು ಹೋಗಿರುವುದರಿಂದ ಹೇಳಿಕೊಳ್ಳಲು ಲಜ್ಜೆ, ಭಯ, ಸಂಕೋಚವೇನೂ ಇಲ್ಲ, ಬದಲು ಹಳೆಯದನ್ನು ಮೆಲುಕು ಹಾಕಲು ಸಂತೋಷವೇ ಆಗುತ್ತಿದೆ. ದುಃಖದ ಸಂಗತಿಯೆಂದರೆ ಸಂಪಾದಕರು ಪುಟಗಳ ಮಿತಿಯೊಡ್ಡಿರುವುದು !

ನಾನು ಹುಟ್ಟಿ ಬೆಳೆದದ್ದು ಶಿವಮೊಗ್ಗೆಯಲ್ಲಿ. ನಂಬುತ್ತೀರೊ ಇಲ್ಲವೊ ಶಿವಮೊಗ್ಗೆಯ ನೀರು–ನೆಲ–ಗಾಳಿಗೇ ವಿಚಿತ್ರವಾದ ಶಕ್ತಿಯಿದೆ. ಆ ಶಕ್ತಿ ಯಾವ ಸ್ವರೂಪದ್ದು ಎಂದು ವಿವರಿಸುವುದು ಅಸಾಧ್ಯ. ಅದನ್ನು ಆ ಊರಿನಲ್ಲಿಯೇ ಇದ್ದು ಅನುಭವಿಸಿದ ಮೇಲಷ್ಟೇ ತಿಳಿಯುವಂತಾಗಿದ್ದು. ನನ್ನದು ಕೆಳ ಮಧ್ಯಮ ವರ್ಗದ ಕುಟುಂಬ. ನನ್ನ ಮನೆ ಮಾತು ಕೊಂಕಣಿ. ನನ್ನ ತಂದೆ ಅಂಚೆ ಇಲಾಖೆಯಲ್ಲಿ ಕಾರಕೂನ. ಹಾಗಾಗಿ ಹೊಟ್ಟೆ–ಬಟ್ಟೆಗಿತ್ತು, ಅದಕ್ಕಿಂತ ಹೆಚ್ಚಿಲ್ಲ. ಜಾತಿಯಿಂದ ಗೌಡ ಸಾರಸ್ವತಳಾದರೂ, ಹತ್ತಿರದ ಬಂಧುಗಳೊಂದಿಗೆ ಬಿಟ್ಟರೆ ಇತರೆ ಕೊಂಕಣಿಗರ ಜತೆ ಬೆರೆಯುತ್ತಿದ್ದದ್ದು ಕಡಿಮೆ. ಶಿವಮೊಗ್ಗೆಯ ಜಯನಗರ–ಬಸವನಗುಡಿಯಲ್ಲಿ ನಮ್ಮ ವಾಸ್ತವ್ಯವಾದ್ದರಿಂದ, ಹೆಚ್ಚು ಕಮ್ಮಿ ಬ್ರಾಹ್ಮಣ, ಲಿಂಗಾಯತ, ಗೌಡ ಸಮುದಾಯದ ನಡುವೆ ನನ್ನ ಬಾಲ್ಯ ಹಾಗೂ ಯೌವ್ವನ.

ನನ್ನ ಅಜ್ಜಿ ಅವಳ ಕಾಲಕ್ಕೆ ಎರಡನೆಯ ಇಯತ್ತೆ ಕಲಿತವಳು. ಕನ್ನಡ ಹಿಂದಿ ಓದಲು, ಬರೆಯಲು ಬಲ್ಲವಳು. ಅವಳ ಪ್ರಭಾವಳಿಯ ಅಡಿಯಲ್ಲೇ ಹೆಚ್ಚು ಕಮ್ಮಿ ನನ್ನ ಜೀವನ. ಅವಳ ಮಾತುಕತೆಯೇನಿದ್ದರೂ ಪರಮಹಂಸ, ರಮಣ ಮಹರ್ಷಿ, ವಿವೇಕಾನಂದ, ಧ್ಯಾನ, ಜಪ–ತಪ ಇತ್ಯಾದಿ. ಆದರೆ ಲೌಕಿಕದೊಳಗೆ ಪ್ರವೇಶಿಸಿದಳೆಂದರೆ ಹರಟೆಯಲ್ಲಿ ಅವಳನ್ನು ಮೀರಿಸುವವರಿಲ್ಲ. ನನ್ನ ತಾಯಿಗೆ ಮಾತು ಕಮ್ಮಿ. ಹಾಗಾಗಿ ನನ್ನ ದೊಡ್ಡಮ್ಮನ

(ತಂದೆಯ ಅಣ್ಣನ ಹೆಂಡತಿ) ಪ್ರವೇಶವಾಯಿತೆಂದರೆ ನಮಗೆ ರುಚಿಕಟ್ಟಾದ ಮಾತಿನ ಭೋಜನ. ಆ ಮಾತುಕತೆಗಳೇನಿದ್ದರೂ ನನ್ನ ಅಜ್ಜಿ ತೊರೆದು ಬಂದ ಊರಿನ ಸುದ್ದಿ, ಮದುವೆ–ಮುಂಜಿ–ಬಾಣಂತನ–ಹುಟ್ಟು–ಸಾವು–ನೋವು–ಇತ್ಯಾದಿ. ಕುರಿತದ್ದು. ಮದುವೆಯ ಸುದ್ದಿ ಬಂದಾಗೆಲ್ಲ ಮೊದಲ ಪ್ರಶ್ನೆಯೆಂದರೆ: ಎಷ್ಟಂತೆ ವರದಕ್ಷಿಣೆ? ಎಷ್ಟಂತೆ ಚಿನ್ನ? (ಅದೂ ಲಕ್ಷಗಳಲ್ಲಿ– ಪವನುಗಳಲ್ಲಿ) ಆಮೇಲೆ ಪ್ರಸ್ತಾಪವಾಗುತ್ತಿದ್ದದ್ದು ಹುಡುಗನದ್ದೋ ಹುಡುಗಿಯದ್ದೋ ಬಣ್ಣ. ಒಂದರ್ಥದಲ್ಲಿ ಹಿಂದೆಯೂ–ಇಂದಿಗೂ ನನ್ನ ಸಮುದಾಯದ ಜನರಲ್ಲಿ ಹೆಚ್ಚು ಮಾನ್ಯತೆ ಪಡೆದಿರುವುದು ಚಿನ್ನ ಮತ್ತು ಬಣ್ಣ. ನನ್ನ ತಂದೆ ತಾಯಿಯ ಬಂಧುಗಳು ಹೆಚ್ಚು ಕಡಿಮೆ ಎಲ್ಲರೂ ವ್ಯಾಪಾರಸ್ಥರಾಗಿದ್ದರಿಂದ ಅನುಕೂಲವಾಗಿಯೇ ಇದ್ದರು. ನನ್ನ ತಂದೆ ಸರ್ಕಾರಿ ನೌಕರಿಯಲ್ಲಿದ್ದದ್ದರಿಂದ ಹಾಗೂ ನಾವು ನಾಲ್ವರು ಮಕ್ಕಳಾದ್ದರಿಂದ ಒಂದು ರೀತಿಯಲ್ಲಿ ಸಂಕಷ್ಟದ ಸ್ಥಿತಿಯಲ್ಲೇ ಇದ್ದೆವು ಎಂದು ಹೇಳಬೇಕು. ಬಡತನದ ಕಾರಣ ಅನೇಕ ಬಾರಿ ಬಂಧುಗಳ ಸಮ್ಮುಖದಲ್ಲಿ ಅವಮಾನಿತರಾಗುತ್ತಿದ್ದೆವು. ಆದರೆ ಬೇರೆ ದಾರಿಯಿಲ್ಲದೆ ಅಂತಹವುಗಳನ್ನು ನುಂಗಿಕೊಳ್ಳಬೇಕಾಗುತ್ತಿತ್ತು. ಹೀಗಾಗಿ ಬಂಧುಗಳ ಮಾತುಕತೆಗಳ ನಡುವೆ ಮದುವೆಯ, ವರದಕ್ಷಿಣೆಯ ಪ್ರಸ್ತಾಪವಾದಾಗ ನನಗೆ ಅಸಹನೀಯ ವೇದನೆಯಾಗುತ್ತಿತ್ತು. ನನ್ನ ತಂದೆಗೆ ಇದನ್ನೆಲ್ಲ ಭರಿಸುವ ಶಕ್ತಿಯಿಲ್ಲವಲ್ಲ... ಅವರನ್ನು ಈ ಹೊರೆಯಿಂದ ಹೇಗೆ ಮುಕ್ತಗೊಳಿಸುವುದು ಎಂದು ಮನಸ್ಸು ಆತಂಕಗೊಳ್ಳುತ್ತಿತ್ತು. ಈ ಕಾರಣದಿಂದಲೇ ಕೇವಲ ಚಿನ್ನ ಮತ್ತು ಬಣ್ಣಕ್ಕೆ ಬೆಲೆ ಕೊಡುವ ನನ್ನ ಸಮುದಾಯದ ಬಗ್ಗೆ ನನ್ನಲ್ಲಿ ತಿರಸ್ಕಾರ ಮೂಡತೊಡಗಿತ್ತು. ಅದರ ಪರಿಣಾಮ ನನಗೆ ಬುದ್ಧಿ ತಿಳಿದಾಗಿನಿಂದ (ಸುಮಾರು ಎಂಟನೆಯ ಇಯತ್ತೆಯಿಂದ) ನಾನು ನನ್ನ ಜಾತಿಯವರ ಮದುವೆಗೆ ಹೋಗುವುದನ್ನೇ ನಿಲ್ಲಿಸಿದೆ. ನನಗೆ ನೆನಪಿರುವ ಹಾಗೆ ನನ್ನ ಅಕ್ಕಂದಿರ ಮದುವೆ (ದೊಡ್ಡಮ್ಮನ ಮಕ್ಕಳು) ಬಿಟ್ಟರೆ, ನನ್ನ ಜಾತಿಬಾಂಧವರ ಯಾವುದೇ ಮದುವೆ–ಮುಂಜಿಯಲ್ಲಿ ನಾನು ಭಾಗವಹಿಸಲಿಲ್ಲ. ನಾನಿನ್ನೂ ಮದುವೆಯ ವಯಸ್ಸು ಮುಟ್ಟದಿದ್ದರೂ (ನನಗಾಗ ಹದಿನೈದು–ಹದಿನಾರು) ಬಂಧುಗಳು ಮಾತನಾಡಿಕೊಳ್ಳುವಾಗ 'ನಿನ್ನಪ್ಪ ನಿನ್ನ ಮದುವೆ ಮಾಡಿದಂತೆಯೆ' ಎಂದು ವ್ಯಂಗ್ಯದಿಂದ ಆಡಿಕೊಳ್ಳುತ್ತಿದ್ದದ್ದುಂಟು ಹಾಗೂ ನನ್ನ ತಾಯಿಗೆ ಈಗಿನಿಂದಲೇ ಮಗಳಿಗೆ ವರದಕ್ಷಿಣೆ ಕೂಡಿಡಲು ಶುರು ಮಾಡಿ ಎನ್ನುತ್ತಿದ್ದದ್ದುಂಟು. ಈ ಉಪದೇಶದ ಹಿಂದಣ ಕುಹಕ ವ್ಯಂಗ್ಯ ಅರಿತವಳಾಗಿ ಆಗಲೇ ಆ ವಯಸ್ಸಿನಲ್ಲಿಯೇ ಒಂದು ನಿರ್ಧಾರಕ್ಕೆ ಬಂದುಬಿಟ್ಟಿದ್ದೆ. ಅದೇನೆಂದರೆ ಏನೇ ಆಗಲಿ ವರದಕ್ಷಿಣೆ ಬೇಡುವವರನ್ನು ಮದುವೆಯಾಗಲಾರೆ ಎಂದು. ಅದಕ್ಕೂ ಕಾರಣವಿತ್ತು. ನನ್ನ ನೆರೆಹೊರೆಯಲ್ಲೇ ಹವ್ಯಕ ಬ್ರಾಹ್ಮಣ ಹುಡುಗಿಯೊಬ್ಬಳ ನಿರಾಡಂಬರ ಮದುವೆಯನ್ನು ನಾನು ನೋಡಿದ್ದೆನು. ನೋಡು ನೋಡುತ್ತಿರುವಂತೆಯೇ ಮನೆಯ ಮುಂದೆ ಚಪ್ಪರವೆದ್ದು ಕೆಲವೇ ಘಂಟೆಗಳಲ್ಲಿ ಮದುವೆಯೂ, ಊಟವೂ ಮುಗಿದು, ಕೇವಲ ಸಾದಾ ಸೀರೆಯುಟ್ಟು, ಅರಸಿನದ ಕೊಂಬು ಕಟ್ಟಿಕೊಂಡು ಸಂತೃಪ್ತಿಯಿಂದ ಬೀಗುತ್ತಿದ್ದ ಮದುವಣಗಿತ್ತಿಯನ್ನು ಗಂಡನ ಮನೆಗೆ ಕಳಿಸಿಕೊಟ್ಟಿದ್ದನ್ನು ನೋಡಿ ಸರಳತೆಯಲ್ಲಿಯೇ ಹೆಚ್ಚಿನ ಸೌಂದರ್ಯ, ಸಂತೃಪ್ತಿ ಇದೆ ಎಂಬುದನ್ನು ಮನಗಂಡಿದ್ದೆ.

ಮದುವೆಯ ಸುತ್ತಮುತ್ತ ಇಷ್ಟೆಲ್ಲಾ ಮನಸ್ಸು ಹರಿದಾಡಿದ್ದರೂ ಅದು ನನ್ನ ಜಾತಿಯ ವಲಯವನ್ನು ದಾಟಲು ಶಕ್ತವಾಗಿರಲಿಲ್ಲ. ನನ್ನ ಜಾತಿಯಲ್ಲಿಯೇ ವರದಕ್ಷಿಣೆ ಬೇಡದ ಸರಳ ಮನಸ್ಸಿನ ಹುಡುಗನನ್ನು ವರಿಸಬೇಕೆಂಬ ಇಚ್ಛೆ ನನ್ನದಾಗಿತ್ತು. ಅಷ್ಟಕ್ಕೂ ಅದರ ಬಗ್ಗೆ ಗಹನವಾಗಿ ವಿಚಾರ ಮಾಡುವುದಕ್ಕೆ ನನಗಾಗ ೧೬–೧೭ ವಯಸ್ಸು. ಓದಿನಲ್ಲಿ ಮುಂದಿದ್ದೆನಾದ್ದರಿಂದ, ಮುಂದೆ ಕೆಲಸಕ್ಕೆ ಸೇರುವ ಆಕಾಂಕ್ಷೆಯೂ ಇದ್ದದ್ದರಿಂದ ಹಾಗೂ ಕತೆ–ಕಾದಂಬರಿಗಳ ಹೊಸ ಲೋಕಕ್ಕೆ ಪ್ರವೇಶಿಸಲು ತೊಡಗಿದ್ದರಿಂದ ಕ್ರಮೇಣ ಮದುವೆ, ಮುಂಜಿ ಇತ್ಯಾದಿಗಳು ನನ್ನ ಮನೋವಲಯದಿಂದ ಹಿಂದೆ ಸರಿಯತೊಡಗಿದವು. ಅದೇ ಸಮಯಕ್ಕೆ ಸರಿಯಾಗಿ ಪಿಯುಸಿಯಲ್ಲಿ ಪಠ್ಯವಿರಿಸಿದ್ದರಿಂದ ನನಗೆ ಮುಲ್ಕರಾಜ್ ಆನಂದರ 'Untouchable' ಕೃತಿ ಓದುವ ಅವಕಾಶ ಒದಗಿಬಂದಿತು. ಜಾತಿಯ ಕರಾಳ ವಿರಾಟ್ ಸ್ವರೂಪವನ್ನು ಆ ಕೃತಿ ನನಗೆ ಕಾಣಿಸಿತೆಂದೇ ಹೇಳಬೇಕು. ಆ ಕೃತಿಯನ್ನು ಓದುತ್ತಿದ್ದಂತೆ ಕೆಳ ವರ್ಗದ ಮನುಷ್ಯರನ್ನು ಪಶುಗಳಿಗಿಂತ ಕಡೆಗಾಣಿಸುವ ಮೇಲು ಜಾತಿಯ ಬಗ್ಗೆ ವಿಪರೀತ ತಿರಸ್ಕಾರ ಉಂಟಾಗಿದ್ದಷ್ಟೇ ಅಲ್ಲ... ಇದಕ್ಕೆ ಪರಿಹಾರವೇ ಇಲ್ಲವೇ ಎಂದು ಮನಸ್ಸು ಆಲೋಚಿಸಿತು. ಆ ಕೃತಿಯನ್ನು ಓದಿದಾಗ ಅದೆಷ್ಟೋ ಬಾರಿ ನನಗೆ ಕಣ್ಣೀರು ಬಂದದ್ದುಂಟು. ಆ ಕೃತಿಯಲ್ಲಿ ಅಸ್ಪೃಶ್ಯ ಹೆಣ್ಣುಮಗಳೊಬ್ಬಳು ಅನುಭವಿಸುವ ಪಾಡು ನೋಡಿ ಆ ಸಮುದಾಯದ ಬಗ್ಗೆ ನನ್ನಲ್ಲಿ ಅಪಾರ ಸಹಾನುಭೂತಿ ಉದಿಸಿತು. ಫ್ರೀಷಿಪ್, ಸ್ಕಾಲರ್‌ಷಿಪ್‌ನಲ್ಲಿ ಹೆಚ್ಚು ಪಾಲು ಪಡೆಯುತ್ತಾರೆ ಎಂಬ ಅಸೂಯೆ ಕರಗಿ ಅದು ಅವರಿಗೆ ಅವಶ್ಯವಾಗಿ ದಕ್ಕಬೇಕಾದ್ದೇ ಎಂಬ ಮನೋಸ್ಥಿತಿ ನನ್ನಲ್ಲಿ ಉಂಟಾಯಿತು. ಹೆಚ್ಚು ಅಂಕಗಳನ್ನು ಗಳಿಸಿದ್ದರಿಂದ ಹದಿನೆಂಟನೆಯ ವಯಸ್ಸಿನಲ್ಲಿಯೇ ಅಂಚೆ ಇಲಾಖೆಯಲ್ಲಿ ಕೆಲಸ ಸಿಕ್ಕಿ ತಂದೆಗೆ ನೆರವಾಗುವ ಸಂದರ್ಭವೂ ಒದಗಿಬಂತು. ಶಿವಮೊಗ್ಗೆಯಲ್ಲಿ ರಾತ್ರಿ ಕಾಲೇಜಿನ ಸೌಲಭ್ಯವೂ ಇದ್ದದ್ದರಿಂದ ವಿದ್ಯಾಭ್ಯಾಸವೂ ನಿರಾತಂಕವಾಗಿ ಸಾಗಿತು.

ಸಣ್ಣ ಪುಟ್ಟ ಲೇಖನ, ಕವನಗಳನ್ನು ಬರೆಯುತ್ತಾ ನನ್ನದೇ ಆದ Identity ಯನ್ನು ಸ್ಥಾಪಿಸಿಕೊಳ್ಳಲು ಹೆಣಗಾಡುತ್ತಿರುವ ಸಂದರ್ಭದಲ್ಲೇ ಅಂದರೆ ೧೯೮೩ ಸೆಪ್ಟೆಂಬರ್‌ನಲ್ಲಿ ಆಕಾಶವಾಣಿ ಭದ್ರಾವತಿಯಲ್ಲಿ ಕೆಲವು ಕವನಗಳನ್ನು ಸಾದರಪಡಿಸುವ ಅವಕಾಶ ಒದಗಿಬಂದಿತು. ಆಕಾಶವಾಣಿಯಿಂದ ಬಂದ ಕರೆಯೋಲೆಯಲ್ಲಿ ನಾಗಭೂಷಣ ಎಂಬ ಸಹಿ ಇದ್ದದ್ದರಿಂದ ನಾನು ಭೇಟಿ ಮಾಡಬೇಕಾದ ವ್ಯಕ್ತಿ ನಾಗಭೂಷಣ ಎಂಬುದನ್ನು ಬಿಟ್ಟರೆ ನನಗೆ ಮತ್ತೇನೂ ಮಾಹಿತಿಯಿರಲಿಲ್ಲ. ನಾನು ಆಕಾಶವಾಣಿಯ ಕಾರ್ಯಕ್ರಮಗಳ ರೆಗ್ಯುಲರ್ ಶ್ರೋತೃವಾದರೂ ಆ ಮೊದಲೇ ನಾಗಭೂಷಣ ಅವರು ಪ್ರಸ್ತುತಪಡಿಸಿದ ಅನೇಕ ಕಾರ್ಯಕ್ರಮಗಳನ್ನು ಕೇಳಿದ್ದೆನಾದರೂ ಅಂತಹ ವಿಶೇಷ ಗಮನವನ್ನೇನೂ ಕೊಟ್ಟಿರಲಿಲ್ಲ. ಅದು ಆಕಾಶವಾಣಿಯಲ್ಲಿ ನಾನು ಸಾದರಪಡಿಸಲಿರುವ ಮೊದಲ ಕಾರ್ಯ ಕ್ರಮವಾಗಿದ್ದರಿಂದ ಸಹಜವಾಗಿಯೇ ಆಕಾಶವಾಣಿಯನ್ನು ನೋಡುವ, ಅಲ್ಲಿಂದ ಹೇಗೆ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತವೆ ಎಂಬುದನ್ನು ಅರಿಯಲು ಕುತೂಹಲವಿತ್ತು. ನಾನು ನನ್ನ ತಮ್ಮನೊಡನೆ ಆಕಾಶವಾಣಿಗೆ ಹೋಗಿ ನನ್ನ ಕವನಗಳನ್ನು ನಾಗಭೂಷಣ ಅವರ ಮುಂದಿರಿಸಿದೆ. ಅವರು ನಮ್ಮನ್ನು ಕುಳ್ಳಿರಿಸಿ ನಾನು ತಂದ ಕವನಗಳ ಮೇಲೆ ಕಣ್ಣಾಡಿಸಿ ರೆಕಾರ್ಡಿಂಗ್‌ಗೆ ಕರೆದೊಯ್ದರು. ಅಪರಿಮಿತ ಗೌರವ ಕೊಟ್ಟು ಮಾತನಾಡಿಸಿದ್ದಷ್ಟೇ ಅಲ್ಲ ಕವನಗಳನ್ನು ಹೇಗೆ ಓದಬೇಕೆಂದೂ ತೋರಿಸಿಕೊಟ್ಟರು. ಓದಿನ ನಂತರ ಕಾಫಿ ಸತ್ಕಾರವೂ ಆಯಿತು. ಅದು ಕೇವಲ ಕೆಲವೇ ಘಂಟೆಗಳ ಭೇಟಿ. ಅಡ್ಡಾದಿಡ್ಡಿ ಬಟ್ಟೆ ತೊಟ್ಟು ಇಷ್ಟುದ್ದ ಗಡ್ಡ ಬಿಟ್ಟು ಸ್ವಲ್ಪ ಸೀರಿಯಸ್ ಆಗಿಯೇ ಇದ್ದ ಕಪ್ಪಗಿನ ಲಕ್ಷಣವಾದ ವ್ಯಕ್ತಿಯನ್ನು ನೋಡಿದ ಕೂಡಲೆ ಮೆಚ್ಚುವಂತಾದ್ದೇನೂ ಇರಲಿಲ್ಲವಾದರೂ ಒಂದು ಕ್ಷಣ ಮನಸ್ಸು ಈತ ತುಂಬಾ 'ಸಂಭಾವಿತ' ಎಂದು ಬಗೆಯಿತು. ಅವರ ಸನ್ನಡತೆಯ ಬಗ್ಗೆ ಗೌರವವೂ ಉಂಟಾಯಿತು. ಈತನ ಕಣ್ಣುಗಳು

ಎಷ್ಟು ಸುಂದರವಾಗಿವೆಯಲ್ಲ... ಎಂದೆನಿಸಿತು.

ತದನಂತರ ಆಕಾಶವಾಣಿಯಲ್ಲಿ ಕಾರ್ಯಕ್ರಮಗಳು ಬಿತ್ತರವಾದಾಗೆಲ್ಲ ಪ್ರಸ್ತುತಪಡಿಸಿದವರು ನಾಗಭೂಷಣ ಎಂದು ಹೇಳಿದಾಗ ಆ ವ್ಯಕ್ತಿಯನ್ನು ಖುದ್ದಾಗಿ ನೋಡಿದ್ದೆನಾದ್ದರಿಂದ ಸಹಜವಾಗಿಯೇ ವಿಶೇಷವಾಗಿ ಅತ್ತ ನನ್ನ ಗಮನ ಹೋಗುತ್ತಿತ್ತು. ವಸ್ತುವಿನ ಮಂಡನೆಯ ನಿಖರತೆ, ಹಾಸ್ಯ ಮಿಶ್ರಿತ ಸಂಭಾಷಣೆ, ಮಧುರವಾದ ಧ್ವನಿಯ ಹಿಂದಣ ಗಟ್ಟಿ ವ್ಯಕ್ತಿತ್ವ ನನ್ನ ಮನಸ್ಸಿನಲ್ಲಿ ಇಷ್ಟಿಷ್ಟೇ ಇಳಿದು ಅಲ್ಲೇ ನೆಲೆಸಿತು. ಪ್ರತಿ ಶನಿವಾರ ಅವರು ನಡೆಸಿಕೊಡುತ್ತಿದ್ದ 'ನಾವು–ನೀವು' ಕಾರ್ಯಕ್ರಮವನ್ನು ತಪ್ಪದೆ ಕೇಳುತ್ತಿದ್ದೆನಾದ್ದರಿಂದ ವಯೋಮಾನಕ್ಕೆ ಸಹಜವಾಗಿ ಆಸಕ್ತಿ ಹುಟ್ಟಿತು. ನನಗಾಗ ೨೨ ವಯಸ್ಸು. ಆ ವ್ಯಕ್ತಿಯ ಹಿನ್ನೆಲೆ ಏನು, ಅವನ ಜಾತಿ ಯಾವುದು? ಕುಲ–ಗೋತ್ರ... ಹೋಗಲಿ ವಿವಾಹಿತನೊ, ಅವಿವಾಹಿತನೊ ಏನೇನೂ ತಿಳಿಯದು. ಸುಮ್ಮನೆ ಭಾವನೆಗಳು ಎದೆಯೊಳಗೆ ಉಕ್ಕಿದವು ಅಷ್ಟೇ.

ನಾನು ತಿಳಿಗೇಡಿಯಾಗಿದ್ದರೂ ನಾನು ನಂಬಿದ ದೈವ ಹೊಣೆಯರಿತವನಾದ್ದರಿಂದ ಅವನೇ ನನ್ನ ಸಹಾಯಕ್ಕೆ ಬಂದ ಎಂದು ಹೇಳಬೇಕು. ಸುಮಾರು ಅದೇ ಸಮಯಕ್ಕೆ ನನ್ನ ಸ್ನೇಹಿತೆಯೊಬ್ಬಳ ಮನೆಗೆ ಹೋದಾಗ ಇದ್ದಕ್ಕಿದ್ದ ಹಾಗೆ ಆಕೆ ಮಾತಿನ ನಡುವೆ ನಾಗ ಭೂಷಣ ಅವರ ವಿಷಯವನ್ನು ಪ್ರಸ್ತಾಪಿಸಿದಳು. ಅವಳು ಮದುವೆ ಯಾಗಲಿರುವ ಹುಡುಗ ನಾಗಭೂಷಣ ಅವರ ಪರಿಚಯಸ್ಥರೆಂದೂ, ಅದೇ ವಾರ ಊರಿಗೆ ಬಂದ ಸಂದರ್ಭದಲ್ಲಿ ಭದ್ರಾವತಿಗೆ ಹೋಗಿ ಭೆಟ್ಟಿ ಯಾಗಿ ಬಂದರೆಂದೂ ಆಕೆ ಅರುಹಿದಳು. 'ನೀವು ಅವರನ್ನು ನೋಡಿರ ಬೇಕಲ್ಲ? ಆಕಾಶವಾಣಿಯಲ್ಲಿ ಕಾರ್ಯಕ್ರಮ ಕೊಡಲು ಹೋದಾಗ ಭೆಟ್ಟಿ ಯಾಗಿರಬೇಕಲ್ಲ? ಎಂದವಳೂ ಕೇಳಿದಳು. ಜತೆಜತೆಗೆ ನಾಗಭೂಷಣ ಅವರು ಲೇಖಕರೆಂದೂ, 'ಸೋಷಲಿಸ್ಟ್' ಎಂದೂ ತಿಳಿಸಿದಳು. ಆಕೆಗೆ ನನ್ನ ಪ್ರೇಮದ ವಿಷಯವೇನೂ ತಿಳಿಯದು. ಹೀಗೇ Casual ಆಗಿ ಆಕೆ ವಿಷಯ ಹೇಳಿದ್ದಳು. ನನಗೋ ಅನಾಯಾಸವಾಗಿ ಅಲ್ಪಸ್ವಲ್ಪ ಮಾಹಿತಿ ದೊರಕಿತು. ಅವರು ವಿವಾಹಿತರೋ, ಅವಿವಾಹಿತರೋ ಎಂದು ಕೇಳುವಷ್ಟು ಧೈರ್ಯ ನನ್ನಲ್ಲಿರಲಿಲ್ಲ. ಆದರೆ ಲೇಖಕರೆಂದು ತಿಳಿದ ಮೇಲೆ ನನ್ನ ಕುತೂಹಲ ನೂರ್ಮಡಿಯಾಯಿತು. ನನ್ನ ನೆರೆ ಹೊರೆಯಲ್ಲೇ ಕೆಲವು ಇಂಗ್ಲಿಷ್ ಮೇಸ್ಟರು ವಾಸಿಸುತ್ತಿದ್ದರು. ಅವರು ಕಮ್ಯುನಿಷ್ಟರೆಂದು ಅವರ ಮನೆಯವರ ಮೂಲಕ ನನಗೆ ಮಾಹಿತಿ ಇತ್ತು. ನಿರಾಶೆ ತುಂಬಿದ ಮುಖ, ಕೊಳಕು ಗಡ್ಡ, ಗಂಭೀರ ನಡೆ– ಇವು ಅವರ ಲಕ್ಷಣಗಳಾಗಿದ್ದವು. ಅವರ ನಾಟಕಗಳನ್ನು ಅವರೇ ನಿರ್ದೇಶಿಸಿ, ಅಭಿನಯಿಸಿದ್ದನ್ನು ಅವರ ಮನೆಯವರ ಬಲವಂತಕ್ಕೆ ನಾನು ನೋಡಿದ್ದೆನು. ನಿರಾಶೆಯೇ ಮೂರ್ತಿವೆತ್ತಂತೆ ಇದ್ದ ಅವರಾಗಲಿ, ಹಿಂಸೆಗೆ ಇಂಬು ಗೊಡುತ್ತಿದೆ ಎಂಬ ಕಾರಣದಿಂದ ಆ ಪಂಥವಾಗಲಿ ನನ್ನನ್ನು ಆಕರ್ಷಿಸಿರಲಿಲ್ಲ. ಆದರೂ ಕಮ್ಯುನಿಸಂ ಬಗ್ಗೆ ಅಷ್ಟಿಷ್ಟು ಅರಿಯಲು ಅವರ ಒಡನಾಟ ಸಹಕಾರಿಯಾಗಿತ್ತು. ಆದರೆ ನಾಗಭೂಷಣ ಅವರು 'ಸೋಷಲಿಸ್ಟ್' ಎಂದು ನನ್ನ ಗೆಳತಿ ತಿಳಿಸಿದ್ದರಿಂದ ಹಾಗೆಂದರೇನು ಎಂದು ಅರಿಯುವ ಆಸೆ ಉಂಟಾಯಿತು. ಆ ಮೊದಲು ಸೋಷಿಲಿಸಂ ಬಗ್ಗೆ ನಾನೇನೂ ಓದಿರಲಿಲ್ಲವಾದ್ದರಿಂದ ಯಾಕೋ ನಮ್ಮ ಬೀದಿಯ ಆಸುಪಾಸಿನಲ್ಲಿ ಸೈಕಲ್‌ನಲ್ಲಿ ಓಡಾಡುತ್ತಿದ್ದ ಗಾಂಧಿವಾದಿ ನಾಗಪ್ಪ ಶೆಟ್ಟರು ನೆನಪಾಗಿ ಅದೇ ಇರಬಹುದು ಎಂದು ಮನಸ್ಸು ತರ್ಕಿಸಿತು. ಜತೆಗೆ ತೀರ್ಥಹಳ್ಳಿ–ಸಾಗರದ ಕಡೆಯ ಒಬ್ಬಿಬ್ಬ ಪ್ರಸಿದ್ಧ ಸೋಷಲಿಸ್ಟರ ಹೆಸರುಗಳನ್ನು ಕೇಳಿ ಬಲ್ಲೆನಾದ್ದರಿಂದ ಆ ಪದ ಅಪ್ಯಾಯಮಾನವಾಗಿ ಆ ಗಳಿಗೆಯಲ್ಲಿ ನನಗೆ ತೋರಿತು. ಆ ಪಂಥದ ಬಗ್ಗೆ ಒಲವಿದ್ದವನೇ ಆದಲ್ಲಿ ಆ ಮನುಷ್ಯತುಂಬಾ ಆದರ್ಶವುಳ್ಳವನಾಗಿರಬೇಕು, ತುಂಬಾ ಒಳ್ಳೆಯವನೇ ಇರಬೇಕು ಎಂದು ಮನಸ್ಸು ತರ್ಕಿಸಿತು.

ಇದೇ ಸಮಯಕ್ಕೆ ಸರಿಯಾಗಿ ನನ್ನ ಕಚೇರಿಯ ವಿಳಾಸಕ್ಕೆ ಶಿವಮೊಗ್ಗೆಯಲ್ಲಿ 'ಲೋಹಿಯಾ ನೆನಪು' ಕಾರ್ಯಕ್ರಮ ಇರುವ ಮಾಹಿತಿಯಿದ್ದ ಪುಟ್ಟ Invitation ಬಂದಿತು. (ಅದನ್ನು ಯಾರು ಕಳಿಸಿದರೋ... ನನಗೆ ತಿಳಿಯದು?!) ನಾನೂ ನನ್ನ ಗೆಳತಿಯೂ ಕಾರ್ಯಕ್ರಮಕ್ಕೆ ಹೋದೆವು. ಯು. ಆರ್ ಅನಂತಮೂರ್ತಿಯವರಿಂದ ಕಾರ್ಯಕ್ರಮ ಉದ್ಘಾಟನೆ ಯಾಯಿತು. ನಾಗಭೂಷಣ ಅವರ ಭಾಷಣವೂ ಇತ್ತು. ನಾನು ದೂರದಿಂದ ಕುಳಿತು ಕಾರ್ಯಕ್ರಮ ವೀಕ್ಷಿಸಿದೆನು. ನಾಗಭೂಷಣ ಅವರನ್ನು ಭೇಟಿ ಮಾಡಿ ಮಾತನಾಡಿಸುವಷ್ಟು ಧೈರ್ಯ ವಿರಲಿಲ್ಲವಾದ್ದರಿಂದ ಹಾಗೆಯೇ ಮನೆಗೆ ಮರಳಿದೆನು. ಲೋಹಿಯಾ ಬಗ್ಗೆ ಎಲ್ಲೋ ಅಲ್ಪಸ್ವಲ್ಪ ಓದಿದ್ದೆನಾದ್ದರಿಂದ ಈತ 'ಲೋಹಿಯಾವಾದಿ' ಎಂದು ಗೊತ್ತಾದಾಗ ಎಲಾ... ಎಲ್ಲ ಒಳ್ಳೆಯ ಅಂಶಗಳೇ ಸೇರ್ಪಡೆ ಯಾಗುತ್ತಿವೆಯಲ್ಲಾ ಎಂದೆನಿಸಿತು. ಇಷ್ಟೆಲ್ಲಾ ಮಾಹಿತಿಗಳು ಲಭ್ಯ ವಾಗಿದ್ದರೂ ವಿವಾಹಿತನೊ, ಅವಿವಾಹಿತನೊ ಎಂಬ ಪ್ರಶ್ನೆ ಹಾಗೆಯೇ ಇದ್ದು, ಸಮಸ್ಯೆ ಬಗೆಹರಿಯದಂತಾಗಿತ್ತು. ಕೃಷ್ಣನ ಹಾಗೆ ಕಪ್ಪಗಿದ್ದದ್ದನ್ನು ನೋಡಿ ಮನದ ಮೂಲೆಯಲ್ಲೆಲ್ಲೋ ದಲಿತನಿದ್ದರೂ ಇರಬಹುದು ಎಂದೆನಿಸಿತ್ತು. ಈ ಮನೋಸ್ಥಿತಿಯಲ್ಲೇ ನಾನು 'ತುಷಾರ'ಕ್ಕೊಂದು ಪುಟ್ಟ ಪದ್ಯ ಬರೆದೆ:

ಕಪ್ಪು ಹುಡುಗನಿಗೆ
ನೀನು ನನ್ನ ಕಣ್ಣೊಳಗಣ
ಬಿಳಿ ಗೋಡೆಯೊಳಗೆ
ನಟ್ಟಿರುವ ಕಪ್ಪು ಗೋಲಿಯಂತೆ
ಏಕೆ ಚಿಂತೆ?

ಈ ಕವನ ಬರೆದಾಗ, ಇದು ಪ್ರಕಟವಾಗುತ್ತದೆಯೆಂದಾಗಲಿ, ಅಥವಾ ಪ್ರಕಟವಾದರೂ ನಾಗಭೂಷಣ ಅವರನ್ನು ತಲುಪಿ ಮಾರುತ್ತರ ಬರುತ್ತದೆಯೆಂದಾಗಲಿ ನಾನು ಭಾವಿಸಿರಲಿಲ್ಲ. ನಿರ್ವ್ಯಾಜ್ಯ ಪ್ರೇಮವಿದ್ದೆಡೆ ದೈವ ಸಹಾಯ ಒದಗಿ ಬರುವುದಂತೆ! ನನ್ನ ವಿಷಯದಲ್ಲೂ ಹಾಗೆಯೇ ಆಯಿತು. ಅದು ಹೇಗೊ ಆ ಕವನ ನಾಗಭೂಷಣ ಅವರ ಮಿತ್ರರಾದ ಬಿದರಳ್ಳಿ ನರಸಿಂಹಮೂರ್ತಿಯವರ ಕಣ್ಣಿಗೆ ಬಿದ್ದು ನಾಗಭೂಷಣ ಅವರ ಕಿವಿ ತಲುಪಿತು. ನಾನು ಅವರ ಬಗ್ಗೆಯೇ ಬರೆದದ್ದು ಎಂದು ಹೇಗೆ ಊಹಿಸಿದರೋ... ಅಂತೂ ಸ್ವಲ್ಪ ದಿನಗಳಲ್ಲೇ ಅವರಿಂದ ನನಗೆ ಪತ್ರವೂ ಬಂತು! ಬಿದರಳ್ಳಿಯವರ ಪತ್ನಿ ಧಾರಿಣಿ ನನ್ನನ್ನು ಭೆಟ್ಟಿಯಾಗಿ ವಿಚಾರಿಸಿಕೊಂಡು ಹೋದದ್ದಷ್ಟೇ ಅಲ್ಲ, ಮುಂದಿನ ದಿನಗಳಲ್ಲಿ ಆ ದಂಪತಿಗಳು ನಮ್ಮಿಬ್ಬರ ನಡುವೆ ಸೇತುವೆಯಾದರು. ಆ ದಿನಗಳಲ್ಲಿ ಇವರ ಮಿತ್ರರಾಗಿದ್ದ ಶಿವಮೊಗ್ಗ ಮುನೀರ್ ಅವರೂ ನಮ್ಮ ಪ್ರೇಮದ ಬಳ್ಳಿಗೆ ನೀರೆರೆದು ಪೋಷಿಸಿದ್ದುಂಟು.

ತದನಂತರ ನಾನು ನನ್ನ ಈ ಗೆಳೆತನದ ವಿಷಯವನ್ನು ಸಮಯ–ಸಂದರ್ಭ ನೋಡಿ ನನ್ನ ಅಜ್ಜಿಯ ಬಳಿ ಹೇಳಿಕೊಂಡೆ. ಇರುವ, ಇಲ್ಲದ ಎಲ್ಲಾ ಗುಣಗಳನ್ನು ಆರೋಪಿಸಿ ಬಣ್ಣಿಸಿದೆ. ಜಾತಿಯಿಂದ ಅಕ್ಕ ಸಾಲಿಗರೆಂದೂ, ಕಪ್ಪಗಿದ್ದರೂ ಲಕ್ಷಣವಾಗಿದ್ದಾರೆಂದೂ ತಿಳಿಸಿದೆ. ನಾಗಭೂಷಣ ಅವರ ಮಿತ್ರರ ಹೆಸರು, ವಿಳಾಸಗಳನ್ನು ತಿಳಿಸಿ ಅವರೆಲ್ಲಾ ಜವಾಬ್ದಾರಿ ಹುದ್ದೆಯಲ್ಲಿರುವ ಸದ್ಗೃಹಸ್ಥರೆಂದೂ, ಹೆದರುವ ಅವಶ್ಯಕತೆ ಇಲ್ಲವೆಂದೂ ತಿಳಿಸಿದೆ. ಆತ ಒಂದೇ ಒಂದು ನಯಾ ಪೈಸೆ ಕೂಡ ತೆಗೆದುಕೊಳ್ಳದೆ ಸರಳವಾದ ಮದುವೆಗೆ ಸಿದ್ಧವಿರುವ ವ್ಯಕ್ತಿಯೆಂದೂ ತಿಳಿಸಿದೆ. ಹಾಗೆಯೇ ನನ್ನ ಅಜ್ಜಿಗೆ ಅರ್ಥವಾಗಲಾರದೆಂದು ತಿಳಿದು 'ಸೋಷಿಲಿಸಂ' ಎಂಬ ಪದ ಬಳಸದೆ 'ಗಾಂಧೀವಾದಿ' ಎಂದು ಹೇಳಿದೆ. ಗಾಂಧಿಯ ಬಗ್ಗೆ ಅಪಾರ

ಗೌರವವಿದ್ದ ನನ್ನ ಅಜ್ಜಿ ನಾಗಭೂಷಣ ಅವರ ಬಗ್ಗೆಯೂ ಗೌರವ ತಾಳಿ ಹಾಗಾದರೆ ನಾನೇ ನಿನ್ನ ತಂದೆಯ ಬಳಿ ವಿಷಯ ಪ್ರಸ್ತಾ ಪಿಸುತ್ತೇನೆ ಎಂದರು. ಹೀಗೆ ನನ್ನ ಅಜ್ಜಿಯ ಮೂಲಕ ತಂದೆಯ ಬಳಿ ವಿಷಯ ಪ್ರಸ್ತಾಪವಾಯಿತು. ಮಾಂಸ ತಿನ್ನದಿದ್ದರೆ ಸರಿ, ಕುಡುಕನಾಗಿಲ್ಲದಿದ್ದರೆ ಸರಿ, ಜಾತಿಯ ಬಗ್ಗೆ ನನ್ನದೇನೂ ತಕರಾರಿಲ್ಲ ಎಂದರವರು. ನನ್ನ ತಾಯಿಗೆ ಸ್ವಲ್ಪ ಮಟ್ಟಿಗೆ ಆಘಾತವಾಗಿರಲಿಕ್ಕೆ ಸಾಕು. ಆದರೆ ಮನೆಯಲ್ಲಿ ಯಾರ ವಿರೋಧವೂ ಇಲ್ಲದಿರಲು ಅವರು ಸುಮ್ಮನಾಗಬೇಕಾಯಿತು. ಮದುವೆ ಸರಳವಾಗಿ 'ಮಂತ್ರ ಮಾಂಗಲ್ಯ' ರೀತಿಯಲ್ಲಿ ನಾಗಭೂಷಣ ಅವರ ಆಪ್ತ ಗೆಳೆಯರಲ್ಲೊಬ್ಬರಾದ ಭದ್ರಾವತಿಯ ಎಂ. ಚಂದ್ರಶೇಖರಯ್ಯ ಅವರ ಮನೆಯಲ್ಲಿ ನೆರವೇರಿತು. ಚಂದ್ರಶೇಖರಯ್ಯ ಅವರ ಇಡೀ ಕುಟುಂಬವೇ ನಮ್ಮ ಮದುವೆಯನ್ನು ತಮ್ಮ ಕುಟುಂಬದ ಮದುವೆಯೇನೋ ಎಂಬಂತೆ ನಡೆಸಿಕೊಟ್ಟಿತು.

ಮದುವೆಗೆ ನನ್ನ ತಂದೆ, ತಾಯಿ, ತಮ್ಮಂದಿರು, ತಂಗಿ ಹಾಗೂ ಹತ್ತಿರದ ಕೆಲವೇ ಬಂಧುಗಳು ಹಾಗೂ ನಾಗಭೂಷಣ ಮತ್ತು ನನ್ನ ಅನೇಕ ಗೆಳೆಯ–ಗೆಳತಿಯರು ಹಾಜರಿದ್ದರು. ನಾಗಭೂಷಣ ಅವರ ಮನೆಯಲ್ಲಿ ಈ ಮದುವೆಗೆ ವಿರೋಧವಿದ್ದದ್ದರಿಂದ ಅವರ ತಂದೆ–ತಾಯಾಗಲಿ ಅಥವಾ ಅವರ ಒಡಹುಟ್ಟಿದವರಾಗಲಿ, ಭಾಗ ವಹಿಸಲಿಲ್ಲ. ಆದರೆ ಅವರ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಅವರ ಮಗ–ಸೊಸೆ (ಅವರದ್ದೂ ಅಂತರ್ಜಾತಿ ವಿವಾಹ) ಭಾಗವಹಿಸಿದ್ದರು. ಮನೆಯವರನ್ನು ತುಂಬಾ ಹಚ್ಚಿಕೊಂಡಿದ್ದ ನಾಗಭೂಷಣ ಅವರಿಗೆ ಇದೊಂದು ದೊಡ್ಡ ಆಘಾತ. ಆ ದುಃಖ ಈಗಲೂ ಅವರನ್ನು ಕಾಡುತ್ತಿರುವಂತಿದೆ. ಮುಂದಿನ ದಿನಗಳಲ್ಲಿ ಏನೋ ಆಗಿಹೋಯಿತಲ್ಲ ಎಂದು ಅವರ ಮನೆಯವರು ಒಪ್ಪಿಕೊಂಡಂತೆ ಕಾಣಿಸಿದರೂ ಇವತ್ತಿನವರೆಗೂ ಅಸಮಧಾನವನ್ನು ಹಾಗೆಯೇ ಉಳಿಸಿಕೊಂಡಿರುವರು. ಇದೇ ಅಭಿ ಪ್ರಾಯವನ್ನು ನನ್ನ ಅತ್ತೆಯ ಬಗ್ಗೆಯಾಗಲಿ, ನನ್ನ ಮಾವನವರ ಬಗ್ಗೆಯಾಗಲಿ ನಾನು ವ್ಯಕ್ತಪಡಿಸಲಾರೆ. ಕನಿಷ್ಠ ವಿದ್ಯೆಯನ್ನು ಪಡೆದಿದ್ದಾಗ್ಯೂ ಅವರು ನನ್ನನ್ನು ಮಗಳಂತೇ ಕಂಡಿದ್ದಾರೆ. ಅಪಾರ ಬಡತನದ ನಡುವೆಯೂ ಆದರ್ಶರಾಗಿ ಬಾಳಿದ್ದ, ಪ್ರಾಥಮಿಕ ಶಾಲೆಯ ಮೇಸ್ಟರಾಗಿ ಬದುಕು ಸವೆಸಿದ ನನ್ನ ಮಾವನವರು ಹಿರಿಯ–ಕಿರಿಯ ಸೊಸೆಯೆಂದು ಭೇದವೆಣಿಸದೆ ಒಂದೇ ತಕ್ಕಡಿಯಲ್ಲಿ ಸಮನಾಗಿ ತೂಗಿದ್ದಾರೆ. ನಾಗಭೂಷಣ ಅವರ ಬಂಧು – ಮಿತ್ರರ ಬಳಗ ದೊಡ್ಡದು. ಆ ಬಳಗವೆಲ್ಲಾ ನನ್ನನ್ನು ಅಪಾರ ಪ್ರೀತಿಯಿಂದ ಕಂಡಿದೆ. ವಿದ್ಯೆ ಮತ್ತು ಶ್ರೀಮಂತಿಕೆಯ ಠೇಂಕಾರ ತುಂಬಿದ ಬೆರಳೆಣಿಕೆಯ ಬಂಧುಗಳು ಮಾತ್ರ ಪ್ರೇಮದ ಮೌಲ್ಯವನ್ನು ಗುರುತಿಸದೆ ಹೋದದ್ದು ಮಾತ್ರ ಇವತ್ತಿಗೂ ನಮ್ಮಿಬ್ಬರನ್ನೂ ಯೋಚನೆಗೀಡು ಮಾಡುತ್ತದೆ.

ಇನ್ನು ನನ್ನ ಬಂಧು–ಮಿತ್ರರ ವಿಷಯಕ್ಕೆ ಬಂದರೆ, ನನ್ನ ಮದುವೆಯ ಸಂದರ್ಭದಲ್ಲಿ ಹಿಂದೆ ಆಡಿಕೊಂಡಿರಲಿಕ್ಕೂ ಸಾಕು. ಆದರೆ ಅವರೇನು ಆಡಿಕೊಂಡಿದ್ದಾರೆ ಎಂದು ಅರಿಯುವ ಗೋಜಿಗೆ ನಾನು ಹೋಗಿಲ್ಲ. ಇಷ್ಟು ವರುಷಗಳಾದ ಮೇಲೂ ನಾವು ಚೆನ್ನಾಗಿಯೇ ಬಾಳಿ ಬದುಕುತ್ತಿರುವುದರಿಂದ ಯಾವುದೇ ಸವಕಲು ಮಾತುಗಳು ಈಗ ಚಲಾವಣೆಯಲ್ಲಿ ಇಲ್ಲ. ನನ್ನ ದೊಡ್ಡಮ್ಮನ ಮಗಳೂ ಕಳೆದ ವರುಷ ಗುಜರಾತಿ ಹುಡುಗನೊಬ್ಬನನ್ನು ಮದುವೆಯಾಗಿ ಸುಖವಾಗಿದ್ದಾಳೆ. ನನ್ನ ಮನೆಯಲ್ಲಂತೂ ಈಗ ಜಾತಿ ಒಂದು ಸಮಸ್ಯೆಯಾಗಿ ಉಳಿದಿಲ್ಲ. ನನ್ನ ತಂದೆ–ತಾಯಿ, ತಮ್ಮಂದಿರು, ತಂಗಿ ಎಲ್ಲರೂ ನನ್ನವರಿಗೆ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಒಂದು ರೀತಿಯಲ್ಲಿ ನಾಗಭೂಷಣ ಅವರೊಂದಿಗಿನ ನನ್ನ ಮದುವೆ ಈತನಕ ನಾನರಿಯದಿದ್ದ ಲೋಕದೊಳಗೆ ಪ್ರವೇಶ ಮಾಡಲು ಅವಕಾಶ ಮಾಡಿಕೊಟ್ಟಿತು. ಭಿನ್ನ ಹಿನ್ನೆಲೆಯ ಶೂದ್ರ ಸಮುದಾಯದೊಂದಿಗೆ ಆತ್ಮೀಯವಾಗಿ ಬೆರೆಯಲು ಅವರನ್ನು ಅರಿಯಲು ಒಂದು ಸುಸಂದರ್ಭ ಒದಗಿಸಿಕೊಟ್ಟಿದೆ. ಇವರಲ್ಲೂ ಬಹಳಷ್ಟು ಜನ ನಮ್ಮಂತೆಯೇ ಪ್ರೀತಿಸಿ ಅಂತರ್ಜಾತೀಯ ವಿವಾಹವಾದವರು. ನಾಗಭೂಷಣರು ಜಗಳಗಂಟರೆಂದು ಪ್ರಸಿದ್ಧರಾದವರಾದರೂ, ಅವರ ಜಗಳಗಂಟತನವನ್ನು ಸಹಿಸುವ ಶಕ್ತಿಯನ್ನು ಅವರೇ ಅವರ ಗೆಳೆಯರಿಗ ಪ್ರಧಾನ ಮಾಡಿದ್ದಾರೆನ್ನಿಸುತ್ತದೆ, ಅವರ ಗೆಳೆಯರ ವಿಶಾಲ ಗುಂಪನ್ನು ನೋಡಿದಾಗ. ಇವರಲ್ಲಿ ಸಾಹಿತಿ, ಸಮಾಜವಾದಿ ಮಿತ್ರರೇ ಹೆಚ್ಚು. ಹೀಗಾಗಿ ನಾನು ಕವಯತ್ರಿಯಾಗಿ ಬೆಳೆಯಲೂ ಒಳ್ಳೆಯ ವಾತಾವರಣ ಲಭಿಸಿತು.

ಭಿನ್ನ ಸಂಸ್ಕೃತಿಯ ಹಿನ್ನೆಲೆ ಹೊಂದಿರುವ ನಮ್ಮಿಬ್ಬರ ನಡುವೆ ಎಲ್ಲ ಗಂಡ–ಹೆಂಡಿರ ನಡುವೆ ಇರುವಂತೆ ಭಿನ್ನಾಭಿಪ್ರಾಯಗಳೂ, ಪರಸ್ಪರ ದೋಷಾರೋಪಣೆಯ ಜಗಳಗಳೂ ನಡೆದಿವೆ. ಆದರೆ ಕೆಲವೇ ಘಂಟೆಗಳಲ್ಲಿ ಅದನ್ನು ಮರೆತು 'ಎಷ್ಟೊಂದು ಪ್ರೀತಿಸಿ ಮದುವೆಯಾದವರಲ್ಲವೆ ನಾವು' ಎಂದು ಅಂದುಕೊಂಡು ಅಂತಹ ಮಾತುಗಳನ್ನು ಆಡಿಯೇ ಇಲ್ಲ ಎಂಬಂತೆ ಬೆರೆತು ಒಂದಾಗಿದ್ದೇವೆ. ಈ ಹತ್ತು ವರುಷಗಳಲ್ಲಿ ನಾವಿಬ್ಬರೂ ಅನೇಕ ಒಳ್ಳೆಯ, ಕೆಟ್ಟ ಗುಣಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡಿದ್ದೇವೆ. 'ಮಾಸ್ತಿ' ನಾಗಭೂಷಣ ಅವರ ಮೆಚ್ಚಿನ ಲೇಖಕರಾಗಿರುವುದೂ ಕುವೆಂಪು ನನ್ನ ಮೆಚ್ಚಿನ ಲೇಖಕರಾಗಿರುವುದೂ ಏನನ್ನು ಸೂಚಿಸುತ್ತದೆಯೋ ನಾನರಿಯೆ!

ನನ್ನ ಮಟ್ಟಿಗಂತೂ ನಾನು ನಾಗಭೂಷಣ ಅವರನ್ನು ಮದುವೆಯಾಗಲು ನಿರ್ಧರಿಸಿದ್ದು ನನ್ನ ಜೀವನದ ಅಮೂಲ್ಯ ನಿರ್ಧಾರ. ನನಗೆ ಅಪಾರ ಸ್ವಾತಂತ್ರ್ಯ ಕೊಟ್ಟು ನನ್ನಲ್ಲಿ ವಿಶ್ವಾಸವಿಟ್ಟು ನಾನು ಇಂತಹ ನಿರ್ಧಾರ ತೆಗೆದುಕೊಳ್ಳಲು ಪರೋಕ್ಷವಾಗಿ ಕಾರಣರಾದ ನನ್ನ ತಂದೆ–ತಾಯಿಗೆ ನಾನು ಎನಿತು ಋಣಿಯಾಗಿದ್ದರೂ ಸಾಲದು. ನಾನು ಪುರಾಣದ ರೂಪದಲ್ಲಿ ಬರೆದಿರುವ ಈ ಕಥನವನ್ನು ಸಂಕ್ಷಿಪ್ತಗೊಳಿಸಿ, ಎರಡೇ ವಾಕ್ಯಗಳಲ್ಲಿ ಹೇಳುವುದಾದರೆ–

ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ ಬಂದು
ನಮ್ಮಿಬ್ಬರನು ಮತ್ತೆ ಬಂಧಿಸಿಹುದೊ...ಕಾಣೆ...ನಾ...

– ಸವಿತಾ ನಾಗಭೂಷಣ

ಪ್ರಧಾನ ಅಂಚೆ ಕಚೇರಿ, ಮಡಿಕೇರಿ–೫೭೧೨೦೧.

ಅನುಪಮಾ ನಿರಂಜನರ ಕೈವಾಡ!

ಕುಗ್ರಾಮವೊಂದರಲ್ಲಿನ ಅನಕ್ಷರಸ್ಥ, ಸಂಪ್ರದಾಯಬದ್ಧ, ಸಾಮಾಜಿಕ ಹಿನ್ನೆಲೆಯಿಂದ ಹೊರಟ ಸರಳರೇಖೆಯೊಂದಕ್ಕೆ..... ಬದುಕಿನಲ್ಲಿ ಕಲಿತ ಪಾಠದಿಂದ ಸಾಮಾಜಿಕ, ಧಾರ್ಮಿಕ ಚೌಕಟ್ಟಿನೊಳಗೆ ಇರುವ ಬದುಕು–ಬವಣೆಯನ್ನು ಧಿಕ್ಕರಿಸಿ, ಅದ್ಯಾವುದರ ಬಂಧನವಿಲ್ಲದ ಜಗತ್ತಿಗೆ ಹೋಗುವ ಆಸೆ.

ಅತೀ ನಗರೀಕರಣಗೊಂಡ ಸಂಸ್ಕಾರ, ಶಿಕ್ಷಣದಿಂದಾಗಿ ರೂಪುಗೊಂಡ ಸಾಹಿತ್ಯಿಕ ವಾತಾವರಣದ ಹಿನ್ನೆಲೆಯಿಂದ ಬಂದ ಮತ್ತೊಂದು ಸರಳ ರೇಖೆ ಸಾಗಲು ಆಯ್ಕೆ ಮಾಡಿಕೊಂಡ ದಾರಿ ಯಾವುದರ ಮುಲಾಜಿಲ್ಲದೆ ಸ್ವಾವಲಂಬಿಯಾಗಿ ಬದುಕಬೇಕೆಂಬ ಛಲ!

ಈ ಎರಡು ರೇಖೆಗಳು ಒಂದು ಮತ್ತೊಂದನ್ನು ಸಂಧಿಸುವ ಅವಕಾಶ



ಸಮಾನ ಮನಸ್ಕ ಸ್ನೇಹಿತರ ಮೂಲಕ ಪರಸ್ಪರ ಭೇಟಿ ಮಾಡಲು ನಿರ್ಧರಿಸಿದಾಗ.... ಅದರ ಹಿಂದೆ ಡಾ। ಅನುಪಮಾ ನಿರಂಜರ ಕೈವಾಡ.

ಪರಸ್ಪರ ಪರಿಚಯ, ಭೇಟಿ, ವಿಚಾರ ವಿನಿಮಯ, ಹವ್ಯಾಸಗಳು, ಅಭಿರುಚಿಗಳು ಎಲ್ಲವೂ ಸುಮಾರು ಎರಡು ವರ್ಷಗಳ ಕಾಲ ವಿನಿಮಯಗೊಂಡವು. ವಿವಾಹವಾಗುವ ನಿರ್ಧಾರಕ್ಕೆ ಬಂದಾಗ.... ಹೆಣ್ಣಿನ ಕಡೆಯ ಕುಟುಂಬದವರಿಂದ ಯಾವ ವಿರೋಧವು ಇಲ್ಲ. ಆದರೆ ಗಂಡಿನ ಕಡೆಯ ಕುಟುಂಬದವರಿಂದ ವಿರೋಧ, ಅಸಹನೆ. ಅದನ್ನೆಲ್ಲವನ್ನು ಗೆದ್ದು ಎರಡು ರೇಖೆಗಳು ಒಂದಾದವು.

ವಿದ್ವಾನ್ ರಾಮಚಂದ್ರ ಉಪ್ಪಿಲರ ಶುಭ ಹಾರೈಕೆಯ ಪೌರೋಹಿತ್ಯದೊಂದಿಗೆ ನಾವಿಬ್ಬರೇ ಹಾಕಿಕೊಂಡ ಕಾರ್ಯಕ್ರಮದಂತೆ ಒಂದಾದೆವು. ಎರಡು ಕುಟುಂಬಗಳವರು ಮದುವೆಗೆ ಬಂದಿದ್ದರು. ಜೊತೆಗೆ ಸ್ನೇಹಿತರು. ಮದುವೆಯ ಕಾರ್ಯಕ್ರಮದಂತೆ ಆಗಿರದೆ, ಅದು ಯಾವುದೋ ನಾಟಕವೋ, ಸಾಹಿತ್ಯ ಗೋಷ್ಠಿಯೋ ಎಂಬಂತಿದ್ದದ್ದು ಅದರ ವೈಶಿಷ್ಟ್ಯ.

ಉದ್ಯೋಗದ ನಿಮಿತ್ತ ನಾವಿಬ್ಬರೂ ಒಂದೊಂದು ಊರಿನಲ್ಲಿ. ಈ ಮಧ್ಯೆ ಮುದ್ದು ಪುಟಾಣಿ ಅಪೂರ್ವಳ ಆಗಮನ. ಅವಳನ್ನು ದಿಟ್ಟೆಯಾಗಿ ಬೆಳೆಸುವ ಆಕಾಂಕ್ಷೆ.

ಬದುಕಿನಲ್ಲಿ ಬರೀ ಬೆಲ್ಲವೇ ಇಲ್ಲ. ಬೇವು ಕೂಡಾ ಇದೆ. ಮಗಳೊಬ್ಬಳೇ ಸಾಕು ಎನ್ನುವಲ್ಲಿ, ಸ್ವಾಭಿಮಾನಕ್ಕೆ ಪೆಟ್ಟು ಬೀಳುವ ಸಂದರ್ಭ ಬಂದಾಗ, ತನ್ನತನವನ್ನು ಉಳಿಸಿಕೊಳ್ಳಲು ಹೊರಟಾಗ.... ಆದ ಸಂಘರ್ಷಗಳಿಗೇನು ಕೊರತೆ ಇಲ್ಲ. ಈ ಸಿಹಿ–ಕಹಿಗಳನ್ನು ಅಗಿದು ನುಂಗಿ ಜೀರ್ಣಿಸಿಕೊಂಡು ಬಿಟ್ಟಿದ್ದೇವೆ.

ಎಲ್ಲವನ್ನು ಜೀರ್ಣಿಸಿಕೊಂಡು ಮನೆಯೊಂದನ್ನು ಕಟ್ಟಿ.... ಅದರಲ್ಲೇ ನಾವು ನಮ್ಮ ದಾರಿ ತುಳಿಯುತ್ತಿದ್ದೇವೆ, ಸಾಗುತ್ತಿದ್ದೇವೆ. ಈ ದಾರಿಯ ಹೊಸ ಪಯಣಿಗಳಾದ ಮಗಳು ಅಪೂರ್ವ ಪುಟ್ಟ ಕವಯಿತ್ರಿಯಾಗಿ, ಅಭಿನೇತ್ರಿಯಾಗಿ ಬೆಳೆಯುತ್ತಿದ್ದಾಳೆ. ದಿಟ್ಟತನವನ್ನು ಮೈಗೂಡಿಸಿಕೊಳ್ಳುತ್ತಿದ್ದಾಳೆ.

ಕವಿ ಬೇಂದ್ರೆಯವರ ಮಾತುಗಳಂತೆ "ರಸವೇ ಜನನ. ವಿರಸ ಮರಣ. ಸಮರಸವೇ ಜೀವನ"ದಂತಿರುವ ಬದುಕು ನಮ್ಮಿಬ್ಬರದು.

–ಶ್ರೀಮತಿ ನಂದಾ ಡಿ. ಎಸ್. ಹಾಗೂ
–ಡಾ। ಎಚ್. ಎಂ. ಕುಮಾರಸ್ವಾಮಿ

ಹಿಂದಿ ಉಪನ್ಯಾಸಕರು
ನೆಹರೂ ಮೆಮೊರಿಯಲ್ ಕಾಲೇಜು
ಸುಳ್ಯ–೫೭೪ ೨೩೯

ಲೋಹಿಯಾ ನನ್ನ ತಲೆಕೆಡಿಸಿದ್ರು.....



ನನ್ನ ಮದುವೆ ವಿಚಾರ ಕೇಳಿ ಮೊದಲು ಬೆಚ್ಚಿ ಬಿದ್ದವರೇ ನನ್ನ ಆತ್ಮೀಯ ಗೆಳೆಯರು. "ತುಂಬಾ ಕಷ್ಟ ಆಗುತ್ತೆ ಯೋಚನೆ ಮಾಡು" ಅಂದ್ರು. ಆದ್ರೆ ನನಗೆ ಯೋಚನೆ ಮಾಡುವ ಅಗತ್ಯವೇ ಇರಲಿಲ್ಲ. ಯಾಕೆಂದರೆ, ಒಂದು ದಿನ ಗಂಗೋತ್ರಿಯ ಗ್ರಂಥಾಲಯದಲ್ಲಿ ಓದುತ್ತಾ ಕುಳಿತಿದ್ದೆ. ನನ್ನ ಸಹಪಾಠಿ ಮಂಗಳಾ ಬಂದು "ರೀ ನನ್ನನ್ನು ಮದುವೆ ಆಕ್ತೀರ?" ಎಂದು ಕೇಳಿದಾಗ ಎಲಾ ಇವಳ ! ಅಂತ ಆಶ್ಚರ್ಯಪಟ್ಟೆ. ನನ್ನ ಜಾತಿ ಯಾವುದು? ಇವಳ ಜಾತಿ ಯಾವುದು? ಇದು ಗೊತ್ತಿದ್ದೂ ಈ ಹುಡುಗಿ ಬಂದು ಹೀಗೆ ಕೇಳ್ತಾ ಇದ್ದಾಳಲ್ಲ ಇವಳಿಗೆ ಎಷ್ಟು ಧೈರ್ಯ! ನನ್ನ ಜಾತಿಯ ಅಹಂ ಫೂತ್ಕರಿಸಿತು. ಆದರೆ ಆಕೆಯ ಸರಳತೆ, ಗಾಂಭೀರ್ಯ, ನಿಷ್ಕಲ್ಮಶ ನೋಟ, ಪ್ರೀತಿ, ಬಾಯಿ ಕಟ್ಟಿದವು. ಕ್ರಮೇಣ ಅವಳ ವರ್ತನೆ ನನ್ನ ಅಹಂನ ಹಗುರಗೊಳಿಸಿ ಮನಸ್ಸಿನಿಂದ ಹಾರಿಹೋಗುವಂತೆ ಮಾಡಿತು. ನಾನೂ ಯೋಚಿಸಿದೆ. ಲೋಹಿಯಾ ನನ್ನ ತಲೆ ಕೆಡಿಸಿದ್ರು. ಕ್ರಾಂತಿ ಅನ್ನೋದು ಪುಸ್ತಕದಲ್ಲೇ ಏಕೆ ನಿಜ ಜೀವನದಲ್ಲೂ ನಡೆದೇ ಹೋಗಲಿ ಎಂದುಕೊಂಡು ಹೂಂ ಅಂದೆ. ತಿಂಗಳಾನುಗಟ್ಟಲೆ ಚಿಂತಿಸಿ ತೆಗೆದುಕೊಂಡ ನಿರ್ಧಾರವದು. ಅದಕ್ಕೆ ಮತ್ತೊಮ್ಮೆ ಯೋಚಿಸಬೇಕಾದ ಅಗತ್ಯವಿರಲಿಲ್ಲ. ಗೆಳೆಯರಿಗೆ ಗಟ್ಟಿ ನಿರ್ಧಾರ ಎಂದೆ. 'ಎಸ್' ಎಂದವರೆ ಕಹಳೇ ಊದೇ ಬಿಟ್ಟರು. ಅವರೆಲ್ಲರ ಪ್ರೋತ್ಸಾಹ, ವಿಶ್ವಾಸ ನನ್ನ ಮದುವೆ, ನೆಮ್ಮದಿಯ ಬದುಕು.

ನನ್ನ ಮನೆಯವರು ಅದರಲ್ಲೂ ನನ್ನ ತಂದೆ ಅಪಾರವಾದ ನೋವು ಅನುಭವಿಸಿದರು. ನನ್ನ ಮದುವೆ ಗೊತ್ತಾದ ಮೇಲೂ ಒಂದು ಬಿರು ನುಡಿಯನ್ನೂ ಆಡದೆ ಏಕಾಂಗಿಯಾಗಿ ದುಃಖವನ್ನು ನುಂಗಿದರು. "ಸೋಕರ ಮುಂದೆ ತಲೆ ಎತ್ತದಂಗೆ ಮಾಡಿಬುಟ್ನಲ್ಲ" ಇದು ಅವರ ಕೊರಗು. ಬಂಧು–ಬಳಗದವರು ಪಂಚಾಯಿತಿ ನಡೆಸಿದರು. ಇಡೀ ದಿನವೆಲ್ಲ "ಬುದ್ಧಿ" ಹೇಳಿದರು. ಅದು– "ನೀನು ಬೇರೆ ಜಾತಿಯವಳನ್ನೇ

ಮದುವೆ ಆಗಬೇಕು ಅಂತಿದ್ರೆ ಯಾವುದಾದ್ರು ಜನಿವಾರ ಹಾಕ್ಕೊಳ್ಳೋ ಜಾತೀಲಿ ಆಗು ಈ ಜಾತೀಲಿ ಮಾತ್ರ ಬೇಡ''. ನನ್ನಣ್ಣ ಆ ದಿನಗಳಲ್ಲಿ ಏನೊಂದೂ ಮಾತನಾಡದೆ ಕೊನೆಯವರೆಗೂ ಪ್ರಶ್ನೆಯಾಗೇ ಉಳಿದುಬಿಟ್ಟರು.

ನನ್ನ ಹೆಂಡತಿಯ ಮನೆಯವರ ಪ್ರತಿಕ್ರಿಯೆ ವಿಚಿತ್ರವಾಗಿತ್ತು. ಅವನೊಬ್ಬ ಮೋಸಗಾರ ಅಂದ್ರು ಒಬ್ಬರು. ಅವನನ್ನ ಕಡಿದೇ ಹಾಕುತ್ತೇನೆ ಎಂದು ಹೂಂಕರಿಸಿದವರು ಮತ್ತೊಬ್ಬರು. ಆದರೆ ಆಕೆಯ ತಂದೆ–ತಾಯಿಗಳು– "ಗಗನ ಚುಕ್ಕಿಗೆ ಬೀಳಬೇಕ ನಾವು'' ಎಂದು ದುಃಖಿಸಿದರು.ನಾನೇ ಖುದ್ದು ಅವರೊಡನೆ ಮಾತನಾಡಿದ ಮೇಲೆ ಸರಿ ಹೋದರು. ಆನಂತರ ಯಾರ್‍ಯಾರೋ ಏನೇನೋ ಹೇಳಿಕೊಟ್ಟರು ಯಾವುದಕ್ಕೂ ಜಗ್ಗಲಿಲ್ಲ. ನನ್ನ ಬಗ್ಗೆ ಅನುಮಾನ ಪಡಲಿಲ್ಲ.

ಆಶ್ಚರ್ಯ ಎಂದರೆ ನಮ್ಮ ಮದುವೆ ಬಗ್ಗೆ ಬೇಸರವನ್ನೋ, ತಿರಸ್ಕಾರವನ್ನೋ ವ್ಯಕ್ತಪಡಿಸಿದವರು ಹೆಚ್ಚಾಗಿ ಅಕ್ಷರಸ್ಥರು! ಇವರ ರೀತಿಯೇ ಬೇರೆ. ಪ್ರಜ್ಞಾಪೂರ್ವಕವಾಗಿ ಜಾತಿಯನ್ನು ಮನಸ್ಸಿನೊಳಗೆ ಇರಿಸಿಕೊಂಡು ನಾಲಗೆಯಲ್ಲಿ ಜಾತ್ಯತೀತತೆಯ ಬಗ್ಗೆ ಮಾತನಾಡಿದರು. ನಾವೂ ಪ್ರಗತಿಪರರು ಎಂದು ತೋರಿಸಿಕೊಳ್ಳಲು ನಮ್ಮನ್ನು "ನೀವೂ'' ನಮ್ಮ ಮನೆಗೆ ಬರಬಹುದು. ಕೋಣೆ (ಅಡುಗೆ) ಒಳಕ್ಕೂ ಬರಬಹುದು, ನಾವು ಜಾತಿ ಭೇದ ಮಾಡುವವರಲ್ಲ ಎಂದು ಕರೆದಿದ್ದಾರೆ. ಹಾಗೆ ಕರೆಯುತ್ತಾ ನಮ್ಮನ್ನು ಕೊಂದಿದ್ದಾರೆ.

ಆದರೆ ನನ್ನ ಜಾತಿ, ನನ್ನ ಹೆಂಡತಿಯ ಜಾತಿ ಗೊತ್ತಿದ್ದೂ ಏನೊಂದೂ ಕೇಳದೆ ಸ್ವಲ್ಪವೂ ಮುಜುಗರ ಪಡದೆ ಸಹಜವಾಗಿ ಕಂಡು ಪ್ರೀತಿ ತೋರಿಸಿದವರು ಅನಕ್ಷರಸ್ಥ ಹಳ್ಳಿ ಜನ.

ನಮ್ಮ ಮದುವೆ ಆಗಿದ್ದು ಮಾನಸ ಗಂಗೋತ್ರಿಯಲ್ಲಿ. ಭೌತಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿದ್ದ ಡಾ. ಎಚ್. ಸಂಜೀವಯ್ಯನವರ ಮನೆಯಲ್ಲಿ. ಅವರು ಮತ್ತು ಅವರ ಶ್ರೀಮತಿ ಪದ್ಮ ನಮ್ಮ ಪಾಲಿನ ತಂದೆ–ತಾಯಿ ಆದರು. ಸರಳವಾಗಿ ನಡೆದ ಮದುವೆ. ಗೆಳೆಯರೇ ಸಿಹಿ ಹಂಚಿದರು. ಹಾರ ಹಾಕಿಸಿದರು, ಫೋಟೋ ತೆಗೆದರು. "ಮಂಡ್ಯದ ಗೌಡ್ರು ಹುಡ್ಗ ನಮ್ ಹುಡ್ಗಿ ಜೊತೆ ಓಡಾಡ್ತಾ ಅವ್ನೆ. ಆ ಬಡ್ಡಿ ಹೈದ ನಿಜವಾಗಿಯೂ ಮದುವೆ ಆಕ್ತಾನ?'' ಎಂದು ಅನುಮಾನಿಸಿ ಸಿಟ್ಟುಗೊಂಡು ಅವಾಚ್ಯವಾಗಿ ನಿಂದಿಸಿದ ನನ್ನ ದಲಿತ ಗೆಳೆಯರು ಮದುವೆಗೆ ಬಂದು ಪಶ್ಚಾತ್ತಾಪದ ಕಣ್ಣೀರ ಕೋಡಿ ಹರಿಸಿದ್ದು ನನ್ನ ನೆನಪಿನಲ್ಲಿ ಅಚ್ಚಳಿಯದೆ ನಿಂತುಬಿಟ್ಟಿದೆ. ಅಲ್ಲದೆ ಮದುವೆ ಸುದ್ದಿ ಕೇಳಿಯೇ ಬಾಚಿ ತಬ್ಬಿಕೊಂಡವರು, ಕುಣಿದು ಕುಪ್ಪಳಿಸಿದವರು, ಮತ್ತು ಆಕಾಶದ ಕಡೆ ನೋಡುತ್ತಾ "ಕಷ್ಟ, ನಿಮ್ಮಿಷ್ಟ''. ಎಂದು ಗುರು ಬಳಗದವರು ನನ್ನೊಳಗೆ ಇಳಿದಿದ್ದಾರೆ.


ಕೆಲಸ ಸಿಕ್ಕಿದ ಮೇಲೆಯೇ ಮದುವೆಯಾಗುವುದು ಎಂದು ನಾವಿಬ್ಬರೂ ನಿರ್ಧರಿಸಿದ್ದೆವು. ಹಾಗೇ ಆಯಿತು. ಇಬ್ಬರೂ ಉಪನ್ಯಾಸಕರಾಗಿ ಕೆಲಸಕ್ಕೆ ಸೇರಿಕೊಂಡ ಒಂದು ತಿಂಗಳಲ್ಲಿ ಮದುವೆ ಆದೆವು. ಪ್ರಪಂಚ ತಲೆಕೆಳಗಾಗಲೇ ಇಲ್ಲ. ಸಾಯುತ್ತೇನೆ ಎಂದವರು ಸಾಯಲೇ ಇಲ್ಲ. ಕೊಲೆ ಮಾಡುತ್ತೇನೆ ಎಂದವರು ಇತ್ತ ತಲೆಯನ್ನೇ ಹಾಕಲಿಲ್ಲ.

ಈಗ ವಿಸ್ಮಯ ನಮ್ಮ ಜೊತೆಗಿದ್ದಾಳೆ. ಇವಳನ್ನು ಶಾಲೆಗೆ ಸೇರಿಸುವಾಗ ಜಾತಿಗೆ ಸಂಬಂಧಿಸಿದ ಕಾಲಂನ್ನು ಖಾಲಿ ಬಿಟ್ಟಿದ್ದೇವೆ. ನಮ್ಮಲ್ಲಿ ಜಾತಿ–ಧರ್ಮ–ದೇವರು–ಸಂಪ್ರದಾಯಗಳಲ್ಲಿ ಭಿನ್ನಾಭಿಪ್ರಾಯವಿಲ್ಲ. ತೀರ್ಮಾನಗಳು ನ್ನಿಬ್ಬರದೂ ಆಗಿರುತ್ತದೆ. ಈಗ ನಾವು ಅಂತರ್ಜಾತಿ ಮದುವೆ ಆಗಿದ್ದೇವೆ ಎಂಬುದೇ ಮರೆತುಹೋಗಿದೆ. ಅಂದು ಸಟಗೊಂಡಿದ್ದ ಬಂಧುಗಳು ಈಗ ಸರಿಹೋಗಿದ್ದಾರೆ. ಮಾತುಗಳು ಬಂದುವು–ಹೋದುವು. ನಾವು ಬೇಕಾಗೇ ಅವುಗಳನ್ನು ಮರೆತು ಅವರೊಡನೆ ಪ್ರೀತಿಯಿಂದ ಏನೂ ಆಗಲೇ ಇಲ್ಲವೇನೋ ಎಂಬಂತೆ ವರ್ತಿಸಿ ಅವರನ್ನು ಗೆದ್ದಿದ್ದೇವೆ. ಮನಸ್ಸಿನಲ್ಲಿ ವಿಚಾರದ ಸ್ಪಷ್ಟತೆ ಮತ್ತು ಗಟ್ಟಿತನ ಇದ್ದರೆ ಇದು ಏನೇನೂ ಅಲ್ಲ. ಇದರಿಂದ ಜಾತಿ ನಾಶ ಆಗುತ್ತೋ ಇಲ್ಲವೋ ಹೇಳಲಾರೆ. ಆದ್ರೆ ಇದೊಂದು ಬಲವಾದ ಪೆಟ್ಟಂತೂ ನಿಜ. ಆ ಸಮಾಧಾನ ನಮಗಿದೆ. ಇಂತಹ ಪೆಟ್ಟುಗಳು ಲಕ್ಷ, ಕೋಟಿಗಳಾಗಲಿ ಆ ಭದ್ರ ಕೋಟೆ ಕುಸಿದು ಬೀಳಲಿ ಎಂಬುದೇ ನಮ್ಮ ಆಶಯ.

– ಅಪ್ಪಾಜಿ ಗೌಡ

ಕನ್ನಡ ಉಪನ್ಯಾಸಕ,
ಸರ್ಕಾರಿ ಪದವಿಪೂರ್ವ ಕಾಲೇಜು, ಹಳೇ ಕೋಟೆ,
ಹೊಳೆನರಸೀಪುರ ತಾಲ್ಲೂಕು,
ಹಾಸನ ಜಿಲ್ಲೆ.

ಮುಗಿದ ಏಕಾಂಗಿತನ



ನಾನು ಮಧ್ಯಸ್ಥ 'ವೈಶ್ಯ' ಜಾತಿಯ ಕುಟುಂಬದಲ್ಲಿ ಹುಟ್ಟಿದವಳು. ಅಪ್ಪ, ಅಮ್ಮ ೪ ಜನ ಅಕ್ಕಂದಿರು ಮತ್ತು ಒಬ್ಬ ಅಣ್ಣನೊಂದಿಗೆ ಬೆಳೆದು ಬಂದೆನು. ಅಪ್ಪ ಬಹಳ ಕಟ್ಟುನಿಟ್ಟಾದ ವ್ಯಕ್ತಿ. ಅವರೊಂದಿಗೆ ಮಾತನಾಡಲೇ ಭಯ. ಅಣ್ಣನಂತೂ ಯಾರ ಜೊತೆಯಲ್ಲೂ ಬೆರೆಯುತ್ತಿರಲಿಲ್ಲ. ಯಾವುದೇ ಹತ್ತಿರದ ಬಂಧುಗಳು ಇಲ್ಲದ ಕಾರಣ ಮನೆಗೆ ಬಂದು ಹೋಗುತ್ತಿದ್ದವರೂ ಬಹಳ ಕಡಿಮೆ. ಹೈಸ್ಕೂಲಿಗೆ ಬರುವಷ್ಟರಲ್ಲಿ ನನ್ನ ಇಬ್ಬರು ಅಕ್ಕಂದಿರಿಗೆ ಮದುವೆಯಾಗಿತ್ತು. ಹೀಗಾಗಿ ಏನಿದ್ದರೂ ನನ್ನ ಸಹಚರಿಗಳು ಮೂರನೇ ಮತ್ತು ನಾಲ್ಕನೇ ಅಕ್ಕಂದಿರು. ಆದರೆ ನನ್ನ ನಾಲ್ಕನೆಯ ಅಕ್ಕ ಬಹಳ ಚೆನ್ನಾಗಿದ್ದರಿಂದ ಅವಳ ಜೊತೆ ನಾನು ಹೋದರೆ ಜನ ನನ್ನನ್ನು ಕೀಳರಿಮೆಯಿಂದ ಕಾಣುತ್ತಿದ್ದರು. ಆದ್ದರಿಂದ ಅವಳ ಜೊತೆ ಬೆರೆಯುವುದು ಅಷ್ಟಾಗಿ ಇಷ್ಟವಾಗುತ್ತಿರಲಿಲ್ಲ. ಇಂತಹ ಪರಿಸರದಲ್ಲಿ ನನ್ನೊಲುಮೆ ಕಾದಂಬರಿಗಳ ಕಡೆ. ಸಾಮಾನ್ಯವಾಗಿ ಕಾದಂಬರಿಗಳಲ್ಲಿ ಪಾತ್ರಗಳನ್ನು ಬಹಳ ಒಳ್ಳೆಯ ರೀತಿಯಲ್ಲಿ ಚಿತ್ರಿಸಿರುತ್ತಾರೆ. ಇಂತಹ ಪಾತ್ರಗಳನ್ನು ಓದಿದಾಗ ನಾನೂ ಸಹ ಜೀವನದಲ್ಲಿ ಎಲ್ಲರೊಡನೆ ಒಳ್ಳೆಯ ಬಾಂಧವ್ಯವನ್ನಿಟ್ಟುಕೊಂಡು ಒಳ್ಳೆಯ ಹೆಸರು ಪಡೆಯಬೇಕೆಂಬ ಹಂಬಲ. ಇಷ್ಟೇ

ಅಲ್ಲದೆ ಕಾದಂಬರಿಗಳಲ್ಲಿ ವಿವಿಧ ಪಾತ್ರಗಳು ಮನೋಹರವಾಗಿ ಚಿತ್ರಿತವಾಗಿರುತ್ತಿತ್ತು. (ಉದಾಃ ತಂದೆ, ತಾಯಿ, ಒಡಹುಟ್ಟಿದವರು, ಗಂಡ, ಇತರೆ). ಆದರೆ ನನ್ನ ಜೀವನದಲ್ಲಿ ಯಾರಿಂದಲೂ ಅಂತಹ ಪ್ರೀತಿ, ಬಾಂಧವ್ಯ ಸಿಗುತ್ತಿರಲಿಲ್ಲ. ಹಾಗಾಗಿ ಆಗಿನಿಂದಲೂ ನನ್ನ ಮಹದಾಸೆ, ಜೀವನ ಸಂಗಾತಿಯಿಂದ ಇದೆಲ್ಲಾ ಪಡೆಯಬೇಕೆಂಬುದು. ಏಕೆಂದರೆ ಹೊಸದಾಗಿ ಬಾಂಧವ್ಯ ಬೆಳೆದು ಬರುವುದು ಅವರೊಬ್ಬರೊಡನೆ ತಾನೇ.

ಇದೇ ರೀತಿ ಜೀವನ ಸಾಗುತ್ತಿದ್ದಾಗ ನನ್ನವರಾಗಲಿದ್ದ ವೈ. ರಾಜು ಅವರನ್ನು ಭೇಟಿಯಾದ್ದು ನಾನು ಕೆಲಸಕ್ಕೆ ಸೇರಿದ ಕಚೇರಿಯಲ್ಲಿ. ಅವರೂ ಸಹ ನನ್ನ ಕೊಠಡಿಯಲ್ಲೇ ಕೆಲಸ ಮಾಡುತ್ತಿದ್ದರು. ನನಗೆ, ನನ್ನವರು ಕೆಲಸ ಮಾಡುತ್ತಿದ್ದ ರೀತಿ, ಎಲ್ಲರಿಗೂ ಸಹಾಯ ಮಾಡುತ್ತಿದ್ದ ರೀತಿ, ಎಲ್ಲಕ್ಕಿಂತ ಜಾಸ್ತಿ, ಅವರು ಎಲ್ಲರೊಡನೆ ನಗು ನಗುತ್ತಾ ಮಾತನಾಡುತ್ತಿದ್ದ ರೀತಿ ಬಹಳ ಇಷ್ಟವಾಗುತ್ತಿತ್ತು. ನನ್ನವರು ಎಲ್ಲರೊಡನೆಯೂ ಬಹಳ ಮುಕ್ತವಾಗಿ ಮಾತನಾಡುತ್ತಿದ್ದರು. ಇದೇ ರೀತಿ ನನ್ನ ಬಳಿಯಲ್ಲೂ ಮಾತನಾಡುತ್ತಿದ್ದರು. ಅವರು ಮಾತನಾಡದ ವಿಷಯವೇ ಇರಲಿಲ್ಲ. ಅವರು ಬಂದು ನನ್ನ ಬಳಿ ಮಾತನಾಡಿದರೆ ನನಗೆ ಎಲ್ಲಿಲ್ಲದ ಸಂತೋಷ. ಈ ಒಂದು ಸಮಯದಲ್ಲೇ ನನ್ನನ್ನು ಬಹಳ ರೀತಿಯಲ್ಲಿ ಪರೀಕ್ಷಿಸುತ್ತಿದ್ದರು. ನನ್ನ ಮನಸ್ಸನ್ನು ಅರಿಯಲು ಹೌದು, ಇಲ್ಲ ಎಂದು ಉತ್ತರಿಸುವ ಎರಡು ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ನನ್ನಿಂದ ಉತ್ತರ ಪಡೆದಿದ್ದರು. ಆದರೆ ಆಗ ನನಗೆ ಅದೆಲ್ಲಾ ಅಷ್ಟಾಗಿ ತಿಳಿಯುತ್ತಿರಲಿಲ್ಲ. ಈಗ ಎಲ್ಲಾ ಗೊತ್ತಾಗಿದೆ. ಇದೇ ರೀತಿ ನಮ್ಮ ಸ್ನೇಹ ದಿನೇ ದಿನೇ ಹೆಚ್ಚಾಯಿತು. ನನ್ನವರೇನಾದರೂ ಬೇರೆ ಹುಡುಗಿಯರೊಡನೆ ಮಾತನಾಡುತ್ತಿದ್ದರೆ ನನ್ನ ಆತಂಕ ಮತ್ತು ಕೋಪಕ್ಕೆ ಕೊನೆಯೇ ಇರುತ್ತಿರಲಿಲ್ಲ. ನನ್ನ ಜೀವನದ ಮಹದಾಸೆಯಾದ ಪ್ರೀತಿ ವಿಶ್ವಾಸವನ್ನು ನಾನು ಅವರಿಂದ ಪಡೆದೆ.

ನನ್ನ ಮತ್ತು ನನ್ನವರ 'ಜಾತಿ' ಬೇರೆ ಬೇರೆಯಾದ ಕಾರಣ ಸಮಾನ್ಯವಾಗಿ ಎಲ್ಲಾ ಪ್ರಕರಣಗಳಲ್ಲೂ ನಡೆಯುವ ರೀತಿಯಲ್ಲೇ ನನ್ನ ಮನೆಯಲ್ಲೂ ನಡೆಯಿತು. ಇದಕ್ಕೆ ಎರಡು ಕಾರಣಗಳು ಒಂದು ಜಾತಿಯ ಅಂತರ ಮತ್ತು ಸ್ವಲ್ಪ ಮಟ್ಟಿಗೆ ಆರ್ಥಿಕ ಅಂತರ. ರಾಜು ಬಡ ವಿಶ್ವಕರ್ಮ ಕುಟುಂಬಕ್ಕೆ ಸೇರಿದವರು. ನನ್ನ ಮನೆಯಲ್ಲಿ ವಿಚಾರ ಗೊತ್ತಾದಾಗ ದೊಡ್ಡ ರಾದ್ಧಾಂತವೇ ಆಯಿತು. ಆದರೆ ನನ್ನ ತಂದೆ ಮಾತ್ರ ವಿಚಾರ ಗೊತ್ತಾದ ತಕ್ಷಣ ಅಷ್ಟೇನೂ ವಿಚಲಿತಗೊಳ್ಳಲಿಲ್ಲ. "ಒಂದು ಲೋಟ ಹಾಲು ಕೊಡು, ಕುಡಿದು ಹೊಟ್ಟೆ ತಣ್ಣಗೆ ಮಾಡಿಕೊಳ್ಳುತ್ತೇನೆ'' ಎಂದಷ್ಟೇ ಹೇಳಿದರು. ಆದರೆ ನನ್ನ ತಾಯಿ ಮಾತ್ರ ಬಹಳ ಕೋಪಗೊಂಡರು. ನನ್ನ ಒಂದಿಬ್ಬರು ಭಾವಂದಿರೂ ಬಯ್ದರು. ಅಮ್ಮನಂತೂ ಹೊಡೆದೇ ಬಿಟ್ಟರು. ಈ ಮಧ್ಯದಲ್ಲಿ ನನ್ನ ತಂದೆ ಮತ್ತು ಇಬ್ಬರು ಭಾವಂದಿರು ನನ್ನವರನ್ನು ಭೇಟಿ ಮಾಡಿದರು. ಆಗ ನನ್ನವರು ಮಾತನಾಡಿದ ರೀತಿ, ನಡವಳಿಕೆ ಎಲ್ಲಾ ಇಷ್ಟವಾಗಿ ನನ್ನವರ ಮೇಲೆ ಒಳ್ಳೆಯ ಅಭಿಪ್ರಾಯಕ್ಕೆ ಬಂದು ನಮ್ಮಿಬ್ಬರ ಮದುವೆಯನ್ನು ಸಾಧಾರಣ ರೀತಿಯಲ್ಲಿ ನಡೆಸುವುದೆಂದು ತೀರ್ಮಾನಿಸಿ ಅಕ್ಕಂದಿರನ್ನು ಮದುವೆಗೆ ಕರೆಯಲೂ ಸಹ ಹೋಗಿದ್ದರು. ಆದರೆ ಪುನಃ ಏನೋ ಕಾರಣಕ್ಕೆ ಮನಸ್ಸು ಬದಲಾಯಿಸಿ, ಮದುವೆಯನ್ನು ಮಾಡುವುದಿಲ್ಲವೆಂದೂ, ಮನೆಯನ್ನೇ ಬಿಟ್ಟು ಹೋಗಬೇಕೆಂದರು. ಆಗ ನನಗೆ ಆಶ್ರಯ ಕೊಟ್ಟವಳು ಬೇರೆ ಯಾರೂ ಅಲ್ಲ, ನನ್ನ ನಾಲ್ಕನೇ ಅಕ್ಕ ಸುಜಾತ. ಆದರೆ ಸ್ವಲ್ಪ ದಿನಗಳ ನಂತರ ನನ್ನ ಮನೆಗೇ ಮರಳಿ ಬಂದೆನು. ಆದರೆ ನನ್ನವರ ಮನೆಯಲ್ಲಿ ಈ ಯಾವ ಸಮಸ್ಯೆಗಳೂ ಉದ್ಭವವಾಗಲಿಲ್ಲ. ನನ್ನವರೇ ಸಂಸಾರದ ಸಕಲ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದ ಕಾರಣ, ನನ್ನ ಅತ್ತೆಯವರು ಹೆಣ್ಣು ಮಕ್ಕಳ ಮದುವೆ ಮಾಡುವ ಜವಾಬ್ದಾರಿಯನ್ನು ತೆಗೆದುಕೊಂಡರೆ ತಮಗೆ ಯಾವುದೇ ಅಭ್ಯಂತರವಿಲ್ಲವೆಂದರಂತೆ.

ಈ ಎಲ್ಲಾ ಗೊಂದಲಗಳ ನಡುವೆ ಜನವರಿ ೩೦, ೧೯೮೩ರಂದು ನಮ್ಮ ಮದುವೆ ಒಂದು ದೇವಸ್ಥಾನದಲ್ಲಿ ಕೆಲವೇ ಆಪ್ತರ ಸಮ್ಮುಖದಲ್ಲಿ ನಡೆಯಿತು. ಮದುವೆಗೆ ಇಬ್ಬರು ಅಕ್ಕಂದಿರು, ಇಬ್ಬರು ಭಾವಂದಿರು ಮತ್ತು ನನ್ನ ಅಣ್ಣ ಬಿಟ್ಟರೆ, ನನ್ನ ತಂದೆ ತಾಯಿಯೂ ಸೇರಿದಂತೆ ಬೇರೆ ಯಾರೂ ಬರಲಿಲ್ಲ. ನನ್ನವರ ಮನೆಯಲ್ಲಿ ಎಲ್ಲರೂ ಬಂದಿದ್ದರು. ಮದುವೆಯ ನಂತರ ನನ್ನ ತಂದೆ ಮತ್ತು ತಾಯಿಯ ಮನೆಗೆ ಅವರ ಆಶೀರ್ವಾದ ತೆಗೆದುಕೊಳ್ಳಲು ಹೋದೆವು. ನನ್ನ ತಾಯಿ ಬಹಳ ಅಳುತ್ತಿದ್ದರು; ತಂದೆ ನಮಗಿಬ್ಬರಿಗೂ ಸಿಹಿ ತಂದುಕೊಟ್ಟರು. ಇಬ್ಬರ ಆಶೀರ್ವಾದ ಪಡೆದು ಮನೆಗೆ ಬಂದೆವು.

ನನ್ನವರಿಗೆ ಅವರ ಮನೆಯವರನ್ನೆಲ್ಲಾ ಕಂಡರೆ ಬಹಳ ಅಕ್ಕರೆ, ಅಭಿಮಾನ. ಮನೆಯವರೆಲ್ಲರೂ ನನ್ನವರ ಮೇಲೆ ಅಷ್ಟೇ ಅಭಿಮಾನವನ್ನಿಟ್ಟುಕೊಂಡಿದ್ದರು. ಮೊದಲೇ ಹೇಳಿದಂತೆ ನನ್ನ ಮನಸ್ಸು ಕಾದಂಬರಿಗಳಂತೆ ನಿಜ ಜೀವನದಲ್ಲೂ ಇರುವುದೆಂದು ತಿಳಿದ ನಾನು ಮದುವೆಗೆ ಮೊದಲು ನೂರಾರು ಕನಸುಗಳನ್ನು ಹೆಣೆದಿದ್ದೆನು. ಆದರೆ ಮದುವೆಯಾದ ನಂತರ ನಿಜ ಜೀವನವೇ ಬೇರೆ ಕಾದಂಬರಿಯ ಕಥೆಗಳೇ ಬೇರೆ ಎಂಬ ವಿಚಾರ ಮನದಟ್ಟಾಯಿತು. ನನ್ನವರಿಗೆ ನನ್ನನ್ನು ಹೊರಗಡೆ ಕರೆದುಕೊಂಡು ಹೋಗುವುದಿರಲಿ, ನನ್ನನ್ನು ಮಾತನಾಡಿಸಲೇ ವೇಳೆ ಇರುತ್ತಿರಲಿಲ್ಲ. ಮೊದಲಿನಿಂದ ಅವರಿಗೆ ಕಚೇರಿಯ ಕೆಲಸವೆಂದರೆ ಅದೇ ಜೀವನ ಎಂದು ತಿಳಿದುಕೊಂಡಂತಹ ವ್ಯಕ್ತಿ. ಕೆಲಸ ಮುಗಿದರೆ ಬಸ್ಸಿಗೆ ಬರುತ್ತೇನೆ, ಇಲ್ಲದಿದ್ದರೆ ನೀನು ಮನೆಗೆ ಹೋಗುಃ ಇದು ನನ್ನವರು ಕೊಟ್ಟಿದ್ದ ಸೂಚನೆ. ಪ್ರತೀ ದಿನ ಬಸ್ಸು ಬಂದು ಹೊರಡುವವರೆಗೂ ನನ್ನವರು ಬರುತ್ತಾರೇನೋ ಎಂದು ಆಸೆಯಿಂದ ಕಾಯುವುದು. ಆದರೆ ಪ್ರತೀ ದಿನ ನಿರಾಶೆ. ಮನೆಗೆ ಹೊತ್ತಾಗಿ ಬಂದರೂ ಬಂದ ತಕ್ಷಣ ಮನೆಯವರ ಹತ್ತಿರ ಮಾತು, ನಗು.. ನನ್ನ ಕಡೆ ನೋಡಿ ಮಾತನಾಡುವಷ್ಟು ಸಹನೆ ಅವರಿಗಿರುತ್ತಿರಲಿಲ್ಲ. ಅವರು ನಗು, ಮಾತುಗಳೆಲ್ಲಾ ಮುಗಿಯುವಷ್ಟರಲ್ಲಿ ರಾತ್ರಿ ೧೧ ಗಂಟೆಯಾದರೂ ಆಯಿತು. ಅಥವ ೧೨ ಗಂಟೆಯಾದರೂ ಆಯಿತು. ಅಷ್ಟರಲ್ಲಿ ನನಗೆ ನಿದ್ದೆ. ಹೀಗೆ ಎಷ್ಟೋ ಬಾರಿ ಮಾತೂ ಸಹ ಆಡದೆ ಎಷ್ಟೋ ದಿನಗಳನ್ನು ಕಳೆದದ್ದೂ ಉಂಟು. ಈ ಮೊದಲೇ ಹೇಳಿದಂತೆ ನಾನು ಮನೆಯವರನ್ನೆಲ್ಲಾ ಎದುರುಹಾಕಿಕೊಂಡು ಮದುವೆಯಾದ ಕಾರಣ ಹೊಸದರಲ್ಲಿ ಯಾರೂ ನನ್ನ ಮನೆಗೆ ಬರುತ್ತಿರಲಿಲ್ಲ. ನಾನೂ ಯಾರ ಮನೆಗೂ ಹೋಗುತ್ತಿರಲಿಲ್ಲ. ನನ್ನವರ ಮನೆಯವರೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ನನ್ನವರೂ ಸಹ ತೋರಿಸುತ್ತಿದ್ದ ಅನಾದರದಿಂದ ನನ್ನ ಏಕಾಂಗಿತನಕ್ಕಾಗಿ ಬಹಳ ನೋವು ತಿಂದಿದ್ದೇನೆ. ಇದಿಷ್ಟು ಮದುವೆ ನಂತರ ನನ್ನ ಹೊಸ ಜೀವನ.

ಆದರೆ ಅಂತರ್ಜಾತಿ ವಿವಾಹವಾಗಿದ್ದಕ್ಕೆ ಇದುವರೆಗೂ ನಾವು ಸಮಾಜದಿಂದ ಯಾವುದೇ ರೀತಿಯ ಕಷ್ಟಗಳಿಗೊಳಗಾಗಿಲ್ಲ. ಅಷ್ಟೇ ಅಲ್ಲ ನನ್ನ ಕಡೆಯ ನೆಂಟರಿಂದಾಗಲಿ, ಅಥವಾ ನನ್ನ ಪತಿ ಕಡೆಯವರ ಬಂಧು ಬಾಂಧವರಿಂದಾಗಲೀ ಯಾವುದೇ ಮಾತುಗಳನ್ನು ಕೇಳಿಲ್ಲ. ನನ್ನ ಕಡೆ ನನ್ನವರನ್ನು, ನನ್ನವರ ಕಡೆ ನನ್ನನ್ನೂ ಬಹಳ ಒಳ್ಳೆಯ ರೀತಿಯಲ್ಲೇ ಸ್ವಾಗತಿಸಿದ್ದಾರೆ. ನನ್ನ ಕಡೆಯಂತೂ ನನ್ನವರು ಎಲ್ಲಾ ರೀತಿಯಲ್ಲೂ ಮೆಚ್ಚುಗೆ ಗಳಿಸಿದ್ದಾರೆ.

ಮದುವೆಯಾದ ಹೊಸದರಲ್ಲಿ ನನ್ನವರಿಂದ ಮನಸ್ಸಿಗೆ ನೋವಾಗಿದ್ದರೂ, ಈಗ ನನ್ನವರ ಮೇಲೆ ಸ್ವಲ್ಪವೂ ಬೇಜಾರಿಲ್ಲ. ನನ್ನವರು ನನ್ನನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದಾರೆ. ನಾವಿಬ್ಬರೂ ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುತ್ತಿದ್ದೇವೆ. ಹೀಗಾಗಿ ಜೀವನ ಸಾಮರಸ್ಯದಿಂದ ಕೂಡಿದೆ.

ನಮ್ಮ ಜೀವನ ಹೀಗೆ ಪರಿವರ್ತನೆಯಾಗಲು ಮುಖ್ಯ ಕಾರಣಗಳು

ಎರಡು. ಒಂದು ನಾವಿಬ್ಬರೂ "Power Within Programme" ಮತ್ತು "ಭಾವ ಸ್ಪಂದನ ಕಾರ್ಯಕ್ರಮ'' ಎಂಬ ಜ್ಞಾನ ಯೋಗ ತರಬೇತಿಗಳನ್ನು Institute of Universal Consciousness ಸಂಸ್ಥೆಯಲ್ಲಿ ಆಚಾರ್ಯ ಗುರೂಜಿ ಶ್ರೀ ವಿನಯ್ ವಿನೇಕರ್ ಇವರ ಬಳಿ ತೆಗೆದುಕೊಂಡೆವು. ಇದರ ಪ್ರಭಾವದಿಂದ ನಾವಿಬ್ಬರು ಜೀವನದಲ್ಲಿ ಬಹಳ ಬದಲಾದೆವು. ಎರಡನೆಯ ಕಾರಣ, ನಮ್ಮ ಮದುವೆಯಾದಾಗ ನನ್ನವರಿಗೆ ಇಬ್ಬರು ವಿವಾಹವಾಗಬೇಕಾಗಿದ್ದ ತಂಗಿಯರಿದ್ದರು. ಆದ್ದರಿಂದ, ಅವರ ಮುಂದೆ ನಾವಿಬ್ಬರು ಪ್ರೀತಿಯಿಂದ ವರ್ತಿಸಿದರೆ ಮನಸ್ಸು ಎಲ್ಲಿ ನೋಯುತ್ತದೋ ಎಂಬ ಭಾವನೆಯಿಂದ ನನ್ನನ್ನು ಅಷ್ಟಾಗಿ ಪರಿಗಣಿಸುತ್ತಿರಲಿಲ್ಲವೆಂದು ಕಾಣುತ್ತದೆ. ಇದು ಮದುವೆಯಾದ ಹೊಸದರಲ್ಲಿ ನನಗೆ ಅರ್ಥವಾಗಿರಲಿಲ್ಲ. ೧೯೯೨ರ ಹೊತ್ತಿಗೆ ಇಬ್ಬರು ತಂಗಿಯರಿಗೂ ಮದುವೆಯಾಯಿತು. ಈ ಉದ್ಯಾನ ನಗರದಲ್ಲಿ ನಿವೇಶನವನ್ನು ಗಳಿಸಿ ನಮ್ಮದೇ ಆದ ಸ್ವಂತ ಮನೆಯನ್ನು ಸಹ ಕಟ್ಟಿಕೊಂಡೆವು. ಇದಕ್ಕೆಲ್ಲಾ ಆರ್ಥಿಕ ಹೊಣೆ ಹೊತ್ತವರು ನಾವಿಬ್ಬರೇ. ಸದ್ಯಕ್ಕೆ ನಮ್ಮ ಎಲ್ಲಾ ಜವಾಬ್ದಾರಿಗಳು ಮುಗಿದಿವೆ. ನಾವು ಜೀವನದಲ್ಲಿ ಎರಡು ಪ್ರೀತಿಯ ಮುದ್ದು ಮಕ್ಕಳೊಂದಿಗೆ ಸುಖ ಸಂತೋಷದಿಂದ ಇದ್ದೇವೆ. ನಾವು ಅಂತರ್ಜಾತಿ ವಿವಾಹವಾದರೂ ನನ್ನ ಹಾಗೂ ನನ್ನವರ ಕಡೆಯವರು ಇತರರ ಮನೆಗೆ ಹೋಗುವುದಕ್ಕಿಂತ ಹೆಚ್ಚು ನಮ್ಮ ಮನೆಗೆ ಬರುವುದರಿಂದ ಮತ್ತು ನಮ್ಮನ್ನು ಸಹ ಅವರುಗಳೆಲ್ಲ ಬಹಳ ಪ್ರೀತಿಯಿಂದ ಇತರರಿಗಿಂತ ಹೆಚ್ಚು ಬರಮಾಡಿಕೊಂಡು ಅಕ್ಕರೆಯಿಂದ ಕಾಣುವುದರಿಂದ ನಮಗೆ ಎಲ್ಲಿಲ್ಲದ ಸಂತೋಷ ಹಾಗೂ ನಾವೆಲ್ಲಾ ಒಂದೇ ಕುಟುಂಬಕ್ಕೆ ಸೇರಿದವರು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ನಾವೆಲ್ಲಾ ಕೂಡಿ ವರ್ಷಕ್ಕೆ ಒಂದೆರಡುಬಾರಿಯಾದರೂ ಐತಿಹಾಸಿಕ/ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುತ್ತೇವೆ. ಇದರ ನೇತೃತ್ವ ನನ್ನವರದೇ!

ಇಷ್ಟೆಲ್ಲಾ ಹೇಳಿದ ಮೇಲೆ ನನ್ನ ಅಭಿಪ್ರಾಯದಲ್ಲಿ ಪ್ರೇಮ ವಿವಾಹ/ಅಂತರ್ಜಾತಿ ವಿವಾಹ ಮತ್ತು ಹಿರಿಯರು ಒಪ್ಪಿ ಮಾಡುವ ವಿವಾಹ ಇವೆರಡರಲ್ಲೂ ಮದುವೆಯ ನಂತರ ಯಾವುದೇ ವ್ಯತ್ಯಾಸವಿರುವುದಿಲ್ಲ. ಏನಿದ್ದರೂ ಈ ಜೀವನ ಗಂಡ ಮತ್ತು ಹೆಂಡತಿಯ ಗುಣ ಸ್ವಭಾವಗಳಿಗೆ ಸಂಬಂಧಿಸಿದ್ದು. ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ಕೂಡಿ ಬಾಳುವ ವ್ಯಕ್ತಿತ್ವ, ಪರಸ್ಪರ ವ್ಯಕ್ತಪಡಿಸುವ ಭಾವನೆ, ಕ್ಷಮೆ ನೀಡಿಕೆ, ಪ್ರೀತಿ ತೋರಿಕೆ, ಸುಖ ದುಃಖದ ಸಮಾನ ಹಂಚಿಕೆ ಇವೆಲ್ಲಾ ಗುಣಗಳು ಇಬ್ಬರಲ್ಲೂ ಇದ್ದರೆ ಅವರ ಜೀವನ ಸುಖವಾಗಿ ಸಾಮರಸ್ಯದಿಂದಿರುತ್ತದೆ. ಇಲ್ಲದಿದ್ದಲ್ಲಿ, ಅದು ಪ್ರೇಮ ವಿವಾಹವಾಗಲಿ ಅಥವಾ ಹಿರಿಯರು ಒಪ್ಪಿ ಮಾಡಿದ ಮದುವೆಯಾಗಲಿ ಅವರ ಜೀವನದಲ್ಲಿ ನೆಮ್ಮದಿ, ಸುಖ ಮತ್ತು ಸಂತೋಷ ಕಾಣುವುದು ಬರೀ ಕನಸಷ್ಟೆ.

ಪ್ರೇಮ ವಿವಾಹವಾದರೆ ಜೀವನದಲ್ಲಿ ಏನೋ ವಿಶೇಷತೆ ಇರುತ್ತದೆ, ಜೀವನವೆಲ್ಲಾ ಸಂತೋಷದಿಂದಲೇ ತುಂಬಿರುತ್ತದೆಂದು ಅಥವಾ ಅಂತರ್ಜಾತಿ ವಿವಾಹವಾದಲ್ಲಿ ಬರೀ ಕಷ್ಟಕಾರ್ಪಣ್ಯಗಳನ್ನು ಅನುಭವಿಸಬೇಕು ಅವರಿಗೆ ಸುಖವೇ ಇರುವುದಿಲ್ಲ ಎಂದಾಗಲೀ, ಇಲ್ಲವೇ ಹಿರಿಯರು ಒಪ್ಪಿ ಜಾತಿಯಲ್ಲಿಯೇ ಮಾಡುವ ಮದುವೆಯಲ್ಲಿ ಯಾವುದೇ ತೊಂದರೆಗಳು ಬರುವುದಿಲ್ಲ ಅವರು ಜೀವನದಲ್ಲಿ ಸುಖಿಗಳಾಗಿರುತ್ತಾರೆಂದು ಯಾರಾದರೂ ತಿಳಿಯುವುದಾದರೆ ಅದು ಅರ್ಥಹೀನ ಹಾಗೂ ಸತ್ಯ ಮತ್ತು ವಾಸ್ತವಕ್ಕೆ ಅತಿ ದೂರವಾದುದು.

ಅಂತರ್ಜಾತಿ ವಿವಾಹವಾಗಿರುವುದಕ್ಕೆ ನಮ್ಮಿಬ್ಬರಿಗೂ ಅಥವಾ ಯಾವುದೇ ನಮ್ಮ ಎರಡೂ ಕಡೆಯವರಿಗೂ ಇದರಿಂದ ತೊಂದರೆಗಳಾಗಲಿ ಅಥವಾ ಅಹಿತಕರ ಘಟನೆಗಳಾಗಲಿ ಉಂಟಾಗಿಲ್ಲ. ಹಿರಿಯರೇ ನಿಶ್ಚಯಿಸಿ ನಮ್ಮ ನಮ್ಮ ಜಾತಿಗಳಲ್ಲೇ ನಮ್ಮಿಬ್ಬರಿಗೂ ಬೇರೆ ಬೇರೆ ಮದುವೆ ಮಾಡಿದ್ದರೂ ನಾವು ಇಷ್ಟು ಸುಖ, ಸಂತೋಷ ಮತ್ತು ನೆಮ್ಮದಿಯಿಂದ ಇರುತ್ತಿದ್ದೆವೋ ಇಲ್ಲವೋ ಗೊತ್ತಿಲ್ಲ. ಇದು ನನ್ನ ಮತ್ತು ನನ್ನವರ ಒಟ್ಟಾರೆ ಅಭಿಪ್ರಾಯ. ಅಂತೂ ಇಂದು ನಾವೇ ಧನ್ಯರು.

ನಮ್ಮ ಈ ಪ್ರೇಮ ಕಥನವನ್ನು ಇತರರೊಂದಿಗೆ ಹಂಚಿಕೊಳ್ಳಲು ಅವಕಾಶವನ್ನು ನೀಡಿದ್ದಕ್ಕಾಗಿ ಮಾನವ ಮಂಟಪಕ್ಕೆ ನಮ್ಮ ಅನಂತಾನಂತ ವಂದನೆಗಳು.

–ಕೆ. ಆರ್. ರಾಜೇಶ್ವರಿ

ಸಹಕಾರ ಇಲಾಖೆ ಕಾರ್ಯದರ್ಶಿಯವರ ಆಪ್ತ ಸಹಾಯಕಿ,
ರಾಜ್ಯ ಸಚಿವಾಲಯ, ವಿಧಾನಸೌಧ, ಬೆಂಗಳೂರು.

ಸದಾ ಮಧು ಚಂದ್ರ



ನಾನು ಬರೆದಿದ್ದ 'ಮಧು ಚಂದ್ರ' ಎಂಬ ಪದ್ಯವು 'ಸುದ್ದಿಸಂಗಾತಿ' ವಾರಪತ್ರಿಕೆಯಲ್ಲಿ ವಿಳಾಸ ಸಮೇತ ಪ್ರಕಟವಾಗಿದ್ದೇ ನನ್ನ ಜೀವನದಲ್ಲಿ ಪ್ರೇಮ ಜೀವನವೊಂದು ಧುತ್ತೆಂದು ತೆರೆದುಕೊಳ್ಳಲು ಕಾರಣವಾಯಿತು.

ಬಾಲ್ಯದಲ್ಲಿ ತಂದೆಯಿಂದ ಗಾಂಧಿಯೂ, ಯೌವ್ವನದಲ್ಲಿ ಜೆ.ಪಿ. ಚಳುವಳಿ, ಲೋಹಿಯಾರ ಪುಸ್ತಕಗಳೂ, ಪೆರಿಯಾರ್‌ರ 'ದೇವರು'ಗಳೂ, ಕೋವೂರರ ಪವಾಡಗಳೂ ತಲೆ ತುಂಬಾ ತುಂಬಿಕೊಂಡೇ ಇದ್ದುದರಿಂದ ಅವುಗಳನ್ನು ಕಕ್ಕಲು ಸ್ಥಳಾವಕಾಶಕ್ಕಾಗಿ ಹುಡುಕಾಡಿಕೊಂಡು ಓಡಾಡುತ್ತಿದ್ದನೇ ವಿನಾ ಪ್ರೀತಿ–ಪ್ರೇಮಕ್ಕಾಗಿ ಸಮಯ ಮಾಡಿಕೊಂಡಿರಲಿಲ್ಲ. ಅಲ್ಲದೆ ಕಡ್ಡಿಯಂತಹ ದೇಹದ ನನ್ನನ್ನು ಯಾರು ತಾನೇ ಪ್ರೀತಿಸುತ್ತಾರೆ ಎಂದು ಧೈರ್ಯದಿಂದ ಮೈಸೂರಿನಲ್ಲಿ ಹೊಟ್ಟೆಪಾಡಿಗಾಗಿ ಕೆಲಸ ಮಾಡುತ್ತಲೂ, ಉಳಿದ ಸಮಯದಲ್ಲಿ ಯಾವು ಯಾವುದೋ ಚಟುವಟಿಕೆಗಳಲ್ಲಿ ಮುಖ ತೋರಿಸುತ್ತಲೂ ಇದ್ದೆ. ನನ್ನ ಈ ಎಲ್ಲಾ ಬದಲಾವಣೆಗಳು ನಡೆದದ್ದು ಹೀಗೆ.

ಪದ್ಯ ಪ್ರಕಟವಾದ ಒಂದೆರಡು ವಾರಗಳಲ್ಲಿ ಸರಸ್ವತಿಪುರಂನ ರೂಂ ಖಾಲಿ ಮಾಡಿದೆ. ರೂಂನ ಮಾಲೀಕರು–'ನೀವು ಜೈಲು ಗೀಲು ಅಂತ

ಹೋಗಿ ಬರ್ತೀರಾ. ಯಾವಾಗಲೂ ನಿಮ್ಮ ರೂಂನಲ್ಲಿ ಯಾರ್‍ಯಾರೋ ಸೇರಿರ್‍ತಾರೆ. ಸಿವಿಲ್ ಡ್ರೆಸ್ ಪೋಲೀಸರ ಕಾಟ ಬೇರೆ. ನೀವು ರೂಂ ಖಾಲಿ ಮಾಡಿ' ಎಂದಿದ್ದರು. ಅವರು ಅಷ್ಟೇನೂ ವಿದ್ಯಾವಂತರಲ್ಲದವರಾಗಿದ್ದು, ವಿಶ್ವಕನ್ನಡ ಸಮ್ಮೇಳನ ಪ್ರತಿಭಟಿಸಿ ಜೈಲಿಗೆ ಹೋಗಿದ್ದು, ಅವರಿಗೆ ಕೊಲೆ–ಪಿಕ್‌ಪಾಕೆಟ್ ಮೊದಲಾದವಕ್ಕೂ ಇದಕ್ಕೂ ಸಂಬಂಧವಿರ ಬೇಕೆಂದೂ, ಇವರೆಡರ ನಡುವೆ ವ್ಯತ್ಯಾಸವೇನೂ ಇಲ್ಲದೆ ಜೈಲಿಗೆ ಹಾಕಿರಬಹುದೆಂದೂ ಆಗ ನಂಬಿದ್ದರು.

ನಾನು ಕುವೆಂಪುನಗರಕ್ಕೆ ಮನೆ ಬದಲಾಯಿಸಿದ ಒಂದೆರಡು ದಿನದ ನಂತರ ಹಳೆ ರೂಂನ ಮಾಲೀಕರ ತಮ್ಮ ನನಗೆ ಬಂದಿದ್ದ ಕಾಗದ ಪತ್ರಗಳನ್ನು ಕೊಟ್ಟರು. ಅದರಲ್ಲಿದ್ದ ಒಂದು ಪತ್ರದಲ್ಲಿ ನನ್ನ ಪದ್ಯವನ್ನು ಮೆಚ್ಚಿ 'ಮಾನಸ' ಹೆಸರಿನಲ್ಲಿ ಬಂದ ಒಂದು ಪತ್ರವಿತ್ತು. ಅಲ್ಲಿಂದ ಶುರುವಾಯಿತು ಈ ಕಾಂಡಗಳು.

'ಮಾನಸ' ಹೆಸರಿನಲ್ಲಿ ಬರೆದಿದ್ದ ಪತ್ರ ಯಾರೋ ನನ್ನ ಗೆಳೆಯರ ಕಿತಾಪತಿ ಎಂದೇ ಐದಾರು ತಿಂಗಳು ತಿಳಿದಿದ್ದೆನು. ಆದರೆ ನಾನು ಪತ್ರ ಬರೆಯುತ್ತಲೂ, ಅದು ಹುಡುಗರ ಭಾವನೆಗಳ ಪತ್ರ ಅಲ್ಲವೆಂದು ಶಂಕಿಸುತ್ತಲೂ, ಆದದ್ದಾಗಲಿ ನೋಡೇ ಬಿಡೋಣ ಎಂದು ಒಂದು ದಿನ 'ಮಾನಸ' ಕೊಟ್ಟ ವಿಳಾಸದಲ್ಲಿ ನೋಡಲಾಗಿ, ಒಣಚರ್ಮದೊಳಗೆ ಮುಚ್ಚಿದ ಕೃಶ ದೇಹದ, ಕುಳ್ಳಗಿನ, ನನ್ನನ್ನೇ ತಿಂದು ಬಿಡುವ ಆಸೆಕಣ್ಣುಗಳ 'ಮಾನಸ' ಬಾಗಿಲು ತೆರೆದಳು. ಹೀಗೆ ಒಂದೆರಡು ವರ್ಷ ದೋಣಿಯಲ್ಲಿ ಸಾಗಿದಂತೆ ನಮ್ಮ ಪ್ರೇಮವು ಪತ್ರದಲ್ಲೇ ಸಾಗುತ್ತಿತ್ತು. ಸದ್ಯದಲ್ಲೇ ಅವಳಿಗೆ ಮದುವೆ ಮಾಡಲು ಅವಳ ತಂದೆ–ತಾಯಿ ಓಡಾಡುತ್ತಿದ್ದಾರೆಂದು ತಿಳಿಸಿದಾಗಲೇ ನಾನು ನಮ್ಮಿಬ್ಬರ ಮದುವೆ ಬಗ್ಗೆ ಸೀರಿಯಸ್ ಆಗಿದ್ದು. ಅವಳ ಅಪ್ಪ–ಅಮ್ಮಂದಿರು ನನ್ನನ್ನು ತಿರಸ್ಕರಿಸಿದ ಕೆಲವು ಕಾರಣಗಳಲ್ಲಿ– ನಾನು ಗಡ್ಡ ಬಿಟ್ಟವನು, ಊರೂರು ಸುತ್ತುವವನೂ, ಜೈಲಿಗೆ ಹೋಗಿ ಬಂದವನೂ ಆಗಿದ್ದೆನು. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ ಮದುವೆ ಆಗಿಬಿಡೋಣ. ಎಂದರೆ ಇವಳು ಹೆದರುತ್ತಿದ್ದಳು. ತಂದೆ–ತಾಯಿಗೆ ವಿರೋಧ ವಾಗಿರಲಾರದೆ ನನ್ನನ್ನೂ ಕಳೆದುಕೊಳ್ಳಲಾರದೆ ಒದ್ದಾಡುತ್ತಿದ್ದಳು.

ಹೀಗೊಂದು ದಿನ ಮೈಸೂರಿನ ಗಂಗೋತ್ರಿಯಲ್ಲಿ ಸಿಕ್ಕಿದಳು. ಸದ್ಯದಲ್ಲೇ ತನಗೆ ಮದುವೆ ಮಾಡಲಿರುವುದರಿಂದ ತಾನು ನನ್ನನ್ನೇ ಮದುವೆಯಾಗುವುದಾಗಿ ತಿಳಿಸಿದಳು. ನಾನು ಇನ್ನೆರಡು ದಿನಗಳಲ್ಲಿ ಇಲ್ಲೇ ಮದುವೆಯಾಗುವುದಾಗಿಯೂ, ನಿನ್ನ ತಂದೆ ತಾಯಿಗೂ ಮದುವೆಗೆ ಬರಲು ಹೇಳು ಎಂದು ಹೇಳಿ ಗೆಳೆಯರಾದ ರಾಮದಾಸ್, ನಿರ್ಮಲಾ ಮೇಡಂ ಮನೆಗೆ ಪಾದ ಬೆಳೆಸಿದೆ. ಎಲ್ಲಾ ವಿಷಯಗಳನ್ನು ಹೇಳಿದಾಗ ಅವರ ಮನೆಯ ಟೆರೇಸ್ ಮೇಲೆ ಸಂಜೆ ಒಕ್ಕೆ ಮದುವೆ–ತೀರ್ಮಾನವಾಯಿತು. ನಂತರ ರಾತ್ರಿಯೇ ನನ್ನೂರಾದ ಸಕಲೇಶಪುರಕ್ಕೆ ತೆರಳಿ ತಂದೆ–ತಾಯಿಗೆ ಮೊಟ್ಟಮೊದಲ ಬಾರಿಗೆ ನನ್ನ ಕಥೆಯನ್ನು ಹೇಳಿದೆ.

"ನಮಗೆ ಗೊತ್ತಿತ್ತು. ಮೊದಲಿಂದ್ಲೂ ನಮಗೆ ಚೆನ್ನಾಗಿ ಗೊತ್ತಿತ್ತು. ನೀನು ಒಂದಲ್ಲಾ ಒಂದು ದಿನ ಎಂಥದೋ ಆ ರೀತಿ ಮದುವೆ ಆಗ್ತೀಯಾಂತ. ನಾವು ಏನು ತಿಳಿದುಕೊಂಡಿದ್ದೆವೋ ಅದೇ ಆಯ್ತು ಬಿಡು. ನಾಳೆ ಸಂಜೆ ಒಕ್ಕೆ ಮದುವೆಯಲ್ವ. ನಾವು ಮದ್ಯಾನವೇ ಬರ್‍ತೀವಿ" ಎಂದರು. ಸ್ವಲ್ಪ ತಡೆದು "ಇನ್ನು ಹಾಳುಮೂಳು ಚಳುವಳಿ, ಅದೂ ಇದೂ ಅಂತ ತಿರುಗಬೇಡ. ಸಂಸಾರ ಆದ ಮೇಲೆ ನೆಮ್ಮದಿಯಾಗಿರು. ಅದಿರ್‍ಲಿ ಆಕೆ ಮನೆಯವರು ಕ್ರಿಶ್ಚಿಯನ್ನಾ?" ಎಂದರು.

ಅವಳೂ ನನ್ನಂತೆಯೇ ಎಂದೆ.

ಸಂಜೆ ಒಕ್ಕೆ ರಾಮದಾಸ್ ಮನೆ ಟೆರೇಸಿನಲ್ಲಿ ಹಾರ ಬದಲಾಯಿಸಿಕೊಂಡೆವು. ಮದುವೆಗೆ ಮುಂಚೆ ಮಾನಸ ಗೋಳೋ ಎಂದು ಅತ್ತಳು. ಅವಳ ತಂದೆ–ತಾಯಿ ಬರಲಿಲ್ಲ. ನನ್ನ ತಂದೆ–ತಾಯಿ ಅಕ್ಕಿಕಾಳನ್ನು ಹಾಕಿ ಹಾರೈಸಿ ಮರುದಿನ ಊರಿಗೆ ಹೋದರು.

ಮರುದಿನ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ಮನೆಗೆ ಬಂದಾಗ ೨ ಗಂಟೆ. ಉರಿ ಬಿಸಿಲು: ನನ್ನ ಮನೆ ಮುಂದೆ ಬಾಗಿಲಲ್ಲಿ ಹಲವಾರು ಚಪ್ಪಲಿಗಳು ನಮ್ಮಿಬ್ಬರನ್ನು ಸ್ವಾಗತಿಸಿದವು. ಸಿನಿಮಾದ ಥರ. ಒಳಗೆ ಇವಳ ತಂದೆ–ತಾಯಿ ಎಲ್ಲರೂ ತುಂಬಿಕೊಂಡು ಗಲಾಟೆ ಶುರುಮಾಡಿದರು. ಇವಳ ಗೋಳೋ ಎಂಬ ಅಳುವೂ ಶುರುವಾಯಿತು. ಏನು ಹೇಳಲು ಹೋದರೂ ಇವರಿಗೆ ಅರ್ಥವಾಗುತ್ತಿಲ್ಲ. ಅರ್ಥವಾಗುವ ಸ್ಥಿತಿಯಲ್ಲೂ ಇರಲಿಲ್ಲ. ನನ್ನ ಜತೆ ಬಂದಿದ್ದ ಗೆಳೆಯರನ್ನು (ಬೆಂಗಳೂರಿನ ಟೋನಿ, ಮೈಸೂರಿನ ಹರೀಶ್, ಹಾಸನದ ಸಣ್ಣ) ನೋಡಿ ಹೆದರಿದರೇನೋ. ಮನೆಯಾಚೆ ಬಂದು 'ನಾಳೆ ನಮ್ಮೆಲ್ಲರ ಹೆಣಗಳನ್ನು ಸ್ಮಶಾನ'ದಲ್ಲಿ ನೋಡ್ತೀರಿ ಎಂದು ಅಬ್ಬರಿಸಿ–ಹೆದರಿಸಿ ಹೋದರು.

ಈಗ ಹೇಗಿದ್ದೇವೆ? ಅವಳೋ ಅವರಿವರ ಮನೆ–ಸ್ಥಿತಿ ನೋಡಿ ಆಸ ಪಡುತ್ತಾಳೆ. ಮಲಗಲು ಮಂಚದ ಬಗ್ಗೆ, ಒಳ್ಳೆ ಸೀರೆಯ ಬಗ್ಗೆ, ಕುತ್ತಿಗೆಗೊಂದು ಚಿನ್ನದ ಚೈನು, ಮಗಳ ಕಾಲಿಗೆ ಚೈನು ಇತ್ಯಾದಿ. ಆದರೆ ಬಾಯಿ ಬಿಟ್ಟು ಕೇಳುವುದಿಲ್ಲ. ಒಂದು ರೀತಿ ಕನಸಿನಂತೆ. ಮಾತಾಡುವಾಗ ಯಾರಿಗಾದರೂ ಅರ್ಥವಾಗುತ್ತದೆ. ಆಗ ನಾನು 'ಈ ಹೆಂಗಸರೇ ಹೀಗೆ' ಎಂದುಕೊಳ್ಳುತ್ತಾ "ಓ ನನ್ನ ಚಿನ್ನ ನೀನೇ ನನಗೆ ಚಿನ್ನ" ಎನ್ನುತ್ತೇನೆ. ಈ ಹತ್ತು ವರ್ಷಗಳಲ್ಲಿ ಎಷ್ಟೋ ಬಾರಿ ಜಗಳವಾಡಿದ್ದೇವೆ. ಜಗಳದ ನಂತರ ಒಂದು ಗಂಟೆ ಮೌನ. ಮೌನದಲ್ಲಿ ಜಗಳ ಯಾಕಾಯಿತು. ಹೇಗಾಯಿತು ಕಾರಣಗಳ ಹುಡುಕಾಟ.


ಮನೆಯಲ್ಲಿ ತಾಯಿಯೂ ಮಗನೂ ಕನ್ನಡದಲ್ಲಿ ಮಾತಾಡುತ್ತಾರೆ. ಮಗಳೂ ತಾಯಿಯೂ ಮಲೆಯಾಳಂನಲ್ಲಿ ಮಾತಾಡುತ್ತಾರೆ. ನನ್ನ ಈ ಇಬ್ಬರು ಮಕ್ಕಳೂ ನನ್ನೊಂದಿಗೆ ಕನ್ನಡದಲ್ಲಿ ಮಾತಾಡುತ್ತಾರೆ. ಇಷ್ಟು ವರ್ಷಗಳಾದರೂ ಈ ಮಕ್ಕಳಿಂದ ನಾನು ಮಲೆಯಾಳಂ ಕಲಿಯಲು ಆಗಿಲ್ಲ. ಇನ್ನೊಂದು 'ಮಧು ಚಂದ್ರ' ಬರೆದಿಲ್ಲ. ಕಾರಣ ಕೆಲಸ–ತೊಂದರೆ–ತಾಪತ್ರಯ ನಡುವೆ ಜಗಳ–ಪ್ರೀತಿಗಾಗಿ ಕಾಯುತ್ತಿರುವ ಮನಸ್ಸು.

ಈಗ ಜಗಳ ಆಡಲು ಸಮಯ ಎಲ್ಲಿದೆ? ಇಬ್ಬರು ಮಕ್ಕಳ ಜಗಳ–ಕಿತ್ತಾಟಗಳಲ್ಲಿ ನಮಗೆ ನಾವೇ ಮರೆತಿರುತ್ತೇವೆ. ಇನ್ನು ಹೆತ್ತ ಮಗನ ಮದುವೆಗೆ ಬಂದ ತಂದೆ–ತಾಯಿ ನಮ್ಮನ್ನು ಅದೇ ಪ್ರೀತಿಯಿಂದ ನೋಡುತ್ತಾರೆ. ಹೆತ್ತ ಮಗಳ ಮದುವೆಗೆ ಬಾರದೆ ಹೋದ ಆ ತಂದೆ–ತಾಯಿ ಈಗಲೂ ಮಗಳನ್ನು ಮಗಳಂತೆ ಪ್ರೀತಿಯಿಂದ ನೋಡುತ್ತಿರುವುದನ್ನೂ, ನನ್ನ ಬಗ್ಗೆ "ಇದ್ದರೆ ಹೀಗೆ ಇರಬೇಕಪ್ಪಾ' ಎಂದು ಅವರಿವರ ಬಳಿ ಹೆಮ್ಮೆಯಿಂದ ಹೇಳಿದ್ದನ್ನು ಅವರಿವರು ನನ್ನ ಕಿವಿಗೆ ತಲುಪಿಸಿದ್ದಾರೆ.

ಕಷ್ಟ-ಸುಖ, ಎಚ್ಚರಿಕೆ ಮತ್ತು ಬೆಚ್ಚನೆಯ ಪ್ರೀತಿಯಿಂದ ನನ್ನನ್ನು ಸದಾ 'ಮಧು ಚಂದ್ರ'ದಲ್ಲಿ ತೇಲಾಡಿಸಿದೆ. ಈ ಅಮಲಿನಲ್ಲಿ ನನ್ನ ಗಡ್ಡ ಬೆಳ್ಳಗಾಗಿದೆ. ನನ್ನ ಈ ಪ್ರೀತಿಯೊಳಗೆ ಇವಳ ಒಣ ಚರ್ಮ ಸುಲಿದ ಬಾಳೆಯ ದಿಂಡಿನಂತೆ ಮೃದುವಾಗಿದೆ. ಯಾವುದೇ ಊರಿನ ಯಾವುದೇ ಬಾಡಿಗೆ ಮನೆಯೂ ನಮಗೆ ಒಲವಿನ ಗೂಡಾಗಿದೆ.

-ಕೆ. ಎಸ್. ಕೇಶವ ಪ್ರಸಾದ್ (ಶಿಕ್ಷಕ)
ಜಿಲ್ಲಾ ತರಬೇತಿ ಸಂಸ್ಥೆ,
ವಾರ್ತಾ ಭವನ ಕಟ್ಟಡ, ಮಡಿಕೇರಿ.

ಗೌತಮನ ಜಾತಿ ಯಾವುದು ?



ಹಿಂತಿರುಗಿ ನೋಡಿದರೆ... ಹತ್ತು ವರ್ಷಗಳಷ್ಟು ಹಿಂದಕ್ಕೆ- ನನ್ನ ಪ್ರೇಮ, ವಿವಾಹವನ್ನು ಕುರಿತು ಯೋಚಿಸುತ್ತ... ನೆನಪಾಗುವುದು: ನನ್ನ ಬಾಲ್ಯ, ತಾರುಣ್ಯ; ನನ್ನ ಜಾತಿಯಿಂದಾಗಿ ಪಟ್ಟ ಅವಮಾನ, ಅವಮಾನದಿಂದ ತಪ್ಪಿಸಿಕೊಂಡು ಉಳಿದಿದ್ದು, ಅವಮಾನವನ್ನು ಮೀರಿ ಬದುಕನ್ನು ಕಾಪಾಡಿಕೊಂಡದ್ದು, ಕನ್ನಡದ ಅಮೃತದ ನುಡಿಯಲ್ಲಿ ಕಂಡುಕೊಂಡ ಪ್ರತಿ ಸೃಷ್ಟಿ; ನನ್ನ ಅಂತರಂಗದ ಬಿಡುಗಡೆ ಮತ್ತು ಸಬಲತೆಗೆ ನೆರವಾದ 'ಬುದ್ಧ'ನೆಂಬ ದೇವ; ಗಾಂಧೀಜಿ ಅವರ ಕ್ರಿಯೆ ಮತ್ತು ಕಾಣ್ಕೆ, ಲೋಹಿಯಾ ಎಂಬ ದಾರಿದೀಪ; ಲಂಕೇಶ್ ಪತ್ರಿಕೆ ಎಂಬ ನನ್ನ ಕಾಲದ ಅದ್ಭುತ... ಈ ಎಲ್ಲವೂ...

ನಾನು 'ವಿಶ್ವಕರ್ಮ' ಅಥವಾ 'ಅಕ್ಕಸಾಲಿಗ' ಜಾತಿಗೆ ಸೇರಿದವನು. ನಮ್ಮ ಅಯ್ಯ (ತಂದೆ) ಚಿನ್ನ-ಬೆಳ್ಳಿ ಒಡವೆ ಮಾಡುವ ನಮ್ಮ ಕುಲ ಕಸುಬನ್ನು ನೆಚ್ಚಿಕೊಂಡಿದ್ದವರು. ನಮ್ಮೂರಿನ ತಿಗಳರ ಕೇರಿಯಲ್ಲಿ ನಮ್ಮದೊಂದೇ ಮನೆ. ನಡುವೆ ಅದು ಹೇಗೋ ಸಿಕ್ಕಿಕೊಂಡಂತಿತ್ತು. ನನಗೆ ಚಿಕ್ಕವನಾಗಿದ್ದಾಗಿನಿಂದಲೂ ಅವರೆಲ್ಲ ನಮ್ಮ ಮೇಲೆ ದೈಹಿಕ ಆಕ್ರಮಣ ಮಾಡುತ್ತಾರೆಂಬ ಭಯ ಅದು ಹೇಗೋ ನನ್ನ ಅಂತರಂಗವನ್ನು ಸೇರಿಬಿಟ್ಟಿತ್ತು.

ನಮ್ಮವರ ಮದುವೆ ನಡೆದರೆ ಊರಿಗೆ 'ಕನಿಷ್ಟ' ಎಂದು ಕೆಲವರು ಮದುವೆಗೆ ತಡೆಯೊಡ್ಡಲನುವಾದಾಗ ಪೋಲಿಸರಿಗೆ ತಿಳಿಸಿ ನನ್ನ ತಂದೆ ಮಾಡಿದ ನಮ್ಮ 'ದೊಡ್ಡಯ್ಯ' ಒಬ್ಬರ ಮದುವೆ ನನ್ನೊಳಗೆ ಕೀಳರಿಮೆ ಮತ್ತು ಸಂಘಟಿತ ಜಾತಿಗಳ ವಿರುದ್ಧದ ರೋಷಗಳ ಅಂಕುರಕ್ಕೆ ಕಾರಣವಾಯಿತು.

ನನ್ನ ತಂದೆಯವರ ಶಾಂತವಾದ, ತಣ್ಣನೆಯ ಚಟುವಟಿಕೆಗಳಲ್ಲಿ ನಾನು ಪ್ರಕ್ಷುಬ್ಧತೆಯನ್ನು ಕಂಡು ಕಳವಳಗೊಳ್ಳುತ್ತಿದ್ದೆ. ಹೀಗೆಯೇ ಕಳೆದುಹೋದದ್ದು ನನ್ನ ಬಾಲ್ಯ.

ಪ್ರೈಮರಿ ಸ್ಕೂಲಿನಲ್ಲಿ ವೆಂಕಟರಾಮಯ್ಯನವರೆನ್ನುವ ಉಪಾಧ್ಯಾಯರು 'ಆಚಾರ್ಯ' ಎಂಬ ಪದದ ಅರ್ಥ ಹೇಳಿದ ಮೇಲೆ 'ಆಚಾರ್ಯರೇ' ಎಂದು ಅಣಕವಾಡುತ್ತಿದ್ದ ಸಹಪಾಠಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಹೈಸ್ಕೂಲಿನಲ್ಲಿಯೂ ಈ ಜಾತಿಯ 'ಗಾಳಿ' (ಊರ ಗಾಳಿ) ಬಂದಿಳಿದಿತ್ತು. ಅಲ್ಲೀವರೆಗೆ ನನ್ನನ್ನು ಪ್ರೀತಿಯಿಂದ ಮಾತಾಡಿಸುತ್ತಿದ್ದ ಟಿವಿಜಿ ಎಂಬ ಮೇಷ್ಟು (ಟಿ. ವೆಂಕಟೇಗೌಡ) 'ಏಯ್...ಆಚಾರೀ' ಎಂದು ಕೊನೆಯ ಬೆಂಚಲ್ಲಿದ್ದ ನನ್ನನ್ನು ಕೂಗಿ ಬೈಯ್ದಿದ್ದರು (ನನ್ನ ಹತ್ತಿರ ಅವರೆಂದೂ ನನ್ನ ಜಾತಿ ಯಾವುದೆಂದು ಕೇಳಿರಲಿಲ್ಲ). ಅನಿರೀಕ್ಷಿತವಾಗಿ ಎರಗಿದ ಈ ಅವಮಾನದಿಂದ ನಾನು ಇಳಿದುಹೋಗಿದ್ದೆ. ಇಂಥ ಪರಿಸ್ಥಿತಿಯಲ್ಲೂ ನಾನು ಈ ವಿಸಂಗತಿಯ ತಾತ್ವಿಕ ಜಿಜ್ಞಾಸೆ ನಡೆಸಿದ್ದು ನನಗೇ ಅಚ್ಚರಿ ತರುತ್ತದೆ.

ಅಲ್ಲೇ ನನ್ನೊಬ್ಬ ಸಹಪಾಠಿ 'ಬಿಲ್ಲೆ,' 'ಬಿಲ್ಲೆ' ಎಂದು ವ್ಯಂಗ್ಯವಾಡುತ್ತ ನಗುತ್ತ ನನ್ನ ಮೇಲೆರಗುತ್ತಿದ್ದ. ಅಲ್ಲಿನ ಜಾತಿ ದೂಷಣೆಯ ವಿಕೃತ ಕ್ರೌರ್ಯಕ್ಕೆ ನನ್ನ ಒಳಗು ತತ್ತರಿಸುತ್ತಿತ್ತು.

...ಆದರೆ ಇವ್ಯಾವುವನ್ನೂ ನಾನು ನನ್ನ ತಂದೆಯವರ ಬಳಿ ಹೇಳುತ್ತಿರಲಿಲ್ಲ. ಅದು ನನ್ನ ಜೊತೆಗೆ ಅವರನ್ನೂ ಅವಮಾನಗೊಳಿಸಿ, ಅಸಹಾಯಕಗೊಳಿಸಿ ಬಿಡಬಹುದೆಂಬ ಭಯ ನನ್ನನ್ನಾವರಿಸಿ ಬಿಟ್ಟಿತ್ತು. ಅವರು ಕಾಪಾಡಿಕೊಳ್ಳಲೆತ್ನಿಸುತ್ತಿದ್ದ ಘನತೆಯನ್ನು ನಾನು ಭಗ್ನಗೊಳಿಸಲು ಬಯಸಲಿಲ್ಲ.

...ಹೀಗೆ ಮುದುಡಿಹೋಗುತ್ತಿದ್ದ ಬಾಲ್ಯ ಮತ್ತು ತಾರುಣ್ಯವನ್ನು ಅಸಹಾಯಕನಾಗಿ ನೋಡಿಕೊಳ್ಳುತ್ತ ನಾನು ಬೆಳೆದೆ.

ನನ್ನ ಪ್ರೇಮ, ವಿವಾಹಕ್ಕೂ ನನ್ನ ಬಾಲ್ಯಕ್ಕೂ ಯಾವ ಬಗೆಯ ಸಂಬಂಧ ಎಂದು ಕೇಳಿಕೊಂಡರೆ, ಮೇಲಿನ ವಿವರಗಳನ್ನು ಓದಿದ ಯಾರಾದರೂ 'ಪ್ರಬಲ ಜಾತಿಯಲ್ಲಿ ಮದುವೆಯಾಗಿ ಅಸಹಾಯಕತೆಯನ್ನು ನೀಗಿಸಿಕೊಳ್ಳುವ ಜಾತಿಯಲ್ಲಿ ಉಳಿಯದೆ ಆಮೂಲಕ ಅವಮಾನಗಳಿಂದ ತಪ್ಪಿಸಿಕೊಳ್ಳುವ ಪಲಾಯನವಾದೀ ಕ್ರಮವೆಂದು ವ್ಯಾಖ್ಯಾನ ನೀಡಬಹುದು.

ಆದರೆ ವಾಸ್ತವ ಅದಲ್ಲ. ನಾನಾಗಲೇ ಬದಲಾದ ಕಾಲದಲ್ಲಿದ್ದೆ. ಈ ನೆಲದ ಧೀಮಂತರ ಹಲಬಗೆಯ ದರ್ಶನ, ಚಿಂತನೆ, ಜಾತ್ಯತೀತತೆಯ ಕುರಿತಾದ ಆಲೋಚನೆಗಳ ಸನಿಹ ಬಂದಿದ್ದೆ. ಅವು ನಮ್ಮ ದೇಶದ ಎಲ್ಲ ಜಾತಿಗಳ ವಾಸ್ತವವನ್ನು ಮಂಡಿಸುತ್ತಿದ್ದವು. ಮೇಲ್‌ಜಾತಿಗಳ ಅನಗತ್ಯ ಅಹಂಕಾರ, ನಿರೀಕ್ಷಿತ ಪತನದ ಜೊತೆ, ಕೆಳಜಾತಿಗಳ ಆತ್ಮಹತ್ಯಾತ್ಮಕ ಕೀಳರಿಮೆಯನ್ನೂ ಗಮನಿಸಿದ್ದವು. ಚಿಕಿತ್ಸಕವಾದ ದಾರ್ಶನಿಕ ನೋಟ ಬೀರಿದ್ದವು. ಹೀಗಾಗಿ ನನಗೊಂದು ಬಗೆಯ ಸ್ಥಿಮಿತ ಸಾಧ್ಯವಾಯ್ತು. ಭಾರತೀಯ ಯುವಕನ ಮೊದಲ ಕರ್ತವ್ಯವೆಂದರೆ ಜಾತಿಯಿಂದ ಹೊರ ನಡೆಯುವುದು ಎಂದು ನಾನು ತೀವ್ರವಾಗಿ ಅಂದುಕೊಂಡೆ. ಹಾಗೆ ಹೊರ ನಡೆಯುವುದು ಅನೇಕ ಬಗೆಯ ನೈತಿಕ ಸಂಪತ್ತನ್ನು ನಮ್ಮ ವ್ಯಕ್ತಿತ್ವಕ್ಕೆ ತರುತ್ತದೆ ಎಂದು ನಾನೀಗಲೂ ಭಾವಿಸುತ್ತೇನೆ. ಸ್ವಜಾತಿಯೊಳಗೆ ನಡೆಯುವ ಮದುವೆ ಅಸಹ್ಯ ಹುಟ್ಟಿಸುತ್ತದೆ. ಒಂದೇ ಬಗೆಯ ನಡೆ, ನುಡಿ, ಸಂಪ್ರದಾಯ ನಂಬಿಕೆ, ಭಯ, ವಿಚಾರ, ಅಹಂಕಾರ ಹೀಗೆ ಕೂಪದೊಳಗೆ ಸೇರಿಕೊಂಡಂತಾಗಿ ಅಸಹನೀಯ ವೆನಿಸುತ್ತದೆ...

ಈ ಹೊತ್ತಿಗೆ ನಾನು ಓದಿಕೊಂಡಿದ್ದ ತೇಜಸ್ವಿ ಅವರ ಲೇಖನ: 'ವ್ಯಕ್ತಿ ವಿಶಿಷ್ಟವಾದ; ಪ್ರೇಮ ಮತ್ತು ವಿವಾಹ' ಎಂಬ ಲೇಖನ ನನ್ನನ್ನು ಹಲಬಗೆಯಲ್ಲಿ ಪ್ರಭಾವಿಸಿತು. ಅಲ್ಲಿನ ಪ್ರೇಮ ಮತ್ತು ವಿವಾಹ ಕುರಿತಾದ ವ್ಯಾಖ್ಯಾನವು ನನ್ನ ವ್ಯಕ್ತಿತ್ವದ ಅಮೂರ್ತ ಸ್ಥರಗಳಲ್ಲಿ ಕ್ರಾಂತಿಕಾರಿ ಸ್ಪಂದನವೆಬ್ಬಿಸಿತು. ಅಲ್ಲಿನ ಸೌಂದರ್ಯಾತ್ಮಕ ನೋಟವು ಆಹ್ಲಾದಕರವೂ, ವೈಚಾರಿಕವೂ ಆಗಿತ್ತು.

೧೯೮೪: ಕರ್ನಾಟಕ ಸರ್ಕಾರವು ತೆಗೆದುಕೊಂಡ ಕೈಗಾರಿಕಾ ತರಬೇತಿ ಸಂಸ್ಥೆಗಳ ಖಾಸಗೀಕರಣದ ನಿರ್ಧಾರದಿಂದಾಗಿ ಮಧುಗಿರಿಯಲ್ಲಿ ತೆರೆಯಲ್ಪಟ್ಟ ಅಂಥ ಒಂದು ಖಾಸಗೀ ಐ.ಟಿ.ಐ.ನಲ್ಲಿ ಉದ್ಯೋಗಕ್ಕೆ ಸೇರಿದೆ. ಹೀಗೆ ರಾಜಕೀಯ ನಿರ್ಧಾರವೊಂದು ನನ್ನ ವಿವಾಹ ವಿಧಿಯ 'ಪೂರ್ವಬರಹ' ವಾಗಿತ್ತು.

ನನ್ನ ಪತ್ನಿ ಕುಂಚಿಟಿಗ ಒಕ್ಕಲಿಗ ಜಾತಿಗೆ ಸೇರಿದವಳು ಮನೆಯ ಕಿರಿ ಮಗಳು. ಮನೆಯವರೆಲ್ಲರ ಕಣ್ಮಣಿ. 'ತಾರಕೇಶ್ವರಿ' ಹೆಸರಿನ ತೆಳುವಾಗಿ, ಎತ್ತರವಾಗಿದ್ದ ಆ ಹುಡುಗಿ ಆರೋಗ್ಯಪೂರ್ಣವಾಗಿದ್ದಳು. ತುಂಬಿದ ಬಿಂದಿಗೆಗಳನ್ನು ನಿರಾಯಾಸವಾಗಿ ಹೊತ್ತು ದೃಢ ಹೆಜ್ಜೆಗಳನ್ನಿಟ್ಟು, ನಗುನಗುತ್ತ ಬರುತ್ತಿದ್ದ ಆಕೆಯ ಉಲ್ಲಾಸವೇ ನಗು ಸೂಸುತ್ತಿದ್ದ ಆಕೆಯ ಮುಖವೇ ಅವಳ ವ್ಯಕ್ತಿತ್ವವನ್ನು ರೂಪಿಸಿದಂತಿದ್ದವು. ಲೋಕೋತ್ತರವೆನ್ನಿಸುತ್ತಿದ್ದ ಅವಳ ಅಸ್ತಿತ್ವಕ್ಕೇ ನಾನು ಮಾರುಹೋದೆ ಎಂದು ಅನ್ನಿಸುತ್ತಿದೆ ನನಗೆ. ನನ್ನ ಸಂತೋಷವೆಲ್ಲ ಒಟ್ಟಾಗಿ ಬಂದಂತಿತ್ತು. ನಾನು ಆ ಹುಡುಗಿಯನ್ನು ಪ್ರೀತಿಸಿದಂತೆ ನಾನೂ ಆಕೆಗೆ ಇಷ್ಟವಾಗಿದ್ದೆ. ಅವಳ ತಾಯಿ ಈ ಎಲ್ಲವನ್ನೂ ಗಮನಿಸುತ್ತಿದ್ದಂತಿತ್ತು.

ಆ ಹುಡುಗಿ ನನಗೊಲಿದು ನನ್ನ ವ್ಯಕ್ತಿತ್ವಕ್ಕೆ ಹೊಸ ಗೌರವ ಪ್ರಾಪ್ತವಾಗಿತ್ತು. ನನ್ನ ಬಗೆಗೆ ನನಗೇ ಅಭಿಮಾನವೆನಿಸುತ್ತಿತ್ತು...ಇದು ಹೊಸ ಅನುಭವವಾಗಿತ್ತು. ಎಲ್ಲರಲ್ಲೂ ಹೇಳಿಕೊಳ್ಳುವಂತಾಗುತ್ತಿತ್ತು.

ಹೀಗೊಂದು ದಿನ ಅವರ ತಾಯಿ ನನ್ನ ಜಾತಿ ಯಾವುದೆಂದು ಕೇಳಿದಾಗ ನಾನು ವಿಚಿತ್ರವಾಗಿ ಇಳಿದುಹೋಗಿದ್ದೆ. ಚೇತರಿಸಿಕೊಂಡು ನನ್ನ ಜಾತಿಯ ಹೆಸರು ಹೇಳಿದ್ದೆ. ಆದರೆ ಅವರಲ್ಲೇನೂ ನಾನು ಬಿದ್ದುಹೋಗುವಂಥ ಬದಲಾವಣೆಯಾಗದೆ, ನಾನು ಸಮಾಧಾನಗೊಂಡೆ.

ನಾನು ಬರೆದ ಪತ್ರವೊಂದು ಮನೆಯಲ್ಲಿ ಸಿಕ್ಕಿ ದೊಡ್ಡ ಗಲಾಟೆಯೇ ಆಗಿಹೋಯಿತು. ಅವಳ ಅಣ್ಣ, ತಂದೆ ಎಲ್ಲರಿಗೂ ವಿಷಯ ತಿಳಿದು ನನ್ನ ಮೇಲೆ ರೋಷಗೊಂಡರು. ಆಕೆ ಮನೆಯ ಹೊರಗಡೆ ಬರದಂತೆ ತಡೆದರು. ನಾನು ಮನೆಯ ಹೊರಗೆ ನಿಲ್ಲದಂಥ, ತಿರುಗಾಡದಂಥ ಪರಿಸ್ಥಿತಿ ಉಂಟಾಯಿತು. ನನ್ನನ್ನು ಕಂಡರೆ ಕಿಡಿಕಾರ ತೊಡಗಿದ ಅವರು, ಕಾಲುಮುರಿಯುವ, ಮುಗಿಸಿಬಿಡುವ ಮಾತಾಡ ತೊಡಗಿದರು.

ನನ್ನೊಳಗಿನ ಹುಡುಗ ಚಡಪಡಿಸಿದ್ದ. ಕಣ್ಣು ಕಟ್ಟಿದ, ಬಿರುಬಿಸಿಲಿ ನಡಿಯ ಪ್ರಯಾಸಕರ ಕ್ಷಣಗಳಂತೆ ಬದುಕು ಕಳೆದುಹೋಯಿತು. ಮುಂದೆ ಬಿ.ಎಸ್ಸಿ. ಓದಲು ಬೆಂಗಳೂರಿಗೆ ಕಳಿಸಿ, ಅವರ ಮನೆಯವರು ಇನ್ನೂ ನಿಷ್ಠುರರಾದರು. ಅವರ ಮನೆಯ ಸೌಖ್ಯದ ಜೊತೆಗೆ ನಮ್ಮ ಪ್ರೇಮದ ಸುಖವೂ ಕೊನೆಗೊಂಡಿತ್ತು.

ಆವೇಳೆಗೆ ನಾನು ಮಧುಗಿರಿಯನ್ನು ಬಿಡುವವನಿದ್ದೆ. ತುಮಕೂರಿನ ಎಚ್.ಎಂ.ಟಿ.ಯಲ್ಲಿ ನನಗಾಗ ಉದ್ಯೋಗವೊಂದು ಸಿಕ್ಕಿ, ಮಧುಗಿರಿಯ ಎಲ್ಲ ಅನುಭವಗಳಿಗೂ ವಿದಾಯ ಹೇಳಿದೆ. ನನ್ನ ಕನಸು, ಕವಿತೆ, ಒಲವು ಎಲ್ಲವುಗಳಿಂದಲೂ ನನ್ನನ್ನು ಕಿತ್ತುಕೊಂಡಂತಿದ್ದೆ. ನಾವು ಪರಸ್ಪರರಿಗೆ ಬರೆದ ಪತ್ರಗಳಲ್ಲಿ ಮದುವೆಯ ಪ್ರಸ್ತಾಪವಿರುತ್ತಿತ್ತು. ನನಗಂತೂ ನಮ್ಮ ಪ್ರೇಮ ದುರಂತವಾಗುವುದು ಬೇಕಿರಲಿಲ್ಲ. ಆದರೆ ನನ್ನ ಹುಡುಗಿ ಮನೆಯವರ ಒಪ್ಪಿಗೆಗಾಗಿ ಕಾಯುತ್ತಿದ್ದಳು. ಮನೆಯವರೆಲ್ಲರ ಅವಹೇಳನಕ್ಕೆ, ಉಪೇಕ್ಷೆಗೆ ಪ್ರತಿಯಾಡದೆ. ನನಗೆ ಸಮಾಧಾನದ ಕೆಲವೊಮ್ಮೆ ಹತಾಶೆ ತುಂಬಿದ ಪತ್ರ ಬರೆಯುತ್ತಿದ್ದಳು.

ದೂರದ ಊರಲ್ಲಿ ನಡೆಯುತ್ತಿದ್ದ ನನ್ನ ಬದುಕಿನ, ಘಟನೆಗಳು ಸಹಜವಾಗೆ ನಮ್ಮ ಮನೆಯವರಿಗೆ ಗೊತ್ತಿರಲಿಲ್ಲ.ತಂದೆಯವರು ಅಲ್ಲಿ ಇಲ್ಲಿ 'ಹೆಣ್ಣು' ನೋಡುತ್ತಿದ್ದರು. ನನ್ನಿಂದ 'ಸೂಕ್ತ' ಪ್ರತಿಕ್ರಿಯೆ ಸಿಗದೆ ವ್ಯಗ್ರರೂ ಅಸಹಾಯಕರೂ ಆಗುತ್ತಿದ್ದರು. ನಾನು ನನ್ನ ಸ್ವಭಾವಕ್ಕನು ಗುಣವಾಗಿ ಹಠಮಾರಿಯೂ, ದಾರ್ಷ್ಟ್ಯದವನೂ ಆಗಿ ಅವರೆದುರು ವರ್ತಿಸುತ್ತಿದ್ದೆ.

೧೯೮೮ರ ಒಂದು ದಿನ ನನ್ನ ಹುಡುಗಿಯಿಂದ ಪತ್ರ ಬಂತು. ಅದರಲ್ಲಿ ಅವಳು 'ಓಡಿಹೋಗುವ' ನಿಲುವಿಗೆ ಬಂದಿದ್ದಳು. ನನಗೆ ಸಂಭ್ರಮ ಮತ್ತು ಆತಂಕ ಒಟ್ಟಿಗೆ ತುಂಬಿಕೊಂಡವು.

ಹೀಗೇ ತಕ್ಕ ನಿರ್ಧಾರಕ್ಕಾಗಿ ಚಡಪಡಿಸುತ್ತಿದ್ದಾಗ ಅವರ ಮನೆಯಲ್ಲಿ ಅನಿರೀಕ್ಷಿತವೆನ್ನಿಸುವ ರೀತಿಯಲ್ಲಿ ಘಟನಾವಳಿಗಳೇ ಜರುಗಿ ನಮ್ಮ ಮದುವೆಯನ್ನು ಒಪ್ಪಿಕೊಳ್ಳುವ ಹಂತಕ್ಕೆ ಬಂದುಬಿಟ್ಟರು.

ನಾನಾಗ ನಮ್ಮ ತಂದೆ ತಾಯಿಯವರನ್ನು ಒಪ್ಪಿಸಲು ಊರಿಗೆ ಓಡಿದೆ. ಅವಸರವಸರದಲ್ಲಿ ದಿಗ್ವಿಜಯ ಸಾಧಿಸಿದವನ ಸಂತಸದಲ್ಲಿ ಬಡಬಡಿಸಿದೆ. ಅಕ್ಕನ ಹತ್ತಿರ, ಅಮ್ಮನ ಹತ್ತಿರ ಮೂರ್ಖನ ಥರ, ವಿಚಿತ್ರ ಮುಜುಗರದಲ್ಲಿ ಹೇಳಿಕೊಂಡೆ. ಬೇರೆ ಜಾತಿಯ ಹುಡುಗಿಯೆಂದು, ಒಕ್ಕಲಿಗರೆಂದು ಹೇಳಿದೆ.

ನನ್ನ ತಂದೆಯವರು ಮತ್ತು ತಾಯಿ ಏನೂ ಗೊತ್ತಾಗದೆ ಇಳಿದುಹೋದರು. ಇದೆಲ್ಲ ಅವರಿಗೆ ಅನಿರೀಕ್ಷಿತ ಆಘಾತವಾಗಿತ್ತು. ನನ್ನ ಹಠಮಾರಿತನದ ವಿಷಮ ಮಾಧ್ಯಮದೆದುರು ಮಾತಾಡಿ ಸುಖವಿಲ್ಲವೆಂಬ ಅನ್ನಿಸಿಕೆಯಿಂದಲೇ ಅವರು ಆಯಾಸಗೊಂಡಿರುವುದು ಗೊತ್ತಾಗುತ್ತಿತ್ತು. ಏನಾದರಾಗಲೆಂದು ನಾನು ತುಮಕೂರಿಗೆ ಹಿಂತಿರುಗಿದೆ. ನನ್ನ ಹುಡುಗಾಟಿಕೆಗೆ ನನ್ನಲ್ಲೇ ಒಂದು ಬಗೆಯ ಆತಂಕ ಉಂಟಾಗುತ್ತಿತ್ತು. ತುಮಕೂರಿಗೆ ಹಿಂಬಾಲಿಸಿ ಬಂದ ಅವರು ಕೂರಿಸಿಕೊಂಡು ತಿಳಿಹೇಳಿದರು. ಸುಸ್ತಿನಿಂದ, ಆಯಾಸದಿಂದ, ಹತಾಶೆಯಿಂದ ಕೂಡಿದಂತಿದ್ದರು. ಆದರೆ ನಾನು ನನ್ನ ಮಾಮೂಲಿ ಹುಡುಗಾಟಿಕೆ, ದಾರ್ಷ್ಟ್ಯ, ಆದರ್ಶದ ಕೃತಕವೆನ್ನಿಸುತ್ತಿದ್ದ ಮಾತುಗಳಿಂದ ಅವರನ್ನು ಎದುರಿಸಿದೆ. ನನ್ನ ನಕಾರಾತ್ಮಕ ಉತ್ತರದಿಂದ ಬೇಸರಗೊಂಡು ಆ ಉರಿ ಬಿಸಿಲಿನಲ್ಲೇ ಊರಿಗೆ ಹೊರಟುಹೋದರು.

ಆಮೇಲೆ ಅವರ ಪ್ರೀತಿಯ ಕಿರಿ ಮಗ ನಮ್ಮ ಮದುವೆಯ ಬಗ್ಗೆ ಅವರಿಗೆ ಒತ್ತಾಯದಿಂದ ಹೇಳಿ ಒಪ್ಪಿಸಿದ. ಅವರ ಒಪ್ಪಿಗೆಯನ್ನು ತಿಳಿಸುತ್ತಾ 'Little Lohia weds Tharakeshwari' ಎಂದು ಆನಂದದಿಂದ ಬರೆದು ನಾನು ಸಂಕೋಚ ಮತ್ತು ಆಶ್ಚರ್ಯದಿಂದ ತುಂಬುವ ಹಾಗೆ ಮಾಡಿದ.

ತಂದೆಯವರೇ ಮದುವೆಗೆ 'ಮಾಂಗಲ್ಯ'ವನ್ನು ಮಾಡಿಸಿ ತಂದರು. ನನ್ನ ಇಷ್ಟಕ್ಕೆ ವಿರುದ್ಧವಾದರೂ ಎಡೆಯೂರಿನ ದೇವಸ್ಥಾನದಲ್ಲಿ ನಮ್ಮ ಮದುವೆ ಹೇಗೋ ನಡೆದುಹೋಯಿತು. ನಮ್ಮ 'ಮದುವೆ ಆಗಿ ಈಗಾಗಲೇ ಎಂಟು ವರ್ಷಗಳು ಕಳೆದುಹೋಗಿವೆ. ಇಬ್ಬರು ಮಕ್ಕಳು ಗೌತಮ ಮತ್ತು ಗೌರಿ ಹುಟ್ಟಿದ್ದಾರೆ. ನನ್ನ ತಂದೆ ತೀರಿಕೊಂಡಿದ್ದಾರೆ. ಆ ನನ್ನ ತಂದೆ ತಮ್ಮ ಸೊಸೆಯ ಮುಖದಲ್ಲಿ ದೈವಿ ಕಳೆಯಿದೆ ಎಂದು ಹೇಳಿದ್ದ ಮಾತು ನಮ್ಮ ನೆನಪಲ್ಲಿ ಅವರ ವೈಶಿಷ್ಟ್ಯವನ್ನು ಸೂಚಿಸುತ್ತಾ ಉಳಿದಿದೆ.


ಗೌತಮನ ಜಾತಿ ಯಾವುದು? ಎಂಬ ಪ್ರಶ್ನೆ ಅವನನ್ನು ಸ್ಕೂಲಿಗೆ

ಸೇರಿಸುವಾಗ ಬಂದು ನಿಂತಿತು. ನಾನು ಬಹಳ ಯೋಚಿಸಿದೆ. ನಮ್ಮೆರಡು ಜಾತಿಗಳು ನಮ್ಮೊಂದಿಗೆ ಅಳಿಯಲಿ ಎಂಬುದು ನನ್ನ ಬಯಕೆ. ಅವನನ್ನು ಸದ್ಯದ ಪ್ರಿಯ ಪರ್ಯಾಯವಾದ 'ಬೌದ್ಧ' ಎಂದು ಅಂಕಿಸಿದೆ.

ಇದು ವಿವಾದಾಸ್ಪದ ಎಂದು ಗೊತ್ತು. ಆದರೆ ಕನಿಷ್ಠ ಮಟ್ಟದ ಪಲಾಯನ. ಆರೋಗ್ಯಕ್ಕೆ ಅಷ್ಟೇನೂ ಕೆಟ್ಟದ್ದಲ್ಲವೆಂದು ನನ್ನ ಭಾವನೆ. ಅನೇಕ ಬಗೆಯ ವಾದಿಗಳ ಕ್ರಿಯಾ ಶೂನ್ಯತೆಗಿಂದ ಇದು ಮೇಲು. ಅಲ್ಲವೆ?

– ಕೆ. ಪಿ. ನಟರಾಜ್
ಎಚ್.ಎಂ.ಟಿ. ಕೈ ಗಡಿಯಾರ ಕಾರ್ಖಾನೆ,
ತುಮಕೂರು.

ಜಾತಿವಾದಿಗಳನ್ನು ಕಂಗೆಡಿಸಿತು



ಅಂತರಜಾತಿ ವಿವಾಹವೆಂದರೆ ಸಾಮಾನ್ಯವಾಗಿ ಕೌಟುಂಬಿಕ ಅಡಚಣೆಗಳು, ಊರುಕೇರಿಗಳ ತೊರೆದು ಬೇರೆಲ್ಲೊ ಅಡಗಿಕೊಂಡು ಪ್ರಾಣಭಯದಿಂದ ತತ್ತರಿಸುತ್ತಾ ಸಬ್–ರಿಜಿಸ್ಟ್ರಾರ್‌ಗಳೆಂಬ ಶ್ವಾನು ಭೋಗಿರಿಂದ, ಆರಕ್ಷಕರಿಂದ ಪ್ರತಿಕೂಲ ಪರಿಣಾಮಗಳನ್ನೆದುರಿಸುತ್ತಾ, ಸ್ನೇಹಿತರು ಬೆಂಬಲಿಸಿದಲ್ಲಿ ವಿವಾಹ, ಆತ್ಮಸ್ಥೈರ್ಯವಿದ್ದಲ್ಲಿ ಜೀವನ ಇಲ್ಲವೆ ದುರಂತ.

ಮದುವೆಯಾದ ನಂತರ ಸಾಮಾಜಿಕವಾಗಿ ಅನಧಿಕೃತ ಬಹಿಷ್ಕಾರ, ಬೆದರಿಕೆ, ಬಂಧುಬಾಂಧವರ ಕುಹಕ ಕೊನೆಗೆ ಅನಿವಾರ್ಯ ಹೊಂದಾಣಿಕೆ.

ಈ ಸಮಸ್ಯೆಗಳು ನನ್ನ ಮದುವೆ ಬಳಿ ಸುಳಿಯದಿರುವುದೇ ಒಂದು ಆಶ್ಚರ್ಯ.

ಹಿಂದುಳಿದ ಪ್ರದೇಶ, ಪರಿಶಿಷ್ಟ ಜಾತಿಯಿಂದ ಬಂದ ನನ್ನ ಅಂದಿನ ಆಸೆ ಭಾರತಿ, ಜಯಂತಿ ಕೊನೆಪಕ್ಷ ಜ್ಯೋತಿಲಕ್ಷ್ಮಿಯಂತಹ ಬೆಳ್ಳಗಿನ ಸುಂದರಿಯು ನನ್ನ ಹೆಂಡತಿಯಾಗಿ ಬರಬೇಕು ಎಂಬುದು ಆದರೆ ನನ್ನ ಸ್ಟೇಟಸ್‌ಗೆ ಸಿಗಬೇಕಲ್ಲ?

ನನ್ನೂರಿನ ಚೆಲುವೆಯರು ನನ್ನ ಗುರುತಿಸಲೆಂಬ ಉದ್ದೇಶದಿಂದ ಪಿಯುಸಿ ಹಂತದಲ್ಲಿ ನಾನೊಬ್ಬ ಲೇಖಕನಾದೆ. ಪತ್ರಿಕೆಗಳಲ್ಲಿ ನನ್ನ ಹೆಸರು ಬರಲಾರಂಭಿಸಿತು. ಅದರ ಉದ್ದೇಶ ಸುಂದರಿಯರು ನನ್ನತ್ತ ನೋಡಲಿ ಎಂಬುದು.

ಯಾವಾಗಲೂ ಪ್ರೇಮಕತೆಗಳನ್ನು ಹುಡುಕಿ ಓದುತ್ತಾ, ಮರೋಚರಿತ್ರದಂತಹ ಸಿನಿಮಾಗಳನ್ನು ನೋಡುತ್ತಾ ಲವ್ ಲೆಟರ್‌ಗಳನ್ನು ರಚಿಸುತ್ತಾ ಕೊಡಬೇಕೆಂದವರಿಗೆ ಕೊಡುವ ತಾಕತ್ತಿಲ್ಲದೆ ಕೇವಲ ಕನಸುಗಳ ಗುಲಾಮನಾದೆ.

ಮಹಾರಾಜ ಕಾಲೇಜಿಗೆ ಬರುವವರೆಗೆ ನಾನೊಬ್ಬ ಗೊಡ್ಡು ಸಂಪ್ರದಾಯವಾದಿ. ಆದರೆ ಮೇಷ್ಟ್ರು ರಾಮದಾಸ್, ಡಾ. ರಾಮಲಿಂಗಮ್‌ರ ಪ್ರತಿಭಟನೆಗಳು, ಬೀದಿ ನಾಟಕದ ಗೀಳು, ಸಿನಿಮಾ ಸ್ನೇಹಿತರ ಸಹವಾಸ ವಿಶುಕುಮಾರ್, ಲಂಕೇಶ್, ತೇಜಸ್ವಿ, ನಿರಂಜನ, ಅನಂತಮೂರ್ತಿ, ಮಹಾದೇವ, ಆಲನಹಳ್ಳಿ, ಸಿದ್ದಲಿಂಗಯ್ಯನವರ ಪ್ರಭಾವ ನನ್ನೊಳಗಿನ ಮೂಢಾತ್ಮವನ್ನು ಕೊಂದು ವಿಚಾರವಾದಿ ವೇಷ ತೊಡಿಸಿತು. ಭಾರತಿ, ಜಯಂತಿ, ಹೇಮಮಾಲಿನಿಯರ ದಾಸಾನುದಾಸನಾದ ನಾನು ಪೂರ್ಣಾವಧಿ ಧರಣಿ, ಪ್ರತಿಭಟನೆ, ಚರ್ಚೆ, ಸಂಕಿರಣಗಳ ನಡುವೆ ನಮ್ಮ ಲವ್‌ಗಳೆಲ್ಲ ತೃಣ ಸಮಾನವಾದವು.

ಎಂ.ಎ. ಮಾಡುವ ವೇಳೆಗೆ ಮರಿಸಾಹಿತಿಯಾದ ನಾನು ರಾಮದಾಸ್, ಡಾ. ಸಂಜೀವಯ್ಯ, ಡಾ. ಅನಂತಮೂರ್ತಿಗಳೊಡನೆ ಸಮಕ್ಕೆ ನಿಂತು ಭಾಷಣ ಮಾಡುವ ಬಡ್ತಿ ಪಡೆದೆ. ವಿಚಾರವಾದಿ ಒಕ್ಕೂಟದ ಕಾರ್ಯದರ್ಶಿಯಾಗಿ ಅನೇಕ ಅಂತರಜಾತೀಯ, ಅಂತರ ಮತೀಯ ವಿವಾಹ ಮಾಡಿಸುವ ಕಾಯಕ ಪಡೆದುಕೊಂಡೆ. ದೈವಭಕ್ತನಾಗಿದ್ದ ನಾನು ದೈವವಿರೋಧಿಯಾಗಿ ಪ್ರಗತಿಪರ ಹೋರಾಟಗಳ ನಡುವೆ ಮುಳುಗಿ ಲವ್ ಮಾಡುವ ನನ್ನ ಕಾಯಕವನ್ನು ಕಳೆದುಕೊಂಡೆ.

ಗಂಗೋತ್ರಿಯಲ್ಲಿ ಲೆಕ್ಚರರ್ ಆಗಿ ಸೇರಿಕೊಂಡ ಮೇಲೆ ಲವ್ ಮಾಡುವ ಚಾನ್ಸ್ ಇಲ್ಲದಂತಾಯಿತು. ಏನಾಗದಿದ್ದರೂ ಸರಳವಾಗಿ ಮದುವೆಯಾಗಬೇಕೆಂಬುದು ಅನಿವಾರ್ಯವಾಗಿತ್ತು. ಈ ಹೊತ್ತಿಗೆ ವಿಚಾರವಾದಿ ಬ್ರಹ್ಮಚಾರಿಣಿಯರು ನನ್ನತ್ತ ದೃಷ್ಟಿ ಹಾಯಿಸಹತ್ತಿದರು. ಅವರ ವಿಚಾರವಾದದ ಮುಂದೆ ನನ್ನ ವಿಚಾರವಾದ ಪಲ್ಟಿ ಹೊಡೆದರೆ ಕಷ್ಟವೆಂದು ಹೆದರಿ ನನ್ನ ಕೌಟುಂಬಿಕ ಹಿನ್ನೆಲೆಗೆ ಹೊಂದುವ ಸಂಗಾತಿಗಾಗಿ ಬೇಟೆಯಾಡಹತ್ತಿದೆ. ಈ ನನ್ನಿ ಬೇಟೆಗೆ ಸೂಕ್ತವಾದದ್ದು ಪ್ರೇಮ ವಿವಾಹವೆಂದು ಬೇರೆ ಹೇಳಬೇಕಾಗಿಲ್ಲ ಅಲ್ಲವೆ?

ದೂರಬಾರ ಹೋಗಿ ಲವ್ ಕುದುರಿಸುವುದು ಈ ಸಂದರ್ಭದಲ್ಲಿ ಕಷ್ಟವೆಂದು ನನ್ನನ್ನು ಒಪ್ಪಬಹುದಾದ ಒಂದು ಹುಡುಗಿ ಕೇಳುವುದೆಂದು ತೀರ್ಮಾನಿಸಿದೆ. ಒಂದು ವರ್ಷ ಈ ಹುಡುಗಿ (ಹೆಂಡತಿ) ನನ್ನ ವಿದ್ಯಾರ್ಥಿನಿಯಾದುದರಿಂದ ಗಮನಿಸಿ, ಒಳ್ಳೆಯವಳೆಂದು ರೆಡಿ ಟೈಪ್ ಅಲ್ಲವೆಂದು ಖಾತ್ರಿಯಾದ ಮೇಲೆ ಅವಳಿಗೊಂದು ಪತ್ರ ಬರೆದೆ. ಅದರಲ್ಲಿ 'ನಾನು ಆಸ್ತಿವಂತನಲ್ಲ ನೀನು ಮದುವೆಗೆ ಒಪ್ಪಿಧರೆ ಖುಣಿ ಒಪ್ಪದಿದ್ದರೆ ಪರವಾಗಿಲ್ಲ, ನಾನಂತು ಆತ್ಮಹತ್ಯೆ ಮಾಡಿಕೊಳ್ಳುವವನಲ್ಲ' ಎಂದು ಬರೆದುಕೊಟ್ಟು ಮನೆಯಲ್ಲಿ ಓದಲು ರಿಕ್ವೆಸ್ಟ್ ಮಾಡಿದೆ. ಅವಳಿಗೂ ಗಾಬರಿ ಸದ್ಯ ಕ್ಲಾಸಿನಲ್ಲಿ ಓದಿ ಗಲಾಟೆ ಮಾಡಲಿಲ್ಲ ಪುಣ್ಯ.

ಅವಳ ಮೊದಲ ಎಂ.ಎ. ಪರೀಕ್ಷೆ ಮುಗಿದು ಅವಳಿಗೆ ರಜೆ ಬಂದಿತು. ಲೆಟರ್ ಬರೆಯೋದು ಬರೆದೆ. ಆಮೇಲೆ ಆತಂಕ ಜಾಸ್ತಿ ಯಾಯಿತು. ಅವಳು ತಂದೆಗೆ ಒಬ್ಬಳೆ ಮಗಳು. ಅವಳ ತಂದೆ ಪ್ರೊಫೆಸರ್ ಏನಿದ್ದರೂ ಐಎಎಸ್, ಐಪಿಎಸ್‌ಗಳ ಜೊತೆ ಮದುವೆ ಎಂದು ಅವರ ಜಾತಿಯಲ್ಲಿ ಅವರ ಮನೆಗೆ ಹೋಗಿ ರಿಜೆಕ್ಟ್ ಆಗಿ ಬಂದ ಹಲವು ಮೇಷ್ಟ್ರು ಕ್ಯಾಂಡಿಡೇಟ್‌ಗಳು ಹೇಳಿದ ಮಾತು ಕೇಳಿ ಫಲಿತಾಂಶ ಖಂಡಿತವಾಗಿ ನನ್ನ

ವಿರುದ್ಧವಾಗಿರುತ್ತದೆಂದು ತೀರ್ಮಾನಿಸಿ ತಣ್ಣಗಾದೆ.

ಈ ನಡುವೆ ಅಂತರಜಾತಿ ವಿವಾಹವಾಗಿರುವ ಪರಿಚಯಸ್ಥರ ಮನೆಗೆ ಹೋಗಿ ಅದು ಇದು ಮಾತಾನಾಡುತ್ತಾ ಅವರು ಲವ್ ಮಾಡಿದ ಯೋಜನೆಗಳನ್ನು ಕೇಳಿ ನಾನು ಮನಸ್ಸಿನಲ್ಲಿ ಪ್ಲಾನ್ ಮಾಡುತ್ತಾ ಹೋದೆ. ಅವರ ಲವ್‌ಗಳಿಗೂ ನನಗೂ ಒಂದು ಸಮಸ್ಯೆಯಿತ್ತು. ಅದೆಂದರೆ ಭೇಟಿಯ ಸಮಸ್ಯೆ. ಅವಳನ್ನು ಪ್ರತ್ಯೇಕವಾಗಿ ಕಂಡು ಕಷ್ಟ-ಸುಖ ಹೇಳಿಕೊಳ್ಳಲು ನನಗೆ ಚಾನ್ಸ್ ಇರಲಿಲ್ಲ. ತಂದೆ ಜೊತೆ ಬರೋಳು, ತಂದೆ ಜೊತೆ ಹೋಗೋಳು.

ಮೊದಲನೆ ಎಂ.ಎ. ರಿಸಲ್ಟ್ ಬಂದಿತು. ಶಿವಾಚಾರದ ಡಿಪಾರ್ಟ್‌ಮೆಂಟ್ ಆದದ್ದರಿಂದ ಅವಳು ಸಹಜವಾಗಿ ಫಸ್ಟ್ ರ್‍ಯಾಂಕ್ ಬಂದಿದ್ದಳು. ಫೈನಲ್ ಎಂ.ಎ. ಗೆ ಸೇರಿದಾಗ ಲೈಬ್ರರಿಗೆ ಹೋಗಿ ಕೇಳಿದೆ. ನಾನು ನಿರೀಕ್ಷಿಸಿದಂತೆ ಅವಳು ಜಾತಿ ಕಾರಣದಿಂದ ಸಾಧ್ಯವಿಲ್ಲ ಎಂದಳು. ಇನ್ನೊಮ್ಮೆ ಕನ್ಸಿಡರ್ ಮಾಡುವಂತೆ ರಿಕ್ವೆಸ್ಟ್ ಮಾಡಿ ಬಂದೆ. ಒಂದು ತಿಂಗಳು ಕಳೆದರು ಪ್ರಯೋಜನವಾಗಲಿಲ್ಲ. ನನ್ನ ಈ ತೊಳಲಾಟ ನೋಡಿ ಸಮಾಧಾನ ಮಾಡುವ ಉದ್ದೇಶವೊ ಏನೊ, ಹುಡುಗಿ ಒಪ್ಪಿಸೋದು ನಿಮ್ಮ ಜವಾಬ್ದಾರಿ, ಹುಡುಗಿ ತಂದೆಯದು ನಮ್ಮ ಜವಾಬ್ದಾರಿ ಅನ್ನೊ ರೀತಿಲಿ ನಮ್ಮ ವಿಚಾರವಾದಿ ಹಿತೈಷಿಗಳ ತರ್ಕ. ರಾಮಲಿಂಗಮ್ 'ಅವರ ತಂದೆ ಒಪ್ಪದಿದ್ದರೆ ಹೋರಾಟ' ಎಂದರೆ ರಾಮದಾಸ್ 'ಅವರ ತಂದೆ ರ್‍ಯಾಷನಲ್ ರೈಟರ್ ಒಪ್ತಾರೆ ಬಿಡ್ರಿ' ಅಂದರೆ, ನಮ್ಮ ಗಾಂಧೀವಾದಿ ಗೋವಿಂದಯ್ಯನ ಪ್ಲಾನೋ 'ಅವರ ತಂದೆಗೆ ಲಂಕೇಶ್, ಅನಂತಮೂರ್ತಿ ಯವರಿಂದ ಇನ್‌ಫ್ಲುಯೆನ್ಸ್ ಮಾಡಿಸೋಣರಿ...' ಎಂದರು. ಮಹಾದೇವ ತೋಟದಲ್ಲಿ ಅನಂತಮೂರ್ತಿಯವರಿಗೆ ಹೇಳಿದರು. ಶ್ರೀಕೃಷ್ಣ ಆಲನಹಳ್ಳಿ 'ಅವರ ತಂದೆ ನಮ್ಮ ಮೇಷ್ಟ್ರು ಬಿಡೊ ಒಪ್ಕತ್ತಾರೆಕನ' ಎಂದು ನಾನೇಲ್ಲೊ ಕೆಲಸಕ್ಕೆ ಇಂಟರ್‌ವ್ಯೂಗೆ ಹೋಗೊ ಹಾಗೆ ಹೇಳಿದರು. ಮುಖ್ಯವಾದ ಸಮಸ್ಯೆ ಹುಡುಗಿನೆ ಒಪ್ಪಿಲ್ಲ.

ನಾನು ಒಂದೆರಡು ಬಾರಿ ಭೇಟಿ ಮಾಡಿ ನೋಡ್ದೆ ಏನೂ ಪ್ರಯೋಜನವಾಗಲಿಲ್ಲ. ಅಂತರ್‌ಜಾತಿ ವಿವಾಹ ಅಷ್ಟು ಸುಲಭವಲ್ಲ ಅಂತ ತೀರ್ಮಾನಿಸಿ, ಅದಾಗಿ ಕೆಟ್ಟವರ ಉದಾಹರಣೆ ಹುಡುಕುತ್ತಾ ಕುಂತೆ. ಅಷ್ಟರಲ್ಲಿ ಇವಳು ಒಂದು ದಿನ ನನ್ನ ಚೇಂಬರ್‌ಗೆ ಬಂದಳು 'ನಮ್ಮಣ್ಣ ಇಂಜಿನಿಯರ್ ನಿಮ್ಮನ್ನು ನೋಡಲು ಭಾನುವಾರ ಬರುತ್ತಾರೆ ಇರಿ ಸಾರ್' ಅಂದ್ಳು. ನಾನು ದಂಗಾಗಿ ಹೋದೆ. ಈ ವಿಷಯ ಇವರಣ್ಣ, ತಾಯಿ ತನಕ ತಲುಪಿರುವುದು ನನಗೆ ಈವರೆವಿಗೆ ತಿಳಿದಿರಲಿಲ್ಲ. (ತಕ್ಷಣ ಒಪ್ಕೊಬೇಡ ಅವನು ಕಳ್ಳನೊ ಏನೊ ಸ್ವಲ್ಪ ಚೆಕ್ ಮಾಡು ಎಂದು ಹೇಳಿದ್ದರೆಂದು ನನ್ನ ಮದುವೆಯಾದ ಮೇಲೆ ತಿಳಿಯಿತು) ಅಕಸ್ಮಾತ್ ಇವರಣ್ಣ ರೌಡಿಗಳ ಜೊತೆ ಬಂದರೆ ಏನು ಮಾಡೋದು? ಇರಲಿ ಒಂದು ಕೈ ನೋಡೋಣ ಅನ್ನೊ ಹುಂಬ ಧೈರ್ಯದಲ್ಲಿ, ಆ ಭಾನುವಾರ ಕಾಯುತ್ತ ಕುಳಿತೆ. ಆ ಭಾನುವಾರ ಬಂದು ಅವರೇ ಬಂದು ಪರಿಚಯ ಮಾಡಿಕೊಂಡರು. ನನಗಂತೂ ಕೈಕಾಲು ನಡುಗುತ್ತಿದೆ. ಆದರೂ ತೋರಿಸಿಕೊಳ್ಳಲಿಲ್ಲ. ಅವರೆ ಮಾತು ತೆಗೆದು 'ನಿಮ್ಮ ಲೆಟರ್ ಓದಿದ್ದೀನಿ ಚೆನ್ನಾಗಿದೆ' ಎಂದರು. ಬೆವತು ಹೋದೆ. ಸದ್ಯ ಅದೊಂದು ಕರಪತ್ರದ ತರಹ ಬರೆದಿದ್ದರಿಂದ ಬಚಾವಾದೆ ಎನ್ನಿ. ಮದುವೆ ಅವಳ ಪ್ರೈವೇಟ್ ಮ್ಯಾಟರ್ ನಾವು ಅಡ್ಡಿ ಬರುವುದು ಸರಿಯಿಲ್ಲ. ನಾವೇ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಲು ಹೇಳಿದ್ದೆವು. ಅವಳು ಇಷ್ಟ ಪಟ್ಟಿದ್ದಾಳೆ. ಅದಕ್ಕೆ ನಾನೆ ಮಾತನಾಡಲು ಬಂದೆ. ನಮ್ಮ ತಂದೆ ವಿಚಾರವಾದಿ ರೈಟರ್ ಆದರೂ ಜಾತಿ ಅಭಿಮಾನ ಇದೆ. ಮಠದ ಭಕ್ತರು. ಅವರಿಗೆ ಹಿಂದೆಯೇ ಒಮ್ಮೆ ಸ್ಟ್ರೋಕ್, ಹಾರ್ಟ್ ಅಟ್ಯಾಕ್ ಆಗಿದೆ. ಅವರು ಒಪ್ಪುವುದು ಕಷ್ಟ. ಅವಳ ಫೈನಲ್ ಪರೀಕ್ಷೆ ಮುಗೀಲಿ ಆಮೇಲೆ ಹೇಳಿ ಒಪ್ಪಿಸುವುದಕ್ಕೆ ಪ್ರಯತ್ನಿಸುತ್ತೀನಿ. ಒಪ್ಪದಿದ್ದರೆ ನಾನೇ ನಿಂತು ಮದುವೆ ಮಾಡುತ್ತೇನೆ ಎಂದರು. ಬಸವಣ್ಣನೇ ಇವರ ಮೈಮೇಲೆ ಬಂದು ಹೀಗೆ ಮಾತನಾಡುತ್ತಿದ್ದಾರಾ? ಎಂದು ಒಂದು ಗಳಿಗೆ ಸಂಶಯವುಂಟಾಯಿತು. ಅಕಸ್ಮಾತ್, ಹೇಳಿ ಪರೀಕ್ಷೆ ಮುಗಿದ ಮೇಲೆ ಬೇರೆಯವರಿಗೆ ಮದುವೆ ಮಾಡಿ ಬಿಟ್ಟರೆ ಅನ್ನೊ ಸಂಶಯ ನನ್ನನ್ನು ಮದುವೆಯಾಗುವವರೆಗೆ ಕಾಡುತ್ತಲೆ ಇದ್ದಿತು. ಆದರೆ ನಮ್ಮ ವಿಚಾರವಾದಿ ಗೆಳೆಯರು ತುಂಬಾ ಖುಷಿಯಾಗಿ ಮದುವೆ ಎಲ್ಲಿ? ಹೇಗೆ? ಮಾಡಬೇಕೆಂಬ ಯೋಚನೆಯಲ್ಲಿ ತಲ್ಲೀನರಾದರು.

ಈ ಒಂದು ವರ್ಷ ನಾವು ಎಲ್ಲೂ ಹೊರಗೆ ಭೇಟಿಯಾಗಲಿಲ್ಲ. ಕೇವಲ ನಾನು ಅವರ ಮನೆಗೆ ಫೋನ್ ಮಾಡಿ ಅವಳ ತಂದೆಗೆ ಅನುಮಾನಬಾರದಂತೆ ಮಾತಾನಾಡುತ್ತಿದ್ದೆ. ಊಟವಾಯಿತೆ? ತಿಂಡಿಯಾಯಿತೆ? ಎಂಬುದಕ್ಕೆ ನಮ್ಮ ಮಾತು ಸೀಮಿತವಾಗಿತ್ತು. ಇವರ ತಾಯಿ ತುಂಬಾ ಒಳ್ಳೆಯವರು. ಇವರ ಸಹಕಾರವಿಲ್ಲದಿದ್ದರೆ ನಮ್ಮ ಮದುವೆ ಸಾಧ್ಯವಾಗುತ್ತಿರಲಿಲ್ಲವೇನೊ, ಬಸವಣ್ಣನವರ ಬಗ್ಗೆ ಇವರ ತಂದೆ ಬರೆದಿದ್ದರೂ ಅದನ್ನು ಓದಿ ಅರ್ಥ ಮಾಡಿಕೊಂಡಿದ್ದವರು ಇವರ ತಾಯಿ ಮತ್ತು ಅಣ್ಣ.

ಈ ನಡುವೆ ನಾನು ನಮ್ಮ ತಂದೆ ತಾಯಿಯವರನ್ನು ಮೈಸೂರಿಗೆ ಕರೆಸಿ ಹೊರಗೆ ಇವಳನ್ನು ತೋರಿಸಿದೆ. ಅವರು ಒಪ್ಪಿದರು. ನನ್ನ ಕ್ರಾಂತಿಕಾರಿ ಚಟುವಟಿಕೆಗಳ ಬಗ್ಗೆ ತಿಳಿದಿದ್ದ ಅವರು, ಮುಂದೊಂದು ದಿನ ನನ್ನಿಂದ ಈ ರೀತಿ ಕಾರ್ಯ ನಿರೀಕ್ಷಿಸಿದ್ದರು. ಅವರ ತಂದೆಯವರನ್ನು ಒಪ್ಪಿಸಿ ಮದುವೆಯಾದರೆ ಒಳ್ಳೆಯದೆಂದು ಹೇಳಿದರು.

ಅವಳ ಪರೀಕ್ಷೆ ಮುಗಿಯಿತು. ಇವರ ಅಣ್ಣ ಅವರ ತಂದೆ ಜೊತೆ ಈ ವಿಚಾರ ಪ್ರಸ್ತಾಪಿಸಲಾಗಿ ಅವರು ಕೆಂಡಾಮಂಡಲವಾದರಂತೆ. ಅಂತರ್‌ಜಾತಿ ಹುಡುಗ ಬೇಡ ಎಂದರು. ಬಸವಣ್ಣನವರ ಬಗ್ಗೆ ಇಷ್ಟೊಂದು ಬರೆದಿದ್ದೀರಿ ನಮ್ಮನೇಲಿ ಅಂತಹದ್ದು ಆಗಲಿ ಎಂಬುದು ಮಗನ ಹಠ. ಬರೆಯೋದಕ್ಕೆ ಚೆನ್ನ ಬದುಕಿಗೆ ಅಲ್ಲ ಎಂದು ಅವರ ತಂದೆಯ ಹಠ. ಅವರು ಒಪ್ಪಲಿಲ್ಲ ಇವರು ಬಿಡಲಿಲ್ಲ. ನಮ್ಮ ವಿಚಾರವಾದಿ ಗೆಳೆಯರ ಕೆಲಸವನ್ನೆಲ್ಲ ಇವರ ಮಗನೇ ವಹಿಸಿಕೊಂಡು ತುಂಬಾ ಕಷ್ಟಪಟ್ಟರು. ಕೊನೆಗೂ ತಂದೆ ಒಪ್ಪಲಿಲ್ಲ.

ಅವರಣ್ಣ ನಾವು ಎಲ್ಲ ಯೋಚಿಸಿ ಯೋಜನೆಯೊಂದನ್ನು ರೂಪಿಸಿ ನಂಜನಗೂಡಿಗೆ ಒಂದು ದಿನ ಅವರ ತಂದೆಗೆ ತಿಳಿಯದೆ ಹಾಗೆ ಈಕೆಯನ್ನು ಕರೆದುಕೊಂಡು ಬಂದರು . ನಾನು ದೇವನೂರ ಮಹದೇವ, ಶಿವಮಲ್ಲು, ಡಾ. ಹೆಚ್. ಸಿ. ಮಹದೇವಪ್ಪ ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ಕಲೆತು ರಿಜಿಸ್ಟಾರ್ ಮಾಡಿಸಿದೆವು. ವಾಪಸ್ಸು ಅವರಣ್ಣ ಇವಳನ್ನು ಮನೆಗೆ ಕರೆದುಕೊಂಡು ಹೋದರು.

ನಂಜನಗೂಡಿನ ದೇವಸ್ಥಾನದಲ್ಲಿ ಮದುವೆಯಾಯಿತು ಎಂದು ಸುಳ್ಳು ಸುದ್ದಿಯನ್ನು ನಾವು ಬೇಕೆಂದೆ ಹಬ್ಬಿಸಿದೆವು. (ಪ್ರತಿಕ್ರಿಯೆ ನೋಡಲು). ತಂದೆ ಮಗನಿಗೆ ಚೆನ್ನಾಗಿ ಬೈಯ್ದು ಶಾಪ ಹಾಕಿ ಅವರ ಶಿವಾಚಾರ ಸ್ನೇಹಿತರನ್ನೆಲ್ಲಾ ಮನೆಗೆ ಕರೆದು ಮಗನನ್ನು ತರಾಟೆಗೆ ತೆಗೆದುಕೊಂಡರು. ಮಗ ವಿಚಲಿತರಾಗದೆ ಇದ್ದದ್ದು ನನ್ನನ್ನು ಇಂದಿಗೂ ಆಶ್ಚರ್ಯಚಕಿತನನ್ನಾಗಿ ಮಾಡಿದೆ. ಯಾವುದೆ ವಿಚಾರವಾದದ ಚಳುವಳಿಯ ಸೋಂಕಿಲ್ಲದೆ ಅವರ ಅಂದಿನ ತೀರ್ಮಾನದ ಮುಂದೆ, ನಾನೇ ಬೆಳೆಸಿಕೊಂಡ ವಿಚಾರವಾದ ಏನು ಅಲ್ಲ ಅಲ್ಲವೆ?. ಮದುವೆಯಾಯಿತು ಇನ್ನೇನು ಮಾಡಲು ಸಾಧ್ಯವಿಲ್ಲವೆಂಬುದು ಮನವರಿಕೆಯಾದಂತೆ ಅವರ ತಂದೆ

ನನ್ನನ್ನು ಮನೆಗೆ ಕರೆಸಿ ಮಾತನಾಡಿ ಸಮಾಧಾನ ಹೊಂದಿದವರಾಗಿ ಜೊತೆ ಕುಳಿತು ಊಟ ಮಾಡಿದೆವು. ಕೆ. ಸಿ. ಬಸವರಾಜು, ಪರಶಿವ ಮೂರ್ತಿ, ಚೆನ್ನಬಸಪ್ಪ, ಕಿರಣಗಿ ಮುಂತಾದವರು ಅವರ ತಂದೆಗೆ ಸಮಾಧಾನ ಮಾಡಿ ಮನೆಯಲ್ಲೆ ಒಂದು ಊಟ ಇಡುವಂತೆ ಏರ್ಪಾಡು ಮಾಡಿದರು. ವಿಚಾರವಾದಿಗಳಂತೆ ಆಡುತ್ತಿದ್ದ ಅನೇಕರು ನಮ್ಮ ಮಾವನವರ ತಲೆ ಕೆಡಿಸುತ್ತಿದ್ದರು. ಆದರೂ ಅವರ ತಂದೆ ನಮ್ಮ ಮದುವೆ ಒಪ್ಪಿ ಸಂತೋಷವಾಗಿದ್ದರು.

ನಮ್ಮ ಪ್ರಯತ್ನ ಫಲಿಸಿತೆಂದು ತಿಳಿದಾಗ ರಾಮಲಿಂಗಮ್ ಮಾಮೂಲಿನಂತೆ ಗಾಂಧಿಭವನದಲ್ಲಿ ನನ್ನ ಮದುವೆ ಮಾಡಲು ತಕ ತಕ ಕುಣಿಯಹತ್ತಿದರು. ೧೯೮೫ರ ಜೂನ್ ತಿಂಗಳಲ್ಲಿ ಸಚಿವರಾದ ಎಂ. ಪಿ. ಪ್ರಕಾಶ್, ಡಾ. ಕೆ. ಬಿ. ವೈ. ತೋಟಪ್ಪ, ಡಾ. ಬಿ. ಎಂ. ತಿಪ್ಪೆಸ್ವಾಮಿ (ಶಾಸಕರು), ಸಾಹಿತಿ ಕಲಾವಿದರ ಸಮ್ಮುಖದಲ್ಲಿ ನನ್ನ ಮದುವೆ ಯಾಯಿತು. ಖರ್ಚು ಸುಮಾರು ೩೦೦ ರೂ.ಗಳು ಅಷ್ಟೆ.

ಈ ನಮ್ಮ ಮದುವೆ ಜಾತಿವಾದಿಗಳಲ್ಲಿ ನಡುಕ ಹುಟ್ಟಿಸಿತು. ವೀರಶೈವರಿಗಿಂತ ನನ್ನ ಜಾತಿಯವರೇ ನನಗೆ ವಿರುದ್ಧವಾದರು. ಮಠದ ಭಕ್ತರಾಗಿದ್ದ ನಮ್ಮ ಮಾವನವರು ಒಬ್ಬಳೆ ಮಗಳನ್ನು ಬೇರೆ ಜಾತಿಯವರಿಗೆ ಮದುವೆ ಮಾಡಿದುದರಿಂದ ಅವರ ಅನೇಕ ವಿಚಾರವಾದಿ(?) ಗೆಳೆಯರು ಸಹಿತ ಇವರ ಮನೆಗೆ ಬರುವುದನ್ನು ನಿಲ್ಲಿಸಿದರು.

ನನ್ನ ಮದುವೆ ಬಹಿರಂಗವಾಗಿ ಸಿನೀಮಿಯ ಮಾದರಿಯಲ್ಲಿ ಆಗಿದ್ದು ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಜಾತಿವಾದಿಗಳನ್ನು ಕಂಗೆಡಿಸಿತು. ಮೈಸೂರಿನ ಪುಡಿ ಪತ್ರಿಕೆಯೊಂದು ನಾನು ವೀರಶೈವ ಮತಕ್ಕೆ ಮತಾಂತರ ಹೊಂದಿರುವುದಾಗಿ ಪ್ರಕಟಿಸಿ ನನ್ನ ಜಾತಿಯ ಕೆಲವು ಅಲ್ಪಮತಿಗಳು ನನ್ನ ವಿರುದ್ಧವಾಗಿ ವರ್ತಿಸುವಂತೆ ಮಾಡಿತು. ಇದಕ್ಕೆ ಪ್ರಮುಖ ಕಾರಣ ಸದಾ ಬ್ರಾಹ್ಮಣಶಾಹಿ ವಿರೋಧಿಸಿ ಆಳದಲ್ಲಿ ಜಾತಿ ಪ್ರೇಮಿಯಾದ ಒಬ್ಬ ಲೇಖಕರೆಂದು ಘೋಷಿಸಿಕೊಂಡಿರುವವರು ಹಾಗೂ ರಾಷ್ಟ್ರ ಭಾಷೆ ಓದಿದ್ದರು, ಕೇರಿ ಬುದ್ಧಿ ಬಿಡದ ನಕಲಿ ವಿಚಾರವಾದಿಯು ತಕ್ಷಣವೇ ಮಾನವಶಾಸ್ತ್ರ ಹಾಗೂ ಪ್ರಾಚೀನ ಇತಿಹಾಸದ ಎಬಿಸಿಡಿ ಅರಿಯದ, ಎಂದೂ ಲವ್ ಮಾಡಿ ಸಕ್ಸಸ್ ಆಗದ, ದಲಿತರನ್ನು ಜೀತಕ್ಕಿಟ್ಟುಕೊಂಡು ಮಾನಸಿಕವಾಗಿ ನನಗೆ ಕಿರು ಕುಳ ಕೊಡಲಾರಂಭಿಸಿದರು. ಆದರೆ ನಮ್ಮ ಪ್ರಗತಿಪರರ ನೈತಿಕ ಸ್ಥೈರ್ಯದ ಮುಂದೆ ಅವರು ತಮ್ಮ ಸಹಪಾಠಿಗಳಿಂದಲೇ ಬೆಂಡೆತ್ತಿಸಿಕೊಂಡರು.

ನಾನು ಮದುವೆಯ ನಂತರ ಎರಡು ಬಾರಿ ಕೆಎಎಸ್ ಪರೀಕ್ಷೆ ಪಾಸು ಮಾಡಿ, ಈಗ ಅಸಿಸ್ಟೆಂಟ್ ಕಮಿಷನರ್ ಆಗಿ ಕೆಲಸ ನಿರ್ವಹಿಸುತ್ತಿರುವೆ. ದೊಡ್ಡ ಮಗಳು ಮಿಥಿಲಾಗೆ ೧೦ ವರ್ಷ, ಚಿಕ್ಕವಳು ನಿಖಿಲಾ ೭ ವರ್ಷ.

ನಮ್ಮ ಮದುವೆಯ ನಂತರದ ವಿದ್ಯಾಮಾನಗಳನ್ನು ಗಮನಿಸಿದಾಗ ನಮ್ಮದು ಅಂತರಜಾತಿ ವಿವಾಹವೆಂದು ಅನ್ನಿಸುವುದೆ ಇಲ್ಲ. ನಮ್ಮ ತಂದೆ–ತಾಯಿ, ಅವರ ತಂದೆ–ತಾಯಿ ಹತ್ತಿರದ ಬಂಧುಗಳು ಅತ್ಯಂತ ವಿವೇಕಿಗಳಂತೆ ವರ್ತಿಸಿದರು.

ಆದರೂ ಅಂತರಜಾತಿ ವಿವಾಹವಾದವರನ್ನು ಸಮಾಜವು ತನ್ನ ಮೂರನೇ ಕಣ್ಣಿನಿಂದ ನೋಡುತ್ತದೆ ಎಂಬುದನ್ನು ಯಾರೂ ಮರೆಯಬಾರದು. ಉದಾ। ನಮ್ಮ ಸ್ನೇಹಿತರೊಬ್ಬರು ನಮ್ಮ ಮನೆಗೆ ಬಂದಾಗ ನಾನು ನನ್ನ ಹೆಂಡತಿ ಮಕ್ಕಳ ವಿಷಯಕ್ಕೆ ಜಗಳವಾಡುತ್ತಿದ್ದೆವು. ಅವರು ನಿಮ್ಮದು ಲವ್ ಮ್ಯಾರೇಜ್ ಆದರೂ ಜಗಳವಾಡುತ್ತಿದ್ದೀರಲ್ಲ ಎಂದರು. ನಾವು ಮಾನವರು ಸ್ವಾಮಿ ಪ್ರೇಮ ವಿವಾಹ ಎಂದಾಕ್ಷಣ, ನಮ್ಮನ್ನು ಸಿನಿಮಾ ಹೀರೋ , ಹೀರೋಯಿನ್ ತರಹ ನೋಡಬೇಡಿ ಎಂದೆ. ಇಂತಹ ಅನೇಕ ಸಂದರ್ಭಗಳನ್ನು ನಾವು ಉದಾಹರಿಸಬಹುದು.

ನಮ್ಮ ಮದುವೆಯಿಂದ ಸ್ಫೂರ್ತಿ ಪಡೆದ ನನ್ನ ಹೆಂಡತಿಯ ಕಸಿನ್ ಒಬ್ಬಳು ಅಂತರ್ ಜಾತಿ ವಿವಾಹವಾದಳು. ನಮ್ಮ ಮನೆಗೆ ಬಂದ ನನ್ನ ಹೆಂಡತಿಯ ಅನೇಕ ನೆಂಟರ ಹೆಣ್ಣುಮಕ್ಕಳು ಪರಿಚಯಸ್ಥರು ಮದುವೆ ಯಾದವರು ತಾವು ಜೀವನದಲ್ಲಿ ಅಂತಹ ತೀರ್ಮಾನ ತೆಗೆದುಕೊಳ್ಳಲು ಆಗದಿರುವುದಕ್ಕೆ ವ್ಯಥೆಪಡುತ್ತಿದ್ದಾರೆ. ಇದರ ಗೂಢಾರ್ಥವನ್ನು ನಾವೇ ಗಂಭೀರವಾಗಿ ಯೋಚಿಸಬೇಕಾಗಿದೆ ಅಲ್ಲವೆ? ನನ್ನ ಮದುವೆಯು ನನ್ನಂತ ವಿಚಾರವಾದಿಯ ಕಣ್ತೆರೆಸಿತೆಂದರೆ ನಿಮಗೆ ಆಶ್ಚರ್ಯವಾಗಬಹುದು. ಪರಸ್ಪರ ಜಾತಿಗಳ ನಡುವೆ ಸಂಪರ್ಕವಿಲ್ಲದಿದ್ದರೆ ಪರಸ್ಪರರು ಸಂಶಯದಿಂದ ವರ್ತಿಸುತ್ತಾರೆ. ನಾನು ಮದುವೆಯಾಗದಿದ್ದಲ್ಲಿ ನಮ್ಮ ಅತ್ತೆ ಮತ್ತು ಅವರ ಮಗನಂತ ಸತ್ಯವಂತ ವಿಚಾರವಾದಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದ್ದಿತೆ? ಅವರು ಬೇರೆ ಜಾತಿ ಎಂಬ ಕಾರಣದಿಂದ ಅವರನ್ನು ನಾವು ಸಂಶಯದಿಂದ ನೋಡುತ್ತಿರಲಿಲ್ಲವೆ?

ಇದರರ್ಥ ಅಂತರ್‌ಜಾತಿ, ಮತಗಳ ವಿವಾಹದ ಬಗ್ಗೆ ಅನೇಕರಿಗೆ ಒಲವಿದೆ. ಆದರೆ ಅವರಿಗೆ ನೈತಿಕ ಬೆಂಬಲ ಬೇಕು. ಜಾತಿ ಕಟ್ಟುಪಾಡುಗಳ ಮೀರಿ ಬರುವವರಿಗೆ ಬೆಂಬಲ ಬೇಕು. ಇದರಿಂದ ಮಾತ್ರ ನಾವು ಈ ದೇಶದಲ್ಲಿ ಜಾತಿ ವಿನಾಶ ಮಾಡಬಹುದು ಹಾಗೂ ಭಾರತದ ಸಮಾಜವನ್ನು ಮುಂದೊದಗಲಿರುವ ಜಾತಿ ಸಂಘರ್ಷದಿಂದ ಉಳಿಸಬಹುದು, ಇಲ್ಲದಿದ್ದಲ್ಲಿ ಜಾತಿ ಕಾರಣಕ್ಕಾಗಿ ಅನೇಕ ಜಾತ್ಯತೀತರು ಬಲಿಯಾಗುವ ಸಾಧ್ಯತೆ ಇರುತ್ತದೆ. ಈ ದಿಕ್ಕಿನಲ್ಲಿ ಮೊದಲಿಗೆ ಕರ್ನಾಟಕದಲ್ಲಿ ಚಿಗುರೊಡೆಯುತ್ತಿರುವ ಮಾನವ ಮಂಟಪಕ್ಕೆ ನಾವೆಲ್ಲ ಆಧಾರಸ್ತಂಭಗಳಾಗೋಣವೆ?

– ಡಾ. ಹೆಚ್. ಎಸ್. ರಾಜೇಂದ್ರ ಸಿಂಗ್

ವಾಣಿಜ್ಯ ತೆರಿಗೆ ಅಧಿಕಾರಿ, ಮಲ್ಲೇಶ್ವರಂ, ಬೆಂಗಳೂರು.

ಪ್ರೀತಿಗೆ ಸೋಲದವರು ಯಾರು?

ಮಂಗಳೂರು ವಿ.ವಿ.ಯಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದಾಗ, ಸಂಶೋಧಕಿಯಾಗಿ ನನ್ನ ವಿಭಾಗಕ್ಕೆ ಸೇರಿಕೊಂಡ ಡಾ. ಶಾನಿಯನ್ನು ಪರಿಚಯ ಮಾಡಿಕೊಟ್ಟದ್ದು ನನ್ನೊಬ್ಬ ಸಹಪಾಠಿ. ಈಗ ಆತ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕ. ನಾವಿಬ್ಬರೂ ಒಂದೇ ತಾಲ್ಲೂಕಿನವರು (ವೀರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ) ಎಂದು ಗೊತ್ತಾದ್ದು ನಿಧಾನವಾಗಿ. ಬಹಳ ಮುಖ್ಯವಾದ ವಿಷಯದ ಮೇಲೆ ಸಂಶೋಧನೆ ಮಾಡುತ್ತಿದ್ದಾರೆ, ತುಂಬಾ ಗಂಭೀರವಾದವರು, ತುಂಬಾ ಸ್ವಾಭಿಮಾನಿ ಎಂದೆಲ್ಲ ಒಮ್ಮೆ ನನ್ನ ಪ್ರೊಫೆಸರ್ ಡಾ. ಶಾನಿಯ ಬಗ್ಗೆ ಹೇಳಿದ್ದರು. ನಾನು ಕೂಡ ಸಂಶೋಧನೆ ನಡೆಸುತ್ತಿದ್ದ ಸಮಯದಲ್ಲಿ ಹಲವಾರು ಸಂದರ್ಭದಲ್ಲಿ ಒಟ್ಟಾಗಿ Field Survey ಗೆ ಹೋದದ್ದಿದೆ. ಹಾಗೆಯೇ ಇಬ್ಬರೂ ಕೊಡಗು ಜಿಲ್ಲೆಯನ್ನು ಅಧ್ಯಯನ ಕೇಂದ್ರವನ್ನಾಗಿ ಆಯ್ಕೆ ಮಾಡಿದ್ದರಿಂದ ಇಬ್ಬರಿಗೂ ಕೊಡಗು ಜಿಲ್ಲೆಯಲ್ಲಿ ಜೊತೆಯಲ್ಲಿ ಓಡಾಡುವ ಅವಕಾಶ ದೊರೆತಿತ್ತು. ಇದು ನಮ್ಮಿಬ್ಬರನ್ನು ತುಂಬಾ ಹತ್ತಿರಕ್ಕೆ ತಂದಿತು. ಒಳ್ಳೆಯ ಗೆಳೆತನ ಬೆಳೆಯುತ್ತಾ ಬಂದಾಗ ನಮ್ಮ ನಮ್ಮ ಸಾಮಾಜಿಕ ಹಿನ್ನಲೆಯ



ಬಗ್ಗೆ ಹೆಚ್ಚೇನು ತಲೆ ಕೆಡಿಸಿಕೊಂಡಿರಲಿಲ್ಲ. ನಮ್ಮ ಪರಿಚಯ ಮತ್ತು ಆತ್ಮೀಯತೆ ಮದುವೆಯ ತನಕ ಮುಟ್ಟಬಹುದು ಎಂದು ಲೆಕ್ಕಾಚಾರ ಹಾಕಿರದ ಕಾರಣ ಬಹುಶಃ ಸಾಮಾಜಿಕ ಹಿನ್ನೆಲೆಯ ಅವಶ್ಯಕತೆ ಬರಲಿಲ್ಲ. ವಿಷಯಕ್ಕೆ ಸಂಬಂಧಪಟ್ಟಂತೆ ಅದನ್ನು ಹೇಳುವುದೇ ಇಲ್ಲಿ ಸೂಕ್ತ.

ನಾನು ಪ. ಜಾತಿಯವನು. ತಂದೆ–ತಾಯಿ ಕಷ್ಟಪಟ್ಟು ದುಡಿದು ಜೀವನ ಮಾಡಿ ನಮ್ಮನ್ನೆಲ್ಲ ಸಾಕಿದವರು. ಅವರ ನಾಲ್ಕು ಮಕ್ಕಳಿಗೆ ನನ್ನನ್ನೂ ಸೇರಿ– ಅವರ ತೋಳಿನ ಬಲವೇ ಆಸ್ತಿಯಾಗಿತ್ತು. ಎಂಟನೇ ರಗತಿಯಿಂದ ಪಿಎಚ್.ಡಿ. ಪದವಿ ಪಡೆಯುವವರೆಗೂ ಹಾಸ್ಟೆಲ್ ಬದುಕು ನನ್ನದಾಗಿತ್ತು. ಅಂದರೆ ಮಾಲಗತ್ತಿಯವರು ಹೇಳಿದ ಹಾಗೆ ಗೌರ್ಮೆಂಟ್ ಬ್ರಾಹ್ಮಣ ನಾನಾಗಿದ್ದೆ. ನನಗೆ ಮೂವರು ಸಹೋದರಿಯರು, ಒಬ್ಬಾಕೆ ನನ್ನಕ್ಕ, ಇಬ್ಬರು ನನ್ನ ತಂಗಿಯಂದಿರು. ಕೊಡಗಿನಲ್ಲಿ ನಾವೆಲ್ಲ ಹುಟ್ಟಿದ್ದರಿಂದ, ಅಲ್ಲಿಯ ಪರಿಸಕ್ಕೆ ಹೊಂದಿಕೊಂಡು ಬೆಳೆದುಬಂದೆವು. ನನ್ನ ಹೆಂಡತಿಯ ಕಡೆಯವರು ಕೇರಳದವರು. ಕಾಫಿ ತೋಟದ ಮಾಲೀಕರಾದ ನನ್ನ ಮಾವ, ಭಾರತದ ಕಮ್ಯೂನಿಸ್ಟ್ ಪಕ್ಷದ ಸದಸ್ಯರೂ ಮತ್ತು ಉತ್ತಮ ಗ್ರಾಮೀಣ ಮಟ್ಟದ ಪಕ್ಷದ ಕೆಲಸಗಾರರೂ ಹೌದು. ಮನೆಯವರೆಲ್ಲರೂ ವಿದ್ಯಾವಂತರಾಗಿ, ಬೇರೆ ಬೇರೆ ಸಾಮಾಜಿಕ ವೃತ್ತಿಯಲ್ಲಿ ತೊಡಗಿಸಿಕೊಂಡವರು. ನನ್ನ ಒಬ್ಬ ಭಾವ ನ್ಯಾಯಾಧೀಶರೂ ಕೂಡ.

ತಮಿಳು ಭಾಷೆಯಲ್ಲಿ ಚೆನ್ನಾಗಿ ಮಾತನಾಡಬಲ್ಲೆ ಎಂದು ಗೊತ್ತಾದಾಗ, ನನ್ನ ಹೆಂಡತಿಯ Room mate ಆಗಿದ್ದ M.Sc. ವಿದ್ಯಾರ್ಥಿನಿ ಶ್ರೀಲಂಕಾದ ಪ್ರಜೆ ನನ್ನ ಜೊತೆ ತುಂಬಾ ಆತ್ಮೀಯತೆಯಿಂದ ಓಡಾಡಿ ಕೊಂಡಿದ್ದಾಗ ಎರಡು ಬಾರಿ ನನ್ನ ಮದುವೆಯ ಬಗ್ಗೆ ಪ್ರಸ್ತಾಪ ಮಾಡಿದ್ದರು. ನನ್ನನ್ನು ಯಾರು ಮದುವೆಯಾಗ್ತಾರೆ, ಕಪ್ಪಗಿದ್ದೇನೆ, ಪ. ಜಾತಿ ಬೇರೆ, ಬಡವ ಎಂದೆಲ್ಲ ಅವಳೊಡನೆ ಹೇಳಿದಾಗ– "ನಿನ್ನನ್ನು ನಾನೇ ಮದುವೆಯಾಗಿ ಭಾರತದಲ್ಲಿ ಇದ್ದುಬಿಡಬೇಕೆಂದಿದ್ದೆ. ಆದರೆ ನನಗಿಂತಲೂ ಹೆಚ್ಚು ಪ್ರೀತಿಸುವ ನನ್ನ Room mate ಅನ್ನು ಮದುವೆಯಾಗು'' ಎಂದು ಹೇಳಿದ್ದು ಬಹುಶಃ ನಮ್ಮಿಬ್ಬರ ವಿವಾಹಕ್ಕೆ ಪ್ರೇರಣೆಯಾಯಿತು.

೧೯೯೩ನೇ ಇಸವಿ ಫೆಬ್ರವರಿಯಲ್ಲಿ ಮದುವೆಯ ಬಗ್ಗೆ ಚರ್ಚೆಯಾದಾಗ ನನ್ನ ಸಂಶೋಧನೆಯ ಕಾರ್ಯ ನಿಂತೇಹೋಗಿತ್ತು. ಅಷ್ಟೊತ್ತಿಗೆ ನನ್ನ ಹೆಂಡತಿ ಪಿ.ಎಚ್.ಡಿ. ಪ್ರಬಂಧವನ್ನು ವಿ.ವಿ.ಗೆ ಮಂಡಿಸಿಯಾಗಿತ್ತು. ನನ್ನೊಡನೆ ಸ್ನೇಹಿತರಂತೆ ವರ್ತಿಸುತ್ತಿದ್ದ ನನ್ನ ಹೆಂಡತಿಯ ಅಕ್ಕನ ಗಂಡನಲ್ಲಿ ಈ ವಿಷಯ ತಿಳಿಸಿದೆ. ಅವರು ಮನೆಯಲ್ಲಿ ಇದು ಚರ್ಚೆಯಾಗಬೇಕು ಎಂದಾಗ, ನನ್ನ ಮಾವನವರಲ್ಲೂ ಧೈರ್ಯದಿಂದ ನಮ್ಮ ಮದುವೆಯ ವಿಷಯ ತಿಳಿಸಿದೆ. ಈ ನಡುವೆ ನನ್ನ ತಂದೆ–ತಾಯಿಯಲ್ಲಿ ಈ ವಿಷಯ ಹೇಳಿದಾಗ ಅವರಿಗೆ ಬೇಸರವಾಯಿತು. ಹುಡುಗಿ ಬೇರೆ ಜಾತಿಯವಳು, ಶ್ರೀಮಂತಳು, ವಿದ್ಯಾವಂತಳು ಅಂತ ಗೊತ್ತಾದಾಗ ಅವರಿಗೆ ಆದ ಸಮಸ್ಯೆ ಅವರಲ್ಲಿ ಕಣ್ಣೀರು ತಂದಿತ್ತು. ಹಾಸ್ಟೆಲ್‌ನಲ್ಲೆ ಬೆಳೆದ ನನಗೆ ಈ Sentiments ಅರ್ಥವಾಗಲಿಲ್ಲ. ಒಬ್ಬನೇ ಮಗ ಅನ್ನುವ ಕಾರಣಕ್ಕೆ ನನ್ನ ಸಂತೋಷಕ್ಕಾಗಿ ಒಪ್ಪಿಗೆ ಕೊಟ್ಟರು. ಎರಡೂ ಕುಟುಂಬದವರು ಭೇಟಿಯಾಗಿ ೧೯೯೩, ಮಾರ್ಚ್ ೨೦ರಂದು ನಮ್ಮ ವಿವಾಹದ ನಿಶ್ಚಿತಾರ್ಥ ನಡೆಯಿತು. ೧೯೯೩, ಏಪ್ರಿಲ್ ೧೮ರಂದು ಧರ್ಮಸ್ಥಳದಲ್ಲಿ (ಅಲ್ಲಿಯೇ ನನಗೆ ಹೆಸರು ಹಾಕಿಸಿದ್ದು) ಮದುವೆಯಾಯಿತು. ಅದೊಂದು ಸರಳವಾದ ಕಾರ್ಯಕ್ರಮವಾಗಿತ್ತು. ಎರಡೂ ಕುಟುಂಬದ ಎಲ್ಲಾ ಸದಸ್ಯರುಗಳು ಹಾಜರಿದ್ದರು.

ಸಂಪೂರ್ಣವಾಗಿ ಕೌಟುಂಬಿಕ ವ್ಯವಹಾರದಿಂದ ಹೊರಗಡೆಯೇ ಇದ್ದು ಹಾಸ್ಟೆಲ್‌ನಲ್ಲಿ ಬೆಳೆದವನಾದ ಕಾರಣ Family attachment ತುಂಬಾ ಕಡಿಮೆಯಿತ್ತು. ನನ್ನ ಬಂಧು–ಬಾಂಧವರಲ್ಲಿ ನನ್ನ ಮದುವೆಯು ಆಸಕ್ತಿಯ ವಿಷಯವಾಗಿರಲಿಲ್ಲ. ನನಗೂ ಅದರ ಮಹತ್ವದ ಅಂಶ ಗೊತ್ತಿರಲಿಲ್ಲ. ನನ್ನ ಮತ್ತು ಅವರ ನಡುವಿನ ಆ Space ಇನ್ನೂ ಹಾಗೆಯೇ ಉಳಿದುಕೊಂಡಿದೆ. ಬಹುಶಃ ನಾನು ಹೆಚ್ಚು Sanskritize ಆಗಿದ್ದು ಇದಕ್ಕೆ ಕಾರಣ ಅಂತ ಕಾಣುತ್ತೆ. ಇಂತಹ ಬದಲಾವಣೆಯಿಂದ ನನ್ನ ಅಸ್ತಿತ್ವದ ಪ್ರಶ್ನೆ ಯಾವಾಗಲು ನನ್ನನ್ನು ಕಾಡುತ್ತಿದೆ. ಒಂದು ಕುಟುಂಬದ ಸಾಮಾಜಿಕ ಕ್ರಿಯೆ– ಮದುವೆ– ಬಂಧು ಬಾಂಧವರನ್ನು ಒಂದುಗೂಡಿಸುತ್ತದೆ, ಆತ್ಮೀಯರನ್ನಾಗಿ ಮಾಡುತ್ತದೆ ಎನ್ನುವ ಸಾಮಾಜಿಕ ಸತ್ಯವನ್ನು ಈಗ ನಾನು ಒಪ್ಪಿಕೊಳ್ಳುತ್ತೇನೆ. ನಾನು ಅಂತರ್ ಜಾತಿ ವಿವಾಹವಾದದ್ದೋ ಅಥವಾ ಅವರ ಪ್ರಕಾರ, ಅವರ ಇಚ್ಛೆಯಂತೆ ಮದುವೆಯಾಗದೆ ಇದ್ದದ್ದೋ ಏನೋ, ನನ್ನ ಕುಟುಂಬದವರಿಂದ ಆ ರೀತಿಯ ಪ್ರತಿಕ್ರಿಯೆ ಇದೆ. (I cannot construct as I feel here. Please bear with me)

ನನ್ನ ಕುಟುಂಬದ ಆರ್ಥಿಕ ಸ್ಥಾನಮಾನವು ಇವತ್ತಿಗೂ ಒಂದು ಸಮಸ್ಯೆಯಾಗಿ ನನ್ನ ಹೆಂಡತಿಯ ಮನೆಯವರಿಗೆ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ಕಾರಣ ಎರಡು ವರ್ಗಗಳು ಅಷ್ಟು ಬೇಗನೇ ಒಟ್ಟಾಗಿ ಸೇರುವುದನ್ನು ಮಾರ್ಕ್ಸ್ ಕೂಡ ಒಪ್ಪಿಕೊಂಡಿರಲಿಲ್ಲ. ನಾವಿಬ್ಬರು ಸಂತೋಷವಾಗಿದ್ದೇವೆ. ನನ್ನ ತಂದೆ–ತಾಯಿಯವರು ಅವಳ ತಂದೆ–ತಾಯಿಯವರೊಡನೆ ಪರಸ್ಪರ ಸಂಬಂಧದಿಂದ ಇದ್ದು ಸಂತೋಷವಾಗಿದ್ದರೆ. ನಮ್ಮಿಬ್ಬರ ಸಂತೋಷಕ್ಕೆ ಎಣೆಯೇ ಇರುತ್ತಿರಲಿಲ್ಲ. ಕೌಟುಂಬಿಕ ಸಾಮರಸ್ಯ ಇಲ್ಲಿ ಮುಖ್ಯ ಅನ್ನುವುದೇ ನನ್ನ ಉದ್ದೇಶ. ಇದಾದಾಗ ಮಾತ್ರ ಅಂತರ್‌ಜಾತಿ ವಿವಾಹದ ಸಾರ್ಥಕತೆಯುಂಟಾಗುವುದು. ಈ ಮಟ್ಟದಲ್ಲಿ ನಾನಿನ್ನು ಸೋತಿದ್ದೇನೆ. ಅಂತರ್‌ಜಾತಿ ವಿವಾಹವು ಎಲ್ಲಾ ಸಾಮಾಜಿಕ, ಆರ್ಥಿಕ ಅಡೆತಡೆಗಳನ್ನು ಮೀರಿರುತ್ತದೆ ಎನ್ನುವುದು ಸತ್ಯದ ಮಾತಲ್ಲ. ಬಹುಶಃ ಅದೊಂದು ಪರೀಕ್ಷೆ. ಪ್ರಾಯೋಗಿಕವಾಗಿ ಆಗುವ ಬೇರೆ ಬೇರೆ ಅನುಭವ ಕೆಲವು ಸಾರಿ ಖುಷಿ ಕೊಡುತ್ತದೆ, ಕೆಲವು ಸಾರಿ ದುಃಖವನ್ನು ತರುತ್ತದೆ. ಕಾರಣವಿಷ್ಟೆ– ಸಾಮಾಜಿಕ ಸಂಬಂಧಗಳ ನಡುವೆ Invisible forces ಗಳು Implict ಆಗಿ ಕೆಲಸ ಮಾಡುತ್ತಿರುತ್ತವೆ. ಅವುಗಳು ವ್ಯಕ್ತಿಯ ಮಾನಸಿಕ ಸ್ಥಿತಿಯ ಮೇಲೆ ಭಾರಿ ಪ್ರಭಾವವನ್ನು ಬೀರುತ್ತದೆ. ಇದರ ಪರಿಣಾಮವಾಗಿ ಸಂಬಂಧದ ನಡುವೆ ಬಿರುಕು ಅಥವಾ ಒಳ್ಳೆಯ

ಬಾಂಧವ್ಯವೇರ್ಪಡಬಹುದು.

ಹೆಚ್ಚಿನ ಅಂತರ್‌ಜಾತಿ ವಿವಾಹಗಳು ಪ್ರೀತಿ–ಪ್ರೇಮದ ತಳಹದಿಯಿಂದ ಪ್ರಾರಂಭವಾಗುವುದರಿಂದ ಗಂಡ–ಹೆಂಡತಿಯರ ಸಂತೋಷಕ್ಕೆ ಕೊರತೆಯೇನೂ ಇರುವುದಿಲ್ಲ. ಸಮಾಜದಲ್ಲಿ ಕುಟುಂಬ ಕುಟುಂಬದ ನಡುವೆ ವಿವಿಧ ರೀತಿಯ ಭೇದಗಳಿರುವುದರಿಂದ (ಇದು ವಾಸ್ತವ)– ಪ್ರಮುಖವಾಗಿ ಸಾಂಸ್ಕೃತಿಕ ಭೇದ– ಅವುಗಳನ್ನು ಮೀರಿದಂತಹ ಒಂದು Harmonious relation ಹುಟ್ಟಿಕೊಳ್ಳುವುದು ಒಂದು Ideal society ಅಥವಾ Utopian society ಯಲ್ಲಿ ಮಾತ್ರ ಎನಿಸುತ್ತದೆ. ನಾವು ಗಂಡ ಹೆಂಡತಿಯರ ಸಂಬಂಧ, ಸಂತೋಷವೇ ಅಂತರ್ ಜಾತಿ ವಿವಾಹದ ಮುಖ್ಯ ವಸ್ತು ಅಂತ ತಿಳ್ಕೊಂಡ್ರೆ ಪರವಾ ಇಲ್ಲ. ಆದರೆ ನಮ್ಮ ದೇಶದ ಪರಿಸ್ಥಿತಿಯ ಹಿನ್ನಲೆಯಲ್ಲಿ ಮಾತನಾಡಿದರೆ 'ಅಂತರ್ ಜಾತಿ ವಿವಾಹವು ಒಂದು ಕೌಟುಂಬಿಕ ವ್ಯವಹಾರ.' ಈ ಸೂಕ್ಷ್ಮಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳದೆ ಪ್ರೀತಿಸಲು ತೊಡಗಿದ ನಾವು, ಮದುವೆ ಎನ್ನುವುದು ನಮ್ಮೆಲ್ಲ ಸಮಸ್ಯೆಗೆ ಪರಿಹಾರ ಅಂತ ತಿಳಿದುಕೊಂಡಿದ್ದೆವು. ಪ್ರೀತಿಗೆ ಸೋಲದವರು ಯಾರಿದ್ದಾರೆ?

– ಡಾ. ಪಿ. ಎಲ್. ಧರ್ಮ
ಪ್ರವಾಚಕರು, ರಾಜಕೀಯ ಶಾಸ್ತ್ರ ವಿಭಾಗ,
ಮಂಗಳಗಂಗೋತ್ರಿ, ಕೊಣಾಜೆ (ದ. ಕ.).

ಉಪ್ಪೆಸರು....ಗದ್ದೆಯಾ ಬಯಲು...



ಮೇಲುಕೋಟೆಯ ಬಾಡಿಗೆಯ ಪುಟ್ಟ ಮನೆಯಲ್ಲಿ ಒಂಟಿಯಾಗಿ ಒಂದು ವರ್ಷವಿದ್ದೆ. ಎಂ.ಎ. ಮುಗಿಸಿ, ನನ್ನ ಕಾಲ ಮೇಲೆ ನಿಲ್ಲುವ ಹಂಬಲ. ಅಣ್ಣ, ಅಪ್ಪನ ಹಿಡಿತದಿಂದಾಚೆಗೆ, ಬೆಚ್ಚಗಿನ ಗೂಟದಿಂದ ಓಡಿ ಸ್ವತಂತ್ರವಾಗಿ ಬದುಕನ್ನು ನೋಡುವ ಛಲ. ಹೂವಯ್ಯನಂತೆ ವಿವಾಹಕ್ಕೆ ಬೆನ್ನು ತಿರುಗಿಸಿ, ಸಮಾಜ ಸೇವೆ ಮಾಡಬೇಕೆಂಬ ಕೆಚ್ಚು. ಅಲ್ಲಿಯ 'ಜನಪದ ಸೇವಾ ಟ್ರಸ್ಟ್'ನಲ್ಲಿ ಅಧ್ಯಾಪನದೊಂದಿಗೆ ಅಂಗವಿಕಲ ಮಕ್ಕಳ ಒಡನಾಟದಲ್ಲಿ 'ಒಬ್ಬಳೇ ಬದುಕ ಬಲ್ಲೆನೆ' ಎಂಬ ಪ್ರಯೋಗದಲ್ಲಿದ್ದು, ೧ ವರ್ಷದ ಹತ್ತಿರವಾಗುತ್ತಿತ್ತು.

೧೬ ಮಾರ್ಚ್ ೯೦...ಸದ್ದಿಲ್ಲದೆ ಎದ್ದು ಖಾದಿ ಉಡುಪು ತೊಟ್ಟು, ಯಾವ ಆತಂಕ–ಸಂಭ್ರಮಗಳನ್ನು ತೋರಗೊಡದೆ, 'ನಮ್ಮ ಆಯ್ಕೆಗಳಿಂದಲೆ ಬದುಕನ್ನು ಕಟ್ಟಿಕೊಳ್ಳುತ್ತೇವೆಂಬ'– ಅಸ್ತಿತ್ವವಾದದ ಗುಂಗಿನಿಂದ ಸ್ಥೈರ್ಯ ಪಡೆಯುತ್ತಾ, ಸಾಮಾನ್ಯವಾಗಿ ಮೈಸೂರಿಗೆ ಬರುವಂತೆ ೩ ದಿನದ ರಜೆ ಹಾಕಿ ಬಸ್ ಹತ್ತಿ ಬಂದೆ. ಸ್ಟ್ಯಾಂಡಿನಲ್ಲಿ ನನ್ನ ಹುಡುಗನ ಕಣ್ಣು ನನ್ನನ್ನೆ ಅರಸುತ್ತಾ ಅರಳಿದವು. ಲೂನಾ ಹತ್ತಿ ಅವನ ರೂಂಗೆ ಹೋದರೆ ಊರಿಂದ ಬಂದ ಅವನಪ್ಪ ನನ್ನ ಹಾದಿ ಕಾಯುತ್ತಿದ್ದರು. ನನ್ನ ತಲೆ ಸವರಿ ಕೇಳಿದರು, "ನೋಡಮ್ಮ ಪೃಥ್ವಿರಾಜ–ಸಂಯುಕ್ತೆಯರಂತೆ ನೀವಿಬ್ಬರು ನಿಮ್ಮಿಷ್ಟದಂತೆ ಮದುವೆ ಆಗುತ್ತಿದ್ದೀರಿ. ನಾಳೆ ಅಷ್ಟೆ ಛಲವಾಗಿ ಬದುಕಬೇಕು. ನಾಕು ಜನ ಆಡಿಕೊಳ್ಳುವಂತೆ ನಿಮ್ಮ ಬದುಕು ಒಡೆಯದಂತೆ ಇರಬಲ್ಲಿರಾದರೆ ಯೋಚಿಸಿ ಮದುವೆಯಾಗಿ''. ಪ್ರಗತಿರಂಗದ ಗುಲಾಬಿಯನ್ನು ಪ್ರೇಮಕ್ಕೆ ಬಳಸಿಕೊಂಡ ನಮ್ಮನ್ನು ಹರಸಲು ಕೆ. ರಾಮದಾಸ್, ಎನ್. ಈಶ್ವರ್, ಕಾಳಚನ್ನೇಗೌಡ, ವನಜ ಮತ್ತು ಇವನ ಕಾರ್ಖಾನೆ ಗೆಳೆಯರು ಬಂದಿದ್ದರು. ಎಲ್ಲರೂ ತಾಲ್ಲೂಕು ಆಫೀಸಿಗೆ ಹೋಗಿ, ಎಲ್ಲ ವಿಧಿಗಳನ್ನು ಅನುಸರಿಸಿ, ಸಹಿ ಹಾಕಿ ರಿಜಿಸ್ಟರ್ ಮ್ಯಾರೇಜ್ ಆದೆವು. "ತಾಳಿ ಕಟ್ಟಿ ನಿನ್ನ ಸ್ವಾತಂತ್ರ್ಯವನ್ನು ಕಸಿಯುವ, ಸಮಾನತೆಯನ್ನು ಅಲ್ಲಗಳೆಯುವ ಕೆಲಸ ಮಾಡಲಾರೆ'' ಎಂಬ ಇವನು, ಅಂತೆ ನಾನು. ಹೀಗೆ ತಾಳಿ–ಹಾರ ಒಲ್ಲದ ನಮಗೆ ಈತನ ಗೆಳೆಯರು ಒತ್ತಾಯದಿಂದ ಹಾರ ತುರಿಸಿ ಹಾಕಿಸಿದರು. ಕಚೇರಿಯವರು ಬಿಸ್ಕಟ್, ಟೀ ಕೊಟ್ಟು ಹಾಡು ಹೇಳಿ ಪಾರ್ಟಿ ಮಾಡಿದರು. ಒಟ್ಟು ೧೦ ರೂ.ನಲ್ಲಿ ನಮ್ಮ ವಿವಾಹ ಮುಗಿದಿತ್ತು. ರಾಮದಾಸ್ ಮನೇಲಿ ಊಟ ಮಾಡಿ, ವನಜ ಮನೆಯಲ್ಲಿ ವಿಶ್ರಾಂತಿ, ಧೈರ್ಯ ತೊಗೊಂಡು, ಸಂಜೆ 'ಗಾಂಧಿಭವನ'ದ ಸಭೆಗೆ ಬಂದೆವು. ನಾವು ಪ್ರೇಮಿಗಳಾಗಿ ಪಾರ್ಕ್ ಸುತ್ತದೆ, ಎಲ್ಲಾ ಪ್ರಗತಿಪರ ಸಂಘಟನೆಗಳನ್ನು ಭೇಟಿ ಮಾಡಿ, ಮೈಸೂರಿನ ಪ್ರಗತಿಪರರು ಒಂದೆಡೆ ಕಲೆತು, ಒಟ್ಟಾಗಿ ಕಾರ್ಯಕ್ರಮ ನಡೆಸುವ 'ಅಂಬ್ರೆಲಾ ಆರ್ಗನೈಸೇಷನ್'– 'ಮಾನವ ಸೌಹಾರ್ದ ಸಮಿತಿ'ಯನ್ನು ಎಲ್ಲರೊಂದಿಗೆ ಸಂಯೋಜಿಸಲೆತ್ನಿಸಿದ್ದೆವು. ಅದರ ಮೊದಲ ಸಭೆ ನಡೆಯಿತು. ಆಗ ಸಮಿತಿಯ ಅಧ್ಯಕ್ಷರಾಗಿ ಪ್ರೊ. ಸಂಜೀವಯ್ಯನವರು, ಸಂಚಾಲಕಿಯಾಗಿ ನಾನು ಆಯ್ಕೆಯಾದೆವು. ಸಂಜೆ ನಾನು ಮನೆಗೆ ಹೋದೆ. ಅವನು ಫ್ಯಾಕ್ಟರಿಯ ನೈಟ್ ಡ್ಯೂಟಿಗೆ ಹೋದ.

ರಾತ್ರಿ ಬೇಡವೆಂದು, ಬೆಳಗಾಗೆದ್ದು ಮನೆಯಲ್ಲಿ ಹೇಳಿದೆ: "ನಿನ್ನೆ ನಾನು ಮದುವೆಯಾದೆ''. ಮನೆಯೆಲ್ಲ ಭೂಕಂಪ. ಅಣ್ಣ ಎಸೆದ ಚೊಂಬು, ಲೋಟಗಳೆಲ್ಲ ನನ್ನ ಮೇಲೆ. ಅಪ್ಪನ ಹಣದ ಆಮಿಷ. ರಿಜಿಸ್ಟ್ರೇಷನ್ ಕ್ಯಾನ್ಸಲ್ ಮಾಡಿಸುವ ಓಡಾಟ, ಉಗಿತ, ಗೋಳಾಟ– ನನ್ನನ್ನು ಯಾವುದೂ ತಟ್ಟಲೇ ಇಲ್ಲ. ಕಾರಣ ಅಣ್ಣ ಪ್ರೇಮ ವಿವಾಹವಾಗುತ್ತೇನೆಂದು ಓಡಿ ಹೋಗಿ ತಾಳಿ ಕಟ್ಟುವಾಗ ಪೊಲೀಸ್ ಸಮೇತ ಹೋಗಿ ಒದ್ದು ಕರೆತಂದಿದ್ದ ಅಪ್ಪನಿಗೆ ಮೊದಲೇ ಹೇಳಿದ್ದರೆ, ಈ ಜೈಲಿನಿಂದ ನನಗೆ ಬಿಡುಗಡೆಯೇ ಇಲ್ಲವೆಂಬ ಅರಿವಿದ್ದಿದ್ದರಿಂದ ಹೀಗೆ ಮಾಡಬೇಕಿತ್ತು. ಆಗೆಲ್ಲ ನನಗೆ ಧೈರ್ಯ, ಬೆಂಬಲ, ಸಾಂತ್ವನ ಕೊಟ್ಟವರು ರಾಮದಾಸ್ ಕುಟುಂಬ. ನೇರ ಬ್ಯಾಗೇರಿಸಿ ಮೇಲುಕೋಟೆಯ ನನ್ನ ಗುಡಿಗೆ ಹೊರಟುಬಿಟ್ಟೆ. ೧ ವಾರ ನನ್ನ ಹುಡುಗನ ದರ್ಶನವಿಲ್ಲ. ಆದರೂ ನೆಮ್ಮದಿ, ಇನ್ಯಾರೂ ನಮ್ಮನ್ನು ಬೇರ್ಪಡಿಸಲಾರರೆಂದು. ೩೧ ರಂದು ಹಾಸನದ ಲೋಹಿಯಾ ಶಿಬಿರದಲ್ಲಿ ಭೇಟಿ. ಅಲ್ಲಿಂದ ಇನ್ನೆಂದೂ ನಾವು ಬೇರೆಯಾಗಲೇ ಇಲ್ಲ. ೧ ವಾರದ ಹನಿಮೂನ್ ಮುಗಿಸಿ ಇವನ ರೂಂಗೆ

ಬಂದರೆ ಇವನಪ್ಪ ಕಾಯುತ್ತಿದ್ದರು. ಊರಿನ ಇವರ ದಾಯಾದಿಗಳೆಲ್ಲ ನಮ್ಮ ವಿವಾಹದಿಂದ ಕೆರಳಿ, 'ಕೊಲೆಯಾದರೂ ಸರಿ ಅವರು ಅದ್ಹೇಗೆ ಒಟ್ಟಾಗಿರುತ್ತಾರೊ ನೋಡೋಣ' ಎಂಬ ಹಾರಾಟ. ಇವನಪ್ಪ– "ನನ್ನ ಮಗ ಯೋಗ್ಯ, ಅವನು ಮಾಡೊ ಕೆಲಸ ಕೂಡ. ಅವನು ಮಾದಿಗರ ಹುಡುಗೀನ ಕಟ್ಟಿಕೊಂಡು ಬಂದ್ರೂ, ಆಕೆ ನನ್ನ ಸೊಸೆ. ನನ್ನ ಮನೆ ವಿಚಾರ ಇದು. ನೀವ್ಯಾರೂ ತಲೆ ಹಾಕೋದು ಬೇಡ" ಎಂದು ಎಚ್ಚರಿಕೆ ಕೊಟ್ಟು, ಅವರಿಗೆಲ್ಲ ತೋರಿಸಲು ನಮ್ಮನ್ನು ಹಳ್ಳಿಗೆ ಕರೆದೊಯ್ದರು.

ಊರಿಗೆ ಹೋದೆವು. ತಾಳಿ, ಬಳೆ, ಕಾಲುಂಗುರಗಳಿಲ್ಲದ ಸಾದಾ ಹತ್ತಿ ಸೀರೆಯ ನನ್ನ ಬಗ್ಗೆ ಎಲ್ಲರ ಕುತೂಹಲದ ನೋಟ. ಅವನ ೫ ತಮ್ಮಂದಿರು, ಒಬ್ಬಳು ತಂಗಿಯ ಪರಿಚಯ. 'ಈ ಕುರಿ, ಕೋಳಿ, ಮಕ್ಳು, ಈ ಹಟ್ಟಿ, ಮಣ್ಣು ಎಲ್ಲಾ ನನ್ನದೇ ಅಂತ ಅಂದುಕೊಳ್ಳೋಕೆ ಆಗುತ್ತಾ ನಿನಗೆ' ಎಂದು ಅತ್ತೆಯ ಸವಾಲು. ನಕ್ಕು ತಬ್ಬಿದೆ. 'ಜಾತಿ ಕೆಟ್ಟ ಸೊಸೆ ಅಡಿಗೆ ಮನೆಗೆ ಸೇರಿಸಬೇಡ' ಎಂಬ ಹೆಂಗಸರ ಮಾತನ್ನು ಗಣಿಸದೆ, ಅಡಿಗೆ ಮನೆಗೆ ಕರೆದೊಯ್ದು ಮುದ್ದೆ ತಿರುವುತ್ತಾ, ನನ್ನ ಮಾತಾಡಿಸುತ್ತಾ ಹಿರಿ ಹಿರಿ ಹಿಗ್ಗುತ್ತಿದ್ದ ಅತ್ತೆ. ರಾತ್ರಿ ಚಾಪೆ, ಚಂದ್ರ–ನಕ್ಷತ್ರ ಇಣುಕುತ್ತಿದ್ದ ಬಾವಣಿ, ಒಂದೇ ಕೋಣೆಯಲ್ಲಿ ಎಲ್ಲಾ ಸಾಲಾಗಿ....ಏನೊ ಸಗಣಿಯ ಹಳ್ಳಿ ವಾಸನೆ ಆತ್ಮದೊಳಗೆ ಇಳಿಯುತ್ತಾ... ಇವೆಲ್ಲ ನನ್ನದೇ, ಇಷ್ಟು ದಿನ ಯಾಕೆ ಬಿಟ್ಟಿದ್ದೆ... ಬೆಟ್ಟದ ನೆಲ್ಲಿ, ಸಮುದ್ರದ ಉಪ್ಪು ಎಲ್ಲಿಂದೆಲ್ಲಿ ಸಂಬಂಧವಯ್ಯ...'!

ಪ್ರಗತಿ ರಂಗದ ಸಂಚಾಲಕ ಉಗ್ರ ನರಸಿಂಹೇಗೌಡನ ಪರಿಚಯವಾದದ್ದೇ– ರಾಮದಾಸ್ ಮನೆಯಲ್ಲಿ. ಅಂತಿಮ ಎಂ.ಎ.ಯಲ್ಲಿದ್ದ ನಾನು, ನನ್ನ ಗೆಳೆಯರು ಪ್ರಗತಿರಂಗದ ಬಗ್ಗೆ ಭರವಸೆಯಿಟ್ಟು ಬಂದು ಸದಸ್ಯರಾದೆವು. ಆ ಸಭೆಯಲ್ಲಿ ಕೆಂಪಗೆ ಹೊಳೆಯುವ ಮುಗ್ಧ ಚೆಲುವ, ಟಿಪ್ ಟಾಪಾದ ಉಡುಪಲ್ಲಿ ಅಲ್ಲಿಂದಿಲ್ಲಿಗೆ ಉತ್ಸಾಹದಿಂದ ಪುಟಿಯುತ್ತಾ ಕೋಡು ಬಂದ ಕರುವಂತೆ ಎಲ್ಲರ ಪರಿಚಯಿಸಿಕೊಳ್ಳುತ್ತಿದ್ದ.. ಇವನನ್ನು ನೋಡಿ ಎಲ್ಲೋ ನನ್ನಣ್ಣನಂತೆ ಅಪ್ಪನ ಕಾಸಿನಲ್ಲಿ ಶೋಕಿ ಹೊಡೆಯೊ ಈ ರೋಡ್ ರೋಮಿಯೊ ಇಲ್ಯಾಕೆ ಬಂದನಪ್ಪ ಎಂದುಕೊಳ್ಳುತ್ತಿರುವಷ್ಟರಲ್ಲಿ.. ನನ್ನ ಎಂ.ಎ. ವ್ಯಾಸಂಗದ ಬಗ್ಗೆ ವಿಚಾರಿಸಿ.. ಕುರಾನ್ ಬೈಬಲ್‌ನಂತೆ ಹಿಂದೂ ಧಾರ್ಮಿಕ ಕೃತಿ ಯಾವುದು ಎಂಬ ಪ್ರಶ್ನೆ ಎಸೆದು, ಬಿ.ಎ. ಪಠ್ಯಗಳ ಬಗ್ಗೆ ವಿಚಾರಿಸಲಾರಂಭಿಸಿದ. ಎಲ್ಲೋ ಡಿಗ್ರಿ ಓದುವವನಿರಬೇಕು, ಇನ್ನೂ ಬಚ್ಚಾ ಎಂದುಕೊಂಡು, ಮಾತಾಡುವ ಉತ್ಸಾಹವನ್ನೇ ತೋರದೆ ಗಂಭೀರವಾಗಿದ್ದೆ– ಮುಂದಿನ ಎಲ್ಲಾ ಮೀಟಿಂಗ್‌ಗಳಲ್ಲೂ.

ಸಮಾಜ ಸೇವೆ..ವಿವಾಹವಾಗುವುದಿಲ್ಲವೆಂದು ಇಂಜಿನಿಯರ್, ಬ್ಯಾಂಕ್ ಮ್ಯಾನೇಜರ್ ವರಗಳನ್ನು ತಿರಸ್ಕರಿಸಿ ಮನೆಯಿಂದ ಬಿಡಿಸಿಕೊಂಡು ಮೇಲುಕೋಟೆಯ 'ಜನಪದ ಸೇವಾ ಟ್ರಸ್ಟ್' ಸೇರಿದ ಮೇಲೆ ಅಲ್ಲೆ ಸಮೀಪದಲ್ಲೆ ಇವನೂರು ಇದ್ದದ್ದು ತಿಳಿದು ಪರಿಚಯ ಹೆಚ್ಚಾಯ್ತು.

'ಪ್ರಗತಿ ರಂಗದ ಹುಡುಗಿ ನಮ್ಮೂರ ಬಳಿಯಲ್ಲಿ' ಅಂತ ಇವ ಕೂಡ ಅಲ್ಲಿಗೆ ಲೂನಾ ಓಡಿಸಿಕೊಂಡು ಬರುತ್ತಿದ್ದ. ಹೊಸ ಜನ, ಹೊಸ ಪರಿಸರ. ಯಾರನ್ನು ಮಾತಾಡಿಸಿದರೂ ಅವರಿಗೆ ಕಟ್ಟಿ ಕತೆ ಕಟ್ಟುವ ಜನ.. ಸ್ವತಂತ್ರವಾಗಿ ಶುದ್ಧವಾಗಿ ನನ್ನಷ್ಟಕ್ಕೆ ಬದುಕಲಾರೆನೇನೊ ಎಂಬ ಹತಾಶೆಗಳಲ್ಲಿ... ಇವನೊಬ್ಬ ಹಿತೈಷಿಯಂತೆ ಆಗೀಗ ಮೊಗ ತೋರುತ್ತಿದ್ದ.

ಕ್ರಮೇಣ ಪ್ರಗತಿ ರಂಗದ ಸಭೆಗಳು, ಅಕ್ಟೋಬರದ ಉಪವಾಸ ಸತ್ಯಾಗ್ರಹ, ಬಿಂಡಿಗನವಿಲೆ ಸಭೆ, ಜಾಗೃತ ಸಾಹಿತ್ಯ ಸಮ್ಮೇಳನಗಳ ಸಹಪಯಣದಲ್ಲಿ ಒಮ್ಮೆಯೂ ಸೋಕಿಸಿಕೊಳ್ಳದೆ, ರಾತ್ರಿ ಜತನದಿಂದ ಮನೆಗೆ ತಲುಪಿಸುವ ಇವನ ತಾಯ್ತನ... ತನ್ನ ತಪ್ಪನ್ನು, ಮಿತಿಯನ್ನು ಒಪ್ಪಿಕೊಳ್ಳುತ್ತಾ... ತನ್ನೆಲ್ಲ ಕೋಪ–ತಾಪಗಳನ್ನು ಬಿಚ್ಚಿಡುವ ಇವನ ಸರಳತನ... ಸದಾ ತಾಜಾ ಆಗಿ ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ ಹಗುರವಾಗಿದ್ದುಬಿಡುವ ಇವನ ದಡ್ಡತನ... ಎಂಥಾ ಏಕಾಂತದಲ್ಲೂ ಕೇವಲ ಗೆಳೆಯನಾಗಿ ವರ್ತಿಸಿದ ಇವನ ಸಂಯಮ ನನಗೆ ಇವನಲ್ಲಿ ಅಚಲ ವಿಶ್ವಾಸ–ನಂಬಿಕೆಗಳನ್ನು ಮೂಡಿಸಿತ್ತು. ಹೀಗಿರುವಾಗೊಮ್ಮೆ ಇವನೂರಿನ ಹಬ್ಬವೊಂದಕ್ಕೆ ನನ್ನನ್ನು ಕರೆದ ಮೊದಲ ಬಾರಿ ಇವನೂರ ಇವನ ಹಟ್ಟಿಗೆ ಹೋದೆ. ಹಳೆ ಕಾಲದ ಪುಟ್ಟ ಮನೆ. ಮನೆ ತುಂಬ ಮಕ್ಕಳು. ಮುಳುಗಡೆ ಭೂಮಿ ಸೇರಿದಂತೆ ೩ ಎಕರೆ ಹೊಲ... ಎಲ್ಲೆಲ್ಲೂ ಸರಳತೆ– ಬಡತನ. ಆದರೆ ಇವನಪ್ಪ, ಅವ್ವ, ತಂಗಿ... ತಮ್ಮಂದಿರ ಪ್ರೀತಿಯ ಶ್ರೀಮಂತಿಕೆ.. ನನಗಾಗಿ ಮಾಡಿದ್ದ ಖಾರಾಬಾತು, ಕೇಸರಿಬಾತು ಪಕ್ಕಕ್ಕೆ ಸರಿಸಿ, ಪಟ್ಟಾಗಿ ಉಪ್ಪೆಸರು–ಮುದ್ದೆ ಹೊಡೆದು ಹೊರಟೆ. ಇದ್ಯಾವುದೂ ಅಪರಿಚಿತವೆನ್ನಿಸದೆ ನನ್ನದೇ ಲೋಕಕ್ಕೆ ಬಂದೆನೆಂದೆನ್ನಿಸಿದ್ದರಿಂದ ಬಿಟ್ಟು ಹೊರಡುವಾಗ ಹೃದಯವೆಲ್ಲ ಖಾಲಿ ಖಾಲಿ. ಕಗ್ಗತ್ತಲ್ಲಿ ಜೋಪಾನವಾಗಿ ಬಸ್ ಹತ್ತಿಸಿದ ಇವನ ಸಭ್ಯತೆ– ಆತ್ಮೀಯತೆ... ಇವನ ಹಟ್ಟಿ...ಇವನವರ...ಕುರಿತ ಅದಮ್ಯ ಸೆಳೆತ. ನಾವಿನ್ನು ಪ್ರೀತಿ–ಪ್ರೇಮ ಯಾವುದರ ಬಗ್ಗೆಯೂ ಆಲೋಚಿಸದ ಆ ಕ್ಷಣದಲ್ಲಿ ಅವನವ್ವ ನಾನು ಹೊರಟ ಮೇಲೆ ಹೇಳಿದರಂತೆ– "ಏನೊ ಈ ತಾಯಿ ಇಲ್ಲೇ ಕಾಲೂರಂಗವಳೆ". ಅದಕ್ಕವರಪ್ಪ– "ಎಲ್ಲೋ ನಿನಗೆ ಭ್ರಾಂತು, ಎಂ.ಎ. ಮಾಡಿರೊ ಆಯಮ್ಮ ಎಲ್ಲಿ? ಎಸೆಸೆಲ್ಸಿ ಓದಿ ಫ್ಯಾಕ್ಟ್ರಿಲಿರೊ ನನ್ನ ಮಗ ಎಲ್ಲಿ?"... ಇಲ್ಲೂ ಯಾರಲ್ಲೂ ಜಾತಿ ಪ್ರಶ್ನೆಯೇ ಎದ್ದಿರಲಿಲ್ಲ. ಮದುವೆಯಾದ ೧ ತಿಂಗಳ ನಂತರ ಇವನ ಸಂಬಂಧಿಕರು ಕೇಳಿದ್ರಿಂದ ಹೇಳಿದಾಗ ಇವನಿಗೆ ನನ್ನ ಜಾತಿ ತಿಳಿದದ್ದು. ಹಾಗೆ ಇವನ ಹುಟ್ಟಿದ ಹಬ್ಬದ ದಿನ ನನಗೆ ತಿಳಿದದ್ದು– ಇವ ನನಗಿಂತ ೧ ವರ್ಷ ಕಿರಿಯನಲ್ಲ, ಹಿರಿಯ ಅಂತ.

ಬಾಲ್ಯದಿಂದಲೂ ಸಿಟಿಯ ಹೂ–ಕುಂಡಗಳಷ್ಟನ್ನೆ ನೋಡುತ್ತಿದ್ದ ನನಗೆ ಹಳ್ಳಿಯ ಹಸಿರು ಗದ್ದೆ ಬಯಲು...ಕೆಸರು...ನೇಗಿಲು...ಎತ್ತಿನ ಗಾಡಿ...ಇದೇ ವ್ಯವಸಾಯ ಬದುಕಿನ ಅದಮ್ಯ ಬಯಕೆ–ಸೆಳೆತಗಳು. ಯಂತ್ರಗಳಿಂದ ತಪ್ಪಿಸಿಕೊಂಡು ಸೌದೆ ಒಲೆಯ ಕನಸು ಕಾಣುತ್ತಿದ್ದ ನನಗೆ, ಇವನ ಹಳ್ಳಿಯ ಹಿನ್ನೆಲೆ, ಅಕಾಡೆಮಿಗಳಿಂದ ದೂರವಿರುವ ಇವನ– ಇವನವರ ಹೃದಯವಂತಿಕೆ ನನ್ನನ್ನು ಸರಳ–ಪ್ರೇಮ– ಅಂತರ್ಜಾತಿ ವಿವಾಹಕ್ಕೆ ಸೆಳೆಯಿತು.


ವಿಷ ಕೊಟ್ಟವರಿಗೂ ಅಮೃತವಿಕ್ಕುವ ಇವನಪ್ಪ, ಬಸುರಿ ಸೊಸೆ ಗೌರಿ ಹಬ್ಬದ ದಿನ ಕೋಳಿ ಬೇಕೆಂದರೆ... ಸೊಸೆಗಿಂತ ದೇವರು ಹೆಚ್ಚಲ್ಲ ಅಂತ ಕೋಳಿ ಬಾಡ್ನೆಸರು ಮಾಡಿ ಬಡಿಸುವ ಅತ್ತೆ... ನನ್ನೆಲ್ಲ ವೈಚಾರಿಕತೆಯನ್ನು ಬೆಂಬಲಿಸಿ, ಸ್ಫೂರ್ತಿ ಪಡೆಯುವ ಇವನ ತಮ್ಮಂದಿರು, ತಾಳಿ, ಕಾಲುಂಗುರ, ಬಳೆಗಳ ಹೊರತಾಗಿ ಕೇವಲ ನನ್ನನ್ನಷ್ಟೆ ಪ್ರೀತಿಸುವ ಇವರೆಲ್ಲ... ಹಳ್ಳಿಯ ಬಿಸಿಲು–ಮಳೆ–ಕೆಸರಲ್ಲಿ ಹೊಲ–ಗದ್ದೆ ಕೆಲಸ ಮಾಡೊ ನನ್ನನ್ನು ಅಭಿಮಾನದಿಂದ ಗೌರವಿಸುವ ಇವನೂರು... ಇವೆಲ್ಲ ದೊರೆತದ್ದೇ ನನ್ನದೇ ಆಯ್ಕೆಗಳಿಂದ.

ಇವನನ್ನು ಕಟ್ಟಿಕೊಂಡ ಮೇಲಷ್ಟೆ, ನಾನು ಎಲ್ಲ ಕಟ್ಟುಗಳಿಂದ ಮುಕ್ತಳಾಗಿ, ವ್ಯಕ್ತಿ ಸ್ವಾತಂತ್ರ್ಯ ಪಡೆದದ್ದು. ನನ್ನೆಲ್ಲ ಪ್ರೀತಿ–ಸ್ನೇಹ ಸಂಬಂಧಗಳನ್ನು ಗೌರವಿಸುವ, ನನ್ನ ಸ್ವಂತಿಕೆ–ಏಕಾಂತಗಳನ್ನು ಕಾಯುವ ಸಂಗಾತಿ... ಕಂಡರಿಯದ ತಾಯ್ತಂದೆ ಪ್ರೀತಿ ಕೊಟ್ಟಿರುವ ಹಳ್ಳಿಗ ಮಾವ–ಅತ್ತೆ, ಮಡಿಲ ತುಂಬ ನಾದಿನಿ–ಮೈದುನರು... ಇನ್ನೇನು ಬೇಕು?

– ಲತಾ ಮೈಸೂರು

ಸ್ಥಳ : ಸಣಬ, ಹೋಬಳಿ : ಚಿನಕುರಳಿ
ತಾಲ್ಲೂಕು : ಪಾಂಡವಪುರ, ಜಿಲ್ಲೆ : ಮಂಡ್ಯ.

ಉತ್ತಮ ಜೀವನದ ಸಾರ್ಥಕತೆ



ನಾನು (ಚೇತನಾ) ಮಧ್ಯಮ ವರ್ಗದ ಒಕ್ಕಲಿಗ ಕುಟುಂಬದಿಂದ ಬಂದವಳು. ರೈತ ಚಳುವಳಿ ನನಗೆ ಪ್ರತ್ಯಕ್ಷವಾಗೋ, ಪರೋಕ್ಷವಾಗೋ ಜಾತ್ಯತೀತ ಮನೋಭಾವನೆ ಬೆಳೆಸಿಕೊಳ್ಳಲು ಕಾರಣವಾಯಿತು. ಹಾಗೂ ನನ್ನನ್ನು ಈ ರೀತಿ ಮದುವೆಯಾಗಲು ಪ್ರೇರೇಪಿಸಿತು.

ನಾನು (ಬಾಲಕೃಷ್ಣಪ್ಪ) ಅತ್ಯಂತ ಹಿಂದುಳಿದ ಒಂದು ಹಳ್ಳಿಯ ದಲಿತ ಕುಟುಂಬದಿಂದ ಬಂದವನು. ಕಾಲೇಜು ಶಿಕ್ಷಣಕ್ಕೆ ಕಾಲಿಡುವಾಗಲೇ ರೈತ, ದಲಿತ ಹಾಗೂ ಸಮಾಜವಾದಿ ಚಳುವಳಿಗಳ ಸಂಪರ್ಕದಿಂದ ಜಾತ್ಯತೀತ ಸಮಾಜದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಹಂತದಲ್ಲಿ, ಚೇತನಾಳ ಪರಿಚಯವಿದ್ದರೂ ಬಹಳ ವರ್ಷಗಳ ನಂತರ ಮೈಸೂರು ವಿಶ್ವವಿದ್ಯಾಲಯಕ್ಕೆ ಉನ್ನತ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಾಗ ಪರಸ್ಪರ ಅರ್ಥ ಮಾಡಿಕೊಂಡು ನಮ್ಮ ಸ್ನೇಹ ಬಾಳಸಂಗಾತಿಗಳಾಗಲು ಅವಕಾಶವಾಯಿತು.

ಇಬ್ಬರ ಮನೆಯವರೂ ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿನ ಪ್ರತಿರೋಧ ಒಡ್ಡಿದರೂ ಬಹಳಷ್ಟು ಪ್ರಗತಿಪರ ಸ್ನೇಹಿತರ ಸಹಕಾರದಿಂದ ಎರಡು ಕುಟುಂಬದವರು ನಮ್ಮಿಬ್ಬರ ಒತ್ತಾಸೆಯಂತೆ ಒಂದೇ ವೇದಿಕೆಗೆ ಬಂದು ಪುರೋಹಿತರಿಲ್ಲದ ಸರಳ ಅಂತರ್ಜಾತಿ ವಿವಾಹವಾಗಲು ಸಾಧ್ಯವಾಯಿತು.

ಜಾತೀಯತೆ ಕಟ್ಟುಪಾಡುಗಳಲ್ಲೇ ನಿತ್ಯ ಜೀವನ ಸಾಗಿಸುತ್ತಿರುವ ಸಮಾಜದಲ್ಲಿ, ನಮ್ಮ ಆಶಯಕ್ಕೆ ಅನುಗುಣವಾಗಿ ನಮ್ಮ ತಂದೆ–ತಾಯಿ ಮುಂದೆ ನಿಂತು ಮದುವೆ ಮಾಡಿಸಿದ್ದು, ನೈತಿಕವಾಗಿ ಸಾಮಾಜಿಕ ಭದ್ರತೆಯನ್ನು ಒದಗಿಸಿತು. ಹಾಗೇ ನಮ್ಮ ಆಶಯದಂತೆ ಜಾತಿ ಮತಗಳ ಕಟ್ಟುಪಾಡುಗಳನ್ನು ಮೀರಿ ಒಂದು ಉತ್ತಮ ಜೀವನ ಸಾಗಿಸುತ್ತಿರುವ ಸಾರ್ಥಕತೆ ನಮಗಿದೆ.

ಎಷ್ಟೇ ಕೌಟುಂಬಿಕ ಹಾಗೂ ಸಾಮಾಜಿಕ ಜಂಜಾಟಗಳಿದ್ದರೂ ನಮ್ಮ ಇಷ್ಟದಂತೆ ವಿವಾಹವಾಗಿ ಒಬ್ಬ ಮಗನನ್ನು ಪಡೆದು (ಅನಿಕೇತನ) ಸಾಮಾನ್ಯ ಜೀವನ ನಡೆಸುವಲ್ಲಿ ಯಶಸ್ವಿಯಾಗಿದ್ದೇವೆ.

'ಮಾನವ ಮಂಟಪ' ದಡಿಯಲ್ಲಿ ಇಂತ ಜಾತ್ಯತೀತ ವಿವಾಹಗಳು ಹೆಚ್ಚಾಗುವುದರ ಮೂಲಕ ಬುದ್ಧ, ಬಸವ, ಗಾಂಧೀ, ಲೋಹಿಯಾ, ಅಂಬೇಡ್ಕರ್‌ರಂತಹ ಕನಸಿನ ಸಮಾಜವನ್ನು ಕಟ್ಟುತ್ತಾ ಇಂತಹ ಕುಟುಂಬಗಳಿಗೆ ಒಂದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮವನ್ನು ಒದಗಿಸುವಲ್ಲಿ ಸಫಲವಾಗಲೆಂದು ಆಶಿಸುತ್ತೇವೆ.

– ಚೇತನಾ ಹಾಗೂ ವೈ. ಕೆ. ಬಾಲಕೃಷ್ಣಪ್ಪ
ರೇಷ್ಮೆ ವಿಸ್ತರಣಾಧಿಕಾರಿ,
ರೀಲಿಂಗ್ ವಿಭಾಗ (ತಾಂತ್ರಿಕ),
ವಿನಾಯಕನಗರ, ತುಮಕೂರು.

ನನ್ನ ಕಲ್ಪನೆಯ ಆದರ್ಶ ಸಮಾಜಕ್ಕೆ,
ಸ್ವಾತಂತ್ರ್ಯ, ಸಮಾನತೆ, ಸೋದರತ್ವಗಳೇ ತಳಹದಿ.
ಪ್ರಜಾಪ್ರಭುತ್ವ ಎಂದರೆ ಅದು ಸರ್ಕಾರದ ಒಂದು ಪ್ರಕಾರವಲ್ಲ.
ಅದೊಂದು ಸಹಬಾಳುವೆ, ಸಹಭಾಗಿತ್ವದ ವ್ಯವಸ್ಥೆ.
ಪ್ರಜಾಸತ್ತೆ ಅಸಮಾನತೆಗೆ ವಿರೋಧಿಯಾದದ್ದು
ಅಲ್ಲಿ, ಸ್ಥಾನಮಾನಗಳಲ್ಲಾಗಲೀ, ಉದ್ಯೋಗದಲ್ಲಾಗಲಿ
ಮೇಲು ಕೀಳುಗಳಿಲ್ಲ.

– ಡಾ. ಬಿ. ಆರ್. ಅಂಬೇಡ್ಕರ್.

ದಾಖಲೆ

ಕವಿ **ಡಾ॥ ಸಿದ್ಧಲಿಂಗಯ್ಯ**ನವರು ಶಾಸಕರಾಗಿ ವಿಧಾನ ಪರಿಷತ್ತಿನಲ್ಲಿ ಅಂತರ್ಜಾತಿ ವಿವಾಹ ಹಾಗೂ ವಿವಾಹಿತರ ಪರವಾಗಿ ಮಂಡಿಸಿದ ಖಾಸಗಿ ಮಸೂದೆ, ಅದರ ಬಗ್ಗೆ ನಡೆದ ಚರ್ಚೆ ಹಾಗೂ ಅದನ್ನು ಹಿಂದಕ್ಕೆ ಪಡೆಯಬೇಕಾಗಿ ಬಂದುದರ ಹಿನ್ನೆಲೆ ಇಲ್ಲಿ ದಾಖಲಾಗಿದೆ. ರಾಜಕಾರಣ ದಿನೇ ದಿನೇ ಜಾತೀಯವಾಗುತ್ತಿದೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ, ಈ ಚರ್ಚೆಯಲ್ಲಿ ಜಾತಿಪದ್ಧತಿ ಕುರಿತಂತೆ ನಮ್ಮ ಜನಪ್ರತಿನಿಧಿಗಳು ವ್ಯಕ್ತಪಡಿಸಿರುವ ಒಲವು–ನಿಲುವುಗಳು ಕುತೂಹಲ ಹುಟ್ಟಿಸುವಂತಿವೆ.

ಈ ಇಡೀ ದಾಖಲೆಯನ್ನು ದೊಡ್ಡ ಹುಲ್ಲೂರು ರುಕ್ಕೋಜಿ ಅವರು ಸಂಪಾದಿಸಿರುವ **"ಸದನದಲ್ಲಿ ಸಿದ್ಧಲಿಂಗಯ್ಯ"** ಎಂಬ ಪುಸ್ತಕದಿಂದ ಆರಿಸಿ ಪ್ರಕಟಿಸಲಾಗಿದೆ. — ಸಂ.

ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ :
ಒಂದು ಖಾಸಗಿ ನಿರ್ಣಯ

೩೦-೩-೧೯೯೦

ಉಪ ಸಭಾಪತಿಯವರು : ಶ್ರೀ ಸಿದ್ದಲಿಂಗಯ್ಯನವರೇ, ಇಲ್ಲಿ ಸಚಿವರು ಹಾಜರಿಲ್ಲ. ಸಬ್ಜೆಕ್ಟನ್ನು ನೀವು ಮೂವ್ ಮಾಡಿ. ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ. ಮುಂದಿನ ಸದನದಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ನೀವು ಮಾತನಾಡಿ.

ಡಾ। ಸಿದ್ದಲಿಂಗಯ್ಯ : ಸನ್ಮಾನ್ಯ ಉಪ ಸಭಾಪತಿಯವರೇ, ನಾನು ಈ ನಿರ್ಣಯವನ್ನು ಮಂಡಿಸಲು ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಅಂತರ್ಜಾತಿ ವಿವಾಹ ಆದವರಿಗೆ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಶೇಕಡಾ ೫ ರಂತೆ ಮೀಸಲಾತಿ ನಿಯಮವನ್ನು ಜಾರಿಗೆ ತರಬೇಕೆಂದು ಸದನವು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

ಉಪ ಸಭಾಪತಿಯವರು : ಮಾತನಾಡಿ.

ಡಾ। ಸಿದ್ದಲಿಂಗಯ್ಯ : ಮಾನ್ಯ ಉಪ ಸಭಾಪತಿಯವರೇ, ಈ ನಿರ್ಣಯ ಕುರಿತಾದ ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶತಶತಮಾನಗಳಿಂದ ಜಾತಿ ಪದ್ಧತಿಯ ಕರಾಳ ಮುಷ್ಠಿಗೆ ಸಿಕ್ಕಿ ಈ ಸಮಾಜದಲ್ಲಿ ಪ್ರೀತಿ ಮತ್ತು ಮಾನವೀಯತೆಗಳು ಕಾಣೆಯಾಗಿವೆ. ಇಂತಹ ಪ್ರೀತಿ ಮತ್ತು ಮಾನವೀಯತೆಗಳಿಗೆ ಕೊಡಲಿ ಪೆಟ್ಟು ಹಾಕಿರತಕ್ಕಂಥ ಜಾತಿಪದ್ಧತಿ ವಿರುದ್ಧವಾಗಿ ಒಂದು ದೊಡ್ಡ ಸಮರವನ್ನೇ ಮಾಡಬೇಕಾಗಿದೆ. ಈ ಕೆಲಸಕ್ಕೆ ದೊಡ್ಡದಾದ, ಮುಖ್ಯವಾದ ಸಾಧನ ಎಂದರೆ ಅಂತರ್ಜಾತಿ ವಿವಾಹಗಳು. ಅಂತರ್ಜಾತಿ ವಿವಾಹ ಮಾತ್ರ ಈ ಜಾತಿ ಪದ್ಧತಿಯನ್ನು ಭಗ್ನಗೊಳಿಸಬಲ್ಲದು ಮತ್ತು ನಮ್ಮ ಸಮಾಜಕ್ಕೆ ಸಮಾನತೆಯನ್ನು, ಸಂತೋಷವನ್ನು, ಸೌಂದರ್ಯವನ್ನು ತರಬಲ್ಲದು. ಅದಕ್ಕಾಗಿ ನಮ್ಮ ಭಾರತ ಸಂವಿಧಾನದ ೧೪,೧೫,೧೬ನೆಯ ಕಲಮುಗಳಲ್ಲಿ ಯಾವ ಒಂದು ನಿರ್ದೇಶನ ಇದೆ. ನವಸಮಾಜ ನಿರ್ಮಾಣ ಆಗಬೇಕು, ವರ್ಗರಹಿತ ವರ್ಣರಹಿತವಾದ ಒಂದು ಸಮಾಜ ಆಗಬೇಕು ಎಂದು, ಅಂಥ ಒಂದು ಆವಶ್ಯಕತೆಗೆ ಅನುಗುಣವಾಗಿ ಈ ನಿರ್ಣಯವನ್ನು ನಾನು ಮಂಡಿಸಿದ್ದೇನೆ.

ಈ ಜಾತಿ ಪದ್ಧತಿಗಳಿಂದ ಉಂಟಾಗಿರುವಂತಹ ಅಪಾಯಗಳನ್ನು ನಾನು ತಮಗೆ ವಿವರವಾಗಿ ಹೇಳಬೇಕಾದದ್ದು ಏನೂ ಇಲ್ಲ. ಇವತ್ತು ಈ ಜಾತಿ ಪದ್ಧತಿಯಿಂದ ನಮ್ಮ ದೇಶದ ಭಾವೈಕ್ಯತೆಗೆ ಭಂಗಬಂದಿದ್ದು ಸಮಾಜದ ಹೃದಯ ಮತ್ತು ಮನಸ್ಸಿನ ವಿಕಸನ ಸ್ಥಗಿತಗೊಂಡು ಇಡೀ ಚಲನೆಯೇ ನಿಂತುಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಜೊತೆಗೆ ಜಾತಿ ಪದ್ಧತಿಯ ಕೊಡುಗೆ ಏನೆಂದರೆ ಕೆಳದರ್ಜೆಯವರ ಸ್ಥಿತಿಯನ್ನು ತುಂಬ ದಾರುಣಗೊಳಿಸಿರುವುದು. ಇದರಿಂದಾಗಿ ಇಡೀ ಸಮಾಜ ಶ್ರೇಣೀಕರಣಕ್ಕೆ ಒಳಗಾಗಿದೆ. ಹೀಗಾಗಿ ಮನುಷ್ಯನನ್ನು ನಾವು ಅವನ ಯೋಗ್ಯತೆಯಿಂದ ಅಳೆಯದೆ ಜಾತಿಯಿಂದ ಅಳೆಯುತ್ತಿದ್ದೇವೆ. ಜಾತಿ ಪದ್ಧತಿಯ ಇನ್ನೊಂದು ದೊಡ್ಡ ಅಪಾಯವೆಂದರೆ, ಕಾರಣ ಇಲ್ಲದೇನೆ ಒಬ್ಬನನ್ನು ಮೆಚ್ಚಕ್ಕದ್ದು, ಕಾರಣ ಇಲ್ಲದೇನೆ ಒಬ್ಬನನ್ನು ತಿರಸ್ಕಾರ ಮಾಡತಕ್ಕದ್ದು. ಕೇವಲ ಹುಟ್ಟಿನ ಕಾರಣದಿಂದ ಮೆಚ್ಚುಗೆ ಮತ್ತು ತಿರಸ್ಕಾರಗಳನ್ನು ಈ ಸಮಾಜದಲ್ಲಿ ಜಾತಿಯನ್ನು ಮಾನದಂಡವಾಗಿ ಇಟ್ಟುಕೊಂಡು ಮಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಜಾತೀಯತೆಯನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು ಎಂಬ ಉದ್ದೇಶದಿಂದ ಈ ನಿರ್ಣಯವನ್ನು ಮಂಡಿಸಿದ್ದೇನೆ.

ಕೆಳಜಾತಿಯಲ್ಲಿ ಆರ್ಥಿಕ ಸುಧಾರಣೆಯಾದರೂ ಕೂಡ ಅವರು ಮೇಲ್ಜಾತಿಗೆ ಏರುವುದಿಲ್ಲ. ಆ ಜಾತಿಯಲ್ಲೇ ಇರುತ್ತಾರೆ. ಆದರೆ ಆರ್ಥಿಕವಾಗಿ ಮಾತ್ರ ಅವರು ಮೇಲೆ ಬಂದಿರುತ್ತಾರೆ. ಹಾಗೆಯೇ ಮೇಲ್ಜಾತಿಯವರ ಸ್ಥಾನಮಾನಗಳು ಕೂಡ ಅವರ ಶ್ರಮದಿಂದ, ಸಾಧನೆಯಿಂದ ಬಂದಿದ್ದಲ್ಲ. ಕೇವಲ ಹುಟ್ಟಿನ ಕಾರಣದಿಂದ ಬಂದಿರುವಂಥಾದ್ದು. ಇದು ತುಂಬಾ ತರ್ಕಹೀನವಾದದ್ದು, ಅವೈಜ್ಞಾನಿಕವಾದದ್ದು, ಅಕಾಲಿಕವಾದದ್ದು. ಇದನ್ನು ನಾವು ಇವತ್ತು ಗಂಭೀರವಾಗಿ ಗಮನಿಸಬೇಕಾಗಿದೆ. ಈ ಜಾತಿ ಪದ್ಧತಿ ವೃತ್ತಿ ಮೂಲವಾಗಿ ಬಂದಿದ್ದರೂ ಕೂಡ ಪ್ರತಿಷ್ಠಿತ ವೃತ್ತಿಗಳು ಮೇಲ್ಜಾತಿಯವರ ಪಾಲಿಗೆ ಹೋಗಿ, ಕನಿಷ್ಠ ವೃತ್ತಿಗಳು ಹಾಗೂ ಮಲೀನಗೊಂಡ ವೃತ್ತಿಗಳು ಕೆಳಜಾತಿಯವರ ಪಾಲಿಗೆ ಬಂದಿದ್ದು ಕೂಡ ಇಂಥ ದುರಂತಕ್ಕೆ ಕಾರಣವಾಗಿದೆ.

ಸ್ವಾತಂತ್ರ್ಯ ಬಂದಮೇಲೆ ಜಾತಿ ಪದ್ಧತಿಯ ಮನೋಧರ್ಮ ಕಡಿಮೆಯಾಗುತ್ತದೆ ಎನ್ನುವ ನಿರೀಕ್ಷೆ ಆಗಿನ ಹಿರಿಯ ನಾಯಕರಲ್ಲಿ ಇತ್ತು. ಆದರೆ ಆ ನಿರೀಕ್ಷೆ ಇವತ್ತು ಸುಳ್ಳಾಗಿದೆ. ಒಬ್ಬ ಸಮಾಜ ವಿಜ್ಞಾನಿಯ ಸಂಶೋಧನೆ ಪ್ರಕಾರ ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ಭಾರತೀಯರ ಮನಸ್ಸಿನಲ್ಲಿ ಜಾತೀಯ ಮನೋಧರ್ಮ ಮೇಲುಜಾತಿಗಳಲ್ಲಿ ಶೇಕಡಾ ೨೨ ಇದ್ದರೆ, ಸ್ವಾತಂತ್ರ್ಯಾ ನಂತರ ಅದು ಶೇಕಡ ೬೩ಕ್ಕೆ ಏರಿದೆ. ಅಂದರೆ ಜಾತಿ ಮನೋಧರ್ಮ– ಕೆಲವು ಜಾತಿಗಳಲ್ಲಿ–ಸ್ವಾತಂತ್ರ್ಯ ಪೂರ್ವದಲ್ಲಿ ಶೇಕಡ ೪೦ ರಷ್ಟು ಇತ್ತು. ಸ್ವಾತಂತ್ರ್ಯ ನಂತರ ಅದು ಶೇಕಡ ೩೬ರಷ್ಟಕ್ಕೆ ಇಳಿಯಿತು. ಅಂದರೆ ಮೇಲ್ಜಾತಿಯಲ್ಲಿ ಜಾತೀಯತೆಯ ಮನೋಧರ್ಮ ಸ್ವಲ್ಪ ಜಾಸ್ತಿಯಾಗಿದೆ ಅಂದಂತಾಯ್ತು. ಇದಕ್ಕೆ 'ರಾಜಕೀಯ' ಇತ್ಯಾದಿ ಕಾರಣ ಕೊಡಬಹುದು. ಆದರೆ ಇದು ಸಂತೋಷ ಕೊಡತಕ್ಕಂಥ ವಿಚಾರ ಅಲ್ಲ. ಬರಬರುತ್ತಾ ಜಾತೀಯತೆಯ ಮನೋಧರ್ಮ ಕಡಿಮೆಯಾಗಬೇಕು, ಆದರೆ ಹೆಚ್ಚಾಗುತ್ತಿರುವುದು ನಮ್ಮ ದೇಶದ ದುರಂತದ ಸೂಚನೆಯಾಗಿದೆ. ಇದನ್ನು ತುಂಬಾ ಗಂಭೀರವಾಗಿ ಪರಿಗಣಿಸಿ, ಪೂರ್ತಿಯಾಗಿ ತೊಡೆದುಹಾಕಲು ಪ್ರಯತ್ನ ಮಾಡಬೇಕು. ಜಾತ್ಯಾತೀತ ಸಮಾಜವನ್ನು ಒಪ್ಪಿದ ನಾವು ಜಾತೀಯತೆಯನ್ನು ತೊಡೆದು ಹಾಕದೇ ಹೋದರೆ, ದೇಶಕ್ಕೆ ಮತ್ತು ಮಾನವೀಯತೆಗೆ ದೊಡ್ಡ ಅಪಚಾರ ಮಾಡುತ್ತಿದ್ದೇವೆ

ಎಂದೇ ಅರ್ಥ. ಜಾತೀಯತೆಯನ್ನು ತೊಡೆದುಹಾಕುವುದಕ್ಕೆ ನಾವು ಕೈಗೊಂಡಿರುವಂಥ ಕಾರ್ಯಕ್ರಮಗಳು ಜಾತೀಯತೆಯ ಮನೋಧರ್ಮವನ್ನು ಗಟ್ಟಿಗೊಳಿಸುತ್ತಿವೆಯೇ ಹೊರತು, ಸಡಿಲ ಮಾಡಿಲ್ಲ ಎನ್ನುವ ಸತ್ಯವನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ಇಷ್ಟು ವರ್ಷಗಳಲ್ಲಿ ನಮ್ಮ ವ್ಯಕ್ತಿತ್ವ ಜಾತಿರಹಿತ ವ್ಯಕ್ತಿತ್ವ ಆಗಬೇಕಾಗಿತ್ತು. ಆದರೆ ಜಾತಿಮಯ ವ್ಯಕ್ತಿತ್ವ ಆಗಿದೆ. ಪ್ರತಿಯೊಂದಕ್ಕೂ ಜಾತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಚನೆ ಮಾಡುವಂಥ ತಪ್ಪನ್ನು ಮಾಡುತ್ತಿದ್ದೇವೆ.

ಜಾತಿಪದ್ಧತಿ ವಿರುದ್ಧ ನಮ್ಮ ದೇಶದಲ್ಲಿ ದೊಡ್ಡ ಚಳುವಳಿಗಳು ಆಗಿವೆ. ಈ ಸಂದರ್ಭದಲ್ಲಿ ಕೆಲವು ಮಹಾನ್ ವ್ಯಕ್ತಿಗಳ ನೆನಪನ್ನು ಮಾಡಿಕೊಳ್ಳುವುದು ಸೂಕ್ತ ಎನಿಸುತ್ತದೆ. ಜಗತ್ತಿನಲ್ಲಿ ಮೊಟ್ಟಮೊದಲ ಬಾರಿಗೆ ಭಗವಾನ್ ಬುದ್ಧ ಜಾತೀಯ ಪರಿಕಲ್ಪನೆಯನ್ನು ಪ್ರಶ್ನೆ ಮಾಡಿದ ಬಸವಣ್ಣನವರು ಜಾತಿಯ ಪರಿಕಲ್ಪನೆಯನ್ನು ಮಾಡಿದರಷ್ಟೇ ಅಲ್ಲ, ಅಂತರ್ಜಾತಿ ವಿವಾಹಕ್ಕೆ ಕರ್ನಾಟಕದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಪ್ರೋತ್ಸಾಹ ಕೊಟ್ಟು ದೊಡ್ಡ ಕ್ರಾಂತಿಯನ್ನು ಮಾಡಿದರು. ಬ್ರಾಹ್ಮಣ ಕನ್ಯೆಯನ್ನು ಅಸ್ಪೃಶ್ಯ ವರನಿಗೆ ವಿವಾಹ ಮಾಡಿಸಿ, ಸಮಾಜದ ಪೊಳ್ಳು ನಂಬಿಕೆಗೆ ಕೊಡಲಿ ಪೆಟ್ಟನ್ನು ಕೊಟ್ಟರು. ಬಸವಣ್ಣನವರು ಮತ್ತೆ.

"ಮಡಿವಾಳನೆಂಬನೇ ಮಾಚಯ್ಯನ
ಮಾದಾರನೆಂಬನೇ ಚೆನ್ನಯ್ಯನ
ಡೋಹಾರನೆಂಬನೇ ಕಕ್ಕಯ್ಯನ
ಆನು ಹಾರವನೆಂದಡೆ, ಕೂಡಲ
ಸಂಗಯ್ಯ ನಗುವನಯ್ಯ......"

ಎಂದು ಹೇಳಿದರು. ಇದನ್ನು ನಾವು ಯಾರೂ ಗಮನಿಸಲಿಲ್ಲ, ಗಮನಿಸಿರುವವರು ಸಂಪೂರ್ಣವಾಗಿ ಮರೆತಿದ್ದಾರೆ. ಇದರಿಂದ ಆ ಮಹಾನ್ ವ್ಯಕ್ತಿಗೆ ಅಪಚಾರ ಮಾಡಿದ್ದೇವೆಂದು ಹೇಳಬಹುದು.

ಕನಕದಾಸರು ಮೊಟ್ಟಮೊದಲ ಬಾರಿಗೆ ನನ್ನನ್ನು ಯಾರಾದರೂ ಯಾವ ಜಾತಿ ಎಂದು ಕೇಳಿದರೆ 'ಮನುಜ ಜಾತಿ' ಎಂದು ಹೇಳುತ್ತೇನೆಂದು ಅವರ ಕೀರ್ತನೆಯಲ್ಲಿ ಹೇಳಿದ್ದಾರೆ. ಇದು ಬಹುದೊಡ್ಡ ಬಂಡಾಯದ ಮಾತು. ರಾಷ್ಟ್ರಕವಿ ಕುವೆಂಪು ಅವರು, ನಾವೆಲ್ಲರೂ ವಿಶ್ವಮಾನವರಾಗಬೇಕು, "ಮನುಜಮತ, ವಿಶ್ವಪಥ" ಎಂದು ಕರೆಕೊಟ್ಟರು. ನಾವು ಕುವೆಂಪು ಅವರ ಅಭಿಮಾನಿಗಳಾಗಿದ್ದರೂ ಕೂಡ ಅವರು ಹೇಳಿದ ಈ ವಿಚಾರದಲ್ಲಿ, ವಿಶ್ವ ಒಂದೇ ಎಂಬ ತತ್ವದಲ್ಲಿ ಅಭಿಮಾನ ಬೆಳೆಸಿಕೊಳ್ಳಲಿಲ್ಲ. ನಮ್ಮ ಶ್ರೇಷ್ಠ ಕವಿ ಗೋಪಾಲಕೃಷ್ಣ ಅಡಿಗ ಅವರು "ನಾವೆಲ್ಲಾ ಒಂದೇ ಜಾತಿ, ಒಂದೇ ಮತ, ಒಂದೇ ಕುಲ, ನಾವು ಮನುಜರು. ನರರ ನಡುವಿನ ಅಡ್ಡಗೋಡೆಗಳನ್ನು ಕುಟ್ಟಿ ಕೆಡಹುವೆವು, ನಾವು ವಿಲಯ ರುದ್ರರು" ಎಂದು ಹೇಳಿದರು. ಆದರೆ ಆ ಹುಮ್ಮಸ್ಸು ಅಡಿಗರಲ್ಲಿ ಉಳಿಯಿತೇ ವಿನಹ ಇಡೀ ಜನತೆಯಲ್ಲಿ ಮಾನಸಿಕ ಬದಲಾವಣೆ ಮಾತ್ರ ಆಗಲಿಲ್ಲ.

ಹಾಗೆ ನೋಡಿದರೆ ವೇದಗಳ ಕಾಲದಲ್ಲಿ ಕೂಡ ಜಾತೀಯತೆ ಇರಲಿಲ್ಲ. ಇದು ಶುರುವಾದದ್ದು ಪುರಾಣಗಳ ಕಾಲಕ್ಕೆ. ಸಗೋತ್ರ ವಿವಾಹಪದ್ಧತಿ ಯಾವಾಗ ಎಲ್ಲಿ ಶುರುವಾಯಿತೋ ಅಲ್ಲಿಂದ ಜಾತೀಯತೆ ಶುರುವಾಯಿತು. ಭಿನ್ನಮತಗೋತ್ರ ವಿವಾಹ ಪದ್ಧತಿ ಇದ್ದಾಗ ಜಾತೀಯತೆ ಇರಲಿಲ್ಲ. ಆ ಕಾಲದಲ್ಲಿ ವಶಿಷ್ಠ ಮತ್ತು ಅರುಂಧತಿ ಮದುವೆ ಆದರು. ಸಮಾಜದ ಕಟ್ಟಕಡೆಯ ಹೆಣ್ಣುಮಗಳು, ಸಮಾಜದ ಮೇಲುವರ್ಗದ ಒಬ್ಬ ಪುರುಷನೊಡನೆ ಆದ ಮದುವೆಯೇ ಪರಾಶರ ಮತ್ತು ಮತ್ಸ್ಯಗಂಧಿ ಮದುವೆ. ಇವುಗಳೆಲ್ಲಾ ಆ ಕಾಲದಲ್ಲೇ ನಡೆದಿವೆ.

ಒಂದು ಕುತೂಹಲಕರ ಅಂಶವೆಂದರೆ, ನಮ್ಮ ಎಲ್ಲ ದೇವತೆಗಳೂ ಅಂತರ್ಜಾತಿ ವಿವಾಹ ಆಗಿರುವುದು. ಸ್ವಜಾತಿ ವಿವಾಹ ಆಗಿರುವ ದೇವರುಗಳು ತುಂಬಾ ಕಡಿಮೆ. ಶಿವ, ಕೃಷ್ಣ ಅಂತರ್ಜಾತಿ ವಿವಾಹ ಆಗಿದ್ದಾರೆ. ವೆಂಕಟರಮಣ ಅಂತರ್ಜಾತಿ ವಿವಾಹ ಆಗಿದ್ದಾನೆ. ಮೇಲುಕೋಟೆ ಚೆಲುವನಾರಾಯಣಸ್ವಾಮಿ ಕೇವಲ ಅಂತರ್ಜಾತಿ ಅಲ್ಲ, ಅಂತರ್‌ಮತೀಯ ವಿವಾಹ ಆಗಿದ್ದಾನೆ. ಚೆಲುವನಾರಾಯಣಸ್ವಾಮಿ ಮುಸ್ಲಿಂ ಮಹಿಳೆಯನ್ನು ಮದುವೆ ಆದುದನ್ನು ನಾವು ನೋಡಿದ್ದೇವೆ. ಬಿಳಿಗಿರಿ ರಂಗಯ್ಯ ಕೂಡ ಅಂತರ್ಜಾತಿ ಮದುವೆ ಆಗಿದ್ದಾರೆ. ಅಂದರೆ, ದೇವತೆಗಳೆಲ್ಲರೂ ಅಂತರ್ಜಾತಿ ಮದುವೆ ಆಗಿರುವಾಗ, ಆ ದೇವತೆಗಳನ್ನು ನಾವು ಪೂಜೆ ಮಾಡುವುದಕ್ಕೆ ಮಾತ್ರ ಇಟ್ಟುಕೊಂಡು ಅವರುಗಳ ಆದರ್ಶವನ್ನು ತಿರಸ್ಕಾರ ಮಾಡಿದ್ದೇವೆ. ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ, ಅಂತರ್ಜಾತಿ ವಿವಾಹ ನಮ್ಮ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ. ಇದು ಹೊಸ ವಿಚಾರ ಅಲ್ಲ. ನಮ್ಮ ಸಂಸ್ಕೃತಿಯ ಒಂದು ಪ್ರಾಚೀನ ಭಾಗ. ಇದನ್ನು ನಾವು ಮುಂದುವರಿಸಿಕೊಂಡು ಹೋಗಬೇಕು. ಈ ಆಧುನಿಕ ಕಾಲದಲ್ಲಿ ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿಯವರು, ರಾಮಮನೋಹರ ಲೋಹಿಯಾ ಅವರು ಮತ್ತು ಡಾ। ಅಂಬೇಡ್ಕರ್ ಅವರೂ ಇದನ್ನೇ ಪ್ರತಿಪಾದನೆ ಮಾಡಿದರು. ಲೋಹಿಯಾ ಮತ್ತು ಅಂಬೇಡ್ಕರ್ ಅವರುಗಳು ಈ ದೇಶ ಜಾತೀಯತೆಯಿಂದ ರೋಗಗ್ರಸ್ಥವಾಗಿದ್ದು ಇದನ್ನು ಪಾರು ಮಾಡಬೇಕಾದರೆ ಅಂತರ್ಜಾತಿ ವಿವಾಹಗಳಿಂದ ಮಾತ್ರ ಸಾಧ್ಯ ಎಂದು ಹೇಳಿದ್ದಾರೆ.

ರಾಮಮನೋಹರ ಲೋಹಿಯಾರವರಂತೂ ಆ ಕಾಲದಲ್ಲೇ, ನಿಜವಾಗಿಯೂ ಮೀಸಲಾತಿಯನ್ನು ಕೊಡಬೇಕೆಂದಿದ್ದರೆ ಅಂತರ್ಜಾತಿ ವಿವಾಹ ಆದವರಿಗೆ ಕೊಡಿ. ಜಾತಿವಾರು ಮೀಸಲಾತಿಯನ್ನು ಕೊಟ್ಟು ಜಾತೀಯತೆಯನ್ನು ಗಟ್ಟಿಗೊಳಿಸಬೇಡಿ ಎಂದು ಹೇಳಿದರು. ಆದರೆ ನಾವು ಇದನ್ನು ಕೂಡ ಗಮನಿಸಲಿಲ್ಲ. ನಾವು ನಿಜವಾಗಿಯೂ ವರ್ಗರಹಿತ ಸಮಾಜವನ್ನು ಕಟ್ಟಬೇಕಾದರೆ ಲೋಹಿಯಾರವರ ಮಾತನ್ನು ಅನುಸರಿಸಬೇಕಾಗುತ್ತದೆ. ಜಾತಿದ್ವೇಷ ಕಡಿಮೆಯಾಗಬೇಕಾದರೆ, ಜಾತಿಕಲಹ, ನಿಲ್ಲಬೇಕಾದರೆ, ಪ್ರೀತಿ ಮತ್ತು ಮಾನವೀಯತೆಗಳು ಸಂವರ್ಧನೆಯಾಗಬೇಕಾದರೆ ಈ ಕೆಲಸವನ್ನು ನಾವು ಖಂಡಿತವಾಗಿ ಮಾಡಲೇಬೇಕು.

ಈ ಸಮಾಜದಲ್ಲಿ ಅಂತರ್ಜಾತಿ ವಿವಾಹವಾದವರನ್ನು ನಾನು 'ಬಂಡಾಯಗಾರರು' ಎಂದು ಕರೆಯುತ್ತೇನೆ. ಜಾತಿಯ ಗಡಿಗೆರೆಗಳನ್ನು ದಾಟಿ ಜಾತೀಯತೆಯ ಅನಿಷ್ಟವನ್ನು ಮೆಟ್ಟಿನಿಂತ ಇವರು ನಿಜವಾದ ಬಂಡಾಯಗಾರರು. ಯಾವುದೇ ಲಾಭ ಲೆಕ್ಕಾಚಾರಗಳಿಗೆ ಬೆಲೆಕೊಡದೆ ಪ್ರೇಮ ಪ್ರೀತಿಗೆ ಬೆಲೆಕೊಟ್ಟು ಇವರು ಅಂತರ್ಜಾತಿ ವಿವಾಹವಾಗಿದ್ದಾರೆ. ಅವರನ್ನು ಈ ಸದನದಲ್ಲಿ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಭಿನಂದಿಸುತ್ತೇನೆ. ಎಲ್ಲ ಅಂತರ್ಜಾತೀಯ ವಿವಾಹಿತರನ್ನು ಅಭಿನಂದಿಸಲು ಈ ಒಂದು ಅವಕಾಶವನ್ನು ಬಳಸಿಕೊಳ್ಳುತ್ತೇನೆ. ಆದರೆ ಇವರನ್ನು ಅಭಿನಂದಿಸುವ ಸಂದರ್ಭದಲ್ಲಿ ಇವರು ಅನುಭವಿಸುತ್ತಿರುವ ಸಂಕಟವನ್ನು ಕೂಡ ತಮ್ಮ ಮುಂದೆ ಪ್ರಸ್ತಾಪಿಸುತ್ತೇನೆ.

ಅಂತರ್ಜಾತಿ ವಿವಾಹವಾದವರು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಅಭದ್ರತೆ ಆತಂಕಕ್ಕೆ ಒಳಗಾಗಿದ್ದಾರೆ. ಸಮಾಜ ಇವರನ್ನು ಜಾತಿ ಬಿಟ್ಟವರು, ಕುಲಗೆಟ್ಟವರು ಎಂದು ಕರೆಯುತ್ತದೆ. ಕುಲಗೆಟ್ಟವರು ಎಂಬುದಕ್ಕೆ ಅಂತರ್ಜಾತಿ ವಿವಾಹವಾದವರು ಎಂಬ ಅರ್ಥವಿದೆ. ಈ ಶಬ್ದವನ್ನು ಬಳಸಬಾರದು. ನಮ್ಮ ಭಾಷೆ ಎಷ್ಟು ಪ್ರತಿಗಾಮಿಯಾಗಿದೆ ಎನ್ನುವುದಕ್ಕೆ ಇಂತಹ ಶಬ್ದಗಳು ಸಾಕ್ಷಿಯಾಗಿವೆ. ಅಂತರ್ಜಾತಿ ವಿವಾಹವಾದವರನ್ನು ಇಬ್ಬರ ಕಡೆಯ ಜಾತಿಗಳವರು ದೂರೀಕರಿಸುವುದರಿಂದ ಯಾವುದೇ

ಆಸರೆಯಿಲ್ಲದಂತಾಗುವ ಇವರಿಗೆ ಸರಕಾರವೇ ಆಸರೆಯಾಗಬೇಕು. ಇವರ ಮಕ್ಕಳ ಭವಿಷ್ಯ ಕೂಡಾ ಆತಂಕಕಾರಿಯಾಗಿದ್ದು ಭವಿಷ್ಯದಲ್ಲಿ ಅವರ ವಿವಾಹದ ಪ್ರಶ್ನೆ ಬರುತ್ತದೆ. ಅವರು ಯಾವ ಜಾತಿಗೆ ಸೇರಿದವರು ಎಂಬ ಪ್ರಶ್ನೆ ಏಳುತ್ತದೆ. ಅಂತರ್ಜಾತಿ ವಿವಾಹ ಆದವರ ಮಕ್ಕಳು ಒಂದು ಬಗೆಯಲ್ಲಿ ಅಂತರ್ ಪಿಶಾಚಿಗಳಂತಾಗಿದ್ದು, ಸಮಾಜ ಅವರನ್ನು ಪಾಪದ ಫಲಗಳೆಂಬಂತೆ ಕಾಣುತ್ತಿದೆ. ಹೇಳಿ, ಈ ಮಕ್ಕಳು ಪಾಪದ ಫಲಗಳೇ? ಖಂಡಿತಾ ಅಲ್ಲ. ಈ ಮಕ್ಕಳು ನವಭಾರತದ ಗೌರವಾನ್ವಿತ, ಜಾತ್ಯತೀತ ಪ್ರಜೆಗಳು. ಇವರನ್ನು ನಾವು ಗೌರವದಿಂದ ಕಾಣಬೇಕು. ಇವರಿಗೆ ಸಕಲ ಸವಲತ್ತುಗಳನ್ನು ಕೊಟ್ಟು ಪ್ರೋತ್ಸಾಹ ಕೊಡಬೇಕು. ಹೀಗೆ ಪ್ರೋತ್ಸಾಹ ಕೊಡುವುದರಿಂದ ಭಾವೈಕ್ಯತೆಯ ಹೂಗಳು ನಮ್ಮ ಹೃದಯದಲ್ಲಿ ಅರಳುವುದಕ್ಕೆ ಸಾಧ್ಯ ಇದೆ. ಪ್ರಜಾಪ್ರಭುತ್ವ ಯಶಸ್ವಿಯಾಗುವುದಕ್ಕೆ ಸಾಧ್ಯ ಇದೆ. ಇದರಿಂದ ಸಾಮಾಜಿಕ ಕ್ರಾಂತಿಗೆ ದಾರಿಯಾಗುತ್ತದೆ ಎಂದು ಹೇಳುತ್ತೇನೆ.

ಯಾವುದೇ ಜಾತಿಯ ಗಂಡು ಮತ್ತು ಹೆಣ್ಣು ಪರಸ್ಪರ ಮೆಚ್ಚಿ ವಿವಾಹವಾದರೆ ಅವರಿಗೆ ಮೀಸಲಾತಿಯ ಒಂದು ಪ್ರಮಾಣವನ್ನು ತಾವು ನಿಗದಿ ಮಾಡಬೇಕು. ಉದ್ಯೋಗ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಇದನ್ನು ಕೊಡಬೇಕು. ಕೆಳಜಾತಿ ಮತ್ತು ಮೇಲ್ಜಾತಿ ನಡುವೆ ವಿವಾಹವಾದಾಗ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಿ, ಉಳಿದವರೂ ಆದಾಗ ಅವರಿಗೂ ಆದ್ಯತೆ ಕೊಡಿ. ಅವರು ಈ ರೀತಿ ವಿವಾಹವಾಗಬೇಕಾದರೆ ಅವರ ಮನಸ್ಸಿನಲ್ಲಿ ಒಂದು ಬದಲಾವಣೆ, ಆಂದೋಲನ ನಡೆದಿರುತ್ತದೆ. ಅವರು ಕ್ರಾಂತಿಯ ಕಡೆ ಒಲಿದಿರುವುದರಿಂದ ಇಂತಹ ವಿವಾಹ ಆಗಿದ್ದಾರೆ. ಇವರಿಗೂ ಕೂಡ ಮೀಸಲಾತಿ ಇರಬೇಕು. ಈ ಮೀಸಲಾತಿಗೆ ಆದಾಯದ ಮಿತಿಯನ್ನು ದಯವಿಟ್ಟು ಹಾಕಬೇಡಿ. ಏತಕ್ಕೆಂದರೆ ವರದಕ್ಷಿಣೆಯ ಮೊಟ್ಟಮೊದಲ ಪ್ರಾಮಾಣಿಕ ವಿರೋಧಿಗಳು ಈ ಅಂತರ್ಜಾತಿ ವಿವಾಹಿತರು. ವರದಕ್ಷಿಣೆ ಪಿಶಾಚಿಗಳು ಯಾರು ಎಂದರೆ, ಜಾತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ನಮ್ಮ ಜಾತಿಯಲ್ಲಿ ಮದುವೆಯಾದರೆ ವರದಕ್ಷಿಣೆ ಸಿಗುತ್ತದೆ, ಆದ್ದರಿಂದ ನಮ್ಮ ಜಾತಿಯಲ್ಲೇ ಮದುವೆ ಆಗುತ್ತೇನೆ ಎಂದು ಹೇಳತ್ತಾರಲ್ಲ ಅವರು. ಬಹುಶಃ ನೀವೇನಾದರೂ ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ ನೀಡಿದ್ದೇ ಆದರೆ ವರದಕ್ಷಿಣೆಯ ಹುಟ್ಟನ್ನು ಅಡಗಿಸಬಹುದು. ಇದನ್ನು ತಾವು ಗಮನಿಸಬೇಕು. ಇದು ತುಂಬಾ ಮಾನವೀಯವಾದ ವಿಚಾರ. ಆಮೇಲೆ ಎಷ್ಟೋ ಜನ ಏನು ಮಾತನಾಡುತ್ತಾರೆ ಎಂದರೆ, ನಮಗೆ ವರದಕ್ಷಿಣೆ ಏತಕ್ಕೆ ಬೇಕು ಅಂದರೆ ನೌಕರಿಗಾಗಿ ಎಂದು. ಮೀಸಲಾತಿ ನೀಡಿದರೆ ಯುವಕರಿಂದ ಇಂಥ ಸಂಕುಚಿತ ಆಲೋಚನೆ ದೂರವಾಗಿ ಅವರು ವಿಶಾಲ ದೃಷ್ಟಿಯಿಂದ ಯೋಚನೆ ಮಾಡುವುದಕ್ಕೆ ಶುರು ಮಾಡುತ್ತಾರೆಂದು ಹೇಳುತ್ತಿದ್ದೇನೆ. ಅಂತರ್ಜಾತಿ ವಿವಾಹವಾದವರ ಇನ್ನೊಂದು ಸಮಸ್ಯೆ ಏನು ಅಂದರೆ, ಇವರು ಯಾವುದಾದರೂ ಒಂದು ಜಾತಿಯನ್ನು ಹೇಳಿಕೊಳ್ಳಬೇಕಾಗುತ್ತದೆ. ಇದು ತಪ್ಪು. ಇವರು ಜಾತಿರಹಿತರು, ನಿಜವಾದ ಭಾರತೀಯರು, ಜಾತ್ಯತೀತರು ಎಂದು ಇವರನ್ನು ಗುರುತಿಸು ವಂತಾಗಬೇಕು. ಅಂತರ್ಜಾತಿ ವಿವಾಹಿತರಿಗೆ, ಅವರ ಮಕ್ಕಳಿಗೆ ಇಷ್ಟು ಪ್ರಮಾಣ ಎಂದು ಮೀಸಲಾತಿ ಕೊಡಬೇಕು. ಜಾತಿಗನುಗುಣವಾಗಿ ನಾವು ಏನು ಮೀಸಲಾತಿ ಪದ್ಧತಿ ಅಳವಡಿಸಿದ್ದೇವೆ ಅದು ಕ್ರಮೇಣ ಕಡಿಮೆಯಾಗಿ, ಜಾತಿರಹಿತರಿಗೆ ಅನುಗುಣವಾಗಿ ಮೀಸಲಾತಿ ತರುವುದು ಹೆಚ್ಚಾಗಬೇಕು. ಈ ನಮ್ಮ ಸಮಾಜ ಹಂತಹಂತವಾಗಿ ಜಾತಿರಹಿತ ಪದ್ಧತಿ ಕಡೆಗೆ ನಡೆಯಬೇಕೆಂದು ಹೇಳುತ್ತೇನೆ.

ಮಾನ್ಯ ಉಪಸಭಾಪತಿಯವರೇ, ಈ ಸದನದಲ್ಲಿ ತಮ್ಮನ್ನೂ ಒಳಗೊಂಡಂತೆ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ವಿಚಾರ ಮಾಡಿ, ಅನುಭವವಿರುವಂಥ ದೊಡ್ಡ ವ್ಯಕ್ತಿಗಳು ಇದ್ದಾರೆ. ನಿಜವಾಗಿ ಇವರಿಗೆ ದೇಶಭಕ್ತಿ ಇದೆ. ಇಂತಹ ಹಿರಿಯರ ಗುಂಪಿನಲ್ಲಿ ಕಿರಿಯವನಾಗಿ ನಾನೂ ಒಬ್ಬ ಇದ್ದೇನೆ ಎಂದು ಸಂತೋಷವಾಗಿದೆ. ದಯಮಾಡಿ ಈ ನಿರ್ಣಯವನ್ನು ಸದಸ್ಯರು ಸ್ವಾಗತ ಮಾಡಬೇಕು, ಬೆಂಬಲಿಸಬೇಕು. ಹಾಗೆಯೇ ಈ ನಿರ್ಣಯವನ್ನು ಶಿಫಾರಸ್ಸು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಸಭಾಪತಿಯವರು : ಇದರ ಬಗ್ಗೆ ಮಾತನಾಡುವುದಕ್ಕೆ ಈಗಾಗಲೇ ಇಂಡಿಕೇಷನ್ ತೋರಿಸಿರತಕ್ಕವರು—ಶ್ರೀಮತಿ ಲಲಿತಾ ನಾಯಕ್, ತಿಪ್ಪಯ್ಯ, ಸುದರ್ಶನ್, ಡಿ.ಬಿ. ರಾಜು, ಸೊರಗಾವಿ, ಡಾ। ನಾಡಗೌಡ, ಕೋಣಂದೂರು ಲಿಂಗಪ್ಪ, ಶಂಕರ್ ಮತ್ತು ಬಿ.ಎಂ. ಮೆಣಸಿನಕಾಯಿಯವರು.

ಎಂ.ಸಿ. ನಾಣಯ್ಯ : ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶ್ರೀ ಸಿದ್ಧಲಿಂಗಯ್ಯನವರು ಖಾಸಗಿ ನಿರ್ಣಯವನ್ನು ಮಂಡಿಸಿದ್ದಾರೆ. ಬಹುಶಃ ಅವರು ಇವತ್ತು ಈ ನಿರ್ಣಯವನ್ನು ಮಂಡಿಸದಿದ್ದರೆ ಲ್ಯಾಪ್ಸ್ ಆಗುತ್ತಿತ್ತು. ಅಲ್ಲದೇ ಸದರಿ ನಿರ್ಣಯದ ಬಗ್ಗೆ ಅವರು ಇನ್ನೂ ಹೆಚ್ಚು ಬೆಳಕು ಚೆಲ್ಲಬೇಕಾಗುತ್ತದೆ. ಇನ್ನೂ ಆ ಬಗ್ಗೆ ಅವರ ವಿಚಾರಧಾರೆ ಹೇಳಬೇಕಾಗುತ್ತದೆ. ಇವತ್ತು ಅವರು ಪೂರ್ವಭಾವಿಯಾಗಿ ವಿಚಾರವನ್ನು ಮಂಡಿಸಿದ್ದಾರೆ. ಅದನ್ನು ಪೂರ್ಣ ಪ್ರಮಾಣದಲ್ಲಿ ಚರ್ಚೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಅವರು ಈ ಸಂದರ್ಭದಲ್ಲಿ ಕೊಟ್ಟಿರುವಂಥ ನಿರ್ಣಯವನ್ನು ನಾನು ಅನುಮೋದನೆ ಮಾಡುತ್ತೇನೆ. ಸಂಪ್ರದಾಯವಾಗಿ ಆ ಪದ್ಧತಿ ಇಲ್ಲ. ಹಾಗೆಂದು ಕಾನೂನು ಪ್ರಕಾರವಾಗಿಯೂ ಇರಬೇಕು ಎಂದೂ ಭಾವಿಸಬೇಕಾಗಿಲ್ಲ. ಇದನ್ನು ತಾವು ಸ್ವೀಕಾರ ಮಾಡಿ ಮುಂದಿನ ಅಧಿ ವೇಶನದಲ್ಲಿ ಪೂರ್ಣ ಪ್ರಮಾಣದ ಚರ್ಚೆಗೆ ಇಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಪಿ. ತಿಪ್ಪಯ್ಯ : ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಂತ್ರಿಗಳು ಸಹ ಇವತ್ತು ಇಲ್ಲ.

ಉಪ ಸಭಾಪತಿಯವರು : ಮಾನ್ಯ ಸದಸ್ಯರು ಆ ನಿರ್ಣಯವನ್ನು ಇವತ್ತು ಮೂವ್ ಮಾಡದಿದ್ದರೆ ಲ್ಯಾಪ್ಸ್ ಆಗುತ್ತಿತ್ತು. ಅವರು ಮೂವ್ ಮಾಡಿದ್ದಾರೆ. ಮತ್ತೆ ಮಾನ್ಯ ನಾಣಯ್ಯನವರು ಅದಕ್ಕೆ ಸಂಬಂಧಪಟ್ಟ ಹಾಗೆ ಈಗ ಕೆಲವು ಮಾತುಗಳನ್ನು ಹೇಳಿದರು. ಇನ್ನು ಅನೇಕ ಜನ ಸದಸ್ಯರು ಮಾತನಾಡುವ ಅಭಿಲಾಷೆಯನ್ನು ತೋರಿಸಿದ್ದಾರೆ. ಮಾನ್ಯ ಸದಸ್ಯರು ಒಪ್ಪಿದರೆ ಇನ್ನು ಸ್ವಲ್ಪ ಹೊತ್ತು ನಾವು ಚರ್ಚೆ ಮಾಡೋಣ.

ಎಂ.ಸಿ. ನಾಣಯ್ಯ : ಮಾನ್ಯ ಉಪ ಸಭಾಪತಿಯವರೇ, ನಾನು ಬೆಳಗ್ಗೆ ೯.೩೦ ಗಂಟೆಗೆ ಸೇರಿದ್ದೇವೆ. ದಯಮಾಡಿ ತಾವು ನಮಗೆ ಸ್ವಲ್ಪ ಬಿಡುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪ ಸಭಾಪತಿಯವರು : ಈಗ ಸಭೆಯನ್ನು ಮುಂದೂಡಿ ಮತ್ತೆ ದಿನಾಂಕ ೨–೩–೯೦ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿದ್ದೇವೆ.

೩೦–೧೧–೧೯೯೦

ಡಾ. ಸಿದ್ಧಲಿಂಗಯ್ಯ: ಸನ್ಮಾನ್ಯ ಉಪಸಭಾಪತಿಯವರೇ, ರಾಜ್ಯದಲ್ಲಿ ಅಂತರ್ಜಾತಿ ವಿವಾಹ ಆದವರಿಗೆ, ಅವರುಗಳ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶದಲ್ಲಿ ಶೇಕಡಾ ಐದರಷ್ಟು ಮೀಸಲಾತಿ ನಿಮಯವನ್ನು ಜಾರಿಗೊಳಿಸಬೇಕೆಂದು ಈ ಸದನವು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆನ್ನುವ ನಿರ್ಣಯವನ್ನು ೬೬ನೆಯ ಅಧಿವೇಶನದಲ್ಲಿ ಪ್ರಥಮಬಾರಿಗೆ ಮಂಡಿಸಿದ್ದೇನೆ.

ಈಗ ೬೮ನೇ ಅಧಿವೇಶನದಲ್ಲಿ ಮತ್ತೆ ಮುಂದುವರಿಸುತ್ತಿದ್ದೇನೆ. ನನ್ನ ನಿರ್ಣಯ ಸ್ವಲ್ಪ ವಿಳಂಬವಾಯಿತು. ಆದರೂ ಇವತ್ತು ಇದು ಮತ್ತೆ ಪ್ರಸ್ತಾಪವಾಗುತ್ತಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ.

ಮಾನ್ಯ ಉಪ ಸಭಾಪತಿಗಳೇ, ತಾವು ಜಾತಿ ವಿರೋಧಿ ಸಮರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಜಾತಿ ಪದ್ಧತಿ ನಿರ್ಮೂಲನಕ್ಕೆ ನಿಮ್ಮ ಕಳಕಳಿ ಅಭಿಮಾನ ವ್ಯಕ್ತಪಡಿಸುತ್ತೀರೆಂಬ ವಿಶ್ವಾಸವಿದೆ. ಈ ಸಮಯದಲ್ಲಿ ಮುಖ್ಯವಾದ ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಮಂಡಿಸುತ್ತೇನೆ. ಕಳೆದ ಬಾರಿ ನಾನು ನಿರ್ಣಯವನ್ನು ಮಂಡಿಸಿದ ಮೇಲೆ ಈ ದೇಶದಲ್ಲಿ ಕೆಲವು ಘಟನೆಗಳು ಸಂಭವಿಸಿವೆ. ಮೀಸಲಾತಿಯನ್ನು ಕುರಿತು ಕೆಲವರು ಪ್ರಶ್ನೆ ಮಾಡಿದ್ದಾರೆ. ಮೀಸಲಾತಿ ನಿಯಮದ ಬಗ್ಗೆ ವಾದ ವಿವಾದಗಳು ಉಂಟಾಗಿವೆ. ಆದರೆ ಈ ವಾದವಿವಾದಗಳಿಂದ ಸದರಿ ನಿರ್ಣಯದ ಶಕ್ತಿ ಕುಗ್ಗಿಲ್ಲವೆಂದು ನಾನು ಭಾವಿಸುತ್ತೇನೆ. ಅಲ್ಲದೇ ಈ ಅವಧಿಯಲ್ಲಿ ಈ ನಿರ್ಣಯಕ್ಕೆ ಇನ್ನೂ ಹೆಚ್ಚಿನ ಮಹತ್ವ ಬಂದಿದೆ.

ನಾವೆಲ್ಲರೂ ಇಷ್ಟಪಟ್ಟಿದ್ದು, ಸಂವಿಧಾನ ಕರ್ತೃಗಳು, ರಾಷ್ಟ್ರ ನಿರ್ಮಾಪಕರು ಎಲ್ಲರೂ ಕೂಡ ಬಯಸಿದ್ದು ಇದೇ ಆಗಿದೆ. ನಮ್ಮ ಸಮಾಜ ಜಾತಿರಹಿತ ಸಮಾಜವಾಗಬೇಕು, ವರ್ಗರಹಿತ ಸಮಾಜವಾಗಬೇಕು ಎಂಬುದು. ಜಾತಿರಹಿತ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ಹೋಗಲಿಕ್ಕೆ ಈ ಸದನ ಈ ನಿರ್ಣಯವನ್ನು ಅಂಗೀಕರಿಸಿದರೆ ಖಂಡಿತಾ ಅದೊಂದು ದಿಟ್ಟ ಹೆಜ್ಜೆ ಎನಿಸಿಕೊಳ್ಳುತ್ತದೆ.

ಈ ಜಾತಿ ಪದ್ಧತಿಯ ಬಗ್ಗೆ ನಾನು ಮತ್ತೆ ತುಂಬಾ ದೀರ್ಘವಾಗಿ ಹೇಳಬೇಕಾದ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಇದರ ಬಗ್ಗೆ ತಮಗೂ ಗೊತ್ತಿದೆ. ಇವತ್ತು ಈ ದೇಶದಲ್ಲಿ ಅನೈಕ್ಯತೆಯಿದ್ದರೆ, ನಮ್ಮ ಮನಸ್ಸು ಛಿದ್ರಛಿದ್ರವಾಗಿದ್ದರೆ, ನಮ್ಮೆಲ್ಲರ ಮೇಲೆ ಪರಕೀಯರ ದಾಳಿ ನಡೆದಿದ್ದರೆ, ಅದಕ್ಕೆ ನಮ್ಮ ದೈಹಿಕ ದೌರ್ಬಲ್ಯ ಕಾರಣವಲ್ಲ. ಮನಸ್ಸಿನ ದೌರ್ಬಲ್ಯ ಎನ್ನುವುದನ್ನು ನಾವೆಲ್ಲ ತಿಳಿದುಕೊಳ್ಳಬೇಕಾಗಿದೆ. ಜಾತಿಯ ವಿಭಜನೆಯಿಂದಲೇ ನಮ್ಮೆಲ್ಲರ ಮೇಲೆ ಪರಕೀಯರ ದಾಳಿಯಾಯಿತು. ಇವತ್ತು ದೇಶದಲ್ಲಿ ದುರಂತಗಳು ಏನಾಗುತ್ತಿವೆ, ಇಡೀ ಚರಿತ್ರೆಯಲ್ಲಿ ಯಾವ್ಯಾವ ದುರಂತಗಳು ಸಂಭವಿಸಿವೆ ಆ ಎಲ್ಲಾ ಮುಖ್ಯವಾದ ದುರಂತಗಳ ಬಗ್ಗೆ ಬಹುಸಂಖ್ಯಾತ ಜನಗಳು ನಿರಾತಂಕವಾಗಿದ್ದರು ಮತ್ತು ಅನಾಮಧೇಯ ಪ್ರೇಕ್ಷಕರಾಗಿದ್ದರು. ಇದಕ್ಕೆ ಜಾತಿ ಪದ್ಧತಿ ಕಾರಣ ಎಂದು ನನ್ನ ಭಾವನೆ. ಏಕೆಂದರೆ ಜಾತಿ ಪದ್ಧತಿ ಇದ್ದುದರಿಂದ ಅವರು ರಾಷ್ಟ್ರೀಯ ಭಾವನೆಯನ್ನು ಇಟ್ಟುಕೊಳ್ಳಲಿಲ್ಲ. ದೇಶ ಮತ್ತು ಜಾತಿ ನಡುವೆ ಆಯ್ಕೆ ಪ್ರಶ್ನೆ ಬಂದಾಗ ನಮ್ಮಲ್ಲಿ ಎಷ್ಟು ಅಜ್ಞಾನವಿದೆ ಅಂದರೆ ನಾವು ಆಯ್ಕೆ ಮಾಡಿಕೊಳ್ಳುವುದು ಜಾತಿಯನ್ನು.

ಅನೇಕ ಸಂದರ್ಭಗಳಲ್ಲಿ ಈ ಜಾತಿಪದ್ಧತಿ ಒಂದು ಮಹಾ ದುರಂತವಾಗಿ, ಈ ರಾಷ್ಟ್ರದ ಶತ್ರುವಾಗಿ ಪಾತ್ರ ನಿರ್ವಹಿಸಿದೆ. ಜಾತಿ ಪದ್ಧತಿಯ ಅನಾಹುತ ಏನು ಎಂದರೆ, ನಮ್ಮ ಸಮಾಜದೊಳಗೆ ಶ್ರೇಣೀಕೃತ ವ್ಯವಸ್ಥೆ ಇರುವುದರಿಂದ, ಇದು ಅನೇಕ ಜಾತಿಗಳನ್ನು ಸೃಷ್ಟಿಸಿರುವುದು. ಯಾವುದೇ ಒಂದು ಜಾತಿಯವರು ಒಂದೇ ರೀತಿಯ ಯೋಜನೆ ಮಾಡುತ್ತಾರೆ ಎಂದು ಸಮಾಜಶಾಸ್ತ್ರಜ್ಞರು ಮತ್ತು ಮನೋವಿಜ್ಞಾನಿಗಳು ಆಳವಾದ ಅಧ್ಯಯನ ಮಾಡಿ ಅಭಿಪ್ರಾಯಪಟ್ಟಿದ್ದಾರೆ. ಅಂದಾಗ ಈ ದೇಶದ ಪ್ರತಿಯೊಂದು ಜಾತಿಯಲ್ಲಿ ಶೇಕಡ ೮೦ರಷ್ಟು ಜನ ಒಂದೇ ರೀತಿಯ ಯೋಚನೆ ಮಾಡುತ್ತಿದ್ದಾರೆ ಅಂದಂತಾಯ್ತು. ಶೇಕಡಾ ೨೦ರಷ್ಟು ಜನ ಮಾತ್ರ ಉದಾರವಾಗಿ ತಮ್ಮ ಜಾತಿಗಿಂತ ಭಿನ್ನವಾಗಿ ಯೋಚನೆ ಮಾಡುತ್ತಾರೆ. ಹೀಗಾದಾಗ ಪ್ರಜಾಪ್ರಭುತ್ವ ಯಶಸ್ವಿಯಾಗುವುದಕ್ಕೆ ಸಾಧ್ಯವೇ? ಇಂಥ ದುರಂತವನ್ನು ಸೃಷ್ಟಿಸಿರುವುದಕ್ಕೆ ನಾವೆಲ್ಲರೂ ನಾಚಿಕೆ ಪಡಬೇಕು; ಸಂಕಟ ಪಡಬೇಕು.

ಪಂಡಿತ ಜವಾಹರಲಾಲ್ ನೆಹರೂರವರು ಒಂದು ಮಾತನ್ನು ಹೇಳಿದ್ದರು. "ಇವತ್ತಿನ ಸಂಘರ್ಷ ಇರುವುದು ಜಾತಿ ಪದ್ಧತಿ ಮತ್ತು ಪ್ರಜಾಪ್ರಭುತ್ವದ ನಡುವೆ. ಸಂಘರ್ಷ ಉಂಟಾಗಿರತಕ್ಕದ್ದು ಈ ಎರಡು ದೊಡ್ಡ ಶಕ್ತಿಗಳ ನಡುವೆ. ನೀವು ಜಾತಿಯನ್ನು ಆಯ್ಕೆ ಮಾಡಿಕೊಳ್ಳಿರಿ, ಇಲ್ಲ ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳಿರಿ'' ಎಂದು ಅವರು ಹೇಳಿದ್ದಾರೆ. ಪ್ರಜಾಪ್ರಭುತ್ವ ಉಳಿಯಬೇಕು ಎಂದರೆ ಜಾತಿ ಅಳಿಯಬೇಕು. ಆದ್ದರಿಂದ ಪ್ರಜಾಪ್ರಭುತ್ವಕ್ಕೆ ಜಯ ತರುವ ಕೆಲಸವನ್ನು ನಾವು ಮಾಡಬೇಕಾದರೆ ಜಾತಿ ಪದ್ಧತಿಯನ್ನು ನಾಶ ಮಾಡಬೇಕು. ಅದು ದೇಶದ ಸಾರ್ವಜನಿಕ ಜೀವನದಿಂದ ಅಷ್ಟೇ ಅಲ್ಲ. ನಮ್ಮ ಮನಸ್ಸು, ಚಿಂತನೆಯಿಂದ ಕೂಡ ಉಚ್ಚಾಟನೆ ಮಾಡಬೇಕು. ಈ ದಿಕ್ಕಿನಲ್ಲಿ ಇಂದು ನಾವೆಲ್ಲ ಯೋಚನೆ ಮಾಡಬೇಕು.

ಇವತ್ತು ನಮ್ಮ ಸಮಾಜ ಸಾಮಾಜಿಕವಾಗಿ ಎರಡು ರೀತಿಯಲ್ಲಿ ವಿಭಜನೆಗೊಂಡಿದೆ. ತಮಗೆ ಈ ವಿಷಯದಲ್ಲಿ ನಂಬಿಕೆ ಇರುವುದರಿಂದ, ತಾವು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಈ ಮಾತನ್ನು ನಾನು ಹೇಳುತ್ತಿದ್ದೇನೆ. ಮೇಲ್ಜಾತಿಯವರು ಸಮಾಜವನ್ನು ನೋಡುವ ದೃಷ್ಟಿ ತುಂಬಾ ಅನಾರೋಗ್ಯಕರವಾಗಿದೆ. ಇವರಿಗೆ ಮೇಲ್ಜಾತಿಯ ಹುಟ್ಟಿನಲ್ಲಿ ಹೆಮ್ಮೆ ಇದ್ದು, ತಮ್ಮ ಜಾತಿಯಲ್ಲಿ ಹುಟ್ಟಿದವರನ್ನು ಸ್ವಚ್ಛರು ಎಂಬಂತೆ ಭಾವಿಸುತ್ತಾರೆ. ನಾಜೂಕು ಜನ ಎಂದು ನಂಬುತ್ತಾರೆ. ಆದರೆ ಮೇಲ್ಜಾತಿಯ ಜನರ ನಾಜೂಕುತನ, ಜಾಣತನದ ಹಿಂದೆ ನಯವಂಚನೆಯ ಮುಖವಾಡ ಇದೆಯೆಂದು ನಾನು ಭಾವಿಸುತ್ತೇನೆ. ಕೆಳವರ್ಗದವರು ಯಾರು ಇದ್ದಾರೆ, ಅವರು ಇವತ್ತು ಜಡವಾಗಿದ್ದಾರೆ, ನಿರ್ಜೀವವಾಗಿದ್ದಾರೆ. ಕೀಳರಿಮೆಯಿಂದ ಕುದಿಯುತ್ತಿದ್ದಾರೆ. ಅವರ ಮನಸ್ಸು ವ್ಯಘ್ರಗೊಂಡಿದೆ. ಇದು, ಜಾತಿ ಪದ್ಧತಿ ಮೇಲ್ಜಾತಿಯವರನ್ನು ಮಾತ್ರವಲ್ಲ, ಕೆಳದರ್ಜೆಯವರನ್ನು ಕೂಡ ನಾಶಪಡಿಸಿದೆ ಎಂಬುದನ್ನು ಹೇಳುತ್ತದೆ. ಇವತ್ತು ಮಾನಸಿಕವಾಗಿ ಇಬ್ಬರೂ ಮೃತರಾಗಿದ್ದಾರೆ.

ಆದರೂ ಈ ಜಾತಿಪದ್ಧತಿ ಏಕೆ ಉಳಿದುಕೊಂಡು ಬಂದಿದೆ? ಇಷ್ಟೊಂದು ಅಪಾಯಕಾರಿಯಾಗಿದ್ದಿದ್ದರೆ ಈ ಜಾತಿ ಪದ್ಧತಿ ಎಂದೋ ನಾಶವಾಗಬೇಕಿತ್ತು. ಸಾವಿರಾರು ವರ್ಷಗಳಿಂದ ಮಹಾತ್ಮರೆಲ್ಲರು ಪ್ರಯತ್ನಪಟ್ಟರೂ ಇದನ್ನು ಹೋಗಿಸಲಾಗಿಲ್ಲ. ಇದಕ್ಕೆ ಒಂದು ಕಾರಣ ಇದೆ. ಜಾತಿಪದ್ಧತಿ ಶ್ರೇಣೀಕೃತವಾಗಿದೆಯೆಂದು ನಾನು ಆವಾಗಲೇ ಹೇಳಿದೆ. ಇದು ಏಣಿ ಇದ್ದಹಾಗೆ. ಒಂದು ಮೆಟ್ಟಿಲನ್ನು ಒಬ್ಬ ಹತ್ತಿರುತ್ತಾನೆ. ಹತ್ತುತ್ತಿದ್ದಂತೆ ಅವನು ಕೆಳಗೆ ತುಳಿಯುತ್ತಿರುತ್ತಾನೆ. ಒಬ್ಬನ ಕಾಲಿನಿಂದ ತಾನು ತುಳಿಯಲ್ಪಡುತ್ತಿದ್ದರೂ ತಾನು ಇನ್ನೊಬ್ಬನ ತಲೆಯನ್ನು ತುಳಿಯುತ್ತಿದ್ದೆನೆ ಎನ್ನುವ ಒಂದು ಬಗೆಯ ಮಾನಸಿಕ ತೃಪ್ತಿ ಆತನಿಗೆ. ಮೇಲ್ಜಾತಿ, ಕೆಳಜಾತಿ, ಮಧ್ಯಮಜಾತಿ ಎಂದು ಒಂದು ಪದ್ಧತಿಗೆ ಒಗ್ಗಿರುವುದರಿಂದ ಈ ಜಾತಿ ಪದ್ಧತಿಯೊಳಗೆ ಒಂದು ವಿಕೃತ ರೀತಿಯ ಮಾನಸಿಕ ತೃಪ್ತಿ ಇದೆ. ಅಂದರೆ ನನಗಿಂತ ಮೇಲ್ಜಾತಿಯವರು ಇರಬಹುದು. ಆದರೆ ನನಗಿಂತ ಕೆಳಜಾತಿಯವರು ಕೂಡ ಇದ್ದಾರೆ ಎನ್ನುವ ನೆಮ್ಮದಿ, ಸಮಾಧಾನ. ಬಹುಶಃ ಈ ಒಂದು ಮನೋವಿಕಾರವಾದ ಮಾನಸಿಕ ಸಮತೋಲನದಿಂದಲೇ ಇಷ್ಟು ವರ್ಷಗಳಿಂದ ಈ ಜಾತಿಪದ್ಧತಿ ಮುಂದುವರೆದುಕೊಂಡು ಬಂದಿದೆ. ಹೀಗೆಂದು ಈ ಸಮತೋಲನವನ್ನು ನಾನು ಸ್ವಾಗತಿಸಬೇಕಾದ್ದಿಲ್ಲ. ಇದು ಒಳ್ಳೆಯ ವಿಚಾರ ಕೂಡ ಅಲ್ಲ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅತ್ಯುತ್ತಮವಾದ ಪ್ರತಿಭೆ

ಬಂದಿರುವಂಥದ್ದು ತುಳಿಯಲ್ಪಟ್ಟ ಜಾತಿಗಳಿಂದ ಎಂಬುದನ್ನು ನಾವು ಮರೆಯುವಂತಿಲ್ಲ. ಮೇಲ್ಜಾತಿಯಲ್ಲಿ ಪ್ರತಿಭಾವಂತರು ಇದ್ದಾರೆ. ಆದರೆ ಕೆಳಜಾತಿಯಲ್ಲಿನ ಪ್ರತಿಭಾವಂತರನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಮಾಜಕ್ಕೆ ಚೈತನ್ಯವನ್ನು, ಚಾಲನೆಯನ್ನು, ಮನುಷ್ಯತ್ವವನ್ನು ತಂದುಕೊಟ್ಟವರು ತುಳಿಯಲ್ಪಟ್ಟಜಾತಿಯ ಜನಗಳು, ವರ್ಣ ಸಂಕರದಿಂದ ಹುಟ್ಟಿದ ಜನಗಳು ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಬಸವಣ್ಣನವರು ಹೇಳಿದ್ದಾರೆ:

"ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು–ಕುಲವನರಸದಿರಿಂ ಭೋ–ಕೋಲದಿಂ ಮುನ್ನೇನಾದಿರಿಂ ಭೋ? ಸಾಕ್ಷಾದಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾಯಿಂದ ಕಾಣಿ ಭೋ। ನಮ್ಮ ಕೂಡಲ ಸಂಗನ ವಚನವಿಂತೆಂದುದು:...."

ಹೀಗೆ ಬಸವಣ್ಣನವರು ತುಂಬಾ ದೊಡ್ಡ ಮಾತನ್ನಾಡಿದ್ದಾರೆ. ಬಹುಶಃ ಇವತ್ತು ನಮ್ಮ ಸಮಾಜವನ್ನು ಸುಡುತ್ತಿರುವ ಅನೇಕ ಸಮಸ್ಯೆಗಳಿಗೆ ಬಸವಣ್ಣನವರ ವಚನದಲ್ಲಿ ಉತ್ತರ ಇದೆ. ಆದರೆ, ಅವರು ಕಂಡ ಕನಸು ನನಸಾಗಲಿಲ್ಲ. ಅವರು ಯಾವ ಒಂದು ವರ್ಗರಹಿತ, ಜಾತಿ ರಹಿತ ಸಮಾಜದ ಸೃಷ್ಟಿಯನ್ನು ಬಯಸಿದರೋ ಅದು ಆಗಲಿಲ್ಲ. ಅವರ ತತ್ವವನ್ನು ಮತ್ತು ವಿಚಾರವನ್ನು ನಾವು ಮತ್ತೆ ಪುನರ್ ಪರಿಶೀಲನೆ ಮಾಡಿ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ. ವರ್ಣಸಂಕರದ ಫಲ ನಮ್ಮ ಸಮಾಜದಲ್ಲಿ ಒಂದು ಅಪರಾಧವಲ್ಲ. ವರ್ಣಸಂಕರ ಹಿಂದಿನಿಂದಲೂ ಇದ್ದದ್ದೇ. ವಿದುರ ವರ್ಣಸಂಕರದಿಂದ ಹುಟ್ಟಿದವನು. ಮಹಾಜ್ಞಾನಿ. ನಮ್ಮ ಸಂಸ್ಕೃತಿಯಲ್ಲಿ ನಾವೆಲ್ಲಾ ಅವನನ್ನು ಗೌರವಿಸುತ್ತೇವೆ. ಸತ್ಯಕಾಮಜಾಬಾಲಿ ವರ್ಣಸಂಕರದ ಫಲ, ಅವನೂ ಒಬ್ಬ ಮಹಾಜ್ಞಾನಿ, ಅವನನ್ನು ನಾವು ಇವತ್ತು ಗೌರವಿಸುತ್ತೇವೆ. ಮೇಲ್ಜಾತಿ ಮತ್ತು ಕೆಳಜಾತಿಯ ಸಂಪರ್ಕದಿಂದ ಹುಟ್ಟಿದಂಥ ಸರ್ವಜ್ಞ ಇವತ್ತು ಮಹಾನ್ ವ್ಯಕ್ತಿ. ಬಹುಶಃ ಕರ್ನಾಟಕದಲ್ಲಿ ಅಂತರ್ಜಾತಿ ವಿವಾಹದಿಂದ ಹುಟ್ಟಿದ ಯಾರು ಮಹಾ ವ್ಯಕ್ತಿಗಳಿದ್ದಾರೆ ಅವರಲ್ಲಿ ಸರ್ವಜ್ಞನೇ ದೊಡ್ಡವನು. ಸರ್ವಜ್ಞನ ಹೆಸರನ್ನು ಈ ಸಂದರ್ಭದಲ್ಲಿ ಅಭಿಮಾನದಿಂದ ಮತ್ತು ಹೆಮ್ಮೆಯಿಂದ ನೆನೆಸಿಕೊಳ್ಳುತ್ತೇನೆ. ಸರ್ವಜ್ಞ ಹೇಳಿದ್ದಾನೆ,

"ಊರೆಲ್ಲಾ ನೆಂಟರು, ಕೇರಿಯೆಲ್ಲವೂ ಬಳಗ,
ಧಾರುಣಿಯ ಕುಲದೈವ, ಆರನ್ನು ಬಿಡದು
ಸರ್ವಜ್ಞ"

ಊರೆಲ್ಲಾ ನೆಂಟರು ಎಂದು ಹೇಳಬೇಕಾದರೆ, ಬಹುಶಃ ಆವತ್ತಿನ ಸಾಮಾಜಿಕ, ಸಾಂಪ್ರದಾಯಿಕ ವೈಷಮ್ಯ ಆ ರೀತಿ ಇದ್ದಿರಬೇಕು. ಸ್ವಾಮಿ, ಬಸವಣ್ಣನವರಿಂದ ಹಿಡಿದು ಇಲ್ಲಿಯವರೆಗೆ ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಮತ್ತು ಅರ್ಥಶಾಸ್ತ್ರಜ್ಞರೆಲ್ಲರೂ ಕೂಡ ಹೇಳಿದ್ದಾರೆ. ಜಾತಿ ವೃತ್ತಿ ಮೂಲವಾದುದು ಎನ್ನುವುದನ್ನು

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನ್ನೋದಿ
ಹಾರುವನಾದ"

ಅಂದರೆ ಜಾತಿ ವೃತ್ತಿಮೂಲವಾದುದು. ಆದರೆ ಇವತ್ತು ಏನಾಗಿದೆ, ವೃತ್ತಿ ಮೂಲತೆಯನ್ನು ಅದು ಕಳೆದುಕೊಂಡಿದೆ. ನಮ್ಮ ಸಾಮಾಜಿಕ ಬೆಳವಣಿಗೆ, ನಗರೀಕರಣ ಹಾಗೂ ಕೈಗಾರಿಕೀಕರಣದ ಕಾರಣದಿಂದ ಜಾತಿ ತನ್ನ ವೃತ್ತಿ ಮೂಲವನ್ನು ಕಳೆದುಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ.

ಇವತ್ತು ವರ್ಣಾಶ್ರಮ ಶಿಥಿಲಗೊಂಡಿದೆ. ಬ್ರಾಹ್ಮಣನಾದವನು ಕೂಡ ಬೇರೆ ಬೇರೆ ಉದ್ಯೋಗವನ್ನು ಅವಲಂಬಿಸಿದ್ದಾನೆ. ಕ್ಷತ್ರಿಯನಾದವನು ಶಿಕ್ಷಕನಾಗಿರುವುದನ್ನು ನೋಡುತ್ತಿದ್ದೇವೆ. ವೈಶ್ಯ ವೈದ್ಯನಾಗಿರುವುದನ್ನು, ಶೂದ್ರ ಸೈನಿಕನಾಗಿರುವುದನ್ನು ನೋಡುತ್ತಿದ್ದೇವೆ. ಅಂದರೆ, ಜಾತಿ ವ್ಯವಸ್ಥೆ ಹಿನ್ನೆಲೆಗಿದ್ದ ಒಂದೇ ಒಂದು ಆದಾರಸ್ತಂಭ ಇಂದು ಕಳಚಿಕೊಂಡಿದೆ. ಈ ಹಿನ್ನೆಲೆಯಲ್ಲಿ ಒಂದು ಜಾತಿಗೂ ಇನ್ನೊಂದು ಜಾತಿಗೂ ವಿವಾಹ ಆಗಬೇಕೆನ್ನುವವರು ಏನು ಹೇಳಬೇಕಾಗಿತ್ತು, ಒಂದು ವೃತ್ತಿಯವರಿಗೂ ಇನ್ನೊಂದು ವೃತ್ತಿಯವರಿಗೂ ಮದುವೆ ಆಗಬೇಕು ಎಂದು ಹೇಳಬೇಕಾಗಿತ್ತು. ನಮ್ಮ ಜಾತಿಯ ಘಟಕ ವೃತ್ತಿ ಮೂಲವೇ ಆಗಬೇಕಾಗಿತ್ತು. ಅದು ಆಗಿಲ್ಲ. ಹೀಗಾಗಿ ತನ್ನ ವೃತ್ತಿ ಮೂಲವನ್ನು ಕಳೆದುಕೊಂಡು ಪೊಳ್ಳಾಗಿರುವಂಥ ಜಾತಿ ವ್ಯವಸ್ಥೆ ಏನಿದೆ, ಇದು ಒಂದು ಆದರ್ಶವೇ ಹೊರತು ವಾಸ್ತವವಲ್ಲ, ಕೆಟ್ಟ ಹಂಬಲವೇ ಹೊರತು ಸಹಜವಾದ ಸತ್ಯವಲ್ಲ. ಏಕೆಂದರೆ, ಜಾತಿಯ ಪ್ರಕಾರ ಯಾವತ್ತೂ ಯಾವುದನ್ನೂ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಇವತ್ತು ಜಾತಿಯನ್ನು ಉಳಿಸಿಕೊಳ್ಳಬೇಕೆಂಬ ಹಂಬಲ ಕೆಲವರಿಗೆ ಇರಬಹುದು. ಆದರೆ, ವಿಜ್ಞಾನ ಇಷ್ಟೊಂದು ವೇಗದಲ್ಲಿ ಬೆಳೆದು, ಆಧುನಿಕತೆ ಹೇಗೆಲ್ಲಾ ಪರಿಚಿತವಾಗುತ್ತಿದೆಯೆಂದರೆ ಜಾತಿ ಎನ್ನುವುದು ಅನಿವಾರ್ಯವಾಗಿ ಕ್ಷೀಣಿಸುವ ಮೌಲ್ಯ ಆಗಿದೆ. ಈ ಒಂದು ಹೋರಾಟದಲ್ಲಿ ವಿಜ್ಞಾನದ ಕೊಡುಗೆಯೂ ತುಂಬಾ ದೊಡ್ಡದು, ಇದು ಇಷ್ಟಕ್ಕೇ ನಿಲ್ಲದೆ ಜನತೆಯ ಹೋರಾಟ ಕೂಡ ಆಗಬೇಕು ಮತ್ತು ಇದರಲ್ಲಿ ನಮ್ಮೆಲ್ಲರ ಪಾತ್ರಕೂಡ ಜಾಸ್ತಿ ಇದೆ. ಇಲ್ಲಿಯೇ ಇನ್ನೊಂದು ಮಾತು ಹೇಳುತ್ತೇನೆ. ಜಾತಿ ಎನ್ನುವುದು ಒಂದು ಮಾನವೀಯತೆ. ಈ ಮಾನವೀಯತೆಯು ಎಷ್ಟೊಂದು ಅಮಾನವೀಯವಾಗಿದೆ ಎಂದು ಹೇಳಿದರೆ, ಒಬ್ಬ ಮನುಷ್ಯ ತನ್ನ ಜಾತಿಯ ವ್ಯಕ್ತಿಗಳಲ್ಲಿ ಗುಣವನ್ನೂ, ಅನ್ಯ ಜಾತಿಯ ವ್ಯಕ್ತಿಗಳಲ್ಲಿ ಅವಗುಣವನ್ನೂ ಬಹಳ ಸಹಜವಾಗಿ ಕಾಣುತ್ತಾನೆ. ಇದಕ್ಕಿಂತ ರಾಷ್ಟ್ರವಿರೋಧಿ ಚಿಂತನೆ ಯಾವುದಾದರೂ ಇದೆಯೇ? ತನ್ನ ಜಾತಿಯಲ್ಲಿ ಗುಣವನ್ನು ಕಂಡು, ಅನ್ಯ ಜಾತಿಯಲ್ಲಿ ಅವಗುಣವನ್ನು ಕಾಣುವವರು ಯಾರಿಗೂ ಕೂಡ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಇದರಿಂದ ಭ್ರಷ್ಟತೆಗೆ ಅವಕಾಶವಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಒಂದು ಜಾತಿಯವನು ಸಾಯುತ್ತಾ ಇದ್ದರೆ, ಅವನು ತನ್ನ ಜಾತಿಯವನಲ್ಲದಿದ್ದರೆ, ಕೆಲವರಿಗೆ ಯಾವುದೇ ಬಗೆಯ ಕನಿಕರ ಕೂಡ ಬರುವುದಿಲ್ಲ. ಮನಸ್ಸು ಅಷ್ಟು ಕ್ರೂರವಾಗುತ್ತದೆ, ಅಮಾನವೀಯವಾಗುತ್ತದೆ. ಆದ್ದರಿಂದ ಈ ಜಾತಿ ಪದ್ಧತಿಯನ್ನು ರಾಷ್ಟ್ರೀಯ ಜೀವದಿಂದ ಮೂಲೋತ್ಪಾಟನೆ ಮಾಡಬೇಕಾದ ತುರ್ತು ಅಗತ್ಯವಿದೆ. ಇದಕ್ಕಾಗಿ ಒಂದು ಸಮರವನ್ನೇ ಮಾಡಬೇಕಾಗಿದೆ. ಈ ಸಮರಕ್ಕಾಗಿ, ಈ ನಿರ್ಣಯ ದೊಡ್ಡ ಕಾಣಿಕೆಯಾಗುತ್ತದೆಂದು ನನ್ನ ನಂಬಿಕೆ.

ಇವತ್ತು ನಾನು, ಸ್ವಾಮಿ ವಿವೇಕಾನಂದರ ಹೆಸರನ್ನು ಬಹಳ ಅಭಿಮಾನದಿಂದ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅವರು ಒಂದು ಮಾತು ಹೇಳಿದ್ದಾರೆ. ಅದು ಬಹಳ ಅರ್ಥಪೂರ್ಣ ಮಾತು. ಅದೇನೆಂದರೆ, "ಜಾತಿ ಭಾವನೆಯೇ ಪರಸ್ಪರರಲ್ಲಿ ಭೇದ ಬುದ್ಧಿಯನ್ನು ಕಲ್ಪಿಸುವುದಕ್ಕೆ ಮುಖ್ಯ ಕಾರಣ ಮತ್ತು ಅದೇ ಒಂದು ಮಾಯಾ ಮೂಲ. ಇದು,

ಎಲ್ಲಾ ಜಾತಿ ಜನರ ಮೂಲ. ಮದುವೆ ಎನ್ನುವುದು ಒಂದು ಬಂಧನ. ಇದು ಕ್ರಮೇಣವಾಗಿ ಜನರ ಮನಸ್ಸಿನಲ್ಲಿ ದೃಢವಾಗುತ್ತದೆ'' ಎಂದು ಅವರು ಹೇಳಿದ್ದಾರೆ. ಅಂದರೆ ಜಾತಿ ಎನ್ನುವುದು ಒಂದು ಬಂಧನ, ಮಾಯೆ. ಇದನ್ನು ನಾವು ಹೊಡೆದು ಓಡಿಸಬೇಕು ಎಂದು ಹೇಳಿದ್ದಾರೆ. ಅದೇ ವಿವೇಕಾನಂದರು ಮುಂದುವರಿದು ಇನ್ನೊಂದು ಮಾತು ಹೇಳಿದ್ದಾರೆ. ಅದೇನೆಂದರೆ "ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದ ಮದುವೆ ಎನ್ನುವುದು ಪ್ರತಿಯೊಂದು ಮತದಲ್ಲಿ, ಒಳಪಂಗಡಗಳಲ್ಲಿ ಪರಿಮಿತಿಗೊಂಡು ಅವ್ಯವಸ್ಥೆಯ ಅಂಚಿಗೆ ತಲುಪಿದೆ. ಮದುವೆ ಅವರವರ ಜಾತಿ, ಅವರವರ ಬಂಧುಬಳಗಕ್ಕೆ ಮಾತ್ರ ಸೀಮಿತವಾಗಿದೆ. ಈ ಕಾರಣದಿಂದ ಜನಾಂಗ ಶಾರೀರಿಕ ದುರ್ಬಲತೆಯನ್ನು ಹೊಂದಿದ್ದು, ಎಲ್ಲಾ ಬಗೆಯ ರೋಗ ರುಜಿನಗಳು, ಕೆಡುಕುಗಳು ಸುಲಭವಾಗಿ ನಮ್ಮ ಸಮಾಜದಲ್ಲಿ ಪ್ರವೇಶಿಸುತ್ತಿವೆ. ಜಾತಿ ಪದ್ಧತಿಯ ವಿವಾಹದಿಂದ ಮತ್ತು ಪರಸ್ಪರ ಹತ್ತಿರದ ಸಂಬಂಧಿಗಳಲ್ಲಿ ವಿವಾಹ ಆಗುವುದರಿಂದ ಇಡೀ ಭಾರತದ ದೇಶದ ಜನ ಶಾರೀರಿಕ ದುರ್ಬಲತೆಗೆ ತುತ್ತಾಗಿದೆ'' ಎಂದು ವಿವೇಕಾನಂದರು ಹೇಳಿದ್ದಾರೆ. ಅವರು ಮತ್ತೊಂದು ದೊಡ್ಡ ಮಾತು ಹೇಳಿದ್ದಾರೆ. "ಇದಕ್ಕೇನು ಪರಿಹಾರ? ಈ ರೋಗಗಳನ್ನು ಬೇರು ಸಹಿತ ಕಿತ್ತು ಹಾಕಲು ಪ್ರಯತ್ನ ಮಾಡಬೇಕು. ಅವುಗಳನ್ನು ಹಾಗೆಯೇ ಅಡಗಿಸಿದರೆ ಪ್ರಯೋಜನವಿಲ್ಲ. ಅದಕ್ಕೆ ಅನೇಕ ವಿಧವಾದ ಸುಧಾರಣೆಗಳು ಆಗಬೇಕು''. ವಿವೇಕಾನಂದರ ಈ ಮಾತುಗಳನ್ನು ನಿರಾಕರಿಸುವಂತಹ ದಡ್ಡರು ಯಾರಿದ್ದಾರೆ?

ಒಬ್ಬ ದೊಡ್ಡ ವೈದ್ಯರು, ವೆಸ್ಟ್ ಎಂಬ ಹೆಸರಿನ ಇಂಗ್ಲೀಷ್ ವೈದ್ಯರು ಮಕ್ಕಳ ರೋಗಗಳ ಸಂಬಂಧವಾಗಿ ಒಂದು ಪುಸ್ತಕ ಬರೆದಿದ್ದಾರೆ. ಆ ಪುಸ್ತಕದಲ್ಲಿ ಅವರು ಮಕ್ಕಳ ರೋಗ ಮತ್ತು ಅಕಾಲ ಮರಣಗಳಿಗೆ ಹತ್ತಿರದ ಸಂಬಂಧಗಳ ವಿವಾಹವೇ ಮುಖ್ಯ ಕಾರಣ ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ದೇಶದಲ್ಲಿ ದೇಹ ಚೈತನ್ಯ ಕ್ಷೀಣಿಸಿ ಅಕಾಲ ಮರಣಗಳು ಏತಕ್ಕೆ ಆಗುತ್ತವೆ ಅಂದರೆ ಸ್ವಜಾತಿ ಹಾಗೂ ಹತ್ತಿರ ಸಂಬಂಧಗಳಲ್ಲಿ ವಿವಾಹ ಆಗುವುದರಿಂದ. ಇದನ್ನು ನಾವು ಹೋಗಲಾಡಿಸಬೇಕು. ದೇಶದ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕಾದರೆ, ನಮ್ಮ ಜನ ದೈಹಿಕವಾಗಿ ಮಾನಸಿಕವಾಗಿ ಗಟ್ಟಿಯಾಗಿ ಇರಬೇಕಾದರೆ ಅಂತರ್ಜಾತಿ ವಿವಾಹ ಬಹಳ ಮುಖ್ಯ.

ವಿವೇಕಾನಂದರು ಹೇಳುತ್ತಿದ್ದರು, ನಮ್ಮ ದೇಶಕ್ಕೆ ದೃಢ ಸಂಕಲ್ಪದ ಯುವಕರು ಬೇಕು ಎಂದು. ಅಂತಹ ಯುವಕರಿಗಾಗಿ ನಾವು ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಬೇಕಾಗಿದೆ. ಇದಲ್ಲದೆ ಮಹಾತ್ಮಾ ಗಾಂಧೀಜಿಯವರು ಒಂದು ಮಾತು ಹೇಳಿದ್ದಾರೆ. ಅದನ್ನು ನಾನು ಇಲ್ಲಿ ಬಹಳ ಹೆಮ್ಮೆಯಿಂದ ಅಭಿಮಾನದಿಂದ ಹೇಳುತ್ತೇನೆ. ಅದೇನೆಂದರೆ ನಾನು ಅಂತರ್ಜಾತಿ ಅಲ್ಲದ ವಿವಾಹಗಳಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಮಹಾತ್ಮಾ ಗಾಂಧೀಜಿಯವರ ಕಳಕಳಿ ನಿಲುವುಗಳನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಜವಹರಲಾಲ್ ನೆಹರುರವರು ಒಂದು ಮಾತು ಹೇಳಿದ್ದಾರೆ. ಜಾತಿ ಪದ್ಧತಿ ಎಂದು ಯಾವುದರೊಡನೆ ಇರುತ್ತದೆಯೋ ಅಂದು ಅವನತಿ ಹೊಂದುತ್ತಾ ಹೋಗುತ್ತದೆ. ಭಾರತದೇಶದಲ್ಲಿ ಅದು ಶಾಪವಾಗಿ ನಿಲ್ಲುತ್ತದೆ, ಇದು ಸತ್ಯ–ಎಂದು ಹೇಳಿದ್ದಾರೆ. ನಿಜ, ಇವತ್ತು ಜಾತಿ ಪದ್ಧತಿ ಒಂದು ಶಾಪ ಆಗಿದೆ. ಅದೇ ರೀತಿ ಡಾ। ಬಿ. ಆರ್. ಅಂಬೇಡ್ಕರ್‌ರವರು ಒಂದು ಮಾತು ಹೇಳಿದರು. ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಲು ಅಂತರ್ಜಾತಿ ವಿವಾಹ ಒಂದೇ ಮದ್ದು ಎನ್ನುವ ಸೂಚನೆಯನ್ನು ಕೊಟ್ಟರು. ಈ ಬಗ್ಗೆ ಲೋಹಿಯಾರವರು ಕೂಡ ರಾಷ್ಟ್ರದಲ್ಲಿ ಗೆಜೆಟೆಡ್ ಹುದ್ದೆಗಳನ್ನು ತುಂಬುವಾಗ ಅಂತರ್ಜಾತಿ ವಿವಾಹ ಕಡ್ಡಾಯಮಾಡಿ ಎಂದು ಹೇಳಿದ್ದರು. ನಿಜವಾಗಿಯೂ ಲೋಹಿಯಾರವರು ಜಾತಿಪದ್ಧತಿ ವಿರುದ್ಧ ಹೋರಾಡಿದ ಒಬ್ಬ ಮಹಾನ್ ಸೈನಿಕ, ಸೋಲನ್ನು ಅರಿಯದ ಸೇನಾನಿ. ಬಹುಶಃ ಜಾತಿ ಪದ್ಧತಿ ವಿವಾಹದಿಂದ ಅವರು ಅಪಾರ ನೋವನ್ನು ಅನುಭವಿಸಿ ಆ ನೋವಿನ ತೀವ್ರತೆಯಿಂದ, ಸಂಕಟದಿಂದ ಈ ಮಾತನ್ನು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ಮಾತನ್ನು ತಮಗೆ ಹೇಳುತ್ತೇನೆ. ದಿನಾಂಕ ೨೨–೫–೧೯೫೪ನೆಯ ಇಸವಿಯಲ್ಲಿ ಶ್ರೀ ಚರಣಸಿಂಗ್‌ರವರು ಅಂದಿನ ಪ್ರಧಾನಮಂತ್ರಿಗಳಾದ ಪಂಡಿತ ಜವಾಹರಲಾಲ್ ನೆಹರುರವರಿಗೆ ಒಂದು ಪತ್ರ ಬರೆದು ಕೇಳಿದ್ದಾರೆ. ಆ ಪತ್ರದ ಸಾರಾಂಶ ಏನೆಂದರೆ ರಾಜ್ಯ ಮತ್ತು ಕೇಂದ್ರದಲ್ಲಿ ನೌಕರಿಗಳನ್ನು ತುಂಬುವಾಗ ಅಂತರ್ಜಾತಿ ವಿವಾಹವಾದವರಿಗೆ ಮೀಸಲಾತಿ ಕೊಡಿ ಎಂದು. ಶ್ರೀ ಚರಣಸಿಂಗ್‌ರಂಥವರು ೧೯೫೪ನೆಯ ಇಸವಿಯಲ್ಲಿ ಅಂತರ್ಜಾತಿ ವಿವಾಹಕ್ಕೆ ಮೀಸಲಾತಿ ಬೇಕು ಎಂದು ಒತ್ತಾಯಿಸಿದ ಸಂದರ್ಭ ಇರುವಾಗ, ಈಗ ನಾನು ಕೇಳುವುದು ಸರಿ ಇದೆ. ಚರಣಸಿಂಗ್ ಮತ್ತು ಲೋಹಿಯಾರವರ ಮಾತಿನ ಅರ್ಥ ನವಭಾರತವನ್ನು ಕಟ್ಟುವ ದೂರಾಲೋಚನೆಯನ್ನು ಒಳಗೊಂಡಿತ್ತಷ್ಟೇ ಅಲ್ಲದೆ, ಹಾಗೆ ವಿವಾಹವಾದರವನ್ನು ಸಹಾನುಭೂತಿಯಿಂದ ನೋಡಲೆಂಬ ವಿವೇಚನೆಯನ್ನೂ ಹೊಂದಿತ್ತು.

ದೊಡ್ಡವರ ಇಂಥ ದೂರದೃಷ್ಟಿ ವಿಚಾರಗಳ ಹಿನ್ನೆಲೆಯಲ್ಲಿ ಈ ನಿರ್ಣಯ ರೂಪಿಸಬೇಕು. ಹೀಗೆ ಮಾಡುವಾಗ ಜಾತಿ ಪದ್ಧತಿಯಲ್ಲಿ ನಂಬಿಕೆ ಇದ್ದವರು ಸರ್ಕಾರಿ ಕೆಲಸಕ್ಕೆ ಸೇರಲು ನಾಲಾಯಕ್ಕು ಎಂದು ಪರಿಗಣಿಸಬೇಕು. ಏಕೆಂದರೆ ನ್ಯಾಯಾನ್ಯಾಯವನ್ನು ನೋಡದೇನೇ ತನ್ನ ಜಾತಿಯೆಂದು ಸಹಾಯ ಮಾಡುವಂಥ ಪರಿಪಾಠ ನಮ್ಮಲ್ಲಿ ಇದೆ. ಈ ಹಿನ್ನೆಲೆಯಲ್ಲಿಯೇ ಚರಣಸಿಂಗ್‌ರವರು ಪಂಡಿತ ಜವಹರಲಾಲ್ ನೆಹರೂ ಅವರಿಗೆ ಬರೆದ ಪತ್ರ ಬಹಳ ಮಹತ್ವದ್ದೆಂದು ನಾನು ಹೇಳುತ್ತೇನೆ. ಹುಟ್ಟು ಆಕಸ್ಮಿಕವಾದದ್ದು. ಯಾರೂ ಕೂಡ ಅದನ್ನು ಕೇಳಿ ಬಂದಿದ್ದು ಅಲ್ಲ. ಆದರೆ ಹುಟ್ಟಿದ ನಂತರ ನಾವು ಜಾತಿ, ಮತ, ಪಂಥ ಇತ್ಯಾದಿಗಳ ಬಂಧನಕ್ಕೆ ಒಳಗಾಗುತ್ತೇವೆ. ಆದರೆ ಈ ಆಕಸ್ಮಿಕವಾದ ಹುಟ್ಟು ಎಷ್ಟೊಂದು ತೊಂದರೆ ಕೊಡುತ್ತದೆ ಎಂದರೆ ಅವನ ಆಸೆ ಆಕಾಂಕ್ಷೆಗಳನ್ನು, ವಿಚಾರಗಳನ್ನು ಈಡೇರಿಸಿಕೊಳ್ಳಲು ಅವಕಾಶ ನಿರಾಕರಿಸುತ್ತದೆ. ಒಂದು ಜಾತಿಯಲ್ಲಿ ಹುಟ್ಟಿದವನು ಸಾಯುವತನಕ ಅವನ ಜಾತಿ ನಂಬಿಕೆಗಳನ್ನು, ಆಹಾರ ಪದ್ಧತಿಯನ್ನು ಪಾಲಿಸಬೇಕು. ಮದುವೆಯಲ್ಲಿ ಕೂಡ ತನ್ನ ಜಾತಿಯವರನ್ನೇ ಆಯ್ಕೆ ಮಾಡಿಕೊಳ್ಳಬೇಕು. ನಿಜವಾಗಿಯೂ ಇದು ಬಹಳ ಅನ್ಯಾಯ.

ಇನ್ನೊಂದು ಮುಖ್ಯ ವಿಷಯ, ಬಹಿರಂಗವಾಗಿ ಜಾತಿಯನ್ನು ಕೇಳುವುದನ್ನೇ ರದ್ದು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಬಹಿರಂಗವಾಗಿ ಒಬ್ಬ ಮನುಷ್ಯನ ಜಾತಿಯನ್ನು ಕೇಳತಕ್ಕದ್ದು ನಾಗರೀಕ ನಡವಳಿಕೆಗಳ ಕನಿಷ್ಠ ಸೌಜನ್ಯದ ಉಲ್ಲಂಘನೆ. ಹಾಗೆ ಕೇಳುವವನು ಈ ದೇಶದಲ್ಲಿ ದೊಡ್ಡ ಅಪರಾಧಿ. ಮನುಷ್ಯನ ವಿಚಾರಗಳು, ಚಿಂತನೆಗಳು ಮುಖ್ಯ. ಸಮಾಜದಲ್ಲಿನ ಅವನ ನಡವಳಿಕೆಗಳು ಮುಖ್ಯ. ಇಷ್ಟಲ್ಲದೇ ಮನುಷ್ಯ ಜಾತಿ ಮತ್ತು ನಡವಳಿಕೆಗಳಿಗೆ ಏನೂ ಸಂಬಂಧ ಇರುವುದಿಲ್ಲ. ಆದ್ದರಿಂದ ಯಾವ ಜಾತಿ ಎಂದು ಕೇಳತಕ್ಕದ್ದನ್ನು ಅಪರಾಧ ಎಂದು ಮಾಡಬೇಕು. ಇದಕ್ಕೆ ಅಂತರ್ಜಾತಿಯ ವಿವಾಹವೇ ಉತ್ತರ ಕೊಡಬಲ್ಲದು. ಆದ್ದರಿಂದ ಅಂತರ್ಜಾತಿ ವಿವಾಹಕ್ಕೆ ಮೀಸಲಾತಿಯನ್ನು ಜಾರಿ ಮಾಡಬೇಕೆಂದು ಹೇಳುತ್ತೇನೆ. ನಾನು ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅಂತರ್ಜಾತಿ ವಿವಾಹವನ್ನು ಇಷ್ಟ ಪಡುವವರು ಯಾರು? ಪ್ರೇಮಿಗಳು. ಜಾತಿಯ ಮತ್ತು ಮತ ಮೌಢ್ಯದ ಎಲ್ಲೆಯನ್ನು

ಮೀರಿ ಪ್ರೀತಿಯ ಒಂದು ಲೋಕದಲ್ಲಿ ಅಡಿ ಇಟ್ಟಂತಹವರು. ಇವರಿಗೆ ಸುಖ ಪಡುವಂಥ ಎಲ್ಲಾ ರೀತಿಯ ಹಕ್ಕು ಇದೆ. ಆದರೆ ನಮ್ಮ ಸಮಾಜ ಅವರನ್ನು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿಗೆ ತಳ್ಳುತ್ತಿದೆ. ಅಂತರ್ಜಾತಿ ವಿವಾಹ ಆದವರನ್ನು ಎಷ್ಟೋ ಸಂದರ್ಭಗಳಲ್ಲಿ ಕೊಲೆ ಮಾಡಿದ್ದಾರೆ.

ವಿ.ಆರ್. ಸುದರ್ಶನ್ : ಮಾನ್ಯ ನಾಗೇಗೌಡರಿಗೆ ಏನು ತಾಪತ್ರಯ ಅಂದರೆ, ಒಮ್ಮೆ ಮದುವೆ ಆಗಿದ್ದರೂ ಮತ್ತೆ ಅಂತರ್ಜಾತಿಯ ವಿವಾಹ ಮಾಡಿಕೊಳ್ಳುವುದಕ್ಕೆ ಸಾಧ್ಯವಾ? ಡಾ. ಸಿದ್ದಲಿಂಗಯ್ಯನವರು ಈ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳುತ್ತಿದ್ದಾರೆ.

ಕೆ. ಎನ್. ನಾಗೇಗೌಡ : ಸುದರ್ಶನ್ ಅಂತಹ ಯುವಕರೆಲ್ಲಾ ಪ್ರೇಮಿಗಳನ್ನು ಕೊಲೆ ಮಾಡಿದ್ದಾರೆ.

ಉಪಸಭಾಪತಿಯವರು: ಮಾನ್ಯ ಸಿದ್ದಲಿಂಗಯ್ಯನವರು ಲಿಮಿಟೆಡ್ ಮಾಡಿರತಕ್ಕದ್ದು ಗೆಜೆಟೆಡ್ ಆಫೀಸರ್ಸ್ ಆಗಬೇಕಾದರೆ ಅಂತರ್ಜಾತಿ ವಿವಾಹ ಮಾಡಿಕೊಂಡಿರಬೇಕು ಎಂದು, ಮಂತ್ರಿಗಳು ಆಗುವ ಬಗ್ಗೆ ಅವರು ಏನೂ ಹೇಳಲಿಲ್ಲ.

ಕೆ.ಎನ್. ನಾಗೇಗೌಡ : ಆ ತರಹ ಆದರೆ ಇಮ್ಮಡಿಯಟ್ ಆಗಿ ಮದುವೆ ಮಾಡಿಕೊಳ್ಳುತ್ತೇನೆ.

ಡಾ. ಸಿದ್ದಲಿಂಗಯ್ಯ : ಅಂತರ್ಜಾತಿ ವಿವಾಹ ಆದವರು ಮತ್ತು ಆಗಲು ಇಷ್ಟಪಟ್ಟವರಿಗೆ ಸಮಾಜದಲ್ಲಿ ಸ್ವಾಗತ ಇಲ್ಲ. ಅವರಿಗೆ ಅಹಿತಕರವಾದಂತಹ ವಾತಾವರಣವನ್ನು ನಿರ್ಮಾಣ ಮಾಡಿ, ಮಾನಸಿಕವಾಗಿ ಕುಗ್ಗಿಸಿ ಮತ್ತೆ ಸ್ವಜಾತಿಯಲ್ಲಿ ಪುನರ್ವಿವಾಹ ಮಾಡುವಂಥ ಒಂದು ಕ್ರೌರ್ಯ ನಮ್ಮ ಸಮಾಜದಲ್ಲಿ ನಡೆಯುತ್ತಿದೆ. ಬಹಳ ಸಾರಿ ಅಂತರ್ಜಾತಿ ವಿವಾಹ ಆದಂತಹವರಿಗೆ ಅವರ ತಂದೆ ತಾಯಿಗಳು ಆಸ್ತಿಯಲ್ಲಿ ಪಾಲನ್ನು ಕೊಡುವಂತಹ ನಾಗರೀಕತೆಯನ್ನು ಅಥವಾ ಸೌಜನ್ಯವನ್ನು ತೋರಿಸುವುದಿಲ್ಲ. ಅಂತರ್ಜಾತಿ ವಿವಾಹ ಆದವರನ್ನು ಗುಂಡೇಟನಿಂದ ಕೊಂದಿರ ತಕ್ಕಂಥ ಪ್ರಕರಣಗಳು ಕೂಡ ಇವೆ. ಆದ್ದರಿಂದ ಕ್ರಾಂತಿಕಾರಕವಾದ ಈ ಒಂದು ಧೃಡ ನಿರ್ಧಾರವನ್ನು ಯಾರು ತೆಗೆದುಕೊಳ್ಳುತ್ತಾರೆ ಅಂತಹವರಿಗೆ ತಂದೆ ತಾಯಿಗಳು, ಬಂಧು ಬಳಗದಲ್ಲಿ ತಿರಸ್ಕಾರ ಎದುರಾದರೆ ಸರ್ಕಾರ ಅವರಿಗೆ ಕೊನೆಯ ಪಕ್ಷ ನೌಕರಿ ಕೊಡುವಂಥ ಒಂದು ಗ್ಯಾರಂಟಿಯನ್ನು ಕೊಟ್ಟರೆ ಅವರು ಅಂತರ್ಜಾತಿ ವಿವಾಹ ಆಗುತ್ತಾರೆ.

ನನಗೆ ಒಬ್ಬರು, ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದನ್ನು ನೋಡಿ ಪತ್ರ ಬರೆದರು. ಅದರಲ್ಲಿ ಅಂತರ್ಜಾತಿ ವಿವಾಹದ ಬಗ್ಗೆ ಹೇಳಿದ್ದೀರಿ. ನಮಗೆ ತುಂಬಾ ಸಂತೋಷ ಆಗಿದೆ, ಯಾವಾಗ ಆ ಕಾನೂನು ಬರುತ್ತದೆ ಎಂದು ಕೇಳಿದ್ದಾರೆ. ಬಹಳ ಜನ ಪ್ರತಿ ಶುಕ್ರವಾರದಂದು ಪತ್ರಿಕೆ ನೋಡುತ್ತಿದ್ದರು ಎಂದು ಕಾಣುತ್ತದೆ. ಯಾವಾಗ ಬರುತ್ತದೆ, ಬರುತ್ತದೆಯೋ ಅಥವಾ ಇಲ್ಲವೋ, ಇದಕ್ಕೆ ಸರ್ಕಾರದ ಬೆಂಬಲ ಪ್ರೋತ್ಸಾಹ ಇದ್ದ ಹಾಗೆ ಇಲ್ಲ ಎನ್ನುವ ತರಹದ ಅಭಿಪ್ರಾಯ ವ್ಯಕ್ತ ಪಡಿಸಿದ್ದರು.

ಇನ್ನೊಬ್ಬರ ಪತ್ರದಲ್ಲಿ ಬೇರೆಯೇ ವಿಷಯ ಇತ್ತು. ಅದೇನೆಂದರೆ, ಅಂತರ್ಜಾತಿ ವಿವಾಹದ ಬಗ್ಗೆ ಹೇಳಿದ್ದೀರಿ. ನಾನೂ ಅಂತರ್ಜಾತಿ ವಿವಾಹ ಆಗಿದ್ದೇನೆ. ಆದರೆ ನಮ್ಮ ಜಾತಿಯಲ್ಲಿ ಅಂತರ್ಜಾತಿ ವಿವಾಹ ಆದವರಿಗೆ ಐದು ಸಾವಿರದಿಂದ ಇಪ್ಪತ್ತುಸಾವಿರ ರೂಪಾಯಿವರೆಗೆ ದಂಡವನ್ನು ಹಾಕುತ್ತಿದ್ದಾರೆ, ಎಂದು. ಅಂದರೆ ಇವನು ಸಹ ದಂಡ ಕೊಟ್ಟಿರುವಂತಹ ಬಲಿಪಶು. ಆತ ಪತ್ರ ಬರೆದಿರುವುದು ಪಾಂಡವಪುರದಿಂದ. ಈ ಉದಾಹರಣೆಗಳಿಂದ ಅಂತರ್ಜಾತಿ ವಿವಾಹಕ್ಕೆ ಸಮಾಜದಲ್ಲಿ ಸ್ವಾಗತ ಇಲ್ಲ ಎಂಬುದು ತಿಳಿಯುತ್ತದೆ. ಆದ್ದರಿಂದ ಸರ್ಕಾರ ಇಂತಹವರ ಜವಾಬ್ದಾರಿಯನ್ನು ಹೊರಬೇಕು. ಅವರಿಗೆ ಆರ್ಥಿಕ ಭದ್ರತೆ ಕೊಡಬೇಕು. ಮುಂದೆ ಆ ದಿಕ್ಕಿನಲ್ಲಿ ಹಜ್ಜೆ ಇಟ್ಟವರಿಗೆ ಇದರಿಂದ ಪ್ರೋತ್ಸಾಹ ಸಿಗುತ್ತದೆ.

ಇವೊತ್ತು ಇನ್ನೂ ಒಂದು ಪ್ರವೃತ್ತಿ ಕಾಣುತ್ತಿದೆ. ಕೆಳಜಾತಿಯ ಯುವಕರು ಮೇಲು ಜಾತಿಯ ಹೆಣ್ಣುಮಕ್ಕಳನ್ನು ಮದುವೆ ಆಗುವುದು ಹೆಚ್ಚಾಗಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಮೇಲುಜಾತಿಯ ಗಂಡುಮಕ್ಕಳು ಕೂಡ ಕೆಳಜಾತಿಯ ಹೆಣ್ಣು ಮಕ್ಕಳನ್ನು ಮದುವೆ ಆಗುವಂಥ ಪರಿಪಾಟ ಬೆಳೆಯಬೇಕು. ಆಗ ಮಾತ್ರ ಜಾತಿಪದ್ಧತಿ ನಿರ್ಮೂಲನವಾಗುತ್ತದೆ. ಕೆಳಜಾತಿಯ ಯುವಕರು ಮೇಲುಜಾತಿಯ ಹೆಣ್ಣು ಮಕ್ಕಳನ್ನು ಮದುವೆ ಆದರೆ ಸಮಾಜದಲ್ಲಿ ದೊಡ್ಡ ಕ್ರಾಂತಿ ಏನೂ ಆಗುವುದಿಲ್ಲ. ಆದರೆ ಇಂಥ ಪ್ರವೃತ್ತಿ ಹೆಚ್ಚಲು ಕಾರಣಗಳಿವೆ. ಬಹುಶಃ ಮೇಲು ಜಾತಿಯ ಯುವಕರು ಕೆಳಜಾತಿಯ ಯುವತಿಯನ್ನು ಏಕೆ ಮದುವೆ ಆಗಲು ಮುಂದೆ ಬರುವುದಿಲ್ಲ ಅಂದರೆ, ಮೊದಲನೆಯದಾಗಿ ಅವರಿಗೆ ಉದ್ಯೋಗದ ಭದ್ರತೆ ಇಲ್ಲ. ಎರಡನೆಯದು, ಈ ಸಮಾಜದ ಪುರಸ್ಕಾರ, ಪ್ರೋತ್ಸಾಹ ಅಥವಾ ಬೆಂಬಲವಾಗಲೀ ಇಲ್ಲ. ಆದ್ದರಿಂದ ಸರ್ಕಾರ ಮೀಸಲಾತಿಯನ್ನು ಜಾರಿ ಮಾಡಿದ ಪಕ್ಷದಲ್ಲಿ ಖಂಡಿತವಾಗಿಯೂ ನಾನಾ ಜಾತಿಯ ಯುವಕರು ಮುಂದೆ ಬಂದು ನಾನಾ ಜಾತಿಯ ಹೆಣ್ಣು ಮಕ್ಕಳನ್ನು ಮದುವೆ ಆಗುತ್ತಾರೆ. ಆಗ ಇವೊತ್ತಿನ ಜಾತಿಪದ್ಧತಿಯ ಹಿಂದಿರುವ ಭ್ರಮೆ ಖಂಡಿತಾ ಕಳಚಿ ಬೀಳುತ್ತದೆ ಎಂದು ಹೇಳುತ್ತೇನೆ.

ಬಿ. ತಿಪ್ಪಯ್ಯ : ಮಾನ್ಯ ಉಪ ಸಭಾಪತಿಯವರೇ, ಇದು ಎಲ್ಲಿಗೆ ಬಂತು ಎಂದರೆ ಈ ಪೋರ್ಟ್‌ಪೋಲಿಯೊ ತೆಗೆದುಕೊಂಡಿರುವ ಮಂತ್ರಿಗಳಿಗೆ ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನ ಆಗುತ್ತದೆ ಎಂದು ಮಾನ್ಯ ನಾಗೇಗೌಡರು ಕೇಳುವ ಹಾಗೆ ಕಾಣಿಸುತ್ತಿದೆ....

ಉಪಸಭಾಪತಿಯವರು : ಮದುವೆ ಬಗ್ಗೆ ಬಹಳಷ್ಟು ಮಾತನಾಡಿ ಮಾನ್ಯ ಶಿವಣ್ಣನವರನ್ನು ಮದುವೆಗೆ ಟೆಂಪ್ಟ್ ಮಾಡುವ ಹಾಗೆ ಕಾಣುತ್ತಿದೆ.

ಬಿ.ಎಸ್. ಹೊರಟ್ಟಿ : ಮಾನ್ಯ ರಂಗಯ್ಯನವರೂ ಇದ್ದಾರೆ. ಸರ್ಕಾರ ಮಾನ್ಯ ರಂಗಯ್ಯನವರಿಗೆ ಹಾಗೂ ಮಾನ್ಯ ಮಂತ್ರಿಗಳಿಗೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ತಯಾರಿ ಇದೆಯಾ?

ಟಿ.ಎ. ರಂಗಯ್ಯ : ನನ್ನ ಸೇಹಿತರು ನನ್ನ ವಿಷಯದಲ್ಲಿ ಬಹಳ ತಲೆ ಕೆಡಿಸಿಕೊಂಡಂತೆ ಕಾಣುತ್ತಿದೆ.

ಉಪಸಭಾಪತಿಯವರು : ನಿಮ್ಮ ಬಗ್ಗೆ ಅವರಿಗೆ ಅನುಕಂಪ ಇದೆ.

ಡಾ. ಸಿದ್ದಲಿಂಗಯ್ಯ : ನಾನು ದೀರ್ಘವಾಗಿ ಮಾತನಾಡುವುದಿಲ್ಲ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಈ ಸದನಕ್ಕೆ ಮನವಿ ಮಾಡಿಕೊಳ್ಳುವುದು ಇಷ್ಟೇ. ಇವತ್ತು ಯುವಜನತೆ ಭ್ರಷ್ಟರಾಗಿಲ್ಲ. ಹಿಂದಿಗಿಂತ ಹೆಚ್ಚು ಆರೋಗ್ಯಕರವಾದ ಮನಸ್ಸನ್ನು ಹೊಂದಿದವರಾಗಿದ್ದಾರೆ. ಪ್ರಗತಿಪರ ಧೋರಣೆಗಳನ್ನು ನಿಜ ಜೀವನದಲ್ಲಿ ಅನುಷ್ಠಾನಗೊಳಿಸುವಂತಹ ಹಂಬಲವನ್ನು ಇಟ್ಟುಕೊಂಡಿದ್ದಾರೆ. ಇಂಥ ಯುವಜನತೆಯ ಕನಸುಗಳನ್ನು ಈಡೇರಿಸಬೇಕಾದರೆ ಅಂತರ್ಜಾತಿಯ ವಿವಾಹ ಆದವರಿಗೆ ಸರ್ಕಾರ ಐದು ಪರ್ಸೆಂಟ್ ಮೀಸಲಾತಿಯನ್ನು ಜಾರಿ ಮಾಡಬೇಕು. ಈ ಸದನ ಅದನ್ನು ಜಾರಿ ಮಾಡುವಂತೆ ಶಿಫಾರಸ್ಸು ಮಾಡಬೇಕೆಂದು ಹೇಳುತ್ತೇನೆ.

ಮೇಲುಜಾತಿ ಮತ್ತು ಕೆಳಜಾತಿ ವಿವಾಹಕ್ಕೆ ಆದ್ಯತೆ ಕೊಡುವುದರ ಜೊತೆಗೆ ಬೇರೆ ಬೇರೆ ಜಾತಿಗಳಲ್ಲಿ ವಿವಾಹ ಆಗತಕ್ಕಂಥವರಿಗೆ ಕೂಡ ಈ ಒಂದು ಅವಕಾಶವನ್ನು ಕೊಡಬೇಕು. ಪರ್ಸೆಂಟ್ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಜಾತಿರಹಿತ ಮೀಸಲಾತಿಯನ್ನು ತಂದು,

ಸಮಾಜವನ್ನು ಜಾತಿಯಿಂದ ಮುಕ್ತಗೊಳಿಸುವ ಮಹಾಕಾರ್ಯಕ್ಕಾಗಿ ಈ ನಿರ್ಣಯವನ್ನು ಶಿಫಾರಸ್ಸು ಮಾಡಬೇಕೆಂದು ವಿನಂತಿಸಿ, ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಎನ್. ತಿಪ್ಪಣ್ಣ : ಮಾನ್ಯ ಸಭಾಪತಿಯವರೇ, ಈ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ನಾನು ಈಗಾಗಲೇ ಕಳಿಸಿದ್ದೇನೆ. ಮಾನ್ಯ ಸಿದ್ದಲಿಂಗಯ್ಯನವರು ಒಳ್ಳೆಯ ಸಾಹಿತಿಗಳು ಅವರು ಈ ಜಾತಿ ವೈಷಮ್ಯಗಳಲ್ಲಿ ಸಾಕಷ್ಟು ಬಿಸಿ ತಗಲಿಸಿಕೊಂಡವರು ಕೂಡ ಆಗಿದ್ದಾರೆ. ಒಂದು ಪ್ರಮುಖ ಸಮಸ್ಯೆಯ ಬಗ್ಗೆ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳಿದ ವಿಚಾರದಲ್ಲಿ ನಮ್ಮ ಬಹಳಷ್ಟು ಮಿತ್ರರಿಗೆ ಎರಡನೆಯ ಅಭಿಪ್ರಾಯ ಇಲ್ಲವೇ ಇಲ್ಲ. ಅಂತರ್ಜಾತಿ ವಿವಾಹಗಳು ಆಗಬೇಕು. ಜಾತೀಯತೆಯನ್ನು ತೊಡೆದು ಹಾಕಲಿಕ್ಕೆ ಅದು ಸ್ವಲ್ಪವಾದರೂ ಸಹಾಯ ಮಾಡುತ್ತದೆ. There should be some incentive for that. ಅದಕ್ಕೋಸ್ಕರ ಸರ್ಕಾರಿ ನೌಕರಿಗಳಲ್ಲಿ ಕನಿಷ್ಠ ಪಕ್ಷ ಶೇಕಡಾ ಐದರಷ್ಟು ಮೀಸಲಾತಿಯನ್ನು ಇಟ್ಟರೆ ಒಳ್ಳೆಯ ಉತ್ತೇಜನ ದೊರೆಯ ಬಹುದೆಂಬ ಒಂದು ಸದುದ್ದೇಶದಿಂದ ಅವರು ಇದನ್ನು ಮಂಡಿಸಿದ್ದಾರೆ.

ಇದಕ್ಕೆ ನನ್ನ ಸಲಹೆ ಇಷ್ಟೆ. ಬಹಳ ದಿವಸಗಳ ಹಿಂದೆಯೇ ಶ್ರೀ ಸಿದ್ದಲಿಂಗಯ್ಯನವರ ಬಳಿ ಚರ್ಚೆಮಾಡಿ ಇದಕ್ಕೆ ಒಂದು ತಿದ್ದುಪಡಿಯನ್ನು ಕಳಿಸಿದ್ದೆ. ಎಲ್ಲಾ ಅಂತರ್ಜಾತಿಯ ವಿವಾಹಗಳು ಸದ್ವಿವೇಕದಿಂದ ಅಥವಾ ಒಳ್ಳೆಯ ಉದ್ದೇಶದಿಂದ ಆಗಿವೆ, ಅದರಿಂದ ಒಳ್ಳೆಯ ಪರಿಣಾಮವಾಗುತ್ತದೆಂದು ಹೇಳುವಂತಿಲ್ಲ. ಕೆಲವು ಸಾರಿ ಮೇಲ್ಜಾತಿಯವರು ಕಾಲೇಜಿನಲ್ಲಿ ಓದುವಾಗಲೋ, ಪಕ್ಕದ ಮನೆಯಲ್ಲಿ ಇರುವಾಗಲೋ ಪ್ರೇಮಿಸುವ ಅವಕಾಶಗಳಿವೆ. ಜೈನ–ಲಿಂಗಾಯಿತರು, ಲಿಂಗಾಯಿತರು–ಒಕ್ಕಲಿಗರು, ಒಕ್ಕಲಿಗರು–ಬ್ರಾಹ್ಮಣರ ಗಂಡು ಹೆಣ್ಣುಗಳು ಪರಸ್ಪರ ಪ್ರೇಮಿಸಿ ಮದುವೆಯಾಗುವುದುಂಟು. ಇವರಿಗೂ ಈ ಸವಲತ್ತು ಕೊಡಬೇಕೇ? ಅಂತರ್ಜಾತಿ ಮದುವೆಯಾಗುವ ಗಂಡು ಹೆಣ್ಣುಗಳ ಪೈಕಿ ಯಾರಾದರೊಬ್ಬರು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ್ದರೆ ಮಾತ್ರ ಈ ಫಲ ಅವರಿಗೆ ದೊರಕಬೇಕೆಂದು ನನ್ನ ತಿದ್ದುಪಡಿ. ಏಕೆಂದರೆ ಯಾವುದೋ ಕಾರಣದಿಂದ ಮೇಲ್ಜಾತಿಯವರು ಲಗ್ನ ಮಾಡಿಕೊಂಡು ಅವರಿಗೆ ಅದರ ಪ್ರತಿಫಲ ಸಿಕ್ಕಿದರೆ ಮೀಸಲಾತಿಯ ಉದ್ದೇಶ ಸಾಧನೆಯಾದಂತಾಗುವುದಿಲ್ಲ. ಅದಕ್ಕೇ ನಾನು ಆಗಲೇ ಹೇಳಿದೆ, ಕಾಲೇಜಿನಲ್ಲಿರುವವರು, ಒಂದೇ ಊರಿನವರು ಒಬ್ಬರನ್ನೊಬ್ಬರು ಪ್ರೇಮಿಸಿ ಮದುವೆಯಾದರೆ ಅದು ಜಾತಿಯನ್ನು ತೊಡೆದುಹಾಕಬೇಕೆಂದು ಆಗುವ ಲಗ್ನವಲ್ಲ. ಇಂಥವರಿಗೆ ಆ ಇನ್ಸೆಂಟೀವ್ ಸಿಗಬಾರದು. ವಧುವಾಗಲಿ ವರನಾಗಲಿ ಪರಿಶಿಷ್ಟ ಜಾತಿ ಇಲ್ಲವೇ ಪರಿಶಿಷ್ಟ ವರ್ಗದವರಾಗಿದ್ದರೆ ಅವರಿಗೆ ಇನ್ಸೆಂಟೀವ್ ಕೊಡಬೇಕು. The resolution, if my amendment is accepted, will read like this.

"That this House recommends the Government to provide 5% reservation facilities in education and employment provided that one of the spouses belongs to either Scheduled caste or Seheduled Tribe"

ಹೀಗಾದರೆ ಬಹಳ ಒಳ್ಳೆಯದು. ಯಾವ ಉದ್ದೇಶದಿಂದ ಈ ನಿರ್ಣಯವನ್ನು ಅವರು ತಂದಿದ್ದಾರೋ ಅದು ಹೀಗೆ ಮಾಡುವುದರಿಂದ ಸಫಲವಾಗುತ್ತದೆಂದು ಭಾವಿಸಿದ್ದೇನೆ. ಆದ್ದರಿಂದ ಇದನ್ನು ತಾವೆಲ್ಲರೂ ಒಪ್ಪಲೇಬೇಕೆಂದು ಕೇಳಿಕೊಳ್ಳುತ್ತೇನೆ.

ಕೆ.ಎನ್. ನಾಗೇಗೌಡ : ಸಭಾಪತಿಗಳೇ, ಆ ತಿದ್ದುಪಡಿ ಮೇಲೆ ನನ್ನದೂ ಒಂದು ಮಾತು.

ಉಪಸಭಾಪತಿಗಳು : ವಿಷಯದ ಮೇಲೆಯೇ ಇನ್ನೂ ಬೇರೆಯವರು ಮಾತನಾಡಲಿದ್ದಾರೆ.

ಕೆ.ಎನ್. ನಾಗೇಗೌಡ : ತಾವು ತಿದ್ದುಪಡಿ ಅಲೋ ಮಾಡಿದ ಮೇಲೆ ಅದರ ಬಗ್ಗೆ ಮೊದಲು ಚರ್ಚೆ ಆಗಬೇಕಾಗುತ್ತದೆ. ಈಗ ನಾನು ಹೇಳಿದ್ದು ಸರಿ ಅಂದುಕೊಂಡಿದ್ದೇನೆ.

ಬಿ.ಟಿ. ಲಲಿತಾನಾಯಕ್ : ವಿಷಯದ ಸಾಧಕ ಬಾಧಕಗಳನ್ನು ಹೇಳುತ್ತಲೇ ಈ ತಿದ್ದುಪಡಿ ಬಗ್ಗೆಯೂ ಮಾತನಾಡಲಿ.

ಡಿ.ಹೆಚ್. ಶಂಕರಮೂರ್ತಿ : ಸಿದ್ದಲಿಂಗಯ್ಯನವರ ನಿರ್ಣಯದ ಬಗ್ಗೆ ತಿಪ್ಪಣ್ಣನವರು ಮಾತನಾಡುವಾಗ ಒಂದು ತಿದ್ದುಪಡಿ ತಂದಿದ್ದಾರೆ. ಇದರ ಮೇಲೆ ವೋಟಿಂಗ್ ಮಾಡೋ ಸಮಯ ಬಂದಾಗ ಬೇಕಾದರೆ ತಿದ್ದುಪಡಿ ಮೇಲೆಯೇ ಪ್ರತ್ಯೇಕವಾಗಿ ವೋಟಿಂಗ್ ನಡೆಯಲಿ. ಈಗ ಚರ್ಚೆ ವಿಷಯದ ಮೇಲೆ ನಡೆಯುವುದರಲ್ಲಿ ತಪ್ಪೇನೂ ಇಲ್ಲ.

ಕೆ.ಎನ್. ನಾಗೇಗೌಡ : ಸಭಾಪತಿಗಳೇ, ಡಿಸಿಷನ್ ತಮ್ಮದು. ನಾನು ಹೇಳುವುದು, ಒಂದು ಚರ್ಚೆ ನಡೆದಾಗ ಒಂದು ಮೋಷನನ್ನು Either the Government or a Private Member ಯಾರೇ ಆಗಲಿ ಮೋಷನ್ ಮಾಡಿದರೆ ಆ ಮೋಷನ್ ಚರ್ಚೆಯಾಗುತ್ತಿದ್ದಾಗ ತಾವು ಆ ಮೋಷನನ್ನು ಒಪ್ಪಿಕೊಂಡುಬಿಟ್ಟರೆ, Certainly the debate must be on the amendment only and not on the main motion ನೀವು ಅನುಮತಿ ಕೊಡಲಿಲ್ಲ ಎಂದರೆ ಆಗ ಅದು ಬರುವುದಿಲ್ಲ. It is clear in the Rules, Sir.

ಡಿ.ಹೆಚ್. ಶಂಕರಮೂರ್ತಿ : ಅಮೆಂಡ್ಮೆಂಟ್ ಅನ್ನು ಮೊದಲು ಚರ್ಚೆಗೆ ತೆಗೆದುಕೊಂಡರೆ ಮೊದಲಿನ ರೆಸಲ್ಯೂಷನ್‌ಅನ್ನು ಒಪ್ಪಿಕೊಂಡಂತಾಗುತ್ತದೆ. ಆದರೆ ನಾವು ಇನ್ನೂ ಶ್ರೀ ಸಿದ್ದಲಿಂಗಯ್ಯನವರ ಮೂಲ ನಿರ್ಣಯವನ್ನು ಒಪ್ಪಿಕೊಂಡಿಲ್ಲ. ನಿರ್ಣಯದ ಮೇಲೆ ನಾನು ಸಹ ಮಾತನಾಡುವವನಿದ್ದೇನೆ.

ಉಪ ಸಭಾಪತಿಗಳು : ಮಾತನಾಡುವರ ಹೆಸರುಗಳ ಆರ್ಡರ್ ಈ ರೀತಿ ಇದೆ. ರಂಗಯ್ಯನವರು, ಶ್ರೀಮತಿ ಲಲಿತಾನಾಯಕ್, ಡಾ. ನಾಡಗೌಡ, ಶಂಕರಮೂರ್ತಿ ಮತ್ತು ನಾಗೇಗೌಡರು.

ಕೆ.ಎನ್. ನಾಗೇಗೌಡ : ರೂಲ್ಸ್ ಪ್ರಕಾರ ನೀವು ತಿದ್ದುಪಡಿಗೆ ಅಲೋ ಮಾಡುವ ಮುನ್ನವೇ ಸರ್ಕಾರದ ಅಭಿಪ್ರಾಯ ಕೇಳಬೇಕಾಗಿತ್ತು. Whether this private Member's resolution is Passed or failed, whether the Government has accepted or not, that is to be decided. Secondly, if the Government accepts it, the amendment comes into the piture.

ಉಪಸಭಾಪತಿಗಳು : ನಾನು ತಿಪ್ಪಣ್ಣನವರು ಮಾತನಾಡುವಾಗ ನಿರ್ಣಯದ ಮೇಲೆ ತಿದ್ದುಪಡಿ ಮಂಡನೆ ಮಾಡುತ್ತಾರೆಂದು ಅಂದುಕೊಂಡಿರಲಿಲ್ಲ. ಸಿದ್ದಲಿಂಗಯ್ಯನವರ ವಾದಕ್ಕೆ ಅವರು ಪುಷ್ಟಿ ಕೊಡುವರೆಂದು ಭಾವಿಸಿಕೊಂಡಿದ್ದೆ.

ಎನ್. ತಿಪ್ಪಣ್ಣ : ಅವರು ನಿರ್ಣಯ ಮಂಡನೆ ಮಾಡಿದ ಒಂದೇ ವಾರದಲ್ಲಿ ನಾನೂ ನಿರ್ಣಯವನ್ನು ಕಳಿಸಿದ್ದೆ.

ಕೆ.ಎನ್. ನಾಗೇಗೌಡ : Sir, the Hon, Member has moved the amendment to the resolution. He

was given a notice for that. Now a decision is to be taken as to which has to be taken first; either the amendment or the main resolution.

ಉಪಸಭಾಪತಿಗಳು : ಸಿದ್ದಲಿಂಗಯ್ಯನವರ ವಾದಕ್ಕೆ ಮಾನ್ಯ ತಿಪ್ಪಣ್ಣನವರು ಪುಷ್ಟಿ ಕೊಡುತ್ತಾರೆಂಬುದು ನನ್ನ ಡೀಪ್ ಇಂಪ್ರೆಶನಾಗಿತ್ತು. ಆದರೂ ಈಗ ಮೇನ್ ಸಬ್‌ಜೆಕ್ಟ್ ಮೇಲೆ ಡಿಸ್ಕಸ್ ಮಾಡೋಣ. ಆದಾದಮೇಲೆ ಸರ್ಕಾರ ಒಪ್ಪುವುದಾದರೆ ತಿದ್ದುಪಡಿ ಬಗ್ಗೆ ನಂತರ ನೋಡೋಣ.

(ಗೊಂದಲ)

ಡಿ.ಹೆಚ್. ಶಂಕರಮೂರ್ತಿ: ಸಭಾಪತಿಗಳೇ, ಆ ಕಡೆ ಉತ್ತರ ಕೊಡಲು ಶಿವಣ್ಣನವರು, ಈ ಕಡೆ ಚರ್ಚೆ ಮಾಡಲು ರಂಗಯ್ಯನವರು, ಈ ಇಬ್ಬರೂ ಅವಿವಾಹಿತರೆ. ಇವರಿಬ್ಬರ ಮಧ್ಯೆ ನಾವು ಸಿಕ್ಕಿಕೊಂಡಿದ್ದೇವೆ. ಆದ್ದರಿಂದ ನನಗೆ ಮೊದಲು ಅವಕಾಶ ಕೊಡಿ.

ಟಿ.ಎ. ರಂಗಯ್ಯ : ಮಾನ್ಯ ಸಭಾಪತಿಗಳೇ, ಕ್ರಾಂತಿಕಾರಕವಾದ ನಿರ್ಣಯವನ್ನು ಮಾನ್ಯ ಸಿದ್ದಲಿಂಗಯ್ಯನವರು ತಂದಿದ್ದಾರೆ. ನಾನು ಮದುವೆ ಮಾಡಿಕೊಳ್ಳಬೇಕೆಂದು ಅವರು ಅದನ್ನು ತಂದಿದ್ದಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಾಮೂಹಿಕ ವಿವಾಹಗಳಿಗೆ ಮಾರ್ಗದರ್ಶನ ನೀಡಿದವರಲ್ಲಿ ನಾನೇ ಮೊದಲಿಗನು. ಸಿದ್ದಲಿಂಗಯ್ಯನವರದು ಕ್ರಾಂತಿಕಾರಕ ನಿರ್ಣಯ ವಾಗಿದೆ. ಮನುಷ್ಯ ಹುಟ್ಟಿದಾಗ ಅವನಿಗೆ ಯಾವುದೇ ಜಾತಿ ಇರಲಿಲ್ಲ. ರಾಮಾಯಣ ಬರೆದ ವಾಲ್ಮೀಕಿ ಬೇಡರವನು. ಮಹಾಭಾರತ ಬರೆದ ವ್ಯಾಸ ಮತ್ಸ್ಯಗಂಧಿ ಹೊಟ್ಟೆಯಲ್ಲಿ ಹುಟ್ಟಿದವನು. ಮಹಾಕವಿ ಕಾಳಿದಾಸ ಕುರುಬರವನು. ವೇದಗಳ ಬಗ್ಗೆ ವಿದ್ಯಾವಂತರು ಬಹಳವಾಗಿ ಹೇಳುವುದೇನೆಂದರೆ ವೇದಕ್ಕೆ ಸೃಷ್ಟಿಕರ್ತ ಎಂದು ಯಾರೂ ಇಲ್ಲ. ವೇದಗಳು ಜನಪದ ಗೀತೆಗಳು ಎಂದು. ರಾಗಿಕಲ್ಲನ್ನು ಬೀಸುವಾಗ ಈ ಪದಗಳನ್ನು ಹೇಳುತ್ತಾರೆ. ಜನಪದ ಗೀತೆಗಳು ಆಯಾ ಜನಗಳೇ ಹಾಡಿಕೊಂಡಂಥದ್ದು. ವೇದಗಳನ್ನು ಬರೆದಂಥವರು ಶ್ರೀಸಾಮಾನ್ಯರು ಹಾಗ ಕೆಳದರ್ಜೆಯ ಜನರೇ, ಯಾವುದೋ ಒಂದು ವರ್ಗದ ಕೈಗೆ ಇದು ಸೇರಿ ಇವೊತ್ತು ವೇದ ಪುರಾಣ ಎಂದೆಲ್ಲಾ ಆಗಿಬಿಟ್ಟಿದೆ. ಅಲ್ಲದೇ ಇಂಥವರೇ ಇದನ್ನು ಓದಬೇಕು ಎಂಬ ಬಿಕ್ಕಟ್ಟನ್ನು ಕೂಡ ಸೃಷ್ಟಿಸಲಾಗಿದೆ. ಇದನ್ನು ನಾವು ಬ್ರೇಕ್ ಮಾಡಬೇಕಾಗುತ್ತದೆ. There is no alternative, we have to break. ಯಾವಾಗಲೂ ನಮ್ಮದು ಜಾತ್ಯಾತೀತ ರಾಷ್ಟ್ರ ಎಂದು ಹೇಳಿಕೊಂಡು, ಬರೆದುಕೊಂಡು ಉದ್ದಕ್ಕೂ ಚರ್ಚೆ ಮಾಡುತ್ತಲೇ ಇದ್ದೇವೆ. ಆದರೆ ಅದು ಕಾರ್ಯಗತ ಆಗಿದೆಯೇ? ಬಹುಶಃ ಈ ಒಂದು ನಿರ್ಣಯ, ಇಂಟರ್ ಕ್ಯಾಸ್ಟ್ ಮ್ಯಾರೇಜಸ್‌ಗೆ ಮೀಸಲಾತಿ ನೀಡುವ ನಿರ್ಣಯ ಸಮಾಜವನ್ನು ಗಂಭೀರವಾಗಿ ಬದಲಾವಣೆ ಮಾಡುವಂಥದ್ದು. ಈ ವಿಚಾರದಲ್ಲಿ ಈಗಾಗಲೇ ಸಾಕಷ್ಟು ವಿಚಾರವಿನಿಮಯ ಕೂಡಾ ಆಗಿದೆ. ನಾನು ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸಂಪೂರ್ಣವಾಗಿ ಇದಕ್ಕೆ ಸಪೋರ್ಟ್ ಮಾಡಿ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಈ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಬಿ.ಟಿ. ಲಲಿತಾನಾಯಕ್ : ಮಾನ್ಯ ಉಪಸಭಾಪತಿಗಳೇ, ಇವತ್ತಿನ ದಿವಸ ಸಿದ್ದಲಿಂಗಯ್ಯನವರು ಮಂಡಿಸಿರುವಂಥ ನಿರ್ಣಯಕ್ಕೆ ಬಹುಶಃ ಎಲ್ಲರ ಒಪ್ಪಿಗೆ ಇರುವ ಹಾಗೆ ನನ್ನ ಒಪ್ಪಿಗೆ ಕೂಡಾ ಇದೆ. ಒಂದು ವಿಷಯ ಎಂದರೆ, ಅಂತರ್ಜಾತಿ ವಿವಾಹಗಳು ಯಾವಾಗಲೂ ಪ್ರೇಮದ ವಿವಾಹಗಳೇ ಆಗಿರುತ್ತವೆ. ಈ ಬಗ್ಗೆ ನಾನು ಒಂದು ಲೇಖನವನ್ನು ಕೂಡಾ ಬರೆದಿದ್ದೇನೆ. ಸುಮಾರು ಹತ್ತು ಜನ ದಂಪತಿಗಳ ಸಂದರ್ಶನವೂ ಇದ್ದ ಆ ಲೇಖನದಲ್ಲಿ ಹತ್ತು ವರ್ಷದ ನಂತರ ಅವರ ಜೀವನ ಯಾವ ರೀತಿ ಇರುತ್ತದೆ ಅನ್ನುವುದನ್ನು ಕೂಡಾ ಚಿತ್ರಿಸುವುದಕ್ಕೆ ಪ್ರಯತ್ನಪಟ್ಟಿದ್ದೆ. ಪ್ರೇಮವಿವಾಹಗಳು ಅಂದರೆ ಅಂತರ್ಜಾತಿ ವಿವಾಹಗಳು ಕೆಲವು ಕಾಲ ಮಾತ್ರ ಬಹಳ ಸುಂದರವಾಗಿ ಕಂಡು ಕೆಲವೇ ದಿವಸಗಳಲ್ಲಿ ಬೆಲೂನ್ ಒಡೆದ ಹಾಗೆ ಒಡೆದು ಹೋಗುತ್ತವೆ. ಇನ್ನೊಂದು ರೀತಿ ಅಂತರ್ಜಾತಿ ವಿವಾಹಗಳು ಕೇವಲ ಮೇಲುಜಾತಿಯ ಪ್ರೇಮದಿಂದ ಅಥವಾ ಹಣಕಾಸು ಕಾರಣದಿಂದ ಆಗುತ್ತವೆ. ಈಗ ಲಿಂಗಾಯಿತರು, ಬ್ರಾಹ್ಮಣರು ಎಂದು ಇಟ್ಟುಕೊಳ್ಳೋಣ. ಅವರಿಬ್ಬರಲ್ಲಿ ಒಳ್ಳೆಯ ಅಂಡರ್‌ಸ್ಟಾಂಡಿಂಗ್ ಇರುತ್ತದೆ. ಹುಡುಗಿ ಕಡೆಯವರಿಗೋ, ಹುಡುಗನ ಕಡೆಯವರಿಗೋ ಹೆಚ್ಚು ಆಸ್ತಿ ಇದ್ದಾಗ ಆ ಒಂದು ಕಾರಣದಿಂದಲೂ ಅವರು ಮದುವೆಯಾಗುವಂಥ ಸಂಭವ ಇರುತ್ತದೆ. ಏಕೆಂದರೆ ಇದರಿಂದ ಅವರಿಗೂ ಲಾಸ್ ಇಲ್ಲ, ಇವರಿಗೂ ಲಾಸ್ ಇಲ್ಲ. ಇದರಿಂದ ಯಾವ ಜನಾಂಗ ಮತ್ತು ದೇಶಕ್ಕೂ ಯಾವುದೇ ರೀತಿಯ ಒಳಿತಾಗುವಂಥ ಅವಕಾಶಗಳು ಇರುವುದಿಲ್ಲ.

ಆದರೆ ಇಲ್ಲಿ ನಾವು ಹೇಳುತ್ತಿರುವಂಥ ನಿರ್ಣಯ ಏನಿದೆ, ಇದರ ಮೂಲ ಉದ್ದೇಶ ದುರ್ಬಲ ಜಾತಿಯ ಹೆಣ್ಣು ಅಥವಾ ಗಂಡು, ಮೇಲುಜಾತಿಯ ಹೆಣ್ಣು ಅಥವಾ ಗಂಡಿನೊಡನೆ ಸಂಬಂಧವನ್ನು ಬೆಳೆಸಿದಾಗ ಆಗಬಹುದಾದ ಪ್ರಗತಿಯನ್ನು ಕುರಿತಾದ್ದು. ಆ ಒಂದು ಅರ್ಥದಲ್ಲಿಯೇ ಇದನ್ನು ಹೇಳಿರುವುದರಿಂದ ಇದಕ್ಕೆ ಬೇರೆ ಸದಸ್ಯರು ಏನು ತಿದ್ದುಪಡಿಯನ್ನು ತಂದಿದ್ದಾರೆ, ಅದು ಇಲ್ಲಿ ಬಹಳ ಸೂಕ್ತವಾಗುತ್ತದೆ. ಯಾರಿಗೆ ಅಂದರೆ ಅವರಿಗೆ ಮೀಸಲಾತಿಯನ್ನು ಕೊಡಿ ಎಂದು ಕೇಳಿದಾಗ ಇದರ ಉದ್ದೇಶ ಸಫಲವಾಗುವುದಿಲ್ಲ. ಜಾತಿ ದೇವರು, ಧರ್ಮ ಇಂಥದ್ದನೆಲ್ಲಾ ತಲೆಯಲ್ಲಿ ತುಂಬಿಕೊಂಡಂಥ ವ್ಯಕ್ತಿಗಳು ಅಂತರ್ಜಾತಿ ವಿವಾಹವನ್ನು ಮಾಡಿಕೊಂಡಾಗ ದೊಡ್ಡ ದುರಂತವೇ ಸಂಭವಿಸುತ್ತದೆ. ಇದನ್ನು ನಾನು ಅನುಭವದಿಂದ ಹೇಳುತ್ತಿದ್ದೇನೆ. ನಾವು ರಾಯಚೂರು ಜಿಲ್ಲೆಯಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಸುಮಾರು ೨೫ ಮದುವೆಗಳನ್ನು ಮಾಡಿಸಿದ್ದೇವೆ. ಅಂಥ ಕಡೆಗಳಲ್ಲಿ ಅವರು ಹೆಣ್ಣನ್ನು ಸುಟ್ಟು ಹಾಕುವುದಕ್ಕೆ ನೋಡುತ್ತಿದ್ದರು. ಮೊದಲು ಯಾವುದೋ ಒಂದು ಆವೇಶದಲ್ಲಿ ಅಥವಾ ಪ್ರೇಮಿಸುತ್ತಿದ್ದೇವೆ ಎಂದು ಭಾವಿಸಿ ಮದುವೆ ಮಾಡಿಕೊಂಡು ಆಮೇಲೆ ಅವಳ ಸಂಸ್ಕೃತಿಯೇ ಬೇರೆ, ಅವರ ಮನೆ ಕಡೆಯವರಿಗೂ ನಮ್ಮ ಮನೆ ಕಡೆಯವರಿಗೂ ಹೊಂದಾಣಿಕೆ ಆಗುವುದಿಲ್ಲ, ಪ್ರಾಯದಲ್ಲಿ ತಪ್ಪು ಮಾಡಿಬಿಟ್ಟೆ, ಅದಕ್ಕೋಸ್ಕರ ಏನಾದಲೂ ಮಾಡಿ ಅವಳನ್ನು ಬಿಡಬೇಕು ಎಂಬ ಮಾತುಗಳನ್ನು ಆಡುತ್ತಾರೆ. ಇಷ್ಟು ಸಾವಿರ ರೂಪಾಯಿ, ಇಷ್ಟು ಲಕ್ಷ ರೂಪಾಯಿಯನ್ನು ಕೊಡುತ್ತೇವೆ, ನೀವು ದೂರ ಆಗಿ ಎನ್ನುಂಥ ಮಾತುಗಳು ಕೂಡಾ ಬಂದಿವೆ. ಇಂಥ ಒಂದೆರಡು ಪ್ರಕರಣದಲ್ಲಿ ನಾವು ರಾಜಿ ಮಾಡಿಸಿದಾಗ ಕೊನೆಗೆ ಅನಿವಾರ್ಯವಾಗಿ ಒಪ್ಪಿಕೊಂಡು ಒಂದು ರಾತ್ರಿ ಸೀಮೆಎಣ್ಣೆಯನ್ನು ಸುರಿದು ಒಬ್ಬಳನ್ನು ಸುಡುವುದಕ್ಕೆ ಪ್ರಯತ್ನಪಟ್ಟರು. ಹೀಗೆ ಆವೇಶದಲ್ಲಿ ಆದಂಥ ಮದುವೆಗಳು ಕೂಡಾ ಬಹಳ ದುರಂತಕ್ಕೆ ಈಡಾಗುತ್ತವೆ. ಇದನ್ನು ಕೂಡಾ ಇಲ್ಲಿ ಗಮನಿಸಬೇಕಾಗುತ್ತದೆ.

ಯಾವಾಗಲೂ ಕೂಡಾ ಮೇಲುಜಾತಿಯ ಹುಡುಗರು ಕೆಳಜಾತಿಯ ಹುಡುಗಿಯನ್ನು ಮದುವೆಯಾದರೆ ನಾವು ಹೆಚ್ಚು ಮಹತ್ವವನ್ನು ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ದಲಿತ ವರ್ಗದ ಹುಡುಗಿಯನ್ನು ಯಾರೂ ಮದುವೆ ಮಾಡಿಕೊಳ್ಳುವುದಿಲ್ಲ. ಈಗ ನಮ್ಮ ಸಂಬಂಧಿಕರಲ್ಲಿ ಎಷ್ಟೋ ಜನ ಹುಡುಗರು ಬ್ರಾಹ್ಮಣರು ಮತ್ತು ಲಿಂಗಾಯಿತರು

ಹುಡುಗಿಯರನ್ನು ಮದುವೆ ಮಾಡಿಕೊಂಡಿದ್ದಾರೆ. ಹೀಗಾದಾಗ ಕೆಳಜಾತಿಯ ಹುಡುಗಿಯುಗೆ ಲಾಸ್ ಆಗುತ್ತದೆ. ಆವಳು ಜನ್ನ ಜೀವನದಲ್ಲಿ ಏನು ಸುಖವನ್ನು ಅನುಭವಿಸಬೇಕಾಗಿತ್ತೋ ಅದರಿಂದ ವಂಚಿತಳಾಗುತ್ತಾಳೆ. ಏಕೆಂದರೆ ಮೇಲುಜಾತಿಯ ಹುಡುಗಿಯ ವಶದಲ್ಲಿ ಈ ಹುಡುಗರು ಇರುತ್ತಾರೆ ಮತ್ತು ಮನೆ ಕಡೆಗೆ ತಿರುಗಿ ಕೂಡಾ ನೋಡುವುದಿಲ್ಲ. ಇಂಥದ್ದೂ ಕೂಡ ನಡೆಯುತ್ತಿದೆ. ಈ ಬಗ್ಗೆ ಅವನು ಹೇಳುವುದು, ನಾನು ಮೇಲು ಜಾತಿಯ ಹುಡುಗಿಯನ್ನು ಮದುವೆಯಾಗಿದ್ದೇನೆ... ಇವರೆಲ್ಲಾ ಕೀಳು ಎಂದು. ಎಷ್ಟೋ ಜನ ಅಪ್ಪನನ್ನು ಅಪ್ಪ ಎಂದು ಹೇಳಿಲ್ಲ. ಮನೆಗೆ ಬಂದ ತಂದೆಯನ್ನೋ ಅಥವಾ ತಾಯಿಯನ್ನೋ ಇವರು ಯಾರು ಎಂದು ಕೇಳಿದರೆ, ನನ್ನ ತಂದೆ ತಾಯಿ ಎಂದು ಕೂಡಾ ಹೇಳುವುದಿಲ್ಲ. ಮನೆಯ ಕೆಲಸದವರು ಅಥವಾ ನಮ್ಮ ಊರಿನವರು ಎಂದು ಹೇಳಿಕೊಂಡವರು ಇದ್ದಾರೆ. ಇಂಥ ನೀಚ ಜನಗಳು ಕೂಡ ಅಂತರ್ಜಾತಿ ವಿವಾಹವನ್ನು ಮಾಡಿಕೊಳ್ಳುವ ಅವಕಾಶಗಳು ಇವೆ. ಆದುದರಿಂದ ಅಂರ್ಜಾತಿ ವಿವಾಹ ಮಾಡಿಕೊಳ್ಳುವವರೆಲ್ಲರೂ ಆದರ್ಶಪ್ರೇಮಿಗಳೆಂದು ಹೇಳುವುದಕ್ಕಾಗು ವುದಿಲ್ಲ. ಮತ್ತು ಎಲ್ಲರೂ ಆದರ್ಶವಾದಂಥ ವಿಚಾರವನ್ನು ತಲೆಯಲ್ಲಿ ಇಟ್ಟುಕೊಂಡು ಮಾಡಿಕೊಳ್ಳುವುದಿಲ್ಲ. ಆದುದರಿಂದ ಕೆಳಜಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅತ್ಯಂತ ದುರ್ಬಲ ಜನಾಂಗದ ಹೆಣ್ಣು ಅಥವಾ ಗಂಡನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೋ ಅಂಥ ಪ್ರೇಮಿಗಳಿಗೆ, ಅಂಥ ದಂಪತಿಗಳಿಗೆ ಎಲ್ಲಾ ಸೌಲಭ್ಯಗಳನ್ನು ಕೊಡುವುದರ ಜೊತೆಗೆ ಈ ಐದು ಪರ್ಸೆಂಟ್ ಮೀಸಲಾತಿ ಏನು ಇದೆ, ಅದನ್ನು ಕೊಡುವುದು ಸೂಕ್ತ ಎಂದು ನನ್ನ ಭಾವನೆ, ಇದನ್ನು ಮಾಡಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಡಾ. ಎಂ. ಪಿ. ನಾಡಗೌಡ : ಮಾನ್ಯ ಸಭಾಪತಿಯವರೆ, ಇಲ್ಲಿ ಮಾನ್ಯ ಸಿದ್ದಲಿಂಗಯ್ಯನವರು ಮಂಡನೆ ಮಾಡಿರುವುದು ಬಹಳ ಮಹತ್ವವಾದಂಥ ನಿರ್ಣಯ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಲ್ಲಿ ಬರುವಂಥ ಪ್ರಶ್ನೆ ಅಂದರೆ ಮದುವೆ, ಮದುವೆಗಳಲ್ಲಿ ಎರಡು ತರಹ. ಒಂದು ಅರೇಂಜಡ್ ಮ್ಯಾರೇಜ್, ಮತ್ತೊಂದು ಲವ್ ಮ್ಯಾರೇಜ್, ಅರೇಂಜ್ಡ್ ಮ್ಯಾರೇಜ್ ಎಷ್ಟು, ಇಂಟರ್ ಕ್ಯಾಸ್ಟ್ ಮ್ಯಾರೇಜ್ ಎಷ್ಟು ಆಗಿದೆ ಎನ್ನುವಂತಾದ್ದು ಬಹಳ ಮುಖ್ಯ. ಇನ್ನು ಲವ್ ಮ್ಯಾರೇಜ್ ಎಂದರೆ ಅದು ಒಬ್ಬ ಹುಡುಗ ಒಂದು ಹುಡುಗಿಯನ್ನು ಪ್ರೀತಿ ಮಾಡುವುದು ಇರಬಹುದು. ಅಥವಾ ಒಂದು ಹುಡುಗಿ ಒಬ್ಬ ಹುಡುಗನನ್ನು ಪ್ರೀತಿ ಮಾಡತಕ್ಕಂಥದ್ದು ಇರಬಹುದು. ಅಂತಹವರಲ್ಲಿ ಕೆಲವರು ಮದುವೆಯಾಗುತ್ತಾರೆ. ಇಂಟರ್ ಕ್ಯಾಸ್ಟ್‌ನಲ್ಲಿ ಅರೇಂಜ್ಡ್ ಬಹಳ ಕಡಿಮೆ. ಎಷ್ಟೋ ಲವ್ ಮ್ಯಾರೇಜ್ ಸಕ್ಸಸ್ ಆಗಿವೆ. ಅದೇ ತರಹ ಕೆಲವೊಂದು ಫೆಲ್ಯೂವ್ ಕೂಡ ಆಗಿವೆ, ಅದೇ ರೀತಿ ಅರೇಂಜ್ಡ್ ಮ್ಯಾರೇಜಿನಲ್ಲಿಯೂ ಕೂಡ ಆಗಿವೆ. ಎಷ್ಟೋ ಅರೇಂಜ್ಡ್ ಮ್ಯಾರೇಜ್ ಆದದ್ದು ಡೈವರ್ಸ್ ಆಗಿವೆ. ಫೆಲ್ ಆಗಿವೆ. ಅಂದಾಕ್ಷಣಕ್ಕೆ ಲವ್‌ಮ್ಯಾರೇಜ್ ಮಾತ್ರ ಸರಿ ಅಥವಾ ಅರೇಂಜ್ಡ್ ಮ್ಯಾರೇಜೇ ಸರಿ ಎಂದು ಇನ್ನು ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ.

ಮಾನ್ಯ ಸಿದ್ದಲಿಂಗಯ್ಯನವರು ಬಹಳ ಮಹತ್ವವಾದ ಒಂದು ವಿಷಯವನ್ನು ಹೇಳಿದರು. ಅದು ಹೆಲ್ತ್ ಆಸ್ಪೆಕ್ಟ್ ಬಗ್ಗೆ. ಮ್ಯಾರೇಜ್ ವಿತ್ ಅಮಾಂಗ್ ದಿ ಫ್ಯಾಮಿಲಿಸ್ ಪದ್ಧತಿ ನಮ್ಮಲ್ಲಿ ಇದೆ. ನಾವು ತಾಯಿ ತಮ್ಮನ ಮಗಳನ್ನು ತೆಗೆದುಕೊಳ್ಳುವುದು, ತಾಯಿ ತಮ್ಮನ ಮಗನಿಗೆ ಕೊಡುವುದು, ಸಿಸ್ಟರ್ ಮಗಳನ್ನು ಮದುವೆಯಾಗುವುದು ಇದೆಲ್ಲಾ ಇದೆ. ಇದು ಕಂಟಿನ್ಯೂಯಸ್ ಆಗಿ ಸೆವೆನ್ತ್ ಜನರೇಷನ್‌ವರೆಗೆ ಆದರೆ ಮಕ್ಕಳಲ್ಲಿ ಇಂಟೆಲಿಜೆನ್ಸ್ ಪೋರೇಷನ್ ಬಹಳ ಕಡಿಮೆಯಾಗುತ್ತದೆ ಎಂದು ಸೈಂಟಿಫಿಕಲಿ ಪ್ರೂವ್ ಆಗಿದೆ. ಆದಕ್ಕೋಸ್ಕರವೇ ಸ್ವಂತ ಕುಟುಂಬದಲ್ಲಿ ಹೆಚ್ಚು ಮದುವೆಗಳು ಆಗಬಾರದೆಂದು ಹೇಳುತ್ತಾರೆ. ಈಗ ನಮ್ಮಲ್ಲಿ ಮದುವೆ ಆಗಬೇಕಾದರೆ ಜಾತಕ ನೋಡುವ ಪದ್ಧತಿ ಇದೆ. ಈಗ ಸೈಂಟಫಿಕಲಿ ಹೇಳಬೇಕಾದರೆ ಟೆಸ್ಟ್‌ಟ್ಯೂಬ್ ಬೇಬಿ ಕೂಡ ಬಂದಿದೆ. ನಾವು ಈಗ ಯಾವ ಟೈಪ್ ಜೀನಿಯಸ್ ಬೇಕಾದರೂ ಈ ಟೆಸ್ಟ್‌ಟ್ಯೂಬಿನಲ್ಲಿ ಪ್ರೊಡ್ಯೂಸ್ ಮಾಡಬಹುದು. ಆ ಜೀನ್ಸ್ ಈ ಜೀನ್ಸ್ ಕೂಡಿಸಿ ಇದನ್ನು ಮಾಡಿದರೆ ಒಂದು ಎಕ್ಸ್‌ಟ್ರಾ ಜೀನ್ಸ್ ಪ್ರೊಡ್ಯೂಸ್ ಮಾಡಿ ಸೂಪರ್ ಹ್ಯೂಮನ್‌ಬೀಯಿಂಗ್ ಪ್ರೊಡ್ಯೂಸ್ ಮಾಡುವಂಥ ಸೈಂಟಿಫಿಕ್ ಏಜ್‌ನಲ್ಲಿ ನಾವು ಬಂದಿದ್ದೇವೆ. ಇದು ಬಹಳ ಮುಖ್ಯವಾದುದು. ಈ ಒಂದು ಮದುವೆ ವಿಷಯದಲ್ಲಿ ಮಾನ್ಯ ತಿಪ್ಪಣ್ಣನವರು ಒಂದು ಅಮೆಂಡ್ಮೆಂಟ್ ತಂದಿದ್ದಾರೆ. ನಮ್ಮ ತಿಪ್ಪಣ್ಣನವರು ಫಾರ್ ದಿ ಬೆನಿಫಿಟ್‌ಷೇಕ್ ಶೆಡ್ಯೂಲ್ಡ್ ಕ್ಯಾಸ್ಟ್‌ನವರು ಹೈಯರ್ ಲೋಯರ್ ಕ್ಯಾಸ್ಟ್‌ನವರನ್ನು ಮದುವೆಯಾದರೆ ಅಂತಹವರಿಗೆ ಬೆನಿಫಿಟ್ ಸಿಕ್ಕಬೇಕು ಎಂದು ತಿದ್ದುಪಡಿ ತಂದಿದ್ದಾರೆ. ಆದರೆ ಸಿದ್ದಲಿಂಗಯ್ಯನವರ ಮೂಲ ಉದ್ದೇಶ ಇಂಟರ್‌ಕ್ಯಾಸ್ಟ್ ಮ್ಯಾರೇಜ್. Benefit should go to such people. I agree. But the very purpose fo the Resolution is that there should be encouragement to intercaste marriage.

ಡಾ. ಸಿದ್ದಲಿಂಗಯ್ಯನವರು ಗೆಜೆಟೆಡ್ ನೌಕರಿ ಬಯಸುವವರು ಇಂಟರ್ ಕ್ಯಾಸ್ಟ್ ಮ್ಯಾರೇಜ್ ಆದರೆ ಮಾತ್ರ ನೌಕರಿ ಪಡೆಯಲು ಸಾಧ್ಯ ಎನ್ನುವಂತಾದ್ದು ಇರಬೇಕೆಂದು ಹೇಳಿದರೆ ಅದು ಆಗಬೇಕು ಎಂದು ಹೇಳಲೇಬೇಕಾಗುತ್ತದೆ. I agree hundred percent. The other should not be allowed

ಎನ್. ತಿಪ್ಪಣ್ಣ : The court will disagree agree

ಡಾ. ಎಂ.ಪಿ. ನಾಡಗೌಡ : Legally that is different. ತಾವು ಈ ತರಹ ರೆವಲ್ಯೂಷನರಿ ಸ್ಟೆಪ್ ತೆಗೆದುಕೊಳ್ಳಬೇಕು. ಬಡವರು ಸಣ್ಣಸಣ್ಣ ಜನ ಯಾರಾದರು ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಆದರೆ ಅವರ ಮಕ್ಕಳುಗಳ ಬಗ್ಗೆ ಸೊಸೈಟಿ ಒಪ್ಪಿಕೊಳ್ಳುವುದಿಲ್ಲ. ಇದನ್ನು ನಾವೆಲ್ಲ ನೋಡಿದ್ದೇವೆ. ಅದೇ ದೊಡ್ಡ ದೊಡ್ಡ ರಾಜಕಾರಣದಲ್ಲಿರುವವರ ಮನೆಗಳಲ್ಲಿ ಇಂಟರ್ ಕ್ಯಾಸ್ಟ್ ಮ್ಯಾರೇಜ್ ಆದರೆ, ಅವರ ಮಕ್ಕಳನ್ನು ಸೊಸೈಟಿ ಅಕ್ಸೆಪ್ಟ್ ಮಾಡುತ್ತದೆ. ಮೊನ್ನೆ ಬಾಂಬೆಯಲ್ಲಿ ಒಂದು ಮದುವೆ ಆಯಿತು. ಅವರ ಹೆಸರು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಬೇರೆಬೇರೆ ಸಮಾಜ, ಬೇರೆ ಬೇರೆ ಧರ್ಮದವರು; ನಾಟ್ ಓನ್ಲಿ ಕ್ಯಾಸ್ಟ್, ಇಂಟರ್ ಕಮ್ಯುನಲ್ ಮ್ಯಾರೇಜ್. There should be marriages among the different communities we should encourage that.

ಅವು ಸಹಿತ ಸೊಸೈಟಿಯಲ್ಲಿ ಅಕ್ಸೆಪ್ಟ್ ಆಗುತ್ತವೆ. ಆದಕ್ಕೆ ಒಂದು ಸ್ಪಷ್ಟೀಕರಣ ಕೊಟ್ಟು ಹೇಳುವುದಾದರೆ ಶೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ಬೇರೆಯವರು ಮದುವೆ ಆದರೆ ಅವರಿಗೆ ಈ ಬೆನಿಫಿಟ್ ಸಿಕ್ಕಲಿ ಎಂದು ಹೇಳುತ್ತೇನೆ. In the same way the other intercaste marriages should also be encouraged. For that the Government should consider giving some benefit.

ಡಿ.ಹೆಚ್. ಶಂಕರಮೂರ್ತಿ : ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದಲಿಂಗಯ್ಯನವರು ತಂದಿರುವಂಥ ಈ ನಿರ್ಣಯ ತುಂಬಾ ಕ್ರಾಂತಿಕಾರಕ ವಾದದ್ದು. ನಾನು ಆದಕ್ಕೆ ಪೂರ್ಣ ಬೆಂಬಲವನ್ನು ಸೂಚಿಸಿ ಎರಡು

ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂತರ್ಜಾತಿ ವಿವಾಹಕ್ಕೆ ನಾವು ಪ್ರೋತ್ಸಾಹ ಕೊಡಬೇಕು. ಏಕೆ ಕೊಡಬೇಕೆಂಬುದಕ್ಕೆ ಕಾರಣಗಳನ್ನು ಅವರು ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ಸರ್ಕಾರದ ಎದುರಿಗೇ ನಿರ್ಣಯವನ್ನು ಈ ಸಭೆಯ ಮೂಲಕ ನಾವು ತರುತ್ತಿದ್ದೇವೆ. ನಾವು ಸರ್ಕಾರ ಮತ್ತು ಆ ಪಕ್ಷದವರನ್ನು ಕೇಳಿಕೊಳ್ಳುವುದು ಇಷ್ಟೆ. ತಾವು ಯಾವುದೇ ಒಂದು ಪ್ರೆಸ್ಟೀಜ್ ಮೇಲೆ ನಿಲ್ಲಬೇಡಿ. ನಾವು ಈ ಸಭೆಯಲ್ಲಿ ಈ ನಿರ್ಣಯವನ್ನು ಪಾಸು ಮಾಡೋಣ. ಇವತ್ತು ಈ ನಿರ್ಣಯ ಜಾರಿಗೆ ತರುವುದರ ಮೂಲಕ ಸಾಮಾಜಿಕ ಬದಲಾವಣೆಯನ್ನು ಮಾಡಿದರೆ ಪ್ರತ್ಯೇಕವಾಗಿ ಮುಂದೆ ಹೆಜ್ಜೆ ಇಡತಕ್ಕ ಒಂದು ಅವಕಾಶ ನಮ್ಮ ರಾಜ್ಯಕ್ಕೆ ಸಿಕ್ಕುತ್ತದೆ. ಅದಕ್ಕಾಗಿ ಯಾವುದೇ ಕುಂಟುನೆಪ ಹಾಕದೇ, ಯಾವುದೇ ಒಂದು ಟೆಕ್ನಿಕಲ್ ಪಾಯಿಂಟ್ ಅಡ್ಡ ತರದೇ ದಯಮಾಡಿ ಈ ಸರ್ಕಾರ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕು.

ಮಾನ್ಯ ಸಿದ್ದಲಿಂಗಯ್ಯನವರು ತಮ್ಮ ನಿರ್ಣಯದಲ್ಲಿ ಮೀಸಲಾತಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈವೊತ್ತು ಇಡೀ ದೇಶದಲ್ಲಿ ಮೀಸಲಾತಿ ಬಗ್ಗೆ ದೊಡ್ಡ ಚರ್ಚೆ, ಹೋರಾಟ ನಡೆಯುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ಕರ್ನಾಟಕದೊಳಗೆ ಮೀಸಲಾತಿ ಸಮಸ್ಯೆಗೆ ಒಂದು ಹೊಸ ದಿಕ್ಕನ್ನು ಕೊಟ್ಟಂಥ ಕೀರ್ತಿಗೆ ತಾವು ಪಾತ್ರರಾಗಬೇಕಾದರೆ ಈ ಒಂದು ನಿರ್ಣಯವನ್ನು ಒಪ್ಪಿಕೊಳ್ಳಬೇಕು.

ಇನ್ನೊಂದು ವಿಷಯ ಎಂದರೆ ಮೀಸಲಾತಿ ಕೊಡುವಾಗ ಅದರೊಳಗೆ ಫರ್‌ದರ್ ಲಿಮಿಟೇಷನ್ ಹಾಕಬೇಕೆಂಬುದು. ಮೇಲ್ಜಾತಿಯವರು ಕೆಳಜಾತಿಯವರನ್ನು ಅಥವಾ ಕೆಳಜಾತಿಯವರು ಮೇಲ್ಜಾತಿಯವರನ್ನು ಮದುವೆಯಾದಾಗ ಅದರಲ್ಲಿ ಫರ್‌ದರ್ ಲಿಮಿಟೆಡ್ ಹಾಕಲಿಕ್ಕೆ ಸಾಧ್ಯತೆ ಇದೆ. ಮೊದಲನೆಯದಾಗಿ ನಾವು ಮೀಸಲಾತಿಯನ್ನೇ ಪ್ರಾರಂಭಮಾಡಿಲ್ಲ. ಮೊದಲು ಮೀಸಲಾತಿ ಪ್ರಾರಂಭ ಮಾಡೋಣ. ಮೇಲ್ಜಾತಿಯವರು ಕೆಳಜಾತಿಯವರನ್ನು ಮದುವೆ ಮಾಡಿಕೊಳ್ಳುತ್ತಾರೋ ಅಥವಾ ಕೆಳಜಾತಿಯವರು ಮೇಲ್ಜಾತಿಯವರನ್ನು ಮದುವೆ ಮಾಡಿಕೊಳ್ಳುತ್ತಾರೋ, ಅದು ಆಮೇಲೆ ಬರುತ್ತದೆ. ಮೊದಲು ೫ ಪರ್‌ಸೆಂಟ್ ರಿಸರ್ವ್ ಮಾಡೋಣ. ಇದರಲ್ಲಿ ಮತ್ತೆ ಪ್ರಿಫರೆನ್ಸ್ ಕೊಡಲಿಕ್ಕೆ ಬರುತ್ತದೆ. ಈವೊತ್ತು ೫ ಪರ್ಸೆಂಟ್ ರಿಸರ್ವೇಷನ್ ಇದೆ ಎಂದು ಇಟ್ಟುಕೊಳ್ಳೋಣ. ಈಗ ೫ ಸೀಟುಗಳು ಖಾಲಿ ಇದ್ದರೆ, ಅದಕ್ಕೆ ಯಾರು ಯಾರು ಅಪ್ಲೈ ಮಾಡಿರುತ್ತಾರೆ, ಅದನ್ನು ನೋಡಿಕೊಂಡು ಕೊಡಬಹುದು. ಕೆಳಜಾತಿಯವರನ್ನು ಮೇಲ್ಜಾತಿಯವರು ಮಾಡಿಕೊಂಡಿದ್ದರೆ ಅವರಿಗೆ ಪ್ರಿಫರೆನ್ಸ್ ಸಿಕ್ಕುತ್ತದೆ. ಸಪೋಸ್ ಇಬ್ಬರೂ ಮೇಲ್ಜಾತಿಯವರು ಮಾಡಿಕೊಂಡಿದ್ದರೆ ಅವರಿಗೆ ಪ್ರಿಫರೆನ್ಸ್ ಸಿಕ್ಕುತ್ತದೆ. ಸಪೋಸ್ ಇಬ್ಬರೂ ಮೇಲ್ಜಾತಿಯವರು ಮಾಡಿಕೊಂಡಿದ್ದರೆ ಅವರಿಗೆ ಪ್ರಿಫರೆನ್ಸ್ ಸಿಕ್ಕುತ್ತದೆ. ಸಪೋಸ್ ಇಬ್ಬರೂ ಮೇಲ್ಜಾತಿಯವರೇ ಆಗಿದ್ದಾಗ ಆಗ ಬೇರೆ ಯಾವುದೇ ಅರ್ಜಿ ಇರಲಿಲ್ಲ ಅಂದರೆ ಅವರಿಗೇ ಕೊಡಬಹುದು, ತಪ್ಪೇನಿಲ್ಲ. ಅದರಲ್ಲಿಯೂ ಗ್ರೇಡ್ ಕೊಡಲಿಕ್ಕೆ ಬರುತ್ತದೆ.

ಮೊದಲು ಇದನ್ನು ಪ್ರಾರಂಭ ಮಾಡಿದರೆ ಕ್ರಮೇಣ ಕೆಳಜಾತಿಯವರು ಮೇಲ್ಜಾತಿಯವರನ್ನು ಮಾಡಿಕೊಳ್ಳುವ ಸಂಖ್ಯೆ ಜಾಸ್ತಿಯಾದ ಹಾಗೆಲ್ಲಾ ಮೇಲ್ಜಾತಿಯವರನ್ನು ಲೀಸ್ಟ್‌ನಿಂದ ಡಿಲೀಟ್ ಮಾಡಲಿಕ್ಕೆ ಬರುತ್ತದೆ. ಅದು ಬಿಟ್ಟು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ರಿಸ್ಟ್ರಿಕ್ಷನ್ ಹಾಕಿದರೆ ಸರಿಯಾಗುವುದಿಲ್ಲ. ಈಗ ತಾನೇ ನಮ್ಮ ಡಾಕ್ಟರ್‌ರವರು ಏಳು ಜನರೇಶನ್ ಆದ ತಕ್ಷಣ ಬುದ್ಧಿವಂತ ಮಕ್ಕಳು ಹುಟ್ಟುವುದಿಲ್ಲವೆಂದು ಹೇಳಿದರು. ಆದರೆ ನಮ್ಮ ಸಮಾಜದಲ್ಲಿ ಆ ಪದ್ಧತಿ ಇದೆ. ನಮ್ಮಲ್ಲಿ ಮದುವೆ ಆಗಬೇಕಾದರೆ ಸ್ವಗೋತ್ರದಲ್ಲಿ ಆಗಬಾರದೆಂಬ ನಂಬಿಕೆ ಇದ್ದು, ಒಂದೇ ಗೋತ್ರ ಆದರೆ ಅದು ಅಣ್ಣ ತಂಗಿ ಆಗುತ್ತದೆಂಬ ಭಾವನೆ ಬೆಳೆದುಬಂದಿದೆ. ಅದು ಇಲ್ಲ ಎಂದು ಅಲ್ಲ. ಆದರೆ ಇಂತಹ ಒಂದು ಮೀಸಲಾತಿಯನ್ನು ಕರ್ನಾಟಕದ ವಿಧಾನ ಪರಿಷತ್ತಿನಲ್ಲಿ ಇವೊತ್ತಿನ ನಿರ್ಣಯದ ಮೂಲಕ ಜಾರಿಗೆ ತಂದರೆ ಒಂದು ಹೊಸ ಪರ್ವವನ್ನು ಹುಟ್ಟುಹಾಕಿದಂತೆ. ಇಡೀ ದೇಶಕ್ಕೆ ಒಂದು ಹೊಸ ಮಾರ್ಗದರ್ಶನ ಮಾಡಿದಂತೆ ಆಗುತ್ತದೆ. ಬಸವಣ್ಣನವರ ಹೆಸರು ಹೇಳತಕ್ಕ ಕರ್ನಾಟಕ ಈ ನಿರ್ಣಯವನ್ನು ಪಾಸು ಮಾಡಬೇಕು. ಮಾನ್ಯ ಸಚಿವರು ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಎಲ್ಲರ ಪರವಾಗಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಕಣಗಲಿ ಓಂಪ್ರಕಾಶ್ ಶಂಕರಾನಂದ: ಮಾನ್ಯ ಉಪಸಭಾಪತಿಯವರೇ, ಮಾನ್ಯ ಸದಸ್ಯರು ಮಹಾಪುರುಷರ ಹೆಸರುಗಳನ್ನು ಉಲ್ಲೇಖಿಸಿ ಜಾತಿ ಪದ್ಧತಿಯನ್ನು ಹೋಗಲಾಡಿಸುವ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಅಂತರ್ಜಾತಿ ವಿವಾಹ ಎಂಬುದಕ್ಕೆ ಮೇಲ್ಜಾತಿ ಕೆಳಜಾತಿ ಎಂದು ನಿರ್ಬಂಧವನ್ನು ಹಾಕಬಾರದು. ಈ ಮಾತನ್ನು ಹೇಳುವಾಗ 'ಸತ್ಯಹರಿಶ್ಚಂದ್ರ' ಸಿನಿಮಾದ ಒಂದು ಹಾಡು ನನ್ನ ನೆನಪಿಗೆ ಬರುತ್ತದೆ.

"ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ
ಮತದಲ್ಲಿ ಮೇಲ್ಯಾವುದೋ
ಹುಟ್ಟೀ ಸಾಯುವ ಈ ಮನ್ಸ ಮನ್ಸನ ಮಧ್ಯೆ
ಕೀಳ್ಯಾವ್ದು, ಮೇಲ್ಯಾವುದೋ
ತಿಲಕ ಇಟ್ಟರೆ ಸ್ವರ್ಗವು ಬರದು
ವಿಭೂತಿ ಬಳಿದರೆ ಕೈಲಾಸ ಸಿಗದು..."

ಈ ರೀತಿ ಈ ಪ್ರಪಂಚದಲ್ಲಿ ಹುಟ್ಟಿದವರಿಗೆಲ್ಲಾ ಇರತಕ್ಕದ್ದು ಒಂದೇ ಕುಲ. ಇದನ್ನು ಕಂಡೇ ಡಾ. ಬಿ. ಆರ್. ಅಂಬೇಡ್ಕರ್‌ರವರೂ ಕೂಡ ಜಾತೀಯತೆ ಹೋಗದಿದ್ದರೆ ನಮ್ಮ ಡೆಮಾಕ್ರಸಿಗೆ ಬೆಲೆಯೇ ಇಲ್ಲ ಎಂದು ಹೇಳಿದ್ದಾರೆ. ಸ್ವಾಮಿ ವಿವೇಕಾನಂದರೂ ಕೂಡ ಇದನ್ನೇ ಉಲ್ಲೇಖ ಮಾಡಿ ಹೇಳಿದ್ದಾರೆ. ವಿಜ್ಞಾನ ಕೂಡ ಒಂದೇ ಜಾತಿಯಲ್ಲಿ ಮದುವೆಯಾದರೆ ರೋಗರುಜಿನಗಳು ಬರುತ್ತದೆಂದು ಹೇಳುತ್ತದೆ. ಆದುದರಿಂದಲೇ ಇರಬೇಕು, ಮಹಾರಾಷ್ಟ್ರದಲ್ಲಿ ಮದುವೆಯಾಗುವವರು ಜಾತಕವನ್ನು ಕೇಳುವುದಿಲ್ಲ. ಅದರ ಬದಲಿಗೆ ಬ್ಲಡ್ ಗ್ರೂಪ್ ಯಾವುದು? ಹೆಚ್. ಪಾಸಿಟಿವೋ ಅಥವಾ ನೆಗೆಟಿವೋ? ಎಂದು ಕೇಳುತ್ತಾರೆ. ಏಕೆಂದರೆ ಇದು ಬಹಳ ಎಫೆಕ್ಟ್ ಆಗುತ್ತದಂತೆ. ಬಹುಶಃ ಡಾಕ್ಟರ್‌ಗಳು ಇದರ ಬಗ್ಗೆ ಚೆನ್ನಾಗಿ ಹೇಳಬಹುದು. ಮಹಾರಾಷ್ಟ್ರದಲ್ಲಿ ಇದನ್ನು ಅಡಾಪ್ಟ್ ಮಾಡಿಕೊಂಡಿದ್ದಾರೆ. ಈ ರೀತಿ ಪ್ರತಿಯೊಂದನ್ನು ಕೂಡ ಅನಲೈಸ್ ಮಾಡುತ್ತಾ ಹೋದರೆ ಜಾತಿಯತೆಯನ್ನು ನಿರ್ಮೂಲನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ನನಗೆ ಗೊತ್ತಿರುವ ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಸ್ನೇಹಿತರೊಬ್ಬರು ಅಲ್ಪಸಂಖ್ಯಾತರ ಜಾತಿಗೆ ಸೇರಿದವರು. ಅವರು ಹಿಂದೂ ಧರ್ಮದ ಹುಡುಗಿಯನ್ನು ಲವ್ ಮ್ಯಾರೇಜ್ ಮಾಡಿಕೊಂಡರು. ಈ ಮದುವೆ ಬೇಡವೆಂದು ಹುಡುಗನ ಕಡೆಯವರೂ ಹೇಳಿದರು, ಅದೇ ರೀತಿ ಹುಡುಗಿಯ ಕಡೆಯವರೂ ಹೇಳಿದರು. ಇಬ್ಬರ ಕಡೆಯವರು ಈ ಮದುವೆಗೆ ಪ್ರೋತ್ಸಾಹವನ್ನು ಕೊಡಲಿಲ್ಲ. ಈವತ್ತು ನಮ್ಮ ದೇಶದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಇಂಥದನ್ನು ನಾವು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ಎಲ್ಲಾ ಜಾತಿಯವರಿಗೂ ಈ ಅವಕಾಶವನ್ನು ಕೊಡಬೇಕು. ಮೇಲ್ಜಾತಿ, ಕೆಳಜಾತಿ ಎಂಬ ನಿಬಂಧನೆಯನ್ನು ಇದಕ್ಕೆ ಹಾಕಬಾರದು. ೫ ಪರ್ಸೆಂಟ್ ಏನಿದೆ ಅದನ್ನು...

ಉಪಸಭಾಪತಿಯವರು: ೫ ಪರ್ಸೆಂಟ್ ಇರುವುದನ್ನು ೧೦ ಪರ್ಸೆಂಟ್ ಇಂಕ್ರೀಸ್ ಮಾಡಬೇಕೆಂದು ನಿಮ್ಮ ಅಭಿಪ್ರಾಯವೇ?

ಕಣಗಲಿ ಓಂಪ್ರಕಾಶ್ ಶಂಕರಾನಂದ : ಹೌದು, ೧೦ ಪರ್ಸೆಂಟ್ ಮಾಡಿದರೂ ಪರವಾಗಿಲ್ಲ. ಈ ದಿಸೆಯಲ್ಲಿ ನಮ್ಮ ಸದನ ದಿಟ್ಟ ಹೆಜ್ಜೆಯನ್ನು ಇಟ್ಟು ಈ ಸಮಸ್ಯೆಯನ್ನು ನಿವಾರಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಕೆ. ಎನ್. ನಾಗೇಗೌಡ: ಮಾನ್ಯ ಉಪಸಭಾಪತಿಯವರೇ, ಈ ವಿಷಯದ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅಲ್ಲದೇ ಈಗ ಹೆಚ್ಚಿನ ಸಮಯವಾಗಿರುವುದರಿಂದ ನನಗೆ ಮಾತನಾಡಲು ಕಾಲಾವಕಾಶ ಹೆಚ್ಚು ಇಲ್ಲ. ಇಂಥ ಒಂದು ಖಾಸಗಿ ನಿರ್ಣಯದ ಸಂದರ್ಭಗಳಲ್ಲಿ ಈ ಸದನದಲ್ಲಿ ನಡೆದು ಬಂದಿರತಕ್ಕ ಸಂಪ್ರದಾಯಗಳನ್ನು ಹೇಳುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ನಾನೂ ಕೂಡ ವಿರೋಧಪಕ್ಷದಲ್ಲಿ ಈ ಕಡೆ ಕೂತಿದ್ದಾಗ ಅನೇಕ ನಿರ್ಣಯಗಳನ್ನು ತಂದಿದ್ದೆ. ಅವತ್ತು ನಮಗೂ ಕೂಡ ಮೆಜಾರಿಟಿ ಇತ್ತು. ಆದರೆ ಆ ನಿರ್ಣಯಗಳು ಪಾಸ್ ಆಗಲಿಲ್ಲ. ಏಕೆಂದರೆ ಸರ್ಕಾರದ ಮೇಲೆ ನಂಬಿಕೆ ಇಟ್ಟು ಖಾಸಗಿ ನಿರ್ಣಯವನ್ನು ತಂದು, ಎಲ್ಲಾ ವಿಚಾರಗಳನ್ನೂ ಸರ್ಕಾರದ ತಲೆಗೆ ತುಂಬಿ, ಸರ್ಕಾರದಿಂದಲೇ ಒಂದು ಅಫಿಷಿಯಲ್ ಬಿಲ್ಲನ್ನು ತನ್ನಿ ಎನ್ನತಕ್ಕ ಸಂಪ್ರದಾಯವನ್ನು ನಾವು ಇದುವರೆಗೂ ಪಾಲಿಸಿಕೊಂಡು ಬಂದಿದ್ದೇವೆ.

ಡಿ. ಹೆಚ್. ಶಂಕರಮೂರ್ತಿ : ಸರ್ಕಾರವೇ ಇದನ್ನು ತನ್ನ ನಿರ್ಣಯವನ್ನಾಗಿ ಕನ್ವರ್ಟ್ ಮಾಡಿದರೆ ಅದಕ್ಕೆ ನಮ್ಮ ಒಪ್ಪಿಗೆ ಇದೆ.

ಕೆ. ಎನ್. ನಾಗೇಗೌಡ : ಸರ್ಕಾರದ ಮೇಲೆ ವಿಶ್ವಾಸವನ್ನಿಟ್ಟು ನಾವು ಈ ಬಿಲ್ಲಿನ ಮಹತ್ವವನ್ನು, ಇದರ ಹಿನ್ನೆಲೆಯನ್ನು ಹೇಳಲೇಬೇಕಾಗುತ್ತದೆ. ಮಾನ್ಯ ಸಿದ್ದಲಿಂಗಯ್ಯನವರು ಏನು ಈ ನಿರ್ಣಯವನ್ನು ತಂದಿದ್ದಾರೆ ಇದನ್ನು ಎಲ್ಲರೂ ಕೂಡ ತತ್ವಶಃ ಒಪ್ಪಿಕೊಳ್ಳುತ್ತಾರೆಂದು ನನ್ನ ಅನಿಸಿಕೆ. ಅಂತರ್ಜಾತಿಯ ವಿವಾಹ ಏನಿದೆ ಇದು ಜಾತಿಯ ವ್ಯಾಮೋಹವನ್ನು ಹೋಗಲಾಡಿಸಿ ಜಾತ್ಯತೀತ ಸಮಾಜವನ್ನು ನಿರ್ಮಾಣ ಮಾಡುತ್ತದೆಂಬುದು ನಿಜ. ಇದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಆದ್ದರಿಂದ ಸರ್ಕಾರ ಇದನ್ನು ಪ್ರೋತ್ಸಾಹಿಸಬೇಕೆಂದು ಹೇಳಿ ನಮ್ಮ ಬೆಂಬಲವನ್ನು ಸಾತ್ವಿಕವಾಗಿ ಇದಕ್ಕೆ ವ್ಯಕ್ತಪಡಿಸುತ್ತಿದ್ದೇವೆ. ಆದರೆ ಮಾನ್ಯ ತಿಪ್ಪಣ್ಣನವರು ತಂದಿರುವಂಥ ತಿದ್ದುಪಡಿಗೆ ಹಿನ್ನೆಲೆಯನ್ನು ಹೇಳುವುದಾದರೆ, ಯಾವುದೇ ಹರಿಜನ ಹೆಣ್ಣುಮಕ್ಕಳನ್ನು ಮೇಲ್ಜಾತಿಯ ಗಂಡುಮಕ್ಕಳು ಮದುವೆಯಾದರೆ ಅವರಿಗೆ ಐದು ಸಾವಿರ ರೂಪಾಯಿಗಳನ್ನು ಪ್ರೋತ್ಸಾಹ ಧನವಾಗಿ ಕೊಡುವಂಥ ಒಂದು ಕಾಯಿದೆ ನಮ್ಮಲ್ಲಿ ಇದೆ. ಇದೇ ರೀತಿಯಲ್ಲಿ ದೇವದಾಸಿಗಳಿಗೆ ಸಪರೇಟ್ ಬಿಲ್ ಮಾಡಿದ್ದಾರೆ, ಅದೂ ಸಹ ಇದೆ. ಆದ್ದರಿಂದ ಮಾನ್ಯ ತಿಪ್ಪಣ್ಣನವರು ತಂದಿರತಕ್ಕಂಥ ತಿದ್ದುಪಡಿ ಏನಿದೆ ಅದಕ್ಕೆ ಈಗಾಗಲೇ ನಮ್ಮ ಸರ್ಕಾರದಲ್ಲಿ ಕಾರ್ಯಕ್ರಮ ಇದೆ. ಆದ್ದರಿಂದ ಆ ತಿದ್ದುಪಡಿ ಸೂಕ್ತವಲ್ಲ. ಅಲ್ಲದೆ ಆ ತಿದ್ದುಪಡಿ ಯಾವಾಗ ಸೂಕ್ತವಾಗುತ್ತದೆಂದರೆ ಆ ಸ್ಕೋಪ್‌ಗೆ ಲಿಮಿಟ್ ಮಾಡದಿದ್ದಾಗ. ಅಂತರ್ಜಾತಿ ಎಂದಾಕ್ಷಣವೇ ಎಲ್ಲಾ ಜನರುಗಳಿಗೆ, ಎಲ್ಲಾ ಜಾತಿಗಳಿಗೆ ಅನ್ವಯಿಸಬೇಕು. ಆದರೆ ಸ್ಕೋಪ್‌ಗೆ ಲಿಮಿಟ್ ಮಾಡಿದರೆ ಆಗ ಬೇರೊಂದು ಸಮಾಜ ಸೃಷ್ಟಿಯಾಗುತ್ತದೆ. ಆದ್ದರಿಂದ ಹರಿಜನರಿಗೆ ಮೀಸಲಾಗಿಡಬೇಕು ಅಥವಾ ಬೇರೆಯವರಿಗೆ ಮೀಸಲಾಗಿಡ ಬೇಕೆನ್ನುವುದು ಸರಿಯಾದ ವಾದವಲ್ಲ.

ನಾವು ಜಾತ್ಯತೀತ ಸಮಾಜವೆಂದು ಹೇಳುವುದರಲ್ಲಿ ಜೈನರು, ಬೌದ್ಧರು, ಮುಸ್ಲಿಮರು, ಪಾರ್ಸಿಗಳು, ಹಿಂದೂಗಳೆಲ್ಲಾ ಇದ್ದಾರೆ. ಇಂಥ ಒಂದು ದೊಡ್ಡ ಸಮಾಜದಲ್ಲಿ ಎಲ್ಲ ವರ್ಗದವರಿಗೂ, ಎಲ್ಲ ಧರ್ಮದವರಿಗೂ ಸಮಾನವಾದ ಅವಕಾಶವನ್ನು ಕೊಡಬೇಕಾಗುತ್ತದೆ. ಹಿಂದೂಗಳು–ಹಿಂದೂಗಳನ್ನು ಮದುವೆಯಾದಾಕ್ಷಣಕ್ಕೆ ಈ ಸಮಾಜ ಸರಿಹೋಗುತ್ತದೆಂದು ಅಲ್ಲ. ಮೈಕಲ್ ಫರ್ನಾಂಡಿಸ್ ಮತ್ತು ನಾವು ಆಗಬೇಕು. ನಾವು ನಮ ಮಸೂದ್ ಶಿವಣ್ಣನವರಿಗೂ ಬರಬೇಕು, ಆಮೇಲೆ ತಿಪ್ಪಣ್ಣನವರಿಗೂ ಹೋಗಬೇಕು.

ಇವತ್ತು ಧರ್ಮದ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ದೊಡ್ಡ ದುರಂತವೇ ನಡೆಯುತ್ತಿದೆ. ಪಂಜಾಬನ್ನು ನೆನಸಿಕೊಂಡರೆ ಮನಸ್ಸು ಕರಗುತ್ತದೆ. ಎಲ್ಲಿ ಕರ್ಪೂರ ಗಂಧದ ಕಡ್ಡಿಯನ್ನು ಹಚ್ಚಬೇಕೋ, ಎಲ್ಲಿ ತೆಂಗಿನಕಾಯಿಗಳನ್ನು ಒಡೆಯಬೇಕೋ ಅಲ್ಲಿ ಗಾಂಜಾಗಳನ್ನು, ಪಿಸ್ತೂಲುಗಳನ್ನು, ಗುಂಡು ಮತ್ತು ಗನ್‌ಗಳನ್ನು ಇಟ್ಟುಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಧರ್ಮದ ಹೆಸರಿನಲ್ಲಿ ಆದಂಥ ಘಟನೆಗಳನ್ನು ನೋಡಿದಾಗ ಅದು ಒಂದು ಚರ್ಚ್ ಇರಲಿ, ಮಸೀದಿಯೇ ಇರಲಿ, ದೇವಸ್ಥಾನವೇ ಇರಲಿ ಈವತ್ತು ಈ ರಾಷ್ಟ್ರದಲ್ಲಿ ಅವುಗಳಿಂದ ಸಮಾಜಕ್ಕೆ ಸಾಕಷ್ಟು ಹಾನಿ ಆಗುತ್ತಿರುವುದು ಕಾಣುತ್ತಿದೆ. ಆದ್ದರಿಂದ ನಾವು ಜಾತ್ಯತೀತ ರಾಷ್ಟ್ರದ ನಿರ್ಮಾಣ ಮಾಡಬೇಕಾದರೆ ಎಲ್ಲಾ ಧರ್ಮಗಳೂ ಒಟ್ಟಿಗೆ ಕೂಡುವಂಥ ದಾರಿ ಹುಡುಕಬೇಕು. ಇದನ್ನು ನಮ್ಮ ಶಿವಣ್ಣನವರೂ ಒಪ್ಪುತ್ತಿದ್ದಾರೆ. ಅವರು ಮುಂದಿನ ಅಧಿವೇಶನದ ಹೊತ್ತಿಗೆ ಯೋಚನೆ ಮಾಡಿ ಒಂದು ಸರ್ಕಾರಿ ಲಗ್ನವನ್ನು ಮಾಡಿಕೊಳ್ಳಲಿ. ಅವರಿಗಿನ್ನೂ ಲಗ್ನವಾಗಿಲ್ಲ. ಲಗ್ನ ಮಾಡಿಕೊಳ್ಳುವುದಕ್ಕೆ ಮಾನ್ಯ ಭೀಮಣ್ಣ ಖಂಡ್ರೆಯವರನ್ನು ಕೇಳುತ್ತಿದ್ದಾರೆ. ಭೀಮಣ್ಣ ಖಂಡ್ರೆಯವರು ಅವರಿಗೆ ಲಗ್ನ ಮಾಡಿಸಲಿ. ಜೊತೆಗೆ ಈ ಎಲ್ಲಾ ವಿಚಾರದ ಬಗ್ಗೆ ಮಾನ್ಯ ಸಿದ್ದಲಿಂಗಯ್ಯನವರು ಬಹಳಷ್ಟು ಹೇಳಿದ್ದಾರೆ. ಅದನ್ನು ಸರ್ಕಾರದ ಒಂದು ಕಾರ್ಯಕಲಾಪವಾಗಿ, ಸರ್ಕಾರದ ಬಿಲ್ ಆಗಿ, ಅಫಿಷಿಯಲ್ ಬಿಲ್ ಆಗಿ ಅಥವಾ ಅಫಿಷಿಯಲ್ ಆಕ್ಟ್ ಆಗಿ ತರತಕ್ಕಂಥ ನಿರ್ಧಾರವನ್ನು ನಮ್ಮ ಸರ್ಕಾರ ಮಾಡುತ್ತದೆನ್ನುವಂಥ ನಂಬಿಕೆಯನ್ನು ಡಾ. ಸಿದ್ದಲಿಂಗಯ್ಯನವರು ಹೊಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ನಿರ್ಣಯವನ್ನು ತರಲು ಅವರು ಪ್ರಯತ್ನ ಮಾಡದೆ ಸರ್ಕಾರದ ಮೇಲೆ ವಿಶ್ವಾಸವನ್ನಿಟ್ಟು, ಇದನ್ನು ಮುಂದೆ ಜಾರಿಗೆ ತರುತ್ತಾರೆನ್ನತಕ್ಕಂಥ ನಂಬಿಕೆಯನ್ನು ಮಾನ್ಯ ಶಿವಣ್ಣನವರ ಮೇಲೆ ಇಡಬೇಕೆಂದು ಹೇಳಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲದೇ ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮತ್ತು ಮಾನ್ಯ ತಿಪ್ಪಣ್ಣನವರು ತಂದಿರತಕ್ಕಂಥ ಅಮೆಂಡ್‌ಮೆಂಟ್‌ನ್ನೂ ಕೂಡ ವಾಪಸ್ ಪಡೆಯಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಬಿ. ಆರ್. ಪಾಟೀಲ್: ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದಲಿಂಗಯ್ಯನವರು ತಂದಿರುವಂಥ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ನಿರ್ಣಯವನ್ನು ಒಪ್ಪಿ ಸರ್ಕಾರ ಏನಾದರೂ ಕಾನೂನನ್ನು ತಂದರೆ ಬಹುಶಃ ನಮ್ಮ ದೇಶದ ಪರಿವರ್ತನೆಯ ಹಾದಿಯಲ್ಲಿ ಒಂದು ದೊಡ್ಡ ಮೈಲಿಗಲ್ಲನ್ನು ಹಾಕಿದಂತಾಗುತ್ತದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸ್ವಾತಂತ್ರ್ಯದ ನಂತರ ಈ ದೇಶದಲ್ಲಿ ನಾವು ಬಹಳಷ್ಟನ್ನು ಸಾಧಿಸಿದ್ದೇವೆ. ಕಾರ್ಖಾನೆಗಳನ್ನು ಕಟ್ಟಿದ್ದೇವೆ. ಕೆರೆಗಳನ್ನು ನಿರ್ಮಿಸಿದ್ದೇವೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದ್ದೇವೆ. ಆದರೆ ಈ ಸಮಾಜಕ್ಕೆ ಹಿಡಿದುಕೊಂಡಿರುವಂಥ ಜಾತೀಯತೆಯ ಜಿಡ್ಡನ್ನು ಬಿಡಿಸುವುದಕ್ಕೆ ಪ್ರಯತ್ನವನ್ನೇ ಮಾಡಿಲ್ಲ. ಇದರಿಂದಾಗಿಯೇ ಇಡೀ ದೇಶದಲ್ಲಿ ಭಯಾನಕ ವಾತಾವರಣ ನಿರ್ಮಾಣವಾಗಿದೆ. ಅದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಈ ದೇಶ ಅಖಂಡವಾಗಿ ಐಕ್ಯತೆಯಿಂದ ಉಳಿಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ

ಪ್ರತಿಯೊಂದು ವಿಷಯದಲ್ಲೂ ಜಾತಿಯ ಆಧಾರದ ಮೇಲೆ ಯೋಚನೆ ಮಾಡಲಾಗುತ್ತಿದೆ. ಚುನಾವಣೆ ಕೂಡ ಜಾತಿಯ ಆಧಾರದ ಮೇಲೆ ನಡೆಯುತ್ತಿದೆ. ಟಿಕೆಟ್ ಹಂಚಿಕೆಯಲ್ಲಿ ಜಾತಿ ಆಧಾರ, ಮಂತ್ರಿಗಳನ್ನು ಮಾಡುವುದರಲ್ಲಿ ಜಾತಿ ಆಧಾರ ಹೀಗೆ ಎಲ್ಲಾ ಹಂತಗಳಲ್ಲೂ ಜಾತೀಯತೆಯನ್ನು ಸೂಕ್ಷ್ಮ ರೀತಿಯಲ್ಲಿ ಅನುಸರಿಸಲಾಗುತ್ತಿದೆ. ಇದು ಹೀಗೇ ಮುಂದುವರಿಯುತ್ತಾ ನಾವು ಎಲ್ಲಿಗೆ ಹೋಗುತ್ತಿದ್ದೇವೆ ಅಂದರ ಪ್ರತಿಯೊಂದು ಜಾತಿಗೆ ಒಂದೊಂದು ನಾಡು ಅಂದರೆ ರಾಜ್ಯ ಬೇಕು ಅನ್ನುವ ಮಟ್ಟಕ್ಕೆ ಹೋಗುತ್ತಿದ್ದೇವೆ. ಇದರಿಂದ ಖಂಡಿತ ದೇಶದ ಐಕ್ಯತೆ ಅಖಂಡತೆಯನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಹೀಗಿರುವಂಥ ಸಂದರ್ಭದಲ್ಲಿ ಗೆಳೆಯ ಸಿದ್ದಲಿಂಗಯ್ಯನವರ ವಿಚಾರಕ್ಕೆ ಪೂರಕವಾಗಿ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಜಾತಿ ವಿರುದ್ಧ ಹೋರಾಟ ಮಾಡುವ ವಿಚಾರ ಕರ್ನಾಟಕಕ್ಕೆ ಹೊಸ ದೇನಲ್ಲ. ನಮ್ಮ ಸಿದ್ದಲಿಂಗಯ್ಯನವರು ಬಸವಣ್ಣನವರ ಮತ್ತು ಸರ್ವಜ್ಞನ ವಿಚಾರಗಳನ್ನು ಹೇಳಿದ್ದಾರೆ. ಆದರೆ ಬಸವಣ್ಣನವರು ಬರೀ ವಿಚಾರವನ್ನು ಮಾತ್ರ ಹೇಳಲಿಲ್ಲ. ಆ ಕಾಲದಲ್ಲೇ ಒಬ್ಬ ಬ್ರಾಹ್ಮಣನ ಮಗಳನ್ನು ಹರಳಯ್ಯನ ಮಗನಿಗೆ ಮದುವೆ ಮಾಡಿಸಿ ಒಂದು ಹೊಸ ದಿಕ್ಕನ್ನು ಈ ದೇಶಕ್ಕೆ ತೋರಿಸಿದರು. ಆದ್ದರಿಂದಲೇ ಇಂದು ಬಸವಣ್ಣನವರು ಸಾಮಾಜಿಕ ಕ್ರಾಂತಿಯ ಸಂಕೇತವಾಗಿ ನಮ್ಮೆದುರಿಗೆ ಇದ್ದಾರೆ. ಆದರೆ ದುರ್ದೈವದಿಂದ ಬಸವಣ್ಣನವರ ಹೆಸರನ್ನು ಮಾತ್ರ ಹೇಳಿಕೊಂಡು ಅವರ ವಿಚಾರಗಳನ್ನು ಬದಿಗಿಟ್ಟು ಬಿಟ್ಟದ್ದೇವೆ. ಸ್ವಾರ್ಥಸಾಧನೆಗಾಗಿ ಜಾತಿಯನ್ನು ಎತ್ತಿಹಿಡಿದು ಬಸವಣ್ಣನವರ ಹೆಸರಿಗೆ ದೊಡ್ಡ ಕಳಂಕ ತರುವ ಕೆಲಸವನ್ನು ನಾವು ಮಾಡಿದ್ದೇವೆ. ಇದನ್ನು ಬಹುಶಃ ಯಾವುದೇ ಪ್ರಗತಿಪರವಾದ ಧರ್ಮ ಅಥವಾ ಸಮಾಜ ಮನ್ನಿಸುವುದಕ್ಕೆ ಸಾಧ್ಯವಿಲ್ಲ. ಅಂಥ ಒಂದು ಕೆಟ್ಟ ಕೆಲಸವನ್ನು ಮಾಡಿದ್ದೇವೆ. ಇದನ್ನು ಬಹುಶಃ ಯಾವುದೇ ಪ್ರಗತಿಪರವಾದ ಧರ್ಮ ಅಥವಾ ಸಮಾಜ ಮನ್ನಿಸುವುದಕ್ಕೆ ಸಾಧ್ಯವಿಲ್ಲ. ಅಂಥ ಒಂದು ಕೆಟ್ಟ ಕೆಲಸವನ್ನು ಮಾಡಿದ್ದೇವೆ.

ಡಾ. ಲೋಹಿಯಾ ಅವರು ಜಾತಿಯ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಂಡು ಈ ದೇಶಕ್ಕೆ ಹೊಸ ತಿರುವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರು. ಅವರು ಮನುಷ್ಯನನ್ನು ಜೊತೆಗೂಡಿಸಬೇಕಾದರೆ ಜಾತಿಯನ್ನು ಒಡೆದು ಹಾಕಬೇಕೆಂದು ಹೇಳಿದರು. ಅದನ್ನೇ ಲೋಕನಾಯಕರಾದ ಜಯಪ್ರಕಾಶ್ ನಾರಾಯಣ ಅವರು ಬಿಹಾರದ ವಿದ್ಯಾರ್ಥಿಗಳ ಆಂದೋಳನದಲ್ಲಿ ಹೇಳಿದಾಗ ಸಾವಿರಾರು ಮಂದಿ ಯುವಕರು ಮುಂದೆ ಬಂದು ತಮ್ಮ ಜನಿವಾರಗಳನ್ನು ಹರಿದು ಹಾಕಿ ಜಾತಿರಹಿತ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಪಣ ತೊಟ್ಟರು. ಇಂಥ ಒಂದು ಭವ್ಯ ಪರಂಪರೆಯನ್ನು ಪಡೆದಂತಹ ಈ ನಮ್ಮ ದೇಶಕ್ಕೆ ಜಾತಿ ಒಂದು ಅಂಟುಜಾಡ್ಯವಾಗಿ ಕಾಡುತ್ತಿದೆ. ಇಂಥ ಸಂದರ್ಭದಲ್ಲಿ ಅಂತರ್ಜಾತಿಯ ವಿವಾಹಕ್ಕೆ ಎಲ್ಲಿಯವರೆಗೆ ನಾವು ಪ್ರೋತ್ಸಾಹ ನೀಡುವುದಿಲ್ಲವೋ, ಅಲ್ಲಿಯವರೆಗೆ ಈ ಜಾತಿಗಳು ನಮ್ಮನ್ನು ಮತ್ತು ನಮ್ಮ ದೇಶವನ್ನು ಸರ್ವನಾಶ ಮಾಡುತ್ತವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲವೆಂದು ಹೇಳುತ್ತಾ ಡಾ. ಸಿದ್ದಲಿಂಗಯ್ಯನವರ ನಿರ್ಣಯಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ.

ವಿ. ಆರ್. ಸುದರ್ಶನ್: ಮಾನ್ಯ ಸಭಾಪತಿಯವರೇ, ಗೆಳೆಯ ಡಾ. ಸಿದ್ದಲಿಂಗಯ್ಯನವರು ಸಮಾಜದ ಹಿತದೃಷ್ಟಿಯಿಂದ ಒಂದು ಒಳ್ಳೆಯ ನಿರ್ಣಯವನ್ನು ತಂದು ಸದನದ ಮೂಲಕ ಸರ್ಕಾರದ ಮತ್ತು ರಾಜ್ಯದ ಜನತೆಯ ಗಮನವನ್ನು ಸೆಳೆದಿದ್ದಾರೆ. ಬಹಳಷ್ಟು ಸದಸ್ಯರುಗಳು ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದೇವೆ. ಆದರೆ ನಾನು ವಿಷಾದಪಡುತ್ತೇನೆ, ಏಕೆಂದರೆ ನಮ್ಮ ಖಾಸಗಿ ಬದುಕಿನಲ್ಲಿ ನಾವು ಯಾರೂ ಕೂಡ ಅಂತರ್ಜಾತಿ ವಿವಾಹವನ್ನು ಆಗಲಿಕ್ಕೆ ಸಾಧ್ಯವಾಗಲಿಲ್ಲ. ಹಾಗಂತ ಮುಂದೆ ಇಂಥದು ಆಗಬಾರದು ಎನ್ನುವುದಿಲ್ಲ.

ಉಪಸಭಾಪತಿಯವರು: Inter caste marriage is an after thought.

ವಿ. ಆರ್. ಸುದರ್ಶನ್ ಹೌದು, ಹೊಸ ಸಮಾಜ ರಚನೆಯಾಗಬೇಕು. ಇಲ್ಲಿ ಸಾವಿರಾರು ವರ್ಷಗಳಿಂದ ಇರತಕ್ಕ ಜಾತಿ ಪದ್ಧತಿ ಹೋಗಿ ಮಾನವೀಯ ಧರ್ಮ ಬರಬೇಕಾದರೆ ಇಂಥಾ ಒಂದು ವ್ಯವಸ್ಥೆ ಅಗತ್ಯ. ಇಂಥದಕ್ಕೆ ಧೈರ್ಯ ತುಂಬಬೇಕಾದರೆ ಕೆಲವು ಇನ್ಸೆಂಟೀವ್ ಕೊಡಬೇಕೆಂಬುದು ಸಿದ್ದಲಿಂಗಯ್ಯನವರ ಮೂಲ ವಿಚಾರವಾಗಿದೆ. ಒಂದು ಹೊಸ ಧರ್ಮವನ್ನು ಸ್ಥಾಪನೆ ಮಾಡಲು, ಮಾನವೀಯ ಧರ್ಮವನ್ನು ಅನುಷ್ಠಾನಕ್ಕೆ ತರಲು ಮತ್ತು ಅಂಥ ನಿರ್ಧಾರ ತೆಗೆದುಕೊಳ್ಳುವಂಥ ಯುವಜನರಲ್ಲಿ ಧೈರ್ಯ ತುಂಬುವುದಕ್ಕೆ ಸರ್ಕಾರದ ನೆರವು ಅತ್ಯಗತ್ಯ. ಅದಕ್ಕೆ ಸಂಬಂಧಪಟ್ಟ ಹಾಗೆ ಉಪನಾಯಕರಾದ ತಿಪ್ಪಣ್ಣನವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಬಹುಶಃ ಅದರ ಅಗತ್ಯ ಇಲ್ಲ ಎಂದು ನಾನು ತಿಳಿಯುತ್ತೇನೆ. ಮಾನ್ಯ ಸಿದ್ದಲಿಂಗಯ್ಯನವರು ಏನು ನಿರ್ಣಯವನ್ನು ತಂದಿದ್ದಾರೆ ಅದನ್ನೇ ಸರ್ಕಾರ ಒಪ್ಪಿಕೊಂಡು ಅಳವಡಿಸಿಕೊಳ್ಳುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ಈಗಾಗಲೇ ಪರಿಶಿಷ್ಟ ವರ್ಗದ ಗಂಡಾಗಲೀ ಹೆಣ್ಣಾಗಲೀ ಬೇರೊಂದು ಜಾತಿಯವರನ್ನು ಮದುವೆ ಆದ ಸಂದರ್ಭದಲ್ಲಿ ಅವರು ೫ ಸಾವಿರ ರೂಪಾಯಿ ಹಾಗೂ ಮೀಸಲಾತಿಯನ್ನು ಪಡೆದುಕೊಳ್ಳುವುದಕ್ಕೆ ಅವಕಾಶಗಳಿವೆ. ಆದ್ದರಿಂದ ಸಿದ್ದಲಿಂಗಯ್ಯನವರು ತಂದಿರತಕ್ಕ ನಿರ್ಣಯ ವಿಶಾಲ ದೃಷ್ಟಿಯಿಂದ ಕೂಡಿದೆ. ಸಾವಿರಾರು ವರ್ಷಗಳಿಂದ ಬಂದಿರುವಂಥದ್ದನ್ನು ರಾತ್ರೋರಾತ್ರಿ ತೆಗೆದುಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಆವೇಶ ಅಥವಾ ದ್ವೇಷದ ಭಾವನೆಯಿಂದ ಕೂಡ ಅದನ್ನು ಸಾಧಿಸಲಾಗುವುದಿಲ್ಲ. ಈ ಕೆಲಸಕ್ಕೆ ನಮ್ಮ ಮನಸ್ಸಿನ ಪರಿವರ್ತನೆಯಾಗಬೇಕಾಗುತ್ತದೆ. ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆ ಎಂದು ನಾನು ತಿಳಿಯುತ್ತೇನೆ. ಆದ್ದರಿಂದ ಸಿದ್ದಲಿಂಗಯ್ಯನವರ ನಿರ್ಣಯವನ್ನು ಸದನದಲ್ಲಿ ಎಲ್ಲರೂ ಒಪ್ಪಿದ್ದಾರೆಂದು ಅವರು ವ್ಯಕ್ತ ಮಾಡಿರುವ ವಿಚಾರದಲ್ಲಿ ತಿಳಿಯುತ್ತದೆ.

ಮಾನ್ಯ ನಾಗೇಗೌಡರು ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕು, ಸರ್ಕಾರವೇ ಅದರ ಬಗ್ಗೆ ಚಿಂತನೆ ಮಾಡುತ್ತದೆ ಎಂದು ಹೇಳಿದ್ದಾರೆ. ಬಹುಶಃ ಸರ್ಕಾರಕ್ಕೆ ಚಿಂತನೆ ಮಾಡುವಂಥ ಮನಸ್ಸು ಇದ್ದಿದ್ದರೆ ಮಾಡಲಿಕ್ಕೆ ಸಾಕಷ್ಟು ಅವಕಾಶಗಳಿದ್ದವು. ಕಳೆದ ಒಂದು ವರ್ಷದಿಂದ ಈ ಸದನದಲ್ಲಿ ಪದೇ ಪದೇ ಈ ವಿಚಾರ ಪ್ರಸ್ತಾಪವಾಗುತ್ತಿದೆ. ಸರ್ಕಾರಕ್ಕೆ ನಿಜವಾಗಿಯೂ ಮನಸ್ಸು ಇದ್ದಿದ್ದರೆ ತಾನೇ ಈ ನಿರ್ಣಯಕ್ಕೆ ಮುಂದಾಗಬಹುದಾಗಿತ್ತು. ದುರಾದೃಷ್ಟ, ಹಾಗಾಗಲಿಲ್ಲ. ಆದರೆ ಗೆಳೆಯರಾದ ಮಾನ್ಯ ಸಿದ್ದಲಿಂಗಯ್ಯನವರು ಈ ನಿರ್ಣಯವನ್ನು ತಂದಿದ್ದಾರೆ. ಇದನ್ನು ವಾಪಸ್ ಪಡೆದುಕೊಳ್ಳುವ ಪ್ರಶ್ನೆ ಇಲ್ಲ. ಈಗಾಗಲೇ ಎಲ್ಲರೂ ಇದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ಇದನ್ನು ಸರ್ಕಾರ ಒಪ್ಪಬೇಕು. ನಾಳೆ ಇದು ಕೋರ್ಟಿಗೆ ಹೋಗಿ ಬಿದ್ದುಹೋಗದ ರೀತಿಯಲ್ಲಿ ಇದಕ್ಕೆ ಲಾ ಫ್ರೇಂ ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ನಿರ್ಣಯ ಒಪ್ಪಿಕೊಂಡು ಅಲ್ಲಿ ಕೋರ್ಟಿನಲ್ಲಿ ಸ್ಟೇ ತರತಕ್ಕ ರೀತಿಯಲ್ಲಿ ದಯಮಾಡಿ ಲಾ ಫ್ರೇ ಮಾಡಬೇಡಿ. ಸಮಾಜದ ಹಿತದೃಷ್ಟಿಯಿಂದ ಸಿದ್ದಲಿಂಗಯ್ಯನವರು ಈ ನಿರ್ಣಯವನ್ನು ತಂದಿದ್ದಾರೆ. ನಾನು ನಮ್ಮ ಪಕ್ಷದ ವತಿಯಿಂದ ಇದನ್ನು

ಬೆಂಬಲಿಸುತ್ತೇನೆ.

ಕೆ.ಎಸ್.ಎಂ.ಮಸೂದ್: ಇನ್ನೂ ಕೆಲವು ಸದಸ್ಯರು ಈ ಬಗ್ಗೆ ಮಾತನಾಡಬೇಕಾಗಿದ್ದು, ದಯಮಾಡಿ ಮುಂದಿನ ಸದನಕ್ಕೆ ಈ ವಿಷಯವನ್ನು ಮುಂದೂಡಬೇಕೆಂದು ಹೇಳುತ್ತೇನೆ.

ಉಪಸಭಾಪತಿಯವರು: ಒಂದು ವೇಳೆ ಈಗ ಇದನ್ನು ಮುಂದಕ್ಕೆ ಹಾಕಿದರೆ ಮತ್ತೆ ನಾವು ಸೇರುವುದರೊಳಗಾಗಿ ಅವರವರ ಕುಟುಂಬದಲ್ಲಿ ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಮಾಡಿಕೊಂಡು ಇಲ್ಲಿಗೆ ಬಂದು ನಾವು ಮಾಡಿಕೊಂಡಿದ್ದೇವೆಂದು ಹೇಳುವ ಸ್ಥಿತಿ ಇದೆಯೋ?
(ನಗು).

ಡಿ. ಹೆಚ್. ಶಂಕರಮೂರ್ತಿ: ಸರ್ಕಾರಿ ಮುಖ್ಯ ಸಚೇತಕರು ಮುಂದಕ್ಕೆ ಹಾಕಿ ಎಂದು ಹೇಳಬೇಕಾದರೆ ಈ ನಿರ್ಣಯದಿಂದ ಸರ್ಕಾರಕ್ಕೆ ಏನೋ ಇಕ್ಕಟ್ಟು ಇದ್ದಂತೆ ಕಾಣುತ್ತದೆ.

ಉಪಸಭಾಪತಿಯವರು: ಇಂತಹ ನಿರ್ಣಯಗಳು ಬಂದಾಗ ಸರ್ಕಾರ ಏನು ಹೇಳುತ್ತದೆ ಎಂದು ನೋಡೋಣ. ಈ ರೀತಿಯ ಸಂದರ್ಭಗಳು ಅನೇಕ ಸಾರಿ ಬಂದಿವೆ. ಇದೇನೂ ಹೊಸದಲ್ಲ.

ಎಸ್.ಎಸ್. ಪೂಜಾರಿ: ಮಾನ್ಯ ಸಭಾಪತಿಯವರೇ, ಸಿದ್ದಲಿಂಗಯ್ಯನವರು ಈ ಸಭೆಯ ಮುಂದೆ ಇಟ್ಟಿರುವ ನಿರ್ಣಯಕ್ಕೆ ನಾನು ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ. ಸಾವಿರಾರು ವರ್ಷಗಳಿಂದ ಬಂದಂಥ ಈ ಜಾತಿ ವ್ಯವಸ್ಥೆಯನ್ನು ತೆಗೆಯಬೇಕೆನ್ನುವ ಪ್ರಯತ್ನ ಎಷ್ಟೋ ವರ್ಷದಿಂದ ನಡೆಯುತ್ತಾ ಬಂದಿದೆ ಎಂದು ತಮಗೆ ಗೊತ್ತಿದೆ. ಆದರೆ ಕಳೆದ ೪೩ ವರ್ಷಗಳಲ್ಲಿ ಅಂದರೆ ಸ್ವಾತಂತ್ರ್ಯ ಸಿಕ್ಕಮೇಲೆ ನಾವು ಯಾವರೀತಿಯಿಂದಲೂ ಈ ವ್ಯವಸ್ಥೆ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಿಲ್ಲ. ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಇದರ ಬಗ್ಗೆ ಎಷ್ಟು ಕಾಳಜಿ ವಹಿಸಬೇಕಾಗಿತ್ತೋ ಅಷ್ಟು ಕಾಳಜಿ ವಹಿಸಲಿಲ್ಲವೆಂದು ಖೇದದಿಂದ ಹೇಳಬೇಕಾಗುತ್ತದೆ.

ಇವತ್ತು ನಮ್ಮ ಸಮಾಜದಲ್ಲಿ ಚಾತುರ್ವರ್ಣ ವ್ಯವಸ್ಥೆಯೇ ಒಳ್ಳೆಯ ವ್ಯವಸ್ಥೆ ಎಂದು ಹೇಳುವ ಧಾರ್ಮಿಕ ಧುರೀಣರು ಇದ್ದಾರೆ. ಆದುದರಿಂದ ಇವತ್ತು ಶೇಕಡ ೫ ಮೀಸಲಾತಿ ಬಗ್ಗೆ ಇಟ್ಟಿರುವ ನಿರ್ಣಯದಿಂದ ಎಷ್ಟು ಮಟ್ಟಿಗೆ ನಾವು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿದೆ ಎನ್ನುವ ಬಗ್ಗೆ ಚಿಂತನೆ ಮಾಡುವ ಅಗತ್ಯ ಇದೆ. ಸಮಾಜದ ಒಳಗೆ ಸಂಪೂರ್ಣವಾಗಿ ಜಾಗೃತಿ ಹಾಗೂ ಕ್ರಾಂತಿಯಾದರೆ ಮಾತ್ರ ಇದು ಸಾಧ್ಯ. ಮಾನ್ಯ ಸಿದ್ದಲಿಂಗಯ್ಯನವರು ತಂದಿರುವ ನಿರ್ಣಯ ಈ ಸಮಸ್ಯೆಗೆ ಒಂದು ಮಾರ್ಗ ಎಂದು ನಾನು ತಿಳಿದುಕೊಂಡಿದ್ದೇನಷ್ಟೇ. ಆದರೆ ಬೇರೆ ಬೇರೆ ಮಾರ್ಗಗಳಿಂದಲೂ ಜಾತಿ ವ್ಯವಸ್ಥೆಯನ್ನು ತೆಗೆದು ಹಾಕಬೇಕಾಗುತ್ತದೆ. ಮನುಸ್ಮೃತಿಯಲ್ಲಿ ಒಂದು ಕಡೆ ಬರುತ್ತದೆ. ಅದು ಏನೆಂದರೇ, ಒಂದು ವೇಳೆ ಕೆಳಗಿನ ಜಾತಿಯ ಯಾವುದೇ ಮನುಷ್ಯ ಈ ರಾಷ್ಟ್ರದ ನಾಯಕನಾದರೆ ರಾಷ್ಟ್ರದ ಸ್ಥಿತಿ ಯಾವ ರೀತಿಯಾಗುತ್ತದೆ ಎಂಬುದಕ್ಕೆ ಒಂದು ಆಕಳು ರಾಡಿಯಲ್ಲಿ ಸಿಕ್ಕಿಬೀಳುತ್ತದೆ, ಅದು ಹೊರಗಡೆ ಬರುವುದಕ್ಕಾಗುವುದಿಲ್ಲ. ಆ ರೀತಿ ರಾಷ್ಟ್ರದ ಸ್ಥಿತಿಯಾಗುತ್ತದೆಂದು ಅದರಲ್ಲಿ ಉಲ್ಲೇಖ ಇದೆ...

ಉಪಸಭಾಪತಿಯವರು: ಪೂಜಾರ್ ಅವರೇ, ಅಂತರ್ಜಾತಿ ವಿವಾಹ ಮಾಡಿಕೊಳ್ಳುವುದರಲ್ಲಿ ಸಮಾಜಕ್ಕೆ ಲಾಭ ಇದೆಯೋ ಎನ್ನುವ ವಿಷಯ ನಮ್ಮ ಮುಂದೆ ಇದೆ. ಹಿಂದೆ ಏನಾಗಿದೆ ಎಂಬ ಬಗ್ಗೆ ಈಗ ಯೋಚನೆ ಮಾಡಿ ಪ್ರಯೋಜನ ಇಲ್ಲ. ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವ ಬಗ್ಗೆ ಸಲಹೆಗಳನ್ನು ಕೊಡಿ.

ಎಸ್. ಎಸ್. ಪೂಜಾರಿ: ಹಿಂದಿನದರ ಪರಿಣಾಮ ಇನ್ನೂ ಇದೆ. ಅದನ್ನು ಬದಲಾವಣೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅವರು ಏನು ನಿರ್ಣಯ ತಂದಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಡಾ. ನಾಡಗೌಡ ಅವರು ಕೆಲವು ಸೈಂಟಿಫಿಕ್ ರೀಸನ್ ಹೇಳಿದರು. ನಮ್ಮ ದೇಶದ ಒಂದು ಸಮಾಜದಲ್ಲಿ ಏನಾಗಿದೆ ಎಂದರೆ, ಆ ಸಮಾಜದ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರವರ ಒಳಗೇ ಲಗ್ನ ಆಗಿದ್ದರ ಕಾರಣ ಇವತ್ತು ಅಲ್ಲಿ ಸಾಕಷ್ಟು ಹುಚ್ಚು ಮಕ್ಕಳು ಹುಟ್ಟಿವೆ. ಆ ಸಮಾಜದ ಮನಸ್ಸು ನೋಯಿಸಬಾರದು ಎಂದು ನಾನು ಅದರ ಹೆಸರು ಹೇಳುವುದಿಲ್ಲ. ಆದ್ದರಿಂದ ಸಿದ್ದಲಿಂಗಯ್ಯನವರು ಪ್ರಸ್ತಾಪಿಸಿರುವ ಕ್ರಾಂತಿಕಾರಕವಾದ ವಿಚಾರವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅಷ್ಟೇ ಅಲ್ಲ, ಎಲ್ಲ ಸದಸ್ಯರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ನಿರ್ಣಯ ಈ ಸದನದಲ್ಲಿ ಪಾಸ್ ಆಗಬೇಕು.

ಬಿ. ಶಿವಣ್ಣ: ಮಾನ್ಯ ಸದಸ್ಯರು ಚುನಾವಣೆಯಲ್ಲಿ ಓಟು ಹಾಕಬೇಕೆಂದು ಕೇಳುವ ಹಾಗೆ ಹೇಳುತ್ತಿದ್ದಾರೆ.

ಎಸ್. ಎಸ್. ಪೂಜಾರಿ: ಇದನ್ನು ಸರ್ಕಾರ ಸಹ ಸ್ವಾಗತ ಮಾಡುತ್ತದೆಂದು ತಿಳಿದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜಿ. ಬಿ. ಶಿವಕುಮಾರ್: ಮಾನ್ಯ ಉಪಸಭಾಪತಿಗಳೇ, ನಾನು ಕೇವಲ ಒಂದೇ ಒಂದು ನಿಮಿಷ ಮಾತ್ರ ಮಾತನಾಡುತ್ತೇನೆ.

ಬಿ. ಶಿವಣ್ಣ: ಬಹಳ ಸದಸ್ಯರುಗಳು ಮಾತನಾಡುವವರಿದ್ದಾರೆ. ಇದು ಬಹಳ ಮುಖ್ಯವಾದ ವಿಷಯ. ಇದನ್ನು ಮುಂದಕ್ಕೆ ಹಾಕುವುದು ಒಳ್ಳೆಯದು.

ಡಾ. ಎಂ. ಪಿ. ನಾಡಗೌಡ: ಮಾನ್ಯ ಶಿವಣ್ಣನವರು ಮಂತ್ರಿಗಳಾಗಿ ಇಲ್ಲೇ ಇದ್ದಾರೆ. ಅವರೊಂದು ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನನಗೆ ವಿಶ್ವಾಸವಿದೆ. ಇವತ್ತು ಈ ಚರ್ಚೆ ಮುಗಿದರೆ ಒಂದೆರಡು ತಿಂಗಳಲ್ಲಿ ಕ್ರಮ ತೆಗೆದುಕೊಂಡು ಮುಂದಿನ ವರ್ಷದಿಂದ ಇದನ್ನು ಜಾರಿ ಮಾಡಬಹುದು.

ಜಿ. ಬಿ. ಶಿವಕುಮಾರ್: ಮಾನ್ಯ ಉಪಸಭಾಪತಿಗಳೇ, ಡಾ. ಸಿದ್ದಲಿಂಗಯ್ಯನವರು ತಂದಿರುವ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಅದರ ಬಗ್ಗೆ ನಾನು ಇಷ್ಟು ಹೇಳುತ್ತೇನೆ. ಬಹಳ ಮುಂಚೆ ಮದುವೆಯಾದವರು, ನಿನ್ನೆ ಮೊನ್ನೆ ಮದುವೆಯಾದವರು ಈ ಮನೆಯಲ್ಲಿದ್ದಾರೆ. ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಇದೆ. "ಸೊಪ್ಪಿಗೆಲ್ಲ ಬೆರಕೆಸೊಪ್ಪು ಚೆಂದ" ಎಂದು. ಇದಕ್ಕೆ ನಾನು ಹೇಳುವ ಅರ್ಥ ಬೇರೆ, ಇಲ್ಲಿರುವವರು ಇನ್ನೊಂದು ಅರ್ಥ ಕಲ್ಪಿಸಿಕೊಳ್ಳಬೇಡಿ. ಮಾನ್ಯ ಮಂತ್ರಿಗಳಾದ ಶಿವಣ್ಣನವರ ಕಛೇರಿಯಿಂದ ಎಲ್ಲ ಶಾಸಕರುಗಳಿಗೆ ಒಂದು ಕಾಗದ ಬಂತು. ಅದರಲ್ಲಿ ಸರ್ವಜ್ಞ ಕವಿಯ ಮಾತನ್ನು ಉಲ್ಲೇಖ ಮಾಡಿದ್ದಾರೆ.

> **ನಡೆಯುವುದೊಂದೆ ಭೂಮಿ, ಕುಡಿಯುವುದೊಂದೆ ನೀರು**
> **ಸುಡುವುದೊಂದೆ ಅಗ್ನಿ ಇರುತಿರಲು,**
> **ನಡುವಣ ಕುಲಗೋತ್ರ ಎತ್ತಣದು ಸರ್ವಜ್ಞ**

ಈ ಒಂದೇ ಮಾತು ಸಾಕೆನಿಸುತ್ತದೆ. ಆತ್ಮಪೂರ್ವಕವಾಗಿ ಹುಡುಗ ಹುಡುಗಿ ಪ್ರೀತಿಸಿ ಮದುವೆ ಮಾಡಿಕೊಂಡರೆ ಅವರ ತಂದೆತಾಯಿಗಳಿಂದ ಶೋಷಣೆ ಎದುರಿಸತಕ್ಕ ಸನ್ನಿವೇಶಗಳುಂಟು. ಕೆಳದರ್ಜೆಯವರು ಬಹಳ ಶ್ರೀಮಂತರಾಗಿದ್ದರೆ, ಮುಖ್ಯ ಇಂಜಿನಿಯರ್ ಆಗಿದ್ದು ರಿಟೈರ್ ಆಗಿ ಜಾಸ್ತಿ ಹಣ ಮಾಡಿ ಇಟ್ಟಿದ್ದರೆ ಯಾವ ಜಾತಿಯಾದರೇನು? ತನಗೆ ಕೆಲಸವಿಲ್ಲವೆಂದು ಅವರ ಮಗಳಿಗೆ ಮೋಡಿ ಹಾಕುವುದುಂಟು. ಮದುವೆ ಎನ್ನುವುದು

ಪ್ರೀತಿ ಪ್ರೇಮಗಳ ಕೊನೆಯ ಪರದೆ. ಈ ಬಂಧನಕ್ಕೆ ಯಾರಾದರೂ ಅಡ್ಡಿ ಬಂದರೆ ಅವರಿಗೆ ಏನು ಮಾಡುತ್ತೀರಿ ಎನ್ನುವುದನ್ನು ಕಾಯಿದೆಯಲ್ಲಿ ತೋರಿಸಬೇಕು. ಗಂಡು ಹೆಣ್ಣುಗಳು ಪರಸ್ಪರ ಪ್ರೀತಿ ಪ್ರೇಮ ಮಾಡಿ ಮದುವೆಯಾದಾಗ ಅಂತಹುದಕ್ಕೆ ೫ ಪರ್ಸೆಂಟ್ ಮೀಸಲಾತಿ ಅಲ್ಲ, ೫೦ ಪರ್ಸೆಂಟ್ ಆದರೂ ಒಳ್ಳೆಯದು. ಈಗ ಕಾಲ ಬದಲಾಗುತ್ತಾ ಇದೆ. ಮಾನ್ಯ ತಿಪ್ಪಣ್ಣನವರು ಮದುವೆಯಾದಾಗ ಹೆಂಡತಿಯನ್ನು ಎರಡು ತಿಂಗಳಾದರೂ ಕೂಡ ಸಿನಿಮಾಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ. ಈಗ ಎಂಗೇಜ್ಮೆಂಟ್ ಆದ ತಕ್ಷಣ ಅಲ್ಲಿ ಇಲ್ಲಿ ಓಡಾಡುತ್ತಾರೆ. ತಾಳಿ ಕಟ್ಟುವುದು ಮಾತ್ರ ಬಾಕಿ ಇರುತ್ತದೆ. ಇಂತಹ ಒಂದು ಬದಲಾವಣೆಯ ಕಾಲದಲ್ಲಿ ಮಾನ್ಯ ಸಿದ್ದಲಿಂಗಯ್ಯನವರು ತಂದಿರತಕ್ಕ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡುವುದರ ಜೊತೆಗೆ ಹಾಗೆ ಮದುವೆ ಆದಂತಹವರಿಗೆ ಸರ್ಕಾರದ ವತಿಯಿಂದ ರಕ್ಷಣೆ ಕೂಡ ಕೊಡಬೇಕಾಗುತ್ತದೆ ಎಂದು ಹೇಳುತ್ತಿದ್ದೇನೆ.

ಮಾನ್ಯ ಶಂಕರಮೂರ್ತಿಯವರು ಹೇಳಿದ ಪ್ರಕಾರ ಈ ಮೀಸಲಾತಿಯನ್ನು ಜಾರಿಗೆ ತನ್ನಿ, ಅದರ ಪರಿಮಾಣ ಹೇಗೆ ಜಾಸ್ತಿಯಾಗುತ್ತದೆ ಎನ್ನುವುದನ್ನು ನೋಡಿ. ಈಗ ೫ ಪರ್ಸೆಂಟ್ ಇರುವುದು ಇನ್ನು ಮೂರುವರೆ ವರ್ಷಗಳ ಅವಧಿಯಲ್ಲಿ ೧೫ ಪರ್ಸೆಂಟ್ ಆಗುತ್ತದೆ. ಅವರು ತಮಗೆ ಲೈಸನ್ಸ್ ಸಿಕ್ಕಿದರೆ ಸಾಕೆಂದು ಕಾಯುತ್ತಾರೆ. ಸರಳ ವಿವಾಹದ ಬಗ್ಗೆ ರಾಷ್ಟ್ರಕವಿ ಕುವೆಂಪುರವರು ವಿಶ್ವಮಾನವ ಸಂದೇಶದಲ್ಲಿ ಹೇಳಿರುವ ಕೆಲವು ಮಾತುಗಳು ಮಂಡ್ಯ ಜಿಲ್ಲೆಯಲ್ಲಿ ಬಹಳ ಪ್ರಸಿದ್ಧಿಯಾಗಿವೆ. ಇವತ್ತು ಮಕ್ಕಳ ಮದುವೆ ಮಾಡುವುದಕ್ಕೆ ಹೋಗಿ ಮನೆ ಹಾಳುಮಾಡಿಕೊಂಡ ಕುಟುಂಬಗಳಿವೆ. ಅದರಲ್ಲೂ ಒಕ್ಕಲಿಗ ಜನಾಂಗದಲ್ಲಿ, ಅವನು ಅರಮನೆ ಬ್ಯಾಂಡ್ಸೆಟ್ ತರಿಸಿದರೆ ನಾವೇನು ಕಡಿಮೆ ದೆಹಲಿ ಬ್ಯಾಂಡ್ಸೆಟ್ ತರಿಸಬೇಕೆಂದು, ಅವನು ಮೂರು ಕುರಿ ಕುಯ್ದರೆ ನಾನು ೧೦ ಕುರಿ ಕುಯ್ಯಬೇಕು ಎಂದು ಎಗರಾಡಿ ಇಲ್ಲದಿರುವ ಸಾಲಗಳನ್ನು ಕಟ್ಟಿಕೊಂಡು ಹಾಳಾಗಿದ್ದಾರೆ. ಹೀಗೆಲ್ಲ ದುಂದುವೆಚ್ಚ ಮಾಡದಿರುವ ಹಾಗೆ ಏನಾದರೂ ಮಾಡಬೇಕು.

ಡಿ. ಹೆಚ್. ಶಂಕರಮೂರ್ತಿ: ಮಾನ್ಯ ಉಪಸಭಾಪತಿಗಳೇ, ಒಂದು ನಿಮಿಷ. ಮಾನ್ಯ ಸದಸ್ಯರು ಸರಳ ವಿವಾಹದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇಲ್ಲಿಯೇ ಉಪಸಭಾಪತಿಗಳು ಕುರ್ಚಿಯಲ್ಲಿ ಕುಳಿತುಕೊಂಡಿದ್ದಾರೆ. ಅವರು ತಮ್ಮ ಮಗಳ ಮದುವೆಯನ್ನು ಹೇಗೆ ಮಾಡಿದರು ಎನ್ನುವುದು ನನಗೆ ಗೊತ್ತು. ಕರ್ನಾಟಕದೊಳಗೆ ಒಂದು ಇತಿಹಾಸ ನಿರ್ಮಾಣ ಮಾಡಿದರು. ೧೪ ವರ್ಷಗಳ ಕಾಲ ಶಾಸಕರಾಗಿ, ಉಪಸಭಾಪತಿಗಳಾಗಿದ್ದು ತಮ್ಮ ಮಗಳ ಮದುವೆಯನ್ನು ಬಹಳ ಸರಳವಾಗಿ ಮಾಡಿದರು. ಇದು ಬಹಳ ಜನಗಳಿಗೆ ಗೊತ್ತಿಲ್ಲ. ಆ ಮದುವೆಯಾಗಿ ಇನ್ನೂ ಆರು ತಿಂಗಳು ಕೂಡಾ ಆಗಿಲ್ಲ.

ಜಿ. ಬಿ. ಶಿವಕುಮಾರ್: ಮದುವೆಯಂಥ ಕಾರ್ಯಗಳಿಗೆ ದುಂದುವೆಚ್ಚ ಮಾಡುವುದನ್ನು ತಾವು ಯೋಚನೆ ಮಾಡಿ ಸರ್ಕಾರದ ವತಿಯಿಂದ ನಿಲ್ಲಿಸಬೇಕು. ಸಿದ್ದಲಿಂಗಯ್ಯನವರ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಸಭಾಪತಿಯವರು: ಸಾಮಾಜಿಕ ಪರಿವರ್ತನೆಯ ದಾರಿಯಲ್ಲಿ ಹೆಜ್ಜೆ ಇಡುವುದಕ್ಕೆ ನಾವೆಲ್ಲ ಪ್ರಯತ್ನ ಮಾಡಿದ್ದೇವೆ. ಜನರಲ್ಲಿ ಕೂಡ ಪ್ರತಿಯೊಬ್ಬರೂ ಅವರದೇ ಕಾಂಟ್ರಿಬ್ಯೂಷನ್ ಮಾಡಬೇಕೆಂದು ಒಂದು ಇಂಡಿಕೇಷನ್ ಇದೆ. ಯಾರಿಗೂ ಅವಕಾಶ ತಪ್ಪಿಸುವುದು ಸೂಕ್ತವಲ್ಲ. ಏಕೆಂದರೆ ನಾಳೆ ದಿವಸ ನಾವೆಲ್ಲರೂ ಸಮಾಜವನ್ನು ಫೇಸ್ ಮಾಡಬೇಕಾಗುತ್ತದೆ. ಮತ್ತು Charity should begin at home. ನಮ್ಮ ನಮ್ಮ ಮನೆಗಳಿಂದ ಇದು ಪ್ರಾರಂಭವಾಗಬೇಕಾಗುತ್ತದೆ. ಈ ದಿಸೆಯಲ್ಲಿ ವಿಶೇಷವಾಗಿ ಹೆಚ್ಚು ಸಮಯ ಇದರ ಬಗ್ಗೆ ಆಳವಾದ ಚರ್ಚೆ ಆಗಬೇಕೆಂದು ಕಾಣುತ್ತದೆ. ಈ ದೃಷ್ಟಿಯಿಂದ ಸಾಮಾಜಿಕ ಪರಿವರ್ತನೆ...

ವಿ. ಆರ್. ಸುದರ್ಶನ್ : ಎಲ್ಲಾ ಪಕ್ಷಗಳ ಸದಸ್ಯರೂ ಹೇಳಿದ್ದಾರೆ. ಬಹಳಷ್ಟು ಜನರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಇಲ್ಲಿ ಎಲ್ಲರೂ ಮಾತನಾಡಬೇಕೆಂದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದ ಕಡೆಯಿಂದ ಏನು ಉತ್ತರ ಬರುತ್ತದೋ ಬರಲಿ.

ಉಪಸಭಾಪತಿಯವರು : ತತ್ವ ಹೇಳಲಿಕ್ಕಾಯ್ತು, ಬದನೆಕಾಯಿ ತಿನ್ನುವುದಕ್ಕಾಯ್ತು ಅಂತ ಇದು ಆಗಬಾರದು. ನಾವು ಇಲ್ಲಿ ಶಾಸನಸಭೆಯಲ್ಲಿ ಏನು ಹೇಳುತ್ತೇವೆ ಅದು ಕಾರ್ಯಗತ ಆಗಬೇಕೇ ಹೊರತು, ನಾಳೆ ದಿವಸ ಯಾರಾದರೂ ಕೇಳಿದರೆ ಯೋಗ್ಯವಾಗಿರುವ ವರ ಸಿಗಲಿಲ್ಲ, ಅದಕ್ಕೋಸ್ಕರ ನೆಂಟರಿಷ್ಟರಲ್ಲೇ ಶುರು ಮಾಡಿದ್ದೀವಿ ಎಂದು ಹೇಳುವಂತಾಗಬಾರದು. ಆದ್ದರಿಂದ ಇಲ್ಲಿ ಪ್ರತಿಯೊಬ್ಬರೂ they should spell out their opinion categorically. ಏಕೆಂದರೆ ಕರ್ನಾಟಕ ರಾಜ್ಯ ತುಂಬಾ ಆದರ್ಶಪ್ರಾಯವಾದ ರಾಜ್ಯವಾಗಬೇಕೆಂದು ಹೇಳುತ್ತಿದ್ದೇವೆ. ಹಿಂದೆ ಕೂಡ ಹೇಳಿದ್ದೆವು. ಅಂತರ್ಜಾತಿ ವಿವಾಹವಾದ ಕೆಲವರಿಗೆ ನೌಕರಿಯನ್ನೂ ಕೂಡ ಕೊಡಿಸಿದ್ದೇವೆ. ಈಗೇನು ಐದು ಸಾವಿರ ಕೊಡುತ್ತಾರೆ, ಅದರಲ್ಲಿ ಎರಡು ಸಾವಿರ ಕ್ಯಾಷ್ ಕೊಟ್ಟು ಉಳಿದ ಮೂರು ಸಾವಿರವನ್ನು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಮೂಲಕ ಕೊಡುತ್ತಿದ್ದಾರೆ. ಇದೆಲ್ಲ ಹಿಂದೆ ಚರ್ಚೆಯಾಗಿದೆ. ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅವರ ಕುಟುಂಬದಲ್ಲಿ ನಡೆದಿರತಕ್ಕದ್ದನ್ನು ಉಲ್ಲೇಖ ಮಾಡಿ, ಮೆಚ್ಚಿ, ನಾವು ಇಲ್ಲಿ ಮಾತನಾಡಿದ್ದೇವೆ. ಈ ದೃಷ್ಟಿಯಿಂದ ಬಹಳಷ್ಟು ಜನರು ಇದರಲ್ಲಿ ಮಾತನಾಡುವವರು ಇದ್ದಾರೆ. ಸದ್ಯಕ್ಕೆ ಶ್ರೀ ರಾಮಚಂದ್ರಗೌಡರು ಮಾತನಾಡಲಿ. ಆದಾದ ಮೇಲೆ ಸದನವನ್ನು ಮುಂದಕ್ಕೆ ಹಾಕೋಣ.

ರಾಮಚಂದ್ರಗೌಡ : ಮಾನ್ಯ ಉಪಸಭಾಪತಿಯವರೇ, ಸನ್ಮಿತ್ರರಾದ ಡಾ. ಸಿದ್ದಲಿಂಗಯ್ಯನವರು ಚತುರ ವಾಗ್ಮಿಗಳು, ಸಾಹಿತಿಗಳು. ಅಷ್ಟೇ ಅಲ್ಲ, ಈ ಸಮಾಜದ ಹಿತಚಿಂತಕರಾಗಿ ಖಾಸಗಿ ನಿರ್ಣಯದ ಮೂಲಕ ಬಹಳ ಒಳ್ಳೆಯ ವಿಚಾರವನ್ನು ಸಭೆಯ ಮುಂದಿಟ್ಟಿದ್ದಾರೆ. ಕ್ರಾಂತಿಕಾರಕವಾದ ಈ ನಿರ್ಣಯ ಏನಾದರೂ ಈ ಸಭೆಯಲ್ಲಿ ಊರ್ಜಿತವಾದರೆ, ನಾನು ಈ ಸಭೆಯಲ್ಲಿ ಭಾಗವಹಿಸಿದ್ದೇನೆ ಎನ್ನುವ ಒಂದೇ ಕಾರಣಕ್ಕೆ ಹೆಮ್ಮೆ ಪಟ್ಟುಕೊಳ್ಳುತ್ತೇನೆ. ಜಾತಿರಹಿತ ಸಮಾಜ ಎಂದರೆ ಬರೇ ಜಾತಿರಹಿತ ಸಮಾಜ ಆಗಬಾರದು. ಜಾತಿರಹಿತ ಸುಸಂಸ್ಕೃತ ಸಮಾಜ ಆಗಬೇಕು. ಇದು ಬಹಳ ಮುಖ್ಯವಾದ ಅಂಶ. ಈ ದಿಸೆಯಲ್ಲಿ ಸನ್ಮಾನ್ಯ ಡಾ. ಸಿದ್ದಲಿಂಗಯ್ಯನವರು ಇಲ್ಲಿ ಇಟ್ಟಿರತಕ್ಕಂಥ ವಿಚಾರವನ್ನು ನಾನು ಆತ್ಮವಿಶ್ವಾಸದಿಂದ, ಪ್ರೀತಿಯಿಂದ ಒಪ್ಪಿಕೊಳ್ಳುತ್ತಿದ್ದೇನೆ. ಜಾತಿ ಭೀತಿಯಿಂದ ಮುಕ್ತವಾಗಬೇಕಾದರೆ ಈ ಸಮಾಜ ಜಾತಿರಹಿತವಾಗಬೇಕಾದ ಅವಶ್ಯಕತೆ ಇದೆ. ಈ ದೇಶದಲ್ಲಿ ಜಾತಿ ಭೀತಿಯೇ ಬಹಳ ದೊಡ್ಡದಾಗಿದೆ. ಇದು ಹೋಗಬೇಕಾದರೆ ಜಾತಿರಹಿತ ಸುಸಂಸ್ಕೃತ ಸಮಾಜ ನಿರ್ಮಾಣ ಆಗಬೇಕು. ಈ ದೃಷ್ಟಿಯಿಂದ ಸಿದ್ದಲಿಂಗಯ್ಯನವರು ಮಂಡಿಸಿರುವ ನಿರ್ಣಯ ಬಹಳ ವಿವೇಚನೆಯಿಂದ ಕೂಡಿದ್ದು ಎಂದು ನಾನು ಹೇಳುತ್ತೇನೆ.

ಸುಸಂಸ್ಕೃತ ಎಂದರೆ ಯಾವುದೋ ಮೇಲ್ಜಾತಿ ವರ್ಗದ ಸುಸಂಸ್ಕೃತಿ ಎಂದು ನಾವು ಗಾಬರಿ ಪಡಬೇಕಾಗಿಲ್ಲ. ವಾಲ್ಮೀಕಿ, ಕಾಳಿದಾಸನಾದಿಯಾಗಿ

ಎಲ್ಲರೂ ನೀಚಜಾತಿಯಿಂದ ಬಂದವರು ಎಂದು ಅನ್ನಿಸಿಕೊಂಡರೂ ಕೂಡ ಈ ಸಮಾಜದಲ್ಲಿ ಸುಸಂಸ್ಕೃತರಾಗಿ ಬಾಳಿದ್ದಾರೆ. ಒಂದು ಕಡೆ ನೀಚಜಾತಿ ಎಂದರೆ ಏನೆಂದು ಒಬ್ಬ ಕವಿ ಹೇಳುತ್ತಾನೆ.

ಗಂಡಹೆಂಡಿರ ಬೇರೆ ಮಾಡುವವ ನೀಚ ಜಾತಿ,
ಎಳೆಮಕ್ಕಳಿಗೆ ವಿದ್ಯೆಯ ಕಲಿಸದಿರುವವ ನೀಚ ಜಾತಿ,
ಇಬ್ಬರಾಡುವ ಗುಟ್ಟು ಕದ್ದು ಕೇಳುವವ ನೀಚ ಜಾತಿಯವನು

ಎಂದು. ಅಂದರೆ, ಹುಟ್ಟಿನಿಂದ ಯಾರೂ ನೀಚ ಜಾತಿ ಅಲ್ಲ. ಅವರ ಕರ್ಮದಿಂದ, ಕೆಲಸದಿಂದ ಅದು ತೀರ್ಮಾನವಾಗುತ್ತದೆ. ಇವತ್ತು ಒಬ್ಬ ರೈತ ತನ್ನ ಹೆಂಡತಿಯನ್ನು ಆರಿಸಿಕೊಳ್ಳಬೇಕಾದರೆ ಹೊಲದಲ್ಲಿ ಜೊತೆಯಾಗಿ ಇದ್ದು ಬೀಜವನ್ನು ಹಾಕಬಲ್ಲವಳು, ತನಗೆ ಸಹಾಯಕಳಾಗಿ ನಿಲ್ಲಬಲ್ಲವಳನ್ನು ಆರಿಸಿಕೊಳ್ಳುತ್ತಾನೆ.

ಆದರೆ ಇಂದು ಆಧುನಿಕ ಸಮಾಜದಲ್ಲಿ ವಿಚಿತ್ರ ಬೆಳವಣಿಗೆಗಳು ಕಾಣಿಸಿಕೊಂಡಿವೆ. ಇದು ಮುಂದೆ ಹೀಗೆಯೇ ಮುಂದುವರಿದು ವರ್ಗಸಮಾಜ ಏನಾದರೂ ಬಂದೀತೋ ಎನ್ನುವ ಸಂಶಯ ನಮ್ಮನ್ನು ಕಾಡುತ್ತದೆ. ಒಬ್ಬ ಇಂಜಿನಿಯರ್ ಇದ್ದರೆ ಆತ ಇಂಜಿನಿಯರ್ ಹುಡುಗಿಯನ್ನೇ ಮದುವೆಯಾಗಬೇಕು, ಒಬ್ಬ ಡಾಕ್ಟರ್ ಡಾಕ್ಟರನನ್ನೇ ಮದುವೆಯಾಗಬೇಕು, ಒಬ್ಬ ಶಾಸಕ ತನ್ನ ಅಂತಸ್ತಿನಲ್ಲೇ ಮದುವೆ ಮಾಡಿಕೊಳ್ಳಬೇಕು ಎಂಬಂಥ ವರ್ಗದಿಂದ ಕೂಡಿದ ಸಮಾಜ ನಿರ್ಮಾಣ ಆಗತಕ್ಕಂಥ ಒಂದು ಭಯದ ವಾತಾವರಣ ಇದೆ. ಇದೆಲ್ಲವನ್ನು ನಾವು ಚಿಂತನೆ ಮಾಡಬೇಕು. ಯಾವುದಾದರೂ ಕಾರಣವಾಗಲೀ ಈಗ ಪ್ರಾರಂಭ ಮಾಡಿದರೆ ಮುಂದೆ ಹೋಗುತ್ತಾ ಹೋಗುತ್ತಾ ಹಾದಿಯಲ್ಲಿ ಎಲ್ಲಿ ಎಡವಿ ಬೀಳಬಹುದು, ಅಂತಹ ಸಂದರ್ಭಗಳಲ್ಲಿ ಅದನ್ನು ರಿಪೇರಿ ಮಾಡುವಂಥ ಸೌಲಭ್ಯ ಇದ್ದೇ ಇರುತ್ತದೆ.

ಸನ್ಮಾನ್ಯರು ಏನು ನಿರ್ಣಯ ತಂದಿದ್ದಾರೆ, ಇದು ನಿಜವಾಗಿಯೂ ಕ್ರಾಂತಿಕಾರಕವಾದ ವಿಚಾರ. ಸಮಾಜದಲ್ಲಿ ಪ್ರತಿಯೊಬ್ಬರೂ ತಲೆ ಎತ್ತಿಕೊಂಡು ನಡೆಯುತ್ತಿರತಕ್ಕ ಸಂದರ್ಭದಲ್ಲಿ, ಜಾತಿರಹಿತ, ಸುಸಂಸ್ಕೃತ ಸಮಾಜವನ್ನು ಕಟ್ಟತಕ್ಕ ಹಾದಿಯಲ್ಲಿ ಹೊಸ ನಾಂದಿಯನ್ನು ಹಾಡುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಆದರೆ ಸರ್ಕಾರ ಇದನ್ನು ಯಾವುದೇ ಒಂದು ಪ್ರತಿಷ್ಠೆಯ ವಿಷಯವನ್ನಾಗಿ ತೆಗೆದುಕೊಳ್ಳದೆ, ಇದು ಖಾಸಗಿಯದಾಗಿರಲಿ, ಸರ್ಕಾರದ್ದಾಗಿರಲಿ– ಇದು ಸರ್ಕಾರದ್ದೇ– ಈ ಸಭೆಯಲ್ಲಿ ಮನ್ನಣೆ ಕೊಟ್ಟರೆ ಈ ರಾಜ್ಯದ ಜನ ಮನ್ನಣೆ ಕೊಟ್ಟಿದ್ದಾರೆಂದೇ ಅರ್ಥ. ಇದನ್ನು ತಾವು ಕೂಡ ಸ್ವಾಗತ ಮಾಡಬೇಕೆಂದು ಹೇಳಿ ವೈಯಕ್ತಿಕವಾಗಿ ಮತ್ತು ಭಾರತೀಯ ಜನತಾ ಪಾರ್ಟಿ ವತಿಯಿಂದ ಇದನ್ನು ಪೂರ್ಣವಾಗಿ ಸ್ವಾಗತ ಮಾಡುತ್ತೇನೆ.

ಭೀಮಣ್ಣ ಖಂಡ್ರೆ : ಮಾನ್ಯ ಉಪಸಭಾಪತಿಗಳೇ, ಮೊದಲಿನಿಂದ ಈವರೆಗೆ ಭಾರತ ದೇಶದಲ್ಲಿ ಮನುಧರ್ಮಶಾಸ್ತ್ರ ಹೇಳಿದಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಗಗಳು ಇದ್ದವು. ಈ ವರ್ಗಗಳ ಹೆಸರಲ್ಲಿ ಏನು ಕೆಲಸ ಮಾಡಿಕೊಂಡು ಬರಲಾಯಿತು ಇವುಗಳನ್ನೇ ಮುಂದೆ ಜಾತಿಗಳೆಂದು ಪರಿಗಣಿಸಲಾಯಿತು. ಮುಂದೆ ನಮ್ಮ ದೇಶ ಸ್ವಾತಂತ್ರ್ಯ ಪಡೆದ ನಂತರ ನಮ್ಮ ಸಂವಿಧಾನದಲ್ಲಿ ಜಾತ್ಯತೀತ ರಾಷ್ಟ್ರ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಎಂಬ ಪದಗಳನ್ನು ಬಳಸಿದ್ದೇವೆ. ಎಲ್ಲಕ್ಕೂ ಮೊದಲು ಪೇಪರುಗಳಲ್ಲಿ ಈ ಹೆಡ್ಡಿಂಗ್ ಇರುತ್ತದೆ. ಜನವರಿ ೨೬ ರಂದು ನಾವು ಏನು ಮಾಡಿದ್ದೇವೆ ಅಂದರೆ ಯಾವ ಪ್ರಕಾರ ದೇಶ ಇರಬೇಕು, ಯಾವ ಪ್ರಕಾರ ರಾಜ್ಯ ಇರಬೇಕು, ಯಾವ ಪ್ರಕಾರ ಸಮಾಜ ಇರಬೇಕು, ಯಾವ ಪ್ರಕಾರ ರಾಷ್ಟ್ರ ಇರಬೇಕೆಂದು ಹೇಳಿದ್ದೇವೆ. ಹೀಗೆ ಹೇಳುವ ಮೂಲಕ ಮನುಧರ್ಮ ಶಾಸ್ತ್ರದ ಜಾತಿ ಆಧಾರದ ತತ್ವಗಳನ್ನು ಸುಟ್ಟುಹಾಕಲಾಗಿದೆ. ಆದರೆ ಪುಸ್ತಕದಲ್ಲಿ ಸುಟ್ಟುಹಾಕಿದಲೂ, ವ್ಯವಹಾರದಲ್ಲಿ ಮಾತ್ರ ಜೀವಂತವಾಗಿ ಇಟ್ಟುಕೊಂಡು ಮತ್ತೆ ಅದಕ್ಕೆ ಪುಷ್ಠಿ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

೫೦ ವರ್ಷದ ನಂತರವೂ ದೇಶದಲ್ಲಿ ಏನು ಪರಿಸ್ಥಿತಿ ಇದೆ, ಶ್ರೀಮಾನ್ ಸಿದ್ದಲಿಂಗಯ್ಯನವರು ಏನು ನಿರ್ಣಯ ತಂದಿದ್ದಾರೆ, ಇದರ ಬಗ್ಗೆ ಎಷ್ಟು ಪ್ರಶಂಸೆ ಮಾಡಿದರೂ ಕಡಿಮೆ. ಇಂಥ ನಿರ್ಣಯ ಬಹಳ ಅವಶ್ಯಕ. ಇದರ ಉದ್ದೇಶ ಜಾತ್ಯತೀತ ರಾಷ್ಟ್ರವನ್ನು ರೂಪಿಸಬೇಕೆಂಬುದೇ ಆಗಿದೆ. ಕ್ಲಾಸ್‌ಲೆಸ್ ಸೊಸೈಟಿ ಎಂದು ನಾವು ಬಾಯಲ್ಲಿ ಹೇಳುತ್ತೇವೆ. ಆದರೆ ಕಾರ್ಯಮಾತ್ರ ಇದರ ವಿರುದ್ಧ ಮಾಡುತ್ತಿರುತ್ತೇವೆ. ಸಮಾಜವಾದ ಮತ್ತು ಜಾತ್ಯತೀತತೆ ಒಂದೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೂ ಇವತ್ತಿನ ದಿವಸ ನಾವು ಏನು ಮಾಡುತ್ತಿದ್ದೇವೆ ಏನು ಮಾತಾಡುತ್ತಿದ್ದೇವೆ ಎಂಬುದರ ಪರಿಣಾಮಗಳನ್ನು ಕಾಶ್ಮೀರ ಪಂಜಾಬುಗಳಲ್ಲಿ ನೋಡುತ್ತಿದ್ದೇವೆ. ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿಯ ವಿಷವನ್ನು ಬಿತ್ತುತ್ತಿದ್ದೇವೆ. ಮೊನ್ನೆ ಪೇಪರಿನಲ್ಲಿ ಬಂದ ಪ್ರಕಾರ ಚರ್ಚಿಲ್ ಹೇಳಿದ್ದೇನೆಂದರೆ ಇವರಿಗೆ ಸ್ವಾತಂತ್ರ್ಯ ಕೊಟ್ಟರೆ, ಜಾತಿಜಾತಿಗಳಲ್ಲಿ ಮತ್ತೆ ಕಲಹ ಮಾಡಿಕೊಳ್ಳುತ್ತಾರೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ ಎಂದು. ಈ ದೇಶದಲ್ಲಿ ಬಸವಣ್ಣನವರ ಕಾಲದಿಂದ ಈವರೆಗೆ ಎಷ್ಟು ಮಂದಿ ಸಂತರು ಹುಟ್ಟಿಲ್ಲ, ಎಷ್ಟು ಸಂತರು ಆಗಿಹೋದರು. ಸಂತ ಜ್ಞಾನೇಶ್ವರರಾದರು, ತುಕರಾಂ ಆದರು, ರಾಮದಾಸ್ ಆದರು, ಮಹರ್ಷಿ ದಯಾನಂದ ಆದರು. ಆಗ ಆರ್ಯಸಮಾಜ ಎಂದು ಒಂದು ಚಳವಳಿಯಾಯಿತು. ಆ ಚಳವಳಿಯಲ್ಲಿ ಇವೆಲ್ಲಾ ಬಂದವು. ಆದರೂ ಸಂವಿಧಾನಾತ್ಮಕವಾಗಿ ನೋಡಿದರೆ ನಾವೇನು ಎಕ್ಸ್‌ಪೆಕ್ಟೇಷನ್ ಇಟ್ಟುಕೊಂಡಿದ್ದೇವೆ ಆ ಒಂದು ಎಕ್ಸ್‌ಪೆಕ್ಟೇಷನ್ ರೂಲ್ ಮಾಡುತ್ತಿದ್ದೇವೆ ಆ ರೂಲ್‌ನಲ್ಲಿ ಇದು ತದ್ವಿರುದ್ಧವಾಗುತ್ತಿದೆ.

ಈ ದೇಶ ಉಳಿಯಬೇಕಾದರೆ ಒಂದು ದಾರಿ ಬೇಕು. ೫೦ ವರ್ಷಗಳಿಂದ ಇಲ್ಲಿಯವರೆಗೆ ಈ ಜಾತಿ ಹೋಗಬೇಕೆಂದು ನಾವು ಎಷ್ಟೇ ಮಾತನಾಡುತ್ತಿದ್ದರೂ ಕೂಡ ಎಷ್ಟೋ ಜಾತಿಗಳನ್ನು ನಮಗೆ ಗೊತ್ತಿಲ್ಲದಂತೆ ಸೃಷ್ಟಿ ಮಾಡಿದ್ದೇವೆ. ಇವತ್ತು ಜಾತ್ಯತೀತ ಮೀಸಲಾತಿ ಬೇಕು ಎಂದು ಮಾನ್ಯ ಸದಸ್ಯರಾದ ಡಾ. ಸಿದ್ದಲಿಂಗಯ್ಯನವರು ಏನು ನಿರ್ಣಯ ತಂದಿದ್ದಾರೆ ಅದನ್ನು ನಾನು ಬಹಳ ಪ್ರಶಂಸೆ ಮಾಡಿ ಸ್ವಾಗತ ಮಾಡುತ್ತೇನೆ. ಜಾತ್ಯತೀತ ಮೀಸಲಾತಿ ಇದ್ದರೆ ಮಾತ್ರ ಈ ರಾಷ್ಟ್ರ ಉಳಿಯಬಹುದು, ಇಲ್ಲದಿದ್ದರೆ ಇಲ್ಲ ಎಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ. ನಾವು ನಿಜಾಮನ ಕಾಲದಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಜೈಲಿಗೆ ಹೋಗಿದ್ದೇವೆ. ಆಸ್ತಿ ಕಳೆದುಕೊಂಡಿದ್ದೇವೆ. ಆಗ ಒಂದೇ ಒಂದು ಮಾತು ಇತ್ತು. ಹಿಂದೂ ಮತ್ತು ಮುಸ್ಲಿಂ ಎಂದು. ಅದೂ ಸಹ ಯಾವಾಗ ಅಂದರೆ ಇನ್ನೇನು ಎರಡು ವರ್ಷಗಳಲ್ಲಿ ನಿಜಾಮ ಹೊರಟು ಹೋಗುತ್ತಾನೆ ಎನ್ನುವ ಸಮಯದಲ್ಲಿ. ಆದರೆ ಇಂದು ನಾವು ಎಷ್ಟೋ ಜಾತಿಗಳನ್ನು ಹುಟ್ಟಿಸಿದ್ದೇವೆ.

ಮೊನ್ನೆ ನಮ್ಮ ಬೀದರ್ ಜಿಲ್ಲೆಯಲ್ಲಿ ರೈಟ್ ಅಂಡ್ ಲೆಫ್ಟ್ ಎಂದು ೭ ಕೊಲೆಗಳು ಆದವು. ಇದನ್ನು ನಾವು ವಿಚಾರ ಮಾಡಬೇಕು. ಇಂಥದನ್ನು ದೂರ ಮಾಡುವ ಸಲುವಾಗಿ ಏನಾದರೊಂದು ದಾರಿ ಕಂಡುಹಿಡಿಯಬೇಕು. ಅಧಿಕಾರದ ಆಸೆಯಿಂದ ಎಲ್ಲಾ ಮರೆತು ದೇಶ ಮಾರಾಟ ಮಾಡುವುದಕ್ಕೆ ಹೊರಟರೆ ಹೇಗೆ? ದೇಶದ ಬಗ್ಗೆ ಚಿಂತನೆ ಮಾಡಬೇಕು. ಆದರೆ ಇದು ಇವತ್ತು ಯಾರಿಗೂ ಬೇಕಾಗಿಲ್ಲ. ರಾಷ್ಟ್ರ

ಭಾವನೆ ನಮ್ಮಲ್ಲಿ ಇದ್ದಿದ್ದರೆ ಇಲ್ಲಿಗೆ ಹೊರಗಿನ ಜನರು ಯಾರೂ ಬರುತ್ತಿರಲಿಲ್ಲ. ಮಂಗೋಲರು, ಆರ್ಯರು, ಖಿಲ್ಜಿ, ಮೊಗಲ ಬರುತ್ತಿರಲಿಲ್ಲ. ಅಂಗ್ರೇಜಿ ಬರುತ್ತಿರಲಿಲ್ಲ. ಆದರೂ ನಮ್ಮದು ಸಂಸ್ಕೃತಿ ಹೊಂದಿದ ದೊಡ್ಡ ದೇಶವೆಂದು ಹೇಳುತ್ತೇವೆ. ನಾವು ಎಷ್ಟೋ ಇಂಪ್ಲಿಮೆಂಟ್ ಮಾಡಿದ್ದೇವೆಂದು ಹೇಳಿಕೊಳ್ಳುತ್ತೇವೆ. ಆದರೆ ಇದರಲ್ಲಿ ಎಲ್ಲಾ ಕಲಬೆರಕೆ ಆಗಿದೆ. ಇವತ್ತಿನ ದಿವಸ ಎಷ್ಟೋ ಜಾತಿಗಳು ಭಾಷೆಗಳು ಹುಟ್ಟಿವೆ. ಇವೆಲ್ಲಾ ಸೇರಿ ಮಿಕ್ಸಚರ್ ಆಗಿವೆ. ಇಂತಹ ಪರಿಸ್ಥಿತಿಯಲ್ಲಿ ನಮಗೆ ಯಾವ ರೀತಿಯ ರಾಜ್ಯ ಬೇಕು, ಯಾವ ರೀತಿಯ ರಾಷ್ಟ್ರ ಬೇಕು ಎಂಬ ಪ್ರಶ್ನೆ ಬಂದಾಗ ನಮ್ಮಸಂವಿಧಾನ ಇದ್ದರೂ ಕೂಡ ನಮ್ಮ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರಬಹುದೆನಿಸುತ್ತದೆ. ಅದಕ್ಕೇ ಸಂವಿಧಾನಕ್ಕೆ ತಿದ್ದುಪಡಿ ಆಗಬೇಕು. ೪೦ ವರ್ಷಗಳ ನಂತರ ಇದರ ಅವಶ್ಯಕತೆ ಕಾಣಿಸುತ್ತಿದೆ.

ಇವತ್ತು ಜಾತಿ ಇಲ್ಲವೆಂದು ಹೇಳುವವರನ್ನು ಒಂದು ಮಾತು ಕೇಳುತ್ತೇನೆ. ಈ ರಾಷ್ಟ್ರದಲ್ಲಿ ಮನುಷ್ಯ ಹುಟ್ಟಿದಾಗ ಅವನಿಗೆ ಒಂದು ಚಡ್ಡಿ ಹೊಲಿಸುತ್ತೇವೆ. ೪೦ ವರ್ಷಗಳ ನಂತರ ಅದನ್ನೇ ತೊಡಿಸಲಿಕ್ಕೆ ಹೋದರೆ ಅದು ಹರಿದು ಹೋಗುತ್ತದೆ. ಆ ಚಡ್ಡಿ ಹಾಕಲೇಬೇಕು ಎಂದಾದರೆ ಆ ಮನುಷ್ಯನ ಕಾಲು ಕಡಿಯಬೇಕಾಗುತ್ತದೆ. ಆಗ ಮಾತ್ರ ಆ ಚಡ್ಡಿ ಆ ಮನುಷ್ಯನಿಗೆ ಆಗುತ್ತದೆ. ಹೀಗೆ ನಮ್ಮ ಸಂವಿಧಾನದ ಕತೆ ಆಗಿದೆ. ಆದ್ದರಿಂದ ನಮ್ಮ ಸಂವಿಧಾನದಲ್ಲಿ ಹೇಳಿರುವಂತಹ ಮಾತನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಅದು ತಪ್ಪಾಗುತ್ತದೆ, ರಾಷ್ಟ್ರದ್ರೋಹವಾಗುತ್ತದೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಇದಕ್ಕೆ ಯಾವ ಪಾರ್ಟಿ ಇಲ್ಲ, ಗ್ರೂಪ್ ಇಲ್ಲ, ಇದು ನನ್ನ ಪ್ರಾಮಾಣಿಕ ಅಭಿಮತ. ಈ ದೇಶ ಉಳಿಯಬೇಕಾದರೆ, ಮಜಬೂತಾಗಬೇಕಾದರೆ ಪ್ರಪಂಚದಲ್ಲಿಯೇ ನಮ್ಮ ರಾಷ್ಟ್ರ ದೊಡ್ಡದು ಎಂದು ಹೇಳಬೇಕೆಂದರೆ ಈ ನಿರ್ಣಯವನ್ನು ನಾವು ಒಪ್ಪಬೇಕಾಗುತ್ತದೆ.

ನಮಗೆ ಮೀಸಲಾತಿ ಬೇಕು. ಆದರೆ ಆ ಮೀಸಲಾತಿ ಜಾತಿರಹಿತ ಮೀಸಲಾತಿ ಆಗಿರಬೇಕು. ಜಾತ್ಯತೀತ ಮೀಸಲಾತಿ ಮಾಡಿದರೆ ಲೇಡಿಸ್, ರೈತರು, ಮಜ್ದೂರ್, ಇನ್ನು ಬೇರೆ ಬೇರೆ ಕೆಲಸ ಮಾಡತಕ್ಕಂಥ ಕೆಳ ಜನರನ್ನು ಈ ನಿರ್ಣಯದ ಅಡಿಯಲ್ಲಿ ತರಬಹುದು. ಈ ದೇಶ ಗಂಧದ ನಾಡು. ಈ ದೇಶದಲ್ಲಿ ಗಂಧರ್ವರೂ ಇದ್ದರು, ಪಾಂಡವರೂ ಇದ್ದರು. ಆದರೂ ಸಹ ಈಗಿನ ಪರಿಸ್ಥಿತಿಯಲ್ಲಿ ಯಾರಿಗೆ ರೊಕ್ಕ ಇರುತ್ತದೆ ಅವರು ಚುನಾವಣೆಯಲ್ಲಿ ಗೆದ್ದು ಬರುತ್ತಾರೆ. ಯಾರು ಲಕ್ಷಪತಿ, ಯಾರು ಕರೋಡುಪತಿ ಇರುತ್ತಾನೋ ಅವನು ಗೆದ್ದು ಬರುತ್ತಾನೆ. ಇಂಡಸ್ಟ್ರಿ ಯಾರಿಗೆ ಇರುತ್ತದೆ ಅವನು ಗೆದ್ದು ಬರುತ್ತಾನೆ. ಅದೇ ಬಡಮನುಷ್ಯ ಇವರ ಎದುರುಗಡೆ ಗೆದ್ದುಬರಲು ಸಾಧ್ಯವಿಲ್ಲ. ಇಂತಹ ಒಂದು ಪರಿಸ್ಥಿತಿ ಯಲ್ಲಿ ನಾವು ಇದ್ದೇವೆ.

೧೯೫೦ರ ನಂತರ ನಾವು ಒಂದು ಕಾನೂನು ಮಾಡಿದ್ದೇವೆ. ಆ ಕಾನೂನಿನ ಪ್ರಕಾರ ಯಾರಾದರು ಜಾತಿ ಹೆಸರಿನಿಂದ ಓಟು ಬೇಡಿದರೆ ಅವರ ನಾಮಿನೇಷನ್ ಕ್ಯಾನ್ಸಲ್ ಆಗುತ್ತದೆ. ಇದು ಪೀಪಲ್ ರೆಪ್ರೆಸೆಂಟೇಷನ್ ಆಕ್ಟ್‌ನಲ್ಲಿ ಇದೆ. ಆದರೆ ಇವತ್ತು ಏನಾಗಿದೆ? ಟಿಕೇಟ್ ಕೊಟ್ರೂ ಜಾತಿ ಹೆಸರ ಮೇಲೆ, ಮೀಸಲಾತಿ ಮಾಡಿದರೂ ಜಾತಿ ಹೆಸರ ಮೇಲೆ, ಕೆಲಸ ಮಾಡಬೇಕಾದರೂ ಜಾತಿ ಹೆಸರ ಮೇಲೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಯಾವ ಯಾವ ಜನ ಯಾವ ಯಾವ ಜಾತಿ ಎಂದು ಕೇಳುವಂಥ ಕಾಲ ಬಂದಿದೆ. ಇದನ್ನು ನಿರ್ಮೂಲನೆ ಮಾಡಬೇಕಾದರೆ ಒಂದು ದೊಡ್ಡ ಆಂದೋಲನ ಆಗಬೇಕು. ಆ ಆಂದೋಲನ ರಷ್ಯಾದಲ್ಲಾದಂತೆ ಆಗಬೇಕಾಗಿಲ್ಲ. ನಾವು ಗಾಂಧೀವಾದಿಗಳು. ಆದರೂ ಒಂದೊಂದು ಸಾರಿ ಎಷ್ಟು ಸಿಟ್ಟು ಬರುತ್ತದೆ ಎಂದರೆ, ಸಮಾಜವನ್ನು ಯಾರು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೋ, ಯಾರು ಸಂಪತ್ತನ್ನು ಮಾಡಿದ್ದಾರೋ, ಯಾರು ಕರಪ್ಟ್ ಇದ್ದಾರೋ, ಯಾರು ಯಾರು ಡೆಮಾಕ್ರಸಿ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ಮುಂದೆ ಬಂದಿದ್ದಾರೋ ಅಂಥವರುಗಳನ್ನು ಶೂಟ್ ಮಾಡಿದರೆ ಒಳ್ಳೆಯದೆಂದು ಜನರ ಭಾವನೆಯಲ್ಲಿ ಬರುತ್ತಿದೆ. ಈ ಜನ ಬಡವರು ಒಂದಾಗಬಾರದೆಂದು ಅವರಲ್ಲಿ ಜಾತಿ ಎಂಬ ವಿಷವನ್ನು ಹಂಚಿದ್ದಾರೆ. ಯಾರು ಮುಂದೆ ಬರುತ್ತಾರೋ ಅವನಿಗೆ ಈ ಜಾತಿಯವನು ಎಂದು ಹೇಳುತ್ತಾರೆ. ಅವನು ಎಂಥಾ ಒಳ್ಳೆಯ ಮನುಷ್ಯನಿದ್ದರೂ ಅವನ ಜಾತಿಯ ಕಳಂಕ ಅವನ ಹಣೆಯ ಮೇಲೆ ಬರೆಯಲಾಗುತ್ತದೆ.

ಇವತ್ತು ನಾವು ಎಲ್ಲವನ್ನೂ ಭಾವನಾತ್ಮಕ ದೃಷ್ಟಿಯಿಂದ ನೋಡುತ್ತಿದ್ದೇವೆ. ಮಂದಿರ, ಮಸೀದಿ ಎಂಬ ಭಾವನೆ ಜನರನ್ನು ದಾರಿ ಕೆಡಿಸಿ ದಿಕ್ಕುತಪ್ಪಿಸಿದೆ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಇಡೀ ದೇಶಕ್ಕೆ ಎಚ್ಚರಿಕೆ ಕೊಡಬೇಕಾಗಿದೆ. ದೊಡ್ಡ ದೊಡ್ಡ ಜನ ಶಾಲಾಕಾಲೇಜುಗಳ ಬಗ್ಗೆ ಹೇಳಿದ್ದಾರೆ. ೪೦ ವರ್ಷದಿಂದ ಪಠ್ಯ ಪುಸ್ತಕಗಳಲ್ಲೂ ಒಳ್ಳೆಯ ಅಂಶಗಳು ಇಲ್ಲ. ಸ್ಕೂಲಿನಲ್ಲಿ, ಕಾಲೇಜಿನಲ್ಲಿ ಜಾತಿ ಹೆಸರನ್ನು ಬರೆಸಬಾರದು ಎನ್ನುವ ಮಾತನ್ನು ತಾವು ತಿಳಿಸಬೇಕು. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮಿಸ್ಟರ್ ಶಿವಣ್ಣನವರೇ, ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ಮಾನ್ಯ ಸಿದ್ದಲಿಂಗಯ್ಯನವರು ಹೇಳಿದರು. ನಾನು ಅವರಿಗೆ ಅಪ್ರಿಷಿಯೇಟ್ ಮಾಡುತ್ತೇನೆ. ಸ್ಕೂಲ್‌ನಲ್ಲಿ, ಕಾಲೇಜಿನಲ್ಲಿ ಆ ಪ್ರಕಾರ ಆಗಲೇಬೇಕು. ಹಾಗೆಯೇ ನಮ್ಮ ಎಲೆಕ್ಷನ್ನಲ್ಲೇ ಆಗಲೀ, ಬೇರೆ ಅಧಿಕಾರ ಅಥವಾ ನೌಕರಿ ಕೊಡುವಾಗ ಆಗಲಿ ಆ ಪ್ರಕಾರದ ಬುನಾದಿ ಬೇಕು. ಅಂಥ ಬುನಾದಿ ಇಲ್ಲದಿದ್ದರೆ ಈ ರಾಷ್ಟ್ರ ಉಳಿಯುವುದಿಲ್ಲ. ಇದಕ್ಕಾಗಿ ಬಹಳ ದಿವಸವೇನೂ ಕಾಯಬೇಕಾಗಿಲ್ಲ. ಇನ್ನು ಸ್ವಲ್ಪ ದಿವಸದಲ್ಲೇ ಅದನ್ನು ನಾವು ನೋಡುತ್ತೇವೆ.

ಇವತ್ತು ಕಾಶ್ಮೀರದಲ್ಲಿ ಏನಾಗಿದೆ? ಸಮಯ ಕಡಿಮೆ ಇರುವುದರಿಂದ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ದೇಶದಲ್ಲಿ ನಮ್ಮ ಬಾವುಟ ಹಾಕುವುದಕ್ಕೆ ನಮಗೆ ಅಧಿಕಾರ ಇಲ್ಲ. ಇದಕ್ಕಿಂತ ನಾಚಿಕೆಗೇಡಿನ ಮಾತು ಏನು ಹೇಳಬೇಕು? ಇನ್ನು ಗಡಿ ವಿವಾದದ ಬಗ್ಗೆ. ಇವತ್ತು ಚೈನಾದವರು ಸಾವಿರಾರು ಮೈಲು ಹಿಡಿದುಕೊಂಡಿದ್ದರೂ ಯಾವ ಒಬ್ಬ ನಾಯಕ, ಎಂ. ಪಿ, ಎಂ. ಎಲ್. ಎ. ಏನಾದರೂ ಮಾಡುತ್ತಿದ್ದಾರಾ? ಯಾವ ಹರಿಜನರು ದಾರಿ ಮಾಡಿಕೊಂಡು ಹೋಗಿ ಕುಳಿತಿದ್ದಾರೋ ಅವರು ಗುಲಾಮರಾಗಿಯೇ ಇದ್ದಾರೆ. ಇದಕ್ಕೆ ಕಾರಣವೆಂದರೆ ಜಾತಿ ಜಾತಿಯೊಳಗೆ ಜಗಳ, ಧರ್ಮಧರ್ಮದೊಳಗೆ ಜಗಳ, ನಮ್ಮ ನಮ್ಮಲ್ಲೇ ಜಗಳ. ರಾಷ್ಟ್ರೀಯತೆ ಎಂದರೆ ಯಾರಿಗೂ ಮಾತೇ ಇಲ್ಲ. ನಮ್ಮ ಜನಗಳಿಗೆ ನ್ಯಾಷನಲ್ ಕ್ಯಾರೆಕ್ಟರ್ ಹುಟ್ಟಿಸಬೇಕಾದರೆ ಜನರನ್ನ ಸರಿಯಾಗಿ ತಯಾರು ಮಾಡಬೇಕಾಗಿದೆ. ಇಲ್ಲದಿದ್ದರೆ ನಮ್ಮ ದೇಶ ಹಾಳಾಗುತ್ತದೆಂಬ ಮಾತನ್ನು ಹೇಳಿ ಇವತ್ತು ಶ್ರೀಮಾನ್ ಡಾ. ಸಿದ್ದಲಿಂಗಯ್ಯನವರು ಏನು ನಿರ್ಣಯ ತಂದಿದ್ದಾರೆ, ಇಂಥಾ ಮೀಸಲಾತಿ ೫ ಪರ್ಸೆಂಟ್ ಮಾತ್ರ ಅಲ್ಲ, ೧೦೦ ಪರ್ಸೆಂಟ್ ಆಗಬೇಕು. ಇದು ಬರೀ ಲಗ್ನದ ವಿಷಯವಾಗಿ ಮಾತ್ರ ಇದೆ. ಲಗ್ನದ ವಿಷಯದಲ್ಲಿ ೫ ಪರ್ಸೆಂಟ್ ಕೊಟ್ಟು ಬೇರೆ ರೀತಿಯಲ್ಲೂ ಇನ್ನು ಹೆಚ್ಚು ಕೊಡಬೇಕು. ಇವತ್ತು ಹೈದರಾಬಾದ್ ಕರ್ನಾಟಕದ ಕಡೆ ಖಾನಾಬದೋಶ್ ಎನ್ನುತ್ತೇವೆ. ಇಲ್ಲಿ ಏನು ಅನ್ನುತ್ತಾರೋ ಗೊತ್ತಿಲ್ಲ. ಅಂದರೆ ಯಾವ ಮನುಷ್ಯನಿಗೆ ಪ್ಲಾಟ್ ಇಲ್ಲ, ಜೋಪಡಿ ಇಲ್ಲ. ಇವರಿಕ್ಕೆ ಏನೂ ಇಲ್ಲ, ಅವನು ಒಂದು ಕಟ್ಟಿಗೆ ಎತ್ತಿಕೊಂಡು ಎರಡು ತಕ್ಕಡಿಯಂತೆ ಮಾಡುತ್ತಾನೆ. ಆ ತಕ್ಕಡಿಯಲ್ಲಿ ಒಂದು ಕಡೆ ಮಗು ಇನ್ನೊಂದು ಕಡೆ ಅವನ ಮನಿ. ಅವನು ಎಲ್ಲೆಲ್ಲಿ ಹೋಗುತ್ತಾನೋ ಅಲ್ಲಲ್ಲಾ ಅವನಿಗೆ

ಅದೇ ಮನಿ. ಅಂಥವರಿಗೆ ಎ.ಬಿ.ಸಿ.ಯಲ್ಲಿ ಏನು ಮಾಡಿದ್ದೀರಿ? ಅದರಲ್ಲಿ 'ಎ' ಕ್ಲಾಸ್ ಅವರಿಗೆ ಕೊಡಿರಿ. ಯಾರಿಗೆ ಏನೂ ಇಲ್ಲವೋ ಅವರಿಗೆ 'ಎ' ಕ್ಲಾಸ್ ಕೊಡಿರಿ. ಜೋಪಡಿ ಹಾಕಿಕೊಂಡಿರುವವರಿಗೆ 'ಬಿ' ಕ್ಲಾಸ್ ಕೊಡಿ. ಈ ಪ್ರಕಾರ ಕೊಡುತ್ತಾ ಬಂದರೆ ಈ ದೇಶಕ್ಕೆ ಒಳ್ಳೆಯದಾಗುತ್ತದೆ. ಹೊಸ ಸಮಾಜ ನಿರ್ಮಾಣವಾಗುತ್ತದೆ. ದೇಶ ಬಲವಂತವಾಗುತ್ತದೆ. ಆಗ ಯಾರಿಗೂ ನಮ್ಮ ಕಡೆ ಕಣ್ಣೆತ್ತಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟು ಶಕ್ತಿ ನಮ್ಮಲ್ಲಿ ನಿರ್ಮಾಣವಾಗುತ್ತದೆ.

ಏನು ಕಡಿಮೆ ಇದೆ ನಮ್ಮಲ್ಲಿ? ಬಂಗಾರದ ಭೂಮಿ ಇದೆ, ವಿದ್ವಾನರು ಇದ್ದಾರೆ, ವೀರರಿದ್ದಾರೆ, ಶೂರರಿದ್ದಾರೆ, ಎಲ್ಲಾ ಇದ್ದಾರೆ. ಆದರೆ ಉಪಯೋಗ ಏನಾಗುತ್ತಿದೆ? ಈ ರೀತಿ ಅಂತರ್ಜಾತಿ ವಿವಾಹಗಳು ಪ್ರೇಮದಿಂದ ಆಗಬಹುದು ಅಥವಾ ಬೇರೆ ರೀತಿಯಿಂದಲೂ ಆಗಬಹುದು. ಆದ್ದರಿಂದ ನಮ್ಮ ಪ್ರೊಫೆಸರ್ ತಂದಿರುವ ನಿರ್ಣಯ ಬಹಳ ಒಳ್ಳೆಯದಾಗಿದೆ. ಇದನ್ನು ಓಟಿಗೆ ಹಾಕಿ ಪಾಸ್ ಮಾಡಿದರೂ ಪರವಾಗಿಲ್ಲ. ನಮ್ಮ ನಾಗೇಗೌಡರು ಹೇಳಿದರು. ಇದನ್ನು ಓಟಿಗೆ ಹಾಕುವುದು ಬೇಡ ಎಂದು. ಇದನ್ನು ಯುನಾನಿಮಸ್ ಆಗಿ ಮಾಡಿದರೂ ತಪ್ಪಿಲ್ಲ. ಏಕೆಂದರೆ ಇದು ಯಾವ ಪಾರ್ಟಿಗೆ ಸಂಬಂಧ ಪಟ್ಟಿದ್ದೂ ಅಲ್ಲ. ಇಡೀ ರಾಷ್ಟ್ರಕ್ಕೆ, ಸಮಾಜಕ್ಕೆ ಸಂಬಂಧಪಟ್ಟಿದ್ದು. ಇದನ್ನು ವಾಪಸ್ ತೆಗೆದುಕೊಳ್ಳಬೇಕಾದರೆ ಸಂಬಂಧಪಟ್ಟ ಸಚಿವರು ಇದರ ಬಗ್ಗೆ ಒಂದು ಕಾಂಪ್ರೆನ್ಸಿವ್ ಬಿಲ್ ತರುತ್ತೇನೆಂದು ಹೇಳಿದರೆ ನಾವೆಲ್ಲಾ ಒಪ್ಪಿಕೊಳ್ಳಬಹುದು. ಇಷ್ಟು ಮಾತನ್ನು ಆಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದನೆಗಳು.

ಉಪಸಭಾಪತಿಯವರು : ಇದು ಬಹಳ ಮುಖ್ಯವಾದ ವಿಷಯ ವಾಗಿದೆ.ಏಕೆಂದರೆ ಈ ರೀತಿ ಮದುವೆಗಳಾದಾಗ ಗಂಡಿನವರು ಹುಡುಗಿಗೆ ತೊಂದರೆ ಕೊಡುವುದು ತುಂಬಾ ನಡೆಯುತ್ತಿದೆ. ಇದರ ಬಗ್ಗೆ ನಾವೆಲ್ಲಾ ಮುತುವರ್ಜಿ ವಹಿಸಬೇಕು. ಇಂತಹ ಮದುವೆಗಳು ಆದಾಗ ಇನ್ವಿಟೇಶನ್ ಇರಲಿ ಅಥವಾ ಇಲ್ಲದಿರಲಿ ಇಂತಹ ಮದುವೆಗಳಿಗೆ ಹೋಗಿ ಹೆಚ್ಚು ಪ್ರೋತ್ಸಾಹ ಕೊಡಬೇಕು. ಅನೇಕ ಜನ ನೌಕರಿಗೋಸ್ಕರ ಕಾಯುತ್ತಿದ್ದಾರೆ. ಅಂತಹವರಿಗೆ ಸಹಾಯ ಮಾಡಲು ನಾವು ಮುಂದೆ ಬರಬೇಕು. ಇದರ ಬಗ್ಗೆ ಮಾತನಾಡಲು ಹಲವಾರು ಸದಸ್ಯರುಗಳು ಬಹಳ ಕಾತರದಿಂದ ಇದ್ದಾರೆ.

ಈ ದೃಷ್ಟಿಯಿಂದ ಈ ವಿಷಯವನ್ನು ನಾವು ಮುಂದಿನ ಸಾರಿ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಅರ್ಧ ಗಂಟೆ ಕಾಲ ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

೮-೩-೧೯೯೧

ಸಭಾಪತಿಯವರು : ಸಿದ್ದಲಿಂಗಯ್ಯನವರೇ, ನಿಮ್ಮ ಖಾಸಗಿ ನಿರ್ಣಯದ ಮೇಲೆ ಸಾಕಷ್ಟು ಚರ್ಚೆ ಆಗಿದೆ. ಸಂಬಂಧಪಟ್ಟ ಮಂತ್ರಿಗಳೂ ಈಗ ಸಭೆಯಲ್ಲಿ ಇದ್ದಾರೆ. ಈ ಬಗ್ಗೆ ಮಾನ್ಯ ತಿಪ್ಪಣ್ಣನವರು ಒಂದು ತಿದ್ದುಪಡಿ ಕೊಟ್ಟಿದ್ದರು.....

ಡಾ. ಎಂ. ಪಿ. ನಾಡಗೌಡ : ಆ ತಿದ್ದುಪಡಿಯನ್ನು ವಾಪಸ್ ಪಡೆಯಲು ನನಗೆ ಮಾನ್ಯ ತಿಪ್ಪಣ್ಣನವರು ತಿಳಿಸಿರುತ್ತಾರೆ. ತಾವು ಅವಕಾಶ ಕೊಟ್ಟರೆ ನಾನು ವಿತ್‌ಡ್ರಾ ಮಾಡುತ್ತೇನೆ.

ಸಭಾಪತಿಯವರು : ಸಿದ್ದಲಿಂಗಯ್ಯನವರಿಗೆ ಮಾನ್ಯ ಮಂತ್ರಿಗಳು ಈ ಬಗ್ಗೆ ಆಶ್ವಾಸನೆ ಕೊಟ್ಟರೆ ಅವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ.

ಬಿ. ಶಿವಣ್ಣ : ಮಾನ್ಯ ಸದಸ್ಯರಿಗೆ ರಿಕ್ವೆಸ್ಟ್ ಮಾಡುವುದು ಏನೆಂದರೆ, ಇದಕ್ಕೆ ನನಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಶೇಕಡಾ ೫ ಮೀಸಲಾತಿ ಬಗ್ಗೆ ಅವರು ನಿರ್ಣಯದಲ್ಲಿ ಹೇಳಿರುವುದರಿಂದ ಅದರ ಬಗ್ಗೆ ನಾವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಡಾ. ಸಿದ್ದಲಿಂಗಯ್ಯನವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿ. ಬಿ. ಕಲ್ಮಣಕರ್ : ಸಿಂಪಥಿಟಕಲಿ ಕನ್ಸಿಡರ್ ಮಾಡುತ್ತೇವೆಂದು ಹೇಳಿದರೆ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ.

ಸಭಾಪತಿಯವರು : ಕ್ಯಾಬಿನೆಟ್ ಮುಂದೆ ತಂದು ಏನಾದರೂ ವಿಚಾರ ಮಾಡಬೇಕಾಗುತ್ತದೆ.

ಡಾ. ಸಿದ್ದಲಿಂಗಯ್ಯ : ನಾನು ಈ ನಿರ್ಣಯವನ್ನು ತಂದು ೧ ವರ್ಷವಾಯಿತು. ಇಷ್ಟು ಹೊತ್ತಿಗೆ ಏನಾದರೂ ಯೋಚನೆ ಮಾಡಬಹುದಾಗಿತ್ತು. ಇಷ್ಟು ವಿಳಂಬವಾಗಿದೆ. ಆದರೂ ಕೂಡಾ ಮುಂದಿನ ಮಂತ್ರಿಮಂಡಲದ ಸಭೆಯಲ್ಲಿ ಈ ವಿಚಾರವನ್ನು ತಂದು ಈ ಅಧಿವೇಶನ ಮುಗಿಯುವುದರೊಳಗೆ ಹೇಳಿಕೆ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಇನ್ನೊಂದು ದಿನಾಂಕಕ್ಕೆ ಹೋಗುತ್ತೇನೆ.

ಬಿ. ಶಿವಣ್ಣ : ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಕ್ಯಾಬಿನೆಟ್‌ಗೆ ತರುತ್ತೇನೆ.

ಡಾ. ಸಿದ್ದಲಿಂಗಯ್ಯ : ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಈ ಅಧಿವೇಶನ ಮುಗಿಯುವುದರೊಳಗೆ ಹೇಳಿಕೆ ಕೊಡುತ್ತೀರಾ?

ಟಿ. ಎನ್. ನರಸಿಂಹಮೂರ್ತಿ : ನಾನು ಬೆಳಿಗ್ಗೆ ಮಾನ್ಯ ಸಿದ್ದಲಿಂಗಯ್ಯನವರ ಹತ್ತಿರ ೧ ಗಂಟೆ ಮಾತನಾಡಿದ್ದೇನೆ. ಅವರು ಏನು ನಿರ್ಣಯವನ್ನು ತಂದಿದ್ದಾರೆ ಅದನ್ನು ನಾನು ವೈಯಕ್ತಿಕವಾಗಿ ಮೆಚ್ಚಿದ್ದೇನೆ. ಅವರ ಭಾವನೆಗಳು ಏನು ಇವೆ ಅವು ಎಲ್ಲರೂ ಮೆಚ್ಚುವಂಥಾದ್ದು. ಇದನ್ನು ಮಂಜೂರು ಮಾಡಿ ಎಂದು ಹೇಳುತ್ತಿದ್ದಾರೆ. ಇದನ್ನು ಸರ್ಕಾರದ ವಿವೇಚನೆಗೆ ಬಿಟ್ಟರೆ ಒಳ್ಳೆಯದು. ಖಂಡಿತವಾಗಿಯೂ ನಿಮ್ಮ ಭಾವನೆಗಳು, ಚಿಂತನೆಗಳು ಸಾಮಾಜಿಕ ಪರಿವರ್ತನೆಯಲ್ಲಿ ಸಹಾಯಕ ಆಗಬೇಕು. ಇದರ ಬಗ್ಗೆ ನಮ್ಮ ಸರ್ಕಾರ ಯಾವ ಹೆಜ್ಜೆಯನ್ನು ಇಡುತ್ತದೆ ಎಂಬ ಬಗ್ಗೆ ಕಾದು ನೋಡಬೇಕಾಗುತ್ತದೆ. ಅಂತರ್ಜಾತಿ ವಿವಾಹವೆಂದರೆ ಯಾವ ಜಾತಿ ಹೆಣ್ಣುಮಕ್ಕಳು ಯಾವ ಜಾತಿಯವರನ್ನು ಮದುವೆಯಾಗಬೇಕು, ಯಾರು ಮದುವೆಯಾದರೆ ಇಂತಹ ಸೌಲಭ್ಯ ಸಿಗುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಯಾರು ಬೇಕಾದರೂ ಮದುವೆಯಾಗಬಹುದು, ಅದನ್ನು ಯಾರೂ ಬೇಡವೆಂದು ಹೇಳುವುದಿಲ್ಲ. ಇವತ್ತು ಅದು ನಡೆಯುತ್ತಿದೆ. ಪರಿಶಿಷ್ಟ ಜಾತಿ ಪಂಗಡದ ಹೆಣ್ಣುಮಗಳು ಅಂತರ್ಜಾತಿ ವಿವಾಹವಾದರೆ ಸಾಮಾಜಿಕ ಪ್ರಗತಿಯಾಗುತ್ತದೆ. ಆ ದಿಸೆಯಲ್ಲಿ ಚಿಂತನೆ ಮಾಡಬೇಕಾಗುತ್ತದೆ. ಇದನ್ನು ಜಾರಿಗೆ ತಂದರೆ ಇಡೀ ಭಾರತ ದೇಶದಲ್ಲಿ ಕರ್ನಾಟಕ ಕ್ರಾಂತಿಕಾರಿ ಬದಲಾವಣೆಯನ್ನು ಹೊಂದುತ್ತದೆಂದು ಹೇಳಬಹುದು. ಮಾನ್ಯ ಸಿದ್ದ ಲಿಂಗಯ್ಯನವರು ಬಹಳಷ್ಟು ವಿಚಾರವನ್ನು ಹೇಳಿ ನಮ್ಮ ಸರ್ಕಾರವನ್ನು ಎಚ್ಚರಿಸಿದ್ದಾರೆ. ಸಾಕಷ್ಟು ಮಾರ್ಗದರ್ಶನ ನೀಡಿದ್ದಾರೆ. ದಯಮಾಡಿ ಇದನ್ನು ಸರ್ಕಾರದ ವಿವೇಚನೆಗೆ ಬಿಡಬೇಕೆಂದು ಇಡೀ ಸದನದ ಎಲ್ಲಾ ಸದಸ್ಯರ ಪರವಾಗಿ ನಿಮ್ಮನ್ನು ಕೇಳುತ್ತಿದ್ದೇನೆ.

ಡಾ. ಸಿದ್ದಲಿಂಗಯ್ಯ : ಮಾನ್ಯ ಸಭಾನಾಯಕರ ಮಾತಿಗೆ ನಾನು

ಋಣಿಯಾಗಿದ್ದೇನೆ. ಉತ್ತಮವಾದ ಸಲಹೆ ಕೊಟ್ಟಿದ್ದಾರೆ, ಸಂತೋಷ. ಸುಮಾರು ೧ ವರ್ಷದಿಂದ ನಾವೆಲ್ಲರೂ ಇದರ ಬಗ್ಗೆ ಭಾಷಣ ಮಾಡುತ್ತಿದ್ದೇವೆ. ಆದರೂ ಇದರ ಬಗ್ಗೆ ಸರಕಾರ ಏನೂ ಯೋಚನೆ ಮಾಡದೆ, ಯಾವ ನಿರ್ಣಯವನ್ನೂ ತೆಗೆದುಕೊಳ್ಳದೇ ಇರುವುದು ವಿಷಾದದ ಸಂಗತಿ. ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಿ. ನಿಮ್ಮ ನೀತಿಯ ವಿವರಗಳನ್ನು ತಕ್ಷಣಕ್ಕೆ ಕೇಳುತ್ತಿಲ್ಲ. ಈ ಅಧಿವೇಶನದಲ್ಲಿ, ಮಂತ್ರಿಮಂಡಲದ ಸಭೆಯಲ್ಲಿಟ್ಟು, ಅಧಿವೇಶನ ಮುಗಿಯುವುದರೊಳಗಾದರೂ ನಿಮ್ಮ ನೀತಿಯನ್ನು ಪ್ರಕಟ ಮಾಡುತ್ತೀರಾ?

ಸಭಾಪತಿಯವರು : ಇನ್ನೊಂದು ವಾರಕ್ಕೆ ಈ ಅಧಿವೇಶನ ಮುಗಿಯುತ್ತದೆ.

ಟಿ. ಎನ್. ನರಸಿಂಹಮೂರ್ತಿ : ನಮ್ಮ ಮುಖ್ಯಮಂತ್ರಿಗಳಿಗೆ ಸಮಾಜವಾದದಲ್ಲಿ ನಂಬಿಕೆ ಇದೆ. ಇಂತಹ ಕ್ರಾಂತಿಕಾರಕವಾದ ಬೆಳವಣಿಗೆಗೆ ಅವರು ಬೆಂಬಲ ಕೊಡತಕ್ಕಂತಹವರು.

ಸಭಾಪತಿಯವರು : ಸಭಾನಾಯಕರು ಹೇಳಿದ ಮಾತುಗಳನ್ನು ಮಾನ್ಯ ಸಿದ್ದಲಿಂಗಯ್ಯನವರು ನಂಬಬಹುದು ಎಂದು ನನ್ನ ಅನಿಸಿಕೆ.

ಡಾ. ಸಿದ್ದಲಿಂಗಯ್ಯ : ಸ್ಪಷ್ಟವಾಗಿ ಎಷ್ಟು ದಿನದೊಳಗೆ, ಎಷ್ಟು ತಿಂಗಳಲ್ಲಿ ತೀರ್ಮಾನ ಮಾಡುತ್ತಾರೆಂದು ಹೇಳಬೇಕು.

ಟಿ. ಎನ್. ನರಸಿಂಹಮೂರ್ತಿ : ನನಗೆ ಸ್ಪಷ್ಟವಾಗಿ ಇಷ್ಟು ದಿನ, ಇಷ್ಟು ತಿಂಗಳೆಂದು ಹೇಳುವುದು ಕಷ್ಟ. ನಾನು ೧೯೭೦ರಲ್ಲಿ ಈ ಸದನಕ್ಕೆ ಬಂದಾಗ ಇದೇ ವಾದವನ್ನು ಇಲ್ಲಿ ಇಟ್ಟಿದ್ದೆ.

ಡಾ. ಸಿದ್ದಲಿಂಗಯ್ಯ : ಸ್ಪಷ್ಟವಾದ ಆಶ್ವಾಸನೆ ಬೇಕು.

ಸಭಾಪತಿಯವರು : ಅವರು ಸಚಿವ ಸಂಪುಟದ ಮುಂದೆ ತಂದು, ಸಮಾಲೋಚನೆ ಮಾಡಿ, ಚಿಂತನೆ ಮಾಡಿ ನಿಮ್ಮ ನಿರ್ಣಯಕ್ಕೆ ತಕ್ಕಂತೆ ತೀರ್ಮಾನ ಮಾಡುತ್ತಾರೆಂದು ನನ್ನ ಭಾವನೆ ಇದೆ. ಈ ಮಧ್ಯೆ ಆನ್ ದಿ ಫ್ಲೋರ್ ಆಫ್ ದಿ ಹೌಸ್‌ನಲ್ಲಿ ಹೇಳುತ್ತಿದ್ದಾರೆ.

ಬಿ. ಆರ್. ಪಾಟೀಲ್ : ಈ ನಿರ್ಣಯವನ್ನು ಮತ್ತೆ ಮಂಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮತಕ್ಕೆ ಹಾಕಿ. ಏನಾಗುತ್ತದೋ ಆಗಲಿ.

ಎಂ. ಪಿ. ನಾಡಗೌಡ : ೬ ತಿಂಗಳಲ್ಲಿ ಮಾಡುತ್ತೀರೋ, ವರ್ಷದಲ್ಲಿ ಮಾಡುತ್ತೀರೋ ಎಂದು ಕೇಳುತ್ತಿದ್ದಾರೆ. ಒಂದು ಹೆಜ್ಜೆ ಮುಂದಿಟ್ಟು ಅವರು ಹೇಳಬೇಕಲ್ಲವೇ?

ಪಿ. ತಿಪ್ಪಯ್ಯ : ಒಂದು ಸಾರಿ ವಿತ್‌ಡ್ರಾ ಮಾಡಿಕೊಂಡರೆ ಪುನಃ ಅದನ್ನು ತರುವುದಕ್ಕಾಗುವುದಿಲ್ಲ.

ಡಾ. ಸಿದ್ದಲಿಂಗಯ್ಯ : ನಾನು ನಿರ್ಣಯವನ್ನು ಕೊಟ್ಟಂತಹ ರೀತಿಯಲ್ಲಿ ಜಾರಿಗೆ ತರುವುದಕ್ಕೆ ಆಗದೇ ಇರಬಹುದು. ಸರ್ಕಾರಕ್ಕೆ ಮಿತಿಗಳಿವೆ ಎನ್ನುವುದು ನನಗೆ ಗೊತ್ತಿದೆ. ಆದರೆ ತಾತ್ವಿಕವಾಗಿ ಈ ನಿರ್ಣಯವನ್ನು ನಾವು ಒಪ್ಪಿದ್ದೇವೆ ಎಂದು ಇದರ ಬಗ್ಗೆ ಹೇಳಿಕೆಯನ್ನು ಈ ಅಧಿವೇಶನ ಮುಗಿಯುವುದರೊಳಗೆ ಕೊಡುತ್ತೇವೆ ಎನ್ನುವ ಸಣ್ಣ ಉಪಕಾರವನ್ನು ಸರ್ಕಾರ ಮಾಡುವುದಕ್ಕಾಗುವುದಿಲ್ಲವೇ ಸ್ವಾಮಿ ?

ಟಿ. ಎನ್. ನರಸಿಂಹಮೂರ್ತಿ : ಈ ನಿರ್ಣಯದ ಅಂಗೀಕಾರವನ್ನು ಈಗ ಮಾಡಬೇಕು. ಇಷ್ಟು ದಿವಸಗಳಲ್ಲಿಯೇ ಮಾಡಬೇಕು ಎನ್ನುವ ಕಂಡೀಷನ್ ಬೇಡ. ಒಂದನ್ನು ಮಾನ್ಯ ಸಿದ್ದಲಿಂಗಯ್ಯನವರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಈ ಖಾಸಗಿ ನಿರ್ಣಯವನ್ನು ಮಂಜೂರಾತಿ ಮಾಡಿದೆವೆಂದು ಇಟ್ಟುಕೊಳ್ಳೋಣ. ಇದನ್ನು ಓಟಿಗೆ ಹಾಕಿ ಎಂದು ಹೇಳುತ್ತಿದ್ದಾರೆ. ಇದನ್ನು ಓಟಿಗೆ ಹಾಕಿದಾಗ ಬಹುಮತ ಪಡೆಯಬಹುದೆಂದೂ ಇಟ್ಟುಕೊಳ್ಳೋಣ. ಇದನ್ನು ಇಲ್ಲಿ ಪಾಸ್ ಮಾಡಿದರೂ ಕೂಡ ನಿರ್ಣಯವನ್ನು ಜಾರಿಗೆ ಕೊಡಬೇಕೆನ್ನುವ ಬೈಂಡಿಂಗ್ ಏನೂ ಇರುವುದಿಲ್ಲ. ಆದ್ದರಿಂದ ನಿಮ್ಮ ನಿರ್ಣಯವನ್ನು ಜಾರಿಗೆ ಕೊಡಲಿಲ್ಲವೆನ್ನುವುದು ಬೇಡ. ನಾವು ಈ ನಿರ್ಣಯವನ್ನು ಕೈಬಿಟ್ಟಿದ್ದೇವೆಂದೂ ಹೇಳುವುದು ಬೇಡ. ಇವೆರಡಕ್ಕೂ ಮಧ್ಯೆ, ಈ ಮಾತನ್ನು ರಾಜಕೀಯವಾಗಿ ಹೇಳುತ್ತಿಲ್ಲ. ಫಾರ್ ದಿ ಫಸ್ಟ್ ಟೈಮ್ ಮಿ. ಚೇರ್‌ಮನ್, ಆಫ್ಟರ್ ಇಂಡಿಪೆಂಡೆನ್ಸ್ ವಿ ಹ್ಯಾವ್ ಗಾಟ್ ಫೋರ್ ಶೆಡ್ಯೂಲ್ಡ್ ಕ್ಯಾಸ್ಟ್ ಮಿನಿಸ್ಟರ್ಸ್. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಸ್ವಾರ್ಥವಾಗಿಯೂ ಈ ಮಾತನ್ನು ಹೇಳುತ್ತಿದ್ದೇನೆ.

ನಾನು ಹೇಳುವುದನ್ನು ಮಾನ್ಯ ಸದಸ್ಯರುಗಳು ಸ್ವಲ್ಪ ಕೇಳಬೇಕು. ಐದು ಜನ ಶೆಡ್ಯೂಲ್ಡ್ ಕ್ಯಾಸ್ಟ್ ಮಂತ್ರಿಗಳಿದ್ದಾರೆ. ಅಂದರೆ ನಮ್ಮ ಸರ್ಕಾರಕ್ಕೆ ಕೂಡ ಬಡವರ ಬಗ್ಗೆ, ದಲಿತರ ಬಗ್ಗೆ ವಿಶೇಷವಾದ ಕಳಕಳಿಯಿದೆ. ಇಂಥ ಕಳಕಳಿ ನಮ್ಮ ಪಕ್ಷಕ್ಕೇ ಇದೆ ಎನ್ನುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಪ್ರತಿಷ್ಠೆಯಿಂದ ಹೇಳುತ್ತಿಲ್ಲ. ಆದ್ದರಿಂದ ಡಾ. ಸಿದ್ದಲಿಂಗಯ್ಯನವರೇ, ಮಾನ್ಯ ಸಭಾಪತಿಗಳು ಸಹ ನನ್ನ ಧ್ವನಿಗೆ ಒಪ್ಪಿಕೊಂಡಿದ್ದಾರೆ. ತಾವು ಕೂಡ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡು, ಇದನ್ನು ಸರ್ಕಾರದ ವಿವೇಚನೆಗೆ ಬಿಡಬೇಕು. ನಾನು ವೈಯಕ್ತಿಕವಾಗಿ, ಈ ಮನೆಯ ಸಭಾನಾಯಕನಾಗಿ, ರಾಜ್ಯದ ಮಂತ್ರಿಯಾಗಿ, ಈ ವರ್ಗದ ಪ್ರತಿನಿಧಿಯಾಗಿ ಹೇಳುತ್ತಿದ್ದೇನೆ. ಖಂಡಿತವಾಗಿಯೂ ನಾನು ಈ ನಿರ್ಣಯದ ಪರವಾಗಿ ಮಂತ್ರಿಮಂಡಲದಲ್ಲಿ ಹೋರಾಟ ಮಾಡುತ್ತೇನೆನ್ನುವ ಭರವಸೆಯನ್ನು ಕೊಡುತ್ತೇನೆ. ಇದಕ್ಕಿಂತ ಇನ್ನೇನು ಆಗಬೇಕು?

ಡಾ. ಸಿದ್ದಲಿಂಗಯ್ಯ : ನಾನು ಕೇಳುವುದು ಇಷ್ಟೇ ಸ್ವಾಮಿ. ಈ ವಿಷಯದ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಏನು ತೊಂದರೆ? ಅಂತರ್ಜಾತಿ ವಿವಾಹವಾಗಿರುವವರ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಅವರಿಗೆ ಪ್ರೋತ್ಸಾಹ ಕೊಡುತ್ತೇವೆಂದು ಈ ಅಧಿವೇಶನ ಮುಗಿಯುವುದರೊಳಗೆ ಒಂದು ಹೇಳಿಕೆಯನ್ನು ಕೊಡಿ.

ಟಿ. ಎನ್. ನರಸಿಂಹಮೂರ್ತಿ : ಮುಂದೆ ನಡೆಯುವಂತಹ ಮಂತ್ರಿಮಂಡಲದ ಸಭೆಯಲ್ಲಿ ಈ ನಿರ್ಣಯವನ್ನು ಪ್ರಸ್ತಾಪ ಮಾಡಿ, ಈ ಅಧಿವೇಶನ ಮುಗಿಯುವುದರೊಳಗೆ ಈ ಸಭೆಯಲ್ಲೂ ಕೂಡ ಒಂದು ಹೇಳಿಕೆಯನ್ನು ಕೊಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಡಾ. ಸಿದ್ದಲಿಂಗಯ್ಯ : ಮಾನ್ಯ ಸಭಾಪತಿಗಳೇ, ನಾನು ಸಭಾನಾಯಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ನಿರ್ಣಯವನ್ನು ಬೆಂಬಲಿಸಿ ನಿರ್ಣಯದ ಪರವಾಗಿ ಮಾತನಾಡಿದಂತಹ ಈ ಸದನದ ಎಲ್ಲಾ ಸದಸ್ಯರಿಗೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ನಿರ್ಣಯದ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡುತ್ತದೆನ್ನುವ ಹಿನ್ನೆಲೆಯಲ್ಲಿ ನಾನು ನನ್ನ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ. ●


> ಜಾತಿಯು ಅವಕಾಶಗಳನ್ನು ಸೀಮಿತಗೊಳಿಸುತ್ತದೆ. ಸೀಮಿತ ಅವಕಾಶಗಳು ಪ್ರತಿಭೆಯನ್ನು ಸಂಕುಚಿತಗೊಳಿಸುತ್ತವೆ. ಸಂಕುಚಿತ ಪ್ರತಿಭೆ ಮತ್ತೆ ಅವಕಾಶಗಳನ್ನು ಇನ್ನೂ ಸೀಮಿತಗೊಳಿಸುತ್ತದೆ. ಹೀಗೆ, ಎಲ್ಲಿ ಜಾತಿ ಪ್ರಚಲಿತವಾಗಿದೆಯೋ ಅಲ್ಲಿ ಅವಕಾಶಗಳೂ ಅನಂತವಾಗಿ ಸಂಕೋಚಗೊಳ್ಳುತ್ತಾ ಕ್ಷೀಣಿಸುತ್ತಾ ಹೋಗುತ್ತವೆ.
>
> **–ಡಾ॥ ರಾಮಮನೋಹರ ಲೋಹಿಯಾ**

ಅಂತರ್ಜಾತಿ ವಿವಾಹಿತರ ರಾಜ್ಯ ಸಮಾವೇಶಕ್ಕೆ


ಶುಭ ಹಾರೈಕೆಗಳು



ಎಂ. ಪಿ. ಪ್ರಕಾಶ್
ನಿರ್ಮಲ ಕರ್ನಾಟಕ ಯೋಜನೆ ನೇತಾರರು ಹಾಗೂ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್‌ರಾಜ್ ಸಚಿವರು




ಬಿ. ಸತ್ಯನಾರಾಯಣ್
ಜಿಲ್ಲಾ ಮಂತ್ರಿಗಳು




ಶ್ರೀಮತಿ ಕಮಲ ಗಂಗಹನುಮಯ್ಯ

ತುಮಕೂರು ಜಿಲ್ಲಾ ಪಂಚಾಯತ್
ತುಮಕೂರು ಜಿಲ್ಲೆ,
ತುಮಕೂರು,



ರಾಕೇಶ್ ಸಿಂಗ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಜಿಲ್ಲಾ ಪಂಚಾಯತ್, ತುಮಕೂರು.



ಕರಿಗಿರಿಯಪ್ಪ
ಉಪಾಧ್ಯಕ್ಷರು,
ಜಿಲ್ಲಾ ಪಂಚಾಯತ್, ತುಮಕೂರು.

ಹಾಗೂ ಸದಸ್ಯರುಗಳು



ಜಾತಿ ಮತಗಳ ಕಟ್ಟುಪಾಡುಗಳು ಎಷ್ಟೇ ಬಿಗಿಯಾಗಿದ್ದರೂ, ಇದನ್ನೂ ಮೀರಿ ನಡೆಯುತ್ತಿರುವ ಒಲವಿನ ವಿವಾಹಗಳು ನಮ್ಮ ಆಶಾಕಿರಣಗಳಾಗಿವೆ. ಇಂಥ ಮಾನವೀಯವಾದ ಮದುವೆಗಳೇ, ನಾವು ಕೊಂಚವಾದರೂ ಘನತೆಯಿಂದ ಉಸಿರಾಡುವಂತೆ ಮಾಡಿವೆ.

ಜಾತಿ ಒಳಗೇ ಮದುವೆಗಳು ನಡೆದೂ ನಡೆದೂ ಜಾತಿ ಈಗ ಕುಲವಾಗಿದೆ. ಜಾತಿ ಮದುವೆ ಎಂದರೆ ಕುಲದ ಮದುವೆಯಾಗಿ, ಸೋದರಿಕೆ ಮದುವೆ ಆಗಿಬಿಟ್ಟಿದೆ. ಇದು ಆರೋಗ್ಯಕರ ಜನಾಂಗದ ಹುಟ್ಟಿಗೆ ಕಾರಣವಾಗದೆ, ನಮ್ಮ ನಡುವೆ ಜಾತಿ–ಮತಗಳನ್ನು ಬಿತ್ತಿ, ನಮ್ಮ ಮಾನವೀಯ ಕಣ್ಣುಗಳನ್ನೇ ಕಿತ್ತುಕೊಂಡುಬಿಟ್ಟಿದೆ. ಹೀಗಲ್ಲದಿದ್ದರೆ ಜಾತಿ–ಮತ ಮೀರಿದ ಒಲವಿನ ವಿವಾಹಗಳು ನಡದಾಗಲೆಲ್ಲ ನಮ್ಮ ಕುರುಡು ಸಮಾಜ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತೆ ಆಡುತ್ತಿರಲಿಲ್ಲ. ಎಂದೇ ಗಾಂಧೀಜಿ ಅಂತರ್ಜಾತಿಯವಲ್ಲದ ಮದುವೆಗಳಲ್ಲಿ ಭಾಗವಹಿಸಲು ನಿರಾಕರಿಸಿದ್ದರು. ಭಾರತ ಭಾವನಾತ್ಮಕವಾಗಿ ರಾಷ್ಟ್ರವಾಗಿ ರೂಪುಗೊಳ್ಳಲು ಈ ನಿಲುವು ಈಗ ಭಾರತೀಯರೆಲ್ಲರ ನಿಲುವಾಗಬೇಕಾಗಿದೆ. ಇಂದು ಜಗತ್ತಿಗೇ ಬೆಳಕಾಗಿರುವ ಬುದ್ಧನ ಮಾನವ ಕಲ್ಯಾಣದ ಬಳ್ಳಿಯನ್ನು ಕಿತ್ತೆಸೆದ ಪಾಪಕ್ಕೆ ಗುರಿಯಾಗಿರುವ ನಾವು ಭಾರತೀಯರು, ಬುದ್ಧನ ಪ್ರೇಮಕಾರುಣ್ಯದ ಬಳ್ಳಿಯನ್ನು ದೇಶದ ಉದ್ದಗಲಕ್ಕೂ ಮತ್ತೆ ಹಬ್ಬಿಸಿ ಮಾನವಂತರಾಗಿ ಉಳಿಯಬೇಕಾಗಿದೆ. ಇದು ಅಂಬೇಡ್ಕರ್ ಹಾಗೂ ಲೋಹಿಯಾರ ಕನಸೂ ಆಗಿತ್ತು. ಅಷ್ಟೇಕೆ ಹನ್ನೆರಡನೇ ಶತಮಾನದಲ್ಲಿ ಕನ್ನಡದ ನೆಲದಲ್ಲಿ ಪವಾಡದಂತೆ ನಡೆದ ವಚನ ಆಂದೋಲನದಲ್ಲಿ, ಬ್ರಾಹ್ಮಣ ಮದುವರಸನ ಮಗಳು ಮತ್ತು ಮಾದಾರ ಹರಳಯ್ಯನ ಮಗನ ನಡುವೆ ನಡೆದ ಮದುವೆ, ಇಂದೂ ನಮ್ಮ ಜನಮನದಲ್ಲಿ ಆರದ ಒಲವಿನ ಬೆಳಕಾಗಿ ಉಳಿದಿದೆ. ಈ ಬೆಳಕಿಡಿದು ನಡೆಯುತ್ತಾ ಜಾತಿ–ಮತಗಳನ್ನು ದಾಟುತ್ತಾ ಎಲ್ಲ ಮನೆಮನಗಳನ್ನು ಬೆಳಗುತ್ತಾ ನಾವೆಲ್ಲರೂ ಕೇವಲ ಮಾನವ ಮಾತ್ರರಾಗಿ ಒಂದಾಗಬೇಕಾಗಿದೆ.

ಇಂಥ ಹಂಬಲದೊಡನೆ ಸ್ಥಾಪನೆಗೊಂಡಿರುವ **'ಮಾನವ ಮಂಟಪ'**ದ ಆಶಯಗಳು ಹೀಗಿವೆ :

- ಜಾತಿ–ಮತ ಮೀರಿ ಪ್ರೀತಿಯಿಂದ ಒಂದಾಗಿರುವವರು ಹಾಗೂ ಹೀಗೆ ಒಂದಾಗಬಯಸುವವರೆಲ್ಲರನ್ನೂ ಒಗ್ಗೂಡಿಸುತ್ತಾ ಮತ್ತೆ ಇವರು ಜಾತಿಯ ಭೀತಿಗೆ ಬಲಿಯಾಗದಂತೆ ಮಾಡುವುದು; ಈ ಮೂಲಕ ಜಾತ್ಯತೀತ ಪ್ರೀತಿಯ ಸಮುದಾಯ ರೂಪಿಸುವುದು.
- ಅಂತರ್ಜಾತಿ ವಿವಾಹಿತರಿಗೆ ಸಾಮಾಜಿಕ ಭದ್ರತೆ ದೊರೆಯುವಂತೆ ಮಾಡುವುದು ಹಾಗೂ ಈ ರೀತಿ ಮದುವೆಯಾಗಬಯಸುವ ಯುವಕ ಯುವತಿಯರಿಗೆ ಒತ್ತಾಸೆಯಾಗಿ ನಿಲ್ಲುವುದು.
- ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ **'ಮಾನವ ಮಂಟಪ'**ಗಳನ್ನು ಸ್ಥಾಪಿಸಿ, ಜಾತ್ಯತೀತ **'ವಿವಾಹ ಮಾಹಿತಿ ಕೇಂದ್ರ'**ಗಳನ್ನು ತೆರೆದು, ಪ್ರೀತಿಯ ಯುವಕ ಯುವತಿಯರನ್ನು ಬೆಂಬಲಿಸುವುದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಅಂತರ್ಜಾತಿ ವಿವಾಹಿತರಿಗಾಗಿ ಸಂತೋಷಕೂಟ, ಸಾಂಸ್ಕೃತಿಕ ಮೇಳ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.
- ಜಾತ್ಯತೀತ ವಿವಾಹಗಳನ್ನು ಪ್ರೋತ್ಸಾಹಿಸುವಂತೆ, ಬೆಂಬಲಿಸುವಂತೆ ಸಮಾಜದ ಹಿರಿಯರು ಹಾಗೂ ಧಾರ್ಮಿಕ ಮುಖಂಡರನ್ನು **'ಮಾನವ ಮಂಟಪ'**ದ ಕಾರ್ಯಕ್ರಮಗಳಿಗೆ ಆಹ್ವಾನಿಸುವುದು.
- ಜಾತೀಯ ವಿವಾಹಗಳಿಂದ ಬೆಳೆಯುತ್ತಿರುವ ವರದಕ್ಷಿಣೆ, ಕಂದಾಚಾರ, ಮಹಿಳಾ ಶೋಷಣೆ ಮುಂತಾದ ಅನಿಷ್ಟಗಳ ಬಗ್ಗೆ ಜಾಗೃತಿ ಮೂಡಿಸುವುದು; ಇವುಗಳಿಂದ ಮುಕ್ತವಾದ ಸರಳ ವಿವಾಹಗಳನ್ನು ಬೆಂಬಲಿಸುವುದು.
- ಪ್ರತಿ ವರ್ಷದ ಬುದ್ಧಪೂರ್ಣಿಮೆ ಸಮಯಕ್ಕೆ ಬುದ್ಧನ ಪ್ರೇಮಕಾರುಣ್ಯದ ನೆನಪಿಗಾಗಿ, ಜಾತ್ಯತೀತ ಕಲಾಮೇಳಗಳೊಡನೆ ಅಂತರ್ಜಾತಿ ವಿವಾಹಿತರ ಹಾಗೂ ಹಿತೈಷಿಗಳ ರಾಜ್ಯಮಟ್ಟದ ಸಮಾವೇಶವನ್ನು ಏರ್ಪಡಿಸುವುದು; ಇದೇ ಸಂದರ್ಭದಲ್ಲಿ ರಾಜ್ಯದ ಹಿರಿಯರ ಸಮ್ಮುಖದಲ್ಲಿ ಸಾಮೂಹಿಕ ಅಂತರ್ಜಾತಿ ವಿವಾಹ ಏರ್ಪಡಿಸುವುದು.

'ಮಾನವ ಮಂಟಪ'ದ ಈ ಎಲ್ಲ ಎಶಯಗಳ ಈಡೇರಿಕೆಗಾಗಿ ಎಲ್ಲರ ಸಲಹೆ ಸಹಾಯ ಸಹಕಾರಗಳನ್ನು ಕೋರುತ್ತಿದ್ದೇವೆ.

ಮಾನವ ಮಂಟಪ

ಜಾತ್ಯಾತೀತ ಯುವ ವಿವಾಹ ವೇದಿಕೆ